ಸಂತೆಯ ಬಳಗೆ



ಪದ್ಮಾಶ್ರೀಧರ್

ಸಂತೆಯ ಒಳಗೆ

(ನೀಳ್ಗತೆಗಳ ಸಂಕಲನ)

ಜಮ್ಮ ಶ್ರೀಧರ್

[illegible]
[illegible]
[illegible]

ಸಂತೆಯ ಒಳಗೆ

(ನೀಳ್ಗತೆಗಳ ಸಂಕಲನ)

ಪದ್ಮಾ ಶ್ರೀಧರ್

ಮಂಜುಶ್ರೀ ಪ್ರಕಾಶನ
೧೨ನೇ ಮೆಯಿನ್, ಕುವೆಂಪು ಹೈಸ್ಕೂಲ್ ಹಿಂಭಾಗ
ಸರಸ್ವತಿಪುರಂ, ಮೈಸೂರು ೫೭೦೦೦೯

SANTHEYA OLAGE- a collection of stories by Smt. Padma Shreedhar, (ph: 8565466), 1248, HIG, 7th B Cross, KHB Colony, New Town, Yalahanka, Bangalore 560064 and published by Manjushree Prakashana, (ph.541085) 12th Main, Behind Kuvempu High School. Saraswathipuram, Mysore 570009.

No. of pages: 256 + 4 = 260, Dm. 1/8 size.
Printed on 70 GSM maplitho paper.

Year of first publication: 2013

Price: Rs.160/-

DTP: Smt. Asha Nayak.

Impression: Harshini Offset Printers, Bangalore.

ಸಂತೆಯ ಒಳಗೆ

ಮುನ್ನುಡಿ

ಪ್ರಿಯ ಓದುಗರೇ,

ನಮಸ್ಕಾರಗಳು. ಇದು ಒಂದು ನೀಳ್ಗತೆಗಳ ಸಂಕಲನ. ಇದರಲ್ಲಿ ಒಟ್ಟು ಎಂಟು ಕಥೆಗಳಿವೆ. ಕೆಲವು ಕಥೆಗಳು, ಜನಪ್ರಿಯ ವಾರ ಪತ್ರಿಕೆಗಳಲ್ಲಿ ಪ್ರಕಟಗೊಂಡು, ಓದುಗರ ಮೆಚ್ಚುಗೆಯನ್ನು ಗಳಿಸಿವೆ.

ಕಂಡು, ಕೇಳಿದ, ವಿಷಯಗಳಲ್ಲಿನ ಸೂಕ್ಷ್ಮವಾದ ಎಳೆಗಳನ್ನು ಕತೆಯನ್ನೂ ರಚಿಸಲು ಎಳೆದುಕೊಂಡು, ಬೇಕಾದ ಅಳತೆಗೆ ಕತೆಯನ್ನಾಗಿ ಹೊಸೆದಿರುವ ಪರಿಶ್ರಮ ನನ್ನದು. ದೈನಂದಿಕ ಜನಜೀವನದಲ್ಲಿ ಇಂಥ ಎಷ್ಟೋ ಸೂಕ್ಷ್ಮವಾದ ವಿಷಯಗಳು ಒಳಗೊಂಡಿರುತ್ತವೆ. ಕೆಲವು ಸ್ವಾರಸ್ಯಕರವಾಗಿರುತ್ತವೆ. ಕೆವು ಬೆಚ್ಚಿಬೀಳಿಸುವಂತಿರುತ್ತವೆ. ಮತ್ತೂ ಕೆಲವು ಪಾಠಕಲಿಸುವಂತಿರುತ್ತವೆ. ಇವುಗಳನ್ನು ಓದುಗರಿಗೆ ತಿಳಿಸುವ ಇಚ್ಛೆಯಿಂದ ಕತೆಯರೂಪದಲ್ಲಿ ಬರೆಯಲ್ಪಟ್ಟಿವೆ. ಓದುಗರಿಗೆ ಇಷ್ಟವಾಗುದೆಂಬ ವಿಶ್ವಾಸ ನನ್ನದು.

ವಂದನೆಗಳೊಂದಿಗೆ.

ಇತಿ

ತಮ್ಮ ವಿಶ್ವಾಸಿ

– ಪದ್ಮಾ ಶ್ರೀಧರ್

ಪರಿವಿಡಿ

* * *

ಸಂತೆಯ ಒಳಗೆ

"ದೇವಕೀ ನಿನ್ನ ಮಗಳ ಊಟ ಆಯ್ತಾ? ಮಲಗಿ ಬಿಟ್ಲಾ?" ವಾಸುಕಿ ಹೆಂಡತಿಯನ್ನು ಪ್ರಶ್ನಿಸಿ ತಾನು ಊಟಕ್ಕೆ ಕುಳಿತ. ಊಟದ ಹೊತ್ತಿಗೆ ಬಂದು ಬಿಡ್ತೀನಿ ಅಂತ ಅಂದ್ಕೊಂಡೇ ಹೊರಟೆ. ಹೊತ್ತಾಗೇ ಹೋಯ್ತು.... ಬೇಗ ಬಡಿಸು. ಒಂದು ಗಳಿಗೆ ರೆಸ್ಟ್ ತಗೊಂಡು ಮತ್ತೆ ಹೋಗ್ಬೇಕು" ಎಂದ.

ದೇವಕಿ ಗಂಡನ ತಟ್ಟೆಗೆ ಬಡಿಸಿ, ತನಗೂ ಬಡಿಸಿಕೊಂಡು ಕುಳಿತಳು. ಊಟ ಸೇರದಂತಾಗಿತ್ತು. ಅನ್ನದ ಅಗುಳುಗಳೊಡನೆ ಕೈ ಬೆರಳುಗಳು ಆಟವಾಡುತ್ತಿರುವುದನ್ನು ವಾಸುಕಿ ಗಮನಿಸಿದ.

"ದೇವಕೀ, ಏನಾಯ್ತು? ಏನು ಯೋಚಿಸ್ತಿದೀಯ? ಊಟ ಮಾಡು" ಎಂದ. ಅವಳು ಬೆಚ್ಚಿ ಅವನ ಕಡೆ ತಿರುಗಿದಳು. "ಏನಾಯ್ತು ದೇವಕೀ, ಮಾಯಾ ಏನಾದ್ರೂ ಹೇಳಿದ್ಲಾ?" ಅವಳ ಮುಖದ ಚಹರೆ ಬದಲಾಗಿತ್ತು.

"ಹೂಂ ರೀ.... ಅವಳು ಅಲ್ಲಿ ಸುಖವಾಗಿಲ್ಲ...." ಸಪ್ಪಗೆ ನುಡಿದಳು.

"ಏನಂದೇ?.... ಅದು ಅವಳೇ ಆರಿಸಿಕೊಂಡಿದ್ದು.... ಕಷ್ಟವೋ ಸುಖವೋ ಅಲ್ಲಿಯೇ ಇರಬೇಕು. ನಾನು ಅವತ್ತೇ ಅಂದ್ಕೊಂಡೆ, ಏನೋ ನಡೆದಿದೆ ಅಂತ. ಇಲ್ಲಿ ಬಂದು ಕೂತುಬಿಟ್ರೆ ಆಗುತ್ತಾ?...ಅಡ್ಜಸ್ಟ್ ಮಾಡ್ಕೊಂಡು ಇರು ಅಂತ ತಿಳುವಳಿಕೆ ಹೇಳು... ನಿನ್ನ ಮಗಳಿಗೆ" ಅಬ್ಬರಿಸಿದ.

"ನೀವು ಗೌತಮ್ ಹತ್ರ ಮಾತಾಡ್ತೀರಾ?... ಬೇರೆ ಮನೆ ಮಾಡ್ಕೊಂಡು ಸಂಸಾರ ಮಾಡು ಅಂತ... ಇಲ್ಲದಿದ್ರೆ ಕಷ್ಟ ಆಗುತ್ತೆ ಅಂತ."

"ನಾನ್ಸೆನ್ಸ್ ನಾನು ಹಾಗೆಲ್ಲಾ ಮಾತಾಡುಕ್ಕೆ ಆಗುಲ್ಲ.... ಇಂಥದ್ದನ್ನೆಲ್ಲಾ ನನಗೆ ಹೇಳ್ಬೇಡ.... ಇದೆಲ್ಲ ಸರಿ ಹೋಗುಲ್ಲ ನಂಗೆ."

"ಮಗಳು ಅಲ್ಲಿ ಸುಖವಾಗಿರುಲ್ಲ ಅಂತ ತಿಳಿದ್ರೂ ಹೀಗಾಡ್ತೀರಲ್ಲ."

"ಅವಳು ಇಲ್ಲಿ ಸುಖವಾಗಿರ್ತಾಳೆ ಅಂತಿದ್ರೆ ಇಲ್ಲಿಯೇ ಇರಲಿ"

"ಹಾಗಾದ್ರೆ ಗೌತಮ್‌ನ ಬಂದು ಇಲ್ಲೇ ಇರು ಅಂತ ಹೇಳ್ತೀರಾ? ಇವತ್ತೇ ಮಾತಾಡಿ... ಆದಷ್ಟು ಬೇಗ ಅವನು ಇಲ್ಲಿ ಬಂದಿರಲಿ"

"ಇಲ್ಲ.... ಅವನು ಮನೆ ಅಳಿಯನಾಗಿ ಇಲ್ಲಿ ನಮ್ಮ ಜತೆ ಇರಬೇಕಾಗಿಲ್ಲ. ಅದು ನಂಗಿಷ್ಟವಿಲ್ಲ...."

"ಹಾಗಾದ್ರೆ ಇವಳ ಗತಿ? ಅದನ್ನಾದ್ರೂ ಯೋಚಿಸಿ"

"ತಿಳುವಳಿಕೆ ಹೇಳಿ ಗಂಡನ ಮನೆಗೆ ಕಳಿಸು...." ಎಂದು ಹೇಳಿ ಎದ್ದು ಕೈ ತೊಳೆದು ತನ್ನ ರೂಮಿಗೆ ಬಂದ. ದಿಂಬಿಗೆ ಬೆನ್ನನ್ನು ಒರಗಿಸಿ ಕಾಲು ಚಾಚಿ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡ. ಕೈಗಳನ್ನು ತಲೆಯ ಹಿಂದಕ್ಕೆ ಜೋಡಿಸಿದ.... ಮಾಯಾ ಆಗ ಮಾಡಿದ್ದೂ ಸರಿಯಲ್ಲ....ಈಗ ಮಾಡುತ್ತಿರುವುದೂ ಸರಿ ಅಲ್ಲ.... ಆದರೆ ಆಗ ಮಾಯಾಳ ಇಚ್ಛೆಯನ್ನು ಪೂರೈಸಿದೆವು. ಆದರೆ ಈಗ ಹಾಗೆ ಮಾಡಲು ಖಂಡಿತಾ ಆಗುವುದಿಲ್ಲ.... ಮಗಳ ಮೇಲೆ ಅಸಮಧಾನ ಆಗಿತ್ತು.

ಮಾಯಾ, ಇಂಜಿನಿಯರಿಂಗ್ ಡಿಗ್ರಿಯನ್ನು ಪಡೆದು ಪ್ರತಿಷ್ಠಿತ ಕಂಪೆನಿಯೊಂದರಲ್ಲಿ ಕೆಲಸಕ್ಕೆ ಸೇರಿಕೊಂಡಳು. ತಿಂಗಳಿಗೆ ಐವತ್ತು ಸಾವಿರ ರೂಪಾಯಿ ಸಂಬಳ...., ಹೋಗಿ ಬರಲು ಹೊಸ ಕಾರನ್ನು ತೆಗೆದುಕೊಂಡಳು. ಮಗಳ ಏಳಿಗೆಯಿಂದ ತಂದೆತಾಯಿ ಖುಷಿಗೊಂಡಿದ್ದರು.... ಖುಷಿಯಾಗಿ ಹಾಯಾಗಿದಾಳೆ ಅಂತ ಅಂದುಕೊಳ್ಳುವಷ್ಟರಲ್ಲಿ ಅಚ್ಚರಿ ಕಾದಿತ್ತು.

ಒಂದು ದಿನ ತನ್ನೊಂದಿಗೆ ಒಬ್ಬ ಯುವಕನನ್ನು ಕರೆತಂದು ಪರಿಚಯಿಸಿದಳು. "ಡ್ಯಾಡೀ, ಇವನು ಗೌತಮ್ ಅಂತ.... ನನ್ನ ಕಲೀಗ್" ವಾಸುಕಿ ಅವನ ಕೈ ಕುಲುಕಿ 'ಹಲೋ' ಎಂದು ಹೇಳಿ ಮಂದಹಾಸವನ್ನು ಬೀರಿದ್ದ... ಏನೋ ಅನುಮಾನದ ಸುಳಿವು ಸಿಕ್ಕಿತ್ತು. ವಿಶೇಷ ದೃಷ್ಟಿಯನ್ನು ಬೀರಿದ. ಗೌತಮನೂ ಮಂದಹಾಸ ಸೂಸಿದ್ದ. ಮಂದಹಾಸದಿಂದ ಮತ್ತೂ ಅಗಲವೆನಿಸುವ ಗುಂಡನೆಯ ಮುಖ. ಹೊಳೆಯುವ ಕಣ್ಣುಗಳು. ನೀಳವಾದ ಮೂಗು... ಸಣ್ಣ ಮೀಸೆ... ಸುಂದರವಾದ ತುಟಿಗಳು.... ಹುಡುಗ ಆಕರ್ಷಕ ನಾಗಿದ್ದಾನೆ ಎನಿಸಿತ್ತು...." ಮಾಯಾ ಅಲ್ಲಿಂದ ಹೊರಟು ಹೋಗಿದ್ದಳು.

"ಸಾರ್... ನಾನು ನಿಮ್ಮ ಹತ್ರ ಮಾತಾಡ್ಬೇಕು ಅಂತ ಬಂದಿದೀನಿ.... ಮಾಯಾ ನನಗೆ ಹಿಡಿಸಿದಾಳೆ. ನಾವಿಬ್ಬರೂ ಮದುವೆಯಾಗ್ಬೇಕು ಅಂತ ನಿರ್ಧರಿಸಿದೀವಿ. ಅದಕ್ಕೆ ನಿಮ್ಮ ಒಪ್ಪಿಗೆ ಬೇಕು" ಅಂತಂದ, ಯಾವ ಅಳುಕಿಲ್ಲದೇ.

"ಏನು? ನೀವು ನೀವೇ ನಿರ್ಧರಿಸಿದೀರಾ?.... ಮತ್ಯಾಕೆ ನನ್ನನ್ನು

ಕೇಳ್ಬೇಕು?" ಒರಟಾಗಿ ಕೇಳಿದ್ದ.

"ಬೇಜಾರು ಮಾಡ್ಕೋಬೇಡಿ ಸಾರ್... ನಾವಿಬ್ರೂ ಒಬ್ಬರನ್ನೊಬ್ಬರು ಇಷ್ಟ ಪಟ್ಟಿದೀವಿ ನಿಜ. ಆದರೆ ನಿಮ್ಮಗಳ ಒಪ್ಪಿಗೆ ಇಲ್ಲದೇ ನಾವು ಮದುವೆ ಯಾಗೋದು ಹೇಗೆ ಸಾಧ್ಯ?.... ನೀವೇ ಹೇಳಿ.... ನಿಮ್ಮ ಒಪ್ಪಿಗೆಯನ್ನು ಕೊಡಿ."

"ನಿಮ್ಮ ಮನೆಯವರಿಗೆ ಈ ವಿಷಯ ಗೊತ್ತಾ?"

"ಇನ್ನೂ ತಿಳಿಸಿಲ್ಲ ಸಾರ್... ನಿಮ್ಮ ಒಪ್ಪಿಗೆ ಇದ್ದರೆ, ಆಮೇಲೆ ಮಾತನ್ನಾಡೋಣ ಅಂತ ಅಂದ್ಕೊಂಡೆ...."

"ಒಂದು ವೇಳೆ ನಾನು ಒಪ್ಗೆ ಕೊಡದಿದ್ರೆ?"

"ಅದು ನಿಮ್ಮಿಷ್ಟ..ಆದರೆ ನೀವು ಹಾಗೆ ಮಾಡುಲ್ಲ ಅಂತ ನನ್ನ ಅನಿಸಿಕೆ. ಯಾಕೆ ಅಂತಂದ್ರೆ, ನಾನು ಮಾಯಾಳಿಗೆ ತಕ್ಕವನು ಅಂತ ನಂಗೆ ತಿಳಿದಿದೆ" ನಸುನಕ್ಕು ನುಡಿದ. ವಾಸುಕಿ ಅವನ ಮಾತಿಗೆ ಅಚ್ಚರಿಗೊಂಡ. ಹಾಗೇ ಮೆಚ್ಚುಗೆಯೂ ಆಗಿತ್ತು. ಮತ್ತೊಮ್ಮೆ ದೀರ್ಘವಾಗಿ ಅವನನ್ನೇ ನೋಡಿದ.

"ತಕ್ಕವನು ಹೌದೋ ಅಲ್ವೋ ಅಂತ ನಾನು ತಿಳ್ಕೋಬೇಕು. ಇರಲಿ ನಿಮ್ಮ ವಿವರಗಳನ್ನು ನಿಮ್ಮ ಕುಟುಂಬದಲ್ಲಿ ಯಾರ್‍ಯಾರು ಇದೀವಿ ಅನ್ನುವುದನ್ನು ತಿಳಿಸಿ. ನಾನು ಯೋಚಿಸ್ಬಿಟ್ಟು ಹೇಳ್ತೀನಿ" ಎಂದಿದ್ದ.

ಗೌತಮ್, ಶಂಕರರಾವ್‌ಗೆ ಮೊಮ್ಮಗ. ಮಗಳ ಮಗ. ಮಗಳು ಈಗ ಬದುಕಿಲ್ಲ. ಹೆರಿಗೆಯ ಸಮಯದಲ್ಲಿ ಮಗುವನ್ನು ಹೆತ್ತು ತೀರಿ ಹೋಗಿ ದ್ದಳು. ಅವನು ಇಲ್ಲಿಯೇ ತಾತನ ಮನೆಯಲ್ಲಿ ಬೆಳೆದ. ತಂದೆ ಬೇರೆ ಮತ್ತೊಂದು ಮದುವೆಯನ್ನು ಮಾಡಿಕೊಂಡಿದ್ದ. ಈ ಮಗನ ಸಂಪರ್ಕವೇ ಬೇಕಾಗಿರಲಿಲ್ಲ. ಇಲ್ಲಿ ದೊಡ್ಡ ಕುಟುಂಬ. ಗೌತಮ್‌ನನ್ನು ಬೆಳೆಸುವುದು ಕಷ್ಟವಾಗಿರಲಿಲ್ಲ. ಮೊಮ್ಮಗನನ್ನು ಬೆಳೆಸಿದರು, ಓದಿಸಿದರು.... ಈಗ ಅವನೂ ಇಂಜಿನಿಯರ್.... ಬೇಕಾದಷ್ಟು ಸಂಪಾದಿಸುತ್ತಾನೆ.... ಈಗ ಮದುವೆಯಾಗುವ ವಯಸ್ಸೂ ಆಗಿದೆ.... ಆದರೆ ಈಗ ತಾತಾ ಬದುಕಿಲ್ಲ.

"ಸರಿ, ನಾನು ನಿಮ್ಮ ಅಜ್ಜಿಯ ಹತ್ರ ಮಾತಾಡ್ತೀನಿ. ನಿಮ್ಮ ಮನೆಯ ಅಡ್ರೆಸ್, ಫೋನು ನಂಬರನ್ನು ಕೊಡಿ" ಎಂದ. ಗೌತಮನ ಗುಂಡನೆಯ ಮುಖ ಮೊರದಗಲವಾಗಿತ್ತು. ತಾನು ಈ ಮೊದಲೇ ಸಿದ್ಧವಾಗಿಟ್ಟುಕೊಂಡಿದ್ದ ವಿಳಾಸವನ್ನು ಬರೆದಿದ್ದ ಕಾಗದವನ್ನು ಅವರ ಕೈಗಿತ್ತ.

"ಯಾವಾಗ ಬರ್ತೀರಿ ಸಾರ್?" ಕಾತುರದಿಂದ ಕೇಳಿದ್ದ.

"ಬರ್ತೀನಿ, ಆತುರ ಯಾಕೆ?.... ಹಾಗೇ ನಮ್ಮ ಮನೆಯ ಬಗ್ಗೆ ಏನಾದರೂ ಕೇಳೋದಿದ್ರೆ ಕೇಳಿ ಬಿಡಿ...."

"ಮಾಯಾ ಎಲ್ಲವನ್ನೂ ಹೇಳಿದಾಳೆ ಸಾರ್.... ನಿಮಗೆ ಮಾಯಾ, ಲಯಾ ಇಬ್ಬರು ಹೆಣ್ಣು ಮಕ್ಕಳು. ಲಯಾ ಬೇರೆ ಊರ್ನಲ್ಲಿದ್ದುಕೊಂಡು ಓದುತ್ತಿದ್ದಾಳೆ..."

"ಮತ್ತಿನ್ನೇನು ಹೇಳಿದಾಳೆ..."

"ಇಷ್ಟೇ ಸಾರ್ ಹೇಳಿರೋದು.... ಇನ್ನೇನೂ ಬೇಕಾಗಿಯೂ ಇಲ್ಲ ಸಾರ್" ಅವನ ಮಾತುಗಳು ಹಿಡಿಸಿದವು....

"ಓ... ಕೇ... ನೀವು ನನಗೆ ಹಿಡಿಸಿದೀರಿ. ಅಲ್ಲದೇ ನೀವು ಮಾಯಾಳ ಆಯ್ಕೆ. ಅದನ್ನು ನಾನು ವಿರೋಧಿಸುವಂತಿಲ್ಲ. ಆದರೆ ಮೊದಲು ನಿಮ್ಮ ಮನೆಯವರ ಪರಿಚಯವಾಗಬೇಕು. ಸಾಂಪ್ರಾದಾಯಿಕವಾಗಿ ಮುಂದುವರೆಯ ಬೇಕು. ನಾನು ಸಧ್ಯದಲ್ಲೇ ನಿಮ್ಮ ಮನೆಗೆ ಬರ್ತೀನಿ" ಎಂದ.

ಗೌತಮ್ ಸಂತುಷ್ಟಗೊಂಡಿದ್ದ. ಇವರಿಬ್ಬರ ಮಾತು ಮುಗಿಯುತ್ತಿದ್ದಂತೆಯೇ ಮಾಯಾ ಒಳಗಿನಿಂದ ಕಾಫಿಯ ಟ್ರೇ ತಂದಿತ್ತಳು... ನನ್ನ ಮಿಸೆಸ್ ಯಾವುದೊ ಕ್ಲಬ್ ಮೀಟಿಂಗ್ ಇದೆ ಅಂತ ಹೋಗಿದಾಳೆ... ಇದು ಫ್ಲಾಸ್ಕ್‌ನಲ್ಲಿ ಹಾಕಿಟ್ಟಿದ್ದ ಕಾಫಿ.... ಮಾಯಾಗೆ ಏನೂ ಕೆಲಸ ಬರುಲ್ಲ...." ಎಂದು ಹೇಳಿ ತಾನೊಂದು ಕಪ್‌ನ್ನೆತ್ತಿಕೊಂಡ. ಮಾಯಾ ಗೌತಮ್‌ಗೆ ಒಂದು ಕಪ್‌ನ್ನು ಕೊಟ್ಟು ತಾನೊಂದನ್ನು ಕಪ್‌ನ್ನೆತ್ತಿಕೊಂಡು ಅಲ್ಲಿಯೇ ಕುಳಿತಳು. ಮೂವರೂ ಬಿಸ್ಕತ್ತಿನೊಂದಿಗೆ ಕಾಫಿಯನ್ನು ಕುಡಿದರು. ಸ್ವಲ್ಪ ಹೊತ್ತಿನ ನಂತರ ಗೌತಮ್ ಅಲ್ಲಿಂದ ಹೊರಟ. ಮಾಯಾ ಅವನನ್ನು ಬಿಟ್ಟು ಬರುತ್ತೇನೆಂದು ಹೊರಟಳು.

ವಾಸುಕಿ ಗೌತಮ್‌ನ ಮನೆಯನ್ನು ತಲುಪಿದಾಗ, ಅವರುಗಳು ಇವನ ಬರವನ್ನೇ ಕಾಯುತ್ತಿದ್ದಂತೆ ಅನ್ನಿಸಿತು. ಹಾರ್ದಿಕವಾಗಿ ಇವನನ್ನು ಸ್ವಾಗತಿಸಿದರು. ಗೌತಮ್ ಈ ಮೊದಲೇ ಎಲ್ಲವನ್ನೂ ಹೇಳಿರುವನೆಂದು ತೋರಿತು. ಅವರೆಲ್ಲರ ಹಸನ್ಮುಖಗಳನ್ನು ಕಂಡು, ಮಾಯಾಳನ್ನು ಎಲ್ಲರೂ ಒಪ್ಪಿಕೊಂಡಿರುವರೆಂಬ ಅರಿವಾಗಿತ್ತು. ವಿಚಾರಿಸಿ ಕೇಳಿ ತಿಳಿದುಕೊಳ್ಳುವುದಕ್ಕೆ ಏನೂ ಉಳಿದಿಲ್ಲ ಅಂತೆನ್ನಿಸಿತು.

ಕೆಲವೇ ದಿನಗಳಲ್ಲಿ ಮದುವೆ ನಿಷ್ಕರ್ಷೆಯಾಗಿತ್ತು. ಮೇಲು ನೋಟಕ್ಕೆ ವಧೂ ಪರೀಕ್ಷೆಯ ಶಾಸ್ತ್ರವೂ ನೆರವೇರಿತು. ಅದ್ಧೂರಿಯಾಗಿ ಲಗ್ನಪತ್ರಿಕೆಯ ಸಮಾರಂಭವೂ ಜರುಗಿತು. ಎರಡು ತಿಂಗಳ ನಂತರದ ಶುಭ ಮುಹೂರ್ತದಲ್ಲಿ ಮದುವೆಗೆ ದಿನವನ್ನು ಗೊತ್ತು ಮಾಡಿದ್ದರು.

ಮದುವೆ ಇವರ ಆಸೆಯಂತೆ ನೆರವೇರಿತ್ತು. ಗಂಡಿನವರ ಷರತ್ತುಗಳು ಏನೂ ಇರಲಿಲ್ಲ. ಯಾವ ಗೊಂದಲ ಗಜಿಬಿಜಿ ಏನೂ ಇಲ್ಲ. ಹೆಚ್ಚು ಜನರೂ ಬಂದಿರಲಿಲ್ಲ. ಮಾಯಾ ಒಳ್ಳೆಯ ಮನೆಯನ್ನೇ ಸೇರಿದಳು ಅಂತ ನೆಮ್ಮದಿಯ ಉಸಿರನ್ನು ಬಿಟ್ಟರು. ಒಂದು ವಾರ ಹೋಟೆಲ್ಲಿನಲ್ಲಿರಲು ವ್ಯವಸ್ಥೆ ಮಾಡಿದ್ದರು. ಅಲ್ಲಿಂದ ಬಂದ ಕೆಲವೇ ದಿನಗಳ ನಂತರ, ಹನಿಮೂನ್‌ಗೆ ಹೋಗಿದ್ದರು. ಎಲ್ಲ ಸರಿಯಾಗಿಯೇ ಇದ್ದಿತು.

ಆದರೆ ಈಗ! ಮದುವೆಯಾಗಿ ತಿಂಗಳ ಮೇಲೆ ಒಂದ್ನೆರಡು ದಿನಗಳು ಕಳೆದಿವೆ ಅಷ್ಟೇ. ಮನೆಗೆ ಬಂದು ನಾಲ್ಕು ದಿನಗಳು ಕಳೆದಿವೆ. ಅಳಿಯ ಕರೆತಂದು ಬಿಟ್ಟಿಲ್ಲ. ಇವಳೊಬ್ಬಳೇ ಬಂದಿದಾಳೆ ಅಂತ ತಿಳಿದಾಗ ಸ್ವಲ್ಪ ಮಟ್ಟಿಗೆ ಗಾಬರಿ ಆಗಿತ್ತು. ಏನೇ ಭಿನ್ನಾಭಿಪ್ರಾಯಗಳು ಬಂದಿದ್ದರೂ ಒಂದೆರಡು ದಿನಗಳಲ್ಲಿ ಸರಿ ಹೋಗುತ್ತದೆ ಎಂದುಕೊಂಡಿದ್ದ. ಆದರೆ ದೇವಕಿ ಹೇಳಿದ್ದು.... ಮಗಳು ಗಂಡನ ಮನೆಯಲ್ಲಿ ಸುಖವಾಗಿಲ್ಲ ಅಂತ. ಏನಿದರ ಅರ್ಥ. ಮೊದಲಿನಂತೆ ಹೊರಗೆ ಕೆಲಸಕ್ಕೆ ಹೋಗುತ್ತಾಳೆ. ಮನೆಯಲ್ಲಿ ಏನೂ ಕೆಲಸ ಮಾಡಬೇಕಾಗಿಲ್ಲ. ಪ್ರೀತಿಸಿ ಮದುವೆಯಾದವರು. ಪ್ರೀತಿಗೆ ಕೊರತೆ ಏನೂ ಬಂದಿರಲಾರದು. ಕೊಟ್ಟು ಬಿಟ್ಟು ಮಾಡುವ, ವರೋಪಚಾರದಲ್ಲಿ ಯಾವುದೇ ಲೋಪದೋಷಗಳಿರಲಿಲ್ಲ. ಹಾಗಾದರೆ ಕಾರಣ? ಬೇರೆ ಮನೆ ಮಾಡುವಂತೆ ಹೇಳಬೇಕಂತೆ. ಇಲ್ಲದಿದ್ದರೆ, ಗೌತಮ್‌ಗೇ ಇಲ್ಲಿ ಬಂದು ಇರುವಂತೆ ಹೇಳಬೇಕಂತೆ. ಇದು ನ್ಯಾಯ ಅಲ್ಲ. ಅವರ ಒಳ್ಳೆಯತನವನ್ನು ನಾವು ದುರುಪಯೋಗಪಡಿಸಿಕೊಳ್ಳಬಾರದು.

ಮಗಳು ಮುದ್ದು ನಿಜ. ಆದರೆ ಹಾಗಂತ ಇವಳು ಹೇಳಿದಂತೆ ಕೇಳಲು ಸಾಧ್ಯವಿಲ್ಲ. ಗೌತಮ್ ಹತ್ತಿರ ಮಾತನ್ನಾಡಬೇಕು ಎಂದುಕೊಂಡು ಅವನಿಗೆ ಫೋನು ಮಾಡಿದ. ಎಂದಿನಂತೆ ಗೌರವದಿಂದ ಮಾತನಾಡಿದ ಗೌತಮ್, ಮಾವನನ್ನು ಅವನ ಆಫೀಸ್ನಲ್ಲಿ ಭೇಟಿಯಾದ.

"ಯಾಕಪ್ಪಾ, ನೀವು ಮನೆಗೇ ಬಂದಿಲ್ಲ.... ಒಂದು ವಾರದಿಂದ ಮಾಯಾ ನಮ್ಮ ಮನೆಯಲ್ಲಿದ್ದಾಳೆ.... ಅವಳು ನಿಮ್ಮ ವಸ್ತು.... ಬುದ್ಧಿ ಹೇಳಿ ಕರ್ಕೊಂಡು ಹೋಗಿ. ಅವಳು ನಮ್ಮ ಮನೆಯಲ್ಲಿ ಇರುವುದು ನ್ಯಾಯವಲ್ಲ" ಎಂದ.

"ಹಾಗೇನಿಲ್ಲ ಸಾರ್... ನಾನು ಸ್ವಲ್ಪ ಬಿಸಿಯಾಗಿದ್ದೆ...ಹೇಗಿದಾಳೆ ಮಾಯಾ?"

"ಫೋನು ಮಾಡಿ ವಿಚಾರಿಸಿ.... ಬಂದು ಮಾತನಾಡಿ.... ಸಂಕೋಚವೇನಿಲ್ಲವಲ್ಲ.... ನಮ್ಮ ಕಾಲದ ಥರ ಏನೂ ಅಲ್ಲವಲ್ಲ...."

"ಅವಳೇ ಮಾಡ್ಲಿ ಅಂತ ಕಾಯ್ತಿದ್ದೆ...."

"ಯಾರಾದರೂ ಒಬ್ಬರು ಸೋಲಬೇಕಾಗುತ್ತೆ. ಅವಳ ತಪ್ಪು ಇದ್ದರೆ ಅವಳೇ ಸೋಲಬೇಕಾಗುತ್ತೆ. ಆದರೆ ಏನು ನಡೀತು ಅಂತ ಗೊತ್ತೇ ಇಲ್ಲವಲ್ಲ..."

"ಹಾಗಾದರೆ ಅವಳು ಏನೂ ಹೇಳಿಲ್ಲ ಅಂತಾಯ್ತು...."

"ಗೊತ್ತಾಗಿಲ್ಲ.... ತಾಯಿ ಹತ್ತಿರವೂ ಏನೂ ಹೇಳಿಲ್ಲ ಅಂತ ಕಾಣುತ್ತೆ..."

"ಹೇಳುಕ್ಕೆ ಅಂಥಾ ಘನವಾದ ವಿಚಾರ ಏನಿದೆ ಸಾರ್? ಸಿಲ್ಲಿ ವಿಷಯ.."

"ಹಾಗಾದ್ರೆ ಏನೋ ನಡೆದಿದೆ ಅಂತಾಯ್ತು... ನಮ್ಮ ಮಾಯಾ ಸ್ವಲ್ಪ ದುಡುಕು ಸ್ವಭಾವದವಳು. ನೀವು ಹೇಗೆ ಬೇಕಾದರೂ ಅವಳನ್ನು ತಿದ್ದಿಕೊಳ್ಳ ಬಹುದು. ಆದರೆ ನಾನು ಮಧ್ಯೆ ಬರುವುದಿಲ್ಲ. ನೀವು ನೀವೇ ಸರಿ ಪಡಿಸಿಕೊಳ್ಳಿ... ನೀವು ಬಂದು ಮಾತಾಡಿ ಕರೆದುಕೊಂಡು ಹೋಗಿ. ಅದು ಗೌರವ.... ನಾನು ರಿಕ್ವೆಸ್ಟ್ ಮಾಡಿಕೊಳ್ತೀನಿ..."

"ಛೇ.... ಛೇ... ನೀವ್ಯಾಕೆ ರಿಕ್ವೆಸ್ಟ್ ಮಾಡಿಕೊಳ್ಳಬೇಕು ಸಾರ್....ಮಾಯಾ ನನ್ನ ಪತ್ನಿ. ನನ್ನ ಕರ್ತವ್ಯವೂ ಇದೆ. ನಾಲ್ಕು ದಿನ ನಿಮ್ಮ ಮನೆಯಲಿದ್ರೆ ಬೇಸರ ಕಳೆಯುತ್ತೆ ಅಂತ ಅಂದ್ಕೊಂಡೆ....ನಾನು ಮಾಯಾಳ ಹತ್ತಿರ ಮಾತಾಡ್ತೀನಿ. ಬಂದು ಕರ್ಕೊಂಡು ಹೋಗ್ತೀನಿ. ನೀವು ಚಿಂತಿಸ್ಬೇಡಿ...."

"ನಿಮ್ಮ ಹತ್ರ ಮಾತಾಡಿದ್ಮೇಲೆ ನನಗೀಗ ಸಮಾಧಾನವಾಯ್ತು... ಮನೇಲಿ ಎಲ್ರೂ ಹೇಗಿದಾರೆ?"

"ಎಲ್ರೂ ಚೆನ್ನಾಗಿದಾರೆ ಸಾರ್. ಮಾಯಾ ಯಾಕೆ ಇನ್ನೂ ಬಂದಿಲ್ಲ ಅಂತ ಕೇಳ್ತಾರೆ. ನಮ್ಮ ಅಜ್ಜೀನೇ ಮಾತಾಡ್ತೀನಿ ಅಂತಂದ್ರು.... ಆದರೆ...."

"ಬೇಡ, ಅವರು ಮಾತಾಡಬೇಕಾಗಿಲ್ಲ. ನೀವು ಬರ್ತೀನಿ ಅಂದ್ರಲ್ಲ. ಮಾಯಾ ನಿಮ್ಮ ಜೊತೆ ಬರ್ತಾಳೆ..." ಎಂದು ಸಮಾಧಾನದಿಂದ ಹೇಳಿದ.

*****

"ಮಾಯಾ ಯಾವಾಗ ಹೋಗ್ತೀಯಮ್ಮ ನಿನ್ನ ಮನೆಗೆ? ಗೌತಮ್ ಫೋನು ಮಾಡಿದ್ನಾ?" ಮಗಳನ್ನು ವಿಚಾರಿಸಿದ.

"ಇಲ್ಲ ಗೌತಮ್ ಫೋನು ಮಾಡಿಲ್ಲ. ಅವನು ಮಾಡುವುದೂ ಇಲ್ಲ. ನಾನು ಅಲ್ಲಿಗೆ ಹೋಗುಲ್ಲ. ನಾನು ನಿನಗೆ ಭಾರವೇನಪ್ಪಾ?"

"ಭಾರದ ಪ್ರಶ್ನೆ ಅಲ್ಲ. ಅದು ನಿನ್ನ ಮನೆ. ಇದು ತವರು ಮನೆ. ಇಲ್ಲಿಯೇ ಇರುಕ್ಕೆ ಆಗುತ್ತಾ ಮಾಯಾ? ನಾಲ್ಕು ದಿನ ಬಂದು ಹೋಗ್ಬೇಕು"

"ಹಾಗಾದ್ರೆ ನನಗೆ ಬೇರೆ ಮನೆ ಮಾಡಿಕೊಡಿ...."

"ಒಬ್ಬಳೇ ಇರ್ತೀಯಾ...."

"ಒಬ್ಬಳೇ ಯಾಕಿರಲಿ? ಗೌತಮ್‌ನ್ನು ಕರೆದಿಟ್ಟುಕೊಳ್ತೀನಿ..."

"ಹಾಗಾದ್ರೆ ಗೌತಮ್ ಹತ್ರ ಮಾತಾಡ್ತೀನಿ.... ಡೈವೋರ್ಸ್ ತಗೊಂಡು ಬಿಡು"

"ಡ್ಯಾಡೀ... ನಾನ್ಯಾಕೆ ಡೈವೋರ್ಸು ತಗೋಬೇಕು?"

"ಮತ್ತಿನ್ನೇನು? ನಿನಗೆ ಅತ್ತೆಯ ಮನೇಲಿರುಕ್ಕಾಗುಲ್ಲ. ಗಂಡ ಮಾತ್ರ ಬೇಕು.... ಅತ್ತೆ ಮನೆಯವರು ಬೇಡ ಅಂತಂದ್ರೆ?...."

"ಅದು ಅತ್ತೆಯ ಮನೆ ಅಲ್ಲ. ಸಂತೆ... ಸದಾ ಗದ್ದಲ... ಸಾಕಾಗಿದೆ."

"ಸದಾ ನೀನು ಮನೇಲಿ ಎಲ್ಲಿರ್ತೀ ಮಾಯಾ? ಬೆಳಗ್ನಿಂದ ಸಾಯಂಕಾಲದವರೆಗೆ ಕೆಲಸಕ್ಕೆ ಹೋಗಿರ್ತೀಯಾ?.... ರಾತ್ರಿ ಎಲ್ಲರೂ ಮಲಗಿರ್ತಾರೆ...."

"ಎಲ್ಲಿ ಮಲಗ್ತಾರೆ? ರಾತ್ರಿ ಹನ್ನೆರಡರವರೆಗೂ ಎಚ್ಚರವಾಗಿರ್ತಾರೆ.... ಬೆಳಿಗ್ಗೆ ನಾಲ್ಕು ಗಂಟೆಗೇ ಎದ್ದು ಸದ್ದು ಮಾಡ್ತಾರೆ.... ಪ್ರೈವೆಸಿಯೂ ಇಲ್ಲ, ಪೀಸೂ ಇಲ್ಲ...."

"ಅಂದರೇ.... ನಿನಗೆ ಅಲ್ಲಿ ಸರಿ ಹೋಗ್ತಿಲ್ಲ, ಇದಕ್ಕೆ ನನ್ನ ಹತ್ರ ಯಾವ ಸಲ್ಯೂಷನ್ನೂ ಇಲ್ಲ.... ಹೋಗೋದಾದ್ರೆ ಅತ್ತೆಯ ಮನೆಗೆ ಹೋಗು. ಇಲ್ಲದಿದ್ರೆ ಇಲ್ಲೇ ಇದ್ಬಿಡು, ನಿನ್ನಿಷ್ಟ...."

"ಡ್ಯಾಡೀ.... ನಿಮಗೆ ನನ್ನ ಮೇಲೆ ಪ್ರೀತೀನೇ ಇಲ್ಲ. ನಾನು ಗೌತಮ್‌ನ ಮದುವೆ ಆಗಿದ್ದು ನಿಮಗೆ ಇಷ್ಟವಿಲ್ಲ. ಅದಕ್ಕೇ ಹೀಗೆ ಮಾತಾಡ್ತೀರಿ ಅಲ್ವಾ?"

"ಇಲ್ಲ ಮಾಯಾ.... ಗೌತಮ್‌ನ ನೀನು ಪ್ರೀತಿಸಿದೆ.... ನಾನೂ ಅದನ್ನು ಒಪ್ಪಿದೆ. ನನಗೆ ಯಾವ ಬೇಸರವೂ ಇಲ್ಲ. ಆದರೆ ನೀನು ಅತ್ತೆಯ ಮನೆಯಲ್ಲಿ ಇರುಕ್ಕೆ ಆಗದೇ ಇಲ್ಲಿಗೆ ಬಂದಿರುವುದು ಬೇಸರ ಮಾಡಿದೆ.... ಗೌತಮ್‌ನ ಅವರೆಲ್ಲಾ ಪ್ರೀತಿಸ್ತಾರೆ ಮಾಯಾ.... ಅವನನ್ನು ಅವರಿಂದ ದೂರ ಮಾಡುವ ವಿಷಯವನ್ನು ನೀನು ಯೋಚಿಸುವುದೂ ತಪ್ಪು....ಅವರಿಲ್ಲದೇ ಅವನು ತಾನೇ ಹೇಗಿರ್ತಾನೆ?"

"ಏನು ಡ್ಯಾಡೀ ಹೀಗೆ ಮಾತಾಡ್ತಿದೀರಿ. ನಾನು ನಿಮ್ಮ ಮಗಳು, ಸೊಸೆ ಅಲ್ಲ. ಗೌತಮ್ ನಿಮ್ಮ ಅಳಿಯ; ಮಗನಲ್ಲ..."

"ಅಳಿಯ ಮಗನ ಸಮಾನ... ನೀನು ನನ್ನ ಸೊಸೆ ಆಗಿದ್ದಿದ್ರೆ ನಾಲ್ಕು ಹೊಡೆದು ತಿಳುವಳಿಕೆ ಹೇಳ್ತಿದ್ದೆ. ಈಗ ನನಗೆ ಆ ಅಧಿಕಾರವೂ ಇಲ್ಲ.... ನೀನೀಗ ಅವರ ಮನೆಯ ಸ್ವತ್ತು...."

"ನೋಡು ಮಮ್ಮೀ.... ಡ್ಯಾಡೀ ಹೇಗೆ ಮಾತಾಡ್ತಿದಾರೆ....ನನ್ನ ಮೇಲೆ ಪ್ರೀತೀನೇ ಇಲ್ಲ. ನೀನಾದ್ರೂ ಡ್ಯಾಡಿಗೆ ಹೇಳು...."

"ಇಲ್ಲ ಮಾಯಾ.... ನಿನ್ನ ಡ್ಯಾಡೀ ಹೇಳ್ತಿರೋದು ಸರಿಯಾಗಿದೆ. ನೀನು ಇಲ್ಲಿ ಎಷ್ಟು ದಿನ ಬೇಕಾದ್ರೂ ಇರು. ನೀನು ನಂಗೆ ಹೊರೆ ಅಲ್ಲ.... ಆದರೆ ನೀನು ಒಂದಲ್ಲ ಒಂದು ದಿನ ಗಂಡನ ಮನೆಗೆ ವಾಪಸ್ಸು ಹೋಗಲೇ ಬೇಕಾಗುತ್ತದೆ. ಇಲ್ದಿದ್ರೆ ನಿನ್ನ ಡ್ಯಾಡೀ ಹೇಳಿದ ಹಾಗೆ ಡೈವೋರ್ಸ್ ತಗೊಂಡ್ಬಿಡು."

"ಮಮ್ಮೀ.... ನೀನೂ ನನ್ನನ್ನು ಪ್ರೀತಿಸುಲ್ವಾ ಹಾಗಾದ್ರೆ..."

"ಪ್ರೀತಿಸ್ತೀವಿ ಮಾಯಾ.... ನೀನು ಸುಖವಾಗಿರಲಿ ಅಂತಲೇ ನಮ್ಮಾಸೆ."

"ಸುಖ? ಅದು ಸುಖ ಅಲ್ಲ ಮಮ್ಮೀ.... ಆದರೆ ಗೌತಮ್ ನನ್ನನ್ನು ಮರೆತೇ ಬಿಟ್ಟಿದಾರೆ ಅಂತ ಕಾಣುತ್ತೆ.... ಒಂದು ಫೋನು ಕೂಡಾ ಮಾಡಿಲ್ಲ.... ಯಾರಿಗೂ ನಾನು ಬೇಕಾಗಿಲ್ಲ...." ಅಳು ಬಂದಿತ್ತು. ಅಷ್ಟರಲ್ಲಿ ಮುಂಬಾಗಿಲ ಕರೆಗಂಟೆ ಬಾರಿಸಿತ್ತು. ದೇವಕಿ ಬಾಗಿಲನ್ನು ತೆರೆದಳು. ಗೌತಮ್ ಒಳಕ್ಕೆ ಬಂದಿದ್ದ.

"ಮಾಯಾ.... ಯಾರು ಬಂದಿದಾರೆ ಅಂತ ನೋಡು...." ತಾಯಿಯ ಹರ್ಷದ ಕೂಗು ಅವಳನ್ನು ಎಬ್ಬಿಸಿತು. ಕತ್ತೆತ್ತಿದಳು, ಗೌತಮ್ ಒಳಬಾಗಿಲಿನಲ್ಲಿ ನಿಂತಿದ್ದ. ಎದುರಿಗೆ ತಂದೆ ತಾಯಿ ಇದಾರೆ ಎನ್ನುವುದನ್ನೂ ಮರೆತು, ಮಾಯಾ ಓಡಿ ಹೋಗಿ ಅವನನ್ನು ತಬ್ಬಿಕೊಂಡು ಅವನ ಎದೆಗೆ ಒರಗಿ ಅತ್ತಳು.

"ನಂಗೊತ್ತಿತ್ತು ಗೌತಮ್.... ನೀವು ಬಂದೇ ಬರ್ತೀರಿ ಅಂತ. ನನ್ನಿಂದ ನಿಮಗೆ ದೂರ ಇರುಕ್ಕೆ ಆಗುಲ್ಲ ಅಂತ ನಂಗೆ ಗೊತ್ತು...."

"ನಿಂಗೆ ನನ್ನಿಂದ ದೂರ ಇರುಕ್ಕೆ ಆಗುತ್ತಾ ಮಾಯಾ?" ಎನ್ನುತ್ತಾ ಅವಳನ್ನು ಸರಿಸಿದ.

"ಸಾರೀ.... ಗೌತಮ್.... ಒಂದು ವಾರದಿಂದ ನಿಮ್ಮ ಮುಖವನ್ನು ನೋಡದೇ ನಾನು ಹೇಗೆ ಬದುಕಿದ್ದೆ ಅಂತ ನಂಗೇ ಗೊತ್ತಿಲ್ಲ.... ಥ್ಯಾಂಕ್ ಗಾಡ್... ಅಂತೂ ಬಂದ್ರಲ್ಲ... ನನ್ನ ಮೇಲಿನ ಪ್ರೀತಿ ಕಡಿಮೆ ಆಗಿಲ್ಲ ಅಂತ ಗೊತ್ತಾಯ್ತು ನಂಗೆ...."

"ಪ್ರೀತಿ ಹೇಗೆ ಕಡಿಮೆ ಆಗುತ್ತೆ ಮಾಯಾ.... ದಿನ ದಿನಕ್ಕೂ ಜಾಸ್ತಿ ಆಗುತ್ತೆ. ಹೇಗಿದೀರಿ ಸಾರ್? ಹೇಗಿದೀರಿ ಅಮ್ಮಾ?" ಎಂದು ಕೇಳುತ್ತಾ ಒಳಗೆ ಬಂದ.

"ನಾವು ಚೆನ್ನಾಗಿದೀವಪ್ಪಾ..., ಮನೇಲಿ ಎಲ್ಲರೂ ಹೇಗಿದಾರೆ?.... ನೀವುಗಳು ಮಾತಾಡ್ತಾ ಇರಿ.... ನಾನು ತಿಂಡಿ ಕಾಫೀನ ತರ್ತೀನಿ" ಎನ್ನುತ್ತಾ

ದೇವಕಿ ಒಳಗೆ ನಡೆದಳು. ವಾಸುಕಿಯೂ ಅವಳ ಹಿಂದೆ ಅಡಿಗೆ ಮನೆಗೆ ನಡೆದ.

"ನೋಡು ಗೌತಮ್.... ನನ್ನ ಮಮ್ಮೀ ಕ್ಲೆವರ್.... ನಾವಿಬ್ಬರೂ ಮಾತಾಡ್ಲೀ ಅಂತ ನಮ್ಮಿಬ್ಬರನ್ನೇ ಬಿಟ್ಟು ಇಬ್ಬರೂ ಒಳಗೆ ಹೊರಟು ಹೋದರು...."

ಗೌತಮ್ ಅದಕ್ಕೆ ಉತ್ತರಿಸಲಿಲ್ಲ. "ನಾನು ನಿನ್ನನ್ನು ಕರೆದುಕೊಂಡು ಹೋಗುಕ್ಕೆ ಬಂದಿದೀನಿ. ಏಳು ರೆಡಿ ಮಾಡ್ಕೋ...." ಅವಳು ತಕ್ಷಣಕ್ಕೆ ಸಂತಸಗೊಂಡರೂ ಮರುಕ್ಷಣವೇ ಮಂಕಾಗಿದ್ದಳು. "ಯಾಕೆ.. ನನ್ನ ಜೊತೆ ಬರುಕ್ಕೆ ನಿಂಗೆ ಇಷ್ಟವಿಲ್ವಾ?.... ಇಲ್ಲಿ ಎಷ್ಟು ದಿನ ಅಂತ ಇರ್ತೀಯಾ?.... ನಾನಿಲ್ಲದೇ ಇರುಕ್ಕೆ ಆಗುಲ್ಲ ಅಂತ ಈಗ್ತಾನೇ ಹೇಳ್ದೆ.... ಗೆಟ್ ಅಪ್...ನಿನ್ನ ಪೇರೆಂಟ್ಸ್‌ಗೆ ಹೇಳು...."

"ಆದರೆ ಗೌತಮ್...."

"ಆದರೆ ಗೀದರೆ ಏನೂ ಇಲ್ಲ. ನೀನು ನನ್ನ ಜತೆ ಬರ್ತಿದೀಯ ಅಷ್ಟೇ...." ಅವಳು ಏನನ್ನಾದರೂ ಹೇಳುವ ಮೊದಲೇ ದೇವಕಿ ತಿಂಡಿ ಕಾಫಿಯ ಟ್ರೇಯನ್ನು ತಂದಿತ್ತಳು.

"ಮಮ್ಮೀ....ಕೋಡು ಬಳೇನ ಯಾವಾಗ ಮಾಡ್ದೇ? ನಂಗೆ ನೀನು ಕೊಡ್ಲೇ ಇಲ್ಲ...."

"ನಾನು ಮಾಡಿದ್ದು ಅಲ್ಲ... ಗೌತಮ್ ನಿಂಗೋಸ್ಕರ ತಂದಿದಾರೆ...."

"ನಂಗೆ ಕೋಡು ಬಳೆ ಇಷ್ಟ ಅಂತ ನಿಮಗೆ ಇನ್ನೂ ಜ್ಞಾಪಕ ಇದೆಯಾ ಗೌತಮ್...." ನಗುತ್ತಾ ಕೇಳಿದಳು.

"ನಂಗೆ ಎಲ್ಲಾ ನೆನಪಿನಲ್ಲಿದೆ ಮಾಯಾ....ನಾನು ನಿನ್ಹತ್ರ ತುಂಬಾ ಮಾತಾಡೋದಿದೆ. ಬೇಗ ತಿಂಡಿ ಮುಗಿಸು.... ಹೊರಡೋಣ...."

"ಇಲ್ಲೇ ನನ್ನ ರೂಮಿನಲ್ಲಿ ಕೂತು ಮಾತನಾಡಿದ್ರೆ ಆಗುಲ್ವಾ ಗೌತಮ್.... ಇಲ್ಲಿ ಯಾರೂ ಡಿಸ್ಟರ್ಬ್ ಮಾಡುಲ್ಲ...."

"ಇಲ್ಲ ಮಾಯಾ... ಇಲ್ಲಿ ನಂಗೆ ಮುಜುಗರ ಆಗುತ್ತೆ... ಬರೋದಾದ್ರೆ ಹೊರಗೆ ಬಾ. ಎಲ್ಲಾದ್ರೂ ಕೂತು ಮಾತನಾಡೋಣ... ಆಮೇಲೆ ನಾನೇ ಮತ್ತೆ ಕರ್ಕೊಂಡು ಬಂದು ಬಿಡ್ತೀನಿ...."

"ಇವತ್ತು ರಾತ್ರಿ ಇಲ್ಲೇ ಇರ್ತೀರಾ ಗೌತಮ್...." ಆಸೆಯಿಂದ ಕೇಳಿದಳು.

"ಮೊದಲು ಹೊರಗೆ ಹೋಗಿ ಮಾತನಾಡೋಣ...." ಅವಸರಿಸಿದ.

"ಯಾಕೆ ಹೀಗೆ ಆತುರ ಪಡಿಸ್ತೀರಿ ಗೌತಮ್.... ಇದೂ ಮನೆಯೇ...

ಇವರು ನನ್ನ ಪೇರೆಂಟ್ಸ್.... ನಿಮಗೆ ಪೇರೆಂಟ್ಸ್ ಇನ್ ಲಾ..."

"ಆದರೂ ನನಗೆ ಮುಜುಗರ ಆಗುತ್ತೆ..... ಈಗೇನು? ನನ್ನ ಜತೇಲಿ ಬರ್ತೀಯೋ ಇಲ್ವೋ....?"

"ಬರ್ತೀನಪ್ಪಾ.... ಯಾಕೆ ಹೀಗೆ ಗುರ್ ಅಂತೀರಾ?"

"ದಟ್ಸ್ ಲೈಕ್ ಎ ಗುಡ್ ಗರ್ಲ್.... ಈ ಕೋಡು ಬಳೆಗಳನ್ನು ಬೇಗ ಬೇಗ ತಿಂದು ಮುಗಿಸು..." ಎನ್ನುತ್ತಾ ಕಾಫಿಯ ಜತೆಯಲ್ಲಿ ಕೋಡುಬಳೆಗಳನ್ನು ತಿಂದು ಮುಗಿಸಿದ....

ಇಬ್ಬರೂ ಮನೆಯಿಂದ ಹೊರಟರು...."ನನ್ನ ಕಾರ್ನಲ್ಲಿ ಹೋಗೋಣ ಗೌತಮ್...."

"ಬೇಡ, ಬೈಕ್‌ನಲ್ಲೇ ಹೋಗೋಣ.... ನೀನು ನನಗೆ ಹತ್ತಿರದಲ್ಲಿ ಕೂತಿರ್ತೀಯಾ. ಒಂಥರಾ ಹಿತವಾಗಿರುತ್ತೆ" ಎಂದ. ಅವನು ಬೈಕ್‌ನ್ನು ಸ್ಟಾರ್ಟ್ ಮಾಡಿದ. ಅವಳು ಹಿಂದಿನ ಸೀಟನ್ನೇರಿ ಅವನ ಸೊಂಟವನ್ನು ಬಳಸಿ, ಅವನು ಭುಜಕ್ಕೆ ಒರಗಿದಳು. ಬೈಕ್ ಚಲಿಸಿತು. ಇಬ್ಬರೂ ಅಲ್ಲಿ ಇಲ್ಲಿ ಸುತ್ತಾಡಿದರು. ಬೈಕ್ ಗೌತಮನ ಮನೆಯ ದಾರಿಯನ್ನು ಹಿಡಿಯಿತು. ಮನೆಯ ಮುಂದೆ ಬೈಕ್‌ನ ನಿಲ್ಲಿಸಿದಾಗ ಅವಳು ಮೌನವಾಗಿ ಇಳಿದಳು.

"ನಾನು ಇಲ್ಲೇ ನಿಂತಿರ್ತೀನಿ. ಬೇಗ ಹೇಳ್ಬಿಟ್ಟು ಬಂದ್ಬಿಡಿ ಗೌತಮ್...."

"ಯಾಕೆ ಒಳಗೆ ಬರುಲ್ವಾ ಮಾಯಾ.... ಇದು ನಿನ್ನದೇ ಮನೆ..." ಎನ್ನುತ್ತಾ ಮುಂಬಾಗಿಲಿಗೆ ಹಾಕಿದ್ದ ಬೀಗವನ್ನು ತೆಗೆದ. ವೆರಾಂಡಾದಲ್ಲಿ ಉರಿಯುತ್ತಿದ್ದ ಸಣ್ಣ ದೀಪ ಅವಳನ್ನು ಸ್ವಾಗತಿಸಿತು.

"ಮನೇಲಿ ಯಾರೂ ಇಲ್ವಾ ಗೌತಮ್.... ಒಳಗಿನ ದೀಪವನ್ನೇ ಹಾಕಿಲ್ಲ"

"ಇಲ್ಲ, ಎಲ್ಲರೂ ಮದುವೆಗೆ ಹೋಗಿದಾರೆ, ಬರೋದು ಇನ್ನೂ ತಡ...." ಎನ್ನುತ್ತಾ ಒಳಗೆ ಬಂದು ದೀಪಗಳನ್ನು ಹಾಕಿದ. ಅವಳು ಅನುಮಾನಿಸುತ್ತಾ ಒಳಕ್ಕೆ ಅಡಿ ಇಟ್ಟಳು. ಎಲ್ಲಾ ಮೊದಲಿನಂತೆಯೇ.... ಆದರೆ ಮನೆ ತುಂಬಾ ಮೌನ ಆವರಿಸಿಕೊಂಡಿತ್ತು. ಟಿ.ವಿ. ಉರಿಯುತ್ತಿರಲಿಲ್ಲ. ರೇಡಿಯೋ ಹಾಡುತ್ತಿರಲಿಲ್ಲ. ಅಡಿಗೆ ಮನೆಯಲ್ಲಿ ಮಾತುಗಳಿಲ್ಲ. ಒಂಥರಾ ಬಿಕೋ ಎನಿಸಿತು.

"ಓ... ಕೇ... ಕೂತ್ಕೋ... ಮಾತಾಡೋಣ..."

"ಏನು ಮಾತಾಡ್ಬೇಕು ಗೌತಮ್...?" ಪಿಸುದನಿಯಲ್ಲಿ ಕೇಳಿ, ಅವನಿಗೆ ಒರಗಿ ಕುಳಿತಳು. ಹೀಗೇ ಮೌನವಾಗಿ ಕೂತಿರೋಣ ಅಂತ ಅನ್ಸುತ್ತೆ....ಈಗ

ಯಾವ ಮಾತೂ ಬೇಡ" ಎನ್ನುತ್ತಾ ಅವನನ್ನು ತೋಳಿನಿಂದ ಬಳಸಿದಳು.

"ಈ ರೋಮಾನ್ಸ್ ಎಲ್ಲಾ ಬೇಡ.... ನಿಜ ಹೇಳು ನೀನು ನನ್ನನ್ನು ಎಷ್ಟು ಪ್ರೀತಿಸ್ತೀಯಾ ಅಂತ...." ಅವಳನ್ನು ಸರಿಸಿದ.

"ಪ್ರೀತಿ ಎಷ್ಟು ಅಂತ ತೋರಿಸ್ತೀನಿ ಬನ್ನಿ.... ಬೆಡ್ ರೂಂಗೆ ಹೋಗೋಣ ಹೇಗೂ ಬೇರೆ ಯಾರೂ ಇಲ್ಲ...."

"ಬೆಡ್ ರೂಂ ಪ್ರೀತಿನಲ್ಲ ನಾನು ಕೇಳಿದ್ದು. ನನಗೋಸ್ಕರ ನೀನು ಏನೇನು ಮಾಡಬಲ್ಲೆ ಅಂತ ಕೇಳ್ತಿದ್ದೀನಿ.... ತಾಯಿಯಂತೆ ನೋಡಿಕೊಳ್ಳ ಬಲ್ಲೆಯಾ? ತಂದೆಯಂತೆ ಪೋಷಿಸಬಲ್ಲೆಯಾ? ಅಕ್ಕ ತಂಗಿಯರಂತೆ ಹಾರೈಸ ಬಲ್ಲೆಯಾ? ಅತ್ತಿಗೆಯಂತೆ ಆದರಿಸಬಲ್ಲೆಯಾ?.... ಅಣ್ಣನ ಮಕ್ಕಳಂತೆ ಗೌರವಿಸ ಬಲ್ಲೆಯಾ?"

"ಹೀಗ್ಯಾಕೆ ಕೇಳ್ತಿದೀಯಾ ಗೌತಮ್.... ನಾನು ನಿಮ್ಮ ಪತ್ನಿ... ನನ್ನ ನಿಮ್ಮ ಸಂಬಂಧವೇ ಬೇರೆ...."

"ಇರಬಹುದು.... ಆದರೆ ಸಂಬಂಧಗಳು ಶುರುವಾಗುವುದೇ ಜನ್ಮದಿಂದ.... ತಂದೆ, ತಾಯಿ, ಅಣ್ಣ, ತಂಗಿ, ಅತ್ತಿಗೆ ಭಾವ.... ಮಕ್ಕಳು ಮರಿ ಎಲ್ಲರೂ ಇದ್ದರೇ ಅದು ಸಂಸಾರ...."

"ನಿಮಗೆ ಯಾರೂ ಇಲ್ಲವಲ್ಲ ಗೌತಮ್... ನೀವು ಹುಟ್ಟಿದಾಗಲೇ ತಾಯಿಯನ್ನು ಕಳೆದುಕೊಂಡಿರಿ... ಇವರು ನಿನ್ನನ್ನು ಸಾಕಿ ಬೆಳೆಸಿದಾರೆ ಅಷ್ಟೇ...."

"ಬರೀ ಸಾಕಿ ಬೆಳೆಸಿಲ್ಲ. ಪ್ರೀತಿಯ ಮಹಾಪೂರವನ್ನೇ ಹರಿಸಿದ್ದಾರೆ. ಅದು ನಿನಗೆ ಅರ್ಥವಾಗುಲ್ಲ ಬಿಡು.... ನಡೀ, ನಿನ್ನನ್ನು ನಿನ್ನ ಮನೆಗೆ ಬಿಟ್ಟು ಬರ್ತೀನಿ...." ಎದ್ದ.

"ನನಗೆ ಟೆನ್ಷನ್ ಮಾಡ್ತಿದೀರಿ ಗೌತಮ್, ಇದೆಲ್ಲಾ ನಂಗೆ ಇಷ್ಟ ವಾಗುಲ್ಲ."

"ಏನು ಹಾಗಂದ್ರೇ?.... ನಿರ್ಧಾರ ನಿನ್ನದು.... ನಿನಗೆ ಎಷ್ಟು ಟೈಂ ಬೇಕೋ ಅಷ್ಟು ಟೈಂ ತಗೊಂಡು ಯೋಚಿಸು.... ನನ್ನದೇನೂ ಅಭ್ಯಂತರವಿಲ್ಲ...."

"ಅಲ್ಲಿಯವರೆಗೆ....?"

"ನೀನು ಅಲ್ಲಿ, ನಾನು ಇಲ್ಲಿ. ಸಿಂಪಲ್...ಏಳು ಹೊರಡೋಣ...."

"ನಾನು ಇವತ್ತು ಇಲ್ಲೇ ಇರ್ತೀನಿ ಗೌತಮ್.... ಎಷ್ಟೋ ದಿನಗಳ ನಂತರ ಒಟ್ಟಿಗೆ ಇರುವ ಅವಕಾಶ ಸಿಕ್ಕಿದೆ.... ಪ್ಲೀಸ್ ಬೇಡ ಅನ್ನಬೇಡಿ...."

"ಓ... ಕೇ... ನಿನ್ನ ಪೇರೆಂಟ್ಸ್‌ಗೆ ಫೋನು ಮಾಡಿ ಇಲ್ಲೇ ಇರ್ತೀನಿ ಅಂತ ತಿಳಿಸಿ ಬಿಡು..."

"ಏನೂ ಬೇಡ... ನಿಮ್ಮ ಜತೇಲಿ ಇದೀನಿ ಅಂತ ಅವರಿಗೆ ಗೊತ್ತಲ್ಲ..

ನನ್ನ ಬಗ್ಗೆ ಏನೂ ಚಿಂತೆ ಇರುಲ್ಲ...."

"ಯಾಕೆ ಇರುಲ್ಲ. ಪೇರೆಂಟ್ಸ್‌ಗೆ ಮಕ್ಕಳ ಬಗ್ಗೆ ಚಿಂತೆ ಇದ್ದೇ ಇರುತ್ತೆ... ಒಂದ್ಮಾತು ಹೇಳಿದ್ರೆ ಸಮಾಧಾನವಾಗಿರ್ತಾರೆ.... ಅವರು ಕೇಳುವ ಮೊದಲು ನೀನು ತಿಳಿಸುವುದು ಒಳ್ಳೇದಲ್ವಾ?"

"ನೀವೇ ಮಾತಾಡಿ ಬಿಡಿ. ನಂಗೆ ನಾಚಿಕೆ ಆಗುತ್ತೆ...."

"ಓ... ಕೆ... ನಂಗೆ ನಿನ್ನ ಪೇರೆಂಟ್ಸ್ ಬಗ್ಗೆ ಗೌರವ ಇದೆ. ಅವರಿಗೆ ಬೇಸರವಾಗುವಂಥ ಯಾವ ಕೆಲಸವನ್ನೂ ನಾನು ಮಾಡುವುದಿಲ್ಲ" ಎನ್ನುತ್ತಾ ಅವರಿಗೆ ಫೋನು ಮಾಡಿ ವಿಷಯವನ್ನು ತಿಳಿಸಿದ.

"ಅವರು ಒಪ್ಪಿಗೆ ಕೊಟ್ಟಿದ್ದಾರೆ, ಮೊದಲು ಅಡಿಗೆ ಮನೇಲಿ ಏನಿದೆ ಅಂತ ನೋಡೋಣ ಬಾ..." ಎನ್ನುತ್ತಾ ಎದ್ದ. ಅವಳೂ ಅವನನ್ನು ಹಿಂಬಾಲಿಸಿದಳು.

"ಕುಕ್ಕರ್‌ನಲ್ಲಿ ಅನ್ನ ಇದೆ. ಇಲ್ಲಿ ಪಾತ್ರೇಲಿ ಸಾರು ಇದೆ, ಪಲ್ಯ ಇದೆ. ನನಗೋಸ್ಕರ ಅಜ್ಜಿ ಮಾಡಿಟ್ಟಿದ್ದಾರೆ. ಇಬ್ಬರೂ ಹಂಚಿಕೊಂಡು ತಿನ್ನೋಣ...."

"ಬಿಸಿ ಮಾಡ್ಬಿಡಿ ಪ್ಲೀಸ್.... ತುಂಬಾ ತಣ್ಣಗಿದೆ..."

"ಓ... ಕೇ... ಇವತ್ತು ನಿಂಗೋಸ್ಕರ ಮಾಡ್ತೀನಿ. ಆದರೆ ನಾಳೆ ಬೆಳಿಗ್ಗೆಯ ಗತಿ?"

"ನಾಳೆಯ ಚಿಂತೆ ಈಗ್ಯಾಕೆ. ಬೇಗ ಊಟ ಮಡೋಣ.... ಬೇಗ ಮಲಗೋಣ...."

"ಅರ್ಜೆಂಟೇನು ಮಾಯಾ?.... ಒಂದು ವಾರದಿಂದ ಒಬ್ಬರಿಗೊಬ್ಬರು ಕಾದಿದೀವಿ.... ನಿಧಾನವಾಗಿ ಎಂಜಾಯ್ ಮಾಡೋಣ...." ಎನ್ನುತ್ತಾ ಅಡಿಗೆಗಳನ್ನು ಬಿಸಿ ಮಾಡಲು ಇಟ್ಟ. ಡೈನಿಂಗ್ ಟೇಬಲ್ ಮೇಲೆ ತಟ್ಟೆ ಲೋಟಗಳನ್ನಿಟ್ಟ. ಅವಳು ಸಿಂಕ್‌ಗೆ ಒರಗಿ ನಿಂತು ಅವನನ್ನೇ ನೋಡುತ್ತಿದ್ದಳು.

ಊಟ ಮುಗಿಸಿ ಕೈ ತೊಳೆದು, ಎಲ್ಲಾ ದೀಪಗಳನ್ನು ಆರಿಸಿದ. ಇಬ್ಬರೂ ಬೆಡ್ ರೂಂ ಸೇರಿದರು....ಅವಳು ಕೈಗೆ ಸಿಕ್ಕಿದ ಒಂದು ನೈಟಿಯನ್ನು ಧರಿಸಿ, ರೂಮಿನ ಬಾಗಿಲನ್ನು ಹಾಕಿದಳು. ಅವನು ನಸುನಕ್ಕ. "ಮನೆಯಲ್ಲಿ ಬೇರೆ ಯಾರೂ ಇಲ್ಲ...ಯಾವ ಗಲಾಟೆಯೂ ಇಲ್ಲ. ಬಾಗಿಲನ್ನು ಯಾಕೆ ಹಾಕಿದೆ?" ಕೇಳಿದ.

"ಪ್ರೈವೆಸಿ ಇರಲಿ ಅಂತ.... ಯಾರು ಇರಲಿ ಬಿಡಲಿ ಬೆಡ್ ರೂಂನಲ್ಲಿ ಪ್ರೈವೆಸಿ ಇರಬೇಕು. ಹನಿಮೂನ್ ನಂತರ ಇದೇ ಫಸ್ಟ್ ಟೈಂ.... ನಾವಿಬ್ಬರೇ ಇರೋದು" ಎನ್ನುತ್ತಾ ಮಂಚದ ಮೇಲೆ ಕುಳಿತಳು.

"ಸದಾ ಹನಿಮೂನ್ ಮೂಡ್‌ನಲ್ಲೇ ಇರೋಕ್ಕಾಗುತ್ತಾ ಡಿಯರ್. ಹಾಗಿದ್ರೆ ಅದು ಸಂಸಾರ ಅಂತ ಅನ್ನಿಸ್ಕೊಳ್ಳುತ್ತಾ? ಮುಂದೆ ನಮಗೆ ಮಕ್ಕಳಾದರೆ, ಮಕ್ಕಳಿಂದ ನಮಗೆ ಯಾವ ಪ್ರೈವೆಸಿಯೂ ಇಲ್ಲ ಅಂತ ಅನ್ನುಕ್ಕೆ ಆಗುತ್ತಾ?"

"ಮಕ್ಕಳು ನಮ್ಮವರೇ ಗೌತಮ್.... ಅಲ್ಲದೇ ನಮ್ಮಿಬ್ಬರ ಮದುವೆಯಾಗಿ ಎರಡು ತಿಂಗಳು ಕಳೆದಿಲ್ಲ. ನಮಗೆ ಪ್ರೈವೆಸಿ ಬೇಡ್ವಾ?"

"ಯಾರಿಂದ ನಮಗೆ ತೊಂದರೆ ಆಗಿದೆ ಹೇಳು. ಬಾಗಿಲು ಬಡಿದು ಯಾರಾದ್ರೂ ಎಂದಾದ್ರೂ ಎಬ್ಬಿಸಿದಾರಾ?.... ಬೇಗ ಏಳಲಿಲ್ಲ ಅಂತ ಆರೋಪ ಹೊರಿಸಿದಾರಾ?.... ಅಥವಾ ನನ್ನ ನಿನ್ನ ಮಧ್ಯೆ ವಿರಸ ಬರುವಂತೆ ಮಾತ ನಾಡಿದಾರಾ?"

"ಇಲ್ಲ, ಹಾಗೆಲ್ಲಿ ಹೇಳಿದೆ ನಾನು?"

"ಹಾಗಾದ್ರೆ ನಿನ್ನ ಪ್ರಾಬ್ಲಂ ಏನು?"

"ಹೇಳಿದ್ರೆ ನಿಮಗೆ ತಮಾಷೆ ಅನ್ನಿಸಬಹುದು. ಇಲ್ಲಿ ನಿಮ್ಮ ಮನೇಲಿ ನಿಮ್ಮ ಹೊರತು ಎಲ್ಲರೂ ಹೆಂಗಸರೇ...."

ಅವನು ಗೊಳ್ಳನೆ ನಕ್ಕ. "ಗಂಡಸರು ಯಾರಾದ್ರೂ ಇದ್ದಿದ್ದರೆ, ನಿಂಗೆ ಸಂಕೋಚ ಎನ್ನಬಹುದಾಗಿತ್ತು.... ಎಲ್ಲರೂ ಹೆಂಗಸರೇ. ನಿಂಗ್ಯಾಕೆ ನಾಚಿಕೆ?"

"ನಾಚಿಕೆ ಅಲ್ಲ... ಮುಜುಗರ.... ಒಂಥರಾ ಕಸಿವಿಸಿ...."

"ಯಾರಿಂದ ನಿನಗೆ ಮುಜುಗರ?" ಗಂಭೀರವಾಗಿ ಕೇಳಿದ.

"ಎಲ್ಲರಿಂದ.... ಈ ರೀತಿ ನನಗೆ ಸಮಸ್ಯೆ ಬರಬಹುದು ಅಂತ ನಾನು ಖಂಡಿತಾ ಊಹಿಸಿರಲಿಲ್ಲ...."

"ನೇರವಾಗಿ ಹೇಳು ಮಾಯಾ.... ಏನು ಸಮಸ್ಯೆ? ಎಂಥಾ ಮುಜುಗರ" ನೆಟ್ಟಗೆ ಕುಳಿತು, ದಿಂಬನ್ನು ತೊಡೆಯ ಮೇಲಿಟ್ಟುಕೊಂಡ.

"ನಿಮ್ಮ ಅಜ್ಜಿ ಈ ಮನೆಗೆ ಹಿರಿಯ ಹೆಂಗಸು. ಅವರ ಬಗ್ಗೆ ನನಗೆ ಗೌರವವಿದೆ. ಅವರು ನನ್ನ ಚಲನವಲನದ ಮೇಲೆ ಗಮನ ಇಟ್ಟಿರುತ್ತಾರೆ ಅಂತ ನಂಗೆ ಅನ್ಸುತ್ತೆ.... ಐ ಮೀನ್... ನಾನು ನಿಮ್ಹತ್ರ ಏನು ಮಾತಾಡ್ತೀನಿ... ನೀವು ಏನು ಉತ್ತರ ಕೊಡ್ತೀರಿ ಅಂತ... ಅಜ್ಜ ಬದುಕಿದ್ದಿದ್ರೆ ಅವರು ಹೀಗೆ ಮಾಡ್ತಿರಲಿಲ್ಲ. ಇನ್ನು ನಿಮ್ಮ ಅಜ್ಜಿಯ ತಂಗಿ, ಆಕೆಗೆ ಗಂಡ ಇಲ್ಲ....ಅವರು ನನ್ನನ್ನು ಕುತೂಹಲದಿಂದ ನೋಡುತ್ತಿರುತ್ತಾರೆ ಅಂತ ಅನ್ಸುತ್ತೆ...."

"ಇದೆಲ್ಲಾ ನಿನ್ನ ಭ್ರಮೆ. ಅವರ್ಯಾಕೆ ಹಾಗೆ ವರ್ತಿಸುತ್ತಾರೆ?"

"ಭ್ರಮೆ ಅಲ್ಲ ಗೌತಮ್... ನಿಂಗೆ ಹೇಗೆ ಹೇಳ್ಲೀ. ಇನ್ನು ನಿನ್ನ ಸೋದರ ಮಾವನ ಹೆಂಡತಿ... ಅವರು ನನ್ನನ್ನು ವಿಚಿತ್ರವಾಗಿ ನೋಡ್ತಾರೆ.

ಅವರಿಗೆ ಗಂಡ ಇಲ್ಲವಲ್ಲ.... ನನ್ನ ವರ್ತನೆ ಅವರಿಗೆ ಹಿಡಿಸದೇ ಇರಬಹುದು. ಇನ್ನು ನಿನ್ನ ಚಿಕ್ಕಮ್ಮ.... ಅವರಿಗೆ ಮದುವೆಯಾಗಿಲ್ಲ. ಅವರಿಗೆ ನನ್ನ ಬಗ್ಗೆ ಅಸೂಯೆ ಅಂತ ಅನ್ಸುತ್ತೆ. ಕದ್ದು ಮುಚ್ಚಿ ನಮ್ಮಿಬ್ಬರ ಮಾತನ್ನು ಆಲಿಸುತ್ತಾರೆ.... ಮರೆ ಮರೆಯಲ್ಲಿ ನಿಂತು ನಮ್ಮಿಬ್ಬರನ್ನೇ ನೋಡುತ್ತಾರೆ...."

"ಸ್ಟಾಪ್ ಇಟ್... ಇಂಥಾ ಆರೋಪವನ್ನು ಹೊರಿಸಬೇಡ...ಅಂಥ ಚೀಪ್ ಮೆಂಟಾಲಿಟಿ ಇಲ್ಲಿ ಯಾರಿಗೂ ಇಲ್ಲ.... ಎಲ್ಲಾ ನಿನ್ನ ಕಲ್ಪನೆ...."

"ಚೀಪ್ ಮೆಂಟಾಲಿಟಿ ಅಲ್ಲ. ಸಹಜ ಇರಬಹುದು. ಆದರೆ ಇದನ್ನೆಲ್ಲ ನಾನು ಹೇಗೆ ಸಹಿಸಲಿ?.... ನಿಮ್ಮ ಮಾವನ ಮಗಳು ಕಾಲೇಜ್ನಲ್ಲಿ ಓದುವ ವಯಸ್ಸಾಗಿದೆ.... ಮಾವಾ ಅಂತ ಮೈ ಮೇಲೆ ಬೀಳ್ತಾಳೆ.... ಅವಳ ತಂಗಿ ಓಡಿ ಬಂದು ನಿಮ್ಮ ಕೆನ್ನೆಗೆ ಮುತ್ತು ಕೊಡ್ತಾಳೆ. ಇದೆಲ್ಲಾ ನಂಗೆ ಇಷ್ಟವಾಗುಲ್ಲ.... ನಿಮಗೆ [illegible] ಅನ್ನಿಸೋಲ್ವಾ? ಅವರುಗಳು ನಮ್ಮನ್ನು ಗಮನಿಸ್ತಾ ಇರ್ತಾರೆ ಅಂತ ಬೇಸರವಾಗುಲ್ವಾ?"

"ಇಲ್ಲ, ಹಾಗೇನೂ ಇಲ್ಲ. ಯಾರೂ ನಮ್ಮನ್ನು ಗಮನಿಸುಲ್ಲ. ಎಲ್ಲರಿಗೂ ಅವರವರ ಕೆಲಸವೇ ಅವರಿಗೆ ಇರುತ್ತೆ.... ಇಷ್ಟರ ಮೇಲೆ, ಒಂದೇ ಮನೇಲಿದೀವಿ. ಮಾತು ಕತೆ, ನೋಟ ನಲಿವು ಎಲ್ಲಾ ಇದ್ದೇ ಇರುತ್ತೆ. ಅದೇ ಒಂದು ತಪ್ಪಾಗಿ ಕಂಡರೆ, ಅದು ನಿನ್ನೊಳಗಿರುವ ಸಮಸ್ಯೆ.... ಅವರೆಲ್ಲಾ ಅವರವರ ಪಾಡಿಗೆ ಅವರು ಇದಾರೆ.... ನೀನೇ ಅವರನ್ನು ಹೆಚ್ಚಾಗಿ ಗಮನಿಸ್ತೀಯ ಅಂತ ನಂಗೆ ಅನ್ಸುತ್ತೆ... ನೀನು ಇನ್ನು ಈ ಮನೆಗೆ ಹೊಸಬಳು. ಹಳೇದಾಗುತ್ತಿದ್ದಂತೆ ಎಲ್ಲಾ ಸರಿ ಹೋಗುತ್ತೆ. ಇಂಥದ್ದನ್ನೆಲ್ಲ ತಲೆಗೆ ತುಂಬಿಕೊಂಡು, ನೀನೂ ಕೆಡಬೇಡ...ನನ್ನನ್ನೂ ಕೆಡಿಸ್ಬೇಡ...."

"ಸಾರೀ.... ಗೌತಮ್.... ನನಗೆ ಅನ್ನಿಸಿದ್ದನ್ನು ಹೇಳಿದೆ.... ಅದೂ ಇವತ್ತು ನಾವಿಬ್ಬರೇ ಇರೋದ್ರಿಂದ. ಇಲ್ಲದಿದ್ದರೆ ಹೇಳುವ ಅವಕಾಶವೇ ಸಿಗುತ್ತಿರಲಿಲ್ಲ...."

"ಓ... ಕೇ... ನಂಗೆ ಹೇಳಿದ್ದಾಯ್ತಲ್ಲ.... ಇನ್ಯಾರ ಹತ್ತಿರನೂ ಇದನ್ನೆಲ್ಲ ಹೇಳಬೇಡ... ನಿನ್ನ ತಾಯಿಯ ಹತ್ತಿರವಾಗಲೀ, ನಿನ್ನ ತಂಗಿಯ ಹತ್ತಿರವಾಗಲೀ ಹೇಳ್ಬಾರ್ದು...."

"ಅಮ್ಮನಿಗೆ ಇದನ್ನೆಲ್ಲ ಹೇಳುಕ್ಕೆ ನಾಚಿಕೆ ಆಗುತ್ತೆ. ತಂಗಿಯ ಹತ್ತಿರ ಹೇಳುವ ವಿಷಯಾನಾ ಇದು?"

"ಇಷ್ಟು ಕಾಮನ್ ಸೆನ್ಸ್ ಇದೆಯಲ್ಲ ಅಷ್ಟು ಸಾಕು.... ಬೆಳಿಗ್ಗೆ ಬೇಗ ಏಳ್ಬೇಕು. ನಿನ್ನನ್ನು ನಿನ್ನ ಮನೆಗೆ ಬಿಟ್ಟು ಹಾಗೇ ಕೆಲಸಕ್ಕೆ ಹೋಗ್ತೀನಿ...."

"ನಾಳೆ ರಜ ಹಾಕಿ ಗೌತಮ್.... ಇಬ್ಬರೂ ಮನೇಲೇ ಇರೋಣ..." ತನ್ನ ಆಸೆಯನ್ನು ವ್ಯಕ್ತ ಪಡಿಸಿದಳು.

"ಇಲ್ಲ, ನಂಗೆ ರಜ ಇಲ್ಲ. ಇಲ್ಲಿ ಒಬ್ಬಳಿಗೇ ಬೇಜಾರಾಗಬಹುದು. ನಿನ್ನ ಮನೆಗೆ ಹೋಗಿರು.... ಸಾಯಂಕಾಲ ಬರುವಾಗ ನಿನಗೆ ಇಷ್ಟ ಇದ್ದರೆ ಕರ್ರೊಂಡು ಬರ್ತೀನಿ...."

"ನಿನ್ನ ಮನೆ ನಿನ್ನ ಮನೆ ಅಂತೀರಲ್ಲ.... ಗೌತಮ್.... ಅದು ಅಮ್ಮನ ಮನೆ.... ಇದು ನನ್ನ ಮನೆ...."

"ಏನಂದೆ? ಇನ್ನೊಂದ್ಸಲ ಹೇಳು...."

"ಇದು ನನ್ನ ಮನೆ....." ಮುದ್ದಾಗಿ ಹೇಳಿದವಳನ್ನು ಗೌತಮ್ ಮುದ್ದಿಸಿದ.

"ಗೌತಮ್.... ಐ ಲವ್... ಯೂ...." ಎನ್ನುತ್ತಾ ಅವನ ಬಾಹುಗಳೊಳಗೆ ಮಲಗಿದಳು.

*****

ಬೆಳಗಾಯಿತು. ಅವಳಿಗೇ ಮೊದಲಿಗೆ ಎಚ್ಚರವಾಗಿತ್ತು. ಅವನನ್ನು ಎಬ್ಬಿಸಿ, ತಾನೂ ಎದ್ದು ಮುಖ ತೊಳೆದು ಅಡಿಗೆ ಮನೆಗೆ ಬಂದಳು. ಎಲ್ಲೆಲ್ಲಿ ಏನೇನಿದೆ ಅನ್ನುವುದು ಗೊತ್ತಿರಲಿಲ್ಲ. ಹಾಗೇ ನೋಡುತ್ತಾ ನಿಂತಳು. ಎಲ್ಲಾ ಎಷ್ಟು ಚೆನ್ನಾಗಿ ಜೋಡಿಸಿಟ್ಟಿದ್ದಾರೆ. ಮೊದಲ ಬಾರಿಗೆ ಅಡಿಗೆ ಮನೆಯನ್ನು ಸರಿಯಾಗಿ ವೀಕ್ಷಿಸಿದಳು. ರಾತ್ರಿಯ ಊಟದ ಪಾತ್ರೆಗಳನ್ನು ಬಿಟ್ಟರೆ, ಉಳಿದಂತೆ ಅಡಿಗೆ ಮನೆ ಶುಭ್ರವಾಗಿತ್ತು. ಕಣ್ಣರಳಿಸಿ ನೋಡುತ್ತಾ ನಿಂತಿದ್ದವಳನ್ನು ಹಿಂದಿನಿಂದ ಬಳಸಿದ.

"ಏನು ಹಾಗೇ ನೋಡುತ್ತಾ ನಿಂತು ಬಿಟ್ರೇ.... ಕಾಫಿ ಮಾಡ್ಕೊಡ್ತೀರಾ?"

"ಕಾಫೀ...? ನಂಗೆ ಬರುಲ್ಲಪ್ಪಾ.... ಅಲ್ಲದೇ ಎಲ್ಲೆಲ್ಲಿ ಏನೇನಿದೆ ಅಂತ ಸಹ ನಂಗೆ ಗೊತ್ತಿಲ್ಲ.... ನಿಮಗೆ ಗೊತ್ತಾ?"

"ನಂಗೆ ಸ್ವಲ್ಪ ಸ್ವಲ್ಪ ಗೊತ್ತು. ನಾನು ಈ ಮನೆಯೋನೇ ಅಲ್ವಾ?.... ಇಲ್ಲಿ ನೆಸ್ ಕೆಫೆ ಇದೆ. ಇಲ್ಲಿ ಸಕ್ಕರೆ ಇದೆ, ಫ್ರಿಜ್‌ನಲ್ಲಿ ಹಾಲಿದೆ. ಬಿಸಿ ನೀರು ಕಾಯಿಸಿ ಕಾಫಿ ಬೆರೆಸಿ ಬಿಡ್ತೀನಿ.... ಡೋಂಟ್ ವರಿ..." ಸ್ಟವ್ ಹೊತ್ತಿಸಿ, ನೀರನ್ನು ಇಟ್ಟ.

"ಮತ್ತೆ ತಿಂಡಿ?"

"ಹೊರಗೆ ಹೋಗಿ ತಿನ್ನೋಣ.... ಅಥವಾ ಬ್ರೆಡ್ಡು ಇರಬಹುದು.

ಜಾಮ್ ಹಾಕ್ಕೊಂಡು ತಿಂದ್ರಾಯ್ತು...." ಎನ್ನುತ್ತಾ ಕಾಫಿಯನ್ನು ಬೆರೆಸಿ ಅವಳ ಕೈಗೆ ಕೊಟ್ಟ.

"ಮತ್ತೆ ಮಧ್ಯಾಹ್ನದ ಊಟ....? ಎಲ್ಲಿ ಮಾಡೋಣ...?"

"ಹತ್ತಿರದಲ್ಲೇ ಒಂದು ಕೇಟರಿಂಗ್ ಸರ್ವೀಸ್ ಇದೆ. ಫೋನು ಮಾಡಿದ್ರೆ ಊಟ ತಂದು ಕೊಡ್ತಾರೆ.... ಎರಡೂ ಹೊತ್ತಿಗೆ ಆಗುತ್ತೆ...."

"ಸಾಯಂಕಾಲ ಎಲ್ಲಾದ್ರೂ ಡಿನ್ನರ್‌ಗೆ ಹೋಗೋಣ.... ನೀವು ಒಬ್ಬರೇ ಇದ್ದಿದ್ರೆ ಏನು ಮಾಡ್ತಿದ್ರಿ?"

"ನಾನೂ ಮದುವೆಗೆ ಹೋಗುವ ಪ್ಲ್ಯಾನ್ ಇತ್ತು ಮಾಯಾ, ರಿಸೆಪ್ಷನ್ ಮುಗಿಸ್ಕೊಂಡು, ಎಲ್ಲರ ಜತೇಲಿ ಬೆಳಿಗ್ಗೆ ವಾಪಸ್ಸಾಗುವುದು ಅಂತಂದ್ಕೊಂಡಿದ್ದೆ"

"ಹಾಗಾದ್ರೆ ಹೋಗುಲ್ವಾ?"

"ನೀನೂ ಬರ್ತೀಯಾ ಹೋಗೋಣ...."

"ಇಲ್ಲ ಗೌತಮ್, ನಾನು ಏನೂ ಪ್ರಿಪೇರ್ ಆಗಿಲ್ಲ..."

"ದಟ್ಸ್ ಓಕೇ... ನಾನು ಮಧ್ಯಾಹ್ನದ ಹೊತ್ತಿಗೆ ಬಂದು ಬಿಡ್ತೀನಿ. ಕೇಟರಿಂಗ್‌ನೋರ್ಗೆ ಫೋನು ಮಾಡಿ ಹೇಳ್ತೀನಿ.... ಆಮೇಲೆ ಸಾಯಂಕಾಲದ ಬಗ್ಗೆ ಯೋಚಿಸೋಣ. ಈಗ ಸ್ನಾನ ಮಾಡಿ ರೆಡಿ ಆಗ್ತೀನಿ" ಎಂದು ಹೇಳಿ ಬಚ್ಚಲು ಮನೆಗೆ ನಡೆದ.

ಮಧ್ಯಾಹ್ನದ ಊಟವನ್ನು ಮುಗಿಸಿ, ಸ್ವಲ್ಪ ಹೊತ್ತು ಮಲಗಿದ್ದು ಮತ್ತೆ ಸಿದ್ಧರಾಗಿ ಹೊರಗೆ ತಿರುಗಾಡಿ ಬರಲು ಹೊರಟರು. "ನನ್ನ ಕಾರನ್ನು ತಂದಿದ್ರೆ ಚೆನ್ನಾಗಿತ್ತು" ಮಾಯಾ ಅನೇಕ ಬಾರಿ ಗೊಣಗಿದಳು. ಆದರೆ ಅವನು ಕೇಳಿಸಿ ಕೊಂಡರೂ ಮಾತನಾಡಿರಲಿಲ್ಲ. ಅಲ್ಲಿ ಇಲ್ಲಿ ಸುತ್ತಾಡಿ ಡಿನ್ನರ್ ಮುಗಿಸಿಕೊಂಡು ಮನೆಗೆ ವಾಪಸ್ಸು ಬಂದವರಿಗೆ ಅಚ್ಚರಿ. ಮನೆಯ ದೀಪಗಳು ಉರಿಯುತ್ತಿದೆ. ಲಾಕ್ ಮಾಡಿದ ಬಾಗಿಲನ್ನು ತೆರೆದು ಒಳಗೆ ಯಾರು ನುಗ್ಗಿರಬಹುದು ಅಂತಂದುಕೊಂಡು ಸಂದೇಹದಿಂದ ಬಾಗಿಲಿಗೆ ಹಾಕಿದ್ದ ಬೀಗವನ್ನು ತೆರೆಯಲು ಪ್ರಯತ್ನಿಸಿದ. ಆದರೆ ಒಳಗಿನಿಂದ ಬೋಲ್ಟ್ ಹಾಕಲಾಗಿತ್ತು.

"ಒಳಗೆ ಯಾರೋ ಇದಾರೆ.... ನಾನು ಪಕ್ಕದ ಕಿಟಕಿಯಿಂದ ನೋಡ್ತೀನಿ. ನೀನು ಇಲ್ಲೇ ಇರು..." ಎಂದು ಹೇಳಿ ಪಕ್ಕದ ಓಣಿಗೆ ಬಂದ.

"ನನಗೆ ಭಯ ಆಗುತ್ತೆ ಗೌತಮ್" ಎಂದು ಹೇಳಿ ಅವಳೂ ಅವನ ಹಿಂದೆಯೇ ಬಂದಳು. ಅವನು ಕಿಟಕಿಯ ಗಾಜಿಗೆ ಮುಖವನ್ನು ಒತ್ತಿ ಕಷ್ಟಪಟ್ಟು ಒಳಗೆ ನೋಡಲು ಹವಣಿಸಿದ. ಯಾರೋ ಕುಳಿತಿರುವಂತೆ ಅನ್ನಿಸಿತು.

"ಯಾರೋ ಇದಾರೆ" ಎಂದು ಪಿಸುದನಿಯಲ್ಲಿ ಹೇಳಿ, ಮತ್ತೆ

ಮುಂಬಾಗಕ್ಕೆ ಬಂದು ಬೆಲ್ ಒತ್ತಿದ. ಮಾಯಾ ಹೆದರಿ ಅವನ ತೋಳನ್ನು ಹಿಡಿದಳು. ಮುಂಬಾಗಿಲು ಮೆಲ್ಲನೆ ತೆರೆಯಿತು. ಇವನು ಹಿಂದೆ ಸರಿದ. ಪೂರ್ಣವಾಗಿ ಬಾಗಿಲನ್ನು ತೆರೆದ ಅಂಬುಜಮ್ಮ "ಯಾರು?" ಎಂದಳು.

ದನಿಯನ್ನು ಪತ್ತೆ ಹಚ್ಚಿದ ಗೌತಮ್ ಮುಂದೆ ಬಂದ..."ಅರೇ ಅಜ್ಜೀ... ನೀನಾ? ನೀನ್ಯಾವಾಗ ಬಂದೆ?" ಅಚ್ಚರಿಯಿಂದ ಕೇಳಿದ.

"ನೀನಾ? ಇಲ್ಲೇನು ಮಾಡ್ತಿದೀಯ.... ಫೋನಿಗೂ ಸಿಗಲಿಲ್ಲ. ಏನು ನಿನ್ನ ಆಟ! ನಿನ್ನ ಜತೇಲಿ ಯಾರು?"

"ನಾನೂ ಅಜ್ಜೀ..." ಎನ್ನುತ್ತಾ ಮಾಯಾ ಅವನ ಪಕ್ಕಕ್ಕೆ ಬಂದು ನಿಂತಳು.

"ಓ... ನೀನಾ? ನೀನ್ಯಾವಾಗ ಬಂದೆ? ಎಲ್ಲಿಗೆ ಹೋಗಿದ್ರೀ? ಮೊದಲು ಒಳಕ್ಕೆ ಬನ್ನಿ...." ಎಂದು ಹೇಳಿದಳು. ಮೂವರೂ ಒಳಗೆ ಬಂದರು. ಮಾಯಾ ಸ್ವಲ್ಪ ಪೆಚ್ಚಾಗಿದ್ದಳು. ಅಂಬುಜಮ್ಮನ ತಂಗಿ ಶ್ಯಾಮಲಾಳೂ ಬಂದು ಸೇರಿದಳು.

"ಚಿಕ್ಕಮ್ಮಾ.... ನೀವೂ ಬಂದು ಬಿಟ್ಟಿದೀರಿ.... ನೀವೆಲ್ಲಾ ನಾಳೆ ಬರೋರಿದ್ರೀ ಅಲ್ವಾ?"

"ನೀನು ಬಂದಿದ್ರೆ ನಾಳೇನೇ ಬರಬಹುದಾಗಿತ್ತು. ಇಲ್ಲಿ ನೀನು ಏನು ಕಷ್ಟ ಪಡ್ತಿದೀಯೋ ಅಂತ ಫೋನು ಮಾಡಿದ್ರೆ ಉತ್ತರವೇ ಇಲ್ಲ. ಮನೆ ಫೋನು ರಿಂಗಾಗ್ತಾನೇ ಇತ್ತು, ಎತ್ತೋರಿಲ್ಲ. ಮೊಬೈಲ್ ಫೋನು ಸ್ವಿಚ್ ಆಫ್ ಅಂತ ಬರ್ತಿತ್ತು.... ಏನು ಕತೆಯೋ ಅಂತ ತಕ್ಷಣವೇ ಹೊರಟು ಬಂದೆವು. ಈಗ ಸ್ವಲ್ಪ ಹೊತ್ತಾಯ್ತು ಬಂದು.... ನಿನ್ನ ಮಾವನ ಮನೆಗೆ ಹೋಗಿದ್ಯಾ?" ಮಾಯಾಳ ಕಡೆ ತಿರುಗಿ ನೋಡಿದಳು.

"ಇಲ್ಲ ಅಜ್ಜೀ.... ಡಿನ್ನರ್‌ಗೆ ಹೋಗಿದ್ವು.... ನೀವು ಬರ್ತೀರಿ ಅಂತ ಗೊತ್ತಿದ್ದಿದ್ರೇ ಮನೇಲೇ ಇರ್ತಿದ್ವು.... ಅಲ್ವಾ ಮಾಯಾ?...." ಮಾಯಾ ಉತ್ತರಿಸಲಿಲ್ಲ.

"ಅದ್ಸರಿ, ನೀನ್ಯಾಕೆ ಮದುವೆಗೆ ಬರಲಿಲ್ಲ?"

"ಅದೂ.... ಅದೂ..." ಉತ್ತರ ಕೊಡಲು ತಡವರಿಸಿ, ಮಾಯಾಳ ಕಡೆ ನೋಡಿದ.

"ಗೊತ್ತಾಯ್ತು ಬಿಡು.... ಇವಳನ್ನೂ ಕರ್ಕೊಂಡು ಬರಬಹುದಾಗಿತ್ತು. ಎಲ್ಲರೂ ನಿಮ್ಮನ್ನು ಕೇಳೋರೇ.... ಹೊಸದಾಗಿ ಮದುವೆಯಾದವರು, ಎರಡು ದಿನ ನಮ್ಮಗಳ ಕಾಟವಿಲ್ಲದೇ ಹಾಯಾಗಿರಲಿ ಅಂತ ಬಿಟ್ಟು ಬಂದಿದೀವಿ ಅಂತ ಸುಳ್ಳು ಹೇಳಿದೆವು.... ಇಲ್ಲಿ ನೋಡಿದರೆ, ಅದನ್ನು ನೀನು ನಿಜ ಮಾಡಿ

ದೀಯ...." ಇಬ್ಬರೂ ನಕ್ಕರು. ಗೌತಮ ಸುಮ್ಮನೇ ನಿಂತ.

"ಶ್ಯಾಮಲಾ, ನಮ್ಮಿಬ್ಬರಿಗೂ ಫಲಾಹಾರಕ್ಕೆ ಮಾಡು.... ಸಧ್ಯ ಮನೆಗೆ ಬಂದೆಯಲ್ಲ. ರಾತ್ರೀನ ಹೇಗೆ ಕಳೆಯೋದು ಅಂತ ಯೋಚಿಸ್ತಿದ್ದೆ.... ನಿನ್ನ ಮಾವನ ಮನೆಗೂ ಫೋನು ಮಾಡಲಿಲ್ಲ. ಎಲ್ರಿಗೂ ಗಾಬರಿ ಆಗುತ್ತೆ ಅಂತ.... ಅಲ್ಲಾ ಗೌತಮ.... ನಿಂಗಾದ್ರೂ ಜವಾಬ್ದಾರಿ ಬೇಡ್ವಾ?.... ಫೋನು ಮಾಡಿ ತಿಳಿಸುಕ್ಕೆ ಇಲ್ವಾ, ನಾನು ಬರ್ತಿಲ್ಲ ಅಂತ.... ನಾವು ಏನು ತಿಳ್ಕೋಬೇಕು..?"

"ಏನು ತಿಳ್ಕೊಳ್ಳೋದು? ನಾನೇನು ಚಿಕ್ಕ ಮಗೂನಾ? ನಾನೂ ಮೆಜಾರಿಟಿಗೆ ಬಂದಿದೀನಿ.... ನನಗೂ ಮದುವೆ ಆಗಿದೆ. ನಂಗೂ ಜವಾಬ್ದಾರಿ ಇದೆ.... ಎಷ್ಟು ವರ್ಷ ಅಂತ ನನ್ನ ಕಾವಲು ಕಾಯ್ತೀರಿ? ನನ್ನ ಪಾಡಿಗೆ ನನ್ನನ್ನು ಬಿಡಿ" ಇದ್ದಕ್ಕಿದ್ದಂತೆ ಅವನು ದನಿ ಏರಿಸಿ ನುಡಿದಾಗ ಇಬ್ಬರೂ ಸ್ತಬ್ಧರಾದರು. ಅರ್ಥವಾಗಲು ಕೆಲವು ನಿಮಿಷಗಳು ಹಿಡಿದವು.

"ಗೌತಮ... ಅಜ್ಜಿ ಏನಂದ್ಲೂ ಅಂತ ಹೀಗೆ ರೇಗಾಡ್ತೀಯೋ... ಎಂದೂ ಹೀಗೆ ನೀನು ತಾಳ್ಮೆಗೆಟ್ಟವನಲ್ಲ...." ಶ್ಯಾಮಲಾ ಅಕ್ಕನ ಪರವಹಿಸಿ ಮಾತನಾಡಿದಳು.

"ನೀವು ಸುಮ್ನಿರಿ ಚಿಕ್ಕಮ್ಮ.... ಯಾರೂ ನನ್ನನ್ನು ಬೆಳೆಯೋಕೆ ಬಿಟ್ಟೇ ಇಲ್ಲ. ಪ್ರತಿಯೊಂದಕ್ಕೂ ಬಾಯಿ ಹಾಕ್ತೀರಿ.... ಎಲ್ರೂ ಆಡಿಕೊಂಡು ನಗುವ ಹಾಗೆ ಬೆಳೆಸಿದೀರಿ. ಇನ್ನಾದರೂ ನನ್ನನ್ನು ಬೆಳೆಯಲು ಬಿಡ್ತೀರಾ?"

"ಹೋಗ್ಲಿ ಬಿಡು ಶ್ಯಾಮಲಾ.... ನಾನು ಬೆಳೆಸಿದ ಕೂಸು ಅಂತ ನನ್ನ ಮೋಹ ಸ್ವಲ್ಪ ಹೆಚ್ಚೇ ಆಯ್ತು ಅಂತ ಕಾಣುತ್ತೆ. ಈಗ ಸಂಗಾತಿ ಸಿಕ್ಕ ಮೇಲೆ ನಮ್ಮ ಅಗತ್ಯ ಏನಿದೆ?.... ನಡೀ ಹೋಗೋಣ..." ಅವನ ಕಡೆ ಬೆನ್ನು ತಿರುಗಿಸಿದವರನ್ನು ನಿಲ್ಲಿಸಿದ.

"ಸಾರೀ ಅಜ್ಜಿ.... ನಿಮ್ಮನ್ನು ಹರ್ಟ್ ಮಾಡ್ಬೇಕು ಅಂತ ಇರ್ಲಿಲ್ಲ...ನಾನು"

"ಬಿಡು ಪರವಾಗಿಲ್ಲ. ನಂಗೆ ಬೇಜಾರೇನಿಲ್ಲ..." ಅಜ್ಜಿ ಎಂದಳು.

"ನಡೀ ಮಾಯಾ.... ನಿನ್ನನ್ನು ನಿನ್ನ ತಂದೆಯ ಮನೆಗೆ ಬಿಟ್ಟು ಬರ್ತೀನಿ...." ಅವಳೂ ಪೆಚ್ಚಾಗಿದ್ದಳು. ಅವನು ಅಜ್ಜಿಯ ಮೇಲೆ ರೇಗಿದ್ದು ಅವಳಿಗೂ ಅಚ್ಚರಿಯಾಗಿತ್ತು. ಒರಟಾಗಿ ಮಾತನಾಡಬಾರದಾಗಿತ್ತೆನಿಸಿತ್ತು.

ಅವರಿಬ್ಬರೂ ಮತ್ತೆ ಹೊರಟಾಗ ಅಜ್ಜಿ ಬೇಡ ಎನ್ನಲಿಲ್ಲ...."ಅಜ್ಜಿ ನಾನು ಬರ್ತೀನಿ" ಎಂದು ಹೇಳಿದವಳಿಗೆ ಹೂಂ ಎಂಬಂತೆ ತಲೆಯಾಡಿಸಿದ್ದಳು. ಬೈಕ್ ಹೊರಟ ಸದ್ದು ಕೇಳಿದರೂ ಇಬ್ಬರು ಹೊರಕ್ಕೆ ಬಂದಿರಲಿಲ್ಲ.

ಸ್ವಲ್ಪ ಹೊತ್ತಿನ ನಂತರ ಮನೆಯ ಮುಂದೆ ಒಂದು ಟ್ಯಾಕ್ಸಿ ನಿಂತಿತು.

ಕಾಲಿಂಗ್ ಬೆಲ್ ಸದ್ದು ಕೇಳಿ ಶ್ಯಾಮಲಾ ಬಂದು ಬಾಗಿಲನ್ನು ತೆರೆದಳು. ಗೌತಮ್ ಎದುರಿಗೆ ನಿಂತಿದ್ದ. ಅವನ ಮಗ್ಗುಲಲ್ಲಿ ಮಾಯಾ.... ಹಣೆಯ ಎಡಭಾಗ, ಕೆನ್ನೆಗಳ ಮೇಲೆ ಅಂಟಿಸಿದ ಬ್ಯಾಂಡೇಜ್.... ಎಡಗೈ ಮೊಣಕೈಗೆ ಕಟ್ಟಿದ್ದ ಬ್ಯಾಂಡೇಜ್.... ಅವಳು ನೋವಿನಿಂದ ಮುಖವನ್ನು ಕಿವುಚಿದ್ದಳು.

"ಏನಾಯ್ತೋ ಗೌತಮ್....?" ಶ್ಯಾಮಲಾ ಗಾಬರಿಯಿಂದ ಕೇಳಿದಾಗ ಒಳಗಿನಿಂದ ಅಂಬುಜಳೂ ಬಂದು ನಿಂತಿದ್ದಳು. ಅವಳ ಮುಖವೂ ಬಿಳುಪಾಗಿತ್ತು.

"ಏನಿಲ್ಲ ಚಿಕ್ಕಮ್ಮ.... ಇವಳನ್ನು ಒಳಕ್ಕೆ ಕರ್ಕೊಂಡು ಹೋಗಿ.... ನಾನು ಟ್ಯಾಕ್ಸಿಯವನಿಗೆ ದುಡ್ಡು ಕೊಟ್ಟು ಬರ್ತೀನಿ" ಎಂದು ಹೇಳಿ ಮಾಯಾಳನ್ನು ಚಿಕ್ಕಮ್ಮನಿಗೆ ಒಪ್ಪಿಸಿ, ಅವನು ಟ್ಯಾಕ್ಸಿಯ ಬಳಿಗೆ ಹೋಗಿದ್ದ. ಅಂಬುಜಾ ಬಾಗಿಲ ಬಳಿಗೆ ಬಂದಿದ್ದಳು. ಇಬ್ಬರೂ ಸೇರಿ, ಕುಂಟುತ್ತಿದ್ದ ಮಾಯಾಳನ್ನು ಒಳಕ್ಕೆ ಕರೆದುಕೊಂಡು ಕರೆದೊಯ್ದರು. ಗೌತಮ್ ಬಳಿಗೆ ಬಂದು ಬಾಗಿಲನ್ನು ಭದ್ರ ಪಡಿಸಿದ.

ಮಾಯಾಳನ್ನು ಮಂಚದ ಮೇಲೆ ಕೂರಿಸಿದ ನಂತರ ಶ್ಯಾಮಲಾ ಇವನ ಕಡೆ ತಿರುಗಿದಳು. ಆದರೆ ಏನಾಯಿತೆಂದು ಪ್ರಶ್ನಿಸಲಿಲ್ಲ. ಅವನೇ ಹೇಳಿದ್ದ.. "ಬೈಕ್ ಸ್ಕಿಡ್ ಆಯ್ತು... ಮಾಯಾ ಬಿದ್ದು ಬಿಟ್ಟಳು. ಡಾಕ್ಟರ್ ಹತ್ರ ಕರ್ಕೊಂಡು ಹೋಗಿದ್ದೆ. ಎಡ ಮೊಣಕೈ ಹೇರ್ ಲೈನ್ ಫ್ರ್ಯಾಕ್ಚರ್ ಆಗಿದೆಯಂತೆ. ನಾಳೆ ದಿನ ಪ್ಲಾಸ್ಟರ್ ಹಾಕಿಸ್ಬೇಕು.... ಕಾಲಿಗೂ ಸ್ವಲ್ಪ ಪೆಟ್ಟಾಗಿದೆ... ಸ್ವಲ್ಪ ಹೆದರಿ ಬಿಟ್ಟಿದ್ದಾಳೆ.... ಬಿಸಿಯಾಗಿ ಏನಾದ್ರೂ ಕೊಡಿ ಚಿಕ್ಕಮ್ಮ...."

"ಬಿಸಿ ಹಾಲಿಗೆ ಅರಿಶಿನ ಹಾಕಿ ತಂದು ಕೊಡ್ತೀನಿ... ನೋವು ಕಡಿಮೆ ಆಗುಕ್ಕೆ ಮಾತ್ರೆ ಕೊಟ್ಟಿದಾರಾ?"

"ಹೂಂ... ಚಿಕ್ಕಮ್ಮ... ಮಾಯಾ, ನಿನ್ನ ತಂದೆಗೆ ಫೋನು ಮಾಡ್ತೀನಿ. ನಾಳೆ ಅವರು ಬಂದು ಕರ್ಕೊಂಡು ಹೋಗ್ತಾರೆ... ಈಗ ರೆಸ್ಟ್ ತಗೋ" ಎಂದು ಹೇಳಿ ಮೊಬೈಲ್‌ನ್ನೆತ್ತಿಕೊಂಡ.

"ಬೇಡ... ಗೌತಮ್.... ಅಮ್ಮ ಗಾಬರಿಯಾಗಿ ಬಿಡ್ತಾಳೆ.... ರಾತ್ರಿಯೆಲ್ಲಾ ನಿದ್ದೆ ಮಾಡದೇ ಅಳ್ತಾಳೆ.... ನಂಗೇನು ಹೆಚ್ಚು ಪೆಟ್ಟಾಗಿಲ್ಲ...."

"ಸರಿ, ಬೆಳಿಗ್ಗೆ ಫೋನು ಮಾಡ್ತೀನಿ. ಅವರು ನರ್ಸಿಂಗ್ ಹೋಂಗೆ ಬಂದು ನಿನ್ನನ್ನು ಕರ್ಕೊಂಡು ಹೋಗ್ತಾರೆ...."

"ನಾನು ಇಲ್ಲೇ ಇರ್ತೀನಿ ಗೌತಮ್..."

"ಬೇಡ, ಇಲ್ಲಿ ನಿಂಗೂ ಕಷ್ಟ ಆಗುತ್ತೆ. ಇವರುಗಳಿಗೂ ಕಷ್ಟ ಆಗುತ್ತೆ..."

"ನಾನು ಇಲ್ಲಿ ಇದ್ದರೆ ನಿಮಗೆ ಕಷ್ಟ ಆಗುತ್ತಾ ಅಜ್ಜೀ?" ಅವಳು ನೇರವಾಗಿ ಅಜ್ಜಿಯನ್ನೇ ಕೇಳಿದಳು. ಅಜ್ಜಿ ಮೊಮ್ಮಗನ ಕಡೆ ನೋಡಿದಳು. ಅವನು ಮುಖ ತಿರುಗಿಸಿದ.

"ನಿನ್ನ ಗಂಡ ಹೇಗೆ ಹೇಳ್ತಾನೋ ಹಾಗೆ ಕೇಳಮ್ಮ, ನಂದೇನಿದೆ?"

"ನೀವು ಹೇಳಿ ಚಿಕ್ಕಮ್ಮ.... ನಾನು ಇಲ್ಲಿದ್ರೆ ನಿಮಗೆ ಕಷ್ಟ ಆಗುತ್ತಾ?" ಅವರು ಕೊಟ್ಟ ಹಾಲನ್ನು ಕುಡಿಯುತ್ತಾ ಕೇಳಿದಳು.

"ಇಲ್ಲಮ್ಮ, ನಮಗೇನು ಕಷ್ಟ ಹೇಳು. ಮನೇಲಿ ನಾವು ಎಷ್ಟೊಂದು ಜನರಿದೀವಿ. ನಿನ್ನನ್ನು ನೋಡ್ಕೊಳ್ಳೋಕೆ ಖಂಡಿತಾ ಕಷ್ಟವಿಲ್ಲ..."

"ಶ್ಯಾಮಲಾ, ಮೊದಲು ಇವಳ ಗಂಡ ಏನು ಹೇಳ್ತಾನೆ ಅಂತ ಕೇಳಿ ಆಮೇಲೆ ಮಾತಾಡು...." ಅಂಬುಜ ಖಾರವಾಗಿ ನುಡಿದಳು.

"ಅಂಬುಜಾ.... ಇಂಥಾ ಹೊತ್ನಲ್ಲೂ ಹೀಗೆ ಮಾತಾಡ್ತೀಯಲ್ಲ. ಇದುವರೆಗೂ ಅವನ ಮಾತನ್ನು ಕೇಳಿಯೇ ನಾವು ನಿರ್ಧಾರವನ್ನು ತಗೋತಿದ್ವಾ?"

"ಈಗ ಎಲ್ಲಾ ಬದಲಾಗಿದೆ ಶ್ಯಾಮಲಾ.... ಇವನೀಗ ಬೆಳೆದಿದಾನೆ... ಸ್ವಂತವಾಗಿ ನಿರ್ಧರಿಸುವ ಹಕ್ಕು ಸಾಮರ್ಥ್ಯ ಇವನಿಗಿದೆ, ನಮಗೇನಿದೆ?"

"ನೋಡಿ ಚಿಕ್ಕಮ್ಮ.... ಹೇಗೆ ಹಂಗಿಸಿ ಮಾತಾಡ್ತಾರೆ?... ಅಜ್ಜಿ ಹೀಗಾಡ್ತಾರೆ ಅಂತ ನಾನಂದುಕೊಂಡಿರ್ಲಿಲ್ಲ...."

"ನಾನು ಆಡೋದೆಲ್ಲ ತಪ್ಪಾಗಿ ಕಾಣುತ್ತೆ ನಿಂಗೆ.... ಏನ್ಮಾಡ್ಲೀ...?"

"ಏನೂ ಮಾಡ್ಬೇಡಿ.... ಹೋಗಿ ಮಲಕ್ಕೊಳ್ಳಿ...." ಇಬ್ಬರೂ ಅಲ್ಲಿಯೇ ನಿಂತಿದುದನ್ನು ಕಂಡು ರೇಗಿದ. "ಹೋಗಿ ಮಲಕ್ಕೊಳ್ಳಿ.... ಅಂತಂದೆ.. ತಿಳೀತಾ?" ಇಬ್ಬರೂ ಅವನನ್ನೇ ಬೆರಗಾಗಿ ನೋಡುತ್ತಾ ಹೊರಟು ಹೋಗಿದ್ದರು. ಅವನು ಮಾಯಾಳ ಪಕ್ಕ ಕುಳಿತ.

"ಸಾರೀ.... ಮಾಯಾ.... ನನ್ನಿಂದ ನಿನಗೆ ಆಕ್ಸಿಡೆಂಟ್ ಆಯ್ತು.... ತುಂಬಾ ನೋಯ್ತಿದೆ ಅಲ್ವಾ?"

"ನೋಯದೇ ಇರುತ್ತಾ?.... ನೀನು ಯಾಕೋ ಅಪ್ಸೆಟ್ ಆಗಿದೀಯ... ಪೇಶೆನ್ಸ್ ಕಳ್ಕೊಂಡಿದೀಯ.... ಅಜ್ಜಿ ಮೇಲೆ ಹಾಗಾ ರೇಗೋದು....?"

"ಮತ್ತಿನ್ನೇನು ಮಾಡ್ಲೀ.... ಅವರೇ ಇದಕ್ಕೆಲ್ಲ ಕಾರಣ...."

"ಹಾಗೆನ್ಬೇಡ ಗೌತಮ್... ಬಹುಶಃ ನಾನೇ ಕಾರಣ...."

"ಯಾರೋ ಒಬ್ಬರು.... ನಿನ್ನ ತಂದೆ ಮನೆಗೆ ಹೋಗುಲ್ಲ ಅಂತ ಯಾಕೆ ಅಂದ್ಬಿಟ್ಟೆ... ಅಲ್ಲಿ ನಿನ್ನ ತಾಯಿ ನಿನ್ನನ್ನು ಚೆನ್ನಾಗಿ ನೋಡ್ಕೋತಾರೆ...."

"ಅಮ್ಮಂಗೆ ಬಿಡುವೆಲ್ಲಿದೆ ಗೌತಮ್.... ಯಾರೋ ಒಬ್ಬಳು ನರ್ಸ್‌ನ್ನು ಗೊತ್ತು ಮಾಡಿ ಕೊಡ್ತಾಳೆ...."

"ಎಷ್ಟೇ ಖರ್ಚಾದ್ರೂ ಸರಿ. ನಾನು ಪೇ ಮಾಡ್ತೀನಿ...."

"ಅದಲ್ಲ ಮಾತು.... ನರ್ಸು ನರ್ಸೇಯ.... ಮನೆಯೋರು ಮನೆ ಯೋರೇ.... ನಿನ್ನ ಅಜ್ಜಿಯ ಕಣ್ಣಲ್ಲಿ ಎಂಥಾ ಯಾತನೆ ಇತ್ತು ಗೊತ್ತಾ? ನನಗೆ ಅಯ್ಯೋ ಪಾಪ ಅಂತ ಅನ್ನಿಸ್ತು.... ನಿಮ್ಮ ಒರಟು ಮಾತು ಅವರನ್ನು ಮತ್ತೂ ನೋಯಿಸಿತು.... ನಿಮಗೆ ಏನಾಯ್ತು.... ನೀವು ಮೊದಲು ಹೀಗಿರ್ಲಿಲ್ಲ...."

"ಏನೋ ನಂಗೊತ್ತಿಲ್ಲ.... ಪೇನ್ ಕಿಲ್ಲರ್ ತಗೊಂಡು ಮಲಕ್ಕೋ. ನಾನು ಇಲ್ಲೇ ನಿನ್ನ ಪಕ್ಕ ಮಲಕ್ಕೋತೀನಿ...." ಎನ್ನುತ್ತಾ ಪಕ್ಕದ ಹಾಸಿಗೆಯ ಮೇಲೆ ಉರುಳಿಕೊಂಡು ಮೈ ಮುರಿದ.

"ಬಾಗಿಲನ್ನೇ ಹಾಕಲಿಲ್ವಲ್ಲಾ ಗೌತಮ್...."

"ಅಗತ್ಯವಿಲ್ಲ ಬಿಡು.... ಯಾರೂ ಬಂದು ಇಣುಕಿ ನೋಡುಲ್ಲ.... ಅಜ್ಜಿಗೆ ಸಿಟ್ಟು.... ಚಿಕ್ಕಮ್ಮನಿಗೆ ಭಯ.... ಉಳಿದವರು ಊರಲ್ಲೇ ಇಲ್ಲ....ಅಷ್ಟಕ್ಕೂ ನಾವಿಬ್ರೂ ದೂರ ದೂರವೇ ಮಲಗಿರ್ತೀವಲ್ಲ.... ನಮಗ್ಯಾರ ಭಯ?.... ಇಷ್ಟರ ಮೆಲೆ ಬಾಗಿಲನ್ನು ಹಾಕಲೇ ಬೇಕು ಅಂತಿದ್ರೆ ಹಾಕ್ತೀನಿ.... ಆಗ ಖಂಡಿತಾ ಚಿಕ್ಕಮ್ಮ ಬಂದು ನೋಡ್ತಾರೆ....ನಾನು ನಿನಗೆ ಏನಾದ್ರೂ ತೊಂದರೆ ಕೊಡ್ತಿದೀನಾ ಅಂತ ನೋಡೋಕೆ...."

"ಸಾರೀ ಗೌತಮ್.... ನನ್ನಿಂದ ನಿಮಗೆಷ್ಟು ತೊಂದರೆ? ಪಕ್ಕದಲ್ಲಿ ಮಲಗಿದ್ರೂ ನಾನು ಹತ್ತಿರ ಬರುವಂತಿಲ್ಲ...."

"ವಾಸಿ ಮಾಡ್ಕೋ... ಎಲ್ಲಾ ವಸೂಲಿ ಮಾಡ್ತೀನಿ.. ಖಂಡಿತಾ ಬಿಡುಲ್ಲ... ಆದರೆ, ನೀನು ನಿನ್ನ ತಾಯಿಯ ಮನೆಗೆ ಹೊರಟು ಹೋದ್ರೆ, ನಾನು ಮಾತ್ರ ಅಲ್ಲಿಗೆ ಬರುಲ್ಲ.... ಈಗಲೇ ಹೇಳಿ ಬಿಟ್ಟದೀನಿ..."

"ಇಲ್ಲ ಗೌತಮ್... ಇನ್ನು ಮುಂದೆ ಇಲ್ಲೇ ಇರ್ತೀನಿ, ಪ್ರಾಮಿಸ್...."

"ಅದೇನು ನನ್ನ ಮೇಲಿನ ಪ್ರೀತಿ ಇದ್ದಕ್ಕಿದ್ದ ಹಾಗೆ ಹೆಚ್ಚಾಗಿದೆ....."

"ಬರೀ, ನಿಮ್ಮ ಮೇಲಿನ ಪ್ರೀತಿ ಅಲ್ಲ, ನಿಮ್ಮ ಮನೆಯವರ ಮೇಲಿನ ಪ್ರೀತಿ ಸಹ ಹೆಚ್ಚಾಗಿದೆ.... ನನ್ನ ಅಮ್ಮನೇ ಆಗಿದ್ದಿದ್ರೆ ಎಷ್ಟು ರಂಪ ಮಾಡಿರುತ್ತಿದ್ಲೋ ಏನೋ.... ನಿಮ್ಮ ಚಿಕ್ಕಮ್ಮ ಎಷ್ಟು ಶಾಂತವಾಗಿ ಮಾತಾಡಿದರು.... ನನಗೆ ಆಶ್ಚರ್ಯ ಆಯಿತು...."

"ಹೌದು ಮಾಯಾ... ಚಿಕ್ಕಮ್ಮ ಅಜ್ಜಿ ಎಲ್ಲರೂ ಒಳ್ಳೆಯವರೇ... ನಾನೇ ಬೇಕೂಫ. ನಾನು ಹಾಗೆ ರೇಗಬಾರದಾಗಿತ್ತು... ಏನೋ ಬೇಜಾರಾಗಿತ್ತು...."

"ನಂಗೊತ್ತು ನಿಮ್ಮ ಬೇಜಾರಿಗೆ ನಾನೇ ಕಾರಣ.... ಈಗ ನೀವು ಇಕ್ಕಟ್ಟಿನಲ್ಲಿದ್ದೀರಿ... ನಿಮಗೆ ನಾನೂ ಬೇಕು.... ಇವರೂ ಬೇಕು.... ನಂಗೀಗ ಅರ್ಥವಾಗಿದೆ...."

"ಏನರ್ಥವಾಗಿದೆ ಜೇಡಿ ಮಣ್ಣು.... ಸುಮ್ಮನೇ ಮಲಕ್ಕೋ...." ಎಂದು ಹೇಳಿ ಅವಳ ಹಣೆಗೆ ಹೂ ಮುತ್ತನ್ನಿತ್ತು, ಹೊದಿಕೆ ಸರಿಪಡಿಸಿ, ದೀಪವನ್ನಾರಿಸಿದ. "ನಾನು ಅಜ್ಜೀನ ಮಾತಾಡ್ಸಿಕೊಂಡು ಬರ್ತೀನಿ...." ಎನ್ನುತ್ತಾ ಹೊರಬಂದ.

ಅಂಬುಜಾ, ಶ್ಯಾಮಲಾ ಪಿಸುದನಿಯಲ್ಲಿ ಮಾತನ್ನಾಡುತ್ತಿದ್ದವರು, ಇವನನ್ನು ಕಂಡು ಮಾತನ್ನು ನಿಲ್ಲಿಸದರು.... "ಏನಾದ್ರೂ ಬೇಕಾಂತ ಕೇಳು ಶ್ಯಾಮಲಾ...." ಅಂಬುಜಾ ಎಂದಳು.

"ಅಜ್ಜೀ...." ಎನ್ನುತ್ತಾ ಅವಳ ಬಳಿ ಕುಳಿತ.

"ಈಗೇನಾಯ್ತು?... ಮಾಯಾಗೆ ನಿದ್ದೆ ಬರ್ತಿಲ್ವಾ? ನೋವಿದೆಯಂತಾ?"

"ಅದಲ್ಲ.... ಸಾರೀ.... ಅಜ್ಜೀ, ನಾನು ನಿಮ್ಮ ಮೇಲೆ ರೇಗಿ ಬಿಟ್ಟೆ, ಕ್ಷಮಿಸಿ...."

"ಹೋಗೋ.... ರೇಗಿದ್ನಂತೆ.... ಸಾರೀ ಅಂತೆ....ಅಲ್ಲಿ ನಿನ್ನ ಹೆಂಡ್ತಿ ಒಬ್ಬಳೇ ಆಗಿದಾಳೆ. ಹೆದರಿಯಾಳು.... ಹೋಗು ಬೆಳಿಗ್ಗೆ ಮಾತಾಡೋಣ...."

"ಅವಳಿಗೆ ನಿದ್ದೆ ಬಂದಿದೆ.... ನೀನು ಕ್ಷಮಿಸೋಲ್ವಾ?"

"ಕ್ಷಮಿಸುವಂಥ ತಪ್ಪು ಏನು ಮಾಡಿದೀಯ...? ಏನೋ ನಂಗೆ ಬೇಜಾರಾದದ್ದು ನಿಜ.... ಆದರೆ ಅದನ್ನೆಲ್ಲ ಆಗಲೇ ಮರೆತೆ...."

"ಹಾಗಾದ್ರೆ ನಾನು ಇಲ್ಲೇ ನಿನ್ನ ಪಕ್ಕ ಹಾಸಿಗೆ ಹಾಸ್ಕೊಂಡು ಮಲಗ್ತೀನಿ...."

"ಯಾರಾದ್ರೂ ನಗ್ತಾರೆ ಅಷ್ಟೇ... ನಿನ್ನ ಹೆಂಡತಿ ನನ್ನನ್ನು ಬೈದುಕೊಳ್ತಾಳೆ ಅಷ್ಟೇ... ಸುಮ್ಮನೇ ಹೋಗು... ಅವಳಿಗೆ ನಿನ್ನ ಅಗತ್ಯವಿದೆ...."

"ಅವಳು ಕೆಟ್ಟೋಳಲ್ಲ ಅಜ್ಜೀ.... ಅವಳ ಮೇಲೆ ನಿಂಗೆ ಕೋಪಾನಾ?"

"ನಂಗೆ ಯಾರ ಮೇಲೂ ಕೋಪವಿಲ್ಲ.... ಅವಳೂ ನಂಗೆ ಮೊಮ್ಮಗಳೇ. ... ಎಲ್ಲರ ಮೇಲೂ ಕೋಪ ಮಾಡ್ಕೋತಾ ಇರೋದೇ ನನ್ನ ಕೆಲಸಾನಾ? ಬೇರೆ ಕೆಲಸ ಏನೂ ಇಲ್ವಾ ನಂಗೆ?...." ಅವನ ಕೆನ್ನೆಯನ್ನು ಸವರಿದಳು.

"ನನಗೆ ಈಗ ಸಮಾಧಾನ ಆಯ್ತು ಅಜ್ಜೀ.... ಮಾಯಾ ಇಲ್ಲೇ ಇರ್ತಾಳಂತೆ. ಅಮ್ಮನ ಮನೆಗೆ ಹೋಗುಲ್ಲವಂತೆ, ನಿಂಗೆ ಕಷ್ಟ ಆಗುಲ್ವಾ?"

"ನಂಗೆಂಥದೋ ಕಷ್ಟ?....ಇದಕ್ಕಿಂತ ಕಷ್ಟದ ದಿನಗಳನ್ನು ನಾನ

ನೋಡಿದೀನಿ.... ಹಿರಿಯವಳಾಗಿ ನಾನೇ ಹಿಂದೆ ಸರಿದರೆ ಅದು ಸರೀನಾ?"

"ಅಜ್ಜೀ... ನೀನು ತುಂಬಾ ಒಳ್ಳೆಯವಳು."... ಎನ್ನುತ್ತಾ ಅವಳ ಕೊರಳಿಗೆ ಜೋತು ಬಿದ್ದ.

"ಹುಚ್ಚು ಹುಡುಗ.... ಈಗ ನೀನು ದೊಡ್ಡವನಾಗಿದೀಯ.... ಮದುವೆ ಆಗಿದೆ.... ಅಜ್ಜಿಯ ಜತೆ ಈ ಹುಡುಗಾಟವೆಲ್ಲಾ ಸಾಕು.... ಶ್ಯಾಮಲಾ... ಎಳ್ಕೊಂಡು ಹೋಗು ಇವನನ್ನು... ಇಲ್ಲಿದ್ರೆ ಇಲ್ಲೇ ಮಲಗಿ ಬಿಡ್ತಾನೆ.... ಆ ಹುಡುಗಿ ಏನಂದುಕೊಂಡಾಳು?"

"ಥ್ಯಾಂಕ್ಸ್ ಅಜ್ಜೀ... ಗುಡ್ ನೈಟ್...." ಎಂದು ಎದ್ದ.

"ಏನಾದ್ರೂ ಬೇಕಾದ್ರೆ ಕರಿ... ಸಂಕೋಚ ಪಟ್ಕೋಬೇಡ...."

"ಆಯ್ತು ಅಜ್ಜೀ... ಚಿಕ್ಕಮ್ಮಾ ಥ್ಯಾಂಕ್ಸ್...." ಎಂದು ಹೇಳಿ ಈಚೆಗೆ ಬಂದ...ತನ್ನ ರೂಮಿಗೆ ಬಂದ. ಮಾಯಾ ಇವನಿಗಾಗಿ ಕಾಯುತ್ತಿದ್ದಳು...."ಅಜ್ಜೀ ಏನಂದ್ರು?" ಕೇಳಿದಳು.

"ಏನಂತಾರೆ? ಒಂದಿಷ್ಟು ಚೆನ್ನಾಗಿ ಬೈದರು...."

"ನಾನು ನಂಬುಲ್ಲ... ಒಂದಿಷ್ಟು ಮುದ್ದು ಮಾಡಿ ಕಳ್ಸಿರ್ತಾರೆ.... ರೈಟ್....?"

"ಎಸ್.... ಅಜ್ಜಿ ನಾನು ರೇಗಿದ್ದನ್ನೆಲ್ಲಾ ಮರೆತೇ ಬಿಟ್ಟಿದ್ದಾಳೆ.... ಗ್ರೇಟ್ ಅಜ್ಜಿ.... ಆದರೆ ಪಾಪ... ಅಜ್ಜಿ ಮೊದಲ್ನಿಂದ ಬಹಳ ಕಷ್ಟಾನೇ ಪಟ್ಟಿರೋದು.... ಸುಖ ಅಂದ್ರೆ ಏನೂಂತ಼್ೇ ಗೊತ್ತಿಲ್ಲ.... ಎಲ್ಲರಿಗೋಸ್ಕರ ಒದ್ದಾಡ್ತಾಳೆ....."

"ತಾತನ್ನ ಮದುವೆಯಾಗಿ ಈ ಮನೆಗೆ ಬಂದಾಗ, ಅಜ್ಜಿಗೆ ಕೇವಲ ಹದಿನಾಲ್ಕು ವರ್ಷವಂತೆ.... ತಾತಾ ಹೈಸ್ಕೂಲಿನಲ್ಲಿ ಮೇಷ್ಟ್ರಾಗಿದ್ದರು.... ಅವರಿಗೆ ಸ್ವಲ್ಪ ಕೋಪ ಜಾಸ್ತಿ.... ನನ್ನ ಹಾಗೆ.... ನನ್ನ ಅಮ್ಮನೇ ಮೊದಲ ಮಗಳು. ಬಹಳ ಮುದ್ದಿನಿಂದ ಬೆಳೆಸಿದ್ದರಂತೆ. ಆಮೇಲೆ ನನ್ನ ಮಾವ ಹುಟ್ಟಿದ್ದು.... ಆಗ ಚಿಕ್ಕಮ್ಮನೂ ನಮ್ಮ ಮನೆಗೆ ಬಂದು ಸೇರಿಕೊಂಡರಂತೆ. ಚಿಕ್ಕಮ್ಮ ವಿಧವೆ.... ಅವರಿಗೆ ಮಕ್ಕಳಿಲ್ಲ. ನಮ್ಮನ್ನೇ ತನ್ನ ಮಕ್ಕಳು ಎಂಬ ಪ್ರೀತಿಯನ್ನು ತೋರುತ್ತಿದಾರೆ.... ಮಾಯಾ.... ನಿದ್ದೆ ಬಂತಾ?"

"ಇಲ್ಲ.... ನಿಮ್ಮ ಮಾತನ್ನು ಕೇಳಿಸಿಕೊಳ್ತಿದ್ದೆ...."

"ಬೋರ್ ಆಗ್ತಿಲ್ಲ ತಾನೇ...."

"ಇಲ್ಲ ಗೌತಮ್.... ಆದರೆ ಪಿಲ್ ತಗೊಂಡಿದ್ರಿಂದ ನಿದ್ದೆ ಬರ್ತಿದೆ.... ನಾಳೆ ಮಾತಾಡೋಣ್ವಾ?"

"ಓ... ಕೇ.... ಗುಡ್ ನೈಟ್..." ಎಂದ. ಬಹಳ ಹೊತ್ತಿನವರೆಗೆ

ಅವನ ಬಳಿಗೆ ನಿದ್ದೆ ಸುಳಿದಿರಲಿಲ್ಲ....

****

ಬೆಳಿಗ್ಗೆ ಮುಂಬಾಗಿಲ ಕರೆಗಂಟೆ ಸದ್ದು ಮಾಡಿದಾಗ ಎಚ್ಚರಗೊಂಡ. ಪಕ್ಕದಲ್ಲಿ ಮಲಗಿದ್ದ ಮಾಯಾಳನ್ನೇ ನೋಡಿದ. ಸಾಕಷ್ಟು ಬದಲಾಗಿದ್ದಾಳೆ ಅಂತ ಅಂದುಕೊಂಡು ಎದ್ದು ಹೊರಬಂದು, ಬಾಗಿಲನ್ನು ಎಳೆದುಕೊಂಡ. "ಗುಡ್ ಮಾರ್ನಿಂಗ್ ಗೌತಮ್...." ಎನ್ನುತ್ತಾ ದೀಪಾ ಅವನ ಬಳಿಗೆ ಧಾವಿಸಿದಳು. ದಿವ್ಯಾ ಅವನ ಕೈ ಹಿಡಿದಳು.

"ಹೇಗಿತ್ತೇ ಟ್ರಿಪ್....ಚೆನ್ನಾಗಿತ್ತಾ?" ವಿಚಾರಿಸಿದ.

"ನೀನ್ಯಾಕೆ ಬರ್ಲಿಲ್ಲ?" ದೀಪಾ ಕೇಳಿದಳು. ಅವಳು ಉತ್ತರ ಹೇಳುವಷ್ಟರಲ್ಲಿ ಶ್ಯಾಮಲಾ ಅಲ್ಲಿಗೆ ಬಂದಳು.

"ಇಲ್ಲಿ ನಿಂತ್ಕೊಂಡು ಗದ್ದಲ ಮಾಡ್ಬೇಡಿ.... ಮಾಯಾ ಮಲಗಿದಾಳೆ. ಅವಳಿಗೆ ಡಿಸ್ಟರ್ಬ್ ಆಗುತ್ತೆ."

"ಹೌದಾ? ಅತ್ತಿಗೆ ಯಾವಾಗ ಬಂದ್ರು?"

"ಏನೋ ಗೌತಮ್.... ಹೆಂಡ್ತೀನ ಕರ್ಕೊಂಡು ಬಂದಿದೀಯಂತೆ...." ಅನುರಾಧಾ ಕೇಳಿದಳು.... ಅತ್ತೆಯೂ ಬಂದು ನಿಂತಳು.

"ಹುಂ... ನೀವ್ಯಾರೂ ಇರ್ಲಿಲ್ಲವಲ್ಲ... ನನಗೆ ಅಡಿಗೆ ಮಾಡಿ ಹಾಕೋಕೆ ಅಂತ ಕರ್ಕೊಂಡು ಬಂದೆ...."

"ಮಾಯಂಗೆ ಅಡಿಗೆ ಮಾಡುಕ್ಕೆ ಬರುತ್ತಾ?" ದಾಕ್ಷಾಯಿಣಿ ಕೇಳಿದಳು.

"ಹೂಂ.... ಹೇಳ್ಕೊಟ್ಟೆ..." ಅವನೂ ನಕ್ಕ.

"ಹೂಂ.... ಲೊಟ್ಟೆ... ನಿಂಗೇ ಬರುಲ್ಲ.... ನೀನೇನು ಹೇಳ್ಕೊಡ್ತೀಯಾ?"

"ಏನೂ ಬರದಿದ್ದೋರು ಪಾಠ ಹೇಳಿಕೊಡುಲ್ವಾ ಹಾಗೆ.... ಅಜ್ಜಿ ಇನ್ನೂ ಎದ್ದಿಲ್ವಾ?" ಪ್ರಶ್ನಿಸಿದ...

"ಅಮ್ಮ ಎದ್ದಿದಾಳೆ.... ಸ್ನಾನ ಮಾಡ್ತಿದಾಳಂತೆ...."

"ಅವನಿನ್ನೂ ಈಗ ಏಳ್ತಿದಾನೆ .... ಅವನನ್ಯಾಕೆ ಎಲ್ರೂ ಸುತ್ತುವರೆದಿದೀರಿ. ಇತ್ಲಾಗೆ ಬನ್ನಿ, ಗಲಾಟೆ ಮಾಡಬೇಡಿ..." ಚಿಕ್ಕಮ್ಮ ಗದರಿದಳು.

"ಅದೇನು ಗಲಾಟೆ ಮಾಡ್ಬೇಡಿ ಅಂತ ಪದೇ ಪದೇ ಹೇಳ್ತಿದೀರಿ ಚಿಕ್ಕಮ್ಮ.... ಈ ಮುಂಚೆ ಎಂದೂ ಹೇಳ್ತಿರಲಿಲ್ಲ ನೀವು...."

"ಮಾಯಂಗೆ ಹುಶಾರಿಲ್ಲ.... ಕಾಲು ನೋವು ಅಂತ ಮಲಗಿದಾಳೆ...." ಅಂತ ಹೇಳಿ ನಡೆದುದನ್ನು ಹೇಳಿದಳು.

"ಹೌದೇನೋ ಗೌತಮ್.... ನೀನು ಹೇಳ್ಲೇ ಇಲ್ಲ. ನಾವು ಅತ್ತಿಗೇನ

ನೋಡಿ ಮಾತಾಡಿಸ್ಬೇಕು..."

"ಅವಳು ಎದ್ದು ಬಂದ್ಮೇಲೆ ಮಾತನಾಡಿಸೋರಂತೆ. ಈಗ ನಡೀರಿ..." ಚಿಕ್ಕಮ್ಮ ಎಲ್ಲರನ್ನೂ ಅಲ್ಲಿಂದ ಕರೆದುಕೊಂಡು ಹೋದಳು. "ಥ್ಯಾಂಕ್ಸ್ ಚಿಕ್ಕಮ್ಮ" ಎಂದು ತನ್ನಲ್ಲೇ ಹೇಳಿಕೊಂಡು ಮತ್ತೆ ರೂಮಿನೊಳಕ್ಕೆ ಬಂದು, ಬಾಗಿಲನ್ನು ಭದ್ರ ಪಡಿಸಿದ. ಮಾಯಾ ಎಚ್ಚರಗೊಂಡಿದ್ದಳು. ಅವನು ಅವಳ ಬಳಿ ಕುಳಿತ. ಅವಳು ಎದ್ದು ಕುಳಿತಳು.

"ನಿಂಗೆ ಎಚ್ಚರ ಆಗಿ ಹೋಯ್ತಾ?.... ಅವರೆಲ್ಲಾ ಬಂದ್ರು...."

"ಮಾತು ಕೇಳಿಸ್ತು..."

"ಸಾರೀ.... ಮಾಯಾ.... ಅವರೆಲ್ಲಾ ನಿನ್ನನ್ನು ವಿಚಾರಿಸ್ತಿದ್ರು....ಮೆಲ್ಲಗೆ ಮಾತಾಡುಕ್ಕೇ ಬರುಲ್ಲ ಅವಕ್ಕೆ.... ನಿಂಗೆ ಡಿಸ್ಟರ್ಬ್ ಆಯ್ತು.... ಎಚ್ಚರ ಆಗ್ಹೋಯ್ತು..."

"ಏನೂ ಇಲ್ಲ.... ಬೆಳಗಾಯ್ತಲ್ಲ... ಏಳಲೇ ಬೇಕು...."

"ಎದ್ದು ಏನು ಮಾಡ್ತೀಯಾ?.... ಹೇಗೂ ರಜದಲ್ಲಿ ಇದೀಯಲ್ಲ...."

"ಡಾಕ್ಟರ ಹತ್ರ ಹೋಗ್ಬೇಕಲ್ಲ... ನೀವು ಬರ್ತೀರೋ? ಆಥವಾ ಅಪ್ಪಂಗೆ ಫೋನು ಮಾಡ್ಲೋ....?"

"ನಾನೇ ಬರ್ತೀನಿ... ನೀನು ನನ್ನ ಜವಾಬ್ದಾರಿ...." ಎನ್ನುತ್ತಾ ಅವಳನ್ನು ತನ್ನ ಎದೆಗೆ ಒರಗಿಸಿಕೊಂಡ. ಅವರುಗಳೆಲ್ಲ ಬಂದಿದ್ದರೂ ಇದ್ದಕ್ಕಿದ್ದಂತೆ ಯಾವ ಸದ್ದು ಗದ್ದಲವೂ ಇಲ್ಲದೆ, ಅಡವಿ ಮೌನ ಆವರಿಸಿಕೊಂಡಿದೆ ಅಂತ ಅನ್ನಿಸಿದಾಗ, ಮಾಯಾಳನ್ನು ಸರಿಸಿ, ಎದ್ದು ಬಾಗಿಲನ್ನು ತೆರೆದ. ಹೌದು, ಯಾವ ಗಲಾಟೆಯೂ ಇಲ್ಲ. ಹೆಜ್ಜೆಯನ್ನು ಸದ್ದಾಗದಂತೆ ಇಟ್ಟು ಊಟದ ಮನೆಗೆ ಬಂದ. ಎಲ್ಲರೂ ಅವರವರ ಕೆಲಸದಲ್ಲಿ ತಲ್ಲೀನರಾಗಿದ್ದಾರೆ. ಎಲ್ಲರೂ ಮೌನ, ಇವನಿಗೆ ಸೋಜಿಗ ಎನಿಸಿತು. ತಾನೂ ಅಲ್ಲಿಗೆ ಬಂದು ಸೇರಿಕೊಂಡ.

"ತಿಂಡಿ ಏನು ಮಾಡ್ಲೀ....?" ಅಜ್ಜಿ ಪಿಸುದನಿಯಲ್ಲಿ ಕೇಳಿದಳು.

"ನಿಮ್ಗೇನು ಬೇಕೋ ಅದನ್ನೇ ಮಾಡಿ" ಇವನೂ ಪಿಸುದನಿಯಲ್ಲಿ ಹೇಳಿದ. ಎಲ್ಲರೂ ಕೈಯನ್ನು ಬಾಯಿಗಿಟ್ಟು ನಿಶ್ಶಬ್ಧವಾಗಿ ನಕ್ಕರು. ಇವನೂ ನಸುನಕ್ಕ.

"ಮಾಯಂಗೆ ಏನು ಇಷ್ಟವೋ, ಅದನ್ನೇ ಮಾಡಿದ್ರಾಯ್ತು...." ಚಿಕ್ಕಮ್ಮ ಎಂದಳು.

"ಏನೂ ಬೇಡ... ನಮಗೆಲ್ಲಾ ಏನು ಆಗುತ್ತೋ ಅದೇ ಅವಳಿಗೂ ಆಗುತ್ತೆ...."

"ಅವಳಿಗೆ ಸೇರದಿದ್ದರೇ....?"

"ಸೇರುತ್ತೆ... ಸೇರದೇ ಏನು? ಸೇರದಿದ್ದರೆ ತಿನ್ನಿಸ್ತೀನಿ..." ಮತ್ತೆ ಪಿಸು ನಗು.

"ನನ್ನನ್ನು ಕೆಟ್ಟವಳನ್ನಾಗಿ ಮಾಡ್ತೀಯ ಅಷ್ಟೇ...."

"ನಿನ್ನನ್ನು ಯಾರಾದ್ರೂ ಕೆಟ್ಟವರು ಅಂತ ಅನ್ನಲಿ.... ಅವರ ತಲೆಯನ್ನು ಕಡಿದು ಹಾಕಿ ಬಿಡ್ತೀನಿ...."

"ಬಿಡ್ತು ಅನ್ನು.... ಬೆಳಿಗ್ಗೆ ಏಳ್ತಿದ್ದ ಹಾಗೇ ಕಡಿ ಹೊಡಿ ಮಾತ್ಯಾಕೆ? ನೆನ್ನೆಯ ಪ್ರಕರಣವೇ ಇನ್ನೂ ಹಸಿಯಾಗಿದೆ...ಅಂದ್ಹಾಗೇ ಆಸ್ಪತ್ರೆಗೆ ಎಷ್ಟು ಹೊತ್ತಿಗೆ ಹೋಗ್ಬೇಕು? ಹೇಗೆ ಹೋಗ್ತೀರಿ?"

"ಟ್ಯಾಕ್ಸಿಯವನಿಗೆ ಹೇಳಿದ್ರಾಯ್ತು...."

"ನಿನ್ನ ಮಾವಂಗೆ ಫೋನು ಮಾಡು.... ಕಾರನ್ನು ತರಲಿ.... ಹೇಗೂ ನಿಂಗೆ ಡ್ರೈವಿಂಗ್ ಬರುತ್ತಲ್ಲ...."

"ಇವತ್ತು ಬೇಡ ಅಜ್ಜೀ.... ಪ್ಲಾಸ್ಟರ್ ಹಾಕಿಸಿಕೊಂಡು ಬಂದ ಮೇಲೆ ಫೋನು ಮಾಡ್ತೀನಿ...."

"ಹೌದು ಅಂಬುಜ....ಅವರು ಆಸ್ಪತ್ರೆಯ ಖರ್ಚಿನ ಹಣವನ್ನು ಕೊಡ್ತೀನಿ ಅಂತಂದ್ರೆ ಬೇಡ ಅನ್ನುಕ್ಕಾಗುಲ್ಲ.... ಇಸ್ಕೊಳುಕ್ಕಾಗುಲ್ಲ" ಸುಮ್ಮನೇ ಎಂಬಂತೆ ಹೇಳಿದಳು.

"ಹೌದಲ್ವಾ... ನಂಗೆ ಇದು ಹೊಳೀಲೇ ಇಲ್ಲ.... ಹೌದು.... ನಮ್ಮ ಗೌತಮ ಬೆಳೆದಿದಾನೆ.... ಜಾಣನೂ ಆಗಿದಾನೆ.... ಏಳೇ.... ಒಬ್ಬೊಬ್ಬರಾಗಿ ಎದ್ದು ನಿಮ್ಮ ನಿಮ್ಮ ಕೆಲಸಾನಾ ನೋಡ್ಕೊಳ್ಳಿ... ನೀವೆಲ್ಲಾ ಬೆಳೆದು ತಿದ್ಕೊಳ್ಳೋದು ಯಾವಾಗ?"

"ಗೌತಮ.... ಅತ್ಗೇ ಇನ್ನೂ ಎದ್ದಿಲ್ವಾ....?"

"ಹೋಗಿ ನೋಡು" ಎಂದ. ಇಬ್ಬರೂ ಹೊರಟರು.

"ದಡ ದಡ ಸದ್ದು ಮಾಡ್ಬೇಡಿ.... ನಿಧಾನವಾಗಿ ಬಾಗಿಲನ್ನು ತೆಗೀರಿ. ಮೆಲ್ಲನೆ ಮಾತಾಡಿ. ಅವಳು ಸೂಕ್ಷ್ಮ....." ಶ್ಯಾಮಲಾ ಎಚ್ಚರಿಸಿದಳು. ಇಬ್ಬರೂ ಅತ್ತ ಹೋದರು. ದಾಕ್ಷಾಯಿಣಿ, ಅನುರಾಧಾ ಇಬ್ಬರೂ ಕೆಲಸಕ್ಕೆ ಹೊರಡಲು ಸಿದ್ಧರಾಗುತ್ತಿದ್ದರು.

"ಅಂಬುಜ ರಾತ್ರಿಯೆಲ್ಲಾ ಹೊರಳಾಡ್ತಾನೇ ಇದ್ಲು....ನಿಂಗೇನಾದ್ರೂ ಹೆಚ್ಚು ಕಡಿಮೆ ಆಗಿದ್ದಿದ್ರೆ ಅಂತ ಚಿಂತಿಸ್ತಾನೇ ಇದ್ಲು.... ಇನ್ನು ಮುಂದೆ ನಿಧಾನವಾಗಿ ಬೈಕ್‌ನ್ನು ಓಡಿಸಪ್ಪಾ....." ಚಿಕ್ಕಮ್ಮ ಎಂದಳು.

"ಬೈಕು ಅನ್ನುತ್ಲು ನೆನಪಿಗೆ ಬಂತು. ಅದನ್ನು ಅಲ್ಲೇ ಹತ್ತಿರವಿದ್ದ

ಅಂಗಡಿ ಹತ್ರ ನಿಲ್ಲಿಸಿ ಬಂದಿದ್ದೆ. ಹೋಗಿ ವಿಚಾರಿಸ್ಬೇಕು.... ತುಂಬಾ ಕೆಲಸವಿದೆ. ಕಾಫಿ ಕೊಟ್ಟರೆ ಕುಡಿದು ಸ್ನಾನಕ್ಕೆ ಹೋಗ್ತೀನಿ...."

"ನಿನ್ನ ಹೆಂಡ್ತಿಗೆ ಹಾಲನ್ನು ಕೊಟ್ಟು ಬಿಡು.... ರಾತ್ರಿ ನೀವಿಬ್ರೂ ಏನು ಊಟ ಮಾಡಿದ್ರೋ ಏನೋ.... ಬೇಗ ತಿಂಡಿ ಮಾಡ್ತೀನಿ...." ಎನ್ನುತ್ತಾ ಅಂಬುಜ ಹಾಲನ್ನು ಬಗ್ಗಿಸಿ ಕೊಟ್ಟಳು.

"ಅನೂ.... ನಾನು ಕಾಫಿ ಕುಡಿತಿದೀನಿ... ನೀನು ಮಾಯಂಗೆ ಹಾಲನ್ನು ಕೊಟ್ಟು ಬರ್ತೀಯಾ?" ಕೇಳಿದ.

"ಓ... ಖಂಡಿತಾ... ಆದರೆ ಎದ್ದು ಅವಳು ನಿನ್ನ ಮುಖವನ್ನು ನೋಡ್ಬೇಕು ಅಂತ ಅಂದ್ಕೊಂಡಿದ್ರೆ....." ನಗುತ್ತಾ ಪ್ರಶ್ನಿಸಿದಳು.

"ಡೋಂಟ್ ಬಿ ಸಿಲ್ಲಿ... ಇಷ್ಟವಿಲ್ಲದಿದ್ರೆ ಮಾಡ್ಬೇಡ ಬಿಡು...." ಅನುರಾಧಾ ನಗುತ್ತಾ ಹಾಲಿನ ಬಟ್ಟಲನ್ನು ಹಿಡಿದು ಹೊರಟಳು. ಅಂಬುಜ ಶ್ಯಾಮಲಳ ಮುಖವನ್ನು ನೋಡಿದುದನ್ನು ಗೌತಮ ಗಮನಿಸಿದ... "ಎಲ್ರೂ ಸೋಮಾರಿಗಳೇ...." ಅಲ್ಲಿದ್ದವರಿಗೆ ಕೇಳಿಸುವಂತೆ ನುಡಿದು, ಕಾಫಿಯನ್ನು ಕುಡಿದು ಮುಗಿಸಿದ.

*****

ಎಕ್ಸ್‌ರೇ ತೆಗೆದು, ಪ್ಲಾಸ್ಟರ್ ಹಾಕಿ ಡ್ರೆಸಿಂಗ್ ಮಾಡಿದ್ದರು. ಅಲ್ಲಿಂದ ವಾಪಸ್ಸು ಬರುವ ಹೊತ್ತಿಗೆ ಮಧ್ಯಾಹ್ನವಾಗಿತ್ತು. ಅಜ್ಜಿ, ಚಿಕ್ಕಮ್ಮ ಇಬ್ಬರ ಹೊರತು ಮನೆಯಲ್ಲಿ ಇನ್ಯಾರೂ ಇರಲಿಲ್ಲ.

"ಬೆಳಿಗ್ಗೇನೂ ಸರಿಯಾಗಿ ತಿಂಡೀನ ತಿಂದಿಲ್ಲ, ಊಟ ಮಾಡ್ತೀಯಾ? ಅನ್ನಾನು ಹುಳೀನು ಹಾಕಿ ಕಲೆಸಿ ಕೊಡ್ಲಾ?" ಚಿಕ್ಕಮ್ಮ ಕೇಳಿದಳು.

"ಹೂಂ ಚಿಕ್ಕಮ್ಮ.... ಊಟ ಮಾಡಿ ಮಾತ್ರೆ ತಗೊಂಡು ರೆಸ್ಟ್ ತಗೊಳ್ಳಲಿ" ಅವನೆಂದ.... "ಬೈಕ್ ಗತಿ ಏನಾಗಿದೆ ಅಂತ ನೋಡ್ಕೊಂಡು ಬರ್ತೀನಿ" ಎಂದು ಹೇಳಿ ಹೊರಟ...

"ಗೌತಮ್.... ನನ್ನ ಕಾರನ್ನು ಡ್ರೈವ್ ಮಾಡ್ಕೊಂಡು ಬಾ.... ಈಗ ಉಪಯೋಗಕ್ಕೆ ಬೇಕಾಗುತ್ತೆ...." ಎಂದಳು ಮಾಯಾ. ಅವನು ಅಜ್ಜಿಯ ಕಡೆ ನೋಡಿದ.

"ಅಜ್ಜಿ.... ನೀವಾದ್ರೂ ಹೇಳಿ. ನಾನೂ ನೆನ್ನೆಯಿಂದ ಹೇಳ್ತಾನೇ ಇದೀನಿ.... ನನ್ನ ಮಾತಿಗೆ ಕಿವೀನೇ ಕೊಡ್ತಿಲ್ಲ.... ಕಾರು ಇದ್ರೆ ಎಷ್ಟು ಸುಲಭ ಆಗುತ್ತೆ..."

"ಅದೇನೋ ನಂಗೊತ್ತಿಲ್ಲ.... ಅವನಿಗೆ ತೋಚಿದ ಹಾಗೆ ಮಾಡಲಿ...." ಮಾಯಾ ನಿಸ್ಸಹಾಯಕಳಂತೆ ಅವನ ಕಡೆ ನೋಡಿದಳು.

"ಮೊದಲು ಬೈಕ್ ಹೇಗಿದೆ ಅಂತ ನೋಡ್ತೀನಿ.... ಆಮೇಲೆ ನೋಡೋಣ.... ಕಾರು ಬೇಕು ಅಂತ ಅನ್ನಿಸಿದ್ರೆ ತಂದ್ರಾಯ್ತು.... ಹೇಗೂ ನಿನ್ನ ಪೇರೆಂಟ್ಸ್‌ಗೆ ನಿನ್ನ ಈ ವಿಷಯಾನಾ ಹೇಳಬೇಕಲ್ಲ...."

"ಹಾಗಾದ್ರೆ ಬೇಡ ಬಿಡು...."

"ಅದು ಸರಿಯಲ್ಲ ಮಾಯಾ.... ಅವರು ನಿನ್ನ ತಂದೆ ತಾಯಿ. ಅವರಿಗೂ ನಿನ್ನ ಚಿಂತೆ ಇರುತ್ತೆ..... ಬಂದಾಗ್ನಿಂದ ನೀನು ಫೋನು ಮಾಡಿಯೇ ಇಲ್ಲ ಅಂತ ಕಾಣ್ಸುತ್ತೆ. ಇವನೇ ಫೋನು ಮಾಡಲಿ.... ಅವರುಗಳು ಬಂದು ನೋಡಿಕೊಂಡು ಹೋಗಲಿ.... ಅದು ಕರ್ತವ್ಯ...."

"ಅಲ್ಲಿಗೇ ಬಾ ಅಂತ ಬಲವಂತ ಮಾಡಿ ಕರ್ಕೊಂಡು ಹೋದ್ರೆ....."

"ನಿಂಗೆ ಇಷ್ಟವಿದ್ದರೆ ಹೋಗು.... ಅಲ್ಲಿ ನಿಮ್ಮ ಮನೆಯಲ್ಲಿ ಎಲ್ಲಾ ಅನುಕೂಲಗಳಿವೆ. ಆಳು ಕಾಳುಗಳಿದಾರೆ...."

"ಇಲ್ಲ ಅಜ್ಜೀ.... ನಾನು ಇಲ್ಲೇ ಇರ್ತೀನಿ. ಅಲ್ಲಿಗೆ ಹೋದರೆ ಒಂಟಿಯಾಗಿ ಬಿಡ್ತೀನಿ...."

"ಇಲ್ಲಿ ನಿಂಗೆ ಕಷ್ಟ ಆಗಬಹುದು ಮಾಯಾ.... ನಮ್ಮ ಮನೆ ಒಂದು ಸಂತೆಯ ಥರ.... ಯಾವಾಗ ನೋಡಿದ್ರೂ ಗದ್ದಲ.... ಅಜ್ಜಿ ಹೇಳೋದು ಸರಿ...."

"ಸಂತೆಯೊಳಗೊಂದು ಮನೆಯ ಮಾಡಿ, ಗದ್ದಲಕ್ಕೆ ಅಂಜಿದರೆ ಎಂತಯ್ಯೊ ಅಂತ.... ಅವಳಿಗೆ ಇದು ಸಂತೆ ಅಂತ ಗೊತ್ತು.... ಇಷ್ಟವಿದ್ದರೆ ಇರಲಿ ಬಿಡು.... ಅವಳಿಗ್ಯಾಕೆ ಬೇಸರ?" ಶ್ಯಾಮಲಾ ಎಂದಳು.

"ಥ್ಯಾಂಕ್ಸ್ ಚಿಕ್ಕಮ್ಮಾ.... ನೀವಾದ್ರೂ ನನ್ನನ್ನು ಅರ್ಥ ಮಾಡ್ಕೊಂಡಿದೀರಲ್ಲ...."

"ಅರ್ಥವೋ, ಅನುಭವವೋ..... ಒಮ್ಮೊಮ್ಮೆ ಚಿಕ್ಕಮ್ಮ ಹೇಳೋ ಮಾತು ಎಲ್ಲರಿಗೂ ಪ್ರಿಯವಾಗಿರುತ್ತೆ...." ಅವನೂ ನಸುನಕ್ಕು ನುಡಿದ.

ವಿಷಯ ತಿಳಿದ ಸ್ವಲ್ಪ ಹೊತ್ತಿನಲ್ಲೇ ಮಾಯಾಳ ತಂದೆ ತಾಯಿಯರು ಮಗಳನ್ನು ನೋಡಲು ಆಗಮಿಸಿದರು. ಆತಂಕದಿಂದ ಮುಖ ಕಪ್ಪಾಗಿತ್ತು.... "ಏನೇ ಮಾಯಾ ಈಗ ತಿಳಿಸ್ತಾ ಇದೀರಲ್ಲೇ.... ತಿಳಿದ ಕೂಡ್ಲೇ ಎದೆ ನಡುಗಿ ಹೋಯ್ತು.... ತಕ್ಷಣವೇ ಬಂದು ಬಿಟ್ಟೆವು.... ಏನಾಯ್ತು? ಹೇಗಾಯ್ತು? ಡಾಕ್ಟರು ಏನಂದ್ರು?"

"ಎಲ್ಲಾ ಸರಿ ಹೋಗುತ್ತೆ ಮಾವ.... ಹೆಚ್ಚು ಪೆಟ್ಟಾಗಿಲ್ಲ. ಒಂದೆರಡು ತಿಂಗಳಿನೊಳಗೆ ಮತ್ತೆ ನಾರ್ಮಲ್ ಆಗ್ತಾಳೆ...."

"ಈಗ್ಲೇ ಹೊರಡು ಮಾಯಾ... ಇಲ್ಲಿ ಇವರುಗಳಿಗೆ ತೊಂದರೆ ಆಗುತ್ತೆ...."

"ತೊಂದರೆ ಏನ್ಬಂತು?.... ಇವಳೇನು ಹೊರಗಿನವಳಾ?.... ನನ್ನ ಮೊಮ್ಮಗಳೇ.... ನೀವು ಏನೂ ಆತಂಕ ಪಟ್ಕೋಬೇಡಿ...."

"ಆತಂಕ ಆಗ್ದೇ ಇರುತ್ತಾ ಹೇಳಿ.... ಇಲ್ಲಿ ನಿಮ್ಮ ಮನೆಯಲ್ಲಿ ಗೌತಮನ ಹೊರತು ಬೇರೆ ಯಾರು ಗಂಡಸರಿದಾರೆ?.... ನೀವಿಬ್ಬರೂ ವಯಸ್ಸಾದವರು.... ಅವರಿಬ್ಬರೂ ಕೆಲಸಕ್ಕೆ ಹೋಗ್ತಾರೆ.... ದೀಪಾ, ದಿವ್ಯಾ ಚಿಕ್ಕವರು.... ಗೌತಮ್ ಒಬ್ಬರೇ ಆಗಿ ಬಿಡ್ತಾರೆ."

"ಅಲ್ಲಿ ತಾನೇ ಬೇರೆ ಯಾವ ಗಂಡಸರಿದಾರೆ ಮಮ್ಮೀ? ಡ್ಯಾಡೀ ಒಬ್ಬರೇ.... ಅವರೂ ಕೆಲಸಕ್ಕೆ ಹೋಗ್ತಾರೆ. ಲಯಾ ಹುಡುಗಿ ಅಲ್ಲದೇ ಈ ಊರಲ್ಲಿಯೇ ಇಲ್ಲ...."

"ನೀನು ಸುಮ್ನಿರು ಮಾಯಾ.... ನಿಂಗೆ ಅರ್ಥವಾಗುಲ್ಲ...."

"ಅರ್ಥ ಆಗುತ್ತೇ ಮಮ್ಮೀ... ನಾನೂ ಬೆಳೆದಿದೀನಿ. ನನಗೂ ತಿಳಿವಳಿಕೆ ಇದೆ. ಇದು ನನ್ನ ಮನೆ.... ಇಲ್ಲಿ ನಾನು ಒಂಟಿಯಲ್ಲ.... ಅಲ್ಲಿ ನಾನು ಒಂಟಿಯಾಗಿ ಬಿಡ್ತೀನಿ.... ನಾನು ಹೇಗಿರಲಿ?"

"ನರ್ಸನ್ನು ಇಟ್ಟರಾಯ್ತು...."

"ನರ್ಸು ಆಯಾ ಆಗ್ತಾಳೆ ಮಮ್ಮಿ ಆಗುಲ್ಲ.... ನೀನು ಇಪ್ಪತ್ನಾಲ್ಕು ಗಂಟೆಯೂ ನನ್ನ ಜತೇಲಿ ಇರೋದಾದ್ರೆ ಹೇಳು ಬರ್ತೀನಿ...."

"ಮಾಯಾ ಹೇಳೋದು ಸರೀ ದೇವಕಿ.... ಅವಳು ಇಲ್ಲಿರುವುದೇ ಸರ. ನಾವೇ ಆಗ ಈಗ ಬಂದು ಹೋಗಿ ನೋಡ್ಕೊಂಡು ಹೋಗೋಣ...."

"ನೀವಾದ್ರೂ ತಿಳುವಳಿಕೆ ಹೇಳಿ ಅಂಬುಜಮ್ಮ.... ನಾನು ಇವಳನ್ನು ಹೆತ್ತ ತಾಯಿ....ನನಗೆ ಆತಂಕ ಇರುಲ್ವಾ?"

"ನಿಮ್ಮ ಆತಂಕ ಸಹಜ ದೇವಕಿಯವರೇ.... ಆದರೆ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಅಂತ.... ನೀವು ಧಾರೆ ಎರೆದುಕೊಟ್ಟ ಸಮಯದಿಂದಲೇ ಮಾಯಾ, ಈ ಮನೆಯವಳಾದಳು.... ಇಂಥಾ ಸಮಯದಲ್ಲಿ ನಾವು ಕಳಿಸಿ ಕೊಡುವುದು ಹೇಗೆ ನ್ಯಾಯ ಆಗುತ್ತೆ.... ನೀವೇ ಯೋಚಿಸಿ...." ದೇವಕಿ ಸುಮ್ಮನಾದಳು.

"ಡ್ಯಾಡೀ.... ನನ್ನ ಕಾರನ್ನು ಕಳಿಸಿ ಕೊಡಿ.... ಬೈಕ್ ರಿಪೇರಿಗೆ

ಹೋಗಿದೆ.... ಕಾರು ಇದ್ದರೆ ಅನುಕೂಲ ಆಗುತ್ತೆ...."

"ಆಯ್ತು.... ಸಾಯಂಕಾಲವೇ ಕಳಿಸಿಕೊಡ್ತೀನಿ.... ಆದರೆ ನೀನು ಡ್ರೈವ್ ಮಾಡುಕ್ಕೆ ಹೋಗ್ಬೇಡ.... ಡ್ರೈವರನ್ನು ಗೊತ್ತು ಮಾಡಿಕೊಡ್ತೀನಿ...." ಇಬ್ಬರೂ ಹೊರಟು ಬಿಟ್ಟರು....

"ನೀವು ಒಪ್ಕೋಬಾರ್ದಾಗಿತ್ತು.... ಮನೆ ತುಂಬಾ ಜನ.... ಮಾಯಂಗೆ ರೆಸ್ಟ್ ಎಲ್ಲಿ ಸಿಗುತ್ತೆ?.... ಅವಳಿಗೆ ಸಹಾಯ ಯಾರು ಮಾಡ್ತಾರೆ?" ದೇವಕಿ ಆಕ್ಷೇಪಣೆ ಎತ್ತಿದಳು.

"ಅದು ಅವಳ ನಿರ್ಧಾರ. ಅವಳದೇ ಮನೆ.... ನಾವು ಕರೆದದ್ದಾಯ್ತು.... ಬಲವಂತ ಮಾಡಿಕೊಂಡು ಎಳ್ಕೊಂಡು ಬರುಕ್ಕೆ ಆಗುತ್ತಾ ಸುಮ್ನಿರು.... ಅಲ್ಲದೇ ಅವರುಗಳು ಹೇಳುವ ಹಾಗೇ, ಅವಳು ಅವರ ಮನೆಯವಳು, ಚೆನ್ನಾಗಿ ನೋಡ್ಕೋತಾರೆ. ಮಾಯಂಗೇ ಯಾವ ಆಕ್ಷೇಪಣೆ ಇಲ್ಲದಿರುವಾಗ ನಿನ್ನದೇನು?"

"ಮೊದಲ್ನಿಂದ ನೀವು ಅವಳು ಹೇಳಿದ ಹಾಗೇ ಕೇಳಿ ಹಾಳು ಮಾಡಿದಿರಿ. ಇವರಿಗಿಂತ ಬೇರೆ ಒಳ್ಳೆಯ ಸಂಬಂಧವನ್ನು ನೋಡಬಹುದಾಗಿತ್ತು...."

"ಈಗ ಈ ಮಾತಾಡೋದು ತಪ್ಪಾಗುತ್ತೆ ದೇವಕಿ.... ಗೌತಮ್‌ನನ್ನು ಆಯ್ಕೆ ಮಾಡಿಕೊಂಡವಳು ನಿನ್ನ ಮಗಳೇ... ಮುನಿಸಿಕೊಂಡು ನಮ್ಮ ಮನೆಗೆ ಬಂದವಳೂ ಇವಳೇ.... ಅವನೊಂದಿಗೆ ಇರ್ತೀನಿ ಅಂತ ಮತ್ತೆ ಬಂದವಳೂ ಇವಳೇ.... ಈಗ ಇಲ್ಲಿಯೇ ಇರ್ತೀನಿ ಅಂತ ಹೇಳಿದವಳೂ ಇವಳೇ.... ಅವಳೇ ಹೇಳಿದಂತೆ ಅವಳೀಗ ಬೆಳೆದಿದಾಳೆ ದೇವಕಿ.... ಅವಳಿಗೆ ಹೇಗೆ ಬೇಕೋ ಹಾಗೆ ಇರುವ ಹಕ್ಕು ಅವಳಿಗಿದೆ.... ಬಲವಂತ ಮಾಡಬಾರದು...."

"ನೀವೊಬ್ಬರು ನನಗೇ ನೀತಿ ಪಾಠ ಹೇಳ್ತೀರಿ. ಈ ನೆವದಲ್ಲಿ ಮಾಯಾ ನಮ್ಮ ಮನೆಗೆ ಬಂದಿದ್ದರೆ.... ಗೌತಮನೂ ಅಲ್ಲಿಗೇ ಬರ್ತಿದ್ದ. ನಾವು ಹೇಳಿದಂತೆ ಕೇಳ್ತಿದ್ದ...."

"ನಾವು ಹೇಳಿದ ಹಾಗೆ ಕೇಳಿಕೊಂಡು ಮನೆ ಅಳಿಯನಂತೆ ಇರಲು ಅವನು ಒಪ್ಪುವುದಿಲ್ಲ. ಅವನು ಸ್ವಾಭಿಮಾನಿ.... ಅಲ್ಲದೇ.... ಆ ಮನೆಯವರ ಕಣ್ಮಣಿ ಅವನು.... ಅವನನ್ನು ಅವರಿಂದ ದೂರ ಮಾಡುವುದು ಖಂಡಿತಾ ಸರಿಯಲ್ಲ...."

"ಇಂಥೋನನ್ನ ಮಾಯಾ ಪ್ರೀತಿಸಿದ್ದು ತಪ್ಪು...."

"ಗೌತಮ್ ಇವಳನ್ನು ಪ್ರೀತಿಸಿದ್ದು ತಪ್ಪು ಅಂತ ನನಗೆ ಅನ್ನಿಸಿದ್ದುಂಟು.

ಆದರೆ ಗೌತಮನದು ದೊಡ್ಡ ಗುಣ.... ಅವಳ ಮೇಲೆ ಎಂದಾದ್ರೂ ಚಾಡಿ ಹೇಳಿದಾನಾ?"

"ಚಾಡಿ ಯಾಕೆ ಹೇಳ್ತಾನೆ? ಕೈ ತುಂಬಾ ಸಂಬಳ ತರ್ತಾಳೆ.... ಮುಂದೆ ಅರ್ಧ ಆಸ್ತಿ ಸಿಗುತ್ತೆ.... ಉದ್ಧಾರವಾಗಿ ಹೋಗ್ತಾನೆ...."

"ಇದು ದುರಹಂಕಾರದ ಮಾತು.... ನೀನು ನಿನ್ನ ಮಗಳಿಗೆ ತಿಳುವಳಿಕೆಯನ್ನು ಹೇಳ್ಬೇಕು.... ಅದನ್ನು ಬಿಟ್ಟು...."

"ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಅಂತ ಗಾದೆ ಇದೆ.... ಮುಂದೆ ಲಯಾ ಕೂಡಾ ಇದೇ ದಾರೀನ ಹಿಡಿದ್ರೆ? ಮೊದಲೇ ಅವಳು ಬೇರೆ ಊರ್ನಲ್ಲಿದ್ದಾಳೆ...."

"ಅದರಲ್ಲಿ ಅಚ್ಚರಿ ಏನಿಲ್ಲ. ನಾವು ಮಕ್ಕಳನ್ನು ಫ್ರೀಯಾಗಿ ಬಿಟ್ಟೆವು.... ಓದಿಸಿದೆವು.... ಯಾತಕ್ಕೆ? ಅವರವರ ಜೀವನವನ್ನು ಅವರೇ ರೂಪಿಸಿಕೊಳ್ಳಲಿ ಅಂತ ತಾನೇ.... ಈಗ ಇವಳ ಜೀವನ ಏನೂ ಕೆಟ್ಟಿಲ್ಲ. ಹಾಗೆ ನೋಡ್ತಾ ಹೋದರೆ ಸುಧಾರಿಸಿದೆ.... ನೋಡ್ತಾ ಇರು.... ಎಷ್ಟು ಸುಖವಾಗಿರ್ತಾಳೆ ಅಂತ...."

"ಇದನ್ನು ಸುಖ ಅಂತೀರಾ! ಹೊಟ್ಟೆಗಿದ್ದರೆ ಜುಟ್ಟಿಗಿಲ್ಲ. ಜುಟ್ಟಿಗಿದ್ದರೆ ಹೊಟ್ಟೆಗಿಲ್ಲ. ಅವನೊಬ್ಬನೇ ಸಂಪಾದಿಸೋನು.... ಒಂದು ಸ್ವಂತ ಮನೆ ಇಲ್ಲ. ಕಾರು ಇಲ್ಲ.... ಹೆತ್ತ ತಾಯಿ ಸತ್ತು ಹೋದ್ಲು ಅಂತ ಗಂಡ ಬೇರೆ ಮದುವೆ ಮಾಡ್ಕೊಂಡು ಹೊರಟು ಹೋದ.... ಅವನಿಗೇನಾದ್ರೂ ಆಸ್ತಿ ಇದೆಯೋ.... ಏನಾದ್ರೂ ಕೊಡ್ತಾನೋ ಇಲ್ಲವೋ.... ಇಲ್ಲಿ ನೋಡಿದ್ರೆ ಚಿಕ್ಕಮ್ಮನಂತೆ, ಅತ್ತಿಗೆಯಂತೆ.... ಅವಳ ಇಬ್ಬರು ಹೆಣ್ಣು ಮಕ್ಕಳು.... ಮದುವೆ ಆಗದೇ ಹಾಗೇ ಇರುವ ಚಿಕ್ಕಮ್ಮ.... ಎಲ್ಲಾ ಹೊಣೆಯೂ ಇವನ ಮೇಲೇ.... ಮಾಯಾ ಕಷ್ಟಪಟ್ಟು ದುಡಿಯೋದೆಲ್ಲಾ ಈ ಸಂಸಾರದ ಪಾಲು ಆಗುತ್ತೆ...."

"ಇದನ್ನೆಲ್ಲ ನಿನ್ನ ಮಗಳ ತಲೆಗೆ ತುಂಬಬೇಡ....ಅಲ್ಲಿಯ ವಾತಾವರಣ ಹೇಗೇ ಇರಲಿ. ಇವಳು ಸುಖವಾಗಿದ್ದರೆ ಸಾಕು. ಆ ಮನೆಯಲ್ಲಿ ಇನ್ನೂ ಇಬ್ಬರು ಸಂಪಾದಿಸ್ತಾರೆ.... ಅಜ್ಜಿಗೆ ಪೆನ್ಷನ್ ಬರುತ್ತೆ...."

"ಒಟ್ನಲ್ಲಿ ಅಲ್ಲಿ ಇರೋರೆಲ್ಲಾ ಸರಿ....ನಾನು ಏನೂ ಆಡಬಾರದು...."

"ಹೌದು ದೇವಕಿ.... ನಾನೂ ಬಡತನದಿಂದ ಮುಂದೆ ಬಂದವನು.... ದೊಡ್ಡ ಕುಟುಂಬದಲ್ಲಿ ಬೆಳೆದವನು. ಆಗ ಸರಿ ಅಲ್ಲ ಅಂತ ಅನ್ನಿಸಿದ್ದು ಈಗ ಸರಿ ಅಂತ ಅನ್ನಿಸ್ತಿದೆ.... ಶ್ರೀಮಂತಿಕೆ ಮುಖ್ಯವಲ್ಲ. ಪ್ರೀತಿ ಮುಖ್ಯ.... ಅಲ್ಲಿ ಮಾಯಾಳಿಗೆ ಪ್ರೀತಿಯ ಕೊರತೆ ಇಲ್ಲ. ಅದು ಈಗ ಅವಳಿಗೆ ಅರಿವಾಗಿದೆ....

ಆದರೆ ಹೀಗೆ ಪೆಟ್ಟಾಗಬಾರದಾಗಿತ್ತು. ಹೊಡೆತ ತಿಂದು ಬುದ್ಧಿ ಕಲಿತಂತಿದೆ...." ಹಗುರವಾಗಿ ನಕ್ಕು ಹೆಂಡತಿಯ ಭುಜವನ್ನು ಅಮುಕಿದ.

*****

ಎರಡು ತಿಂಗಳುಗಳೊಳಗೆ ಮಾಯಾ ಸಂಪೂರ್ಣ ಗುಣಮುಖಳಾಗಿದ್ದಳು. ಅವಳಿಗೆ ಬೇಸರವಾಗಬಾರದು, ತೊಂದರೆ ಆಗಬಾರದು ಅಂತ ಮನೆಯವರೆಲ್ಲ ಎಚ್ಚರಿಕೆ ವಹಿಸುತ್ತಿದ್ದರು. ಅಜ್ಜಿ ಮಾಡಿಕೊಡುತ್ತಿದ್ದ ಬಿಸಿ ಬಿಸಿಯಾದ ರುಚಿಕರ ತಿಂಡಿಗಳು, ಮಾಯಾಳಿಗೆ ಇಷ್ಟವಾಗುತ್ತಿತ್ತು. "ಕೂತಲ್ಲೇ ತಿಂದೂ, ತಿಂದೂ, ಗೂಳಿಯಂತೆ ಆಗಿದೀಯ...." ಗೌತಮ ಚುಡಾಯಿಸುತ್ತಿದ್ದ.

"ನಿಮ್ಮ ಅಜ್ಜಿಯ ಕೈಯ ಅಡಿಗೆ, ತಿಂಡಿಗೆ ಸ್ಪೆಷಲ್ ರುಚಿ" ಮನಃಪೂರ್ವಕವಾಗಿ ಹೊಗಳುತ್ತಿದ್ದಳು. ಚಿಕ್ಕಮ್ಮ, ಮಾಯಾಳ ಬೇಕು ಬೇಡಗಳ ಕಡೆ ಗಮನ ಹರಿಸುತ್ತಿದ್ದಳು.

"ನೀವು ದೊಡ್ಡೋರು, ನಿಮ್ಮ ಹತ್ರ ಹೆಲ್ಪ್ ಮಾಡಿಸಿ ಕೊಳ್ತಿದೀನಲ್ಲ ಅಂತ ಸಂಕೋಚವಾಗ್ತಿದೆ" ಎನ್ನುತ್ತಿದ್ದಳು.

"ಸಂಕೋಚ ಪಟ್ಕೋಬೇಡ ಮಾಯಾ.... ಸಮಯ ಅಂದ್ರೆ ಒಬ್ಬರಿಗೊಬ್ಬರು ಮಾಡಲೇ ಬೇಕು.... ನಮಗೆ ಬೇಕಾದಾಗ ನೀನು ಮಾಡದೇ ಇರ್ತೀಯಾ?" ಎಂದು ಕೇಳುತ್ತಿದ್ದಳು.

ಸೋದರತ್ತೆ ದಾಕ್ಷಾಯಿಣಿ ಸ್ನಾನ, ಅಲಂಕಾರ, ತಲೆ ಬಾಚುವುದು ಇತ್ಯಾದಿಗಳನ್ನು ಬೇಸರವಿಲ್ಲದೇ ಮಾಡುತ್ತಿದ್ದಳು. "ಅತ್ತೇ, ನಿಮ್ಮ ಕೆಲಸವೇ ನಿಮಗೆ ಬೇಕಾದಷ್ಟಿರುತ್ತೆ.... ನನ್ನ ಕೆಲಸವೂ ಸೇರಿಕೊಳ್ತಲ್ಲ...." ಎಂದರೆ, ಸುಮ್ಮನೇ ನಕ್ಕು ಬಿಡುತ್ತಿದ್ದಳು. "ನನಗೆ, ನೀನೂ ಮಗಳಿದ್ದ ಹಾಗೇ" ಎನ್ನುತ್ತಿದ್ದಳು.

ಅನುರಾಧಾ ಓದಲು ವಾರಪತ್ರಿಕೆಗಳನ್ನು, ಕತೆ ಪುಸ್ತಕಗಳನ್ನು ತಂದು ಕೊಡುತ್ತಿದ್ದಳು. ದೀಪಾ, ದಿವ್ಯಾ, ತಮ್ಮ ಓದು ಬರಹದ ನಡುವೆ ಬಿಡುವಿದ್ದಾಗ, ಕೇರಂ, ಕಾರ್ಡ್ಸ್‌ಗಳನ್ನು ಆಡಲು ಮುಂದಾಗುತ್ತಿದ್ದರು. ಜೋಕ್ಸ್‌ಗಳನ್ನು ಹೇಳಿ ನಗಿಸುತ್ತಿದ್ದರು. ಗೌತಮ ಎಲ್ಲವನ್ನೂ ವಿಸ್ಮಯದಿಂದ ಗಮನಿಸುತ್ತಿದ್ದ.

"ನನ್ನ ಬಗ್ಗೆ ನಿನಗೆ ಯೋಚಿಸುಕ್ಕೆ ಸಮಯವೇ ಇಲ್ಲ" ರೇಗಿಸುತ್ತಿದ್ದ.

"ದಿನ ಕಳೆಯೋದೇ ಗೊತ್ತಾಗ್ತಿಲ್ಲ.... ಮನೇಲಿ ಬೋರ್ ಅಂತ ಅನ್ನಿಸ್ಲೇ ಇಲ್ಲ. ಮಮ್ಮೀಗೆ ನನ್ನ ಮೇಲೆ ಕೋಪ....ನಾನು ಅಲ್ಲಿ ಹೋಗಿ ಇರ್ಲಿಲ್ಲ ಅಂತ." ಅವನ ಭುಜಕ್ಕೆ ತಲೆಯಾನಿಸಿ ಹೇಳಿದಳು.

"ಪೂರ್ತಿ ಸರಿ ಹೋಗಿದೆ ಅಂತ ಸರ್ಟಿಫಿಕೇಟ್ ಸಿಗಲಿ. ಎಲ್ಲಾ

ಸರಿ ಹೋದ್ಮೇಲೆ ಅಲ್ಲಿ ಎಷ್ಟು ದಿನಗಳು ಬೇಕಾದ್ರೂ ಇದ್ದು ಬಾ....." ಆತ್ಮೀಯತೆಯಿಂದ ಹೇಳುತ್ತಿದ್ದ.

"ಒಬ್ಬರಾದರೂ, ಒಂದು ದಿನವಾದರೂ ಬೇಸರಗೊಳ್ಳಲಿಲ್ಲ. ಅಸಹ್ಯಿಸಿ ಕೊಳ್ಳಲಿಲ್ಲ. ನನಗೆ ತುಂಬಾ ಆಶ್ಚರ್ಯ ಆಗುತ್ತೆ ಗೌತಮ್...."

"ಹೌದು, ಇವರೆಲ್ಲಾ ತುಂಬಾ ಒಳ್ಳೆಯವರು.... ಈ ರೀತಿ ಒಳ್ಳೆಯ ಗುಣ ಇಲ್ಲದೇ ಇದ್ದಿದ್ರೆ ನನ್ನನ್ನು ಈ ಮಟ್ಟಕ್ಕೆ ಬೆಳೆಸುಕ್ಕೆ ಆಗ್ತಿತ್ತಾ.... ನಾನೂ ಈ ಮನೆಯವನೇ ಅಂತ ಅನ್ನಿಸಿದ್ದು ಇವರಿಂದಲೇ.... ಇಲ್ಲದಿದ್ದರೆ ಪರಕೀಯ ನಾಗಿ ಬಿಡುತ್ತಿದ್ದೆ. ನಾನು ಅನಾಥ ಎಂಬ ಭಾವನೆ ಒಂದು ದಿನವೂ ನನಗೆ ಬರಲಿಲ್ಲ. ಅಜ್ಜಿ ಹಾಲು ಕುಡಿಸಿ, ಸ್ನಾನ ಮಾಡಿಸಿ, ತಟ್ಟಿ ತಟ್ಟಿ ಮಲಗಿಸುತ್ತಿದ್ದಳಂತೆ. ಚಿಕ್ಕಮ್ಮ ತೊಟ್ಟಿಲು ತೂಗಿ ಜೋಗುಳ ಹಾಡಿ ಮುದ್ದು ಮಾಡುತ್ತಿದ್ದರಂತೆ. ದಾಕ್ಷಾಯಿಣಿ ಅತ್ತೆ ತುತ್ತು ಕಲೆಸಿ, ತನ್ನ ಮಕ್ಕಳಿಗೆ ತಿನ್ನಿಸುವಂತೆ, ನನಗೆ ತಿನ್ನಿಸುತ್ತಿದ್ದರಂತೆ.... ಅನೂ ಚಿಕ್ಕಮ್ಮ ಪಾಠ ಹೇಳಿಕೊಡುತ್ತಿದ್ದಳು. ಹೋಂ ವರ್ಕ್ ಮಾಡಿಸುತ್ತಿದ್ದಳು. ನನಗೆ ಅದೆಲ್ಲ ನೆನಪಿನಲ್ಲಿದೆ. ಇನ್ನು ಆ ದೀಪಾ, ದಿವ್ಯಾ ನನಗೆ ಸ್ವಂತ ತಂಗಿಯರಂತೆ. ನನಗೆ ತಾಯಿ ಇಲ್ಲ. ಅವರು ತಂದೆಯನ್ನು ಕಳೆದುಕೊಂಡಿದಾರೆ... ಒಂದು ದಿನವೂ ನಾನು ಬೇರೆಯವನು ಅನ್ನುವಂತೆ ಮಾತನ್ನಾಡಿಲ್ಲ.... ಈಗ ಈ ಮಟ್ಟಕ್ಕೆ ನಾನು ಬರಲು ಇವರುಗಳ ಪರಿಶ್ರಮವೇ ಕಾರಣ. ತಾತಾ ಎಷ್ಟು ಮುದ್ದಿಸುತ್ತಿದ್ದರು ಗೊತ್ತಾ.... ನಾನು ಅವರನ್ನೇ ಅಪ್ಪಾ ಅಂತ ಕರೆಯುತ್ತಿದ್ದೆನಂತೆ....."

"ಒಂದು ವೇಳೆ ನಿಮ್ಮ ಸ್ವಂತ ತಂದೆ ಬಂದು ಕರೆದ್ರೆ... ಏನ್ಮಾಡ್ತೀಯಾ?"

"ಉತ್ತರ ನಿನಗೇ ಗೊತ್ತಿದೆ ಮಾಯಾ, ಮಗುವಾಗಿದ್ದಾಗ ಬಿಟ್ಟು ಹೋದವರಿಗೆ, ಈಗ ನನ್ನ ಮೇಲೆ ಯಾವ ಆಧಿಕಾರವೂ ಇಲ್ಲ. ನಾನು ನಾನೇ.... ನನ್ನ ಮೇಲೆ ಬೇರೆ ಯಾರಿಗೂ ಅಧಿಕಾರವಿಲ್ಲ....."

"ನನಗೆ? ನನಗೂ ನಿಮ್ಮ ಮೇಲೆ ಅಧಿಕಾರವಿಲ್ವಾ?"

"ನನಗೆ ನಿನ್ನ ಮೇಲೆ, ನಿನಗೆ ನನ್ನ ಮೇಲೆ ಸಂಪೂರ್ಣ ಅಧಿಕಾರವಿದೆ. ನೀನು ಪೂರ್ತಿ ಹುಶಾರಾದ ಮೇಲೆ, ಗಣಪತಿಯ ದೇವಸ್ಥಾನಕ್ಕೆ ಕರ್‍ಕೊಂಡು ಬರ್ತೀನಿ ಅಂತ ಅಜ್ಜಿ ಹರಕೆ ಹೊತ್ತಿದ್ದಳಂತೆ.... ನಾಳೆ ಹೋಗಿ ಬರಬೇಕು. ಇವತ್ತು ಜ್ಞಾಪಿಸಿದಳು...."

"ನಿಮ್ಮ ಅಜ್ಜಿ ಹಾಗೂ, ಎಲ್ಲರೂ ಒಳ್ಳೆಯವರು...."

"ಸಂತೇಲಿ ಎಂಥಾ ಮಜ ಇರುತ್ತೆ ಅಂತ ನಿಂಗೆ ಈಗ ಅರ್ಥವಾಯಿತು ಅಲ್ವಾ?"

"ಸಾರೀ ಗೌತಮ್.... ಯಾರಿಗೂ ನಾನು ಹೀಗಂದೆ ಅಂತ ಹೇಳ್ಬೇಡಿ...."

"ಎಲ್ರಿಗೂ ಈಗಾಗ್ಲೇ ಗೊತ್ತು" ಎಂದುಕೊಳ್ಳುತ್ತಾ ಅವಳ ಕೆನ್ನೆಯನ್ನು ತಟ್ಟಿದ...

******

ಈ ಮೊದಲೇ ಮಾತನಾಡಿಕೊಂಡಿದ್ದಂತೆ, ಇಬ್ಬರ ಮನೆಯವರೂ, ಒಂದು ಮಿನಿ ಬಸ್ಸನ್ನು ಗೊತ್ತು ಮಾಡಿಕೊಂಡು ಸಿಟಿಯಿಂದ ಇಪ್ಪತ್ತು ಕಿಲೋ ಮೀಟರ್ ದೂರದಲ್ಲಿರುವ ಗಣಪತಿಯ ದೇವಸ್ಥಾನಕ್ಕೆ ಹೊರಟರು. ಮಾಯಾಳ ತಂಗಿ ಲಯಾ, ಕೂಡಾ ರಜಾ ಹಾಕಿ ಬಂದಿದ್ದಳು. ದೇವಕಿಗೆ ಇಷ್ಟವಿರದಿದ್ದರೂ, ಇಲ್ಲ ಎನ್ನಲಾಗದೇ ಹೊರಟಿದ್ದಳು.

"ಇಲ್ಲೇ ಹತ್ತಿರದ ಯಾವುದಾದರೂ ಗಣಪತಿ ಗುಡೀಲಿ, ಅರ್ಚನೆ ಮಾಡಿಸಿ ತೀರ್ಥ ಪ್ರಸಾದ ತಗೊಂಡಿದ್ರಾಗ್ತಿತ್ತು...." ಗೊಣಗಿದಳು.

"ಅದು ಅವರ ನಂಬಿಕೆ. ಅವರ ಹಾರೈಕೆ.... ನಿನಗೇನು ತೊಂದರೆ?"

"ಅಷ್ಟು ದೂರ ಹೋಗಬೇಕಲ್ರೀ...."

"ದೇವರಿಗೋಸ್ಕರ ಇಷ್ಟೂ ಕಷ್ಟ ಪಡುಕ್ಕಾಗುಲ್ವಾ?.... ಮಾಯಾಳ ಗಂಡಾಂತ್ಥರ ತಪ್ಪಿದೆ. ಇದಕ್ಕಿಂತ ದೊಡ್ಡ ವರ ಬೇಕಾ?.... ಲಯಾನೇ ಸುಮ್ಮ ನಿದಾಳೆ, ನಿಂದೇನು?"

ಮಹಾ ಗಣಪತಿಗೆ ಪಂಚಾಮೃತ ಅಭಿಷೇಕವಾಗಿತ್ತು. ಅಲಂಕಾರ, ಅರ್ಚನೆ, ಮಂಗಳಾರತಿ, ನೈವೇದ್ಯ ಎಲ್ಲವೂ ನೆರವೇರಿತ್ತು. ಈಡುಗಾಯಿಯನ್ನು ಒಡೆದರು. ತೀರ್ಥ ಪ್ರಸಾದವನ್ನು ಸ್ವೀಕರಿಸಿ, ಸಮೀಪದಲ್ಲೇ ಇದ್ದ ಆಶ್ರಮಕ್ಕೆ ಬಂದರು. ಅಲ್ಲಿ ಸುತ್ತುತ್ತಿದ್ದಾಗ ಅಜ್ಜಿಯನ್ನು ಒಬ್ಬ ವ್ಯಕ್ತಿ ಸಮೀಪಿಸಿದ. ಅಜ್ಜಿ ಗುರುತಿಸಿದಳು. ಮುಖದ ನರಗಳು ಬಿಗಿಗೊಂಡವು.

"ಚೆನ್ನಾಗಿದೀರಾ ಅತ್ತೇ...." ವಿಚಾರಿಸಿದ. ಉಳಿದವರೂ ಅಲ್ಲಿಯೇ ನಿಂತರು.... "ನಾನು ಯಾರು ಅಂತ ನಿಮಗ್ಯಾರಿಗೂ ಪರಿಚಯವಿಲ್ಲ. ನಾನು ಗೌತಮನ ತಂದೆ...." ಅವನು ತನ್ನ ಪರಿಚಯವನ್ನು ಹೇಳಿಕೊಂಡ. ಗೌತಮ ಉಸಿರು ಬಿಗಿ ಹಿಡಿದ. ಹುಬ್ಬುಗಳು ಹತ್ತಿರವಾದವು. ಮಾಯಾ ಕೆಳದನಿಯಲ್ಲಿ ಉಸುರಿದಳು.

"ನೆನ್ನೆ ರಾತ್ರಿ ನೆನೆಸಿಕೊಂಡೆವು....ಈಗ ಎದುರಿಗೇ ಪ್ರತ್ಯಕ್ಷ...."

"ನೀನು ಸುಮ್ನಿರು ಮಾಯಾ....ನಂಗೂ ಈತಂಗೂ ಯಾವ ಸಂಬಂಧವೂ ಇಲ್ಲ...."

"ಇವನು ಗೌತಮ.... ಇವಳು ನವವಧು... ಏನಮ್ಮಾ ಹೇಗಿದೀಯಾ?"

ಮಾಯಾ ಗೌತಮನ ಹಿಂದೆ ನಿಂತಳು...." ಮದುವೆಗೆ ಕರೆದಿದ್ದರೂ ನಾನು ಬಂದಿರಲಿಲ್ಲ. ದೇವರು ನಿಮ್ಮಿಬ್ಬರನ್ನು ಚೆನ್ನಾಗಿಟ್ಟಿರಲಿ...." ಆಶೀರ್ವದಿಸಿದ.

"ನಾವು ದೇವತಾ ಕಾರ್ಯಕ್ಕೆ ಬಂದಿದ್ದೆವು. ಹೊರಟಿದೀವಿ.... ಎಲ್ಲರೂ ಬನ್ನಿ...." ಅಜ್ಜಿ ನುಡಿದು ಮುಂದೆ ನಡೆದಳು.

"ಒಂದ್ನಿಮಿಷ ಅತ್ತೆ....ಮೊದಲ ಬಾರಿಗೆ ಮಗ ಸೊಸೇನ ಒಟ್ಟಿಗೆ ನೋಡ್ತಿದೀನಿ....ಏನಾದ್ರೂ ಉಡುಗೊರೇನ ಕೊಡಲೇ ಬೇಕು..." ಎನ್ನುತ್ತಾ ಜೇಬಿಗೆ ಕೈ ಹಾಕಿ ಪರ್ಸನ್ನು ಹೊರ ತೆಗೆದು, ಐನೂರರ ಎರಡು ನೋಟುಗಳನ್ನು ಅವನ ಕಡೆ ನೀಡಿದ.

"ಇದೆಲ್ಲಾ ಏನೂ ಬೇಡ...." ಗೌತಮ ಒರಟಾಗಿ ನುಡಿದ.

"ನೀನಾದ್ರೂ ಹೇಳಮ್ಮಾ.... ಹಿರಿಯೋರು ಕೊಡೋದನ್ನು ಬೇಡ ಅನ್ಬಾರ್ದು. ಇವನಿಗೆ ನನ್ನ ಮೇಲೆ ಕೋಪ..."

"ಕೋಪ ಗೀಪ ಏನೂ ಇಲ್ಲ.... ನನಗೂ ನಿಮಗೂ ಏನು ಸಂಬಂಧ? ನಡೀ ಮಾಯಾ ಹೊತ್ತಾಗುತ್ತೆ" ಅವನ ಮನಸ್ಸು ಕೆಟ್ಟು ಹೋಗಿತ್ತು.

"ನಿಂತ್ಕೋ ಗೌತಮ.... ನಾನು ತಂದೆಯ ಕರ್ತವ್ಯವನ್ನು ನಿಭಾಯಿಸಲಿಲ್ಲ ನಿಜ.... ಆಗ ನನ್ನ ಪರಿಸ್ಥಿತಿ ಹಾಗಿತ್ತು. ಕೈಯಲ್ಲಿ ಕಾಸಿರಲಿಲ್ಲ. ಹೆಂಡ್ತೀನ ಕಳ್ಕೊಂಡ ದುಃಖ.... ನಿನ್ನನ್ನು ಹೇಗೆ ಬೆಳೆಸ್ತಿದ್ದೆ? ಹೇಗೆ ನೋಡ್ಕೋತಿದ್ದೆ? ಮಗುವನ್ನು ಇವರಿಗೆ ಒಪ್ಪಿಸಿ ದೂರ ಹೊರಟು ಹೋದೆ.... ಹೊರೆಯಾಗಿರಲು ಮನಸ್ಸು ಒಪ್ಪಲಿಲ್ಲ. ಎಷ್ಟೋ ವರ್ಷಗಳ ನಂತರದ ಹೋರಾಟದ ನಂತರ ಈಗ ಅನುಕೂಲದಿಂದಿ ಇದೀನಿ. ಹೆಂಡತಿ ಇದಾಳೆ. ಇಬ್ಬರು ಗಂಡು ಮಕ್ಕಳಿದಾರೆ.... ಒಮ್ಮೊಮ್ಮೆ ನಿನ್ನ ನೆನಪು ಕಾಡುತ್ತಿದ್ದುದು ನಿಜ. ಆದರೆ ಬರುವ ಮುಖ ಇರಲಿಲ್ಲ. ನಾನಾಗಿಯೇ ಎಲ್ಲರನ್ನೂ ತೊರೆದು ಹೋಗಿದ್ದೆ. ದೇವರು ಈಗ ಆ ಪರದೆಯನ್ನೂ ಸರಿಸಿದ್ದಾನೆ. ಇದನ್ನು ತೆಗೋ ಬೇಡ ಎನ್ನಬೇಡ. ನಿರ್ಭಾಗ್ಯ ಅಪ್ಪನ ಕೋರಿಕೆ ಅಂತ ಅಂದ್ಕೋ...." ಮನನೊಂದು ಹೇಳಿದ.

"ತಗೋ ಗೌತಮ... ಹಿರಿಯೋರ ಮನಸ್ಸನ್ನು ನೋಯಿಸಬಾರದು" ಅಜ್ಜಿ ಹೇಳಿತು. ಗೌತಮ ತೆಗೆದುಕೊಂಡು ಮಾಯಾಳ ಕೈಗೆ ಕೊಟ್ಟ.

"ಒಬ್ಬನೇ ಬಂದಿದೀಯೋ.... ಅಥವಾ ಹೆಂಡ್ತಿ, ಮಕ್ಕಳೂ ಬಂದಿದಾರೋ...."

"ಬಂದಿದಾರೆ.... ಒಳಗೆಲ್ಲೋ ಇದಾರೆ.... ನಾನು ನಿಮ್ಮನ್ನು ನೋಡಿ ಇಲ್ಲಿಗೆ ಬಂದೆ.... ನಾನಿನ್ನು ಬರ್ತೀನಿ...." ಕೈ ಮುಗಿದು ಅಲ್ಲಿ ನಿಲ್ಲದೇ ಸರಿದು ಎಲ್ಲೋ ಮಾಯವಾದ.... ಎಲ್ಲರೂ ಮೂಕರಂತೆ ನಿಂತಿದ್ದರು. ಅವನು ಮತ್ತೆ ಬರುಲ್ಲ ಎಂದು ಅರಿವಾಗಿತ್ತು.

"ಗೌತಮ್.... ನಂಗೆ ಭಯ ಆಗುತ್ತೆ.... ಇದ್ದಕ್ಕಿದ್ದ ಹಾಗೆ ಇವರ್‍ಯಾಕೆ ಪ್ರತ್ಯಕ್ಷ ಆದರು?"

"ನಂಗೂ ಗೊತ್ತಿಲ್ಲ.... ಇನ್ಮೇಲೆ ಇವರನ್ನು ನೆನೆಸ್ಕೋ ಬೇಡ... ಮತ್ತೆ ಪ್ರತ್ಯಕ್ಷ ಆದಾರು.... ನನಗೆ ಈ ಸಂಬಂಧದ ಅಗತ್ಯವಿಲ್ಲ.... ಅಲ್ಲಿ ಏನೇನೋ ಮಾರುವ ಸಾಮಾನುಗಳಿವೆ, ಅಲ್ಲಿ ಹೋಗೋಣ ನಡೀ...." ಲಯಾ, ದೀಪಾ, ದಿವ್ಯಾ ಇವರೊಂದಿಗೆ ಅಂಗಡಿಯಿದ್ದ ಕಡೆಗೆ ನಡೆದರು..

"ಇದೇನ್ರೀ ಹೊಸಾ ನೆಂಟಸ್ಥಿಕೆ? ಆತ ಮಾಯಾಳಿಗೆ ಮಾವನಾಗ ಬೇಕಂತೆ! ಮತ್ತೆ ಬಂದು ಪೀಡಿಸಿದರೆ?"

"ಆಗಲೇ ಬರದಿದ್ದೋರು ಈತ.... ಈಗ ಬಂದು ಏನು ಮಾಡ್ತಾರೆ....?"

"ಅವನು ಮತ್ತೆ ಬರುಲ್ಲ ಬಿಡಿ...." ಅಂಬುಜ ನುಡಿದಳು. "ಮದುವೇಲಿ ಹಸೆ ಮೇಲೆ ಕೂತ್ಕೋ ಬಾ ಅಂತ ಕರೆದಿದ್ದು, ಬಂದಿರಲಿಲ್ಲ. ಆ ಪಾಪ ಪ್ರಜ್ಞೆ ಕಾಡ್ತಿತ್ತು ಅಂತ ಕಾಣುತ್ತೆ. ಅದನ್ನು ಚುಕ್ತಾಗೊಳಿಸಿದ್ದಾನೆ...." ಇಬ್ಬರೂ ಮೌನವಾಗಿ ಅಜ್ಜಿಯನ್ನೇ ನೋಡಿದರು.

"ಅಲ್ಯಾಕೆ ಅಷ್ಟು ಜನ ಸೇರಿದಾರೆ?" ಮಾಯಾ ಪ್ರಶ್ನಿಸಿದಳು.

"ಅದು ಸಂತೆ.... ಪ್ರತೀವಾರ ಮಾರುವವರು ಸೇರ್ತಾರೆ.... ನೋಡೋ ಆಸೇನಾ?" ನಗುತ್ತಾ ಪ್ರಶ್ನಿಸಿದ.

"ಬೇಡಪ್ಪಾ.... ಸಂತೇಲಿ ಯಾರ್‍ಯಾರೋ ಸಿಕ್ಕಿ ಬಿಡ್ತಾರೆ.... ನಂಗೆ ಭಯ ಆಗುತ್ತೆ...." ಕಣ್ಣುಗಳನ್ನು ಅಗಲಿಸಿದಳು.

"ನಮ್ಮ ಮನೆಯ ಸಂತೇಲಿ ಹಾಗೇನೇ.... ಕಳೆದು ಹೋದವರು ಸಿಗ್ತಾರೆ... ನಿಮ್ಮ ಹಾಗೆ...." ದೀಪಾ ನುಡಿದಾಗ, ಮಾಯಾ ಸಿಟ್ಟುಗೊಳ್ಳಲಿಲ್ಲ. ಅವನ ಕಡೆ ನೋಡಿದಳು.

"ಸಂತೆಯಲ್ಲಿ ಯಾವ ಗುಟ್ಟೂ ಉಳಿಯುವುದಿಲ್ಲ...." ಎಂದ ಅವನೂ ನಗುತ್ತಾ.

******

ನೆರಳು

"ಅತ್ಗೇ ಯಾರು ಈ ಹುಡ್ಗೀ... ಮನೆಯೋರ ಥರಾನೇ ಮನೇಲೆಲ್ಲಾ ಓಡಾಡ್ಕೊಂಡಿದಾಳೆ...." ಶೌರಿ ತನ್ನ ಅತ್ತಿಗೆಯನ್ನು ಪ್ರಶ್ನಿಸಿದ. ಬಂದಾಗಿನಿಂದ ಅವಳನ್ನೇ ಗಮನಿಸುತ್ತಿದ್ದ. ಈ ಮುಂಚೆ ತಾನೆಂದೂ ಇವಳನ್ನು ಕಂಡಿಲ್ಲ. ತನ್ನ ನೆಂಟರ ಪೈಕಿಯಲ್ಲ. ಅತ್ತಿಗೆಯ ಸ್ನೇಹಿತೆ ಇದ್ದರೂ ಇರಬಹುದು ಎಂದು ವಿಚಾರಿಸಿದ.

"ನಿನಗೋಸ್ಕರ ನಿಮ್ಮಮ್ಮ ಗೊತ್ತು ಮಾಡಿಟ್ಟುಕೊಂಡಿರೋ ಹುಡ್ಗಿ.... ಚೆನ್ನಾಗಿದ್ದಾಳೆ ಅಲ್ವಾ?" ಅತ್ತಿಗೆಯೂ ತಮಾಷೆ ಮಾಡಿದ್ದಳು.

"ನಿಜವಾಗಿಯೂ? ಈಗ ಹೇಳ್ತಿದೀರಲ್ಲ ಅತ್ಗೇ... ನಾನು ಅವಳನ್ನು ಸರಿಯಾಗಿ ನೋಡ್ಬೇಕಲ್ಲ, ಸ್ವಲ್ಪ ಕರೀತೀರಾ?"

"ತಮಾಷೆ ಮಾಡ್ದೆ. ಅವಳು ನಮ್ಮ ಮನೆಯವಳೂ ಅಲ್ಲ. ನಮ್ಮ ಜನವೂ ಅಲ್ಲ... ಏನೋ ಕಷ್ಟದಲ್ಲಿದ್ದಾಳೆ, ಇಲ್ಲಿ ಇದಾಳೆ, ನಮಗ್ಯಾಕೆ ಬಿಡು."

"ಏನತ್ಗೇ ಹೀಗಂತೀರಾ? ನಮಗ್ಯಾಕೆ ಅಂತಂದ್ರೆ.... ನಮ್ಮ ಮನೇಲಿ ದ್ದಾಳೆ ಅಂದ್ಮೇಲೆ ತಿಳ್ಕೊಳ್ಳೋದು ತಪ್ಪಾ? ಏನಂತೆ ಅವಳ ಕಷ್ಟ?"

"ಅದೊಂದು ಪುರಾಣ. ನಿಧಾನವಾಗಿ ಹೇಳ್ತೀನಿ, ಅತ್ತೆ ಕರೀತಿದಾರೆ ನಾನು ಹೋಗ್ತೀನಿ" ಅತ್ತಿಗೆ ಹೊರಟು ಹೋಗಿದ್ದಳು. ಇವನು ಆ ಹುಡುಗಿಯ ಚಲನ ವಲನವನ್ನೇ ಗಮನಿಸಿದ.

"ಶೌರೀ... ಸ್ನಾನ ಮಾಡ್ಬಿಟ್ಟು ಬಾರೋ... ತಿಂಡಿ ತಿನ್ನುವಂತೆ" ತಾಯಿ ಎದುರು ನಿಂತು ನುಡಿದಾಗ ಎಚ್ಚೆತ್ತ. ಸೂಟ್‌ಕೇಸನ್ನು ತೆಗೆದು ಟವೆಲ್ಲನ್ನು ಎತ್ತಿಕೊಂಡ. ಸೋಪು ಇತ್ಯಾದಿಗಳನ್ನು ಹಿಡಿದು ಬಚ್ಚಲು ಮನೆಗೆ ಬಂದ. ಹಂಡೆಯಿಂದ ಬಿಸಿನೀರನ್ನು ಬಕೆಟ್ಟಿಗೆ ತೋಡುತ್ತಿದ್ದ ಆ ಹುಡುಗಿ ಇತ್ತ

ತಿರುಗಿದಳು, ಇವನು ಎಚ್ಚೆತ್ತ.

"ಸಾರೀ... ಬಾಗಿಲು ಹಾಕಿರ್ಲಿಲ್ಲ, ಒಳಕ್ಕೆ ಬಂದ್ಬಿಟ್ಟೆ" ಎಂದ.

"ಪರವಾಗಿಲ್ಲ... ನಾನು ಹೋಗ್ತೀನಿ" ಅವಳು ಎಂದಳು.

"ನೀವು ಸ್ನಾನ ಮಾಡೋದಾದ್ರೆ ಮಾಡಿ ನಾನು ಆಮೇಲೆ ಮಾಡ್ತೀನಿ"

"ನನ್ನ ಸ್ನಾನ ಆಯ್ತು..."

"ಮತ್ತೆ ಈ ಬಿಸ್ನೀರು...?"

"ಅದು ನಿಮಗೆ...."

"ನನಗಾ? ನೀವ್ಯಾಕೆ ತೊಂದ್ರೆ ತಗೊಂಡ್ರಿ?...ನಾನೇ ತೋಡಿಕೊಳ್ತಿದ್ದೆ..."

"ಪರವಾಗಿಲ್ಲ... ನೀರು ತುಂಬಾ ಬಿಸಿಯಾಗಿದೆ...."

ಶೌರೀ ಮುಕ್ತವಾಗಿ ನಕ್ಕ. "ನಂಗೂ ಕೆಲಸ ಬರುತ್ತೇರೀ.... ಎನಿವೇ... ಥ್ಯಾಂಕ್ಯೂ... ನಿಮ್ಮ ಹೆಸರು ಏನೂಂತ ಕೇಳಬಹುದಾ?"

"ಮಲ್ಲಿಕಾ..." ಮಲ್ಲಿಗೆ ಹೂವಿನ ಪರಿಮಳ ಪಸರಿಸಿದಂತಾಗಿತ್ತು.

"ಮಲ್ಲಿಕಾ.... ನೈಸ್ ನೇಮ್...." ಎಂದು ತನ್ನಲ್ಲೇ ಹೇಳಿಕೊಂಡ. ಅವಳು ಹೊರಕ್ಕೆ ಹೊರಟು ಹೋಗಿದ್ದಳು. ಇವನು ಬಾಗಿಲನ್ನು ಭದ್ರ ಪಡಿಸಿಕೊಂಡು, ನಿಧಾನವಾಗಿ ಮೈಗೆ ಹಿತವಾಗುವಂತೆ ಸ್ನಾನ ಮಾಡಿದ. ಅವಳ ಬಗ್ಗೆಯೇ ಯೋಚಿಸಿದ.

ಆ ದಿನವೆಲ್ಲಾ ಮಲ್ಲಿಕಾಳ ಬಗ್ಗೆ ತಿಳಿದುಕೊಳ್ಳಬೇಕೆಂಬ ಕುತೂಹಲ ಮತ್ತೆ ಮತ್ತೆ ಮೂಡುತ್ತಿತ್ತು. ಆದರೆ ಒಂದೆರಡು ದಿನಗಳು ಕಳೆದರೂ ಅದು ಸಾಧ್ಯವಾಗಲಿಲ್ಲ. ರಜ ಕಳೆದು ಊರಿಗೆ ವಾಪಸ್ಸು ಹೋಗುವ ಮೊದಲು ಅವಳ ಬಗ್ಗೆ ತಿಳಿದುಕೊಳ್ಳಬೇಕು. ಅತ್ತಿಗೆ, ಅಮ್ಮ ತನಗಾಗಿ ನೋಡಿಟ್ಟಿರುವ ಹುಡುಗಿ ಎಂದರು. ಅದು ನಿಜವಿರಬಹುದೇ? ಒಂದು ವೇಳೆ ನಿಜವಲ್ಲದಿದ್ದರೂ, ತಾನು ಅದನ್ನು ನಿಜ ಮಾಡಿದರೆ? ಯಾಕಾಗಬಾರದು?" ಆ ಅನಿಸಿಕೆಯೇ ಅವನಲ್ಲಿ ರೋಮಾಂಚನವನ್ನುಂಟು ಮಾಡಿತು. ಅವಳ ಮೇಲಿನ ಕುತೂಹಲ ಹೆಚ್ಚಾಗಿತ್ತು. ಅವಳನ್ನು ಹೆಚ್ಚು ಹೆಚ್ಚು ಗಮನಿಸಲಾರಂಭಿಸಿದ.

****

ಇವನು ಏಳುವ ಹೊತ್ತಿಗೇ, ಮನೆಯವರೆಲ್ಲಾ ಎದ್ದು ಎಲ್ಲಿಗೋ ಹೊರಡುವ ಸಿದ್ಧತೆಯಲ್ಲಿದ್ದರು. ತಾಯಿ; ಬಿಸಿ ಬಿಸಿ ಕಾಫಿಯನ್ನು ಕೈಗಿತ್ತು ಹೇಳಿದಳು. "ನೀನೂ ಬೇಗ ಸಿದ್ಧನಾಗು ಶೌರೀ, ನಮ್ಮ ಪರಿಚಯಸ್ಥರ ಮನೆಯಲ್ಲಿ ಮದುವೆ ಎಲ್ಲರೂ ಹೊರಟಿದ್ದೀವಿ"

"ಇಲ್ಲಮ್ಮ, ನಾನು ಬರುಲ್ಲ. ಸಣ್ಣಗೆ ತಲೆ ನೋಯ್ತಿದೆ. ಮನೇಲೇ

ರೆಸ್ಟ್ ತಗೋತೀನಿ."

"ತಲೆ ನೋವಾ?... ಯಾಕೋ ಏನಾಯ್ತೋ? ಏನೋ ಓದ್ತಾ, ನಿದ್ದೆಗೆಟ್ಟಿದೀಯೇನೋ..."

"ಇರಬಹುದು... ತಿಂಡಿ ಏನಿದೆ ಹೇಳು, ತಿಂಡಿ ತಿಂದು ಮಾತ್ರೆ ನುಂಗಿ, ಸ್ವಲ್ಪ ಹೊತ್ತು ಮಲಗ್ತೀನಿ. ಸರಿ ಹೋಗುತ್ತೆ."

"ಸರಿ, ಹಾಗಾದ್ರೆ ನಾನೂ ಹೋಗುಲ್ಲ... ನಿಮ್ಮಪ್ಪಂಗೆ ಹೇಳಿ ಬಿಡ್ತೀನಿ."

"ಬೇಡಮ್ಮ, ನೀನ್ಯಾಕೆ ತಪ್ಪಿಸಿಕೊಳ್ತೀಯಾ, ಬರೀ ತಲೆ ನೋವು ಅಷ್ಟೇ. ಅಲ್ಲದೇ ನನಗೆ ಒಬ್ಬನೇ ಇದ್ದು ಅಭ್ಯಾಸವಿದೆ, ನೀನು ಹೋಗ್ಬಾ."

"ಸರಿ... ಬೇಗ ಬಂದು ಬಿಡ್ತೀನಿ. ಅನ್ನ ಒಂದನ್ನ ಮಾಡಿಬಿಟ್ಟೇ ಹೋಗ್ತೀನಿ. ಹಾಲನ್ನ, ಉಪ್ಪಿನಕಾಯಿ, ಬಡಿಸ್ಕೊಂಡು ತಿನ್ನು. ಬರೀ ಹೊಟ್ಟೇಲಿರ್ಬೇಡ."

"ಸರಿಯಮ್ಮಾ..." ಮಗ ಮುಗುಳ್ನಗುತ್ತಾ ನುಡಿದ.

"ನಿಂಗೆ ಎಷ್ಟು ದಿನ ರಜ ಇದೆ ಹೇಳು. ನಿನಗೊಂದು ಹೆಣ್ಣನ್ನು ಗೊತ್ತು ಮಾಡಿಯೇ ಕಳಿಸ್ತೀನಿ ಈ ಬಾರಿ..." ತಟ್ಟನೆ ಅವನಿಗೆ ನೆನಪಾದವಳು ಮಲ್ಲಿಕಾನೇ...

"ಯಾರು...? ಮಲ್ಲಿಕಾನಾ...?" ಕೇಳಿಯೇ ಬಿಟ್ಟ.

"ಥೂ.... ಅವಳಲ್ಲ...ನಮ್ಮ ಜಾತಿ ಅಲ್ಲ; ಮತ ಅಲ್ಲ...." ಕೆಳದನಿಯಲ್ಲಿ ಹೇಳಿದವಳ ಕಡೆ ನೋಡಿ ಅವನು ಮುಖ ಸಿಂಡರಿಸಿದ.

"ಥೂ... ಯಾಕೆ? ನಂಗೇನು ಗೊತ್ತು, ಅವಳು ಯಾವ ಜಾತಿ ಅಂತ?"

"ಯಾವುದೋ ಬೇರೆ ಜಾತಿ, ಅಲ್ಲದೇ ಏನೋ ಗೋಳಿನ ಕಥೆ ಬೇರೆ. ಅದೆಲ್ಲಾ ನಿಂಗ್ಯಾಕೆ? ಕೆಲವೇ ದಿನಗಳಲ್ಲಿ ಹೊರಟು ಹೋಗ್ತಾಳೆ. ನಾನು ಒಂದೆರಡು ಕಡೆ ವಿಚಾರಿಸಿದೀನಿ. ನಿನಗೆ ತಕ್ಕ ಹೆಣ್ಣುಗಳಿವೆ. ಬಂದ್ಮೇಲೆ ಮಾತಾಡ್ತೀನಿ. ಈಗ ಹೊತ್ತಾಯ್ತು..." ಕುಕ್ಕರನ್ನು ಸ್ಟವ್ ಮೇಲಿಟ್ಟು ತಾನು ಹೊರಡಲು ಸಿದ್ಧಳಾದಳು. ಮಲ್ಲಿಕಾಳೂ ಮದುವೆ ಮನೆಗೆ ಹೊರಟಿರಬಹುದೇ ಅಂತಂದುಕೊಂಡು, ವೆರಾಂಡಾಕ್ಕೆ ಬಂದು ಈಸಿಛೇರ್ ಮೇಲೆ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡ. ಮತ್ತೆ ಸಣ್ಣದಾಗಿ ನಿದ್ದೆ ಹತ್ತಿತು.

"ಮಲ್ಲಿಕಾ ಜ್ವಾಪಾನ. ಬಾಗಿಲನ್ನು ಹಾಕ್ಕೋ... ಬಟ್ಟೆಗಳನ್ನೆಲ್ಲ ನೀಟಾಗಿ ಮಡಿಸಿಡು." ತಾಯಿಯ ಧ್ವನಿ ಕೇಳಿಸಿತು. ಹೃದಯ ತೆರೆಯಿತು. ಮಲ್ಲಿಕಾ ಅವರೊಂದಿಗೆ ಹೋಗುತ್ತಿಲ್ಲ.... ಮನೇಲೇ ಇರ್ತಾಳೆ. ತಾನೇ ಮಾತನಾಡಿ,

ಅವಳ ಬಗ್ಗೆ ತಿಳಿದುಕೊಳ್ಳಬಹುದೆಂದುಕೊಂಡ.

ಅವಳು ಮುಂಬಾಗಿಲನ್ನು ಭದ್ರ ಪಡಿಸಿ, ಒಳಗೆ ನಡೆದಳು. ಇವನು ಅವಳು ಇದ್ದಲ್ಲಿಗೆ ಬಂದ. ಅವಳು ಕತ್ತನ್ನೆತ್ತಿದಳು. ಸ್ವಲ್ಪ ಮಟ್ಟಿಗೆ ಗಾಬರಿಗೊಂಡಂತೆ ಅನ್ನಿಸಿತು. ಮನದೊಳಗೇ ನಕ್ಕೊಂಡ. "ಓ... ಎಲ್ರೂ ಹೊರಟುಹೋದ್ರಾ? ನೀವು ಹೋಗ್ಲಿಲ್ವಾ?" ಏನೂ ಅರಿಯದವನಂತೆ ಕೇಳಿದ.

"ಇಲ್ಲ" ಎಂದಷ್ಟೇ ನುಡಿದಳು.

"ನಂಗೆ ಸ್ವಲ್ಪ ಬಿಸಿ ಬಿಸಿ ಕಾಫಿ ಬೇಕಾಗಿತ್ತು. ಮಾಡಿಕೊಡ್ತೀರಾ?" ಕೇಳಿದ.

"ನಾನಾ?" ಅಚ್ಚರಿಯಿಂದ ಕೇಳಿದಳು.

"ಹೂಂ... ನೀವೇ.... ಯಾಕೆ? ಮಾಡುಕ್ಕೆ ಬರುಲ್ವಾ?"

"ಬರುತ್ತೆ... ಆದರೆ ನಾನು ಅಡಿಗೆ ಮನೆಗೆ ಹೋಗುವಂತಿಲ್ಲ.."

"ಹೌದಾ! ಯಾಕೆ?"

"ನಾನು ಬೇರೆ ಜಾತಿಯವಳು....ಹೋಗೋ ಹಂಗಿಲ್ಲ."

"ಪರವಾಗಿಲ್ಲ, ನಾನು ಹೇಳ್ತಿದೀನಿ, ಹೋಗಿ ಮಾಡ್ಕೊಂಡು ಬನ್ನಿ. ಸಿಕ್ಕಾಬಟ್ಟೆ ತಲೆ ನೋಯ್ತಿದೆ.." ತಲೆಯನ್ನು ಕೈಗಳಿಂದ ಹಿಡಿದುಕೊಂಡ.

"ನಿಮ್ಮ ತಾಯಿಗೆ ಗೊತ್ತಾದ್ರೆ ಏನಂದ್ಕೊಳ್ತಾರೆ?"

"ಅವರಿಗೆ ಹೇಗೆ ಗೊತ್ತಾಗುತ್ತೆ? ನಾನಂತೂ ಹೇಳುಲ್ಲ"

"ಬೇಡ ಸಾರ್... ದುಡ್ಡು ಕೊಡಿ. ಹೋಟೆಲ್ನಿಂದ ತಂದು ಕೊಡ್ತೀನಿ..."

"ಬೇಡ ಬಿಡಿ... ನನಗೆ ಹೋಟೆಲ್ಲಿನ ಕಾಫಿ ಬೇಡ. ಮನೆ ಕಾಫಿ ಬೇಕಾಗಿತ್ತು. ನಾನೇ ಮಾಡ್ಕೋತೀನಿ ಬಿಡಿ" ಎನ್ನುತ್ತಾ ಅಡಿಗೆ ಮನೆಯ ಕಡೆಗೆ ಬಂದ. ಅವಳು ಪೆಚ್ಚಾಗಿದ್ದಳು. ಅವನ ಹಿಂದೆಯೇ ಬಂದಳು. ಅವನು ಬಿಸಿ ಮಾಡಿದ ಕಾಫಿ ಪಾತ್ರೆಯನ್ನು ಬರಿಗೈಯಲ್ಲಿ ಮುಟ್ಟಿದ. ಬಿಸಿ ತಗುಲಿತು. ಪಾತ್ರೆಯನ್ನು ಬಿಟ್ಟ. ಪಾತ್ರೆ ಕೆಳಕ್ಕೆ ಬಿದ್ದು, ಕಾಫಿ ಎಲ್ಲಾ ಚೆಲ್ಲಿತು. ಅವಳು ಸರ‍್ರನೆ ಒಳಕ್ಕೆ ಬಂದಳು.

"ಕಾಫಿಯೆಲ್ಲಾ ಚೆಲ್ಲಿ ಹೋಯ್ತು." ಪೆಚ್ಚಾಗಿ ನಕ್ಕು ನುಡಿದ.

"ಇಕ್ಕಳದಿಂದ ಬಿಸಿ ಪಾತ್ರೇನ ಹಿಡಿದುಕೊಂಡಿದ್ರೆ ಹೀಗಾಗ್ತಿರ್ಲಿಲ್ಲ."

"ಹೌದು, ಗೊತ್ತಾಗ್ಲಿಲ್ಲ. ನಂಗೆ ಕಾಫಿಯ ಲಭ್ಯವಿಲ್ಲ. ಹಾಗೇ ಮಾತ್ರೆಯನ್ನು ನುಂಗಿ ಮಲಗ್ತೀನಿ ಬಿಡಿ..." ಅವನು ಆಚೆಗೆ ಬಂದ. ಅಲ್ಲಿದ್ದ ಸೋಫಾದ ಮೇಲೆ ಒರಗಿದ. ಮಲ್ಲಿಕಾ ಅಡಿಗೆ ಮನೆಯಲ್ಲಿಯೇ ಇರುವಳೆಂಬ ಅರಿವಾದರೂ ಏನೂ ತಿಳಿಯದವನಂತೆ ಸುಮ್ಮನಿದ್ದ.

ಮಲ್ಲಿಕಾ, ಮತ್ತೊಮ್ಮೆ ಬಿಸಿ ನೀರನ್ನಿಟ್ಟು, ಕಾಫಿ ಮಾಡಲು ಪ್ರಾರಂಭಿಸಿದಳು. ನೆಲದ ಮೇಲೆ ಚೆಲ್ಲಿದ್ದ ಕಾಫಿಯನ್ನು ಚೆನ್ನಾಗಿ ಒರೆಸಿ, ನೆಲವನ್ನು ಶುಭ್ರಗೊಳಿಸಿದಳು. ಘಮ ಘಮ ಎನ್ನುವ ಬಿಸಿ ಬಿಸಿ ಕಾಫಿಯನ್ನು ತಯಾರಿಸಿ, ಕಪ್‌ಗೆ ಹಾಕಿಕೊಂಡು ತಂದಳು. "ನಿದ್ದೆ ಬಂದಿದೆಯಾ?" ಮೆಲುದನಿಯಲ್ಲಿ ಕೇಳಿದಳು. ಅವನು ಕಣ್ಣು ಬಿಟ್ಟು, ಎದುರಿಗೆ ನಿಂತಿದ್ದವಳನ್ನು ಕಂಡು ಸರಿಯಾಗಿ ಕುಳಿತ.

"ಕಾಫೀ.... ತಗೊಳ್ಳಿ" ಕಪ್‌ನ್ನು ಅವನ ಮುಂದೆ ಹಿಡಿದಳು.

"ಹೋಟೆಲ್ನಿಂದಾ ತಂದ್ರಾ?" ಕೈಗೆತ್ತಿಕೊಂಡ.

"ಇಲ್ಲ, ನಾನೇ ಮಾಡ್ದೆ!"

"ಏನು? ನೀವು ಮಾಡಿದ್ರಾ? ಅದೇನು?"

"ನೀವು ತಲೆ ನೋವು ಅಂತ ಒದ್ದಾಡ್ತಿದ್ರೀ...."

"ಅಮ್ಮಂಗೆ ಗೊತ್ತಾದ್ರೆ?"

"ನೀವು ಹೇಳುಲ್ಲ ಅಂತ ಅಂದ್ಕೊಂಡಿದೀನಿ....ಅಥವಾ ನನ್ನನ್ನು ಈ ಮನೆಯಿಂದ ಆಚೆಗೆ ಕಳಿಸ್ಬೇಕು ಅಂತ ಅಂದ್ಕೊಂಡಿದ್ರೆ ಹೇಳಿ...."

"ಛೆ... ಛೆ... ತಮಾಷೆ ಮಾಡ್ದೆ.... ನಾನು ಹೇಳುಲ್ಲ... ನನಗೆ ಈ ಜಾತಿ ಮತ ಇದೆಲ್ಲಾ ಗೊತ್ತಿಲ್ಲ. ನೀವು ತಗೊಳುಲ್ವಾ?"

"ಬೇಡ ಬಿಡಿ."

"ಏನು ಬೇಡ ಬಿಡಿ. ಕಷ್ಟ ಪಟ್ಟು ಮಾಡಿರೋರು ನೀವು...ಇದರಲ್ಲೇ ನೀವೂ ಸ್ವಲ್ಪ ತಗೊಳ್ಳಿ.."

"ಬೇಡ, ಅಲ್ಲಿ ಸ್ವಲ್ಪ ಮಿಕ್ಕಿದೆ...ತರ್ತೀನಿ." ಅವಳು ಒಳಗಿನಿಂದ ಬರುವುದನ್ನೇ ಕಾದ....

"ಕೂತ್ಕೊಳ್ಳಿ...." ಅವಳು ಸಂಕೋಚದಿಂದ ಕುಳಿತಳು. ಅವನು ಕಾಫಿಯನ್ನು ನಿಧಾನವಾಗಿ ಹೀರಿದ. "ಥ್ಯಾಂಕ್ಸ್ ಮಲ್ಲಿಕಾ.... ಕಾಫಿ ತುಂಬಾ ಚೆನ್ನಾಗಿತ್ತು. ತಲೆ ನೋವೂ ಕಡಿಮೆ ಆಯಿತು...ನಿಮ್ದು ಯಾವೂರು?" ಪೀಠಿಕೆ ಹಾಕಿದ.

"ಅರಸೀಕೆರೆ"

"ನಿಜ ಹೇಳ್ತಿದೀರಾ?"

"ಯಾಕೆ? ನಾನ್ಯಾಕೆ ಸುಳ್ಳು ಹೇಳಲಿ?"

"ಓ.ಕೇ... ಓ.ಕೇ... ಸಿಟ್ಯಾಕೆ?.... "ತಮಾಷೆ ಮಾಡ್ದೆ.

ಅವಳು ಉತ್ತರಿಸದೇ ಕಾಫಿ ಕುಡಿದ ಬಟ್ಟಲುಗಳನ್ನೆತ್ತಿಕೊಂಡು ಹಿತ್ತಲಿನ

ಕಡೆ ನಡೆದಳು. ಇವನೂ ಅವಳ ಹಿಂದೆಯೇ ಬಂದ. "ಸಾರೀ.... ಮಲ್ಲಿಕಾ... ನೀವು ಕೋಪ ಮಾಡ್ಕೊಂಡಂತಿದೆ.... ತಮಾಷೆ ಮಾಡ್ಬಾರ್ದು ಅಂತ ಅರ್ಥ ಆಯ್ತು..."

"ಪರವಾಗಿಲ್ಲ ಬಿಡಿ." ಎಂದು ಹೇಳಿ, ಬಟ್ಟಲುಗಳನ್ನು ತೊಳೆದಿಟ್ಟು ಅವಳು ಅಲ್ಲಿಯೇ ಹಿತ್ತಿಲ ಬಾಗಿಲ ಬಳಿ ನಿಂತಳು. ಅವನು ಬಾಗಿಲ ಬಳಿಯ ಮೆಟ್ಟಿಲ ಮೇಲೆ ಕುಳಿತ.

"ಓ.ಕೇ... ಈಗ ಹೇಳಿ, ಅರಸೀಕೆರೆ ನಿಮ್ಮೂರು... ಅಲ್ಲಿ ಯಾರ ಮನೆಯವರು? ನಿಮ್ಮ ತಂದೆ ಹೆಸರೇನು?...ಏನು ಓದಿದೀರಿ?"

"ನನ್ನ ವಿಷಯ ಯಾಕೆ? ಕತೆ ಬರೀತೀರಾ?" ಪ್ರಶ್ನಿಸಿದಳು.

ಮುಕ್ತವಾಗಿ ನಕ್ಕ. "ಯೋಚಿಸ್ತೀನಿ, ಕತೆ ಬರೀತೀನೋ....ಸಿನಿಮಾ ತೆಗೀತೀನೋ... ನೀವಂತೂ ನಾಯಕಿ... ಅದಿರಲಿ ಯಾಕೆ ನಂಗೆ ಹೇಳುಕ್ಕೆ ಇಷ್ಟವಿಲ್ವಾ?"

"ಇಷ್ಟ ಪಟ್ಕೊಂಡು ಹೇಳೋಕ್ಕೆ ಏನೂ ಇಲ್ಲ. ನನ್ನ ಬಗ್ಗೆ ನಾನೇ ಹೇಳಿ ಕೊಳ್ಳೊಕ್ಕೆ ಬೇಸರ ಆಗುತ್ತೆ....ನಂಗೆ ಒಂದು ಹೆಲ್ಪ್ ಮಾಡ್ತೀರಾ?"

"ಹೆಲ್ಪಾ? ನಾನಾ? ಹೇಳಿ ನೋಡೋಣ..."

"ನೀವು ಸಿಟೀಲಿ ಇದ್ದೀರಿ. ಅಲ್ಲಿ ನಂಗೊಂದು ಕೆಲಸ ಕೊಡಿಸ್ತೀರಾ?"

"ಯಾಕೆ? ಇಲ್ಲಿ ನಮ್ಮ ಮನೇಲಿರೋಕ್ಕೆ ಕಷ್ಟ ಆಗ್ತಿದೆಯಾ?"

"ಕಷ್ಟ ಏನೂ ಇಲ್ಲ. ಆದರೂ ನಾನು ಇಲ್ಲಿ ಹೊರಗಿನವಳು. ಒಂಥರಾ ಹಂಗಿನಲ್ಲಿದ್ದೀನಿ ಅನ್ನೋ ಭಾವನೆ ಬರುತ್ತೆ.... ನನಗೂ ಡಿಗ್ರಿ ಆಗ್ದಿದೆ... ಚಿಕ್ಕ ಕೆಲಸ ಆದರೂ ಪರವಾಗಿಲ್ಲ...ಹೆಂಗಸರ ಹಾಸ್ಟೆಲ್‌ನಲ್ಲಿದ್ದುಕೊಂಡು ಬದುಕ್ತೀನಿ..."

"ನೋಡೋಣ ಪ್ರಯತ್ನ ಪಡ್ತೀನಿ....ನನಗೆ ವಿವರಗಳು ಬೇಕು."

"ಥ್ಯಾಂಕ್ಸ್ ಸಾರ್.... ಈಗ ಸಮಾಧಾನವಾಯಿತು."

"ಥ್ಯಾಂಕ್ಸ್ ಈಗಲೇ ಯಾಕೆ? ಅಷ್ಟು ಒಳ್ಳೆಯ ಕಾಫಿ ಮಾಡಿಕೊಟ್ಟಿದೀರ. ನಾನು ಥ್ಯಾಂಕ್ಸ್ ಹೇಳ್ಬೇಕು. ಒಂದು ಸಣ್ಣ ಹೆಲ್ಪ್ ಮಾಡ್ತೀರಾ....? ಚೆಲ್ಲಿರೋ ಕಾಫೀನೆಲ್ಲಾ ಚೆನ್ನಾಗಿ ಒರೆಸ್ಬಿಡಿ ಪ್ಲೀಸ್..."

"ಆಗ್ಲೇ ಒರೆಸ್ಬಿಟ್ಟೆ.... ಬಿಸಿ ನೀರು ತೋಡಿ ಕೊಡ್ತೀನಿ... ಸ್ನಾನ ಮಾಡ್ತೀರಾ?"

"ಇನ್ನೂ ಸ್ವಲ್ಪ ಹೊತ್ತು ಬಿಟ್ಟು ಮಾಡ್ತೀನಿ. ನೀವು ನಿಮ್ಮ ಬಗ್ಗೆ ಹೇಳಲೇ ಇಲ್ಲ." ನಕ್ಕ

"ಅಂತೂ ನನ್ನ ಬಗ್ಗೆ ತಿಳಿದುಕೊಳ್ಳಲೇ ಬೇಕು ಅನ್ನೋ ಹಠ ನಿಮಗೆ.

ತಿಳಿದ್ಮೇಲೆ ನಿಮಗೆ ನನ್ನ ಬಗ್ಗೆ ತಿರಸ್ಕಾರ ಹುಟ್ಟುತ್ತೆ. ಅದು ನನಗೆ ಇಷ್ಟವಿಲ್ಲ."

"ಛೆ.. ಅಷ್ಟು ಕೆಡುಕ ನಾನಲ್ಲ. ಹೇಳಿ" ಅವಳು ಅಳುತ್ತಿರುವಳೆಂದು ತಿಳಿದು ಪೆಚ್ಚಾದ. "ಪ್ಲೀಸ್ ಅಳ್ಬೇಡಿ. ಯಾರಾದ್ರೂ ಕಂಡ್ರೆ ಏನಂದುಕೊಂಡಾರು? ಒಳಗೆ ಬನ್ನಿ. ಒಳಗೆ ಕುಳಿತು ಮಾತನಾಡೋಣ." ಇಬ್ಬರೂ ಒಳಕ್ಕೆ ಬಂದರು.

"ಈಗ ತಲೆ ನೋವು ಹೇಗಿದೆ?" ಪ್ರಶ್ನಿಸಿದಳು.

"ನನ್ನ ತಲೆ ನೋವು ಕಡಿಮೆ ಆಯ್ತು....ನಿಮಗೆ ತಲೆ ನೋವು ಕೊಟ್ಟೆ ಅಂತ ಕಾಣ್ಸುತ್ತೆ, ಪೆಚ್ಚಾಗಿದೀರಿ."

"ತಲೆ ನೋವು ಏನೂ ಇಲ್ಲ. ನನ್ನ ಬಗ್ಗೆ ಯಾರಾದ್ರೂ ಕೇಳಿದ್ರೆ, ನಾನು ಸ್ವಲ್ಪ ಪೆಚ್ಚಾಗಿ ಬಿಡ್ತೀನಿ."

"ಸರಿ ಬಿಡಿ ಹಾಗಾದ್ರೆ ನಾನೆಂದೂ ಕೇಳೋದೇ ಇಲ್ಲ. ನಿಮಗೇ ಹೇಳಬೇಕು ಅಂತ ಅನ್ನಿಸಿದಾಗ ಹೇಳಿ ಪರವಾಗಿಲ್ಲ. ಬಟ್ ಒನ್ ಥಿಂಗ್.... ನೀವು ನನಗೆ ಇಷ್ಟವಾಗಿದೀರಿ..." ಮೆಚ್ಚುಗೆಯ ನೋಟವನ್ನು ಬೀರಿದ.

"ಇಷ್ಟು ಬೇಗ? ಕೇವಲ ಎರಡು ದಿನಗಳಿಂದ ನೀವು ನನ್ನನ್ನು ನೋಡ್ತಿರಬಹುದು ಅಷ್ಟೇ."

"ಇಷ್ಟ ಆಗುಕ್ಕೆ ಎಷ್ಟು ಸಮಯ ಬೇಕು ಮಲ್ಲಿಕಾ.... ನಿಮ್ಮನ್ನು ಕಂಡ ಕ್ಷಣದಿಂದಲೇ ನೀವು ನನಗೆ ಮೆಚ್ಚುಗೆಯಾಗಿದೀರಿ." ಅವನ ಹೊಗಳಿಕೆಯಿಂದ ಅವಳ ಮುಖ ಅರಳಿತ್ತು. ನಾಚಿಕೆಯಿಂದ ಕೆಂಪಾಗಿತ್ತು. ನಿಧಾನವಾಗಿ ನುಡಿದಳು.

"ನನ್ನ ಕತೆ ತಿಳಿದ ದಿನ, ಬಹುಶಃ ನಿಮ್ಮ ಭಾವನೆ ಬದಲಾಗಬಹುದು."

"ಇಲ್ಲ ಮಲ್ಲಿಕಾ, ನಾನು ಅಂಥೋನು ಅಂತ ಅನ್ಸುತ್ತಾ ನಿಮಗೆ.... ಹೋಗಲಿ ಬಿಡಿ ನಾನು ಸ್ನಾನ ಮಾಡಿ ಬರ್ತೀನಿ. ನಿಮ್ಮದು ತಿಂಡಿ ಆಗಿಲ್ಲದಿದ್ದರೆ, ಇಬ್ಬರೂ ಒಟ್ಟಿಗೆ ಕುಳಿತು ತಿಂಡಿ ತಿನ್ನೋಣ..." ಅವನು ಟವೆಲ್ಲನ್ನು ಹಿಡಿದು ಬಚ್ಚಲ ಮನೆಯ ಕಡೆಗೆ ನಡೆದ. ಅವಳು ನಿಲುವುಗನ್ನಡಿಯ ಮುಂದೆ ನಿಂತು ತನ್ನನ್ನೇ ತಾನು ನೋಡಿಕೊಂಡಳು. ಮುಖದ ಮೇಲೆ ಮಂದಹಾಸ ಮಿನುಗಿದರೂ, ಮನದ ಒಳಗೆ ಕಪ್ಪು ನೆರಳು ಹರಡಿತ್ತು. ಅವನ ಬೇಗ ಬೇಗ ಸ್ನಾನವನ್ನೂ ಮುಗಿಸಿ ಬಂದ. ಮಲ್ಲಿಕಾ ಹಾಟ್ ಬಾಕ್ಸ್‌ನಲ್ಲಿದ್ದ ಉಪ್ಪಿಟ್ಟನ್ನು ಎರಡು ಸಣ್ಣ ತಟ್ಟೆಗಳಿಗೆ ಬಡಿಸಿದಳು. ಇಬ್ಬರೂ ಕುಳಿತು ಮೌನವಾಗಿ ತಿಂಡಿಯನ್ನೂ ತಿಂದರು. ಏನನ್ನಾದರೂ ಕೇಳುವ ಕಾತುರ ಅವನಲ್ಲಿ ಇದ್ದರೂ ಕೇಳಲಿಲ್ಲ; ಹೇಳುವ ತವಕ ಅವಳಲ್ಲಿದ್ದರೂ ತಡೆದುಕೊಂಡಳು.

ತಿಂಡಿಯ ನಂತರ ಅವನು ದಿನ ಪತ್ರಿಕೆಯನ್ನು ಹಿಡಿದು ಕುಳಿತ.

ಅವಳು ಬಟ್ಟೆಗಳನ್ನು ಒಗೆಯಲೆಂದು ಹಿತ್ತಲಿಗೆ ನಡೆದಳು. 'ಟಪ್ ಟಪ್' ಎಂಬ ಬಟ್ಟೆಯನ್ನು ಎತ್ತಿ ಒಗೆಯುವ ಸದ್ದು ಕೇಳಿದಾಗ, ಎದ್ದು ಹಿತ್ತಲಿಗೆ ಬಂದ. "ಅರೇ... ಏನ್ಮಾಡ್ತಿದೀರ ನೀವು? ನನ್ನ ಬಟ್ಟೆಗಳನ್ನೆಲ್ಲ ಯಾಕೆ ಒಗೆಯುತ್ತಿದ್ದೀರಿ.... ಬಿಡಿ..." ಎಂದ.

"ದಿನಾ ಎಲ್ಲರ ಬಟ್ಟೆಗಳನ್ನು ನಾನೇ ಒಗೆಯೋದು...." ಎಂದಳು.

"ಮತ್ತೆ ಕೆಂಪಮ್ಮ?....ಅವಳ್ಯಾಕೆ ಒಗೆಯೋಲ್ಲ?"

"ಒಂದು ವಾರದಿಂದ ಅವಳು ಬಂದಿಲ್ಲ. ಖಾಯಿಲೆ ಮಲಗಿದಾಳೆ.... ನನಗೆ ಈ ಕೆಲಸಗಳೇನೂ ಹೊಸದಲ್ಲ, ಕಷ್ಟವೂ ಅಲ್ಲ." ಮತ್ತೆ ಬಟ್ಟೆಯನ್ನು ಕುಸುಕಿದಳು.

"ನನ್ನ ಬಟ್ಟೇನ ನಾನೇ ಒಕ್ಕೋತೀನಿ ಬಿಡಿ..." ಅವಳ ಕೈಯಿಂದ ಬಟ್ಟೆ ಗಳನ್ನು ಕಿತ್ತು ಹಾಕಿದ. "ಕೈ ತೊಳ್ಕೊಂಡು ಒಳಕ್ಕೆ ಬನ್ನಿ. ಇಲ್ಲಿ ನೀವು ಇರೋದು ಮನೆ ಕೆಲಸಾನ ಮಾಡುಕಲ್ಲ. ನೀವು ಇಲ್ಲಿ ಅತಿಥಿ ಅಂತ ಅತ್ತಿಗೆ ಹೇಳಿದಾರೆ" ಎನ್ನುತ್ತಾ ಅವಳ ಕೈ ಹಿಡಿದು ಒಳಕ್ಕೆ ಕರೆತಂದ.

"ಊಟ, ಆಶ್ರಯ, ಎಲ್ಲದರ ಋಣ ತೀರಿಸೋಕೆ ಅಂತ ಕೆಲಸ ಮಾಡ್ತೀನಿ... ಕೆಲಸದವಳು ಬರ್ತಿಲ್ಲ ಅಂತ ತಿಳಿದೂ ಸುಮ್ಮನೆ ಹೇಗೆ ನೋಡಿಕೊಂಡಿರಲಿ?"

"ಅದೆಲ್ಲ ನಂಗೊತ್ತಿಲ್ಲ. ನನ್ನ ಬಟ್ಟೆಗಳನ್ನು ಒಗೆಯಕೂಡದು ಅಷ್ಟೇ...."

"ಅಕ್ಕ ಕೇಳಿದ್ರೆ ಏನ್ಮಾಡಲಿ?"

"ನಾನು ಬೇಡಾಂತ ಹೇಳಿದೆ ಅಂತ ಹೇಳಿ..." ಎಂದು ಒರಟಾಗಿ ನುಡಿದು ಹೊರಬಾಗಿಲಿಗೆ ಬಂದು ನಿಂತ. ಅವನ ಬೆನ್ನನ್ನೇ ನೋಡುತ್ತಾ, ಅವಳು ಅವನ ಹಿಂದೆ ಬಂದು ನಿಂತಳು.

"ನೀವ್ಯಾಕೆ, ನನ್ನ ಮೇಲೆ ಇಷ್ಟು ಕನಿಕರ ತೋರುತ್ತಿದೀರೋ ನಂಗೆ ಅರ್ಥವಾಗ್ತಿಲ್ಲ." ಅವನು ಹಿಂದಕ್ಕೆ ತಿರುಗಿದ.... ನಾನು ಯಾರಿಗೂ ಬೇಡ ವಾದವಳು.."

"ಹಾಗ್ಯಾಕೆ ಅಂದ್ಕೋತೀರಿ? ನನಗೆ ನೀವು ಬೇಕು" ಎಂದ. ಅವಳ ಬಳಿಗೆ ಸಾರಿದ. ಅವಳ ಕೈ ಹಿಡಿದ. ಅವಳು ಕೊಸರಿಕೊಂಡು ಹಿಂದಕ್ಕೆ ಸರಿದಳು.

"ಹೆದರಬೇಡಿ ಮಲ್ಲಿಕಾ....ಈಗ ಮನೇಲಿರುವುದು ನಾವಿಬ್ಬರೇ...ಆದರೆ ಅದರ ದುರುಪಯೋಗ ಪಡಿಸಿಕೊಳ್ಳುವಷ್ಟು ಕೆಳಮಟ್ಟದವನಲ್ಲ. ಹೋಗಿ ಬೇರೆ ಏನಾದರೂ ಕೆಲಸ ಮಾಡಿ..... ನನ್ನ ಎದುರಿಗೆ ಇರಲು ಭಯ ಎನಿಸಿದರೆ...."

"ಇಲ್ಲ, ನನಗೆ ಭಯ ಏನೂ ಇಲ್ಲ. ಆದರೆ ಮಾಡುಕ್ಕೆ ಕೆಲಸ ಏನು ಇದೆಯೋ ಗೊತ್ತಿಲ್ಲ.... ಟಿ.ವಿ ನೋಡ್ತೀನಿ.... ಹಾಕ್ತೀರಾ?" ಎನ್ನುತ್ತಾ ಕೆಳಗೆ ನೆಲದ ಮೇಲೆ ಕುಳಿತಳು.

"ಸರಿ ನೋಡೋರಂತೆ.... ಆದರೆ ಕೆಳಗೆ ಕೂತ್ಕೋಬೇಡಿ.... ಮೇಲೆ ಸೋಫಾ ಮೇಲೆ ಕೂತ್ಕೊಳ್ಳಿ..."

"ಬೇಡ ಸಾರ್.... ಇದೇ ಅಭ್ಯಾಸ ಆಗಿದೆ...."

"ಸಾರ್ ಗೀರ್ ಎಲ್ಲಾ ಬೇಡ.... ಶೌರೀ ಅಂತ ಕರೀರಿ.... ಅಥವಾ ಸೂರ್ಯ ಅಂತ ಕರೀರಿ.... ನಂಗೆ ಬೇಸರ ಏನಿಲ್ಲ..."

"ನಂಗೆ ಮುಜುಗರ ಆಗುತ್ತೆ.... ಎಷ್ಟಾಗಲೀ ನೀವು ಈ ಮನೆಯ ಯಜಮಾನರ ಮಗ...."

"ಯಜಮಾನರ ಮಗ ಆದ ಮಾತ್ರಕ್ಕೆ ನಂಗೇನು ಎರಡು ಕೊಂಬು ಗಳಿವೆಯಾ.... ನಾನೂ ನಿಮ್ಮ ಹಾಗೇ ಮನುಷ್ಯನೇ..."

"ಆದರೆ..."

"ಆದರೇ ಗೀದರೆ ಏನೂ ಇಲ್ಲ... ಇನ್ನು ಮುಂದೆ ನಾವಿಬ್ಬರೂ ಫ್ರೆಂಡ್ಸ್. ನನಗೆ ಇಂಥದ್ದೆಲ್ಲಾ ಸರಿ ಹೋಗುಲ್ಲ..."

"ಬೇಡ ಸಾರ್...ನನಗೆ ಇಷ್ಟೆಲ್ಲಾ ಮರ್ಯಾದೆ ತೋರಿಸ್ಬೇಡಿ...ನಂಗೆ ಇದೆಲ್ಲಾ ಅರ್ಥವಾಗುಲ್ಲ. ನೀವು ರಜದ ಮೇಲೆ ಬಂದಿರೋರು.... ಎರಡು ದಿನ ಇದ್ದು ನಿಮ್ಮ ಪಾಡಿಗೆ ನೀವು ಹೊರಟು ಹೋಗ್ತೀರಿ.... ಆಮೇಲೆ ನನ್ನ ಗತಿ?.... ನಿಮ್ಮ ಮನೆಯವರು ನಮ್ಮಿಬ್ಬರನ್ನು ತಪ್ಪು ತಿಳ್ಕೋತಾರೆ. ನನ್ನ ಪಾಡು ನನಗಿರಲಿ.... ನಿಮ್ಮ ಪಾಡಿಗೆ ನೀವು ಇದ್ದು ವಾಪಸ್ಸು ಹೋಗಿ."

"ಸರಿ, ಈಗ ಮನೇಲಿ ನನ್ನ ಹೊರತು ಬೇರೆ ಯಾರೂ ಇಲ್ವಲ್ಲಾ...ಈಗ ನನ್ನ ಮಾತಿಗೆ ಬೆಲೆ ಕೊಟ್ಟು ಮೇಲೆ ಕೂತ್ಕೊಳ್ಳಿ....ಆಮೇಲೆ ನೋಡೋಣ." ಅವಳು ಅನುಮಾನಿಸುತ್ತಾ ಸೋಫಾದ ಮೇಲೆ ಕುಳಿತಳು. ಅವನು ಟಿ.ವಿಯನ್ನು ಆನ್ ಮಾಡಿದ. ಅವಳ ಕೈಗೆ ರಿಮೋಟ್ ಕೊಟ್ಟ, "ನಿಮಗೆ ಯಾವ ಛಾನಲ್ ಬೇಕೋ ಹಾಕ್ಕೊಳ್ಳಿ" ಎಂದ. ಅವಳು ಅನುಮಾನಿಸುತ್ತಾ ತನಗೆ ಬೇಕಾದ ಛಾನೆಲ್‌ನ ಬಟನ್ ಒತ್ತಿದಳು. ಟಿ.ವಿ. ವೀಕ್ಷಿಸುವುದರಲ್ಲೇ ಮಗ್ನಳಾದಳು. ದಿನಪತ್ರಿಕೆಯನ್ನು ಕೈಯಲ್ಲಿ ಹಿಡಿದು, ಆಗಾಗ್ಗೆ ಅವಳ ಕಡೆ ನೋಡುತ್ತಿದ್ದ.

****

ಮುಂದಿನ ಮೂರು ನಾಲ್ಕು ದಿನಗಳಲ್ಲಿ ಅವನು ಅವಳ ಮೇಲಿನ ಆಸಕ್ತಿಯನ್ನು ಹೆಚ್ಚಿಸಿಕೊಂಡಿದ್ದ. ಅದರ ಅನುಭವ ಅವಳಿಗೂ ಆಗಿತ್ತು.

ಅವನು ಬಹಳ ಒಳ್ಳೆಯವನು ಎಂದಷ್ಟೇ ಯೋಚಿಸಿದಳು. ಅದಕ್ಕಿಂತ ಮುಂದೆ ಹೋಗಲು ಅವಳು ಹಿಂದೆಗೆದಳು. ಇದರ ಬಗ್ಗೆ ಸ್ವಲ್ಪ ಅನುಮಾನ ಬಂದುದು ಅತ್ತಿಗೆ ಮಾಧುರಿಗೆ. ಗಂಡು ಹುಡುಗ ಬೇರೆ ಊರಿನಲ್ಲಿ ಕೆಲಸದಲ್ಲಿದ್ದಾನೆ. ಅಂದವಾಗಿರುವ ಹುಡುಗಿಯ ಬಗ್ಗೆ ಆಕರ್ಷಿತಗೊಂಡಿದಾನೆ ಎಂದು ಭಾವಿಸಿದಳು.

ಊರಿಗೆ ಹೊರಡುವ ಹಿಂದಿನ ದಿನ, ಮಲ್ಲಿಕಾ ಒಬ್ಬಳೇ ಇದ್ದಾಗ ಅವಳಿಗೆ ಮಾತ್ರ ಕೇಳಿಸುವಂತೆ ಹೇಳಿದ್ದ, "ನಾನು ನಿಮ್ಮ ಹತ್ರ ಸ್ವಲ್ಪ ಮಾತಾಡ್ಬೇಕು. ಗುಡ್ಡದ ಬಳಿ ಇರುವ ಗುಡಿಯ ಹತ್ತಿರಕ್ಕೆ ಬನ್ನಿ" ಎಂದು ಹೇಳಿ ತಾನು ಮುಂದಾಗಿ ಹೋಗಿ ಅವಳಿಗಾಗಿ ಕಾಯುತ್ತಾ ಕುಳಿತ. ಅವಳು ಬರುವಷ್ಟರಲ್ಲಿ ಸಂಜೆ ಇಳಿಮುಖವಾಗುತ್ತಿತ್ತು. ಅವಳು ಬರುವುದಿಲ್ಲವೇನೋ ಅಂತಂದು ಕೊಳ್ಳುವಷ್ಟರಲ್ಲಿ ಅವಳನ್ನು ಕಂಡ. ಅವಳು ತನಗಾಗಿ ಬಂದಳು ಎಂಬ ಅನುಭವದಿಂದ ಹಿಗ್ಗಿದ. ಮೆಲ್ಲನೆ ಸರಿದು ಅವಳ ಕೈ ಹಿಡಿದು ತನ್ನ ಬಳಿ ಕೂರಿಸಿಕೊಂಡ.

"ಥ್ಯಾಂಕ್ಸ್ ಮಲ್ಲಿಕಾ, ನೀವು ಬರುವುದಿಲ್ಲವೇನೋ ಅಂತ ಬೇಸರ ವಾಗಿತ್ತು".

"ಇದು ತಪ್ಪಲ್ವಾ ಸಾರ್... ಯಾರಾದ್ರೂ ಕಂಡ್ರೆ ಏನಂದ್ಕೊಳ್ತಾರೆ?"

"ನಾನು ನಿಮ್ಮನ್ನು ಪ್ರೀತಿಸ್ತೀನಿ. ಯಾರು ಏನಾದ್ರೂ ಅಂದ್ಕೊಳ್ಳಲಿ!"

"ನಾನು ಅದಕ್ಕೆ ಯೋಗ್ಯಳಲ್ಲ. ಇದಕ್ಕೆ ನಿಮ್ಮ ಮನೆಯವರು ಖಂಡಿತಾ ಒಪ್ಪಲ್ಲ. ನನಗೆ ಈ ಆಸೆಯನ್ನು ಪಡುವ ಹಕ್ಕೂ ಸಹ ಇಲ್ಲ."

"ಇಲ್ಲ ಏನೇನೋ ಅಂದ್ಕೋಬೇಡಿ. ನಾನು ನಿಮ್ಮನ್ನು ಪ್ರೀತಿಸ್ತಿದೀನಿ. ನಿಮ್ಮನ್ನೇ ಮದುವೆಯಾಗ್ತೀನಿ, ಇದು ಖಂಡಿತಾ" ಅವಳ ಕೈಗಳನ್ನು ಪ್ರೀತಿಯಿಂದ ಒತ್ತಿದ.

ಅದೇ ರಾತ್ರಿ ತಾಯಿ ಮಗನ ಮದುವೆಯ ಪ್ರಸ್ತಾಪವನ್ನೆತ್ತಿದಳು. "ನೋಡು ಸೂರಿ, ಬೇರೆ ಊರ್ನಲ್ಲಿ ಒಂಟಿಯಾಗಿದೀಯ. ಇನ್ನ್ಯಾವಾಗ ಮದುವೆ ಮಾಡ್ಕೋತೀಯ? ನಾನು ನಾಲ್ಕಾರು ಹೆಣ್ಣುಗಳನ್ನು ನೋಡಿದೀನಿ. ನಿನಗೆ ಯಾವುದು ಒಪ್ಪಿಗೆ ಅಂತ ಹೇಳು" ಎನ್ನುತ್ತಾ ತಾನು ತೆಗೆದಿಟ್ಟಿದ್ದ ಹುಡುಗಿಯರ ಫೋಟೋಗಳನ್ನು ತೋರಿಸಿದಳು.

"ನನಗೆ ಮಲ್ಲಿಕಾ ಇಷ್ಟವಾಗಿದಾಳೆ...." ತನ್ನ ಆಸೆಯನ್ನು ಹೇಳಿದ.

"ಏನು? ಅವಳು ನಿನ್ನನ್ನು ಮರಳು ಮಾಡಿದ್ಲಾ! ನಂಗೆ ಗೊತ್ತಿತ್ತು, ಹೀಗೇ ಏನಾದ್ರೂ ಆಗುತ್ತೆ ಅಂತ" ಅಸಮಾಧಾನವನ್ನು ವ್ಯಕ್ತ ಪಡಿಸಿದಳು.

"ಇಲ್ಲಮ್ಮ... ಅವಳಿಗೆ ಏನೂ ತಿಳೀದು... ನನ್ನಾಸೆಯನ್ನು ಹೇಳಿದೆ.... ನಾನು ಅವಳನ್ನೇ ಮದುವೆಯಾಗ್ತೀನಿ. ಇದರಲ್ಲಿ ಅವಳ ತಪ್ಪೇನಿದೆ?"

"ತಪ್ಪು ಅವಳದ್ದಲ್ಲ. ನಾನು ಅವತ್ತೇ ಹೇಳಿದೆ, ಮನೇಲಿ ಬೆಳೆದ ಗಂಡು ಹುಡುಗರಿದಾರೆ. ಆ ಹುಡ್ಗಿ ಇಲ್ಲಿ ಇರೋದು ಬೇಡ ಅಂತ. ನಿಮ್ಮಪ್ಪ ಕೇಳ್ಲಿಲ್ಲ. ಅವಳು ಯಾವ ರೀತಿಯಿಂದಲೂ ಈ ಮನೆಗೆ ತಕ್ಕ ಸೊಸೆಯಾಗಲು ಸಾಧ್ಯವಿಲ್ಲ."

"ಯಾಕಮ್ಮಾ ಹೀಗಂತೀಯಾ? ನೋಡೋಕೆ ಚೆನ್ನಾಗಿದಾಳೆ. ಮನೆ ಕೆಲಸ ಬರುತ್ತೆ, ಇನ್ನೇನು ಬೇಕು ಹೇಳು."

"ಅವಳ ಜಾತಿ ಸರಿ ಇಲ್ಲ. ನಮಗೆ ಸರಿ ಹೋಗುಲ್ಲ."

"ಮತ್ಯಾಕಮ್ಮ ಇವಳನ್ನು ಮನೇಲಿಟ್ಕೊಂಡಿದೀಯ."

"ನನ್ನ ಕರ್ಮ ಅದಕ್ಕೇ.... ನಿನಗೆ ಬೇರೆ ಹೆಣ್ಣನ್ನು ನೋಡ್ತೀವಿ...ನಿನ್ನ ಈ ಆಸೆಯನ್ನು ಮನಸ್ನಿಂದ ತೆಗೆದ್ಹಾಕು...."

"ಆಗುಲ್ಲಮ್ಮ, ನಾನು ಅವಳಿಗೆ ಮಾತು ಕೊಟ್ಟಿದ್ದೀನಿ."

"ಏನಾದ್ರೂ ಮಾಡ್ಕೋ.... ನೀನೇನಾದ್ರೂ ಅವಳನ್ನು ಮದುವೆಯಾದ್ರೆ ನಿಮ್ಮಪ್ಪ ಈ ಮನೆಗೆ ನಿಮ್ಮಿಬ್ಬರನ್ನೂ ಸೇರಿಸುಲ್ಲ."

"ನೀನು ಅಪ್ಪನ ಹತ್ರ ಮಾತಾಡುಕ್ಕೆ ಆಗುಲ್ವಾ? ಅವರ ಕಡೆಯವಳೇ ತಾನೇ ಈ ಮಲ್ಲಿಕಾ...."

"ಆ ಸಂಬಂಧ ಬೇರೆ. ಈ ಸಂಬಂಧ ಬೇರೆ. ಅವಳಿಗೆ ಆಶ್ರಯ ಕೊಟ್ಟಿದ್ದೀವಿ... ಮನೆ ಕೆಲಸ ಮಾಡ್ಕೊಂಡಿತಾ೯ಳೆ... ಊಟ ಬಟ್ಟೆ ನಡೆಯುತ್ತೆ.... ನಿಂಗ್ಯಾಕೆ?"

"ಅಷ್ಟೇನಾ ಅವಳ ಪಾತ್ರ ಇಲ್ಲಿ. ಅವಳನ್ನು ಕೆಲಸಕ್ಕೆ ಹೊರಗಡೆ ಯಾಕೆ ಕಳಿಸಬಾರದು?"

"ಕೆಲಸ ಎಲ್ಲಿ ಸಿಗುತ್ತೆ? ಅಲ್ಲದೇ ಇವಳು ಕೆಲಸಕ್ಕೆ ಹೊರಗೆ ಹೋದರೆ ಕ್ಷೇಮವಾಗಿ ಮನೆಗೆ ಬರ್ತಾಳೆ ಅಂತ ಏನು ಗ್ಯಾರಂಟಿ? ಇವಳ ದೆಸೆಯಿಂದ ಇನ್ನೂ ಏನೇನು ಅನುಭವಿಸಬೇಕಾಗಿದೆಯೋ?"

"ಅಷ್ಟು ಬೇಸರವಾಗಿದ್ರೆ ಮನೆಯಿಂದಾಚೆ ಕಳ್ಸು... ಎಲ್ಲಾದ್ರೂ ಹೋಗ್ಲಿ"

"ನಿಮ್ಮಪ್ಪ ಒಪ್ಪಬೇಕಲ್ಲ."

"ಹಾಗಾದ್ರೆ ಅವಳ ಹಣೇ ಬರಹ ಇಷ್ಟೇ ಅಂತೀಯ. ಬದಲಾಯಿಸುಕ್ಕೆ ಆಗುಲ್ವಾ? ಸರಿಯಾದ ಗಂಡನ್ನು ನೋಡಿ ಮರ್ಯಾದೆಯಾಗಿ ಮದುವೆ ಮಾಡಿ ಕಳಿಸಿ ಅಂತ ಅಪ್ಪಂಗೆ ಹೇಳು"

"ಯಾರು ಮದುವೆಯಾಗ್ತಾರೆ? ಮೂಲವೇ ಸರಿ ಇಲ್ಲ" ತಾಯಿ ಗೊಣಗಿದಳು. ಅತ್ತಿಗೆ ಬಂದಿದ್ದರಿಂದ ಅಲ್ಲಿಗೇ ಮಾತು ನಿಂತಿತ್ತು. ಮಾಧುರಿ ಅರ್ಥಂಬರ್ಥ ಮಾತುಗಳನ್ನು ಕೇಳಿಸಿಕೊಂಡಿದ್ದಳು. ಶೌರಿಯ ಕಡೆ ನೋಡಿ ಮುಗುಳ್ನಕ್ಕಳು.

*****

ಶೌರಿ ಊರಿಗೆ ಹೊರಟು ಹೋಗಿದ್ದ. ಎಲ್ಲಾ ಹಿಂದಿನಂತೆಯೇ ನಡೆಯುತ್ತಿದೆ ಎನ್ನಿಸಿದರೂ, ಮಲ್ಲಿಕಾ ಸ್ವಲ್ಪ ಬದಲಾಗಿದ್ದಾಳೆ ಎನ್ನುವುದನ್ನು ತಾಯಿ ಗಮನಿಸಿದ್ದಳು. 'ಅವಳ ಪಾಡಿಗೆ ಅವಳು ಇದ್ದಳು. ಅವಳ ತಲೆಯಲ್ಲಿ ಏನೇನನ್ನೋ ತುಂಬಿ ಹೋಗಿದ್ದಾನೆ' ಎಂದು ಶೌರಿಯ ಮೇಲೆ ಅಸಮಾಧಾನವಾಗಿತ್ತು.

ಹೌದು, ಶೌರಿ ಹೇಳುವುದು ಸರಿ. ಇವಳನ್ನು ಮನೆಯಲ್ಲಿ ಇಟ್ಟು ಕೊಳ್ಳುವ ಬದಲು ಬೇರೆ ಯಾವುದಾದರೂ ಊರಿನಲ್ಲಿ ಕೆಲಸವನ್ನು ಕೊಡಿಸಿ, ತನ್ನ ಮನೆಯಿಂದ ಕಳಿಸುವದೇ ಸರಿ ಅಂತ ಅಂದುಕೊಂಡು, ಸೊಸೆಯೊಡನೆ ಮಾತನ್ನಾಡಿದಳು.

"ಯಾವುದಾದರೂ ಕೆಲಸ ಕೊಡಿಸುವಂತೆ ನಿನ್ನ ಗಂಡನಿಗೆ ಹೇಳು. ಇನ್ನೂ ಎಷ್ಟು ದಿನ ಇಲ್ಲೇ ಇಟ್ಕೊಂಡಿರುಕ್ಕಾಗುತ್ತೆ ಇವಳನ್ನು?"

"ಯಾಕತ್ತೆ? ಅವಳಿಂದ ಏನಾದರೂ ತಪ್ಪಾಗಿದೆಯಾ?"

"ಪರಿಚಯದವರೆಲ್ಲ ಏನೇನೋ ಕೇಳ್ತಾರೆ.... ಉತ್ತರ ಹೇಳೀ ಹೇಳೀ ನಂಗೂ ಸಾಕಾಗಿದೆ..."

"ಬಂದು ಇನ್ನೂ ಎರಡು ತಿಂಗಳುಗಳಾಗಿದೆ.... ಆದರೆ ನಮಗೆಲ್ಲಾ ತುಂಬಾ ಹೊಂದಿಕೊಂಡಿದಾಳೆ.... ಈ ಮನೆ ಬಿಟ್ಟು ಹೋಗು ಅಂದ್ರೆ ಹೋಗ್ತಾಳಾ?"

"ಹೋಗ್ದೇ ಏನು ಮಾಡ್ತಾಳೆ? ಮೊದಲ್ನಿಂದ ಈ ಮನೇಲೇ ಇದ್ದಳಾ? ಮಗಳಲ್ಲ, ಸೊಸೆಯಲ್ಲ. ಯಾವ ಸಂಬಂಧದ ಮೇಲೆ ಇಲ್ಲಿರ್ಬೇಕು. ಎಲ್ಲಿಗಾದ್ರೂ ಕಳಿಸುವ ಏರ್ಪಾಡನ್ನು ಮಾಡ್ಬೇಕು" ಸೊಸೆಗೆ ಹೇಳಿದಳು.

ಮಾಧುರಿ, ಮಲ್ಲಿಕಾಳ ಬಳಿಗೆ ಬಂದಳು. "ಮಲ್ಲಿಕಾ, ಶೌರಿ ನಿನ್ಹತ್ರ ಏನು ಹೇಳಿದಾನೆ ಹೇಳು...." ಎಂದು ಕೇಳಿದಳು.

"ಏನೂ ಇಲ್ಲ." ಮಲ್ಲಿಕಾ ತಲೆ ತಗ್ಗಿಸಿ ನುಡಿದಳು.

"ಸುಳ್ಳು ಹೇಳ್ಬೇಡ. ನಿಜ ಹೇಳು, ಅವನು ನಿನ್ನನ್ನು ಪ್ರೀತಿಸ್ತಿದಾನೆ ಅಂತ ನಂಗೆ ಗೊತ್ತು. ನಿನ್ಜೊತೆ ಕೆಟ್ಟದಾಗಿ ಏನಾದರೂ ವರ್ತಿಸಿದ್ನಾ?"

"ಇಲ್ಲ ಅಕ್ಕಾ, ಹಾಗ್ಯಾಕೆ ಕೇಳ್ತಿದೀರಿ? ಅವರು ಅಂಥೋರಲ್ಲ."

"ಅತ್ತೆಗೆ ನಿಮ್ಮಿಬ್ಬರ ಮೇಲೆ ಅನುಮಾನ ಬಂದಿದೆ. ನಿನ್ನನ್ನು ಈ ಮನೆಯಿಂದ ಬೇರೆ ಎಲ್ಲಿಗಾದ್ರೂ ಕಳಿಸುವ ವ್ಯವಸ್ಥೆ ಮಾಡ್ತಾರಂತೆ..."

"ಇಲ್ಲಿಂದ ಎಲ್ಲಿಗೆ ಹೋಗ್ಲಿ? ನಿಮ್ಮಗಳನ್ನು ಬಿಟ್ಟು ನನಗೆ ಬೇರೆ ಯಾರಿದಾರೆ?" ಮಲ್ಲಿಕಾ ಅತ್ತಳು.

"ಅಳ್ಬೇಡ ಮಲ್ಲಿಕಾ, ಹಾಗೇನೂ ಆಗದಂತೆ ನಾನು ನೋಡ್ಕೋತೀನಿ. ಆದರೆ ನೀನು ನನಗೆ ನಿಜವನ್ನು ಹೇಳ್ಬೇಕು..."

"ನಿಜ ಹೇಳಿದ್ರೆ ಶೌರಿಯವರಿಗೆ ಏನಾದ್ರೂ ತೊಂದ್ರೆ ಆದ್ರೆ...."

"ಯಾರ್ಗೂ ತೊಂದರೆ ಆಗದಂತೆ ನಾನು ಏನಾದ್ರೂ ಪ್ಲಾನ್ ಮಾಡ್ತೀನಿ. ಮೊದಲು, ನೀನು ಯಾರು? ಮಾವನವರು ನಿನ್ನನ್ನು ಇಲ್ಲಿಗ್ಯಾಕೆ ಕರ್ಕೊಂಡು ಬಂದಿದಾರೆ.... ಶೌರಿಗೂ ನಿನಗೂ ಏನು ಸಂಬಂಧ ಇದನ್ನೆಲ್ಲ ನೀನು ನಂಗೆ ಹೇಳ್ಬೇಕು."

"ಯಾರ್ಗೂ ಏನೂ ಹೇಳ್ಬಾರ್ದು ಅಂತ ನನ್ಹತ್ರ ಮಾತು ತಗೊಂಡಿದಾರೆ."

"ನೀನು ನಿಜವನ್ನು ಹೇಳಿದ್ರೆ ನಾನು, ನಿನ್ನನ್ನು ಶೌರಿಯ ಹತ್ತಿರಕ್ಕೆ ಕ್ಷೇಮವಾಗಿ ಕಳಿಸಿಕೊಡ್ತೀನಿ. ನೀವಿಬ್ಬರೂ ಆದಷ್ಟು ಬೇಗ ಮದುವೆಯಾಗಿ ಬಿಡಿ....ಆಮೇಲೆ ಯಾರೂ ಏನೂ ಮಾಡುಕ್ಕೆ ಆಗುಲ್ಲ..."

"ಸರಿ ಹೇಳ್ತೀನಿ..."

"ಇಲ್ಲಿ ಬೇಡ. ಸಾಯಂಕಾಲ ನನ್ನ ಜತೇಲಿ ದೇವಸ್ಥಾನಕ್ಕೆ ಕರೆದ್ಕೊಂಡು ಹೋಗ್ತೀನಿ. ಆಗ ಹೇಳೂವಂತೆ...."

"ಯಾರಿಗೂ ಗೊತ್ತಾಗುಲ್ಲ ತಾನೇ?"

"ನಾನಿದೀನಿ, ಹೆದರ್ಬೇಡ." ಅವಳ ಭುಜದ ಮೇಲೆ ಕೈಯನ್ನಿಟ್ಟಳು.

*****

"ಈಗ್ಗೆ ಕೆಲವು ತಿಂಗಳ ಕೆಳಗೆ ನನ್ನ ತಾಯಿ ಸತ್ತು ಹೋದರು. ಏನೋ ಖಾಯಿಲೆ. ಸಾಯುಕ್ಕೆ ಮೊದಲು, ನಾನು ನನ್ನ ಈ ತಂದೆಯ ಮಗಳಲ್ಲ ಅನ್ನುವ ನಿಜವನ್ನೂ ಅಪ್ಪನಿಗೆ ತಿಳಿಸಿದಳಂತೆ...." ಮಲ್ಲಿಕಾ ಅಳುತ್ತಾ ಹೇಳಿದಳು.

"ಏನು? ನೀನು ಭಾವನ ಮಗಳಲ್ವಾ? ಮತ್ತೆ?" ...ಮಾಧುರಿ ಭಯ ಮಿಶ್ರಿತ ಕುತೂಹಲದಿಂದ ಕೇಳಿದಳು.

"ನನ್ನ ತಾಯಿ ಮದುವೆಗೆ ಮೊದಲು ಯಾರ ಜತೆಗೋ ಓಡಿ ಹೋಗಿದ್ಲಂತೆ.... ಒಂದು ವಾರ ಅವನು ತನ್ನೊಂದಿಗೆ ನನ್ನ ಅಮ್ಮನನ್ನು

ಇಟ್ಟುಕೊಂಡಿದ್ದನಂತೆ. ಆಮೇಲೆ, ಪೋಲೀಸ್ನೋರು ಅವನನ್ನು ಹುಡುಕ್ತಿದಾರೆ ಅಂತ ತಿಳಿದ ಮೇಲೆ ನನ್ನ ಅಮ್ಮನನ್ನು ವಾಪಸ್ಸು ಕರೆತಂದು ಈ ಮನೆಗೆ ಬಿಟ್ಟಿದ್ದರಂತೆ....ಆದರೆ ಬೇರೆ ಯಾರಿಗೂ ಈ ವಿಷಯ ತಿಳಿಯದಂತೆ ತಾತ ಗುಟ್ಟಾಗಿಟ್ಟಿದ್ದರಂತೆ."

"ಸುಳ್ಳು ಹೇಳ್ಬೇಡ ಮಲ್ಲಿಕಾ. ಇಂಥ ವಿಷಯಗಳನ್ನು ಗುಟ್ಟಾಗಿಡೋಕೆ ಸಾಧ್ಯಾನಾ?"

"ಏನೋ ನಂಗೇನ್ಗೊತ್ತು? ಅಜ್ಜೀನ ಕೇಳಿ...."

"ಮತ್ತೆ? ನನ್ನ ಅತ್ತೇನ ಅಜ್ಜಿ ಅಂತ ಯಾಕೆ ಕರೆಯೋಲ್ಲ?"

"ನನ್ನ ತಂದೆ ತಾತನ್ನ ಕರೆಸಿ ಸಿಕ್ಕಾಪಟ್ಟೆ ಗಲಾಟೆ ಮಾಡಿ, ಇವಳು ನನ್ನ ಮಗಳಲ್ಲ ಕರ್ಕೊಂಡು ಹೋಗಿ ಅಂತ ರಂಪ ಮಾಡಿದ್ರಂತೆ.... ತಾತ ತನ್ನ ಮನೆಯ ಮರ್ಯಾದೆ ಹೋಗುತ್ತೆ ಅಂತ ನಾನ್ಯಾರು ಅಂತ ಹೇಳದೇ ಮನೆಯಲ್ಲಿ ಇಟ್ಟುಕೊಂಡಿದಾರೆ. ನಿಜ ಗೊತ್ತಾಗಿದ್ದಿದ್ರೆ ನೀವೆಲ್ಲಾ ಸುಮ್ಮನೆ ಇರ್ತಿದ್ರಾ?"

"ನಾನು ಇವತ್ತೇ ನಿಜ ಏನೂಂತ ಅತ್ತೆ ಮಾವನ್ನ ಕೇಳಿ ಬಿಡ್ತೀನಿ."

"ನಿಮ್ಮ ದಮ್ಮಯ್ಯ.... ಹಾಗೆ ಮಾಡ್ಬೇಡಿ. ನಿಮ್ಮ ಮನೆಯ ಮರ್ಯಾದೆಯನ್ನು ನೀವಾಗೇ ಕಳೆದ್ಕೊಳ್ಬೇಡಿ. ಅಜ್ಜಿ ತಾತಂಗೆ ಅವಮಾನ ಆಗುತ್ತೆ.... ನಾನು ಹೊರಟು ಹೋಗ್ತೀನಿ... ಎಲ್ರೂ ಸುಮ್ಮನಿದ್ದು ಬಿಡಿ."

"ಎಲ್ಲಿಗೆ ಹೋಗ್ತೀಯಾ?"

"ಯಾವುದಾದರೂ ಮಹಿಳಾ ಆಶ್ರಮಕ್ಕೆ ಸೇರಿಸಿ ಬಿಡಿ. ನಿಮಗೆ ಪುಣ್ಯ ಬರುತ್ತೆ. ನನ್ನ ಅನ್ನಾನ ನಾನೇ ಸಂಪಾದಿಸ್ಕೊಳ್ತೀನಿ. ಅಪ್ಪನಿಗೂ ನನ್ನ ಬಗ್ಗೆ ತಿಳಿಸ್ಬೇಡಿ."

"ಆ ಧೈರ್ಯ ನಿನಗಿದೆಯಾ? ಮತ್ತೆ ವಾಪಸ್ಸು ಬರಬಾರದು...."

"ಇಲ್ಲ, ಖಂಡಿತಾ ವಾಪಸ್ಸು ಬರುಲ್ಲ.... ಆದರೆ ನಾನು ಎಲ್ಲಿದೀನೀಂತ ಯಾರಿಗೂ ತಿಳಿಸ್ಬೇಡಿ..." ಹೇಳುತ್ತಾ ಹೇಳುತ್ತಾ ಅವಳ ಗಂಟಲುಬ್ಬಿ ಬಂತು.

"ಸರಿ, ನಿನಗೂ ಒಳ್ಳೆಯದು ಆಗ್ಬೇಕು. ನಮಗೂ ತೊಂದರೆಯಾಗ ಬಾರದು. ಹಾಗೆ ವ್ಯವಸ್ಥೆ ಮಾಡ್ತೀನಿ. ನಡೀ ಮನೆಗೆ ಹೋಗೋಣ." ಇಬ್ಬರೂ ಮನೆಗೆ ಬಂದರು.

****

ಅದೇ ದಿನ ಮಾಧುರಿ ಅತ್ತೆಯೊಡನೆ ಮಾತನ್ನಾಡಿದಳು. "ಅತ್ತೇ ಮಾವನವರು ನಮಗೆ ಹೀಗೆ ಮೋಸ ಮಾಡಬಹುದಾ?...ಅಥವಾ ಮಲ್ಲಿಕಾ

ತಮ್ಮ ಸ್ವಂತ ಮೊಮ್ಮಗಳು ಅಂತ ಹೇಳಿಕೊಂಡಿದ್ದರೆ ನಮಗ್ಯಾರಿಗೂ ಬೇಸರ ವಾಗುತ್ತಿರಲಿಲ್ಲ." ಎಂದು ಮಾತನ್ನು ಪ್ರಾರಂಭಿಸಿದಳು.

"ಈ ವಿಷಯ ನಿಂಗೆ ಹೇಗೆ ತಿಳೀತು....?"

"ಹಾಗಾದ್ರೆ ಈ ವಿಷಯ ನಿಜ ತಾನೇ?"

"ಯಾರಿಗೂ ಹೇಳ್ಬೇಡ ತಾಯೀ.... ಮನೆತನದ ಮರ್ಯಾದೆ ಹೋಗುತ್ತೆ...."

"ಹಾಗಾದ್ರೆ ಅಂಥೋಳನ್ನ ಮನೇಲಿ ಯಾಕೆ ಇಟ್ಕೊಂಡಿದೀರಾ?"

"ಅಳಿಯ ಅನ್ನಿಸ್ಕೊಂಡ ಪಾಪಿ, ಎಲ್ಲವನ್ನೂ ಹಾಳು ಮಾಡಿ ಬಿಟ್ಟ. ಅವನಿಗೆ ಕೇಳಿದಷ್ಟು ವರದಕ್ಷಿಣೆ ಕೊಟ್ಟು ಮದುವೆ ಮಾಡಿ ಕಳಿಸಿಕೊಟ್ಟೆವು.... ಆದರೂ ಅವನಿಗೆ ಹೆಂಡತಿಯ ಮೆಲೆ ಪ್ರೀತಿ ಇರಲಿಲ್ಲ. ಮಗಳ ಮೇಲೆ ಮಮತೆ ಇರಲಿಲ್ಲ. ಹೊಡೆದು ಬಡಿದು ಗೋಳು ಹೊಯ್ದು ಕೊಳ್ಳುತ್ತಿದ್ದನಂತೆ. ಮದುವೆ ಆದ ಮೇಲೆ ಒಂದು ದಿನವೂ ನಮ್ಮ ಮನೆಗೆ ಕಳಿಸಲಿಲ್ಲ....ಅಲ್ಲದೇ ನಮ್ಮ ಸಂಬಂಧವನ್ನೇ ತೊರೆಸಿ ಬಿಟ್ಟಿದ್ದ. ನನ್ನ ಮಗಳು ಒಂದು ದಿನ ಅವನ ಕಾಟ ತಡೆಯಲಾರದೇ ಮೈಗೆ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡಳಂತೆ. ಆಗ ಮಲ್ಲಿಕಂಗೆ ಕೇವಲ ಹದಿನೆಂಟು ವರ್ಷ. ಇವಳ ಹಿಂದೆ ಇನ್ನೂ ಎರಡು ಹೆಣ್ಣು ಮಕ್ಕಳಿದ್ದವಂತೆ.... ಈಗ ಅವು ಎಲ್ಲಿ ಇವೆಯೋ?.... ಇವಳು ಸಾಯುವ ಮೊದಲು ಗಂಡನ ಮೇಲಿನ ರೋಷಕ್ಕೆ ನಿಜವನ್ನು ಹೇಳಿ ಬಿಟ್ಟಿದ್ದಾಳೆ..."

"ಹೌದಾ ಅತ್ತೇ.... ಹಾಗಾದ್ರೆ ನಿಮ್ಮ ಮಗಳು ಯಾರ ಹಿಂದೆಯೋ ಓಡಿ ಹೋದದ್ದು ನಿಜಾನಾ?" ಆಕೆ ತಲೆ ತಗ್ಗಿಸಿದಳು.

"ಅವಳು ಚಿಕ್ಕವಳಾಗಿದ್ದಳು. ಏನೂ ತಿಳುವಳಿಕೆ ಇರಲಿಲ್ಲ. ಜಟಕಾ ಗಾಡಿ ಓಡಿಸುತ್ತಿದ್ದವನೊಬ್ಬನು, ಅವಳನ್ನು ಗಾಡಿಯಲ್ಲಿ ಕೂರಿಸಿಕೊಂಡು ತನ್ನ ಊರಿಗೆ ಕರೆದುಕೊಂಡು ಹೋಗಿದ್ದ.... ಒಂದು ವಾರ ಅವನ ಮನೇಲಿದ್ದು ವಾಪಸ್ಸು ಬಂದವಳು.... ಮನೆಯಿಂದಾಚೆ ತಳ್ಳಿದರೆ ಹಾದಿ ರಂಪ ಬೀದಿ ರಂಪ ಆಗುತ್ತೆ ಅಂತ ಸೋದರ ಮಾವನ ಮನೆಗೆ ಕೋಪಿಸಿಕೊಂಡು ಹೋಗಿದ್ದಳು ಅಂತ ಸುಳ್ಳು ಹೇಳಿದೆವು. ಆಮೇಲೆ ಕೆಲವೇ ದಿನಗಳ ನಂತರ ಅವಳಿಗೆ ಮದುವೆ ಮಾಡಿದೆವು. ಅವನೋ ದುರಾಸೆಯವನು. ನನ್ನ ಮಗಳನ್ನು ಚೆನ್ನಾಗಿ ಇಟ್ಟುಕೊಳ್ಳಲಿಲ್ಲ" ಅತ್ತೆ ಕಣ್ಣೀರು ಸುರಿಸಿದಾಗ ಇವಳಿಗೆ ಮರುಕ ಬರಲಿಲ್ಲ.

"ಹಾಗಾದ್ರೆ ಈಗ ಇವಳ ವಿಷಯ ಏನು? ಎಷ್ಟು ವರ್ಷ ಇಲ್ಲಿಯೇ ಕೆಲಸದವಳ ಥರ ಇಟ್ಟು ಕೊಳ್ಳುಕ್ಕೆ ಆಗುತ್ತೆ.... ಅಲ್ಲದೇ ಶೌರಿ ಕೂಡಾ ಇವಳ

ಬಗ್ಗೆ ಆಸಕ್ತಿ ವಹಿಸಿದಾನೆ ಅಂತ ಅನ್ನಿಸ್ತು."

"ಏನಾದರೂ ಅನಾಹುತ ನಡೆಯುವ ಮೊದಲು ಇವಳನ್ನು ಇಲ್ಲಿಂದ ಕಳಿಸಿ ಬಿಡಬೇಕು.... ಆದರೆ ಎಲ್ಲಿಗೆ, ಹೇಗೆ ಅಂತ ಅರ್ಥ ಆಗ್ತಿಲ್ಲ...."

"ಬೆಂಗಳೂರಿನಲ್ಲಿ ಬೇಕಾದಷ್ಟು ಮಹಿಳಾ ಆಶ್ರಮಗಳಿವೆಯಂತೆ. ಅಲ್ಲಿಗೆ ಸೇರಿಸಿ ಬಿಟ್ಟರೆ, ಯಾವುದಾದರೂ ಕೆಲಸಕ್ಕೆ ಸೇರಿಸಿಕೊಂಡು ಸಂಬಳ ಕೊಡ್ತಾರೆ. ಅವಳ ಹೊಟ್ಟೆ ಪಾಡು ಅವಳು ನೋಡ್ಕೋತಾಳೆ...."

"ಅದೇನೋ ಸರಿಯೇ.... ಇವಳು ನಿಜ ಹೇಳಿ ಬಿಟ್ಟರೇ...."

"ನಿಜವನ್ನು ಹೇಳಿದರೆ ನಂಬೋರು ಯಾರು? ಅವಳ ಅಪ್ಪನಂತೂ ಇವಳನ್ನು ಮನೆಗೆ ಸೇರಿಸುಲ್ಲ."

"ಇನ್ನೆಲ್ಲಿ ಸೇರಿಸ್ತಾನೆ? ಇವಳು ನನ್ನ ಮಗಳಲ್ಲ ಅಂತ ಪೋಲೀಸರ ಎದುರಿಗೇ ಬರೆದು ಕೊಟ್ಟಿದ್ದಾನಂತೆ. ಅಲ್ಲದೇ ಇವಳನ್ನು ಇತ್ಲಾಗೆ ಕಳಿಸಿ, ತಾನು ಮತ್ತೆ ಮದುವೆಯಾಗಿದಾನೆ..... ಅಲ್ಲಿಯ ಸಂಬಂಧ ಕಡಿದಂತೆಯೇ. ಏನೂ ಉಳಿದಿಲ್ಲ. ಹೀಗಾಗುತ್ತೆ ಅಂತ ನಾವಂತೂ ಅಂದುಕೊಂಡಿರಲಿಲ್ಲ."

"ಮತ್ತೆ? ಇನ್ನೂ ಇಬ್ಬರು ಮಕ್ಕಳ ಗತಿ?"

"ಮನೆ ಕೆಲಸ ಮಾಡುಕ್ಕೆ ಇಟ್ಟುಕೊಂಡಿರಬಹುದು ಆ ಮಾಟಗಾತಿ..."

"ಒಟ್ನಲ್ಲಿ ನಿಮ್ಮ ಮೊಮ್ಮಕ್ಕಳು ಕಸ ಮುಸುರೆ ಮಾಡೋ ಸ್ಥಿತಿ ಬಂತು." ಮಾಧುರಿ ಲೊಚಗುಟ್ಟಿದಾಗ, ಅತ್ತೆ ತೀಕ್ಷ್ಣವಾಗಿ ನೋಡಿದಳು.

"ವ್ಯಂಗ್ಯವಾಗಿ ಮಾತಾಡಿ, ನೋಯಿಸ್ಬೇಡ ಮಾದುರಿ, ಇದರಲ್ಲಿ ನಮ್ಮ ತಪ್ಪೇನಿದೆ ಹೇಳು. ನಿನ್ನ ಗಂಡನಿಗೂ ಈ ವಿಷಯ ತಿಳಿಯದು. ತಿಳಿದರೆ ಅವನ ಮನಃಸ್ಥಿತಿ ಏನಾಗುತ್ತೆ ಅಂತ ಯೋಚಿಸು."

"ಸರಿ, ಸರಿ, ನಾನ್ಯಾಕೆ ಈ ಸುದ್ಧೀನ ಅವರಿಗೆ ಹೇಳಲಿ? ಶೌರಿ ಮತ್ತೆ ರಜದ ಮೇಲೆ ಬರುವ ಮೊದಲು ಇವಳನ್ನು ಇಲ್ಲಿಂದ ಕಳಿಸ್ಬೇಕು. ಅವನಂತೂ ಇವಳಿಗೆ ಮನಸೋತಿರೋದು ನಿಜ.... ಅಥವಾ ದೊಡ್ಡ ಮನಸ್ಸು ಮಾಡಿ, ಮನೆ ತುಂಬಿಸಿಕೊಳ್ಳೋದಾದ್ರೆ ನೋಡಿ....."

"ಆಡ್ಕೊಳ್ಳೋಕೆ ನಿಂಗೆ ವಿಷಯ ಸಿಗ್ತು ಅಲ್ವಾ? ಇವಳು ನನ್ನ ಮಗಳ ಮಗಳು ಅನ್ನೋದನ್ನ ನಾನು ಮರೆತಿದೀನಿ. ಜಟಕಾ ಗಾಡಿ ಓಡಿಸುವವನು ಅದ್ಯಾವ ಜಾತಿಯೋ ಅದ್ಯಾವ ಕುಲವೋ.... ಕಾಟ ಕಳೀಲಿ ಅಂತ ಮನೆ ಯಿಂದಾಚೆ ಮಗಳನ್ನು ಕಳಿಸಿದ್ದಾಯ್ತು.... ಈಗ ಮತ್ತೆ ಈ ಕರ್ಮಾನ ನನ್ನ ತಲೇಗೇ ಯಾಕೆ ಅಂಟಿಸಿಕೊಳ್ಳಲಿ? ಆದಷ್ಟು ಬೇಗ, ನೀನೇ ಕರೆದುಕೊಂಡು ಹೋಗಿ ಒಂದು ಆಶ್ರಮಕ್ಕೆ ಸೇರಿಸಿ ಬಿಟ್ಟು ಬಾ.... ಮಾವನವರಿಂದ ಹಣಾನ

ನಾನು ಕೇಳಿ ಇಸ್ಕೊಡ್ತೀನಿ."

"ಅವರು ಬೇಡ ಅಂತಂದ್ರೆ?"

"ನಾನು ಸಮಯ ನೋಡಿ ಸರಿಯಾಗಿ ಮಾತಾಡ್ತೀನಿ. ನಿನ್ನ ಅಣ್ಣನಿಗೆ ಫೋನು ಮಾಡಿ ಆಶ್ರಮಗಳ ಬಗ್ಗೆ ವಿಚಾರಿಸುಕ್ಕೆ ಹೇಳು. ಅಪ್ಪಿ ತಪ್ಪಿಯೂ ಅವಳು ನಿನ್ನ ಅತ್ತಿಗೆಯ ಮಗಳು ಅಂತ ಹೇಳ್ಬೇಡ.... ನಿನ್ನ ಮರ್ಯಾದೆಯೂ ಹೋಗುತ್ತೆ...." ಅತ್ತೆ ಎಚ್ಚರಿಸಿದಾಗ ಅವಳು ಮನದೊಳಗೇ ನಕ್ಕೊಂಡಳು. ಅದೇ ದಿನ ಯಾರಿಗೂ ತಿಳಿಯದಂತೆ, ಮಲ್ಲಿಕಾಳ ಹತ್ತಿರ ಮಾತಾಡಿದಳು.

“ಮಲ್ಲಿಕಾ, ನಾನು ನಿನ್ನ ಶತ್ರುವಲ್ಲ... ಆದರೆ, ನಿನ್ನನ್ನು ಇಲ್ಲಿಯೇ ಇಟ್ಟುಕೊಳ್ಳಲು ಆಗುವುದಿಲ್ಲ. ಮಾಧುರಿ ನಿನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಿ ಆಶ್ರಮಕ್ಕೆ ಸೇರಿಸುತ್ತಾಳೆ. ನಿನ್ನ ಖರ್ಚು ವೆಚ್ಚಾನ ನಾನು ನೋಡ್ಕೋತೀನಿ. ಚಿಂತೆ ಮಾಡ್ಬೇಡ." ಎಂದಳು. ಮಲ್ಲಿಕಾ ಹೂಂ ಎಂಬಂತೆ ತಲೆಯಾಡಿಸಿದ್ದಳು. ಅವಳಿಗೆ ಆತಂಕವೂ ಆಗಿತ್ತು, ಸಮಾಧಾನವೂ ಆಗಿತ್ತು.

****

ಬಸ್ಸನ್ನು ಹತ್ತಿದ ಮೇಲೆ ಮಾಧುರಿ ಶೌರಿಗೆ ಫೋನು ಮಾಡಿ ಬಸ್ ಸ್ಟ್ಯಾಂಡಿಗೆ ಬರುವಂತೆ ಹೇಳಿದ್ದಳು. ಬಸ್‌ನಿಂದ ಇಳಿದ ಮಾಧುರಿ ಹಾಗೂ ಮಲ್ಲಿಕಾಳನ್ನು ಕಂಡು ಶೌರಿ ಅಚ್ಚರಿಗೊಂಡ. ಆತಂಕಗೊಂಡ, "ಈಗ ಸೀದಾ ಮೊದಲು ನಿನ್ನ ಮನೆಗೆ ಹೋಗೋಣ. ಅಲ್ಲಿ ಎಲ್ಲವನ್ನೂ ಹೇಳ್ತೀನಿ" ಎಂದಳು ಮಾಧುರಿ. ಆಟೋ ಹತ್ತಿ ಸೀದಾ ಅವನ ಮನೆಗೆ ಬಂದರು.

ಮನೆ ತುಂಬಾ ಚಿಕ್ಕದಾಗಿತ್ತು. ಶೌರಿ ಸಂಕೋಚಗೊಂಡ. "ನೀವು ಬರುತ್ತಿರುವ ವಿಷಯವನ್ನು ತಿಳಿಸಿದ್ದರೆ ಕ್ಲೀನ್ ಮಾಡಿಸಿರುತ್ತಿದ್ದೆ" ಎಂದ. ಹೋಟೆಲ್ಲಿನಿಂದ ಕಾಫಿ ತಿಂಡಿಯನ್ನು ತರಿಸಿದ. ಮಾಧುರಿ ನಿಧಾನವಾಗಿ ನಡೆದ ವಿಷಯವನ್ನು ತಿಳಿಸಿದಳು. "ಇವಳನ್ನು ಯಾವುದಾದರೂ ಮಹಿಳಾ ಆಶ್ರಮಕ್ಕೆ ಸೇರಿಸ್ಬಿಟ್ಟು ಬಾ ಅಂತ ಅತ್ತೆ ನನ್ನೊಂದಿಗೆ ಇವಳನ್ನು ಕಳಿಸಿದಾರೆ. ಈಗ ನಾನೇನು ಮಾಡಲಿ ಹೇಳು" ಎಂದು ಅವನನ್ನೇ ಕೇಳಿದಳು.

"ಮಲ್ಲಿಕಾ ಏನಂತಾಳೆ?" ಅವಳ ಕಡೆ ನೋಡುತ್ತಾ ಕೇಳಿದ.

"ಅವಳು ಏನಂತಾಳೆ, ಅಂತ ನೀನೇ ಕೇಳಿ ತಿಳಿದುಕೋ.... ಅವಳು ಈ ರಾತ್ರಿ ಇಲ್ಲೇ ನಿನ್ನ ಮನೆಯಲ್ಲಿರಲಿ. ನಾನು ನನ್ನ ಅಣ್ಣನ ಮನೆಗೆ ಹೋಗಲೇ ಬೇಕು. ಇಲ್ಲದಿದ್ದರೆ ಅತ್ತೆಗೆ ಅನುಮಾನ ಬರುತ್ತೆ." ಎಂದಳು.

"ಅವಳು ಈ ಒಂದು ರೂಮಿನ ಮನೇಲಿ ಹೇಗಿರ್ತಾಳೆ ಅತ್ತಿಗೆ?"

"ಅದು ನಿನಗೇ ಗೊತ್ತು." ಎಂದು ಹೇಳಿ ಹೊರಟೇ ಬಿಟ್ಟಳು. ಶೌರಿ

ಒಂದು ರಿಕ್ಷಾ ಗೊತ್ತು ಮಾಡಿಕೊಟ್ಟ. ಮಲ್ಲಿಕಾ ಮಾಧುರಿಗೆ ಥ್ಯಾಂಕ್ಸ್ ಹೇಳಿದಳು. "ನಿನ್ನನ್ನು ಸರಿಯಾದ ಸ್ಥಳಕ್ಕೆ ಕರೆತಂದು ಸೇರಿಸಿದೀನಿ. ಸಧ್ಯಕ್ಕೆ ಈ ವಿಷಯ ಗುಟ್ಟಾಗಿರಲಿ.... ಆದಷ್ಟು ಬೇಗ ನೀವಿಬ್ಬರೂ ಮದುವೆಯಾಗಿಬಿಡಿ....ದೇವರು ಒಳ್ಳೆಯದನ್ನು ಮಾಡಲಿ" ಎಂದು ಹೇಳಿದಳು.

ಒಳಗೆ ಬಂದ ಮಲ್ಲಿಕಾ, ಒಂದು ಕಡೆ ಸಂಕೋಚದಿಂದ ನಿಂತಳು. "ಹೆದರ್ಬೇಡ ಮಲ್ಲಿಕಾ. ನಾನು ನಿನಗೆ ಅಪಾಯ ಮಾಡುಲ್ಲ. ಆದರೆ ಮದುವೆ ಇಲ್ಲದೆ ಹೀಗೆ ಒಂದೇ ಮನೇಲಿ ಇರುವುದು ಸರಿಯಲ್ಲ. ಇಲ್ಲೇ ಹತ್ತಿರದಲ್ಲಿ ನಮ್ಮ ಪರಿಚಯಸ್ಥರ ಮನೆ ಒಂದಿದೆ. ಅಲ್ಲಿಗೆ ಕರೆದ್ಕೊಂಡು ಹೋಗಿ ಬಿಡ್ತೀನಿ" ಎಂದ.

"ನನಗೆ ನಿಮ್ಮ ಮೇಲೆ ನಂಬಿಕೆ ಇದೆ. ನಾನು ಇಲ್ಲಿಯೇ ಇರ್ತೀನಿ. ಆದಷ್ಟು ಬೇಗ ಮದುವೆಯಾಗಿ ಬಿಡೋಣ. ಹೇಗೂ ಅಕ್ಕ ಒಪ್ಪಿದಾರಲ್ಲ" ಎಂದಳು.

"ಮನೆಯಲ್ಲಿ ಹಿರಿಯರಿಗೆ ತಿಳಿಸದೇ ಹೇಗೆ ಮದುವೆಯಾಗೋದು?"

"ಅವರುಗಳು ನಮ್ಮಿಬ್ಬರ ಮದುವೆಗೆ ಖಂಡಿತಾ ಒಪ್ಪುಲ್ಲ. ಮೊದಲು ಮದುವೆಯಾಗೋಣ. ಆಮೇಲೆ ತಿಳಿಸೋಣ..." ಅವಳೇ ಸಲಹೆಯನ್ನಿತ್ತಳು. ಸುಮ್ಮನೇ ಬೆಪ್ಪನಂತೆ ನೋಡಿದ. ರಾತ್ರಿಯೆಲ್ಲಾ ಯೋಚಿಸಿದ.

ಮಾರನೇ ಬೆಳಿಗ್ಗೆ ಅತ್ತಿಗೆಗೆ ಫೋನು ಮಾಡಿ ತನ್ನ ನಿರ್ಧಾರವನ್ನು ತಿಳಿಸಿದ. ಮಲ್ಲಕಾಳನ್ನು ತನ್ನ ಸಹೋದ್ಯೋಗಿ ಸಂಜಯನ ಮನೆಗೆ ಕರೆದು ಕೊಂಡು ಬಂದ. ತಾವಿಬ್ಬರೂ ಮದುವೆಯಾಗಲಿರುವ ವಿಷಯವನ್ನು ತಿಳಿಸಿದ. "ಇವಳು ಮಲ್ಲಿಕಾ. ನಾನು ಮೆಚ್ಚಿರುವ ಹುಡುಗಿ. ಮನೆಯವರಿಗೆ ಇವಳು ಒಪ್ಪಿಗೆ ಇಲ್ಲ. ಗುಟ್ಟಾಗಿ ಮದುವೆ ಆಗ್ತಿದೀವಿ....ನೀವು ದೇವಸ್ಥಾನದಲ್ಲಿ ವ್ಯವಸ್ಥೆ ಮಾಡಿಕೊಡಬೇಕು" ಎಂದು ಸಂಜಯನ ತಂದೆಯನ್ನು ಕೇಳಿಕೊಂಡ. ಸಂಜಯ ತಂದೆಯನ್ನು ಒಪ್ಪಿಸಿದ.

ಎರಡು ದಿನಗಳ ನಂತರ, ಸಮೀಪದ ದೇವಸ್ಥಾನದಲ್ಲಿ ಶೌರಿ ಮಲ್ಲಿಕಾಳನ್ನು ಸರಳವಾಗಿ ಮದುವೆಯಾದ. ಅತ್ತಿಗೆ ಮಾಧುರಿ ಬಂದಿದ್ದಳು. ಅವಳೇ ಮಲ್ಲಿಕಾಳನ್ನು ಶೌರಿಗೆ ಒಪ್ಪಿಸಿ, ಮತ್ತೆ ಅಣ್ಣನ ಮನೆಗೆ ಹೋಗಿ ಬಿಟ್ಟಳು. ಶೌರಿ ತನ್ನ ಪುಟ್ಟ ಮನೆಯಲ್ಲಿ ಹೊಸ ಸಂಸಾರವನ್ನು ಪ್ರಾರಂಭಿಸಿದ.

ಭಯಗೊಂಡಿದ್ದ ಮಲ್ಲಿಕಾಳಲ್ಲಿ ಧೈರ್ಯ ತುಂಬಿದ...ಆದರೂ ಅವಳು ಅಳುತ್ತಾ ಹೇಳಿದಳು. "ನಾನು ನಿಮ್ಮ ಮನೆಯ ಮೊಮ್ಮಗಳೇ....ನಿಮ್ಮ ಅಕ್ಕ, ನನ್ನ ತಾಯಿ ಮಾಡಿದ ತಪ್ಪಿಗೆ ನನಗ್ಯಾಕೆ ಈ ಶಿಕ್ಷೆ?....ಅಜ್ಜಿ ಅಜ್ಜ ನನ್ನನ್ನು

ಮೊಮ್ಮಗಳು ಅಂತ ಸ್ವೀಕರಿಸಿಲ್ಲ. ಈಗ ಸೊಸೆ ಅಂತ ಸ್ವೀಕರಿಸದೇ ಇದ್ದರೆ ನಾನು ಹೇಗಿರಲಿ?" ಅವನು ಅವಳನ್ನು ತನ್ನ ಎದೆಗೆ ಒರಗಿಸಿಕೊಂಡ.

"ಈ ವಿಷಯ ನನಗೆ ತಿಳಿದಿರಲಿಲ್ಲ. ತಿಳಿದಿದ್ದರೆ, ನಿನ್ನನ್ನು ಮನೆ ಕೆಲಸದವಳಂತೆ ಇಟ್ಟುಕೊಳ್ಳಲು ಖಂಡಿತಾ ಬಿಡುತ್ತಿರಲಿಲ್ಲ. ಈಗ ನೀನು ನನ್ನ ಪತ್ನಿ ಎಂದ ಮೇಲೆ, ನಮ್ಮ ಮನೆಯವಳೇ, ಅವರು ಒಪ್ಪಿಕೊಳ್ಳಲೇಬೇಕು.."

"ಬೇಡ, ನನಗೆ ಮತ್ತೆ ಆ ಮನೆಗೆ ಹೋಗಲು ಇಷ್ಟವಿಲ್ಲ. ನಮ್ಮಿಬ್ಬರನ್ನು, ಮಾಧುರಿ ಅಕ್ಕನನ್ನು ಅವರು ಖಂಡಿತಾ ಕ್ಷಮಿಸೋಲ್ಲ."

"ಸರಿ, ಈಗಲೇ ಬೇಡ. ನಿಧಾನವಾಗಿ ತಿಳಿಸೋಣ....ಎರಡು ಮೂರು ದಿನಗಳಿಂದ ಈ ಪುಟ್ಟ ಮನೆಯಲ್ಲಿ ದೂರ ದೂರ ಮಲಗಿದ್ದೆವು...ಈಗ ಯಾವ ಅಡ್ಡಿ ಆತಂಕಗಳಿಲ್ಲ. ನಾನು ನಿನ್ನವನು; ನೀನು ನನ್ನವಳು" ಎನ್ನುತ್ತಾ ಅವಳನ್ನು ಮುದ್ದಿಸಿದ.

"ನಾನು ನಿಮ್ಮನ್ನೇ ನಂಬಿ ಬಂದಿದ್ದೇನೆ. ಎಂದಿಗೂ ನನ್ನ ಕೈ ಬಿಡಬಾರದು" ಅವಳೂ ಮುದ್ದಾಗಿ ಹೇಳಿದಳು.

"ಇಷ್ಟೇನಾ ನೀನು ನನ್ನನ್ನು ತಿಳಿದುಕೊಂಡಿರೋದು...ದೇವರ ಸಾಕ್ಷಿಯಾಗಿ ನಿನ್ನನ್ನು ಪತ್ನಿಯಾಗಿ ಸ್ವೀಕರಿಸಿದೀನಿ....ನಾನು ನಿನ್ನ ಕೈ ಬಿಡುವ ಮಾತುಗಳೇ ಇಲ್ಲ. ನೀನೂ ಅಷ್ಟೇ, ಯಾವ ಭೀತಿನೂ ಇಟ್ಕೋಬೇಡ. ನಾವು ಆದರ್ಶ ದಂಪತಿಗಳಾಗಬೇಕು...ನಮ್ಮ ಪ್ರೀತಿಯನ್ನು ಬೇರೆಯವರು ಮೆಚ್ಚುವಂತಿರಬೇಕು....ಇವತ್ತಿನಿಂದ ಆ ಸಂಕಲ್ಪವನ್ನು ಮಾಡೋಣ." ಎನ್ನುತ್ತಾ ಅವಳನ್ನು ಬಾಹುಗಳೊಳಗೆ ಅಡಗಿಸಿಕೊಂಡ.

ಇದ್ದಕ್ಕಿದ್ದಂತೆ ಮಲ್ಲಿಕಾಳೊಡನೆ ಶೌರಿ ಬಂದುದನ್ನು ಕಂಡು ತಾಯಿ ಅಧೀರಳಾದಳು. ಮಾಧುರಿಯ ಕಡೆ ನೋಡಿದಳು. ಶೌರಿ ಸೀದಾ ತಾಯಿಯ ಬಳಿಗೆ ಬಂದ. "ಇದೇನಮ್ಮ ಇದೆಂಥಾ ಅನ್ಯಾಯ? ಈ ಮನೆಯಿಂದ ಇವಳನ್ಯಾಕೆ ಹೊರಕ್ಕೆ ಕಳಿಸಿದೆ?" ಜೋರಿನಿಂದ ಕೇಳಿದ.

"ನಾನೇನೂ ಕಳಿಸ್ಲಿಲ್ಲ. ಇವಳೇ ಮನೆ ಬಿಟ್ಟು ಹೋದ್ಲು.... ಹೇಳದೇ ಕೇಳದೇ ಓಡಿ ಹೋಗಿ ನಿನ್ನ ಬಳಿಗೆ ಬಂದ್ಲಾ?" ಮಲ್ಲಿಕಾಳ ಕಡೆ ದುರು ದುರು ನೋಡಿದಳು.

"ಇವಳು ನಿನ್ನ ಮೊಮ್ಮಗಳು ಅಂತ ತಿಳಿದೂ, ಹೋದರೆ ಹೋಗ್ಲಿ ಅಂತ ಸುಮ್ಮನಾದೆಯಲ್ಲ.... ಪೋಲೀಸರಿಗೆ ಕಂಪ್ಲೆಂಟ್ ಕೊಟ್ಟು ಹುಡುಕಿಸ ಬೇಕಾಗಿತ್ತು."

"ಈಗ ನಿಂಗೆ ಸಿಕ್ಕಿದಾಳಲ್ಲ.... ಹುಡುಕಿಸ್ದೇ ಇದ್ದರೂ ಕರ್ಕೊಂಡು

ಬಂದು ಇದೀಯಲ್ಲ.... ಒಂದು ಬಾರಿ ಮನೆ ಬಿಟ್ಟು ಹೋದವಳನ್ನು ನಾನು ಇಲ್ಲಿ ಇಟ್ಟುಕೊಳ್ಳುಲ್ಲ, ಎಲ್ಲಿಗಾದ್ರೂ ಹೋಗ್ಲಿ."

"ಅವಳನ್ನು ಇಲ್ಲಿಗೆ ಬಿಡುಕ್ಕೆ ಅಂತ ಕರ್ಕೊಂಡು ಬಂದಿಲ್ಲ. ಒಂದು ವಿಷಯಾನಾ ತಿಳಿಸೋಣ ಅಂತ ಬಂದಿದೀನಿ. ನಾನೀಗ ಇವಳನ್ನು ಮದುವೆಯಾಗಿದೀನಿ. ನಿನಗೆ ಒಪ್ಪಿಗೆ ಇರಲಿ ಬಿಡಲಿ, ಇವಳು ನಿನ್ನ ಸೊಸೆ ತಿಳೀತಾ?"

"ಏನಂದೆ....? ಈ ಜಾತಿಗೆಟ್ಟೋಳನ್ನು ಮದುವೆಯಾದ್ಯಾ? ಇವಳು ಎಂದಿಗೂ ನನ್ನ ಸೊಸೆಯಾಗಲು ಸಾಧ್ಯವಿಲ್ಲ. ನಾಲ್ಕು ದಿನದ ಸರಸ ಮುಗಿದ ಮೇಲೆ ನೀನೂ ಆಚೆಗೆ ತಳ್ತೀಯ.... ಮಾಧುರೀ..... ಏನೇ ಮಾಡ್ದೇ? ಇವಳು ಹೇಗೇ ಇವನ ಮನೆಗೆ ಹೋದ್ಲು?"

"ನಂಗೊತ್ತಿಲ್ಲ ಅತ್ತೇ.... ಇವಳ ಹತ್ರ ಶೌರಿಯ ಅಡ್ರೆಸ್ಸು, ಫೋನ್ ನಂಬರ್ರು ಇತ್ತು ಅಂತ ಕಾಣುತ್ತೆ.... ನಾನು ಮಹಿಳಾ ಹಾಸ್ಟೆಲ್ಲಿಗೇ ಸೇರಿಸಿ ಬಂದೆ. ಬೇಕಿದ್ರೆ ಕೇಳಿ ಇವಳನ್ನೇ."

"ಅವಳನ್ನೇನು ಕೇಳೋದು? ಇವಳ ಹತ್ರ ನಾನ್ಯಾಕೆ ಮಾತಾಡಿ ನನ್ನ ನಾಲಿಗೆಯನ್ನು ಮೈಲಿಗೆ ಮಾಡ್ಕೊಳ್ಳಲಿ. ಯಾವ ಕುಲವೋ ಯಾವ ಜಾತಿಯೋ...?"

"ಅಮ್ಮಾ ಪದೇ ಪದೇ ಇದೇ ಮಾತನ್ನಾಡಬೇಡ. ಇವಳ ತಪ್ಪೇನಿದೆ ನೀನೇ ಹೇಳು. ಮನೆ ಬಿಟ್ಟು ಹೋಗಿ, ಕುಲವನ್ನು ಕೆಡಿಸಿಕೊಂಡವಳು ನಿನ್ನ ಮಗಳು...ಇವಳನ್ನು ಹೆತ್ತವಳು ನಿನ್ನ ಮಗಳು. ಮೋಸದಿಂದ ಭಾವನಿಗೆ ಮದುವೆ ಮಾಡಿಕೊಟ್ಟವರು ನೀವು....ನಿಮ್ಮದೆಲ್ಲಾ ತಪ್ಪೇ ಅಲ್ವಾ?"

"ತಪ್ಪೋ ಸರಿಯೋ ಆ ಮಾತು ಬೇಡ. ನನ್ನ ಮಗಳನ್ನೇ ನಾನು ಮುಟ್ಟಿಸಿಕೊಳ್ಳುತ್ತಿರಲಿಲ್ಲ. ಇನ್ನು ಇವಳ ಸುದ್ಧಿ ನನಗ್ಯಾಕೆ?" ಎನ್ನುತ್ತಾ ಒಳಗೆ ಹೊರಟು ಹೋದಳು.

"ಅತ್ತಿಗೇ ಈಗ ನೀವೇ ಅಮ್ಮನಿಗೆ ನಿಜವನ್ನು ಹೇಳ್ಬೇಕು. ಅಮ್ಮ ಇಲ್ಲದ ಅಪವಾದವನ್ನು ಹೊರಿಸ್ತಿದಾಳೆ. ಸುಳ್ಳು ಹೇಳ್ತಿದಾಳೆ."

"ಸುಳ್ಳೇ ಆಗಿರಲಿ, ಅಪವಾದವನ್ನೇ ಹೊರಿಸಲಿ. ಮಲ್ಲಿಕಾಳನ್ನು ಒಂದಲ್ಲ ಒಂದು ದಿನ ಸೊಸೆ ಅಂತ ಒಪ್ಪಿಕೊಳ್ಳುವ ಸಮಯ ಬರುತ್ತದೆ. ಅಲ್ಲಿಯವರೆಗೂ ಸಹನೆಯಿಂದಿರು. ಈಗ ಇವಳನ್ನು ಇಲ್ಲಿಂದ ಕರ್ಕೊಂಡು ಹೊರಟು ಹೋಗು. ಮಾವ ಆಗಲಿ, ಅಣ್ಣ ಆಗಲಿ ಬಂದರೆ ಇನ್ನೂ ರಂಪ ಆಗುತ್ತದೆ" ಎಂದಳು.

"ನೀವೂ ಹೀಗೆ ಮಾತಾಡ್ತೀರಲ್ಲ ಅತ್ತಿಗೇ. ಆಯ್ತು ಈಗ ನಾವು

ಹೋಗ್ತೀವಿ. ನಾನು ಮತ್ತೆ ಬರೋದಿಲ್ಲ. ನನ್ನ ಹೆಂಡತಿಗೆ ಗೌರವ ಆದರ ಇಲ್ಲದ ಮನೆಯಲ್ಲಿ ನನಗೂ ಇರಲು ಇಷ್ಟವಿಲ್ಲ. ನಡೀ ಮಲ್ಲಿಕಾ ಎನ್ನುತ್ತಾ ಅವಳ ಕೈ ಹಿಡಿದು ಮನೆಯ ಮುಂಬಾಗಿಲನ್ನು ದಾಟಿದ. ಅತ್ತಿಗೆ ಸುಮ್ಮನೇ ನೋಡುತ್ತಾ ನಿಂತಿದ್ದಳು. ತಾಯಿ ಒಳಗಿನಿಂದ ಹೊರಕ್ಕೇ ಬಂದಿರಲಿಲ್ಲ. ಅವನ ಮನಸ್ಸು ವ್ಯಗ್ರಗೊಂಡಿತ್ತು. ಅರ್ಧ ದಾರಿಯಲ್ಲಿ ಅಣ್ಣ ಎದುರಾದ.

"ಏನೋ ಸೂರಿ ಯಾವಾಗ ಬಂದ್ಯೋ....ಇವಳೆಲ್ಲಿ ಸಿಕ್ಕಿದಳು ನಿಂಗೆ?" ಅಣ್ಣ ವಿಚಾರಿಸಿದ.

"ಅತ್ತಿಗೇನ ಕೇಳು..."

"ಸರಿ ಕೇಳ್ತೀನಿ. ನೀನ್ಯಾಕೆ ಹೀಗೆ ಕೋಪದಲ್ಲಿದೀಯ?"

"ನಾನು ಮಲ್ಲಿಕಾಳೊಂದಿಗೆ, ಈ ಮನೆಯನ್ನು ಬಿಟ್ಟು ಹೋಗ್ತಾ ಇದೀನಿ. ಮಲ್ಲಿಕಾಳನ್ನು ಅಮ್ಮ ಸೊಸೆ ಅಂತ ಒಪ್ಪಿಕೊಂಡ ದಿನ ನಾವಿಬ್ಬರೂ ಈ ಮನೆಗೆ ಬರ್ತೀವಿ."

"ಅಂದ್ರೇ.... ನೀನು ಇವಳನ್ನು ಮದುವೆಯಾದ್ಯಾ? ಯಾವಾಗ?....ಏನು ಈ ಹುಡುಗಾಟ? ....ಇವಳು ಯಾರು ಅಂತ ನಿಂಗೆ ಗೊತ್ತಾ?"

"ಹೂಂ ಗೊತ್ತು. ಎಲ್ಲಾ ತಿಳಿದೇ ಮದುವೆಯಾಗಿದೀನಿ... ನಾನು ಇವಳನ್ನು ಪ್ರೀತಿಸ್ತಿದೀನಿ.... ಅಪ್ಪನಿಗೂ ಇದೇ ಮಾತನ್ನು ಹೇಳಿ ಬಿಡು...ನಡೀ ಮಲ್ಲಿಕಾ ಬಸ್ಸಿಗೆ ಹೊತ್ತಾಗುತ್ತೆ." ಅಲ್ಲಿ ನಿಲ್ಲದೇ ಮುಂದೆ ನಡೆದ. ಅಣ್ಣನಿಂದ ಇವನನ್ನು ತಡೆದು ನಿಲ್ಲಿಸಲು ಆಗಿರಲಿಲ್ಲ. ಮನೆಯ ದಾರಿಯನ್ನು ಹಿಡಿದ.

"ಅಲ್ಲ, ನನಗೋಸ್ಕರ ನಿಮ್ಮನೆಯೋರ ವಿರೋಧ ಯಾಕೆ ಕಟ್ಕೊಂಡ್ರಿ?" ಮಲ್ಲಿಕಾ ಪ್ರಶ್ನಿಸಿದಳು.

"ನೀನು ಸುಮ್ನಿರು.... ನನಗೆ ಹೇಗೆ ಬೇಕೋ ಹಾಗೆ ಮಾಡುವ ಹಕ್ಕು ನನಗಿದೆ. ಅವರ್ಯಾರೂ, ಇಂದಿನಿಂದ ನಮ್ಮ ಪಾಲಿಗೆ ಇಲ್ಲ ಅಂತ ತಿಳ್ಕೋತೀನಿ..." ಅವನ ಮಾತಿಗೆ ಅವಳು ಹೆದರಿ ಸುಮ್ಮನಾದಳು. ಇಬ್ಬರೂ ಬಸ್ ಸ್ಟ್ಯಾಂಡ್‌ಗೆ ಬಂದರು.

ಕೆಲವು ತಿಂಗಳುಗಳ ನಂತರ ಅವಳು ಗರ್ಭಿಣಿಯಾಗಿರುವಳೆಂದು ತಿಳಿದಾಗ ಅವನು ಸಂತಸಗೊಂಡು ಅತ್ತಿಗೆಗೆ ಫೋನು ಮಾಡಿ ವಿಷಯವನ್ನು ತಿಳಿಸಿದ. ಆದರೆ ಮಲ್ಲಿಕಾ ಆತಂಕಗೊಂಡಿದ್ದಳು. ತನ್ನ ಮಗುವಿಗೆ ಆ ಮನೆಯಲ್ಲಿ ಯಾವ ಸ್ಥಾನವೂ ಇಲ್ಲ ಎಂದು ಅರಿವಾಗಿತ್ತು. ಈ ಸಮಯದಲ್ಲಿ ಸಂಜಯನ ತಂದೆ ತಾಯಿ ಸಹಕಾರ ಕೊಟ್ಟರು. ಸಲಹೆ ನೀಡಿದರು. ಸಹಾಯ ಮಾಡಿದರು.

"ಸಂಜಯನ ತಂದೆ ತಾಯಿ ತುಂಬಾ ಒಳ್ಳೆಯವರು. ನನ್ನನ್ನು

ಮಗಳಂತೆ ನೋಡಿಕೊಳ್ಳುತ್ತಿದ್ದಾರೆ. ನಾನು ಒಂಟಿ ಎಂಬ ಭಯ ನನಗೆ ಅಂಟಿಕೊಂಡಿತ್ತು. ಆದರೆ ಆಪದ್ಭಾಂದವರಂತೆ ನನ್ನ ಕುಶಲವನ್ನು ವಿಚಾರಿಸ್ಕೊಳ್ತಾರೆ" ಮಲ್ಲಿಕಾ ಹೊಗಳಿದಳು.

"ಹೌದು ಮಲ್ಲಿಕಾ, ಸಮಯಕ್ಕೆ ಒದಗಿದವರೇ ನಮ್ಮ ನೆಂಟರು. ನನ್ನ ಅತ್ತಿಗೆ ನಮ್ಮಿಬ್ಬರನ್ನು ಒಂದು ಗೂಡಿಸಿದರು. ಆದರೆ ಅವರೂ ನಿಸ್ಸಹಾಯಕರು. ಅವರಿಗೆ ಸ್ವಾತಂತ್ರ್ಯವೂ ಇಲ್ಲ ಧೈರ್ಯವೂ ಇಲ್ಲ"

"ಅವರು ನಂಗೋಸ್ಕರ ಒಂದು ಹಸಿರು ಸೀರೆಯನ್ನು ತಂದಿದಾರೆ.... ತುಂಬಾ ಚೆನ್ನಾಗಿದೆ. ನನಗೆ ತೋರಿಸಿದರು"

"ನೀನು ಬೇಡ ಅನ್ಬೇಕಾಗಿತ್ತು ಮಲ್ಲಿಕಾ....ಅದೆಲ್ಲಾ ಭಾರೀ ಆಯಿತು..."

"ಹೇಳ್ದೆ.... ಆದರೆ ನನ್ನನ್ನು ಸುಮ್ಮನಾಗಿಸಿಬಿಟ್ಟರು. ನಾನು ಅವರಿಗೆ ಮಗಳಿದ್ದ ಹಾಗಂತೆ... ನನ್ನ ತಾಯಿಯ ನಂತರ, ನನ್ನನ್ನು ಸ್ನೇಹದಿಂದ ಮಗಳು ಅಂತ ಬಾಯ್ತುಂಬಾ ಅವರು ಹೇಳಿದಾಗ, ನನಗೆ ಬೇಢ ಅಂತ ಮತ್ತೆ ಹೇಳುಕ್ಕೆ ಸಂಕೋಚ ಆಯ್ತು...."

"ನನ್ನ ಅಕ್ಕ ಹೇಗಿದ್ದಳೋ ನನಗೆ ನೆನಪಿಲ್ಲ...ಮನೆಯವರೆಲ್ಲ ನಿನ್ನನ್ನು ದೂರ ಮಾಡಿದರು.... ಇವರು ಯಾರೋ ಏನೋ... ಪ್ರೀತಿಯನ್ನು ತೋರಿಸ್ತಾರೆ ಅಂತಂದ್ರೆ ಆಶ್ಚರ್ಯ ಆಗುತ್ತೆ. ಹಾಗೇ ಆತಂಕವೂ ಕಡಿಮೆ ಆಯ್ತು.... ಈ ಸಮಯದಲ್ಲಿ ನಿನಗೆ ತಾಯಿಯ ಪ್ರೀತಿ ಸಿಗ್ತಿದೆಯಲ್ಲ, ಆ ಸಂತೋಷವೂ ಆಗ್ತಿದೆ..." ಅವನ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತ್ತು.

****

ಮಲ್ಲಿಕಾ ಗಂಡು ಮಗುವಿಗೆ ಜನ್ಮ ನೀಡಿದಳು. ಶೌರಿ ಈ ೨ಶುಭ ಸಮಾಚಾರವನ್ನು ಅತ್ತಿಗೆಗೆ ತಿಳಿಸಿದ. ಈಗಲಾದ್ರೂ ಅಪ್ಪ ಅಮ್ಮ ಸಮ್ಮತಿ ನೀಡಿದರೆ, ಮಗುವನ್ನು ಕರೆದುಕೊಂಡು ಬಂದು ತೋರಿಸುವುದಾಗಿ ಹೇಳಿದ.

"ಇಲ್ಲ ಶೌರಿ ನಿನ್ನ ತಾಯಿಗೆ ಈಗಲೂ ನಿನ್ನ ಮೇಲಿನ ಅಸಮಾಧಾನ ಕಡಿಮೆ ಆಗಿಲ್ಲ. ಹೇಗಾದರೂ ಸರಿ, ಶೌರಿ ಮಲ್ಲಿಕಾಳಿಂದ ದೂರ ಆಗಲಿ ಎಂದು ನಿರ್ಧರಿಸಿದ್ದಾರೆ. ಸಧ್ಯದಲ್ಲೇ ಯಾವುದೋ ಹೋಮ ಮಾಡಿಸುತ್ತಿದ್ದಾರೆ. ಜಪ ತಪ ಮಂತ್ರ ಎಲ್ಲಾ ಮಾಡಿಸ್ತಿದ್ದಾರೆ."

"ಅಂಥಾ ತಪ್ಪು ನಾನೇನು ಮಾಡಿದೀನಿ ಅತ್ಗೇ. ಯಾರೂ ಹೀಗೆ ಪ್ರೀತಿಸಿ ಮದುವೆಯಾಗಿಲ್ವಾ? ನನ್ನನ್ನು ಮಲ್ಲಿಕಾಳನ್ನು ಬೇರೆ ಮಾಡಲೇಬೇಕು ಎನ್ನುವ ಹಠ ಯಾಕಂತೆ? ಈಗ ನನಗೆ, ನಮ್ಮಿಬ್ಬರ ಪ್ರೀತಿಯ ಕುರುಹಿಗೆ ಒಬ್ಬ ಮಗ ಸಹ ಹುಟ್ಟಿದ್ದಾನೆ. ಇನ್ನು ನಮ್ಮನ್ನು ಯಾರೂ ದೂರ ಮಾಡ

ಲಾರರು." ಅವನು ಧೃಢವಾಗಿ ಹೇಳಿದ.

"ನಿನ್ನ ತಪ್ಪು ಏನೂ ಇಲ್ಲ. ಆದರೆ ಈ ವಿಷಯ ಹಿರಿಯರಿಗೆ ಅರ್ಥವಾಗಬೇಕಲ್ಲ. ನಿನ್ನ ಅಣ್ಣ ಕೂಡಾ ಅವರ ಕಡೆಗೆ. ಏನಾದರಾಗಲೀ ನೀನು ನಿನ್ನ ಹುಶಾರಿನಲ್ಲಿ ನೀನು ಇರು. ಯಾರಾದರೂ ಜ್ಯೋತಿಷಿಗಳನ್ನು ಭೇಟಿ ಮಾಡಿ ಅವರ ಸಲಹೆಯನ್ನು ತೆಗೆದುಕೋ. ಯಾವ ದುಷ್ಟ ಶಕ್ತಿಯೂ ನಿಮ್ಮಗಳನ್ನು ತಾಕದಿರುವಂತೆ ಏನಾದರೂ ಪೂಜೆ ಮಾಡಿಸಿಕೋ."

"ನನಗೆ ಇದರಲ್ಲೆಲ್ಲಾ ನಂಬಿಕೆ ಇಲ್ಲ ಅತ್ತಿಗೆ. ನಮ್ಮಿಬ್ಬರ ಮಧ್ಯೆ ಯಾವ ದುಷ್ಟ ಶಕ್ತಿಯೂ ಪ್ರವೇಶವಿಲ್ಲ. ಆ ನಂಬಿಕೆ ನನಗಿದೆ. ಬಿಡುವು ಸಿಕ್ಕಾಗ ಇಲ್ಲಿಗೆ ಬನ್ನಿ ಅತ್ತಿಗೇ."

"ಮಗೂಗೆ ಶ್ರೇಯಸ್ ಅಂತ ಹೆಸರಿಡು ಶೌರಿ, ಎಲ್ಲಾ ಒಳ್ಳೇದಾಗ್ಲೀ" ಅತ್ತಿಗೆ ಹಾರೈಸಿದಳು. ಶೌರಿ, ತನ್ನ ತಾಯಿಯ ಅಸಮಾಧಾನ ಇನ್ನೂ ಕಡಿಮೆಯಾಗಿಲ್ಲವೆಂದು ತಿಳಿದು ಬೇಸರಗೊಂಡ. ಮೊಮ್ಮಗುವಿನ ಮುಖವನ್ನು ನೋಡಿದರೆ ತಾಯಿಯ ಮನಸ್ಸು ಮೃದುಗೊಳ್ಳುವುದೆಂದುಕೊಂಡ. ಆದರೆ ಈ ವಿಷಯವನ್ನು ಮಲ್ಲಿಕಾಳಿಗೆ ಹೇಳಲಿಲ್ಲ.

ಮಗುವಿಗೆ ಆರು ತಿಂಗಳು ತುಂಬುವುದರಲ್ಲಿತ್ತು. ಸಂಜಯನ ತಂದೆ ತಾಯಿ ಬಹಳ ಸಹಾಯ ಮಾಡಿದ್ದರು. ಹಣವನ್ನು ಕೇಳಿದಾಗಲೆಲ್ಲಾ ಕೊಟ್ಟಿದ್ದರು. "ನಿಮ್ಮ ಉಪಕಾರ ನನ್ನ ಮೇಲೆ ಬಹಳವಾಗಿದೆ. ಈ ಋಣವನ್ನು ಹೇಗೆ ತೀರಿಸ್ತೀನೋ ಗೊತ್ತಿಲ್ಲ." ಸಂಜಯನ ಕೈ ಹಿಡಿದು ಹೇಳಿದ್ದ.

"ನಮ್ಮ ತಂದೆ ಉದಾರ ಮನಸ್ಸಿನವರು. ಯಾರಿಗಾದರೂ ಅಗತ್ಯ ವಿದ್ದಾಗ, ಅವರ ಕೈಯಲ್ಲಿ ಯತೇಚ್ಛವಾಗಿ ಹಣವಿದ್ದರೆ, ಕೇಳಿದ ಕೂಡಲೇ ಕೊಟ್ಟು ಬಿಡುವ ಮನೋಭಾವದವರು." ಸಂಜಯ ತಂದೆಯನ್ನು ಹೊಗಳಿದ್ದ.

"ದೇವರು ನಿಮ್ಮನ್ನೆಲ್ಲಾ ಚೆನ್ನಾಗಿಟ್ಟಿರಲಿ ಸಂಜಯ್....ಒಂದು ಮಾತು ಕೇಳ್ಲಾ ಸಂಜಯ್.... ನೀನ್ಯಾಕೆ ಇನ್ನೂ ಮದುವೆಯಾಗಿಲ್ಲ?"

ಸಂಜಯ ನಕ್ಕ... "ನನಗೆ ಬೇಕಾದ ಹುಡುಗಿ ನನಗೆ ಸಿಕ್ಕಿಲ್ಲ."

"ನೀನು ಮೆಚ್ಚಿದ ಹುಡುಗಿಯನ್ನು ನಿಮ್ಮ ತಂದೆ ತಾಯಿ ಮನಃಪೂರ್ವಕವಾಗಿ ಸೊಸೆಯನ್ನಾಗಿ ಸ್ವೀಕರಿಸ್ತಾರೆ. ಅವರಿಬ್ಬರದು ದೊಡ್ಡ ಗುಣ. ನಮ್ಮ ಮನೆಯವರಂತೆ ಸಂಕುಚಿತ ಸ್ವಭಾವದವರಲ್ಲ."

"ನಿಮ್ಮ ಮನೆಯವರ ವರ್ತನೆಯಿಂದ ನಿಮ್ಮ ಮನಸ್ಸಿಗೆ ಬೇಸರವಾಗಿದೆ. ಆದರೆ ಯಾವ ತಂದೆತಾಯಿ ತಾನೇ, ತಮ್ಮ ಮಕ್ಕಳಿಂದ ಎಷ್ಟು ದಿನಗಳು ಅಂತ ದೂರ ಇರ್ತಾರೆ? ನೋಡ್ತಿರಿ. ಆದಷ್ಟು ಬೇಗ ನಿಮ್ಮೆಲ್ಲರನ್ನು ಕರೆಸ್ಕೊಳ್ತಾರೆ."

ಶೌರಿಯ ಭುಜದ ಮೇಲೆ ಕೈಯನ್ನಿಟ್ಟು ನುಡಿದ.

"ಆ ದಿನ ಬರಬಹುದು ಅನ್ನುವ ನಂಬಿಕೆ ನನಗಿಲ್ಲ ಸಂಜಯ್... ಆದರೂ ನಿಮ್ಮ ಹಾರೈಕೆಗಳಿಗೆ ಥ್ಯಾಂಕ್ಸ್" ಎಂದು ಹೇಳಿ ಕೈಗಳನ್ನು ಒತ್ತಿದ.

****

ಕೆಲವೇ ವರ್ಷಗಳಲ್ಲಿ ಶೌರಿ ಹಾಗೂ ಸಂಜಯ ಆತ್ಮೀಯ ಗೆಳೆಯರಾಗಿದ್ದರು. ಇಬ್ಬರೂ ತಮ್ಮ ತಮ್ಮ ಮನದೊಳಗಿನ ಮಾತನ್ನು ಕೆಲವೊಮ್ಮೆ ಹಂಚಿಕೊಳ್ಳುತ್ತಿದ್ದರು. ಇದ್ದಕ್ಕಿದ್ದಂತೆ, ಒಂದು ದಿನ ಶೌರಿ, ತಾನು ವಿಲ್ ಬರೆಸಬೇಕೆಂದಿರುವ ವಿಷಯವನ್ನು ತಿಳಿಸಿದ. ಸಂಜಯ ಹುಬ್ಬೇರಿಸಿದ.

"ಹೌದು ಸಂಜಯ್.... ನಾನು ಶ್ರೀಮಂತನಲ್ಲ, ಅಥವಾ ಹೇಳಿಕೊಳ್ಳುವಂತಹ ದೊಡ್ಡ ವ್ಯಕ್ತಿಯೂ ನಾನಲ್ಲ. ನನಗಿರುವ ಆಸ್ತಿ ಎಂದರೆ, ನನ್ನ ಮಡದಿ ಮಲ್ಲಿಕಾ ಹಾಗೂ ನನ್ನ ಮಗು ಅಪೂರ್ವ. ಒಂದು ವೇಳೆ ನನಗೇನಾದರೂ ಆಗಿ ಹೋದರೆ....

"ಛೆ.... ಹಾಗ್ಯಾಕೆ ಮಾತಾಡ್ತೀರಿ?"

"ನಾನು ನನ್ನ ತಾಯಿಯನ್ನು ವಿರೋಧಿಸಿ ಮಲ್ಲಿಕಾಳನ್ನು ಮದುವೆಯಾಗಿದೀನಿ.... ನನ್ನ ತಾಯಿಯ ಸ್ವಭಾವ ಎಂಥದು ಅಂತ ನಂಗೊತ್ತು. ಮಲ್ಲಿಕಾ ಅವಳ ಸ್ವಂತ ಮೊಮ್ಮಗಳು ಆದರೂ ಅವಳನ್ನು ದ್ವೇಷಿಸ್ತಾಳೆ. ಆ ಸಿಟ್ಟಿನಲ್ಲಿ ನಮ್ಮಿಬ್ಬರನ್ನು ದೂರ ಮಾಡುವ ಆಲೋಚನೆ ಇದೆ ಅಂತ ಅತ್ತಿಗೆ ಹೇಳಿದ್ದರು. ಮೊಮ್ಮಗು ಹುಟ್ಟಿದರೂ, ಅವಳ ಹೃದಯ ಕರಗಿಲ್ಲ ಅಂತ ಸಹ ಹೇಳಿದರು.... ಆ ಜಿದ್ದಿನಲ್ಲಿ ನಮಗೆ ಏನು ಮಾಡಲೂ ಹೇಸುವುದಿಲ್ಲ. ಹಾಗೇನಾದರೂ ಪ್ರಯತ್ನ ನಡೆದರೆ, ನನ್ನ ಪ್ರಾಣಕ್ಕಂತೂ ಖಂಡಿತಾ ಅಪಾಯ ಇದೆ."

"ಅದ್ಹೇಗೆ ಹೇಳ್ತೀರಿ? ತಾಯಿಯಾದವಳು ಹೀಗೆ ಮಾಡಲು ಸಾಧ್ಯವೇ?"

"ನನ್ನ ತಾಯಿ ಎಲ್ಲರ ತಾಯಿಯಂತೆ ಅಲ್ಲ...ನನಗೆ ಮಾಟ ಮಂತ್ರ ಮಾಡಿಸಬಹುದು. ಮಲ್ಲಿಕಾಳನ್ನು ಬಿಟ್ಟು ಬರಲಿ ಅಂತ ನನಗೆ ಮದ್ದು ಹಾಕಿಸಬಹುದು..."

"ಇದನ್ನೆಲ್ಲಾ ನಂಬ್ತೀರಾ?"

"ನಮ್ಮ ಊರಿನಲ್ಲಿ ಈ ತರಹದ ವಾಮಾಚಾರದ ಕಾರ್ಯಗಳನ್ನು ಮಾಡುವವರಿದ್ದಾರೆ. ಅವರ ಪರಿಚಯ ಅಮ್ಮನಿಗಿದೆಯಂತೆ..."

"ಇದರಿಂದ ಮಲ್ಲಿಕಾಳಿಗೆ ತೊಂದರೆ ಮಾಡಲು ಯತ್ನಿಸಬಹುದು. ನೀವು ಎಷ್ಟಾಗಲೀ ಸ್ವಂತ ಮಗ..."

"ನನ್ನನ್ನು ತನ್ನ ಕಡೆಗೆ ಸೆಳೆದುಕೊಂಡರೆ, ಮಲ್ಲಿಕಾ ಹಾಗೂ ಮಗು ತಾನಾಗಿಯೇ ದೂರ ಆಗ್ತಾರೆ ಅಂತ ಅವಳ ಭಾವನೆ. ಆದರೆ ನಾನು ಮಲ್ಲಿಕಾಳಿಗಾಗಿ ನನ್ನ ಪ್ರಾಣವನ್ನು ಸಹ ಕೊಡಲು ಸಿದ್ಧನಾಗಿದೀನಿ....ನನ್ನ ಅಕೌಂಟ್‌ನಲ್ಲಿರುವ ಅಲ್ಪ ಸ್ವಲ್ಪ ಹಣವೆಲ್ಲಾ ಮಲ್ಲಿಕಾಳದ್ದು....ಅದು ನನ್ನ ತಾಯಿಗೆ ಸಿಗದಂತೆ ಆಗಬೇಕು"

"ಕಾನೂನು ಪ್ರಕಾರ ಎಲ್ಲಾ ನಿಮ್ಮ ಪತ್ನಿಗೇ ಸೇರುತ್ತೆ ಅಲ್ವಾ?"

"ಇರಬಹುದು, ನನ್ನ ತಾಯಿ, ಒಂದು ಕಾಸೂ ಇವಳಿಗೆ ಸೇರದಂತೆ ಮಾಡಬಹುದು. ನನ್ನನ್ನು ಪ್ರೀತಿಸಿ ಮದುವೆಯಾದ ತಪ್ಪಿಗೆ ಮಲ್ಲಿಕಾ ಯಾಕೆ ಶಿಕ್ಷೆಯನ್ನು ಅನುಭವಿಸಬೇಕು?"

"ಹಾಗೆಲ್ಲಾ ಏನೂ ಆಗುಲ್ಲ. ನೀವು ಸುಮ್ಮ ಸುಮ್ಮನೆ ಏನೇನೋ ಚಿಂತೆ ಮಾಡ್ತೀರಿ.... ಕ್ರಮೇಣ ಎಲ್ಲಾ ಸರಿ ಹೋಗುತ್ತೆ."

"ಇಲ್ಲ ಸಂಜಯ್.... ನನಗೆ ಏನೇನೋ ಭೀತಿಗಳು ಕಾಡುತ್ತಿವೆ. ಕೆಟ್ಟ ಕೆಟ್ಟ ಕನಸುಗಳು ಬೀಳುತ್ತವೆ. ಇದನ್ನೆಲ್ಲ ಮಲ್ಲಿಕಾಳಿಗೆ ಹೇಳುವಂತಿಲ್ಲ. ಒಂದು ವೇಳೆ ಅವಳಿಗೆ ತಿಳಿದರೆ, ಅವಳು ತಾನಾಗಿಯೇ ನನ್ನ ಜೀವನದಿಂದ ದೂರ ಹೊರಟು ಹೋಗ್ತಾಳೆ. ಹಾಗಾಗಬಾರದು, ಅವಳು ನನ್ನ ನೆನಪಿನಲ್ಲೇ ಜೀವನ ಸಾಗಿಸಬೇಕು. ಅವಳಿಗೆ ನೀವು ಕೆಲಸ ಕೊಡಿಸಬೇಕು... ಅವಳಿಗೆ ನಿಮ್ಮ ಮನೆಯವರು ಗಾರ್ಡಿಯನ್ ಆಗಿರಬೇಕು....ಇದು ನನ್ನ ಆಸೆ.... ಅದಕ್ಕೇ ವಿಲ್ ಬರೆಸಿ ಬಿಡ್ತೀನಿ. ನೀವು ಎಕ್ಸಿಕ್ಯೂಟರ್ ಆಗ್ಬೇಕು..."

"ಈ ಜವಾಬ್ದಾರಿ ನನಗೆ ಬೇಡ ಶೌರಿ...ನಮ್ಮ ತಂದೆಗೆ ತಿಳಿದರೆ ಬೇಸರ ಪಟ್ಕೊಳ್ತಾರೆ...."

"ಸರಿ... ಹಾಗಾದ್ರೆ ಅವರ ಹತ್ತಿರವೇ ಮಾತಾಡ್ತೀನಿ." ಶೌರಿ ಎದ್ದ.

"ಸಾರೀ ಶೌರಿ... ತಪ್ಪು ತಿಳ್ಕೋಬೇಡಿ.... ನೀವ್ಯಾಕೆ ಇಷ್ಟು ಆತಂಕ ಪಡ್ತಿದೀರೋ ನಂಗೆ ತಿಳೀದು..."

"ನನ್ನ ಆತಂಕ ಮುಂದೆ ನಿಮಗೆ ತಿಳಿದೇ ತಿಳಿಯುತ್ತೆ..... ಇದನ್ನೆಲ್ಲ ನಾನು ಮಲ್ಲಿಕಾಳಿಗಾಗಿ ಮಾಡ್ತಿರುವುದು...."

"ನಿಮ್ಮ ವಿನಾಕಾರಣ ಅನುಮಾನಗಳಿಗೆ ಉಪಾಯ, ಪರಿಹಾರ ಏನೂ ಇಲ್ವಾ?"

"ಇದೆ, ಒಂದೇ ಒಂದು ಉಪಾಯ...ನಾನು, ನನ್ನ ತಾಯಿ ಹೇಳಿದಂತೆ ಕೇಳುವುದು. ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ" ಬಿರಬಿರನೆ ಮುಂದೆ ನಡೆದ.

"ನೆನ್ನೆಯಿಂದ ಮನೆಗೇ ಬಂದಿಲ್ಲ." ಮಲ್ಲಿಕಾ ಫೋನಿನಲ್ಲೇ ಅಳುತ್ತಾ

ಹೇಳಿದಾಗ ಸಂಜಯ ಗಾಬರಿಗೊಂಡ. ತಂದೆಗೆ ಕರೆದು ವಿಷಯವನ್ನು ತಿಳಿಸಿದ. ಇಬ್ಬರೂ ಮಲ್ಲಿಕಾಳ ಮನೆಗೆ ಬಂದರು. ಸಂಜಯ ತನ್ನ ಶೌರಿಯ ನಡುವೆ ನಡೆದ ಮಾತುಕತೆಯನ್ನು ತಂದೆಗೆ ತಿಳಿಸಿದ್ದ. ಹಾಗೇ ಶೌರಿ ಏನಾದ್ರೂ ಫೋನಿನಲ್ಲಿ ನಿಮ್ಮೊಡನೆ ಮಾತನ್ನಾಡಿದ್ನಾ" ಅಂತ ಕೇಳಿದ.

"ಇಲ್ಲ, ಏನಾಗಿರಬಹುದು ಅವನಿಗೆ....ಇವತ್ತು ಒಂದು ದಿನ ಕಾದು ನೋಡೋಣ.... ಊರಿಗೆ ಏನಾದ್ರೂ ಹೋಗಿರಬಹುದೇನೋ ವಾಪಸ್ಸು ಬಂದರೂ ಬರಬಹುದು..."

"ಇಲ್ಲ, ಹಾಗೆ ಮಾಡಲು ಸಾಧ್ಯವೇ ಇಲ್ಲ. ತಾಯಿಯ ನಡುವಳಿಕೆ ಅವನಿಗೆ ಹಿಡಿಸಿರಲಿಲ್ಲ..."

"ಹಾಗಾದ್ರೆ ಅಲ್ಲಿಗೆ ಫೋನು ಮಾಡಿ ವಿಚಾರಿಸೋಣ....ಮಲ್ಲಿಕಾಳ ಹತ್ರ ಅಲ್ಲಿಯ ನಂಬರ್ರು ಇರುತ್ತೆ...." ಎಂದುಕೊಂಡು ಇಬ್ಬರೂ ತಕ್ಷಣವೇ ಮಲ್ಲಿಕಾಳ ಮನೆಗೆ ಬಂದಿದ್ದರು.

"ನೀನು ಗಾಬರಿಯಾಗ್ಬೇಡಮ್ಮಾ. ಎಲ್ಲೋ ಅರ್ಜೆಂಟಾಗಿ ಊರಿಗೆ ಹೋಗಿರಬಹುದು.... ಫೋನು ಮಾಡಿ ವಿಚಾರಿಸೋಣ... ನಂಬರು ಕೊಡು ಮಾತಾಡ್ತೀವಿ.." ಎಂದಿದ್ದರು ಸಂಜಯನ ತಂದೆ.

"ಇಲ್ಲ ಅಲ್ಲಿಗೂ ಬಂದಿಲ್ಲ ಅಂತ ಅಕ್ಕ ಹೇಳಿದ್ರು.... ನಾನೇ ವಿಚಾರಿಸಿದ್ದೆ" ಹೇಳುತ್ತಾ ಮತ್ತೆ ಅತ್ತಿದ್ದಳು.

"ಅಳ್ಬೇಡಿ ಮಲ್ಲಿಕಾ. ಹುಡುಕಿಸೋಣ, ಪೋಲೀಸ್ ಕಂಪ್ಲೆಂಟ್ ಕೊಡೋಣ. ನಿಮ್ಮ ಹತ್ರ ಬೇರೆಲ್ಲಿಗಾದ್ರೂ ಹೋಗುವ ವಿಚಾರ ಹೇಳಿದ್ರಾ?"

"ಇಲ್ಲ. ಇತ್ತೀಚೆಗೆ ಅವರ ಮನಸ್ಸೇ ಸರಿ ಇರ್ಲಿಲ್ಲ. ನಾವೆಲ್ಲಾದ್ರೂ ಬೇರೆ ಊರಿಗೆ ಹೊರಟು ಹೋಗೋಣ. ಈ ಊರಿನ ಸಹವಾಸವೇ ಬೇಡ ಅಂತ ಹೇಳ್ತಿದ್ರು. ಮಧ್ಯ ರಾತ್ರಿಯಲ್ಲಿ ಎದ್ದು ಕೂತು ಬಿಡುತ್ತಿದ್ದರು....ಯಾಕೋ ಏನೋ ತುಂಬಾ ಹೆದರಿದ್ದಂತೆ ಅನ್ನಿಸ್ತಿತ್ತು." ಸಂಜಯ ತಂದೆಯ ಕಡೆ ನೋಡಿದ.

"ಹಾಗಾದ್ರೆ ಬೇರೆ ಊರಿಗೆ ಕೆಲಸ ಹುಡಿಕ್ಕೊಂಡು ಹೋಗಿರಬಹುದು. ನೀವು ಚಿಂತಿಸ್ಬೇಡಿ. ಇಲ್ಲಿ ನೀವು ಒಬ್ಬರೇ ಇರುವುದು ಬೇಡ. ನಮ್ಮ ಮನೆಗೆ ಬಂದಿರಿ." ಸಂಜಯ ನುಡಿದಾಗ, ತಂದೆಯೂ ತಲೆಯಾಡಿಸಿದರು.

"ಶೌರೀನ ಹುಡುಕಿಸುವ ಜವಾಬ್ದಾರಿ ನಮಗಿರಲಿ. ನೀನು ಹೆದರ ಬೇಡ. ನಮ್ಮ ಮನೆಗೆ ಹೋಗೋಣ." ಎಂದು ಹೇಳಿ, ಅವಳನ್ನು ಹೊರಡಿಸಿದ. ಮುಂಬಾಗಿಲಿಗೆ ಬೀಗ ಹಾಕಿಸಿದ. ಮೂವರೂ ಹೊರಟರು.

ಹತ್ತು ದಿನಗಳು ಕಳೆದರೂ ಶೌರಿ ಹಿಂತಿರುಗಲಿಲ್ಲ. ಪೋಲೀಸರಿಗೂ

ಅವನನ್ನು ಪತ್ತೆ ಮಾಡಲು ಸಾಧ್ಯವಿರಲಿಲ್ಲ. ಸಂಜಯನ ತಂದೆ ಅವಳನ್ನು ಮಗುವನ್ನು ಕರೆದುಕೊಂಡು ಶೌರಿಯ ತಂದೆಯ ಮನೆಗೆ ಬಂದ. ಅವರುಗಳ್ಯಾರೂ ಇವರುಗಳನ್ನು ಆತ್ಮೀಯವಾಗಿ ಸ್ವಾಗತಿಸಲಿಲ್ಲ. ಮಗುವಿನ ಕಡೆ ನೋಡಲಿಲ್ಲ.

"ಶೌರಿ ಇದ್ದಕ್ಕಿದ್ದಂತೆ ನಾಪತ್ತೆಯಾಗಿದಾರೆ....ಇವಳು ಅಲ್ಲಿ ಒಬ್ಬಳೇ ಇರಲು ಹೇಗೆ ಸಾಧ್ಯ? ಅದಕ್ಕೇ ಕರೆದುಕೊಂಡು ಬಂದೆ" ಎಂದ.

"ಇಲ್ಲಿ ಇವಳಿಗೆ ಪ್ರವೇಶವಿಲ್ಲ. ನನ್ನ ಮಗನನ್ನು ನಮ್ಮಿಂದ ದೂರ ಮಾಡಿದಳು. ಈಗ ಬೇಸತ್ತು ಅವನೇ ಇವಳಿಂದ ದೂರ ಎಲ್ಲೋ ಹೋಗಿರಬೇಕು. ಅವನೇ ಎಲ್ಲೋ ಹೋಗಿರುವಾಗ, ಇವಳನ್ನು ಕಟ್ಟಿಕೊಂಡು ನಮಗೇನಾಗಬೇಕು? ಕರೆದುಕೊಂಡು ಹೋಗಿ....ಅಥವಾ ಬೇರೆಲ್ಲಿಗಾದರೂ ಬಿಡಿ ನಮಗೇನು?" ಶೌರಿಯ ತಾಯಿ ಒರಟಾಗಿ ಹೇಳಿದಳು.

"ಹಾಗೆ ಹೇಳ್ಬೇಡಿ ತಾಯಿ.... ಈಕೆ ನಿಮ್ಮ ಸೊಸೆ. ಈ ಮಗು ನಿಮ್ಮ ಮೊಮ್ಮಗು. ಕಡೇ ಪಕ್ಷ ಶೌರಿ ಹಿಂತಿರುಗಿ ಬರುವವರೆಗೂ ನಿಮ್ಮ ಮನೆಯಲ್ಲಿ ಇಟ್ಕೊಳ್ಳಿ. ನಿಮ್ಮ ಮಗನಿಗೋಸ್ಕರ ಅಷ್ಟಾದರೂ ಮಾಡಿ"

"ಇದನ್ನು ಹೇಳುಕ್ಕೆ ನೀವ್ಯಾರು? ನಮ್ಮ ವಿರುದ್ಧವಾಗಿ ಇವಳನ್ನು ಮದುವೆಯಾದ ದಿನವೇ ಅವನ ನಮ್ಮ ಸಂಬಂಧ ತೀರಿ ಹೋಯಿತು. ಇಷ್ಟೆಲ್ಲಾ ಮಾತಾಡುವ ನೀವು ನಿಮ್ಮ ಮನೆಯಲ್ಲೇ ಯಾಕೆ ಇಟ್ಕೋಬಾರ್ದು?"

"ಪರರ ಮನೆಯ ಹುಡುಗೀನ ನಮ್ಮ ಮನೇಲಿ ಹೇಗೆ ಇಟ್ಕೋಳ್ಳೋಕೆ ಆಗುತ್ತೆ. ನೀವು ಅವಳಿಗೆ ಅಜ್ಜಿ, ನಿಮ್ಮ ಮಗನ ಪತ್ನಿ..."

"ಸಾಕು.... ಸಾಕು.... ಈ ಸಂಬಂಧವೆಲ್ಲಾ ಯಾವುದೂ ಇಲ್ಲ. ಈ ಮೊದಲು ಒಬ್ಬ ಅನಾಥೆಯಂತೆ ಈ ಮನೆಗೆ ಬಂದು ಸೇರಿಕೊಂಡಳು. ಈಗ ಯಾಪ ದಯೆಯೂ ಇಲ್ಲ. ನಿಮಗೆ ಕರುಣೆ ಇದ್ದರೆ, ನಿಮ್ಮೊಡನೆ ಕರೆದ್ಕೊಂಡು ಹೋಗಿ. ಇಲ್ಲದಿದ್ದರೆ ಬೇಡ. ನಮಗೆ ತಿಳುವಳಿಕೆ ಹೇಳುವ, ಸಲಹೆ ಕೊಡುವ ಯಾವ ಅಧಿಕಾರವೂ ನಿಮಗಿಲ್ಲ. ನೀವು ಇನ್ನು ಹೋಗಬಹುದು" ಆಕೆ ನಿಷ್ಠುರವಾಗಿ ಹೇಳಿ ಒಳಗೆ ಹೊರಟು ಹೋಗಿದ್ದಳು. ಅಸಹಾಯಕಳಂತೆ ನಿಂತಿದ್ದ ಮಾಧುರಿ, ಪೆಚ್ಚು ಮುಖ ಮಾಡಿದ್ದಳು. ಬಂದ ದಾರಿಗೆ ಸುಂಕ ಇಲ್ಲ ಎನ್ನುವಂತೆ ಅಲ್ಲಿಂದ ಹಿಂತಿರುಗಿದ್ದರು....ಪ್ರಯಾಣದ ಉದ್ದಕ್ಕೂ ಮಲ್ಲಿಕಾ ಅಳುತ್ತಲೇ ಇದ್ದಳು.

ಪೋಲೀಸರು ನಿಧಾನವಾಗಿ ತಮ್ಮ ಕೆಲಸವನ್ನು ಮಾಡಿ ಮುಗಿಸಿದ್ದರು. ಮಲ್ಲಿಕಾಳಿಗೆ ಫೋನು ಮಾಡಿ ಅವಳನ್ನು ಪೋಲೀಸ್ ಸ್ಟೇಷನ್‌ಗೆ ಕರೆಸಿದ್ದರು.

ಜತೆಯಲ್ಲಿ ಸಂಜಯ್ ಹಾಗೂ ಅವನ ತಂದೆ ಹೋಗಿದ್ದರು.

ಅವರು ತಿಳಿಸಿದ ಸುದ್ಧಿ ನಂಬಲು ಅಸಾಧ್ಯವಾಗಿದ್ದಿತು. "ಇಲ್ಲಿಗೆ ಸುಮಾರು ಐವತ್ತು ಅರವತ್ತು ಕಿಲೋ ಮೀಟರ್ ದೂರದಲ್ಲಿರುವ ಒಂದು ಹಳ್ಳಿಯ ಗದ್ದೆಯಲ್ಲಿ ಒಂದು ಹೆಣ ಪತ್ತೆಯಾಗಿದೆ. ಅದನ್ನು ಅಲ್ಲಿಂದ ತಂದಿದ್ದಾರೆ. ನೀವು ಅದನ್ನು ಗುರುತಿಸಬೇಕು. ನೀವು ಕೊಟ್ಟಿರುವ ಮಾಹಿತಿಯ ಪ್ರಕಾರ ಅದು ಶೌರಿಯವರನ್ನೇ ಹೋಲುತ್ತದೆ."

ಆ ಮಾತನ್ನು ಕೇಳುತ್ತಿದ್ದಂತೇ ಮಲ್ಲಿಕಾ ಕುಸಿದು ಬಿದ್ದಳು. ತಕ್ಷಣವೇ ಅವಳಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿದರು. ಸ್ವಲ್ಪ ಹೊತ್ತಿನ ನಂತರ ಚೇತರಿಸಿಕೊಂಡಳು. ಅಷ್ಟರಲ್ಲಿ ಸಂಜಯ ಆ ದೇಹವನ್ನು ಶೌರಿಯದೇ ಎಂದು ಗುರುತಿಸಿದ್ದ.

"ಯಾರಿಗೂ ಹೇಳದೇ ಅವರ‍್ಯಾಕೆ ಆ ಹಳ್ಳಿಗೆ ಹೋಗಿದ್ದರು? ಅವರನ್ನು ಯಾರು ಕರೆದುಕೊಂಡು ಹೋಗಿದ್ದರು? ಇದುವರೆಗೆ ಅವರು ಎಲ್ಲಿದ್ದರು? ಈ ಅನುಮಾನಗಳಿಗೆ ಉತ್ತರವನ್ನು ಹುಡುಕಬೇಕಾಗುತ್ತದೆ. ನಿಮ್ಮ ಮೇಲೆ ಯಾರಿಗಾದರೂ ಅನುಮಾನ ಇದ್ದರೆ, ಕಂಪ್ಲೆಂಟ್ ಕೊಡಿ. ಇದು ಆತ್ಮಹತ್ಯೆಯೇ? ಅಥವಾ ಹತ್ಯೆಯೇ ಅಂತ ಪತ್ತೆ ಮಾಡುವ ಕೆಲಸ ನಮ್ಮದು" ಎಂದಿದ್ದರು ಅಧಿಕಾರಿಗಳು.

ಮಲ್ಲಿಕಾ ಕಂಗೆಟ್ಟಿದ್ದಳು. ಯಾವುದೇ ಉತ್ತರವನ್ನು ಕೊಡುವ ಸ್ಥಿತಿಯಲ್ಲಿರಲಿಲ್ಲ. ತನಗೇನೂ ಗೊತ್ತಿಲ್ಲವೆಂದೇ ತಲೆಯಾಡಿಸಿದ್ದಳು. "ಈಗ ನಿಮಗೆ ಶಾಕ್ ಆಗಿದೆ. ಇನ್ನೊಂದೆರಡು ದಿನಗಳನ್ನು ಬಿಟ್ಟೇ ಕಂಪ್ಲೆಂಟ್ ಕೊಡಿ ಪರವಾಗಿಲ್ಲ. ಪೋಸ್ಟ್ ಮಾರ್ಟಂ ಮಾಡಿ ದೇಹವನ್ನು ನಿಮ್ಮ ವಶಕ್ಕೆ ಕೊಡುತ್ತೇವೆ" ಎಂದಿದ್ದರು.

"ಸಂಜೂ, ನೀನು ಮಲ್ಲಿಕಾಳನ್ನು ಕರೆದುಕೊಂಡು ಮನೆಗೆ ಹೋಗು. ನಾನು ಉಳಿದ ಕೆಲಸಗಳನ್ನು ನೋಡಿಕೊಳ್ತೀನಿ" ಎಂದು ಹೇಳಿ ಅವರಿಬ್ಬರನ್ನು ಮನೆಗೆ ಕಳುಹಿಸಿ, ಶೌರಿಯ ತಂದೆಗೆ ವಿಷಯವನ್ನು ತಿಳಿಸಿದ. ಅವರು ಪೋಲೀಸ್ ಅಧಿಕಾರಿಯೊಂದಿಗೆ ಮಾತನಾಡಿ ತಾವುಗಳು ಬಂದು ದೇಹವನ್ನು ತೆಗೆದುಕೊಂಡು ಹೋಗುವುದಾಗಿ ತಿಳಿಸಿದರು. ಸಂಜಯನ ತಂದೆ ಅವರ ಬಗ್ಗೆ ಹೆಚ್ಚಿಗೆ ಏನನ್ನೂ ತಿಳಿಸದೇ ತನಗೆ ಅಲ್ಲಿ ಇನ್ನು ಏನೂ ಕೆಲಸವಿಲ್ಲ ಎಂದು ಮನೆಗೆ ಹಿಂತಿರುಗಿದ್ದ.

ಶೌರಿಯ ತಂದೆ ತಾಯಿಯರು ಬಂದು ಪೋಲೀಸ್ ಅಧಿಕಾರಿಗಳೊಡನೆ ಏನು ಮಾತನಾಡಿದ್ದರೋ, ಎಷ್ಟು ಹಣ ಕೊಟ್ಟರೋ ಒಂದೂ

ತಿಳಿಯಲಿಲ್ಲ. ಅವರು, ಇವರುಗಳಿಗೆ ತಿಳಿಸದೇ ದೇಹವನ್ನು ತಮ್ಮ ಊರಿಗೆ ಕೊಂಡೊಯ್ದಿದ್ದರು.

ವಿಷಯ ತಿಳಿದ ಮಲ್ಲಿಕಾ ಮತ್ತಷ್ಟು ಅತ್ತಳು. "ನಿನಗೆ ಅವರುಗಳ ಮೇಲೆ ಅನುಮಾನ ಇದ್ದರೆ ಕಂಪ್ಲೆಂಟ್ ಕೊಡೋಣ" ಎಂದ.

"ಬೇಡ ಇದರಿಂದ ಅವರ ಹಗೆತನವನ್ನು ಮತ್ತೂ ಹೆಚ್ಚಿಸಿಕೊಂಡ ಹಾಗಾಗುತ್ತದೆ. ಅವರೇ ಒಳ್ಳೆಯವರಾಗಿರಲಿ. ಹೇಗೂ ನಾನು ಅವರಿಗೆ ಬೇಡವಾದವಳು. ನಾನೇಕೆ ಹಗರಣ ಮಾಡಲಿ?" ಎಂದಳು.

"ನೀನು ಶೌರಿಯ ಪತ್ನಿ. ನಿನಗೆ ನಿನ್ನ ಮಗುವಿಗೆ ಆ ಮನೆಯಲ್ಲಿ ಅಧಿಕಾರವಿದೆ. ನಿನ್ನನ್ನು ಯಾರೂ ತಡೆಯುವಂತಿಲ್ಲ."

"ನನ್ನ ಗಂಡನೇ ಇಲ್ಲದಿರುವಾಗ, ನನಗೋಸ್ಕರ ಹೋರಾಡುವವರು ಯಾರಿದ್ದಾರೆ?...ನನ್ನನ್ನು ಮದುವೆಯಾದ ತಪ್ಪಿಗೆ, ಶೌರಿ ಎಲ್ಲರಿಂದ ದೂರ, ಬಹುದೂರ ಹೊರಟು ಹೋದರು....ಈ ಮಗುವಿಗೆ ಅಪಾಯವೇನೂ ಆಗದಿರಲಿ.... ನನಗೆ ಒಂದು ಕೆಲಸವನ್ನು ಕೊಡಿಸಿ... ನಾನು ಹೇಗೋ ಇದ್ಕೋತೀನಿ..."

"ಅದು ನಿನ್ನಂಥ ಚಿಕ್ಕವಳಿಗೆ ಸಾಧ್ಯವಿಲ್ಲಮ್ಮ. ನಾನು ಶೌರಿಯ ತಂದೆಯ ಹತ್ತಿರ ಮಾತಾಡ್ತೀನಿ. ನೋಡೋಣ.... ಈಗಲಾದರೂ ಅವರ ಮನಸ್ಸು ಕರಗ ಬಹುದು...." ಆತ ಸಮಾಧಾನ ಹೇಳಿದರು.

ಪೋಲೀಸ್ ಸ್ಟೇಷನ್‌ನಿಂದ ಸಂಜಯ್‌ಗೆ ಫೋನು ಬಂದಿತ್ತು. ತಕ್ಷಣವೇ ಬರಬೇಕೆಂದು ತಿಳಿಸಿದ್ದರು. ಸಂಜಯ್ ಆತಂಕದಿಂದ ತಂದೆಗೆ ತಿಳಿಸಿದ. ಇಬ್ಬರೂ ಪೋಲೀಸ್ ಸ್ಟೇಷನ್‌ಗೆ ಬಂದರು. ಅಲ್ಲಿ ಇನ್ನೊಬ್ಬ ವ್ಯಕ್ತಿ ಕುಳಿತಿದ್ದರು. ಅವರನ್ನು ಪರಿಚಯ ಮಾಡಿಕೊಟ್ಟರು. "ಇವರು ಲಾಯರ್ ಸುಭಾಷ್ ಅಂತ.... ಇವರು ನಿಮ್ಮ ಹತ್ತಿರ ಕೆಲವು ವಿಷಯಗಳನ್ನು ಮಾತನಾಡಬೇಕು ಅಂತ ಬಂದಿದಾರೆ...."

ಇಬ್ಬರೂ ಕೈ ಮುಗಿದು ನಮಸ್ಕಾರ ಎಂದರು. ಗಾಬರಿಯ ಮುಖವನ್ನು ಕಂಡು ಲಾಯರ್ರು ತುಟಿ ತೆರೆದರು. "ಈಗ್ಗೆ ನಾಲ್ಕು ವಾರಗಳ ಹಿಂದೆ ಶೌರಿ ಎನ್ನುವವರು ನನ್ನ ಬಳಿಗೆ ಬಂದಿದ್ದರು. ಒಂದು ವಿಲ್ ಬರೆಸಿದ್ದಾರೆ."

"ವಿಲ್ಲಾ...?" ಇಬ್ಬರೂ ಒಟ್ಟಿಗೇ ಕೇಳಿದರು.

"ಹೌದು.... ಹಾಗೇ ಕೆಲವು ವಿಷಯಗಳನ್ನು ಹೇಳಿ, ಈ ಪತ್ರವನ್ನು ನಿಮಗೆ ಕೊಡುವಂತೆ ತಿಳಿಸಿದ್ದರು...."

"ನನಗಾ? ಏನಿರಬಹುದು ಈ ಪತ್ರದಲ್ಲಿ?"

"ಏನೋ ನಂಗೆ ಗೊತ್ತಿಲ್ಲ... ನನ್ನ ಆರೋಗ್ಯ ಚೆನ್ನಾಗಿಲ್ಲ. ಯಾವ ಗಳಿಗೆಯಲ್ಲಿ ಏನು ಬೇಕಾದರೂ ಆಗಬಹುದು.... ಆ ನಂತರ ಈ ಪತ್ರವನ್ನು ಸಂಜಯ್ ಅನ್ನೋರಿಗೆ ತಲುಪಿಸಬೇಕು.... ಅಥವಾ ಏನೂ ಆಗದೇನೂ ಇರಬಹುದು.... ಮತ್ತೆ ಬಂದು ನಿಮ್ಮನ್ನು ಭೇಟಿಯಾಗ್ತೀನಿ ಅಂತ ತಿಳಿಸಿದ್ದರು...."

"ಮತ್ತೆ, ನಿಮಗೆ ಈ ವಿಷಯ ತಿಳಿದದ್ದು ಹೇಗೆ?"

"ನೆನ್ನೆಗೆ ಅವರು ತಿಳಿಸಿದ್ದ ಗಡುವು ಮುಗಿದಿತ್ತು. ಈ ದಿನದ ನಂತರ ಬರದಿದ್ದರೆ, ತಕ್ಷಣವೇ ಆಫೀಸಿಗೆ ಫೋನು ಮಾಡಬೇಕೆಂದು ತಿಳಿಸಿದ್ದರು. ಅಲ್ಲಿಗೆ ಫೋನು ಮಾಡಿದಾಗ ವಿಷಯ ತಿಳಿಯಿತು. ನಂತರ ಪೋಲೀಸರಿಗೆ ವಿಷಯ ತಿಳಿಸಿದೆ. ಅವರ ಮುಖಾಂತರ ನಿಮಗೆ ಹೇಳಿ ಕಳಿಸಿದೆ...."

"ಏನೋ ಈ ವಿಷಯಗಳೊಂದೂ ನಮಗೆ ಗೊತ್ತಿರಲಿಲ್ಲ."

"ಹಾಗಾದರೆ, ಅವರ ಪ್ರಾಣಕ್ಕೆ ಅಪಾಯ ಇದೆ ಎನ್ನುವ ಅನುಮಾನ ಅವರಿಗೆ ಇತ್ತು. ಈ ಬಗ್ಗೆ ನಿಮ್ಮ ಹತ್ತಿರ ಮಾತಾಡಿದ್ರಾ?" ಅಧಿಕಾರಿ ಕೇಳಿದರು.

"ಇಲ್ಲ ಸಾರ್. ನಮಗೆ ಏನನ್ನೂ ತಿಳಿಸಿರಲಿಲ್ಲ. ಮಲ್ಲಿಕಾಗೆ ಸಹ ತಿಳಿಯದು."

"ಅವರದು ಅಂತರ್ಜಾತೀಯ ವಿವಾಹ ಎಂದರು.... ಮನೆಯವರನ್ನು ವಿರೋಧಿಸಿ ಮದುವೆಯಾಗಿರುವುದು ಎಂದಿದ್ದರು.... ಅವರೇನಾದರೂ ಬೆದರಿಕೆ ಹಾಕಿರಬಹುದೇ?"

"ಏನೋ ನಮಗೆ ತಿಳಿಯದು....."

"ಮಲ್ಲಿಕಾಳ ಹತ್ತಿರ ಮಾತಾಡಬೇಕು....ಅವರೀಗ ಎಲ್ಲಿದಾರೆ?"

"ಅವರು ನಮ್ಮ ಮನೇಲಿದಾರೆ. ಒಂದು ಚಿಕ್ಕ ಮಗು ಇದೆ...."

"ಸರಿ, ಮಾತಾಡ್ತೀನಿ. ಮೊದಲು ಈ ಪತ್ರವನ್ನು ಪೋಲೀಸ್ ಅಧಿಕಾರಿಯ ಎದುರಿಗೆ ಒಡೆದು ಓದಿ ಬಿಡಿ. ಅದರಲ್ಲಿ ಏನಾದರೂ ಸುಳಿವು ಸಿಗಬಹುದು."

ಸಂಜಯ ನಡುಗುವ ಕೈಗಳಿಂದ ಕವರನ್ನು ಒಡೆದು ಪತ್ರವನ್ನು ಹೊರ ತೆಗೆದ. ಅಧಿಕಾರಿಯ ಕಡೆ ನೋಡಿದ. "ಮೊದಲು ನೀವು ಓದಿ ಪರವಾಗಿಲ್ಲ. ನಂತರ ನಾನು ಓದುತ್ತೀನಿ" ಸಂಜಯ ತಂದೆಯ ಕಡೆಗೊಮ್ಮೆ ನೋಡಿ ಪತ್ರವನ್ನು ಓದಿಕೊಂಡ. ಪ್ರೀತಿಯ ಗೆಳೆಯ ಸಂಜಯ್....ನನ್ನ ಮನಃಸ್ಥಿತಿ ಸರಿಯಾಗಿಲ್ಲ. ದಿನೇ ದಿನೇ ನನ್ನ ಧೈರ್ಯ ಕಡಿಮೆ ಆಗುತ್ತಿದೆ. ನನಗೆ ಏನೋ ಆಗುತ್ತದೆ ಎಂಬ ಭಯ ಹಗಲೂ ರಾತ್ರಿ ನನ್ನನ್ನು ಕಾಡುತ್ತಿದೆ.

ಕೆಟ್ಟ ಕನಸುಗಳು ಬೀಳುತ್ತದೆ. ಕನಸಿನಲ್ಲಿ ಯಾರೋ ಬಂದು ನನ್ನನ್ನು ಕರೆಯುವಂತೆ ಕಾಣಿಸುತ್ತದೆ.... ನನ್ನ ಕತ್ತು ಹಿಸುಕಿ ಕೊಲ್ಲುವಂತೆ ಅನ್ನಿಸುತ್ತದೆ. ಈ ಭ್ರಮೆ ಯಾಕೆ ಅಂತ ಅರ್ಥವಾಗ್ತಿಲ್ಲ.... ಜ್ಯೋತಿಷಿಗಳ ಹತ್ತಿರ ಮಾತಾಡಿದಾಗ, ಹತ್ತು ಹದಿನೈದು ದಿನಗಳೊಳಗೆ ಗಂಡಾಂತರ ಒದಗಲಿದೆ.... ಒಂದು ವೇಳೆ ಆ ದಿನಗಳು ಕಳೆದರೆ, ಮುಂದೆ ಏನೂ ತೊಂದರೆ ಇಲ್ಲ ಅಂತ ಹೇಳಿದಾರೆ. ಇದನ್ನೆಲ್ಲ ಮಲ್ಲಿಕಾಳಿಗೆ ಹೇಳಿದರೆ ಅವಳು ಗಾಬರಿಗೊಳ್ಳುತ್ತಾಳೆ. ಯಾರಿಗೂ ನಂಬಿಕೆ ಬರುವುದಿಲ್ಲ. ಆದ್ದರಿಂದ ನಿಮಗೆ ಪತ್ರವನ್ನು ಬರೆದಿದ್ದೇನೆ. ಒಂದು ವೇಳೆ ನನಗೆ ಏನಾದರೂ ಆಗಿ ಹೋದರೆ.... ನಾನು ಇಲ್ಲವಾಗಿ ಹೋದರೆ ಮಲ್ಲಿಕಾಳ ಬಾಳು ನರಕವಾಗಿ ಹೋಗುತ್ತದೆ. ಹಾಗಾಗಲು ಬಿಡಬೇಡಿ. ನನ್ನ ರಿಕ್ವೆಸ್ಟ್.... ನೀವು ಅವಳನ್ನು ಮದುವೆಯಾಗಿ ಇದು ನನ್ನ ಇಚ್ಛೆ...."

ಸಂಜಯ ತಟಸ್ಥನಾದ. ಅವನ ಕೈಯಿಂದ ಜಾರಿ, ಪತ್ರ ಬಿದ್ದಿತು. ಅವನ ತಂದೆ ಅದನ್ನು ಎತ್ತಿಕೊಂಡ. ಅಧಿಕಾರಿ ಕೈ ಚಾಚಿದ. ಆತ ಅವನಿಗೆ ಕೊಟ್ಟ. ಅವನು ನಿಧಾನವಾಗಿ ಪತ್ರವನ್ನು ಓದಿದ. ಲಾಯರ್ರ ಕೈಗೆ ಕೊಟ್ಟ. ಅವರು ಓದಿದ ನಂತರ ಸಂಜಯನ ತಂದೆಗೆ ಕೊಟ್ಟರು. ಅವರೂ ಓದಿದರು. ಅವರ ಮುಖದಲ್ಲಿ ಬೆವರಿಳಿಯಿತು. ಸಂಜಯನ ಕಡೆ ತಿರುಗಿದರು. ಅವನು ಹಾಗೇ ನಿಂತಿದ್ದ.

"ಸಂಜಯ್.... ಸಂಜಯ್...." ಅಧಿಕಾರಿ ಅವನನ್ನು ಎಚ್ಚರಿಸಿದರು. ಅವನು ಇತ್ತ ತಿರುಗಿದ. ಗೊಂದಲ ಅವನ ಕಣ್ಣುಗಳನ್ನು ತುಂಬಿತ್ತು. "ರಿಲಾಕ್ಸ್.... ರಿಲಾಕ್ಸ್.... ಕೂತ್ಕೊಳ್ಳಿ...." ಎಂದರು. ಸಂಜಯ ಬಳಿ ಇದ್ದ ಕುರ್ಚಿಯ ಮೇಲೆ ಕುಳಿತ.

"ಇದೇನಿದು? ಹೀಗ್ಯಾಕೆ ಬರೆದಿದಾರೆ ಪತ್ರದಲ್ಲಿ?" ಸಂಜಯನ ತಂದೆ ಅಧಿಕಾರಿಯನ್ನು ಪ್ರಶ್ನಿಸಿದರು.

"ನಾನೇನು ಹೇಳ್ಲೀ? ....ಇದು ಶೌರಿಯವರ ಕೈ ಬರಹವೇ ತಾನೇ?"

"ಇರಬಹುದು.... ಪರೀಕ್ಷೆ ಮಾಡಬೇಕು..."

"ಆದರೂ, ಅವರ ಈ ಇಚ್ಛೆ ಸ್ವಲ್ಪ ಅಚ್ಚರಿ ಅಂತ ಅನ್ಸುತ್ತೆ. ನಿಮಗೆ ಮದುವೆಯಾಗಿದೆಯಾ ಸಂಜಯ್?"

"ಇಲ್ಲ" ತಂದೆ ಉತ್ತರಿಸಿದರು.

"ಅವರು ತಾವು ಪ್ರೀತಿಸಿ ಮದುವೆಯಾದವಳನ್ನು ಸ್ನೇಹಿತನಿಗೆ ಒಪ್ಪಿಸಿ ಕೊಡುವ ಆಲೋಚನೆ ಬರಬೇಕಾದರೆ, ನಿಮಗಿಂತ ಉತ್ತಮ ಪತಿ, ಬೇರೆ ಯಾರೂ ಸಿಗಲಾರರು ಅಂತ ಅವರಿಗೆ ಅನ್ನಿಸಿರಬಹುದು. ನಿಮ್ಮ ಬಗ್ಗೆ

ನಂಬಿಕೆ, ವಿಶ್ವಾಸ ಸ್ವಲ್ಪ ಹೆಚ್ಚೇ ಇರಬಹುದು"

"ಆದರೂ...."

"ಇರಲಿ, ಇದು ನಿಮ್ಮ ಮನೆಯ ವಿಷಯ....ಅವರ ಇಚ್ಛೆಯನ್ನು ಪಾಲಿಸುವ, ಪಾಲಿಸದೇ ಇರುವ ಅಧಿಕಾರ ನಿಮಗೆ ಇದೆ. ಅಲ್ಲದೇ ಮಲ್ಲಿಕಾಳ ಮನಸ್ಸಿನಲ್ಲಿ ಏನಿದೆ ಅಂತ ಸಹ ತಿಳಿದುಕೊಳ್ಳಬೇಕಲ್ಲ...."

"ಅವಳಿಗೆ ಈ ವಿಷಯವನ್ನು ತಿಳಿಸಬೇಡಿ...."

"ನೋಡೋಣ.... ಹಾಗೇ ವಿಲ್‌ನಲ್ಲಿ ಏನು ಬರೆಸಿದಾರೆ ಅಂತ ಓದಿ ಬಿಡ್ತೀನಿ" ಎನ್ನುತ್ತಾ ಲಾಯರ್ರು ಇನ್ನೊಂದು ಕವರನ್ನು ಒಡೆದರು. ನನ್ನ ತಂದೆ ಮನೆಯ ಆಸ್ತಿಗೆ, ಯಾವುದೇ ಕಾರಣಕ್ಕೂ ಮಲ್ಲಿಕಾ ಕೈ ಒಡ್ಡಬಾರದು. ಮರು ಮದುವೆಯಾಗಿ, ನನ್ನ ಮಗುವನ್ನು ಬೆಳೆಸಬೇಕು. ಓದಿಸಿ, ವಿದ್ಯಾವಂತ ನನ್ನಾಗಿ ಮಾಡಬೇಕು. ಈ ವಿಷಯದಲ್ಲಿ ಸಂಜಯ ಹಾಗೂ ಅವನ ಮನೆಯವರು ಮಲ್ಲಿಕಾಳಿಗೆ ಸಹಾಯ ಮಾಡುವರೆಂಬ ನಂಬಿಕೆ ನನಗಿದೆ. ಆಗ ನನ್ನ ಆತ್ಮಕ್ಕೆ ಶಾಂತಿ ಸಿಗುತ್ತದೆ" ಎಂದು ಬರೆಸಿದ್ದ.

"ಇದೆಂಥಾ ವಿಲ್?.... ಯಾರಾದ್ರೂ ತಮ್ಮ ಅಂತಿಮ ಇಚ್ಛೆಯನ್ನು ಈ ರೀತಿ ತಿಳಿಸ್ತಾರಾ? ....ನನಗೇಕೋ ಸರಿ ಕಾಣ್ತಿಲ್ಲ" ಪೋಲೀಸ್ ಅಧಿಕಾರಿ ಎಂದರು.

"ಸಂಜಯ, ಅವನ ತಂದೆ ಮುಖ ಮುಖ ನೋಡಿಕೊಂಡರು. ಶೌರಿಯ ಪರಿಚಯ ನಮಗೆ ಇತ್ತೀಚೆಗಷ್ಟೇ ಆದದ್ದರು. ಆದರೆ ಈ ರೀತಿ ಅವರ ಮನಸ್ನಲ್ಲಿ ಇರಬಹುದು ಎಂಬ ಭಾವನೆ ಸಹ ನಮಗಿರಲಿಲ್ಲ. ಈಗ ಏನು ಮಾಡೋದು? ಮಲ್ಲಿಕಾಳ ಮನಸ್ನ ಲ್ಲಿ ಏನಿದೆಯೋ?"

"ವಿಲ್‌ನಲ್ಲಿರುವುದನ್ನು ನಿಮಗೆ ತಿಳಿಸಿದ್ದೇನೆ. ಅದನ್ನು ನಡೆಸುವುದು ಬಿಡುವುದು ನಿಮಗೆ ಸೇರಿದ್ದು. ಹಣದ ವಿಷಯವಾಗಿದ್ದರೆ ಕಾನೂನಿನ ಸಲಹೆಯನ್ನು ನೀಡಿ ಸಹಾಯವನ್ನು ಮಾಡಬಹುದಾಗಿತ್ತು. ಆದರೆ ಇಲ್ಲಿ ಬರೆಯಲ್ಪಟ್ಟಿರುವುದು ಸ್ವಲ್ಪ ವಿಚಿತ್ರ ಎನಿಸುತ್ತೆ.... ಆದರೂ ನೀವುಗಳು, ಅಂದರೆ ಇದಕ್ಕೆ ಸಂಬಂಧ ಪಟ್ಟವರು ಕುಳಿತು ಸಮಾಲೋಚನೆ ನಡೆಸಿ ಒಂದು ತೀರ್ಮಾನಕ್ಕೆ ಬನ್ನಿ. ಎಲ್ಲರಿಗೂ ಒಳ್ಳೆಯದಾಗಲಿ. ನನ್ನಿಂದ ಏನಾದರೂ ಸಹಾಯ ಬೇಕಾಗಿದ್ದರೆ ನನ್ನನ್ನು ಕಾಂಟ್ಯಾಕ್ಟ್ ಮಾಡಿ ಎಂದು ಹೇಳಿ ತಮ್ಮ ವಿಸಿಟಿಂಗ್ ಕಾರ್ಡ್‌ನ್ನು ಕೊಟ್ಟರು. ಪೋಲೀಸ್ ಅಧಿಕಾರಿಯೂ ಸಹ ಲಾಯರ ಮಾತನ್ನು ಅನುಮೋದಿಸಿ ಹಾಗೇ ಈ ಕೇಸಿಗೆ ಸಂಬಂಧ ಪಟ್ಟ ವಿಷಯಗಳನ್ನು ತನಿಖೆ ನಡೆಸುವುದಾಗಿ ಹೇಳಿದರು. ತಂದೆ ಮಗ ಇಬ್ಬರೂ

ಅಲ್ಲಿಂದ ಹೊರಟರು.

*****

ಈ ಘಟನೆ ನಡೆದು ಎರಡು ತಿಂಗಳ ಮೇಲಾಗಿತ್ತು. ತನಿಖೆ ಮುಂದುವರೆದಿತ್ತು. ಶೌರಿಯ ತಂದೆ ತಾಯಿ ಮಲ್ಲಿಕಾಳ ಮೇಲೇ ಆರೋಪವನ್ನು ಹೊರೆಸಿದ್ದರು. ಅವಳು ಒಳ್ಳೆಯವಳಲ್ಲವೆಂದು ಅವಳ ಚಾರಿತ್ರ್ಯಕ್ಕೇ ಕಳಂಕ ತರುವಂಥ ಮಾತುಗಳನ್ನಾಡಿದ್ದರು. ಶೌರಿ ಕೆಲಸದಲ್ಲಿದ್ದ ಸಂಸ್ಥೆಯವರು ಮಲ್ಲಿಕಾಳಿಗೆ ಕೆಲಸವನ್ನು ಕೊಡುವುದಾಗಿ ಆಶ್ವಾಸನೆಯನ್ನು ನೀಡಿದ್ದರು.

ಸಂಜಯನ ತಾಯಿ ಸ್ವಲ್ಪ ಮಟ್ಟಿಗೆ ಅಸಮಾಧಾನಗೊಂಡಿದ್ದಳು. ಮಲ್ಲಿಕಾ ಅವರ ಮನೆಯಲ್ಲಿ ಇರುವುದು ಅವಳಿಗೆ ಹಿಡಿಸಿರಲಿಲ್ಲ. "ಯಾರೋ ಏನೋ ಅವಳ್ಯಾಕೆ ಇಲ್ಲಿರಬೇಕು? ಅವಳ ಜವಾಬ್ದಾರಿಯನ್ನು ಹೊರಬೇಕಾದ ವರು ಅವಳ ಅತ್ತೆ ಮಾವ. ಅಲ್ಲಿಗೇ ಕಳಿಸಿ ಬಿಡಿ. ಅವರು ಏನಾದ್ರೂ ಮಾಡ್ಕೊಳ್ಳಲಿ"

"ಇವಳನ್ನು ಬಲವಂತವಾಗಿ ಅಲ್ಲಿಗೆ ಕಳಿಸಿದರೆ ಆತ್ಮಹತ್ಯೆ ಮಾಡ್ಕೋತಾಳೆ. ಆ ಪಾಪ ನಮ್ಮನ್ನು ಸುತ್ತಿಕೊಳ್ಳುತ್ತೆ ಅಷ್ಟೇ."

"ಪಾಪವೂ ಇಲ್ಲ, ಪುಣ್ಯವೂ ಇಲ್ಲ. ಸಂಜೂ ಮದುವೆ ಮಾಡ್ಕೊಂಡ್ರೆ, ಅವನ ಹೆಂಡತಿಯಾಗಿ ಬರೋಳು ಏನಂದ್ಕೊಳ್ತಾಳೆ? ....ಇದುವರೆಗೆ ಸುಧಾರಿಸಿದ್ದು ಆಯ್ತಲ್ಲ ಇನ್ನು ಸಾಕು".

"ಅವಳಿಗೆ ಇನ್ನೊಂದು ಮದುವೆ ಮಾಡುವವರೆಗಾದರೂ ಇಲ್ಲಿರಲಿ."

"ಮದುವೆ!... ಇವಳನ್ಯಾರು ಮದುವೆ ಆಗ್ತಾರೆ? ವಿಧವೆ.... ಮೇಲಾಗಿ ಒಂದು ಮಗು ಸಹ ಇದೆ...ಇದೆಲ್ಲಾ ಆಗದ ಹೋಗದ ಕೆಲಸ...."

"ಮದುವೆ ಆಗುತ್ತೆ. ನೋಡುಕ್ಕೆ ಚೆನ್ನಾಗಿದಾಳೆ. ಶೌರಿಯ ಆಸ್ತಿ ಎಲ್ಲಾ ಇವಳಿಗೇ ಸಿಗುತ್ತದೆ.... ಅಪರಾಗಿಯೇ ಕೇಳ್ಕೊಂಡು ಬರ್ತಾರೆ ನೋಡ್ತಿರು...."

"ಏನೋ ಅದು ಅವಳ ಹಣೇ ಬರಹ. ಅದನ್ನು ಕಟ್ಕೊಂಡು ನಮಗೇನಾಗ್ಬೇಕು....? ಅವಳನ್ನು ನಮ್ಮ ಮನೆಯಿಂದ ಕಳಿಸ್ಬಿಡಿ. ನಮ್ಮ ಮನೇಲೂ ಒಬ್ಬ ಗಂಡು ಹುಡುಗ ಇದಾನೆ. ನಮಗ್ಯಾಕೆ ಕೆಟ್ಟ ಹೆಸರು....?"

"ಸರಳಾ.... ನಾನೊಂದ್ಮಾತು ಕೇಳೋಣಾಂತ ಅಂದ್ಕೊಂಡಿದೀನಿ.... ನೀನೇನಂತೀಯೋ ಅಂತ...."

"ಅವಳನ್ನು ಈ ಮನೇಲಿಟ್ಕೋತೀನಿ ಅನ್ನೋ ವಿಷಯ ಬಿಟ್ಟು ಬೇರೆ ಏನು ಬೇಕಾದ್ರೂ ಕೇಳಿ"

"ನಮ್ಮ ಸಂಜೂಗೆ ಆದಷ್ಟು ಬೇಗ ಮದುವೆ ಮಾಡಿ ಬಿಡೋಣ."

"ಅದನ್ನೇ ನಾನೂ ಹೇಳಿದ್ದು...."

"ನಾನೊಂದು ತೀರ್ಮಾನಕ್ಕೆ ಬಂದಿದೀನಿ.... ಮಲ್ಲಿಕಾನ್ನ ನಮ್ಮ ಸೊಸೆಯನ್ನಾಗಿ ಮಾಡ್ಕೊಳ್ಳೋಣ..."

"ಏನಂದ್ರೀ.... ಮಲ್ಲಿಕಾ ನನ್ನ ಸೊಸೇನಾ? ಇಂಥಾ ಆಸೆ ನಿಮಗ್ಯಾಕೆ ಹುಟ್ತು?.... ಅವಳ ಮೇಲೇನ್ರೀ ನಿಮ್ಮ ಪ್ರೀತಿ? ನಮ್ಮ ಸಂಜೂಗೆ ಇವಳೇ ಆಗ್ಬೇಕಾ?.... ಅವಳೇನೋ ಮೋಡಿ ಮಾಡಿದಾಳೆ. ಮೊದಲು ಅವಳನ್ನು ಇಲ್ಲಿಂದ ಕಳಿಸಿ. ಸಂಜೂನ ಕೆಡಿಸಿ ಬಿಟ್ಟಾಳು" ಏರು ದನಿಯಲ್ಲಿ ಹೇಳಿದಳು.... ಅವನು ಅವಳನ್ನು ಬಲವಂತವಾಗಿ ಮಂಚದ ಮೇಲೆ ಕೂರಿಸಿದ.

"ಅವಳು ಅಂಥಾ ಕೆಟ್ಟ ಹುಡುಗಿ ಅಲ್ಲ ಸರಳಾ....ಅಲ್ಲದೇ ಶೌರೀನ ತುಂಬಾ ಪ್ರೀತಿಸ್ತಿದ್ಲು.... ಅಲ್ಲದೇ ಅವನೂ ಅಷ್ಟೇ...."

"ಮತ್ತೇ ಅಂಥೋಳನ್ನ ಸಂಜೂ ಮದುವೆ ಆದ್ರೆ ಇವನೇನ್ರೀ ಸುಖವಾಗಿರ್ತಾನೆ? ....ಇದೆಲ್ಲ ನಂಗೆ ಇಷ್ಟ ಇಲ್ಲ. ಬಲವಂತ ಪಡಿಸ್ಬೇಡಿ...."

"ಬಲವಂತದ ಪ್ರಶ್ನೆ ಅಲ್ಲ.... ಸಂಜೂಗೆ ಇವಳಿಗಿಂತ ಒಳ್ಳೆಯ ಹೆಣ್ಣು ಸಿಗುವುದಿಲ್ಲ...."

"ಯಾಕೆ ಸಿಗುಲ್ಲ? ತಂದೆಯಾಗಿ ನೀವೇ ಈ ಮಾತನ್ನು ಹೇಳ್ತಿದೀರಲ್ಲ. ಓದಿಲ್ವಾ? ಕೆಲಸವಿಲ್ವಾ? ಸಂಪಾದನೆ ಇಲ್ವಾ?....ಅವನಿಗೇನು ಕಡಿಮೆ ಆಗಿದೆ?"

"ನಿನಗೆ ಗೊತ್ತಿಲ್ಲದ ಒಂದು ವಿಚಾರ ಇದೆ ಸರಳಾ...." ದನಿ ಮೆತ್ತಗಾಯಿತು. ಅವಳು ಆತಂಕಗೊಂಡಳು. ನಮ್ಮ ಸಂಜೂಗೆ ಮಕ್ಕಳಾಗುವ ಯೋಗ ಇಲ್ಲ.... ಅವನು ಆ ಶಕ್ತಿಯನ್ನು ಕಳೆದುಕೊಂಡಿದಾನೆ...."

"ಆಂ! ಸುಳ್ಳೂ! ನೀವು ಸುಳ್ಳು ಹೇಳ್ತಿದೀರಿ...ನಮ್ಮ ಸಂಜೂಗೆ ಏನೂ ಆಗಿಲ್ಲ...."

"ನನಗೆ ಆ ಸತ್ಯ ಗೊತ್ತಿದೆ ಸರಳಾ....ಅವನಿಗೆ ಸಹ ಈ ವಿಷಯ ತಿಳೀದು....ಡಾಕ್ಟರು ನನಗೆ ಹೇಳಿದ್ದನ್ನು ನಾನು ಅವನಿಗೆ ತಿಳಿಸಿಲ್ಲ...."

"ಇದನ್ನು ನಾನು ನಂಬುಲ್ಲ. ಅವನು ಗಂಡು ಹುಡುಗ.... ಯೌವನಕ್ಕೆ ಬಂದಿದಾನೆ.... ಅವನಿಗೆ ಗೊತ್ತಿಲ್ಲದ್ದು ಏನಿರುತ್ತೆ? ನಿಮಗ್ಹೇಗೆ ಗೊತ್ತು? ಹೇಗಾದ್ರೂ ಅವನನ್ನು ಕೇಳಿ."

"ಈ ವಿಷಯಗಳನ್ನೆಲ್ಲ ಯಾರಾದ್ರೂ ನೇರವಾಗಿ ಕೇಳುಕ್ಕೆ ಆಗುತ್ತಾ? ಹೇಳುಕ್ಕೆ ಆಗುತ್ತಾ? ಅವನಿಗೆ ಸಂಕೋಚ ಇರುಲ್ವಾ? ಇದು ನಿಜ ನಿನ್ನಾಣೆಗೂ ನಿಜ...."

ಅವಳು ಮೌನವಾಗಿ ಅಳಲು ಪ್ರಾರಂಭಿಸಿದಾಗ ಅವನಿಗೆ ಕೆಡುಕೆನಿಸಿತು. "ನಿನ್ನ ಮನಸ್ಸಿಗೆ ನೋವನ್ನುಂಟು ಮಾಡಿದೀನಿ. ಆದರೆ ಇದು ಒಂದು ಅವಕಾಶ.... ಅವನಿಗೂ 'ಹೆಂಡತಿ, ಮಗು ಅನ್ನುವ ಸಂಸಾರ ಸಿಗಲಿ. ಈ ಮಗುವನ್ನೇ ನಮ್ಮ ಸ್ವಂತ ಮೊಮ್ಮಗು ಅಂತ ತಿಳಿದು ಬೆಳೆಸೋಣ...."

"ಇದ್ಹೇಗ್ರೀ ಸಾಧ್ಯ? ಇದನ್ನು ಹೇಗೆ ನಂಬಲಿ?"

"ಹಾಗಾದ್ರೆ ಒಂದು ಕೆಲಸ ಮಾಡೋಣ.... ಸಂಜೂ ಜೊತೆ ಮಾತಾಡಿ ನಾಲ್ಕಾರು ಹೆಣ್ಣುಗಳ, ಫೋಟೋ ತೋರಿಸಿ, ಮದುವೆಗೆ ಒಪ್ಪಿಸು.... ಅವನ ಮನದಲ್ಲಿ ಏನಿದೆ ಅಂತ ಖಂಡಿತಾ ತಿಳಿಯುತ್ತೆ." ಅವನು ಎದ್ದು ಹೋಗಿದ್ದ.

*****

"ಸಂಜೂ ಈ ಫೋಟೋಗಳನ್ನು ನೋಡೋ... ಇದರಲ್ಲಿ ನಿನಗೆ ಯಾವ ಹುಡುಗಿ ಇಷ್ಟ ಅಂತ ಹೇಳು. ಮುಂದುವರೆಸ್ತೀನಿ. ಆದಷ್ಟು ಬೇಗ ನಿನಗೆ ಮದುವೆ ಮಾಡ್ಬೇಕು. ಮೊಮ್ಮಕ್ಕಳೊಂದಿಗೆ ಆಡ್ಬೇಕು ಅಂತ ನನಗಾಸೆ...."

ಸಂಜಯ್ ಸೌಜನ್ಯಕ್ಕಾಗಿಯಾದರೂ ಆ ಹುಡುಗಿಯ ಫೋಟೋ ಕಡೆ ಕಣ್ಣೆತ್ತಿ ನೋಡಲಿಲ್ಲ. ತಾಯಿಯ ಕಣ್ಣು ತಪ್ಪಿಸಿ ನುಡಿದ. "ನನಗೆ ಮದುವೆ ಬೇಡಮ್ಮ...ನಾನು ಹೀಗೇ ಸುಖವಾಗಿದೀನಿ"

"ನಿನಗೂ ವಯಸ್ಸಾಯ್ತು ಕಣೋ. ಒಂಟಿ ಜೀವನದಲ್ಲಿ ಏನು ಸುಖ? ಒಂದ್ಸಲ ಸಾರಿ ಈ ಫೋಟೋಗಳ ಕಡೆ ನೋಡು. ನಿನಗೂ ಆಸಕ್ತಿ ಹುಟ್ಟುತ್ತೆ."

"ಹೇಳಿದ್ನಲ್ಲ ನಂಗೆ ಮದುವೆ ಬೇಡ ಅಂತ. ನೀನು ಪದೇ ಪದೇ ಅದನ್ನೇ ಆಡಿ ನನಗೆ ಕೋಪ ಬರಿಸ್ಬೇಡ" ಒದರಿದ.

"ಕೋಪ ಬರಿಸುವಂಥ ಮಾತನ್ನೇನು ಆಡಿದೀನಿ? ಯಾರನ್ನಾದ್ರೂ ಪ್ರೀತಿಸ್ತಿದ್ರೆ ಹೇಳು. ಅವಳನ್ನೇ ಮದುವೆಯಾಗುವಂತೆ."

"ಇಲ್ಲ, ನಾನು ಯಾರನ್ನು ಪ್ರೀತಿಸ್ತಿಲ್ಲ. ನನ್ನ ಮದುವೆಯ ಆಸೆಯನ್ನೇ ನೀನು ಇಟ್ಕೋಬೇಡ. ನನ್ನ ಪಾಡಿಗೆ ನನ್ನನ್ನು ಬಿಡು" ಕೈ ಮುಗಿದು ಅಲ್ಲಿಂದ ಎದ್ದು ಹೋಗಿದ್ದ...." ಸರಳ ಒಬ್ಬಳೇ ಕುಳಿತು ರೋಧಿಸಿದಳು. ಗಂಡ ಹೇಳಿದ್ದು ನಿಜವಿರಬಹುದೇ? ಎಂಥಾ ಅನ್ಯಾಯವಾಗಿ ಹೋಯ್ತಲ್ಲ" ಹೊರಗಿನಿಂದ ಒಳಕ್ಕೆ ಬಂದ ಗಂಡನನ್ನು ಕಂಡು ದನಿಯೆತ್ತಿ ಅಳಲು ಪ್ರಾರಂಭಿಸಿದಳು. ಅವನು ಸಾಂತ್ವನಗೊಳಿಸಿದ.

"ಈಗೇನ್ರೀ ಮಾಡೋದು?....ಸಂಜೂ ನನ್ನ ಮಾತಿಗೆ ಒಪ್ಪಲಿಲ್ಲ...."

"ತನ್ನಲ್ಲಿ ಅಂಥಾ ಕೊರತೆಯನ್ನಿಟ್ಕೊಂಡು ಮದುವೆ ಹೇಗೆ ಆಗ್ತಾನೆ?

ತಿಳಿದೂ ತಿಳಿದೂ ಒಂದು ಹುಡುಗಿಯ ಬಾಳನ್ನು ಹಾಳು ಮಾಡುಕ್ಕೆ ಆಗುತ್ತಾ?"

"ಒಂದು ವೇಳೆ ಇವನು ಮಲ್ಲಿಕಾಳನ್ನು ಮದುವೆಯಾದ್ರೆ....ಅವಳಿಗೆ ಆಸೆ ಹುಟ್ಟುಲ್ವಾ? ಅವಳಿಗೆ ಮೋಸ ಮಾಡಿದರೆತಾಗುಲ್ವಾ?"

ಅವಳು ಶೌರಿಯನ್ನು ಮರೆತು ಇವನನ್ನು ಮದುವೆಯಾಗಲು ಒಪ್ಪುವುದಿಲ್ಲ. ಒಂಟಿಯಾಗಿ ಇರೋದ್ರಿಂದ ತೊಂದರೆ ಅಂತ ತಿಳುವಳಿಕೆಯನ್ನು ಹೇಳಿದ್ರಾಯ್ತು.... ಹೇಗೂ ಅವಳಿಗೆ ಯಾರೂ ಇಲ್ಲ. ಮಗಳಂತೆ ನಮ್ಮೊಂದಿಗೆ ಇರ್ತಾಳೆ ಅಂತ ನನಗನ್ನಿಸುತ್ತೆ."

"ಇದಕ್ಕೆ ಇವರಿಬ್ಬರೂ ಒಪ್ಪಬೇಕಲ್ಲ."

"ಈ ಕೆಲಸ ನನಗಿರಲಿ. ನಿನ್ನ ಒಪ್ಪಿಗೆ ಬೇಕಾಗಿತ್ತು."

"ಇನ್ನೇನ್ಮಾಡ್ಲೀ.... ಬೇರೆಯವರು, ಸಂಜೂ ಯಾಕೆ ಮದುವೆ ಮಾಡಿ ಕೊಂಡಿಲ್ಲ ಅಂತ ಅನುಮಾನ ಪಡುವ ಮೊದಲೇ ಮದುವೆ ಮಾಡಿದ್ರಾಯ್ತು.... ಆದರೆ ಜಾತಿ, ಕುಲ ಒಂದೂ ಗೊತ್ತಿಲ್ಲದೆವಳು, ಗಂಡ ಇಲ್ಲದವಳು.... ಅವರ್ಯಾರಿಗೂ ಬೇಡವಾದವಳು.... ಅಂಥೋಳು ಸಂಜೂಗೆ ಹೆಂಡ್ತಿಯಾಗಿ ಬರ್ತಾಳೆ ಅಂತಂದ್ರೆ ಸಂಕಟ ಆಗುತ್ತೆ ರೀ...." ಕಣ್ಣೀರು ಹರಿದಿತ್ತು.

"ಅದಕ್ಕಿಂತ ಭಾರೀ ಸಂಕಟದ ಮ್ಹಾತು, ಸಂಜಯನಲ್ಲಿರುವ ಕೊರತೆ ಅದನ್ನು ಅರಗಿಸಿಕೊಳ್ಳಬೇಕಾದರೆ, ಇದನ್ನು ಆರಿಸಿಕೊಳ್ಳಲೇ ಬೇಕು."

"ಅದೇನು ಮಾಡ್ತೀರೋ ಮಾಡಿ....ಪೆದ್ದಿ ಥರ ಸುಮ್ಮನಿರ್ತೀನಿ."

"ಪೆದ್ದಿ ಥರ ಯಾಕೆ ಇರ್ಬೇಕು? ದೊಡ್ಡ ಹೃದಯದವಳಂತಿರು" ಅವಳ ತಲೆಯ ಮೇಲೆ ಕೈಯಾಡಿಸಿದ. ಅವನ ಕಣ್ಣುಗಳಿಂದಲೂ ಹನಿಗಳು ದುರಿದ್ದವು.

******

ಕೆಲವು ತಿಂಗಳುಗಳ ನಂತರ ಮಲ್ಲಿಕಾ-ಸಂಜಯರ ಮದುವೆ ನೆರವೇರಿತ್ತು. ಎಲ್ಲರ ಮನದಲ್ಲೂ ಒಂದೊಂದು ಥರದ ಕೋಲಾಹಲ, ಕಳವಳ, ತಳಮಳ, ಗೊಂದಲ. ಆ ರಾತ್ರಿ ಸಂಜೂ ಅವಳ ಬಳಿಗೆ ಬರದೇ ದೂರವೇ ಮಲಗಿದ್ದಾಗ, ಅವಳು ಸಮಾಧಾನದ ನಿಟ್ಟುಸಿರನ್ನು ಬಿಟ್ಟಳು. ಆಡಬೇಕೆಂದಿದ್ದ ಮಾತುಗಳನ್ನಾಡಲು ಆಗದೇ ಸಂಜಯ ಮೌನವಾಗಿ ಮಲಗಿದ್ದ. ... ಶೌರಿಯ ವಿಲ್ ಬಗ್ಗೆ ಚಿಂತಿಸಿದ. ಅವನೇಕೆ ತನಗೆ ಈ ಕರ್ತವ್ಯವನ್ನು ವಹಿಸಿದ. ತನ್ನ ಬಗ್ಗೆ ಅನುಮ್ಹಾನ ಬಂದಿರಬಹುದೇ? ಏಕೆ ತನಗೆ ಈ ಅಮೂಲ್ಯವಾದ ಉಡುಗೊರೆಗಳನ್ನು ಕೊಟ್ಟನೋ? ತನಗೆ ಅಪ್ಯಾಯಮಾನವಾದ ಮಲ್ಲಿಕಾಳಿಗೆ ಇದಕ್ಕಿಂತ ಉತ್ತಮ ಸಂರಕ್ಷಣೆ ಸಿಗಲು ಸಾಧ್ಯವಿಲ್ಲ ಅಂತ

ಅನ್ನಿಸಿರಬಹುದೇ? ಅವನು ಪ್ರೀತಿಸಿದವಳು ಕೇವಲ ಅವನಿಗಾಗಿ ಮಾತ್ರ ಮೀಸಲು ಎನ್ನುವುದನ್ನು ಉಳಿಸಿಕೊಳ್ಳಲು ಈ ಇಚ್ಛೆಯನ್ನು ತಿಳಿಸಿದನೇ? ಡ್ಯಾಡಿ ಈ ಬಗ್ಗೆ ಅನುಮಾನವನ್ನು ವ್ಯಕ್ತ ಪಡಿಸದೇ ಮಲ್ಲಿಕಾಳಿಗಾಗಿ ತನ್ನನ್ನು ಒಪ್ಪಿಸುವಂತೆ ಮಾತಾಡಿದರಲ್ಲ.... ಯಾರಿಗೆ ಥ್ಯಾಂಕ್ಸ್ ಹೇಳಬೇಕು? ತನ್ನಲ್ಲೇ ಪ್ರಶ್ನಿಸಿಕೊಂಡ.

*

ಪಾಲಿಗೆ ಬಂದದ್ದು

"ಹಿತ್ಲಿಗೆ ಬಾ... ನಾನು ನಿನ್ಹತ್ರ ಏನೋ ಹೇಳ್ಬೇಕು" ತಾಯಿ ಒರಟಾಗಿ ಹೇಳಿದಾಗ ನಂದಿನಿ ಕೆಟ್ಟ ಮುಖ ಮಾಡಿದಳು.

"ಇಲ್ಲೇ ಹೇಳು, ಅದೇನು ಗುಟ್ಟು?"

"ಹೌದು, ಗುಟ್ಟಿನ ವಿಚಾರವೇ. ಜಾಹ್ನವಿಗೆ ಗೊತ್ತಾಗಬಾರದು...." ಅವಳಿಗೆ ಗೊತ್ತಾಗದೇ ಇರುವಂಥ ವಿಚಾರ ಏನಿರಬಹುದು ಎಂಬ ಕುತೂಹಲ ನಂದಿನಿಯನ್ನು ಕೆರಳಿಸಿತು. ತಿಳಿದುಕೊಳ್ಳುವ ಆಸೆಯಿಂದ ಹಿತ್ತಲಿಗೆ ನಡೆದಳು.

"ಪಾರ್ವತಮ್ಮನ ಮಗನಿಗೆ ನಿನ್ನನ್ನ ಕೇಳ್ಕೊಂಡು ಪತ್ರ ಬರೆದಿದಾರಂತೆ. ನಾಳೆ ನಾಡಿದ್ದರಲ್ಲಿ ನಿನ್ನನ್ನ ನೋಡೋಕೆ ಬರ್ತಾರಂತೆ...." ತಾಯಿಯ ದನಿಯಲ್ಲಿ ಅಸಮಾಧಾನದ ಛಾಯೆಯಿತ್ತು.

"ನನ್ನನ್ನ?.... ನೀನೆಲ್ಲೋ ಸರಿಯಾಗಿ ಕೇಳಿಸ್ಕೊಂಡಿಲ್ಲ"

"ನಿನ್ನ ಜಾಣತನದ ಮಾತು ನಂಗೆ ಬೇಡ. ನಿಮ್ಮಪ್ಪ ಹೇಳಿದ್ದನ್ನು ನಿಂಗೆ ಹೇಳಿದೀನಿ..." ಅಸಹನೆಯಿಂದ ನುಡಿದಳು.

"ಸರಿ, ಹೇಳಾಯ್ತಲ್ಲ. ಈಗ ನನ್ನ ಮಾತನ್ನು ಕೇಳು. ನನಗೆ ಪಾರ್ವತಮ್ಮನ ಮಗನನ್ನು ಮದುವೆಯಾಗೋ ಆಸೆ ಖಂಡಿತಾ ಇಲ್ಲ" ನೇರವಾಗಿ ನೋಡದೇ ಎತ್ತಲೋ ತಿರುಗಿ ನುಡಿದಳು.

"ನೀನು ಹೀಗಂದೆ ಅಂತ ನಿಮ್ಮಪ್ಪಂಗೆ ಹೇಳುಕ್ಕಾಗುತ್ತಾ?... ಅವರ ಮನೆಯವರಿಗೆ ತಿಳಿಸುಕ್ಕೆ ಆಗುತ್ತಾ?.... ಕಾರಣ ಏನೂಂತ ಕೇಳಿದರೆ ಏನ್ಹೇಳೋದು?" ತಾಯಿ ಚುರುಕಾಗಿ ಕೇಳಿದ್ದಳು.

"ಏನ್ಬೇಕಾದ್ರೂ ಹೇಳ್ಕೊಳ್ಳಿ. ನಂಗೆ ಇಷ್ಟವಿಲ್ಲ ಅಂತಂದ್ರೆ ಇಷ್ಟವಿಲ್ಲ" ಎನ್ನುತ್ತಾ ಹಿಂತಿರುಗಿ ಹೊರಟವಳನ್ನು ತಾಯಿ ನಿಲ್ಲಿಸಿದಳು.

"ಕಾರಣ ಏನೂಂತ ಅದನ್ನಾದ್ರೂ ತಿಳಿಸ್ಬಿಡು. ಸಮಂಜಸ ಅಂತ ಅನ್ನಿಸಿದ್ರೆ ಅದನ್ನೇ ಹೇಳಿದ್ರಾಯ್ತು"

"ನಂಗೆ ಇದೇ ಊರ್ನಲ್ಲಿರೋಕೆ ಸುತರಾಂ ಇಷ್ಟವಿಲ್ಲ. ಇದೇ ಊರ್ನಲ್ಲಿ ಇಪ್ಪತ್ತೆರಡು ವರ್ಷಗಳಿಂದ ಇದ್ದೂ ಇದ್ದೂ ಬೇಜಾರಾಗಿದೆ.... ಬೇರೆ ಯಾವುದೇ ಊರಿನ ಗಂಡಾದ್ರೂ ಸರಿ. ಈ ಊರಿನ ಗಂಡಂತೂ ನಂಗೆ ಬೇಡ...."

"ಈ ಕಾರಣಾನ ಕೇಳಿದ್ರೆ ಯಾರಾದ್ರೂ ನಗ್ತಾರೆ ಅಷ್ಟೇ. ಅವರಾಗಿಯೇ ಕೇಳಿರುವಾಗ ಇಲ್ಲ ಅಂತ ಅನ್ನೋಕೆ ಆಗುತ್ತಾ? ಅವಮಾನ ಮಾಡಿದ ಹಾಗಾಗುತ್ತೆ. ಅಲ್ಲದೇ ಮುಂದೆ ನಿಂಗೆ ಗಂಡು ಸಿಗದೇನೇ ಇದ್ದರೆ?"

"ಯಾಕೆ ಸಿಗುಲ್ಲ?.... ನಾನು ಎಲ್ಲಾ ರೀತಿಯಿಂದಲೂ ಸರಿಯಾಗಿ ಇದೀನಲ್ಲ. ಓದಿದೀನಿ.... ನೋಡೋಕೆ ಲಕ್ಷಣವಾಗಿದೀನಿ" ತಾಯಿಯ ಕಡೆ ನೋಡಿದಳು.

"ಅದಕ್ಕೇ ಅವರೂ ನಿನ್ನನ್ನು ಕೇಳ್ತಿರೋದು?..." ಈ ಮಾತನ್ನು ತಾಯಿ ಸಂತೆಸದಿಂದ ಹೇಳಿರಲಿಲ್ಲ. ಅವರ ಈ ಆಸೆ ತಪ್ಪು ಎನ್ನುವ ಭಾವವಿತ್ತು.

"ಇಲ್ಲಮ್ಮ. ಯಾರು ಏನೇ ಹೇಳಲಿ? ನನಗೆ ಅವನು ಇಷ್ಟವಿಲ್ಲ... ಅವನ ಮನೆ ಇಷ್ಟವಿಲ್ಲ.... ಮೊದಲ್ನೇದಾಗಿ ಈ ಊರೇ ಇಷ್ಟವಿಲ್ಲ...."

"ಮೆಲ್ಲಗೆ ಮಾತಾಡು. ಯಾರಿಗಾದ್ರೂ ಕೇಳಿಸೀತು. ದುರಹಂಕಾರ ಅಂತ ಅಂದ್ಕೊಳ್ತಾರೆ...."

"ಇದು ದುರಹಂಕಾರ ಅಲ್ಲಮ್ಮಾ.... ನನ್ನ ಇಷ್ಟ, ನನ್ನ ಅಭಿಪ್ರಾಯವನ್ನು ತಿಳಿಸುವ ಹಕ್ಕು ನನಗಿಲ್ವಾ?"

"ಹೆಣ್ಣು ಹುಡುಗಿಯರಿಗೆ, ಹೆಣ್ಣನ್ನು ಹೆತ್ತವರಿಗೆ ಹಕ್ಕನ್ನು ಚಲಾಯಿಸುವ ಸ್ವಾತಂತ್ರ್ಯ ಇರುಲ್ಲ ನಂದಿನೀ.... ನಮ್ಮನ್ನೆಲ್ಲಾ ನಮ್ಮ ಕಾಲದಲ್ಲಿ ಯಾರೂ ಕೇಳಲಿಲ್ಲ. ಅವರು ನೋಡಿದ್ದು, ಮಾಡಿದ್ದು.... ನಾವು ತಲೆ ತಗ್ಗಿಸಿ ಮೌನ ವಾಗಿರುತ್ತಿದ್ದೆವು...."

"ಆ ಅಸಹನೇನ ಈಗ ಅಪ್ಪನ ಮೇಲೆ ತೋರಿಸುಲ್ವಾ? ನಮ್ಮ ಮೇಲೆ ಪ್ರದರ್ಶನ ಮಾಡುಲ್ವಾ?"

"ಮಾತು ಅತಿಯಾಯ್ತು... ಒಂದು ಪ್ರಶ್ನೆ ಕೇಳಿದ್ರೆ ನೀನು ನೂರೆಂಟು ಪ್ರಶ್ನೆಗಳನ್ನು ಕೇಳ್ತೀಯ. ಇದಕ್ಕೇನಾ ನಿನ್ನನ್ನು ಕಾಲೇಜಿಗೆ ಕಳಿಸಿದ್ದು?"

"ಅಪ್ಪ ನನ್ನನ್ನು ಕಾಲೇಜಿಗೆ ಸೇರಿಸಿದ್ರು.... ನಾನು ಓದಿ ಪಾಸು ಮಾಡಿದೆ. ಎಷ್ಟೋ ಸಾರಿ, ನೀನೇ ಹಂಗಿಸಿ ಅಂದಿಲ್ವಾ...?" "ಫೀಸು

ಕೊಟ್ಟು ಓದಿಸ್ತಿದೀನಿ.... ನೀನೇನು ಮುಂದೆ ಸಂಪಾದಿಸಿ ನಮಗೆ ಕೊಡ್ತೀಯಾ ಅಂತ.... ಅದೆಲ್ಲಾ ನೆನಪಿನಲ್ಲಿದೆ...."

"ಹೌದು ಅಂದೆ...ಅದರಲ್ಲಿ ತಪ್ಪೇನಿದೆ? ನಿಮ್ಮಪ್ಪನಿಗೆ ಬರುವ ಸಂಬಳದಲ್ಲಿ, ನಿನ್ನ ಫೀಸು, ಪುಸ್ತಕ ಬಟ್ಟೆ ಅಂತ ಎಷ್ಟೊಂದು ಖರ್ಚಾಗಿ ಹೋಗ್ತಿತ್ತು? ನಿಮ್ಮಗಳ ಮದುವೆ ಆಗ್ಬೇಕು.... ನಿನ್ನ ತಮ್ಮಂದಿರ ವಿದ್ಯಾಭ್ಯಾಸ ಆಗ್ಬೇಕು.... ಅದನ್ನೆಲ್ಲ ನಾನೇ ತಾನೇ ಯೋಚಿಸ್ಬೇಕು...."

"ಕೆಲಸಕ್ಕೆ ಸೇರಿಕೊಳ್ತೀನಿ ಅಂತಂದ್ರೆ ಅಪ್ಪ ಬೇಡ ಅಂತಾರೆ. ಇಲ್ಲದಿದ್ರೆ ನನಗೋಸ್ಕರ ಆಗಿರುವ ಖರ್ಚನ್ನು ಬಡ್ಡಿ ಸಮೇತ ಕೊಡ್ತಿದ್ದೆ...."

"ಇದೇ.... ಈ ದುರಹಂಕಾರ ಬೇಡ ಅಂತ ಅನ್ನೋದು. ನಾಲ್ಕಕ್ಷರ ಕಲಿತಿದೀನಿ ಅಂತ ಜಂಭ ಮಾಡ್ಬೇಡ..."

"ನನ್ನ ತಾಯಿಯಾಗಿ ನೀನೂ ನನ್ನನ್ನು ಅರ್ಥ ಮಾಡ್ಕೊಂಡಿಲ್ವಲ್ಲಾ...."

"ಸರಿ, ಈಗೇನು? ನಿಂಗೆ ಇಷ್ಟವಿಲ್ಲ ಅಂತ ಹೇಳೋದು ತಾನೇ...."

"ಹೂಂ, ಅಷ್ಟು ಮಾಡು...." ಎಂದು ಹಿಂದಕ್ಕೆ ತಿರುಗಿದಳು. ಹಿತ್ತಿಲ ಬಾಗಿಲಿನಲ್ಲಿ ಅವಳ ಅಕ್ಕ ನಿಂತಿದ್ದಳು. ಅವಳು ಸ್ವಲ್ಪ ಸ್ವಲ್ಪ ಮಾತನ್ನು ಕೇಳಿಸಿಕೊಂಡಿದ್ದಳು. ಇವಳಿಗೂ ಅವಳನ್ನು ಕಂಡು ಕಸಿವಿಸಿಯಾಗಿತ್ತು. ಒಳಕ್ಕೆ ಹೋಗಲಿದ್ದವಳನ್ನು ಹಿಡಿದು ನಿಲ್ಲಿಸಿದಳು.

"ಅಮ್ಮ ಏನ್ಹೇಳ್ತಿದ್ಲು ನಿಂಗೆ?" ಜಬರ್ದಸ್ತಿನಿಂದ ಕೇಳಿದಳು.

"ಅವಳನ್ನೇ ಕೇಳ್ಕೋ" ಎಂದು ಹೇಳಿ ಅಲ್ಲಿ ನಿಲ್ಲದೇ ಒಳಕ್ಕೆ ಓಡಿದ್ದಳು.

ಆಮೇಲೆ ಅಪ್ಪ ಅಮ್ಮನಲ್ಲಿ ಏನು ಮಾತುಕತೆಗಳು ನಡೆದವೋ? ಅಪ್ಪ ತಾವು ಇದ್ದಲ್ಲಿಗೇ ನಂದಿನಿಯನ್ನು ಕರೆಸಿದ್ದರು. ನಿಮ್ಮಮ್ಮನ ಹತ್ರ ತಲೆಹರಟೆ ಮಾತನ್ನಾಡಿದ್ಯಂತೆ.... ಅವರಾಗಿಯೇ ನಿನ್ನನ್ನು ಕೇಳ್ಕೊಂಡು ಬಂದಿದಾರೆ. ನಾವ್ಯಾರೂ ಬೇಡ ಅನ್ನೂಕ್ಕಾಗುಲ್ಲ. ಒಂದು ವೇಳೆ ಆ ಹುಡುಗ ನಿನ್ನನ್ನೇ ಮದುವೆಯಾಗೋದು ಅಂತ ಹಠ ಹಿಡಿದ್ರೆ ನೀನೂ ಒಪ್ಕೋಬೇಕಾಗುತ್ತೆ."

"ಅಲ್ಲ ಅಪ್ಪಾ.... ನೀವು ಅವರನ್ನು ವಿಚಾರಿಸಿದ್ದು ಅಕ್ಕನಿಗಾಗಿ....ಈಗ ನನ್ನನ್ನು ಮಾಡ್ಕೋ ಅಂತಂದ್ರೆ....?"

"ಬಾಯ್ಮುಚ್ಚು. ಸುಮ್ಮನೇ ಹೇಳಿದಷ್ಟನ್ನು ಕೇಳು...." ನಂದಿನಿಗೆ ಅಳು ಬರುವಂತಾಗಿತ್ತು. ಸಪ್ಪೆಯ ಮುಖವನ್ನು ಹೊತ್ತು ಅಲ್ಲಿಂದ ಸರಿದು ಹೋಗಿದ್ದಳು.

****

ಎರಡು ದಿನಗಳ ನಂತರ ವರನ ಕಡೆಯವರು ವಧೂ ಪರೀಕ್ಷೆಗೆಂದು

ಬರುವವರಿದ್ದರು. ತಾಯಿ ಇಬ್ಬರಿಗೂ ಅಲಂಕರಿಸಿಕೊಂಡು ಸಿದ್ಧರಾಗಿರುವಂತೆ ಹೇಳಿದ್ದಳು. ಅಲ್ಲಿಯೇ ಇದ್ದ ದೊಡ್ಡಕ್ಕ ನಕ್ಕಿದ್ದಳು. ಇದೇನಮ್ಮ ಜಾತ್ರೇಲಿ ಎತ್ತುಗಳನ್ನು ಆಯ್ಕೆ ಮಾಡಿಕೊಳ್ಳೂವಂತೆ! ದೊಡ್ಡೋಳಿಗೇ ಮೊದಲು ಮದುವೆ ಮಾಡೋದು ಅಂತ ಧೈರ್ಯವಾಗಿ ಹೇಳಿ ಬಿಡಬೇಕಾಗಿತ್ತು. ಇವರಿಬ್ಬರಲ್ಲಿ ಯಾರೇ ಒಬ್ಬರನ್ನು ಅವರು ಆರಿಸಿಕೊಂಡರೆ, ಇನ್ನೊಬ್ಬರಿಗೆ ಅವಮಾನ ಮಾಡಿದಂತೆ ಆಗುಲ್ವಾ?"

"ಅದ್ಯಾಕೆ ಅವಮಾನ ಆಗುತ್ತೆ? ಹೆಣ್ಣು ಮಕ್ಕಳಿರುವವರಿಗೆ ಮಾನ ಅವಮಾನ ಒಂದೂ ಅರಿವಿಗೆ ಬರುಲ್ಲ. ನಾವು ಜಾಹ್ನವೀಗೆ ಅಂತ ವಿಚಾರಿಸಿದ್ದೆವು. ಜಾತಕವೂ ಕೂಡಿತ್ತು. ಆದರೆ ಅವರು, ನಂದಿನೀನ ಅವರಾಗಿಯೇ ಕೇಳ್ತಿದಾರೆ. ಅದ್ಯಾವಗ್ಲೋ ಇವಳನ್ನು ನೋಡಿದ್ರಂತೆ...."

"ಮತ್ತೆ ಈಗ್ಯಾಕೆ ವಧು ಪರೀಕ್ಷೆ?"

"ಸಾಂಪ್ರದಾಯಿಕವಾಗಿ ಹೆಣ್ಣನ್ನು ನೋಡುಕ್ಕೆ ಬರ್ತೀವಿ ಅಂತಂದ್ರೆ ಬೇಡ ಅಂತ ಅನ್ನೂಕೆ ಆಗುತ್ತಾ? ಅವರುಗಳೇ ಮತ್ತೆ ಏನು ಹೇಳ್ತಾರೋ ಹಾಗೇ. ನಿಮ್ಮ ಅಪ್ಪ ಅಂತೂ ಅವರಿಗೆ ಮಾತನ್ನು ಕೊಟ್ಟು ಬಿಟ್ಟಿದ್ದಾರೆ...."

"ಇದು ತಪ್ಪಲ್ವೇನಮ್ಮ...."

"ತಪ್ಪೋ ನೆಪ್ಪೋ.... ಸುಲಭದಲ್ಲಿ ಮದುವೆ ಆಗುತ್ತೆ. ಅವರಾಗಿಯೇ ಕೇಳಿದ್ರೆ, ಕೊಡೋದು ಬಿಡೋದು ಹೆಚ್ಚು ಬೀಳುಲ್ಲ...."

"ಇಂಥಾ ವಿಚಾರದಲ್ಲೂ ಅಮ್ಮನಿಗೆ ಲೆಖ್ಖಾಚಾರ.... ನೀನಾದ್ರೂ ಹೇಳೇ ಅಕ್ಕಾ...." ನಂದಿನಿ ಅಕ್ಕನನ್ನು ಸಮೀಪಿಸಿದಳು.

"ನೀನು ಸುಮ್ನಿರು ಸರಸು. ಏನೇನೋ ಹಚ್ಚಿ ಕೊಡ್ಬೇಡ. ಹುಡುಗ ಓದಿದಾನೆ, ಕೆಲಸದಲ್ಲಿದಾನೆ. ಒಬ್ಬನೇ ಮಗ, ಸ್ವಂತ ಮನೆ ಇದೆ, ಇನ್ನೇನ್ಬೇಕು?"

"ಅದೇನೋ ಸರಿ, ನಿಂದೇನೇ ಗೊಣಗಾಟ?"

"ನಂಗೆ ಇದೇ ಊರ್ನಲ್ಲಿರುಕ್ಕೆ ಇಷ್ಟವಿಲ್ಲ"

"ಸಂಸಾರ ಮಾಡುಕ್ಕೆ ಯಾವ ಊರಾದ್ರೇನು?"

"ಅದು ನನ್ನ ಇಷ್ಟ..."

"ಒಟ್ನಲ್ಲಿ ಹೊರಗಿನೋರ ಎದುರಿಗೆ ನಮಗೆ ಅವಮಾನ ಮಾಡುಕ್ಕೆ ನೀವುಗಳು ಕಾಯ್ತಿರ್ತೀರಿ.... ಏನಾದ್ರೂ ಮಾಡ್ಕೊಳ್ಳಿ" ಎಂದು ಒದರಿ ತಾಯಿ ಒಳಕ್ಕೆ ಹೊರಟು ಹೋಗಿದ್ದಳು. ಜಾಹ್ನವಿಯ ಮುಖ ಪೆಚ್ಚಾಗಿತ್ತು. ಆದರೂ ಅಲಂಕರಿಸಿಕೊಂಡು ಸಿದ್ಧಳಾಗಿದ್ದಳು.

ವರನ ಕಡೆಯವರು ಸಮಯಕ್ಕೆ ಸರಿಯಾಗಿ ಬಂದರು. ನಾಲ್ಕೈದು

ಜನರು ಇದ್ದರು. ಹೂವು ಹಣ್ಣುಗಳನ್ನು ತಂದಿದ್ದರು. ಮೊದಲಿಗೆ ಸ್ವಾಗತಿಸಿ, ಕುಶಲವನ್ನು ವಿಚಾರಿಸಿ, ಕುಳ್ಳಿರಿಸಲಾಯಿತು. ಕಾಫಿ ತಿಂಡಿಯ ಆತಿಥ್ಯವೂ ಆಯಿತು. ಹೆಣ್ಣನ್ನು ಕರೆತರುವ ಸಮಯ ಬಂದಿತ್ತು.

ಸರಸು ನಂದಿನಿಯನ್ನು ರೂಮಿನಿಂದ ಕರೆದುಕೊಂಡು ಬಂದಳು. ಅಲ್ಲಿ ಹಾಸಿದ್ದ ಚಾಪೆಯ ಮೇಲೆ ಲಕ್ಷಣವಾಗಿ ಕುಳಿತಳು. ಎಲ್ಲರ ನೋಟವೂ ನಂದಿನಿಯ ಮೇಲೆ. ನಂದಿನಿ ಮುಖವನ್ನು ಸಿಂಡರಿಸಿದಳು. ಒಮ್ಮೆಯೂ ವರನ ಕಡೆ ನೋಡಲಿಲ್ಲ. ಕಡೆಗೊಮ್ಮೆ ವರ ನುಡಿದ....

"ನಾನು ನಂದಿನಿಯ ಹತ್ತಿರ ಏಕಾಂತದಲ್ಲಿ ಮಾತಾಡ್ಬೇಕು" ಎಂದ.

ಒಳಗೆದ್ದು ಹೋಗಿದ್ದ ನಂದಿನಿ ವರನೊಡನೆ ಮಾತನಾಡಲು ಒಪ್ಪಲಿಲ್ಲ. ಒಳಗಿನ ಗುಸುಗುಸು ಪಿಸು ಮಾತುಗಳು ಹೊರಗೆ ಕುಳಿತಿದ್ದವರಿಗೆ ತಮಾಷೆಯಾಗಿ ಕಂಡಿತ್ತು. ಹೊರಗೆ ಕುಳಿತಿದ್ದ ವರನನ್ನೇ ರೂಮಿಗೆ ಕಳಿಸಿದ್ದರು. ಅವನನ್ನು ಕಂಡೊಡನೆ ಪಿಸು ಮಾತು ನಿಂತಿತು. ನಂದಿನಿಯನ್ನು ಅಲ್ಲಿಯೇ ಬಿಟ್ಟು ಉಳಿದವರು ಹೊರಟು ಹೋಗಿದ್ದರು. ವರ ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತ. ಅವಳನ್ನು "ಕೂತ್ಕೊಳ್ಳಿ" ಎಂದು ಸಂಜ್ಞೆ ಮಾಡಿದ. ನಂದಿನಿ ಭುಸು ಗುಟ್ಟುತ್ತಾ ಮಂಚದ ಮೇಲೆ ಕುಳಿತಳು. ಅವನು ಮುಗುಳ್ನಕ್ಕು ಹೇಳಿದ.

"ನೀವು ತುಂಬಾ ಚೆನ್ನಾಗಿ ಕಾಣ್ತೀರಾ?"

ಅವಳು ಇತ್ತ ತಿರುಗಿದಳು. ಆದರೆ ಮುಗುಳ್ನಗಲಿಲ್ಲ. "ಯಾಕೆ, ನನ್ಮೇಲೆ ಕೋಪಾನಾ?" ಪ್ರಶ್ನಿಸಿದ.

"ಹೌದು.... ನನಗೆ ನಿಮ್ಮ ಮೇಲೆ ಕೋಪ...." ಉಸುರಿದಳು.

"ಯಾಕೆ ಅಂತ ಕೇಳಬಹುದಾ?"

"ನಿಮಗೆ ಅಂತ ವಿಚಾರಿಸಿದ್ದು ಜಾಹ್ನವೀನ....ಈಗ ಈ ನಾಟಕ ಯಾಕೆ? ನಂಗೆ ಇದು ಇಷ್ಟ ಆಗ್ತಿಲ್ಲ, ನನಗೆ ಈ ಮದುವೆ ಒಪ್ಪಿಗೆ ಇಲ್ಲ"

"ಕಷ್ಟ ಏನು ಅಂತ? ನೀವು ನನಗೆ ಮೆಚ್ಚುಗೆ ಆದ್ರಿ....ನಿಮ್ಮನ್ನೇ ಮದುವೆ ಆಗ್ತೀನಿ ಅಂತ ಹೇಳಿ ಕಳಿಸಿದೆ.... ನಿಮ್ಮ ತಂದೆ ಒಪ್ಪಿಕೊಂಡಿದಾರಲ್ಲ"

"ಆದರೆ, ನನಗೆ ನೀವು ಒಪ್ಪಿಗೆ ಇಲ್ಲ" ವರನ ಮುಖ ಕಪ್ಪಗಾಯಿತು. ಆದರೆ ತಕ್ಷಣವೇ ಸರಿ ಮಾಡಿಕೊಂಡ.

"ನಾನು ಯಾವ ರೀತಿಯಲ್ಲಿ ನಿಮಗೆ ಒಪ್ಪಿಗೆಯಾಗಲಿಲ್ಲ ಅಂತ ಹೇಳಿ.... ರೂಪದಲ್ಲಿ ಕಡಿಮೆ ಅಂತಲಾ, ಶ್ರೀಮಂತಿಕೆ ಇಲ್ಲ ಅಂತಲಾ.... ಅಥವಾ ನೀವು ಬೇರೆ ಯಾರನ್ನಾದರೂ ಮೆಚ್ಚಿದೀರಾ?"

"ನನಗೆ ಈ ಊರು ಇಷ್ಟ ಇಲ್ಲ" ಅವನು ಗೊಳ್ಳನೆ ನಕ್ಕ.

"ಏನಾಗಿದೆ ಈ ಊರಿಗೆ?... ನಾವು ಪರಸ್ಪರ ಒಬ್ಬರನ್ನೊಬ್ಬರು ಪ್ರೀತಿಸಬೇಕು, ಸಂಸಾರ ಮಾಡಬೇಕು?.... ಊರನ್ನು ಕಟ್ಟಿಕೊಂಡು ಏನ್ಮಾಡಬೇಕಾಗಿದೆ?"

ನಂದಿನಿಯ ಮುಖ ಕೆಂಪಾಗಿತ್ತು. ಪ್ರೀತಿ, ಸಂಸಾರ ಅದರ ಬಗ್ಗೆ ನಾನು ಆಲೋಚಿಸಿಲ್ಲ. ಈ ಊರು ನನಗೆ ಹಿಡಿಸಿಲ್ಲ ಅಷ್ಟೇ..."

"ಓ... ಕೇ.... ನಿಮ್ಮಿಷ್ಟ" ಎಂದು ಹೇಳಿ ಅವನು ಎದ್ದ. ಇವಳೂ ಎದ್ದು ನಿಂತಳು.

"ಸಾರೀ.... ನಾನು ಸ್ವಲ್ಪ ಆವೇಶದಲ್ಲಿ ಮಾತನಾಡಿಬಿಟ್ಟೆ...."

"ಪರವಾಗಿಲ್ಲ, ನಿಮ್ಮ ಮನಸ್ಸಿನಲ್ಲಿದ್ದುದನ್ನು ನೇರವಾಗಿ ಹೇಳಿದಿರಿ. ಇನ್ನೇನಾದರೂ ಹೇಳೋದು ಇದೆಯಾ?"

"ಪ್ಲೀಸ್, ಜಾಹ್ನವೀನ ಮದುವೆಯಾಗಿ. ಅವಳು ನಿಮ್ಮನ್ನು ಮೆಚ್ಚಿದ್ದಾಳೆ. ನಿಮ್ಮ ಬಗ್ಗೆ ಆಸೆಯನ್ನು ಇಟ್ಟುಕೊಂಡಿದ್ದಾಳೆ.... ಅವಳಿಗೆ ನಿರಾಸೆಯನ್ನುಂಟು ಮಾಡಬೇಡಿ" ಕೈ ಮುಗಿದಳು.

"ನಿಮ್ಮ ಅಕ್ಕನಿಗೆ, ಈ ಊರು, ಈ ಊರಿನಲ್ಲೇ ಇರುವ ವರ ಎಲ್ಲಾ ಹಿಡಿಸಿದೆ. ಆದರೆ.... ನಿಮಗ್ಯಾಕೆ ಇಷ್ಟವಾಗಲಿಲ್ಲವೋ?" ನಗುತ್ತಾ ಪ್ರಶ್ನಿಸಿದ.

"ಏನೋ, ಮೊದಲಿನಿಂದಲೂ ನನಗೆ ಈ ಊರು ಹಿಡಿಸಿಲ್ಲ... ಅಂಡಮಾನ್, ನಿಕೋಬಾರ್ ಆದರೂ ಪರವಾಗಿಲ್ಲ.... ಈ ಊರಂತೂ ಬೇಡ" ಅವನು ಜೋರಾಗಿ ನಕ್ಕಾಗ ಅವಳೂ ತನ್ನ ದನಿಯನ್ನು ಸೇರಿಸಿದಳು. ಹೊರಗಿದ್ದವರಿಗೆ ನಗು ಕೇಳಿಸಿತ್ತು. ಪರಸ್ಪರ ಮುಖವನ್ನು ನೋಡಿಕೊಂಡರು. ಎಲ್ಲರ ಮುಖದಲ್ಲಿ ಮಂದಹಾಸ ಕಂಡಿತ್ತು.

"ನಾವು ಆಮೇಲೆ ನಮ್ಮ ನಿರ್ಧಾರವನ್ನು ತಿಳಿಸ್ತೀವಿ" ಎಂದು ಹೇಳಿ ವರನ ಕಡೆಯವರು ಹೊರಟು ಹೋಗಿದ್ದರು. ಪ್ರಶ್ನೆ ಮತ್ತೆ ಹಾಗೇ ಉಳಿದಿತ್ತು.... ನಂದಿನಿ ತನ್ನ ಪಾಡಿಗೆ ತಾನು ಎಂದಿನಂತೆ ಇದ್ದಳು. ಕುತೂಹಲವಿದ್ದರೂ, ಏನು ಕೇಳಿದ್ರೂ ಎಂದು ಯಾರೂ ಕೇಳಲಿಲ್ಲ. ಜಾಹ್ನವಿ ಮಾತ್ರ ನಂದಿನಿಯನ್ನು ಆಗಾಗ್ಗೆ ಕೆಕ್ಕರಿಸಿ ನೋಡಿದ್ದಳು. 'ಕೆಲಸ ಕೆಡದಿರುವಂತೆ ಆದರೆ ಸಾಕು..." ಎಂದು ತಾಯಿ ದೇವರ ಮೊರೆ ಹೊಕ್ಕಿದ್ದಳು.

ಎರಡೇ ದಿನಗಳೊಳಗೆ ಅವರು ತಮ್ಮ ನಿರ್ಧಾರವನ್ನು ತಿಳಿಸಿದ್ದರು. ಎಲ್ಲರಿಗೂ ಅಚ್ಚರಿಯಾಗಿತ್ತು. ಯಾರೂ ಇದನ್ನು ನಿರೀಕ್ಷಿಸಿರಲಿಲ್ಲ. ವರ ಜಾಹ್ನವಿಯನ್ನು ಮದುವೆಯಾಗಲು ತನ್ನ ಒಪ್ಪಿಗೆಯನ್ನು ಕೊಟ್ಟಿದ್ದ. ನಂದಿನಿಗೆ ಒಂದು ಗಳಿಗೆ ಪಿಚ್ಚೆನ್ನಿಸಿತು. ಮನದ ಯಾವುದೋ ಒಂದು ಮೂಲೆಯಲ್ಲಿ

ಮುಳ್ಳು ತಗುಲಿದಂತಾಗಿತ್ತು. ಈ ಇದಕ್ಕೆ ನಾಟಕ ಬೇಕಿತ್ತೇ?... ಅಥವಾ ಬೇಕೂಂತ ತನ್ನನ್ನು ಆಟ ಆಡಿಸಿ, ತಮಾಷೆ ಮಾಡಿರಬಹುದೇ ಅಂತ ಸಹ ಅನ್ನಿಸಿತ್ತು.... ಅಥವಾ ತನ್ನ ಇಚ್ಛೆ ಅವನ ನಿರ್ಧಾರಕ್ಕೆ ಕಾರಣವಿರಬಹುದೇ ಅಂತಂದುಕೊಂಡು ಜಾಹ್ನವಿಯ ಕಡೆ ನೋಡಿದಳು. ಅವಳ ಮುಖ ಅರಳಿತ್ತು.... ಥೂ ಇವಳಿಗೆ ಸ್ವಾಭಿಮಾನ ಬೇಡವೇ? ಅವನೇನು ಇವಳ ಸ್ವತ್ತು ಅಂತ ತಿಳಿದುಕೊಂಡಿದಾಳಾ?...ಅವನು ನಿರಾಕರಿಸಿದ್ದಾಗ ಪೆಚ್ಚಾಗಿದ್ದಳು... ಈಗ ಗಲಿಗಲಿಯಾಗಿದ್ದಾಳೆ. ಇದಕ್ಕೆ ನನ್ನ ನಿರ್ಧಾರವೇ ಕಾರಣ. ಒಂದು ವೇಳೆ ಬೇರೆ ಆಲೋಚನೆಯೂ ಇಲ್ಲದೇ ಒಪ್ಪಿಗೆ ಕೊಟ್ಟಿದ್ದರೇ.... ಇವನು ತನ್ನನ್ನೇ ಮದುವೆಯಾಗಿರುತ್ತಿದ್ದ.... ಇವನನ್ನು ನಾನಾಗಿಯೇ ಇವಳಿಗೆ ಬಿಟ್ಟು ಕೊಟ್ಟಿದೀನಿ.... ಜೀವನ ಪರ್ಯಂತ ಇವಳು ನನಗೆ ಋಣಿಯಾಗಿರಬೇಕು.... ಆದರೂ ಏನೋ ಸರಿ ಹೋಗಲಿಲ್ಲ. ಮನದೊಳಗೆ ಗುಳ್ಳೆಗಳು ಏಳುತ್ತಿದ್ದವು.

****

ಮದುವೆಯ ದಿನಾಂಕವನ್ನು ಗೊತ್ತು ಮಾಡಿದ್ದರು. ಎಲ್ಲಾ ಸಿದ್ಧತೆಗಳೂ ನಡೆದಿದ್ದವು. ವರಪೂಜೆಯ ದಿನದಂದು ದಿಬ್ಬಣದವರು ಚಪ್ಪರದ ಬಳಿ ಬಂದು ನಿಂತಾಗ ನಂದಿನಿ ಬೇಕೆಂದೇ, ಹೊರಗೆ ಬರಲಿಲ್ಲ. ಸ್ವಾಗತ, ಆರತಿಯ ಸಂಭ್ರಮದ ಮಧ್ಯೆ, ಅವನ ಕಣ್ಣುಗಳು ತನ್ನನ್ನು ಅರಸುತ್ತಿದೆ ಎಂದೆನಿಸಿತ್ತು ಅವಳಿಗೆ. ಮರೆಯಲ್ಲಿ ನಿಂತು ನೋಡುತ್ತಿದ್ದವಳನ್ನು ಅಕ್ಕ ಎಚ್ಚರಿಸಿದ್ದಳು.

"ಇಲ್ಲಿ ಒಳಗೆ ನಿಂತು ಏನ್ಮಾಡ್ತಿದೀಯಾ? ಹೊರಗೆ ಬರಬಾರದಾ? ಎಲ್ಲರೂ ನಿನ್ನನ್ನೇ ಕೇಳುತ್ತಿದ್ದಾರೆ"

"ಹೌದು, ತಾನ್ಯಾಕೆ ಸಂಕೋಚಗೊಳ್ಳಬೇಕು? ಇದರಲ್ಲಿ ನನ್ನ ತಪ್ಪೇನಿದೆ? ನಾನೇನು ಅವನನ್ನು ಬಯಸಿರಲಿಲ್ಲ. ಅನ್ನಿಸಿದ್ದನ್ನು ನೇರವಾಗಿ ಹೇಳಿದ್ದೆ.... ಇನ್ನೇಕೆ ಈ ಹಿಂಜರಿಕೆ ಎಂದುಕೊಂಡು ಹೊರಗೆ ಬಂದಿದ್ದಳು. ಆದರೂ ವರನ ಕಡೆ ನೋಡುವುದಾಗಿರಲಿಲ್ಲ. ಆದರೂ ಅವನು ಕದ್ದು ಕದ್ದು ತನ್ನನ್ನು ನೋಡುತ್ತಿರಬಹುದು ಎಂಬ ಭಾವನೆ ಮೂಡಿ, ಕೆನ್ನೆ ಕೆಂಪೇರಿತ್ತು. ತಾನು ಮದುವೆ ಛತ್ರಕ್ಕೆ ಬರಲೇ ಬಾರದಾಗಿತ್ತು.... ಈ ಊರನ್ನೇ ಬಿಟ್ಟು ಹೋಗಿಬಿಡ ಬೇಕಾಗಿತ್ತು ಅಂತಂದುಕೊಂಡಳು.

ಮದುವೆಯ ಕಲಾಪಗಳು ಒಂದೊಂದಾಗಿ ಪ್ರಾರಂಭವಾಗಿದ್ದವು... ಗೌರಿ ಪೂಜೆಯನ್ನು ಮುಗಿಸಿ ಬಂದು, ಕಾಶೀಯಾತ್ರೆಗೆ ಹೋಗದೇ ಹಿಂದಿರುಗಿದ. ವರನ ಮುಂದೆ ಹಿಡಿದ ಅಂತರ ಪಟದ ಮರೆಯಲ್ಲಿ ನಿಂತ ಜಾಹ್ನವಿಯ

ಸ್ಥಾನದಲ್ಲಿ ತನ್ನನ್ನು ಕಲ್ಪಿಸಿಕೊಂಡಳು. ವೇದ ಘೋಷ ನಿಂತ ಕೂಡಲೇ ಅಂತರ ಪಟ ಸರಿಯಿತು. ವರನಾದವನು ಜೀರಿಗೆ ಬೆಲ್ಲವನ್ನು ವಧುವಿನ ತಲೆಯ ಮೇಲೆ ಹಾಕುವುದನ್ನು ಬಿಟ್ಟು ನಂದಿನಿಯನ್ನೇ ನೋಡುತ್ತಿದ್ದ. ಜಾಹ್ನವಿಯೇ ಮೊದಲು ಜೀರಿಗೆ ಬೆಲ್ಲವನ್ನು ವರನ ತಲೆಯ ಮೇಲೆ ಹಾಕಿದಳು. 'ಹೋ' ಎನ್ನುವ ಹರ್ಷೋದ್ಗಾರ, ಚಪ್ಪಾಳೆಯ ದನಿ ಅವಳನ್ನು ಕಲ್ಪನೆಯಿಂದ ಎಚ್ಚರಿಸಿತ್ತು.... ಬೆಚ್ಚಿ ಹಿಂದಕ್ಕೆ ಸರಿದಳು.

ಅವನು ಜಾಹ್ನವಿಯ ಕೊರಳಿಗೆ ಹಾರವನ್ನು ಹಾಕಿದಾಗ, ಇವಳು ತನ್ನ ಸೆರಗನ್ನು ಸರಿಪಡಿಸಿಕೊಂಡಳು. ಅಕ್ಕಿಧಾರೆ ನಡೆಯುತ್ತಿರುವಾಗ, ತನ್ನ ತಲೆಯ ಕೂದಲನ್ನು ಸವರಿಕೊಂಡಳು. ಜಾಹ್ನವಿಯ ಕೊರಳಿಗೆ ಮಾಂಗಲ್ಯವನ್ನು ಕಟ್ಟುವಾಗ, ಇವಳು ತನ್ನ ಕೊರಳ ಮೇಲೆ ಕೈಯಾಡಿಸಿಕೊಂಡಳು... ಕೆನ್ನೆಗೆ ಹಚ್ಚಿದ ಅರಶಿನ, ಹಣೆಗೆ ಇಟ್ಟ ಕುಂಕುಮ, ಜಡೆಗೆ ಮುಡಿಸಿದ ಹೂವು, ಎಲ್ಲವೂ, ತಾನು ಜಾಹ್ನವಿಗೆ ಬಿಟ್ಟುಕೊಟ್ಟ ಉಡುಗೊರೆ ಎಂದು ತನ್ನಲ್ಲೇ ಹೇಳಿಕೊಂಡಳು.

"ಏ... ನಂದಿನಿ ಅಲ್ಲಲ್ಲೇ ನಿಂತು ಬಿಡ್ತೀಯಲ್ಲೇ....ಏನಾಗಿದೆ ನಿಂಗೆ? ಉಡುಗೊರೆಗಳ ರಾಶಿ [illegible].... ಅಲ್ಲಿ ನಿಂತು ನೋಡುವವರ್ಯಾರಿಲ್ಲ... ಹೋಗ್ಬಾರ್ದಾ?" ಚಿಕ್ಕಮ್ಮ ಹೇಳಿದಾಗ, ಇವಳು ಅವಳನ್ನೇ ದುರು ದುರು ನೋಡಿದಳು.... ಈ ರಾಶಿ ರಾಶಿ ಉಡುಗೊರೆಗಳು, ತನಗೆ ಸಲ್ಲಬೇಕಾಗಿದ್ದುದು ಅಂತ ಅನ್ನಿಸದೇ ಇರಲಿಲ್ಲ.

ನಾಗೋಲಿ, ಉರುಟಣೆ, ಲಾಜಾ ಹೋಮ, ಸಪ್ತಪದಿಯ ಕಾರ್ಯಕ್ರಮಗಳ ನಂತರ, ಮನೆ ತುಂಬಿಸಿಕೊಳ್ಳುವ ಕಾರ್ಯಕ್ರಮ. ನಂದಿನಿ ಬೇಕೆಂದೇ ಅಲ್ಲಿ ನಿಲ್ಲಲಿಲ್ಲ. ಏನೋ ನೆವ ಹೇಳಿ ಮನೆಗೆ ಬಂದು ಬಿಟ್ಟಿದ್ದಳು. ಅದುವರೆಗೂ ಕಟ್ಟಿಕೊಂಡಿದ್ದ ಭಾವನೆ ಕಣ್ಣೀರಾಗಿ ಹರಿದಿತ್ತು.... ಅಕ್ಕನನ್ನು ಗಂಡನ ಮನೆಗೆ ಒಪ್ಪಿಸಿ ಕೊಡುವಾಗ ಎಲ್ಲರೂ ಅತ್ತಿರುತ್ತಾರೆ.... ಈ ಅಳು, ಅದೇ ಅಳು ಎಂದು ತನಗೆ ತಾನೇ ಹೇಳಿಕೊಂಡು ಕಣ್ಣೀರನ್ನು ಒರೆಸಿಕೊಂಡಿದ್ದಳು.

ಸಾಯಂಕಾಲದ ರಿಸೆಪ್ಶನ್ ಸಮಯದಲ್ಲಿ ಎಲ್ಲರೂ ಬೈಯುವವರೇ. ಎಲ್ಲಿಗೆ ಹೊರಟು ಹೋಗಿದ್ದೆ? ಎಲ್ಲರೂ ನಿನ್ನನ್ನು ಹುಡುಕುವವರೇ..." ಎಂದು. ವರ ತನ್ನನ್ನು ಹುಡುಕಿದನೇ ಎಂದು ತಿಳಿದುಕೊಳ್ಳುವ ತವಕವಾದರೂ ತಡೆದು ಕೊಂಡಳು. ಕಡೆಯ ಪಂಕ್ತಿಯಲ್ಲಿ ಕುಳಿತು ಊಟ ಮಾಡಿದ್ದುದು, ಹೊಟ್ಟೆಯಲ್ಲಿ ಇರುಸು ಮುರುಸನ್ನುಂಟುಮಾಡಿತ್ತು. ತಲೆ ನೋವಿನ ನೆಪವನ್ನು ಹೇಳಿ ರೂಮನ್ನು ಸೇರಿ ಕುರ್ಚಿಯ ಮೇಲೆ ಕುಳಿತು ಕಣ್ಣುಗಳನ್ನು ಮುಚ್ಚಿಕೊಂಡಳು.

ವರ ಸುಂದರನೇನಲ್ಲ. ಅವನ ಬಗ್ಗೆ ತಾನೇಕೆ ಪದೇ ಪದೇ ಯೋಚಿಸ ಬೇಕು? ಅವನೀಗ ನನ್ನ ಭಾವ.... ಆ ಭಾವ ಹೇಗಿದ್ದರೇನು? ಅವನ ಸುದ್ಧಿ ನನಗೇಕೆ ಎಂದುಕೊಂಡರೂ, ಯಾವುದೋ ವಿಚಿತ್ರ ಭಾವ ಮಾತ್ರ ತನ್ನೊಳಗೇ ಇತ್ತು.

ರಾತ್ರಿಯ ಊಟದ ನಂತರ, ವಧೂವರರನ್ನು ಅವರ ಮನೆಗೆ ಕರೆದೊಯ್ದರು. "ಕೋಣೇನ ಅದೆಷ್ಟು ಚೆನ್ನಾಗಿ ಅಲಂಕರಿಸಿದ್ದರು.... ಮಲ್ಲಿಗೆ ಹೂವಿನ ವಾಸನೆ ರೂಮಿನಲ್ಲೆಲ್ಲಾ ತುಂಬಿಕೊಂಡಿತ್ತು" ಅಲ್ಲಿಂದ ಬಂದವರೊಬ್ಬರು ವರ್ಣಿಸುತ್ತಿದ್ದರು. 'ಪ್ರಸ್ಥ'ದಲ್ಲಿ ಜಾಹ್ನವಿ ಉಟ್ಟ ಸೀರೆ ತುಂಬಾ ಚೆನ್ನಾಗಿತ್ತು, ಎಷ್ಟಾಯಿತೋ? ಯಾರೋ ವಿಚಾರಿಸುತ್ತಿದ್ದರು.

"ಸೀರೆ ಬೆಲೇನ ಕಟ್ಕೊಂಡು ಏನ್ಮಾಡ್ಬೇಕಾಗಿದೆ? ಸೀರೆ ಉಟ್ಕೊಂಡೋಳ ಬೆಲೆ ಇಷ್ಟು ಹೊತ್ತಿಗೆ ಏನಾಗಿರುತ್ತೆ ಅಂತ ಗೊತ್ತಾ? ಯಾವುದೋ ಚಪಲದ ಹೆಂಗಸು ಗೇಲಿ ಮಾಡುತ್ತಿದ್ದಳು.

"ಏನು ಸೀರೆಯೋ? ಏನು ಒಡವೇನೋ? ಇದಿಷ್ಟಕ್ಕೆ ಸಂಭ್ರಮವವ್ವೋ ಸಂಭ್ರಮ. ಗಂಡ ಹೇಳಿದ್ದಕ್ಕೆ ತಾಳ ಹಾಕಿ ಕುಣಿಯಬೇಕು ಅಷ್ಟೇ.... ನೀನು ಮಾಡಿದ್ದೂ ಅಷ್ಟೇ.... ನಾನು ಮಾಡಿದ್ದೂ ಅಷ್ಟೇ..." ವೈರಾಗ್ಯದ ಮಾತನ್ನು ಹಿರಿಯ ಹೆಂಗಸೊಬ್ಬಳು ನುಡಿದಳು. ನಂದಿನಿ ಕಣ್ಣು ಬಿಟ್ಟಳು. ಸುತ್ತಲೂ ಒಮ್ಮೆ ನೋಡಿ ಎದ್ದು ನಿಂತಳು. ಉಳಿದವರು ಮಾತನ್ನು ನಿಲ್ಲಿಸಿದರು....

"ಯಾರದು? ನಂದಿನೀನಾ? ಇಲ್ಲಿ ಕೂತು ನಿದ್ದೆ ಮಾಡ್ತಿದ್ಯಾ? ಲಕ್ಷಣವಾಗಿ ಹಾಸಿಗೆ ಹಾಸ್ಕೊಂಡು ಮಲಗ್ಬಾರ್ದಾ?"

"ನಂಗೆ ತಲೆ ನೋಯ್ತಿದೆ.... ನೀವೆಲ್ಲಾ ಹೊರಕ್ಕೆ ಹೋಗ್ತೀರಾ?" ಕೇಳಿದಳು.

"ತಲೆ ನೋವು ಯಾಕೇ ಪುಟ್ತಾಯೀ.... ಹೊಸಾ ಸೀರೆ, ರವಿಕೆ, ಅಲಂಕಾರ ಮಾಡ್ಕೊಂಡಿದ್ದೆ. ದೃಷ್ಟಿ ಆಗಿರ್ಬೇಕು.... ಅಡಿಗೆ ಮನೆಗೆ ಹೋಗಿ ತೆಗಿಸ್ಕೋ...."

"ದೃಷ್ಟಿಯೂ ಇಲ್ಲ, ಎಂಥದೂ ಇಲ್ಲ. ಇವಳೇನು ಮದುವಣ ಗಿತ್ತೀನಾ? ಅಂದ್ಹಾಗೇ ಮದುಮಕ್ಕಳಿಗೆ ದೃಷ್ಟೀನೇ ತೆಗೀಲಿಲ್ಲ.... ರಾತ್ರಿ ಕಳೆದು ಬೆಳಗಾದರೆ ಸಾಕಾಗಿದೆ..."

"ಯಾಕೇ.... ಹಾಗಂತೀಯಾ....?"

"ಮತ್ತಿನ್ನೇನು ಅತ್ತೇ?... ನಮ್ಮ ಹಳ್ಳೀಲಿ ಒಂದು ಮದುವೆ ನಡೀತು. ಮದುಮಕ್ಕಳಿಗೆ ದೃಷ್ಟಿ ನೀವಾಳಿಸ್ಲೇ ಇಲ್ಲ. ಪ್ರಸ್ಥದ ಕೋಣೇಲಿ ಅದೇನಾಯ್ತೋ

ಏನೋ ಆ ಹುಡ್ಗಿ ಉಸಿರ್ನೇ ಬಿಟ್ಟು ಬಿಡ್ತು...."

"ಮೆಲ್ಲಗೆ ಮಾತಾಡು.... ಯಾರಿಗಾದ್ರೂ ಕೇಳಿಸೀತು..." ನಂದಿನಿ ಭಯದಿಂದ ನಡುಗಿದಳು. ಜಾಹ್ನವಿಯ ಪ್ರಾಣವೂ ಈ ರಾತ್ರಿ ಹೊರಟು ಹೋದ್ರೆ.... ಅವನು ಮತ್ತೆ ತನ್ನನ್ನು ಮದುವೆಯಾಗಲು ಕೇಳಿದರೇ.... ತಾನು ಒಪ್ಪಿಕೊಂಡರೆ ಅವನು ನನ್ನವನಾಗುತ್ತಾನೆ. ಮೊದಲ ರಾತ್ರಿ ಹೇಗಿರುತ್ತದೆಂದು ತನಗೆ ಗೊತ್ತಿಲ್ಲ.... ಈ ದಿನ ಜಾಹ್ನವಿ ಅವನಿಗೆ ತನ್ನನ್ನು ತಾನು ಒಪ್ಪಿಸಿ ಕೊಳ್ಳುತ್ತಾಳೆ.... ಈ ಮಧುರ ರಾತ್ರಿಯ ಅವಕಾಶವನ್ನು ತಾನು ತಪ್ಪಿಸಿಕೊಂಡೆ. ಅವಳಿಗೆ ಬಿಟ್ಟು ಕೊಟ್ಟೆ.... ನನ್ನ ಈ ಉಪಕಾರಕ್ಕೆ ಜಾಹ್ನವಿ ನನಗೆ ಋಣಿಯಾಗಿರಬೇಕು.... ನಾನು ಅವಳನ್ನು ಹಂಗಿಸಬೇಕು.... ನನ್ನ ಮುಲಾಜಿನಲ್ಲಿ ಅವಳಿದಾಳೆ.... ಈಗ ವರ ತನ್ನನ್ನು ನೆನೆಸಿಕೊಳ್ಳುತ್ತಿರಬಹುದೇ?.... ಆ ಅನಿಸಿಕೆ ಯಿಂದ ಅವಳು ಬಿಸಿಯಾದಳು. ಬೆಳಗಿನ ಹೊತ್ತಿಗೆ ಅವಳಿಗೆ ಕೆಂಡಾ ಮಂಡಲ ಜ್ವರ! ಮಾತ್ರೆಗಳನ್ನು ತಿನ್ನಿಸಿದರೂ, ಜ್ವರ ಕಡಿಮೆ ಆಗಿರಲಿಲ್ಲ. ಯಾರೋ ದೃಷ್ಟಿಯನ್ನು ನೀವಾಳಿಸಿ ತೆಗೆದರು.

ಜ್ವರ ಬಂದು ಮಲಗಿದ್ದವಳನ್ನು ನೋಡಲು, ಹೊಸದಾಗಿ ಮದುವೆ ಯಾದ ಅಕ್ಕ ಭಾವ ಬಂದಿದ್ದರು. ಇವಳು ನಿದ್ದೆಯನ್ನು ನಟಿಸಿದಳು. ಹುಶಾರಾಗಿ ಏಳುವ ಹೊತ್ತಿಗೆ ಇವಳು ಸಾಕಷ್ಟು ಬದಲಾಗಿದ್ದಳು. ಏನೋ ಕಳೆದುಕೊಂಡ ಅನುಭವ. ಆದಷ್ಟು ಬೇಗ ಯಾರನ್ನಾದರೂ ಮದುವೆಯಾಗಿ ಈ ಮನೆ ಯಿಂದಲೇ ಹೊರಗೆ ಹೋಗಿಬಿಡಬೇಕೆಂದೆನಿಸುತ್ತಿತ್ತು.

ಆದರೆ, ತಂದೆ ತಾಯಿ ತಕ್ಷಣಕ್ಕೆ ಮದುವೆ ಮಾಡಲು ಸಿದ್ಧರಿರಲಿಲ್ಲ. ಈಗಾಗಲೇ ಸಾಕಷ್ಟು ಖರ್ಚಾಗಿದೆ. ಮತ್ತೆಲ್ಲಿಂದ ಖರ್ಚಿಗೆ ಒದಗಿಸುವುದು? ಅಲ್ಲದೇ ಈ ಸಂವತ್ಸರ ಕಳೆಯುವವರೆಗೆ ಮತ್ತೆ ಚಪ್ಪರ ಹಾಕಿ ನಾಂದಿ ಮಾಡುವಂತಿಲ್ಲ ಎನ್ನುವ ಫಿಲಾಸಫಿ ಬೇರೆ!!

ಕೆಲವು ತಿಂಗಳುಗಳು ಕಳೆದಿದ್ದವು. ಜಾಹ್ನವಿ ಗರ್ಭಿಣಿಯಾಗಿದ್ದಳು. ಇವಳ ಒಡಲೊಳಗೆ ಏನೋ ಹರಿದಾಡಿದಂತಾಗಿತ್ತು. ತಾನು ಒಪ್ಪಿಕೊಂಡಿದ್ದರೆ, ಈ ಮಗು ತನ್ನ ಗರ್ಭದಲ್ಲಿ ಬೆಳೆಯುತ್ತಿತ್ತು ಎನ್ನುವ ವಿವೇಕವಿಲ್ಲದ ಅನ್ನಿಸಿಕೆ. ಅವಳ ಮೇಲೆ ತೋರುತ್ತಿದ್ದ ಭಾವನ ಪ್ರೀತಿ ಇವಳಿಗೆ ಅಚ್ಚರಿಯನ್ನುಂಟು ಮಾಡುತ್ತಿತ್ತು... ಇವನೇನಾ ತನ್ನನ್ನು ಮದುವೆಯಾಗಲು ಇಚ್ಛೆಸಿದವನು?.... ಆ ಬಗ್ಗೆ ಯಾವ ಯೋಚನೆಯೇ ಇಲ್ಲದೇ, ಹೊಸ ಜೀವನದ ಮದದಲ್ಲಿ ಮುಳುಗಿ ಹೋಗಿದ್ದಾನೆ.... ಇಂಥವನ ಬಗ್ಗೆ ಭ್ರಮೆಯ ಲೋಕದಲ್ಲಿ ತಾನೇಕೆ ವಿಹರಿಸಬೇಕೆಂದುಕೊಂಡಳು.

ಅವಳ ಉದಾಸೀನತೆ ಅಕ್ಕನಿಗೆ ಅರ್ಥವಾಗಿತ್ತು. ತಾಯಿಯ ಹತ್ತಿರ ಮಾತನಾಡಿ, ಗಂಡುಗಳನ್ನು ನೋಡಲಾರಂಭಿಸಿದಳು. ಕಲ್ಕತ್ತಾದಲ್ಲಿ ಕೆಲಸದಲ್ಲಿದ್ದ ಆಫೀಸರ್ ನಂದಿನಿಯನ್ನು ನೋಡಲು ಆತುರ ಕಾತುರದಿಂದ ಬಂದಿದ್ದ. ಅವನನ್ನು ನೋಡಿದ ಕೂಡಲೇ ನಂದಿನಿ, ತನ್ನ ಒಪ್ಪಿಗೆಯನ್ನು ಕೊಟ್ಟು ಬಿಟ್ಟಿದ್ದಳು. ರೂಪವಂತ, ವಿದ್ಯಾವಂತ, ಶ್ರೀಮಂತನೂ ಇರಬಹುದು, ಎಲ್ಲಕ್ಕಿಂತ ಮುಖ್ಯವಾಗಿ ಅವನು ಕಲ್ಕತ್ತಾದಂಥ ದೊಡ್ಡ ಷಹರಿನಲ್ಲಿದ್ದುದು. ಅವನೂ ನಂದಿನಿಯನ್ನು ಒಪ್ಪಿರುವುದಾಗಿ ತಿಳಿಸಿದಾಗ, ಇವಳು ಬೇರೆಲ್ಲವನ್ನೂ ಮರೆತಳು. ಹಾಗೇ ಅವಸವಸರದಲ್ಲಿ ಮದುವೆ ಕಾರ್ಯಕ್ರಮವೂ ನೆರವೇರಿತು. ಕೆಲವೇ ದಿನಗಳಲ್ಲಿ ಕಲ್ಕತ್ತಾಕ್ಕೆ ಅವನೊಂದಿಗೆ ಹೊರಟೂ ಹೋದಳು.

ಕೆಲವೇ ದಿನಗಳಲ್ಲಿ ಅವಳಿಗೆ ಗಂಡನ ನಡವಳಿಕೆಯ ಪರಿಚಯವಾಗಿತ್ತು. ಅವನ ಜಿಪುಣತನ ಬೇಸರವನ್ನುಂಟು ಮಾಡಿತ್ತು. ಪ್ರತಿಯೊಂದಕ್ಕೂ ಮಾಡುತ್ತಿದ್ದ ಅಡೆ ತಡೆ ಹಿಂಸೆಯನ್ನುಂಟು ಮಾಡುತ್ತಿತ್ತು. ಯಾರ ಜತೆಯೂ ಸರಿ ಹೋಗದ ಅವನ ವರ್ತನೆ ಕೋಪವನ್ನು ಬರಿಸುತ್ತಿತ್ತು. ಅವನ ಎದುರಿಗೆ ಅಳುವಂತೆಯೂ ಇಲ್ಲ.... ಹೊರಗಿನವರೊಡನೆ ಬೆರೆತು ಮಾತನ್ನಾಡುವಂತಿಲ್ಲ. ಒಂದು ತರಹದ ಬಂಧನ ಎನಿಸುತ್ತಿತ್ತು. ಈ ಮನುಷ್ಯನನ್ನು ತಾನು ಒಪ್ಪಿ ಮದುವೆಯಾದೆನಲ್ಲವೇ?.... ಒಂದು ಹೊಗಳಿಕೆಯ ಮಾತು ಇಲ್ಲ, ಸಣ್ಣ ಪುಟ್ಟ ಉಡುಗೊರೆಗಳಿಲ್ಲ. ಬರೀ ಯಾಂತ್ರಿಕ ಜೀವನವಾಗಿತ್ತು. ಹೋಟೆಲ್ಲು, ಸಿನಿಮಾಗಳ ಬಗ್ಗೆ ಕೇಳುವಂತೆಯೇ ಇರಲಿಲ್ಲ. ಇವನೇಕೆ ಹೀಗೆ? ಹೊರ ರಾಜ್ಯದಲ್ಲಿದ್ದಾನೆ.... ಬೇರೆ ಬೇರೆ ಪ್ರೇಕ್ಷಣೀಯ ಸ್ಥಳಗಳನ್ನು ನೋಡಬಹುದು. ಅಲ್ಲಿ ಇಲ್ಲಿ ಖುಷಿಯಾಗಿ ಇಬ್ಬರೇ ತಿರುಗಾಡಬಹುದು ಎಂದು ಕಟ್ಟಿದ್ದ ಕನಸು, ಕನಸಾಗಿಯೇ ಉಳಿದಿತ್ತು. ಸುಂದರ ಮುಖದ ಚೆಲುವನಿಗೆ ಸಂಕುಚಿತ ಬುದ್ಧಿ, ಎಂದು ಅರಿವಾಗಲು ಹೆಚ್ಚು ಸಮಯ ಬೇಕಾಗಲಿಲ್ಲ. ಆದರೆ..... ಬಂಧನ ಬಿಗಿದಿತ್ತು..... 'ಪಾಲಿಗೆ ಬಂದದ್ದು ಪಂಚಾಮೃತ' ಅಂತ ಅಂದುಕೊಳ್ಳಬೇಕಾಗಿತ್ತು.

ಚೊಚ್ಚಲ ಬಾಣಂತನಕ್ಕೆ ತವರಿಗೆ ಹೋಗಲೇ ಬೇಕಾಗಿತ್ತು. ಹೆಂಡತಿ ಗರ್ಭಿಣಿ ಎಂದು ಯಾವ ಸಡಗರ ಸಂಭ್ರಮಗಳಿರಲಿಲ್ಲ. ಯಾವುದೋ ಮಾಡಬಾರದ ಅಪರಾಧ ಮಾಡಿದಂಥ ಭಾವನೆ ಬರುವಂಥ ಮಾತುಗಳು. ಎಂದಿಗೆ ಊರಿಗೆ ಹೋದೇನೋ? ಎಂದು ತಾಯಿಯಾಗುವ ಸುದಿನ ಬರುತ್ತದೋ ಎಂದು ಮನದೊಳಗೇ ಹಂಬಲಿಸಬೇಕಾದ ಪರಿಸ್ಥಿತಿ.

ಮಡದಿಯನ್ನು ಅವಳ ತವರು ಮನೆಯಲ್ಲಿ ಬಿಟ್ಟು, ಗಂಡ ವಾಪಸ್ಸು

ಹೊರಟು ಹೋಗಿದ್ದ. ಜಾಹ್ನವಿಗೆ ಮೂರು ವರ್ಷದ ಮಗಳಿದ್ದಳು. ಅವಳು ಮತ್ತೆ ಗರ್ಭಿಣಿಯಾಗಿದ್ದಳು. ತನ್ನ ಗಂಡ ಬಹಳ ಮುಚ್ಚಟೆಯಿಂದ ನೋಡಿಕೊಳ್ಳುತ್ತಾನೆಂದು ಅವಳು ಗಂಡನನ್ನು ಹೊಗಳಿಕೊಂಡಿದ್ದೇ ಹೊಗಳಿಕೊಂಡಿದ್ದು!!

ನಂದಿನಿಗೆ, ಗಂಡನನ್ನು ಹೊಗಳಿಕೊಳ್ಳಲು ಯಾವ ವಿಷಯವೂ ಇರಲಿಲ್ಲ. ತೆಗಳಿ ಹೇಳಲು ಇಷ್ಟವಿರಲಿಲ್ಲ. "ನಿನಗೆ ತುಂಬಾ ಜಂಭ ಬಂದು ಬಿಟ್ಟಿದೆ" ಅಂತ ಹಂಗಿಸಿಕೊಂಡದ್ದೂ ಆಗಿತ್ತು. ಜಂಭ ಪಡುವಂಥ ಯಾವ ಹೆಚ್ಚುಗಾರಿಕೆಯ ವಿಷಯವೂ ಇಲ್ಲ ಎಂದು ಹೇಳಿಕೊಳ್ಳಲು ಸಾಧ್ಯವಿರಲಿಲ್ಲ.

ನಂದಿನಿ ಮಗಳನ್ನು ಹೆತ್ತಿದ್ದಳು. ಅದೇ ವಾರದಲ್ಲಿ ಜಾಹ್ನವಿ ಎರಡನೇ ಮಗುವಿಗೆ ಜನ್ಮ ನೀಡಿದ್ದಳು. ಗಂಡು ಮಗು. ಭಾವನಿಗೆ ಸಡಗರವೋ ಸಡಗರ. ಇದ್ದರೆ ಹೀಗೆ ಇರಬೇಕು ಅಂತ ಅನ್ನುವಷ್ಟು ಉತ್ಸಾಹ.

ವಿಜೃಂಭಣೆಯಿಂದ ನಾಮಕರಣ ಮಹೋತ್ಸವವನ್ನು ನೆರವೇರಿಸಿದರು. ನಂದಿನಿ ಪೆಚ್ಚಾಗಿದ್ದಳು. ಮಗಳಿಗೆ ಐದು ತಿಂಗಳು ತುಂಬಲಿತ್ತು. ರಜ ತೆಗೆದುಕೊಂಡು ಬಂದಿದ್ದ ಗಂಡ. ಹೆಂಡತಿಯನ್ನು ಮಗಳನ್ನು ವಾಪಸ್ಸು ಕರೆದುಕೊಂಡು ಹೋಗಿದ್ದ. ಮತ್ತೆ ಅದೇ ಯಾಂತ್ರಿಕ ಜೀವನ. ಆದರೆ ಸ್ವಲ್ಪ ಮಟ್ಟಿನ ಬೇಸರವನ್ನು ಕಳೆಯಲು ಮಗು ಇತ್ತು. ಒಮ್ಮೊಮ್ಮೆ ಸಮಯ ಸಾಕಾಗುತ್ತಿರಲಿಲ್ಲ. ಈಗಲೂ ಗಂಡ ಸ್ಥಿತ ಪ್ರಜ್ಞನಂತೆ ನೀರಸವಾಗಿರುವುದನ್ನು ಕಂಡು ನಂದಿನಿ ಒಳಗೊಳಗೇ ಉರಿದು ಬೀಳುತ್ತಿದ್ದಳು.

ಎರಡು ವರ್ಷಗಳ ನಂತರ ಮಗ ಹುಟ್ಟಿದ. ಬಾಣಂತನವನ್ನು ಮಾಡಲು ಅತ್ತೆ ಬಂದಿದ್ದರು. ಅವರ ಜೊತೆಗೆ ಮಾವ ಸಹ. ಮನೆಯ ಹೆಚ್ಚಿನ ಕೆಲಸ ಕಾರ್ಯಗಳಿಂದ ಬಿಡುವೇ ಸಿಗುತ್ತಿರಲಿಲ್ಲ. ವಿಶ್ರಾಂತಿಯೂ ಇಲ್ಲವಾಗಿತ್ತು. ಆದರೆ ಗಂಡನಿಗೆ ಈ ಬಗ್ಗೆ ಗಮನವಿಲ್ಲ.

ಮಕ್ಕಳು ಬೆಳೆದರು. ಮಗಳನ್ನು ಸ್ಕೂಲಿಗೆ ಸೇರಿಸುವ ಸಮಯ ಬಂದಿತ್ತು. ಆ ಕೆಲಸವನ್ನು ಬಿಟ್ಟು ಮೈಸೂರಿಗೆ ಬಂದು, ಬೇರೆ ಕೆಲಸವನ್ನು ಹುಡುಕತೊಡಗಿದ. ಹಣದ ಮುಗ್ಗಟ್ಟು, ಜೊತೆಗೆ ಅತ್ತೆಯ ಮನೆಯಲ್ಲಿ ಇರಬೇಕಾದ ಪರಿಸ್ಥಿತಿ. ಯಜಮಾನಿಕೆಯೆಲ್ಲಾ ಅತ್ತೆಯದೇ. ಖರ್ಚು ವೆಚ್ಚ ಮಾತ್ರ ಇವರದು.

ಈ ಸಮಯದಲ್ಲಿ ಜಾಹ್ನವಿಯ ಅತ್ತೆ ತೀರಿ ಹೋದರು. ಮಗಳ ಮದುವೆ ನೆರವೇರಿತ್ತು. ಮಗ ಮೈಸೂರಿನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದ. ಇನ್ನೊಬ್ಬ ಮಗಳು ಮೈಸೂರಿನ ಕಾಲೇಜಿಗೆ ಸೇರಿಕೊಂಡಿದ್ದಳು. ಅವರುಗಳೆಲ್ಲರೂ ತಾವಿದ್ದ ಊರನ್ನು ಬಿಟ್ಟು ಮೈಸೂರಿಗೇ ಬಂದರು.

ಈಗ ಅವರ ಜೀವನದ ಚಿತ್ರಣವೇ ಬದಲಾಗಿತ್ತು. ಭಾವ ದೊಡ್ಡ ಬಿಸಿನೆಸ್ ಪ್ರಾರಂಭಿಸಿದ್ದರು. ಅನೇಕ ಗಣ್ಯರ ಪರಿಚಯವಾಗಿತ್ತು. ಅವರ ಒಡನಾಟದಲ್ಲಿ ಶ್ರೀಮಂತಿಕೆಯನ್ನು ಮೆರೆಯುತ್ತಿದ್ದರು. ದೊಡ್ಡ ದೊಡ್ಡ ಪಾರ್ಟಿಗಳಲ್ಲಿ ಭಾಗವಹಿಸುತ್ತಿದ್ದರು. ವಿಮಾನದಲ್ಲಿ ಪ್ರಯಾಣವನ್ನು ಮಾಡುತ್ತಿದ್ದರು. ದೊಡ್ಡ ದೊಡ್ಡ ಸೈಟುಗಳನ್ನು ಖರೀದಿಸಿದ್ದರು. ಜೀವನ ಶೈಲಿ ಏಕಾ ಏಕಿ ಬದಲಾಗಿತ್ತು. ಆ ಸಣ್ಣ ಊರಿನ ಸ್ಕೂಲು ಮೇಷ್ಟ್ರು ಎಲ್ಲಿ? ಈ ಬಿಸಿನೆಸ್ ಮನುಷ್ಯ ಎಲ್ಲಿ? ಅಜಗಜಾಂತರ! ನೋಡಿದವರು ಮೂಗಿನ ಮೇಲೆ ಬೆರಳನ್ನು ಇಟ್ಟುಕೊಳ್ಳುವಷ್ಟು ಅಚ್ಚರಿ ಪಡುತ್ತಿದ್ದರು. ಇಷ್ಟೊಂದು ಹಣ ಎಲ್ಲಿಂದ ಬಂತು? ಯಾವ ಆಸ್ತಿ ಇತ್ತು? ಇದರ ಹಿಂದೆ ಯಾವ ಚಮತ್ಕಾರ ಇದೆ ಎನ್ನುವಷ್ಟು.

ಜಾಹ್ನವಿ ಈಗ ಮೆರೆಯುತ್ತಿದ್ದಳು. ಕಾರಿನಲ್ಲೇ ಓಡಾಟ. ಮೊದಲು ರಿಕ್ಷಾಗೆ ಹಣ ಕೊಡುವುದಕ್ಕೂ ಹಿಂದೆ ಮುಂದೆ ನೋಡುತ್ತಿದ್ದಳು. ಭಾರೀ ಭಾರೀ ಸೀರೆಗಳನ್ನುಡುತ್ತಿದ್ದಳು. ಸಮಾರಂಭಗಳಿಗೆ ಹೋದರೆ, ಕೈ ಬಿಚ್ಚಿ ಹಣವನ್ನು ಖರ್ಚು ಮಾಡಿ ಉಡುಗೊರೆಗಳನ್ನು ಕೊಡುತ್ತಿದ್ದಳು. ಹಿಂದೆಲ್ಲಾ ಉಡುಗೊರೆಗಳನ್ನು ಕೊಡದೇ ಬಾಯಿ ಮಾತನ್ನು ಧಾರಾಳವಾಗಿ ಆಡಿ ಮುಗಿಸಿ, ಹೊಟ್ಟೆ ತುಂಬಿಸಿಕೊಂಡು ಬರುತ್ತಿದ್ದಳು. ಭಾಗ್ಯ ಚಕ್ರ ಮೇಲೇರಿತ್ತು. ದಶಾನಾಥ ಅದೃಷ್ಟವನ್ನು ತಂದಿದ್ದ.

ತಾಯಿ ಹೇಳುತ್ತಿದ್ದಳು, "ನಿನ್ನ ಭಾವನ ಅದೃಷ್ಟ ಈಗ ಬಹಳ ಖುಲಾಯಿಸಿದೆ. ಜಾಹ್ನವಿಯ ಕಾಲ್ಗುಣ ಚೆನ್ನಾಗಿದೆ ಅಂತ ಅವರ ಅತ್ತೆ ಹೊಗಳಿದ್ದರು. ನಿನ್ನ ಗಂಡನ್ನ ನೋಡು, ಇದ್ದ ಕೆಲಸವನ್ನೂ ಬಿಟ್ಟು ಬಂದು ಇಲ್ಲಿ ಯಾವುದೋ ಸಣ್ಣ ಕೆಲಸಕ್ಕೆ ಸೇರಿಕೊಂಡಿದಾರೆ. ಅತ್ತೆ ಮಾವನೂ ಜತೇಲಿದಾರೆ. ಖರ್ಚು ವೆಚ್ಚಕ್ಕೆ ಲೆಖ್ಖವಿಲ್ಲ. ನಿನ್ನ ಗಂಡನನ್ನು ನಿನ್ನ ಭಾವನ ಬಳಿಗೆ ಕಳಿಸು. ಬಿಸಿನೆಸ್‌ಗೆ ಸೇರಿಸಿಕೊಳ್ಳುತ್ತಾರೆ. ನಿಮಗೂ ಅನುಕೂಲವಾಗುತ್ತೆ."

"ಇಲ್ಲಮ್ಮ, ಇದನ್ನು ಮಾತ್ರ ನಾನು ಮಾಡುಲ್ಲ. ಜಾಹ್ನವಿಯ ಗಂಡನ ಹಂಗು ಯಾರಿಗೆ ಬೇಕಾಗಿದೆ?"

"ಇದರಲ್ಲಿ ಹಂಗು ಏನು? ಒಬ್ಬರಿಗೊಬ್ಬರು ಮಾಡುವ ಸಹಾಯ ಅಷ್ಟೇ. ನೀನು ಈ ಮದುವೆಗೆ ಒಪ್ಪಿದ್ದರೆ, ಈ ಅದೃಷ್ಟ ನಿನ್ನದಾಗಿರುತ್ತಿತ್ತು" ನಂದಿನಿ ತಾಯಿಯನ್ನು ದುರು ದುರು ನೋಡಿದಳು. ಒಳಗೊಳಗೇ ಅವಳಿಗೂ ಅನ್ನಿಸಿತ್ತು. ಈ ಅದೃಷ್ಟವೆಲ್ಲಾ ನನಗೆ ಸಿಕ್ಕಬೇಕಾಗಿದ್ದುದು. ಇದನ್ನು ತಾನೇ ಕೈಯಾರೆ ಜಾಹ್ನವಿಗೆ ಒಪ್ಪಿಸಿದ್ದಾಗಿತ್ತು. ಇಲ್ಲದಿದ್ದರೆ ಜಾಹ್ನವಿಗೆ ಈ ಯೋಗ

ಎಲ್ಲಿ ಇತ್ತು? ಈ ಮಾತನ್ನು ಒಂದಲ್ಲ ಒಂದು ಸಲ ಅವಳಿಗೆ ಮುಟ್ಟಿಸ ಬೇಕೆನ್ನಿಸಿತ್ತು..."

ತಾಯಿಯ ಮಾತುಗಳು ನಂದಿನಿಯನ್ನು ಕೆರಳಿಸಿದ್ದವು. ಮನೆಗೆ ಬಂದು ಗಂಡನ ಮೇಲೆ ಹರಿಹಾಯ್ದಳು. "ನಿಮ್ಮನ್ನು ಮದುವೆಯಾಗಿ ನಾನು ಮೋಸ ಹೋದೆ. ಯಾವಾಗ ನೋಡಿದರೂ ಲೆಖ್ಖಾಚಾರ.... ನನ್ನನ್ನು ಸುಖವಾಗಿಟ್ಟುಕೊಳ್ಳುವುದು ಯಾವಾಗ?"

ಅವನು ಪೆಚ್ಚಾಗಿದ್ದ... "ಏನಾಗಿದೆ ನಿಂಗೆ? ಇವತ್ಯಾಕೆ ಹೀಗೆ ಮಾತನ್ನಾಡ್ತಿದೀಯ?" ಅನುಮಾನಿಸುತ್ತಾ ಕೇಳಿದ್ದ.

"ನನಗೆ ನಿಮ್ಮ ಜೊತೆ ಇರುಕ್ಕೆ ಇಷ್ಟವಿಲ್ಲ. ನನಗೆ ಡೈವೋರ್ಸ್ ಕೊಟ್ಟು ಬಿಡಿ. ನನ್ನ ಪಾಡಿಗೆ ನಾನು ಇರ್ತೀನಿ..."

"ಒಂಟಿಯಾಗಿ? ಈಗ ನಿನ್ನನ್ನು ಯಾರೂ ಮದುವೆಯಾಗುಲ್ಲ" ನಕ್ಕಿದ್ದ.

"ನೀವು ನಗಬೇಡಿ, ನಾನು ಹೇಗೋ ಇರ್ತೀನಿ" ರೇಗಿದ್ದಳು.

"ನಂಗೆ ಗೊತ್ತು, ನೀನು ಯಾಕೆ ಹೀಗೆ ಮಾತನ್ನಾಡ್ತಿದೀಯ ಅಂತ. ನಿನ್ನ ಭಾವನನ್ನೇ ಮದುವೆಯಾಗಿದ್ದರೆ, ಆ ಸೌಕರ್ಯ, ಅಂತಸ್ತು ನಿನ್ನದಾಗಿರುತ್ತಿತ್ತು ಅಂತ ಯೋಚಿಸ್ತಿದೀಯ ಅಲ್ವಾ?"

"ಏನಿಲ್ಲ, ನಾನ್ಯಾಕೆ ಹಾಗೆ ಯೋಚಿಸ್ಲೀ?"

"ನನಗೆ ಎಲ್ಲಾ ಅರ್ಥವಾಗುತ್ತೆ ನಂದಿನಿ. ವಯಸ್ಸಾದ ತಂದೆ ತಾಯಿಗಳೊಂದಿಗೆ ಇರಬೇಕು ಅಂತ ನಾನು ಕಲ್ಕತ್ತಾವನ್ನು ಬಿಟ್ಟು ಬಂದೆ. ನಾನು ಈಗ ಮತ್ತೆ ಆ ಕೆಲಸಕ್ಕೆ ಸೇರಿಕೊಳ್ಳುಕ್ಕೆ ಆಗುತ್ತಾ? ಎಲ್ಲಾ ಅವರವರು ಪಡೆದುಕೊಂಡು ಬಂದದ್ದು ಅಂತ ಅಮ್ಮ ಹೇಳ್ತಾನೇ ಇರ್ತಾಳೆ. ನಿನ್ನ ಹಣೇಲಿ ಬರೆದಿರೋನು ನಾನು, ಹಾಗೇ ನನ್ನ ಈ ಸಂಸಾರ. ಅವರ ಸಂಸಾರ ಅವರಿಗೆ.. ಅಲ್ಲದೇ ಇನ್ನೂ ಒಂದು ವಿಷಯ ಗೊತ್ತಾ? ದಿಢೀರನೇ ಅವರಿಗೆ ಈ ಶ್ರೀಮಂತಿಕೆ ಎಲ್ಲಿಂದ ಬಂತು ಅಂತ ಕೇಳಿದ್ಯಾ?.... ಅದು ಕಪ್ಪು ಹಣ.... ನಿಯತ್ತಿನ ಸಂಪಾದನೆ ಅಲ್ಲ. ನಿನ್ನ ಭಾವ ನೀನು ತಿಳಿದುಕೊಂಡಷ್ಟು ಸಾಚಾ ಮನುಷ್ಯನಲ್ಲ.... ನಾನು ಸುಳ್ಳನ್ನು ಹೇಳುತ್ತಿಲ್ಲ. ಒಂದಲ್ಲ ಒಂದು ದಿನ ಈ ವಿಷಯ ಹೊರಕ್ಕೆ ಬರುತ್ತೆ...."

"ನಿಮಗೆ ಹೇಗೆ ಗೊತ್ತು?" ಅವನು ತಲೆದೂಗಿದ್ದ. ಮತ್ತೆ ಪ್ರಶ್ನಿಸಿದಳು....

"ಇದೆಲ್ಲಾ ನಿಮಗೆ ಹೇಗೆ ತಿಳೀತು?" ಗಂಡನ ಮೇಲೆ ಅನುಮಾನ ಬಂದಿತು.

"ನಿನ್ನ ಭಾವ ನನ್ನನ್ನು ಭೇಟಿಯಾಗಿದ್ದರು. ಅವರಿಗೆ ನನ್ನಂತೆ

ಪ್ರಾಮಾಣಿಕವಾಗಿ ಕೆಲಸ ಮಾಡುವ ಸಹಾಯಕ ಬೇಕಾಗಿದ್ದಾನಂತೆ.... ಆಫರ್ ಮಾಡಿದ್ರು...."

"ನೀವು ಒಪ್ಕೊಂಡ್ರಾ?" ತಟ್ಟನೆ ಕೇಳಿದಳು.

"ನಾನು ಅಂಥೋನು ಅಂತ ನಿಂಗೆ ಅನ್ಸುತ್ತಾ? ನಾನು ಜಿಪುಣ ಇರಬಹುದು ಲೆಖ್ಖಾಚಾರದ ಮನುಷ್ಯ ಇರಬಹುದು ಆದರೆ ನನ್ನನ್ನು ನಾನು ಅಂತಹ ವೃತ್ತದೊಳಕ್ಕೆ ತೂರಿಸಿಕೊಳ್ಳುವುದಿಲ್ಲ. ಮೊದಲಿನಿಂದಲೂ ಪ್ರಾಮಾಣಿಕವಾಗಿಯೇ ಇದೀನಿ, ಮುಂದೆಯೂ ಇರ್ತೀನಿ. ನಮಗೆ ಬಡತನ, ಕಷ್ಟ ಅಂತ ಅನ್ನಿಸಿದರೆ, ನೀನು ನಿನ್ನ ಪಾಡಿಗೆ ನೀನು ಇರಬಹುದು. ನಿನ್ನ ಖರ್ಚಿಗೆ ನಾನು ಸಾಕಷ್ಟು ಹಣವನ್ನು ಕೊಡ್ತೀನಿ. ಆದರೆ ನೀನು ನಿನ್ನ ಅಕ್ಕನ ಮನೆಗೆ ಹೋಗಬಾರದು?.... ನನ್ನ ಕಂಡೀಷನ್..."

"ನಾನ್ಯಾಕೆ ಹೋಗ್ಲೀ.... ಸನಗೆ ಬುದ್ಧಿ ಇಲ್ವಾ?"

"ನಿನಗೆ ನಿನ್ನ ಭಾವನ ಬಗ್ಗೆ ಒಂಥರಾ ಗೌರವ ಅಂತ ನಂಗೆ ಗೊತ್ತು...."

"ಹಾಗೇನಿಲ್ಲ.... ಅದೆಲ್ಲಾ ಸುಳ್ಳು. ನಾನೆಂದೂ ಅವರ ಬಗ್ಗೆ ಯಾವ ಭಾವನೆಯನ್ನೂ ಇಟ್ಟುಕೊಂಡಿಲ್ಲ.... ಯಾವ ಬೆಸುಗೆಯೂ ಇಲ್ಲ...."

"ಅವರು ನಿನ್ನನ್ನು ಮೆಚ್ಚಿದ್ದರು.... ನಿನ್ನನ್ನೇ ಮದುವೆಯಾಗುವ ಆಸೆಯನ್ನು ವ್ಯಕ್ತಪಡಿಸಿದ್ದರು ಅಂತ ಎಂದೋ ನೀನು ಹೇಳಿದ್ದು ನೆನಪು...."

"ಅದು ಹಿಂದಿನ ಕತೆ. ನಾನು ಒಪ್ಪಿರಲಿಲ್ಲ. ಜಾಹ್ನವಿಯನ್ನೇ ಮದುವೆಯಾಗಿ ಅಂತ ಕೇಳಿಕೊಂಡಿದ್ದೆ...."

"ಹಾಗೆ ಮಾಡಬಾರದಾಗಿತ್ತು ಅಂತ ನಿಂಗೆ ಎಂದೂ ಅನ್ನಿಸಿರಲಿಲ್ವಾ?"

"ಇಲ್ಲ...." ತಡವರಿಸಿ ಉತ್ತರಿಸಿದಳು, ತಲೆತಗ್ಗಿಸಿದಳು.

"ನೀನು ನಿಜವನ್ನು ಹೇಳುತ್ತಿಲ್ಲ. ಮದುವೆಯಾದ ಹೊಸತರಲ್ಲಿ ನನ್ನ ಮೇಲೆ ಕೋಪ ಬಂದಾಗ ನಿನಗೆ ಅನ್ನಿಸದೇ ಇರುತ್ತಾ? ಆಗ ನನಗೂ ಬೇಸರವಾಗುತ್ತಿತ್ತು. ಬಹುಶಃ ನಾನು ನಿನಗೆ ತಕ್ಕವನಲ್ಲವೇನೋ ಅಂತ ಅನ್ನಿಸುತ್ತಿತ್ತು.... ಆದರೆ ನಾನು ನಿನ್ನನ್ನು ಇಷ್ಟಪಟ್ಟು ಮದುವೆಯಾಗಿದ್ದೆ. ನಿಷ್ಠೆಯಿಂದ ನೋಡಿಕೊಂಡಿದೀನಿ. ಪ್ರಾಮಾಣಿಕವಾಗಿ ನಿನ್ನವನಾಗಿದೀನಿ. ನಾನು ಎಂದೂ ಬೇರೆ ಯಾವ ಹೆಂಗಸನ್ನೂ ಮನದಲ್ಲೂ ಕೂಡಾ ಬಯಸಿಲ್ಲ. ನಿನಗೆ ಯಾವುದಕ್ಕೂ ಕೊರತೆ ಮಾಡಿಲ್ಲ ಅಂತ ಭಾವಿಸಿದೀನಿ. ಆದರೂ ನಿನಗೆ ನನ್ನ ಬಗ್ಗೆ ಬೇಸರವಾಗಿದ್ದರೆ, ಅದಕ್ಕೆ ನಾನು ಏನೂ ಮಾಡುಕ್ಕೆ ಆಗುಲ್ಲ"

"ನಾನೆಂದಾದ್ರೂ ನನ್ನ ಬೇಸರವನ್ನು ಹೇಳಿಕೊಂಡಿದೀನಾ?"

"ಇಲ್ಲ, ಅದನ್ನು ನಾನು ಮೆಚ್ಚಿದೀನಿ. ನಾನೆಂದೂ ನಿನ್ನನ್ನು ಸಂಶಯದ ದೃಷ್ಟಿಯಿಂದ ನೋಡಿಲ್ಲ. ನನಗೆ ನಿನ್ನ ಮೇಲೆ ಪೂರ್ಣ ನಂಬಿಕೆ ಇದೆ..."

"ಅಂದರೇ...."

"ನೀನು ನನ್ನಿಂದ ಬೇರೆ, ದೂರದಲ್ಲೆಲ್ಲೋ ಒಂಟಿಯಾಗಿ ಇದ್ದರೂ, ನಿನ್ನ ಭಾವನ ಸಂಪರ್ಕವನ್ನು ಇಟ್ಟುಕೊಳ್ಳುವುದಿಲ್ಲ ಎನ್ನುವ ನಂಬಿಕೆ ನನಗಿದೆ...."

"ಛೀ.... ಇದೆಂಥಾ ಮಾತು? ಅಂಥಾ ಹೆಂಗಸು ನಾನಲ್ಲ...."

"ನನ್ನೊಡನೆ ಸಂಪರ್ಕ ಮಾಡಿದೀಯ. ನನ್ನ ಮಕ್ಕಳಿಗೆ ತಾಯಿಯಾಗಿ ದೀಯ.... ನೀನು ಏನು ಅಂತ ನಂಗೊತ್ತು. ಅದನ್ನೇ ಹೇಳಿದೆ ಅಷ್ಟೆ..."

"ಹೋಗ್ಲೀ ಬಿಡಿ... ಇನ್ನು ಈ ಮಾತು ಸಾಕು...."

"ಹಾಗಾದ್ರೆ ಬೇರೆ ಯಾವಾಗ ಹೋಗ್ತೀಯ? ಮನೆ ಎಲ್ಲಿ ನೋಡ್ಲೀ....? ನಿನಗೆ ಎಂಥಾ ಮನೆ ಬೇಕೋ ನೋಡ್ತೀನಿ. ಎಷ್ಟು ಖರ್ಚಾದ್ರೂ ಪರವಾಗಿಲ್ಲ. ಆದರೆ ಒಂದು ಮಾತು ಮಕ್ಕಳು ನನ್ನ ಜತೇಲೇ ಇರ್ತಾರೆ.... ಅವರನ್ನು ನಿನ್ನ ಜತೆ ಕಳಿಸಿ ನಾನೊಬ್ಬನೇ ಹೇಗಿರಲಿ....?"

ಗಂಡನ ಕಡೆ ನೋಡಿದಳು. ತಮಾಷೆ ಮಾಡ್ತಿದಾನೋ.... ನಿಜವನ್ನೇ ಹೇಳ್ತಿದಾನೋ ಗೊತ್ತಾಗಲಿಲ್ಲ. "ಮಗಳ ಮದುವೆ ಮಾಡಿ ಕಳಿಸಿದರೆ, ಮಗ ಬೇರೆ ಊರಿಗೆ ಕೆಲಸಕ್ಕೆ ಹೋದರೆ ಆಗ ನೀವು ಒಂಟಿಯಾಗುಲ್ವಾ? ಆಗ ಹೇಗಿರ್ತೀರಿ?" ಸವಾಲೆಸೆದಳು.

"ಆಗ ನಾನು ನಿನ್ನ ಮನೆಗೆ ಬಂದು ಬಿಡ್ತೀನಿ. ಸೇರಿಸ್ತೀಯಾ ಅಲ್ವಾ?" ಅವಳು ಉತ್ತರಿಸಲಿಲ್ಲ. ಅವಳ ಕಣ್ಣುಗಳಿಂದ ನೀರಿನ ಹನಿ ಉದುರಿತು. "ನಿಂಗೆ ಇಷ್ಟವಿಲ್ಲದಿದ್ರೆ ಬೇಡ ಬಿಡು. ಹೇಗೋ ಇದ್ಕೋತೀನಿ..." ಮತ್ತೆ ಹೇಳಿದ.

"ಹೀಗೆಲ್ಲಾ ಮಾತನ್ನಾಡಿ ಹೊಟ್ಟೇನ ಯಾಕೆ ಉರಿಸ್ತೀರಿ?... ಮಕ್ಕಳಿಂದ ದೂರ ನಾನು ಹೇಗಿರಲಿ?... ಮಕ್ಕಳು ನನ್ನವರು ಕೂಡಾ"

"ಮತ್ತೆ ನಾನು?"

"ನೀವು ನಿಮ್ಮ ಅಪ್ಪ ಅಮ್ಮನಿಗೆ ಸೇರಿದವರು.... ಅವರು ನಿಮ್ಮನ್ನು ಒಂಟಿಯಾಗಿ ಇರಲು ಬಿಡುವುದಿಲ್ಲ. ಮತ್ತೆ ನಿಮ್ಮ ಮದುವೆಯನ್ನು ಮಾಡ್ತಾರೆ.... ನನ್ನ ಮಕ್ಕಳಿಗೆ ಮಲತಾಯಿ ಬರ್ತಾಳೆ.... ಇದನ್ನು ನಾನು ಹೇಗೆ ಸಹಿಸಲಿ?"

"ಇಷ್ಟೆಲ್ಲಾ ಯೋಚಿಸೋಳು, ಬೇರೆ ಇರುವ ಮಾತನ್ಯಾಕೆ ಆಡ್ತೀಯ?"

"ನಿಮ್ಮ ಹೊಟ್ಟೆ ಉರಿಸೋಕೆ...."

"ಅಷ್ಟು ಕೆಟ್ಟೋನಾ ನಾನು?"

"ಹೂಂ, ಮತ್ತೆ.... ನನ್ನನ್ನು ಬೇರೆ ಕಳಿಸೋಕೆ ಸಿದ್ಧರಾಗಿದ್ದರಲ್ಲ...."

"ನಿನ್ನ ಈ ಆಸೆನಾದ್ರೂ ತೀರಿಸೋಣ ಅಂತ ಅಂದ್ಕೊಂಡೆ.... ಆದರೆ ಒಳಗೊಳಗೇ ನನಗೆ ಎಷ್ಟು ಬೇಸರವಾಗ್ತಿತ್ತು ಗೊತ್ತಾ?"

"ಈಗ ಹೇಳ್ತಾ ಇದೀರಲ್ಲ... ಎಷ್ಟು ಜಿಪುಣರು ನೀವು.... ಮೊದಲೇ ಹೇಳಿದ್ದರೆ ಏನು ಕಳೆದುಕೊಳ್ತಿದ್ರೀ?"

"ಮೊದಲೇ ಹೇಳಿದ್ರೆ ಹೋಗೋದನ್ನು ಬಿಡ್ತಿದ್ದೆಯಾ?"

"ಕೇಳಿ ನೋಡ್ಬೇಕಾಗಿತ್ತು.... ಅದೇನು ಬುದ್ಧಿಯೋ....?"

"ನನ್ನ ಬುದ್ಧಿನೇ ಹೀಗೆ.... ಮಾತೇ ಹೀಗೆ... ನಿನ್ನ ಭಾವನ ಥರ ಅಲ್ಲ..."

"ಅವರ ಸುದ್ಧಿ ಎತ್ಬೇಡಿ. ನಾನು ಅವರನ್ನು ದ್ವೇಷಿಸ್ತೀನಿ.... ಅವರ ದೆಸೆಯಿಂದ ನನ್ನಲ್ಲಿ ಕೆಟ್ಟ ಆಲೋಚನೆಗಳು ಬರುತ್ತವೆ...." ಬುಸುಗುಟ್ಟಿದಳು....

"ಕೆಟ್ಟ ಆಲೋಚನೆಗಳನ್ನು ನಾನು ದೂರ ಮಾಡ್ತೀನಿ" ಎನ್ನುತ್ತಾ ಅವಳ ಬಳಿ ಸಾರಿದ.

*　　*　　*

ಮೀರಾ

ವಧೂವರರು ಎದುರು ಬದುರು ನಿಂತಿದ್ದರು. ಅಂತರ ಪಟ ಸರಿದು, ಜೀರಿಗೆ ಬೆಲ್ಲವನ್ನು ಪರಸ್ಪರ ತಲೆಯ ಮೇಲೆ ಹಾಕಿದ್ದಾಗಿತ್ತು. ಸ್ಪರ್ಧೆಯಲ್ಲಿ ಭಾಗವಹಿಸಿದ್ದವರಂತೆ, ರಭಸವಾಗಿ. ವರನಿಗೆ ಗೆದ್ದನೆಂಬ ಗರ್ವದ ಮುಗುಳ್ನಗು. ವಧುವಿಗೆ ಲಜ್ಜೆ ಬೆರೆತ ಮಂದಹಾಸ. ಇಬ್ಬರ ನೋಟವೂ ಬೆರೆತಿತ್ತು. ಅನೇಕ ಜೋಡಿ ಕಣ್ಣುಗಳ ದೃಷ್ಟಿ ತಮ್ಮ ಮೇಲಿದೆ ಎನ್ನುವುದರ ಪರಿವೇ ಇಲ್ಲದೆ ಮದು ಮಕ್ಕಳು ತಮ್ಮ ಲೋಕದಲ್ಲಿ ಬೆರೆತಿದ್ದರು.

ಆದರೆ ಕುಸುಮಳ ನೋಟ ಅಲ್ಲಿರಲಿಲ್ಲ. ಅವಳ ನೋಟ, ಆ ಹೆಂಗಸಿನ ಸುತ್ತ ಸುಳಿದಾಡುತ್ತಿತ್ತು. ಈ ಮುಂಚೆ ಇವಳನ್ನು ನಾನು ಬಲ್ಲೆ ಎಂಬಷ್ಟು ಪರಿಚಿತ ಮುಖ. ಆದರೆ ತಕ್ಷಣಕ್ಕೆ ನೆನಪಾಗುತ್ತಿಲ್ಲ. "ಭರತ್.... ಭರತ್..." ಎಂದು ಕರೆಯುತ್ತಾ ಆ ಮುದ್ದಾದ ಮಗುವಿನ ಹಿಂದೆ ಹಿಂದೆ ಓಡಾಡುತ್ತಿದ್ದವಳು ಯಾರಿರಬಹುದು ಎಂದುಕೊಳ್ಳುತ್ತಾ ತನ್ನ ನೆನಪಿನ ಕೊಳದೊಳಕ್ಕೆ ಇಳಿದಿದ್ದಳು.

ಕಡೆಗೂ ನೆನಪಾದಳು ಕೆಸರಿನ ದಂಟುಗಳ ನಡುವೆ ಹೆಜ್ಜೆ ಹಾಕಿ ಕಮಲವನ್ನು ಕಿತ್ತಂತೆ, ಗೋಜಲು ಹರಿದಿತ್ತು. ಮೀರಾ.... ಹೌದು.... ಇವಳು ಮೀರಾಳೇ. ನಾನು ಇವಳನ್ನು ಗುರುತಿಸಿದೆ. ಇವಳಿಗೂ ನನ್ನ ಗುರುತು ಸಿಕ್ಕಿರಬಹುದೇ...? ನನ್ನ ಕಡೆ ನೋಡಿದ್ದರಲ್ಲವೇ ಗುರುತು ಸಿಗುವುದು? ಅವಳ ಧ್ಯಾನವೆಲ್ಲಾ ಮುದ್ದುಗಾರ ಮಗನ ಮೇಲೆ....

ಕುಸುಮ ಮತ್ತೆ ಮತ್ತೆ ಅವಳ ಕಡೆ ನೋಡಿದಳು. ಅವಳ ಗಮನ ತನ್ನ ಮೇಲೆ ಬಿದ್ದೀತು ಎಂದು ಕಾದಳು. ಆಹ್ವಾನಿತರ ನಡುವೆ, ಕುರ್ಚಿಯಲ್ಲಿ ಕುಳಿತಿದ್ದ ಕುಸುಮಳ ಕಡೆ ಅವಳ ಗಮನ ಹರಿಯಲೇ ಇಲ್ಲ. ಒಂದು ಗಳಿಗೆ

ಇವಳೆಂಥಾ ಗೆಳತಿ ಅಂತ ಅನ್ನಿಸಿದ್ದೂ ಉಂಟು. ಆದರೆ ಮರುಕ್ಷಣವೇ, ನಾನು ಈ ಮದುವೆಗೆ ಬಂದಿರ್ತೀನಿ ಅಂತ ಇವಳಿಗೆ ಹೇಗೆ ಗೊತ್ತಾದೀತು? ಈಗ ನಾನೇ ಮಾತನಾಡಿಸಬೇಕು ಅಂತಂದುಕೊಂಡಳು. ಸಮಯಕ್ಕಾಗಿ ಕಾದಳು.

ವಿವಾಹದ ಕಲಾಪಗಳು ಮುಗಿಯುತ್ತಾ ಬಂದಿದ್ದವು. ಓಲಗದವರು ಗಟ್ಟಿಮೇಳವನ್ನು ನುಡಿಸಿದರು. ಓ.. ಮಾಂಗಲ್ಯ ಧಾರಣೆಯೂ ಆಗಿ ಹೋಯಿತು. ಹುಡುಗಿಗೆ ಉಡುಗೊರೆಯನ್ನಿತ್ತು, ವಿಶ್ ಮಾಡಿ, ಊಟ ಮುಗಿಸಿ ಹೊರಡುವ ಮೊದಲು ಮೀರಾಳ ಹತ್ತಿರ ಮಾತಾಡಬೇಕು. ಈಗ ಎಲ್ಲಿದ್ದಾಳೋ ಹೇಗಿದ್ದಾಳೋ ಎಲ್ಲವನ್ನೂ ವಿಚಾರಿಸಬೇಕು ಎಂದುಕೊಂಡು ಕುಸುಮ ಎದ್ದಳು. ಮಂಟಪದ ಬಳಿ ಜನ ಜಂಗುಳಿ ಇತ್ತು. ತನ್ನ ಸರದಿ ಬರುವುದು ಇನ್ನೂ ತಡವಾಗಬಹುದು ಅಂತ ಅಂದುಕೊಂಡು, ಮೀರಾ ಕಾಣುವಳೋ ಎಂದುಕೊಂಡು ಅತ್ತಿತ್ತ ಕಣ್ಣು ಹಾಯಿಸಿದಳು. ಹೆಬ್ಬಾಗಿಲ ಬಳಿ ಯಾರೊಡನೆಯೋ ಮಾತನಾಡುತ್ತಿದ್ದವಳನ್ನು ಕಂಡಳು.

ಅನುಮಾನಿಸುತ್ತಾ ಅವಳ ಬಳಿಗೆ ಬಂದಳು. ಅವಳು ಇತ್ತ ತಿರುಗಿದ ಕೂಡಲೇ ಮುಗುಳ್ನಗೆ ಸೂಸಿದಳು. ಅವಳು ಮಂದಹಾಸ ಬೀರಿದಳು. ಆದರೆ ಅದು ಪರಿಚಯದ ನಗೆ ಆಗಿರಲಿಲ್ಲ.

"ಮೀರಾ.... ಮೀರಾ ಅಲ್ವಾ?".... ಸಂದೇಹವಿರದಿದ್ದರೂ ಪ್ರಶ್ನಿಸಿದಳು.

"ಹೌದು.... ನೀವು?" ಅವಳು ಸಂಶಯದಿಂದ ಪ್ರಶ್ನಿಸಿದಳು.

"ಮೀರಾ ನಾನು ಕುಸುಮ ಕಣೇ.... ಗರ್ಲ್ಸ್ ಹೈಸ್ಕೂಲು.... ಜ್ಞಾಪಿಸ್ಕೋ...." ಅವಳ ಮುಖ ಅರಳಿತು.

"ಕುಸುಮಾನಾ? ಗುರುತೇ ಸಿಗಲಿಲ್ವಲ್ಲೇ....? ನನ್ನನ್ನು ಹೇಗೆ ಕಂಡು ಹಿಡಿದೆ?"

"ಅದೇ ಫೇಸ್ ಕಟ್... ಆದರೆ ಸ್ವಲ್ಪ ಗುಂಡು ಗುಂಡಾಗಿದೀಯ...." ಅವಳ ದೇಹದ ಮೇಲೆ ಕಣ್ಣಾಡಿಸಿ ನಕ್ಕಳು.

"ಹೂಂ... ಚೆನ್ನಾಗೇ ಮೈ ಬಂದಿದೆ... ನೀನೂ ದಪ್ಪಗಾಗಿದೀಯ. ನಿನ್ನ ಫೇಸ್ ಕಟ್ ಸ್ವಲ್ಪ ಚೇಂಜ್ ಆಗಿದೆ. ಆಗಿನ ಕುಸುಮ ನೀನಲ್ಲ. ನೀನಾಗಿಯೇ ಮಾತಾಡಿಸ್ದೆ ಇಲ್ದಿದ್ರೆ ನಂಗಂತೂ ಗುರುತು ಸಿಗ್ತಿರ್ಲಿಲ್ಲ..." ಕುಸುಮ ನಕ್ಕಳು.

"ಅಪರೂಪಕ್ಕೆ ಎಷ್ಟೋ ವರ್ಷಗಳ ನಂತರ ಸಿಕ್ಕಿದೀಯ. ತುಂಬಾ ಮಾತಾಡ್ಬೇಕು.... ಮಗನಾ? ಹೆಸರು ಭರತ್ ಅಲ್ವಾ?"

"ಹೂಂ.... ಭಾಳ ತುಂಟ... ಹಿಡಿಯೋದೇ ಕಷ್ಟ..."

"ಸ್ಕೂಲಿಗೆ ಹೋಗ್ತಾನಾ? ಯಾವ ಸ್ಕೂಲು?"

"ಹೂಂ, ಯು.ಕೆ.ಜಿ... ವಿವೇಕಾನಂದ ಸ್ಕೂಲು... ನಮ್ಮ ಮನೆಯ ಹತ್ತಿರವೇ ಇದೆ..."

"ನಿಮ್ಮನೆ ಎಲ್ಲಿದೆ? ಇದೇ ಊರ್ನಲ್ಲಿದೀಯಾ...."

"ಹೂಂ... ಇದೇ ಊರ್ನಲ್ಲಿದೀನಿ.... ಬ್ಯಾಂಕ್‌ನಲ್ಲಿ ಕೆಲಸದಲ್ಲಿದೀನಿ.... ನಮ್ಮ ಮನೆಗೆ ಬಾ.... ಫೋನು ನಂಬರನ್ನು ಕೊಡ್ತೀನಿ... ಫೋನು ಮಾಡ್ಬಿಟ್ಟು ಬಾ...."

"ಮನೇಲಿ ಯಾರ‍್ಯಾರು ಇದೀರಿ?"

"ಯಾರ‍್ಯಾರು ಅಂದ್ರೇ? ನಾನು ನನ್ನ ಮಗ... ಇವನನ್ನು ನೋಡಿ ಕೊಳ್ಳೋಕೆ ಅಂತ ಒಬ್ಬ ಹೆಂಗಸು... ಅವರೇ ಮನೆ ಕೆಲಸ ಎಲ್ಲಾ ಮಾಡ್ತಾರೆ?"

"ಅಂದ್ರೆ...." ಸಂಶಯದ ದನಿ ನಡುಗಿತ್ತು.

"ಎಲ್ಲಾ ಮಾತನ್ನೂ ಇಲ್ಲೇ ಆಡ್ಬೇಕಾ? ಮನೇಲಿ ಕೂತು ಮಾತನಾಡೋಣ. ಬೇಕಾದಷ್ಟು ಮಾತು ಇದೆ...."

"ಹೌದು ಮೀರಾ.... ಏಷ್ಟೋ ವರ್ಷಗಳ ಮಾತನ್ನಾಡ್ಬೇಕು... ನನ್ನ ಬಗ್ಗೆ ವಿಚಾರಿಸುಲ್ವಾ ನೀನು...?"

"ನೀನೇ ಹೇಳೋದಾದ್ರೆ ಹೇಳು. ನಾನು ನಾನಾಗಿಯೇ ಕೇಳೋ ಅಭ್ಯಾಸವನ್ನೇ ಇಟ್ಟುಕೊಂಡಿಲ್ಲ..." ತುಸು ಗಂಭೀರವಾಗಿ ನುಡಿದಳು.

"ನನ್ನ ಹತ್ತಿರಾನೂ ಅದೇ ಜಂಭಾನಾ ಮೀರಾ?"

"ಜಂಭ?... ನನ್ನನ್ನು ನೋಡಿದ್ರೆ ಜಂಭ ಮಾಡ್ತೀನಿ ಅಂತ ಅನ್ಸುತ್ತಾ ಕುಸುಮಾ.....?" ಅವಳ ಧ್ವನಿ ಒಡೆದಿತ್ತು.... ಕಣ್ಣುಗಳಲ್ಲಿ ಏನೋ ದುಗುಡ ಅವಿತು ಕುಳಿತಿತ್ತು.

"ಸಾರೀ.... ಕಣೇ... ನಿನ್ನ ಊಟ ಆಯ್ತಾ?" ಮಾತಿನ ಧಾಟಿಯನ್ನು ಬದಲಾಯಿಸಿದಳು.

"ಇಲ್ಲ. ನಾನು ಹೆಣ್ಣಿನ ಕಡೆಯವಳು ನಿಧಾನವಾಗಿ ಮಾಡ್ತೀನಿ. ನೀನು ಯಾರ ಕಡೆಯಿಂದ ಬಂದಿದೀಯ?"

"ನಾನೂ ಹುಡುಗಿಯ ಕಡೆಯವಳೇ.... ನಮ್ಮ ಮನೆಯ ಸಮೀಪ ದಲ್ಲೇ ಇದಾರೆ. ಟ್ಯೂಷನ್ ಹೇಳಿಸ್ಕೊಳ್ಳೋಕೆ ಬರ್ತಿದ್ರು... ನಿಂಗೆ ಇವರು ಸಂಬಂಧಿಗಳಾ?"

"ಹೂಂ.... ಅಮ್ಮನ ಕಡೆ ಸಂಬಂಧಿ.... ದೂರದ ಸಂಬಂಧ...."

"ಅಂದ್ಹಾಗೇ ನಿನ್ನ ಅಪ್ಪ ಅಮ್ಮ ಹೇಗಿದಾರೆ? ನಿನ್ನ ತಂಗಿ ಹೇಗಿದಾಳೆ?" ಮುಖದ ಕಳೆ ಗುಂದಿತ್ತು.

"ಅಪ್ಪ ಅಮ್ಮ ಬದುಕಿಲ್ಲ. ತಂಗಿ ಅಮೆರಿಕಾದಲ್ಲಿದಾಳೆ. ಅಮ್ಮ ಬದುಕಿದ್ದಿದ್ರೆ ನಾನು ಬರುವ ಪ್ರಮೇಯವೇ ಇರ್ತಿರ್‍ಲಿಲ್ಲ. ಬರ್ದಿದ್ರೆ ಆಕ್ಷೇಪಣೆ ಮಾಡ್ತಾರೆ ಅಂತ ಬಂದಿದೀನಿ.... ಬಾ ಊಟ ಮಾಡುವೆಯಂತೆ...."

"ನಾನೂ ಆಮೇಲೆ ಮಾಡ್ತೀನಿ ಬಾ.... ಎಲ್ಲಾದ್ರೂ ಕೂತು ಮಾತಾಡೋಣ ಅಥವಾ ಬ್ಯುಸೀನೋ...."

"ಬ್ಯುಸೀನೂ ಇಲ್ಲ, ಹಸಿಯೂ ಇಲ್ಲ. ಇಲ್ಲಿ ನನ್ನನ್ನು ಕೇಳೋರ್‍ಯಾರು? ರಜ ಹಾಕಿ ಬಂದಿದೀನಿ ಅಷ್ಟೇ.... ಊಟ ಆಗ್ತಿದ್ದ ಹಾಗೇ ಹೋಗೋದೇ...."

"ಯಾಕೆ ಮೀರಾ? ತುಂಬಾ ಬೇಜಾರು ಮಾಡಿಕೊಂಡಿರುವ ಹಾಗಿದೆ? ಹೇಳುವ ವಿಚಾರ ಆದ್ರೆ...ನನ್ಹತ್ರ ಹೇಳು. ನಾನು ಬಲವಂತ ಮಾಡುಲ್ಲ..."

"ಹೇಳ್ತೀನಿ.... ಆದರೆ ಇವತ್ತು ಬೇಡ... ಒಂದು ಕಾಲದಲ್ಲಿ ನೀನು ನನ್ನ ಆಪ್ತ ಸ್ನೇಹಿತೆಯಾಗಿದ್ದವಳು. ಅಕ್ಕ ಪಕ್ಕ ಕುಳಿತು ಹರಟೆ ಹೊಡೆಯುತ್ತಿದ್ದವರು. ಈಗ ನಿನ್ನನ್ನು ನೋಡಿ ಆ ಹಳೆಯ ದಿನಗಳೆಲ್ಲ ನೆನಪಿಗೆ ಬಂತು ನೋಡು...."

ಅಷ್ಟರಲ್ಲಿ ಕುಸುಮಳನ್ನು ಅವಳ ಪಕ್ಕದ ಮನೆಯಾಕೆ ಹುಡುಕಿಕೊಂಡು ಬಂದರು. "ನೀವು ಇಲ್ಲಿದೀರಾ ಕುಸುಮ? ಇನ್ನೂ ಹುಡುಗಿಗೆ ಓದಿಸಿಯೇ ಇಲ್ಲ. ನಾವೆಲ್ಲಾ ಊಟಕ್ಕೆ ಹೋಗ್ತಿದೀವಿ.... ಬರ್ತೀರಾ?"

"ಇವಳು ನನ್ನ ಹೈಸ್ಕೂಲಿನ ಗೆಳತಿ... ಮಾತಾಡ್ತಾ ಇದ್ದೆವು. ನೀವು ಹೋಗಿ. ನಾನು ಇವಳ ಜತೇಲಿ ಊಟ ಮಾಡ್ತೀನಿ..."

"ಪರವಾಗಿಲ್ಲ ನೀನು ಹೋಗು ಕುಸುಮಾ.... ನೀವೆಲ್ಲಾ ಒಟ್ಟಿಗೇ ಬಂದಿದೀರೋ ಏನೋ. ನಾನು ಇನ್ನೂ ಭರತ್‌ಗೆ ಊಟ ಮಾಡಿಸ್ಬೇಕು, ಹೊತ್ತಾಗುತ್ತೆ...."

"ಸರಿ ಹಾಗಾದ್ರೆ.... ನಂಗೆ ನಿನ್ನ ಫೋನು ನಂಬರನ್ನು ಕೊಡು. ನಾನು ಫೋನು ಮಾಡಿ, ನಿಮ್ಮ ಮನೆಗೆ ಬರ್ತೀನಿ.... ನಂಗೆ ಊಟ ಹಾಕ್ತೀಯ ತಾನೇ?"

"ಅದೇನೇ ಹೀಗೆ ಕೇಳ್ತೀಯಾ? ಖಂಡಿತಾ ಹಾಕ್ತೀನಿ... ಹ್ಯಾಂಡ್ ಬ್ಯಾಗ್ ನಿಂದ ಪೆನ್ನನ್ನು ತೆಗೆದು, ನೋಟ್ ಬುಕ್ ತೆಗೆದು, ಫೋನು ನಂಬರನ್ನು ಬರೆದು ಕೊಟ್ಟಳು. ಬ್ಯಾಂಕಿಗೆ ಮಾಡೋದಾದ್ರೆ, ಮೀರಾ ಕಾಮತ್ ಅಂತ ಕೇಳು.. ಕೊಡ್ತಾರೆ. ಮನೆಗೆ ಮಾಡಿದ್ರೆ ಅಡಿಗೆಯವರು ತಗೋತಾರೆ, ಹೇಗಾದ್ರೂ ಸರಿ...."

"ಸರಿ ಕಣೇ ಮೀರಾ.... ನಿನ್ನನ್ನು ನೋಡಿ ತುಂಬಾ ಸಂತೋಷ ಆಯ್ತು ಬರ್ಲಾ?" ಎಂದು ಹೇಳಿ ಅಲ್ಲಿಂದ ಸರಿದಿದ್ದಳು.

*****

ಬೆಳ್ಳಗೆ, ತೆಳ್ಳಗೆ ಕುಳ್ಳಗೆ ಇದ್ದ ಮೀರಾ ಚಿಕ್ಕ ಬಾಲಕನಂತೆ ತೋರುತ್ತಿದ್ದಳು. ಹೈಸ್ಕೂಲಿನಲ್ಲಿ ಓದುತ್ತಿರುವ ಹುಡುಗಿ ಎಂದರೆ ನಂಬುವಂತಿರಲಿಲ್ಲ. ಅವಳ ಮಗ್ಗುಲಲ್ಲೇ ಕುಳಿತುಕೊಳ್ಳುತ್ತಿದ್ದ ಕುಸುಮ ದಷ್ಟ ಪುಷ್ಟವಾಗಿ ಎತ್ತರಕ್ಕೆ ಬೆಳೆದಿದ್ದಳು.

ಮೀರಾ ಓದಿನಲ್ಲಿ ಅಷ್ಟಕಷ್ಟೇ. ಆದರೆ ನೃತ್ಯಾಭ್ಯಾಸವನ್ನು ಮಾಡುತ್ತಿದ್ದಳು. ಲಂಗರವಿಕೆ ತೊಡುತ್ತಿದ್ದ ಮೀರಾಳಿಗೂ, ಲಂಗ ದಾವಣಿಯನ್ನು ಉಡುತ್ತಿದ್ದ ಕುಸುಮಳಿಗೂ ಆತ್ಮೀಯವಾದ ಸ್ನೇಹ ಬೆಳೆದಿತ್ತು. ಕುಸುಮ ಓದು ಬರಹದಲ್ಲಿ ಅವಳಿಗೆ ಸಹಾಯ ಮಾಡುತ್ತಿದ್ದಳು. ಮೀರಾ ತನ್ನ ಮನೆಯಲ್ಲಿ ಬಿಡುತ್ತಿದ್ದ ಸೀಬೆಯ ಹಣ್ಣುಗಳನ್ನು ತಂದು ಕೊಡುತ್ತಿದ್ದಳು. ಉಪ್ಪು ಖಾರವನ್ನು ಹಚ್ಚಿ ಸೀಬೆ ಕಾಯಿಗಳನ್ನು ತಿನ್ನುವುದೆಂದರೆ ಇಬ್ಬರಿಗೂ ಇಷ್ಟ. ಎಷ್ಟೋ ಸಾರಿ, 'ಕಾಗೆ ಎಂಜಲು' ಮಾಡಿಕೊಂಡು ತಿನ್ನುತ್ತಿದ್ದುದೂ ಉಂಟು.

ಸದಾ ಪಿಸಿ ಪಿಸಿ ಮಾತು, ಕಿಸಿ ಕಿಸಿ ನಗು.... ಎಷ್ಟೋ ಸಾರಿ ಉಪಾಧ್ಯಾಯಿನಿಯರಿಂದ ಬೈಯ್ಯಿಸಿಕೊಂಡದ್ದೂ ಉಂಟು. "ಅದೇನು ಗಲಾಟೆ ಮಾಡ್ತೀರ್ರೇ ಇಬ್ರೂ?" ಎಂದು ತರಗತಿಯ ಮಾನಿಟರ್ ಎಚ್ಚರಿಸುತ್ತಿದ್ದುದೂ ಉಂಟು....ಅದು ಇಬ್ಬರಿಗೂ ಲೆಖ್ಖವಿಲ್ಲ. ಒಟ್ಟಿಗೇ ಕುಳಿತು ಮಧ್ಯಾಹ್ನದ ಊಟವನ್ನು ಒಟ್ಟಿಗೇ ಮಾಡುತ್ತಿದ್ದರು. ಮನೆ ಮಾತ್ರ ಬೇರೆ ಬೇರೆ ದಿಕ್ಕಿನಲ್ಲಿದ್ದುದರಿಂದ ಒಟ್ಟಿಗೇ ಹೋಗಲಾಗುತ್ತಿರಲಿಲ್ಲ....

ಸ್ಕೂಲಿನ ವಾರ್ಷಿಕೋತ್ಸವದ ಸಮಯದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಅನೇಕ ವಿದ್ಯಾರ್ಥಿನಿಯರು ಪಾಲುಗೊಳ್ಳುವವರಿದ್ದರು. ಮೀರಾ, ನೃತ್ಯ ಮಾಡುವುದಾಗಿ ತನ್ನ ಹೆಸರನ್ನು ಬರೆಸಿದ್ದಳು.

"ನೀನೂ ಡ್ಯಾನ್ಸ್ ಕಲಿತಿದ್ದರೆ ಎಷ್ಟು ಚೆನ್ನಾಗಿರ್ತಿತ್ತು.... ಇಬ್ಬರೂ ಒಟ್ಟಿಗೇ ಡ್ಯಾನ್ಸ್ ಮಾಡಬಹುದಾಗಿತ್ತು" ಮೀರಾ ಮುಗ್ಧಳಂತೆ ಹೇಳಿದ್ದಳು.

"ಎಲ್ಲರೂ ಚಪ್ಪಾಳೆ ತಟ್ಟಿ ಬಾಯ್ತುಂಬಾ ನಕ್ಕಿರೋರು... ನನ್ನ ನಿನ್ನ ಜೋಡಿ ಡ್ಯಾನ್ಸಿಗೆ ಸರಿಯಿಲ್ಲ...."

"ನೀನೂ ಯಾವುದಾದ್ರೂ ಫ್ಯಾನ್ಸಿ ಡ್ರೆಸ್‌ನಾದ್ರೂ ಹಾಕು.... ನಿನಗೆ ಒಪ್ಪುವಂಥಾದ್ದು... ಬಹುಮಾನ ಸಿಕ್ಕಬಹುದು."

"ಬೇಡ ಬಿಡೇ ನನಗೆ ಅದೆಲ್ಲ ಇಷ್ಟವಿಲ್ಲ.... ನಿನಗೆ ಇಷ್ಟ ಇದ್ದರೆ

ನೀನೇ ಹಾಕು... ನೀನೇ ಬಹುಮಾನ ತಗೋ...."

"ನಂಗೇನೋ ಇಷ್ಟ.... ನನಗೆ ಯಾವ ವೇಷ ಒಪ್ಪುತ್ತೆ....?"

"ನೀನು ಚಿಕ್ಕ ಹುಡುಗಿ ಥರ ಇದೀಯ.... ಬಾಲವಿಹಾರದ ಹುಡುಗಿ ಫ್ಯಾನ್ಸಿ ಡ್ರೆಸ್ ಹಾಕಿದ ಹಾಗಿರುತ್ತೆ. ಈ ವರ್ಷ ಬೇಡ ಬಿಡು. ಇನ್ನೊಂದೆರಡು ವರ್ಷ ಕಳೀಲಿ.... ಒನ್ದೆರಡು ಇಂಚುಗಳಷ್ಟು ಎತ್ತರಕ್ಕೆ ಬೆಳಿ. ಆಗ ನಿನಗೆ ಯಾವುದೇ ಫ್ಯಾನ್ಸಿ ಡ್ರೆಸ್ ಹಾಕಿದ್ರೂ ಚೆನ್ನಾಗಿ ಒಪ್ಪುತ್ತೆ ನೋಡ್ತಿರು" ಕುಸುಮಳ ಮಾತಿನಿಂದ ಮೀರಾಳಿಗೆ ಕೋಪ ಬಂದಿತ್ತು. ಉತ್ತರಿಸದೇ ಅಲ್ಲಿಂದ ಹೊರಟು ಹೋಗಿದ್ದಳು.

ಅದಾದ ಮೇಲೆ ಸ್ಕೂಲಿಗೆ ಬಂದಿರಲೇ ಇಲ್ಲ. ತರಗತಿಯ ಟೀಚರ್ರು ಅಟೆಂಡೆನ್ಸ್ ಕೂಗುವಾಗ, ಮೀರಾ ಬಂದಿರಲಿಲ್ಲವಾದ್ದರಿಂದ ಕುಸುಮಳನ್ನೇ ಕೇಳಿದ್ದರು.

"ನಂಗೊತ್ತಿಲ್ಲ ಟೀಚರ್.... ನಾಲ್ಕೈದು ದಿನಗಳಿಂದ ಬಂದಿಲ್ಲ" ಎಂದಿದ್ದಳು.

"ಅಷ್ಟು ಅಂಟಿಕೊಂಡು ಕೂತ್ಕೊಂಡು ಮಾತಾಡ್ತಿದ್ರಿ.... ಯಾಕೆ ಬಂದಿಲ್ಲ ಅಂತ ವಿಚಾರಿಸ್ಲಿಲ್ವಾ? ಇವತ್ತೇ ಅವಳ ಮನೆಗೆ ಹೋಗಿ, ಯಾಕೆ ಬಂದಿಲ್ಲ ಅಂತ ಕೇಳ್ಕೊಂಡು ಬಂದು, ನಾಳೆ ನನಗೆ ಹೇಳ್ಬೇಕು."

"ಆಯ್ತು ಟೀಚರ್...." ಎಂದಿದ್ದಳು. ಮೀರಳ ಮನೆಯ ಕಡೆಗೆ ಹೋಗುವ ಹುಡುಗಿಯರ ಜತೆ, ಅವಳ ಮನೆಗೆ ಹೋದಳು. ಮೀರಾ ಜ್ವರ ಬಂದು ಮಲಗಿ ಬಿಟ್ಟಿದ್ದಳು. ಇವಳನ್ನು ನೋಡಿ ಅತ್ತು ಬಿಟ್ಟಿದ್ದಳು. ಇವಳಿಗೂ ವ್ಯಥೆಯಾಗಿತ್ತು.

"ನೀನು ತಮಾಷೆ ಮಾಡ್ದೆ ಅಂತ ಕೋಪ ಮಾಡ್ಕೊಂಡು ಬರ್ತಿದ್ದೆ. ರಸ್ತೆಯಲ್ಲಿ ಅಡ್ಡವಾಗಿ ಬಿದ್ದಿದ್ದ ಕಲ್ಲನ್ನು ಎಡವಿ ಬಿದ್ದು ಬಿಟ್ಟೆ. ಬಿದ್ದ ರಭಸಕ್ಕೆ ಕೈಕಾಲು ತರಚಿ ಪೆಟ್ಟಾಯಿತು. ನೋವಿಗೆ ಜ್ವರ ಬಂದು ಬಿಡ್ತು. ನರಳ್ತಾ ಬಿದ್ದಿದೀನಿ. ನಿನಗೆ ನನ್ನ ಮೇಲೆ ಕರುಣೆಯೇ ಇಲ್ಲ.... ಇವತ್ತು ಬರ್ತಿದ್ದೀಯಾ?"

"ನಂಗೇನೇ ಗೊತ್ತಿತ್ತು ನಿಂಗೆ ಜ್ವರ ಬಂದಿದೆ ಅಂತ. ಟೀಚರ್ ವಿಚಾರಿಸ್ಕೊಂಡು ಬಾ ಅಂತಂದ್ರು ಬಂದೆ. ಲೀವ್ ಲೆಟರ್ ಬರೆದ್ಕೊಡು.... ಯಾವಾಗ ಬರ್ತೀಯಾ?"

"ಜ್ವರ ಬಿಟ್ಟ ಮೇಲೆ ಬರ್ತೀನಿ. ಕಾಲು ನೋವು ತುಂಬಾ ಇದೆ. ಡ್ಯಾನ್ಸು ಪ್ರಾಕ್ಟೀಸ್ ಮಾಡುಕ್ಕೇ ಆಗ್ತಿಲ್ಲ. ಹಾಗಂತ ಟೀಚರ್‌ಗೆ ಹೇಳಿಬಿಡು. ನಮ್ಮ ತಂದೆ ಲೀವ್ ಲೆಟರ್ ಬರೆದಿಟ್ಟಿದ್ದಾರೆ. ಯಾರೂ ತಗೊಂಡ್ಹೋಗೋಕೆ

ಬರ್ಲೇ ಇಲ್ಲ." ಮತ್ತೆ ಅತ್ತಿದ್ದಳು.

"ಅಳ್ಬೇಡ್ವೇ ಮೀರಾ. ನೀನು ಅತ್ತರೆ ನಂಗೂ ಬೇಜಾರಾಗುತ್ತೆ. ಇದಕ್ಕೆಲ್ಲಾ ನಾನೇ ಕಾರಣ. ನಾನು ತಮಾಷೆ ಮಾಡಬಾರದಾಗಿತ್ತು. ನಾನು ಇನ್ನೆಂದೂ ತಮಾಷೆ ಮಾಡುಲ್ಲ... ಬೇಗ ಹುಷಾರಾಗಿ ಬಾ. ನೀನು ಇಲ್ಲದೇ ನಂಗೂ ಭಣ ಭಣ ಅಂತಿದೆ" ಲೀವ್ ಲೆಟರ್‌ನ್ನು ತೆಗೆದುಕೊಂಡು, ಅವಳ ತಾಯಿಗೆ ಹೇಳಿ ಹೊರಟಳು.

"ಆಗ ಈಗ ಬರ್ತಾ ಇರಮ್ಮ. ಸುಮ್ಮನೆ ಒಬ್ಬಳೇ ಕೂತ್ಕೊಂಡು ಅಳ್ತಾ ಇರ್ತಾಳೆ." ಅವಳ ತಾಯಿ ಹೇಳಿದ್ದರು.

ಆ ನಂತರ ಒಂದು ತಿಂಗಳವರೆಗೆ, ಮೀರಾಳಿಗೆ ಸ್ಕೂಲಿಗೆ ಬರಲು ಆಗಿರಲಿಲ್ಲ. ಟೈಫಾಯ್ಡ್ ಜ್ವರ ಬಂದಿತ್ತು. ಹಾಗಾಗಿ ಇವಳೂ, ಅವಳನ್ನು ನೋಡಲು ಹೆಚ್ಚಿಗೆ ಹೋಗುತ್ತಿರಲಿಲ್ಲ. ಹೋದರೂ ದೂರದಲ್ಲಿ ನಿಂತು ನೋಡಿ ಮಾತನ್ನಾಡಿಸಿಕೊಂಡು ಬರುತ್ತಿದ್ದಳು. ಸ್ಕೂಲಿನಲ್ಲಿ ಮಾಡಿದ ಪಾಠಗಳ ಬಗ್ಗೆ ಕೆಲವೊಮ್ಮೆ ಹೇಳುತ್ತಿದ್ದಳು. ಅವಳನ್ನು ಹೆಚ್ಚಿಗೆ ಮಾತನಾಡಿಸಿ ಆಯಾಸಗೊಳಿಸುವಂತಿರಲಿಲ್ಲ.

ಎರಡು ತಿಂಗಳ ವಿಶ್ರಾಂತಿಯ ನಂತರ ಮೀರಾ ಮತ್ತೆ ಶಾಲೆಗೆ ಬರಲಾರಂಭಿಸಿದಳು. ಸ್ವಲ್ಪ ಮಟ್ಟಿಗೆ ನಿತ್ರಾಣಳಾಗಿದ್ದಳು. ಕುಸುಮಳೇ ಅವಳಿಗೆ ಕೆಲವು ನೋಟ್ಸ್‌ಗಳನ್ನು ಬರೆದು ಕೊಟ್ಟಿದ್ದಳು. ಆ ವರ್ಷದ ಪರೀಕ್ಷೆಯಲ್ಲಿ ಅವಳು ಪಾಸಾಗುವುದು ಸಹ ಅನುಮಾನವಿತ್ತು. ಆದರೆ ಹುಶಾರಿಲ್ಲದ ಕಾರಣ, ಪಾಸು ಮಾಡಿಸಿ, ಮುಂದಿನ ತರಗತಿಗೆ ತೇರ್ಗಡೆ ಮಾಡಿಸಿದ್ದರು.

ಬೇಸಗೆಯ ರಜ ಕಳೆದು ಮತ್ತೆ ತರಗತಿಗಳು ಪ್ರಾರಂಭವಾಗಿದ್ದವು. ಮೀರಾ ಬಹಳಷ್ಟು ಬದಲಾಗಿದ್ದಳು. ಲವಲವಿಕೆಯಿಂದ ಇದ್ದವಳನ್ನು ಕಂಡು ಎಲ್ಲ ಹುಡುಗಿಯರೂ ಅಚ್ಚರಿಗೊಂಡಿದ್ದರು. ಆರೋಗ್ಯ ಚೆನ್ನಾಗಿ ಸುಧಾರಿಸಿತ್ತು. ಮುಖದ ಕಳೆ ಹೆಚ್ಚಾಗಿತ್ತು. ಉದುರಿ ಹೋಗಿದ್ದ ತಲೆ ಗೂದಲು ಒತ್ತಾಗಿ ಬೆಳೆದಿತ್ತು. ಸ್ವಲ್ಪ ಮಟ್ಟಿಗೆ ಎತ್ತರವೂ ಆಗಿದ್ದಳು. ಸ್ವಲ್ಪ ಗುಂಡಗೂ ಆಗಿದ್ದಳು. ಓದಿನಲ್ಲೂ ಸ್ವಲ್ಪ ಪ್ರಗತಿ ಕಂಡಿತ್ತು. ಸ್ವಲ್ಪ ಜಂಭ ಬಂದಿದೆಯೇನೋ ಎನ್ನುವಂತೆ ವರ್ತಿಸುತ್ತಿದ್ದಳು.

ಹುಶಾರಿಲ್ಲದ ಕಾರಣ, ಡ್ಯಾನ್ಸು ಕಲಿಯುವುದನ್ನು ಬಿಟ್ಟು ಬಿಟ್ಟಿದ್ದಳು. ಆ ವರ್ಷದ ವಾರ್ಷಿಕೋತ್ಸವಕ್ಕೆ, ಅವಳು ಯಾವುದೇ ಕಾರ್ಯಕ್ರಮಕ್ಕೆ ತನ್ನ ಹೆಸರನ್ನು ಬರೆಸಿರಲಿಲ್ಲ. ಯಾವುದೇ ಸ್ಪರ್ಧೆಯಲ್ಲಿ ಭಾಗವಹಿಸಿರಲಿಲ್ಲ. ಟೀಚರ್ರು ಕರೆದು ಕೇಳಿದಾಗ, ಸುಮ್ಮನೇ ಅತ್ತಿದ್ದಳು.

ಆ ನಂತರ ಕುಸುಮ ಕೇಳಿದ್ದಳು, "ಯಾಕೇ ಮೀರಾ ಮಾತು ಮಾತಿಗೂ ಅಳ್ತೀಯಾ?"

"ಯಾಕೋ ಬೇಜಾರು ಕಣೇ.... ಹೋದ ವರ್ಷ ಟೀಚರ‍್ರು ಪಾಸು ಮಾಡ್ಸಿದ್ರು.... ಈ ವರ್ಷ ಫೇಲಾಗಿ ಬಿಟ್ರೆ ಅಂತ ಭಯ ಆಗುತ್ತೆ ಕಣೇ.... ಅದಕ್ಕೇ ಯಾವುದೂ ಬೇಡ ಅಂತ ಸುಮ್ಮನಾಗಿ ಬಿಟ್ಟೆ...."

"ನೀನೇನು ಫೇಲಾಗುವಷ್ಟು ದಡ್ಡಿಯಲ್ಲ. ಈ ಸಾರಿ ನಾನು ಫ್ಯಾನ್ಸಿ ಡ್ರೆಸ್‌ಗೆ ಹೆಸರನ್ನು ಬರೆಸಿದೀನಿ. ನೀನೂ ಬರೆಸು. ಇಬ್ಬರೂ ಏನಾದ್ರೂ ಚೆನ್ನಾಗಿ ಮಾಡ್ಡೋಣ...."

"ನನಗೆ ಯಾವ ಡ್ರೆಸ್ಸೂ ಒಪ್ಪೊಲ್ಲ. ನನಗೆ ಯಾವುದೂ ಬೇಡ."

"ಹಾಗಾದ್ರೆ ನಾನೂ ನನ್ನ ಹೆಸರನ್ನು ತೆಗೆಸಿ ಬಿಡ್ತೀನಿ..." ಅವಳು ಏನನ್ನೂ ಹೇಳದಿದ್ದಾಗ ಕುಸುಮಳಿಗೆ ಅವಮಾನವಾದಂತಾಗಿತ್ತು. ಹೇಳಿದ ಮಾತನ್ನು ಉಳಿಸಿಕೊಳ್ಳುವವಳಂತೆ ಟೀಚರ್ ಬಳಿಗೆ ಹೋಗಿ, ತನ್ನ ಹೆಸರನ್ನು ತೆಗೆಯಬೇಕೆಂದು ಹೇಳಿದಳು. ಅವರು ಒಪ್ಪಲಿಲ್ಲ.

"ಈ ಬಾರಿಯ ವಾರ್ಷಿಕೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸ್ತಬ್ಧ ಚಿತ್ರಗಳ ಕಾರ್ಯಕ್ರಮವನ್ನೂ ಸೇರಿಸಬೇಕೆಂದುಕೊಂಡಿದೀವಿ. ನಿನ್ನ ಹೆಸರನ್ನು ಆ ಪಟ್ಟಿಯಲ್ಲಿ ಸೇರಿಸ್ತೀನಿ" ಎಂದರು.

"ಸ್ತಬ್ಧ ಚಿತ್ರ ಎಂದರೆ ಏನು? ಯಾವ ತರಹ ಇರುತ್ತೆ?"

"ವೇಷಧಾರಿಗಳು ಚಲನೆ ಇಲ್ಲದೇ ಮೌನವಾಗಿ ಅಂದರೆ ಸಂಭಾಷಣೆಗಳಿಲ್ಲದೇ ಆ ಪಾತ್ರಗಳ ದೃಶ್ಯವನ್ನು ತೋರಿಸುವುದು. ಆ ಸನ್ನಿವೇಶವನ್ನು ಪರದೆಯ ಹಿಂದೆ ಯಾರಾದರೂ ನಿರೂಪಿಸುತ್ತಾರೆ.... ಬಣ್ಣ ಬಣ್ಣದ ಬೆಳಕುಗಳನ್ನು ಪಾತ್ರಧಾರಿಗಳ ಮೇಲೆ ಬಿಡುತ್ತಾರೆ. ಸನ್ನಿವೇಶಕ್ಕೆ ತಕ್ಕಂತಹ ಸ್ಕ್ರೀನ್‌ಗಳನ್ನು ಇಳಿ ಬಿಡುತ್ತಾರೆ" ಟೀಚರ್ ತಮಗೆ ತಿಳಿದ ಮಟ್ಟಿಗೆ ವಿವರಿಸಿದರು.

"ಹಾಗಾದರೆ ಮೀರಳ ಹೆಸರನ್ನು ಸೇರಿಸಿ ಬಿಡಿ ಟೀಚರ್...ನಾನು ಅವಳನ್ನು ಒಪ್ಪಿಸ್ತೀನಿ"

"ಸರಿ, ಅವಳನ್ನು ಈಗಲೇ ಕರ್ಕೊಂಡು ಬಾ...." ಕುಸುಮ ಅವಳನ್ನು ಕರೆದುಕೊಂಡು ಬಂದಳು. ಟೀಚರರ ಬಲವಂತಕ್ಕೆ ಮೀರಾ ತನ್ನ ಹೆಸರನ್ನು ಬರೆಸಿದಳು."

"ನಿನ್ನ ದೆಸೆಯಿಂದ ನಾನು ಹೆಸರನ್ನು ಕೊಟ್ಟಿದ್ದೀನಿ. ಈಗ ನಾನು ಯಾವ ವೇಷ ಹಾಕ್ಬೇಕು, ನನಗೆ ಯಾವುದು ಒಪ್ಪುತ್ತೆ ಅಂತ ನೀನೇ ಹೇಳ್ಬಿಡು" ಅವಳು ಕರಾರು ಹಾಕಿದಳು. ನಿಜ ಹೇಳ್ಲಾ.... ನಂಗೆ ಗಂಡು ಪಾತ್ರ ಮಾಡುಕ್ಕೆ

ಇಷ್ಟ..." ಎಂದಿದ್ದಳು.

"ಕಿತ್ತೂರ ರಾಣಿ ಚೆನ್ನಮ್ಮ, ಒನಕೆ ಓಬವ್ವ, ಝಾನ್ಸಿ ರಾಣಿ ಲಕ್ಷ್ಮೀಬಾಯಿ ಯಾವುದು ಹಾಕ್ತೀಯಾ? ಹುಡುಗೀರ್ಗೆ ಹೆಂಗಸಿನ ಪಾತ್ರವೇ ಸರಿ..."

"ಚಾರಿತ್ರಿಕ ವೇಷ ಬೇಡ...ಯಾಕೋ ನಂಗೆ ಇಷ್ಟ ಇಲ್ಲ" ಎಂದಳು.

"ಮೀರಾಬಾಯಿ.... ಹೇಗೂ ನಿನ್ನ ಹೆಸರೇ ಮೀರಾ.... ತಂಬೂರಿ ಹಿಡ್ಕೊಂಡು, ಭಜನೆ ಹೇಳುವ ಹಾಗೆ ನಟಿಸಿದರೆ ಸಾಕು...."

"ಬೇಡ.... ನಂಗೆ ಬಿಳೀ ಸೀರೆ ಉಡುಕ್ಕೆ ಇಷ್ಟವಿಲ್ಲ...."

"ವೀರ ಮಹಿಳೆಯ ವೇಷಾನ ಬೇಡ ಅಂತೀಯಾ.... ಸಂತರ ವೇಷ ಬೇಡ ಅಂತೀಯ.... ಹಾಗಾದ್ರೆ ನಾನೀಗ ಒಂದು ಪಾತ್ರಾನ ಹೇಳ್ತೀನಿ. ನೀನು ಗಪ್ ಚುಪ್ ಅಂತ ಒಪ್ಕೋ ಬೇಕು".

"ಮೊದಲು ಹೇಳು ನೋಡೋಣ..."

"ಅಕ್ಕ ಮಹಾದೇವಿ.... ಅಕ್ಕ ಮಹಾದೇವಿಗೆ ಶರಣು..." ಅವಳು ಕೋಪಿಸಿಕೊಳ್ಳಲಿಲ್ಲ. ಬದಲಿಗೆ ಕುಸುಮಳ ಬೆನ್ನ ಮೇಲೆ ದಬದಬನೆ ಗುದ್ದಿದಳು.

"ನೀನೇ ಮಾಡು....ಅದಕ್ಕೆ ನೀನೇ ಸರಿ..."

"ನಾನು ಗಂಡಸಿನ ಪಾತ್ರವನ್ನು ಹಾಕ್ತೀನಿ.... ನೀನು ಹೆಂಗಸಿನ ವೇಷವನ್ನು ಹಾಕು. ಹಾಗಂತ ಟೀಚರ್ರು ಹೇಳಿದಾರೆ" ಎನ್ನುತ್ತಾ ಮೂಗಿನ ಕೆಳಗೆ ಕೈಯಾಡಿಸಿಕೊಂಡು ನಕ್ಕಳು.

"ರಾಜನ ವೇಷಾನೋ? ರಾಕ್ಷಸನ ವೇಷಾನೋ....ನಿನಗೆ ಒಪ್ಪೋದು ಅದೇ"

"ರಾಜಾ ಕಣಮ್ಮಣ್ಣೀ.... ರಾಜಾ.... ಆದರೆ ಯಾವ ರಾಜ ಅಂತ ನಾನಿನ್ನೂ ಯೋಚಿಸಿಲ್ಲ.... ನಿನಗೆ ತೋಚಿದ್ರೆ ಹೇಳು...."

"ರಾಮಾ ಬೇಡ.... ಕೃಷ್ಣ ಬೇಡ.... ಬುದ್ಧನ ವೇಷ ಹಾಕು...."

"ಗುದ್ದುತೀನಿ ನೋಡು.... ಬುದ್ಧ ರಾಜ ಅಲ್ಲ.... ಸನ್ಯಾಸಿ...."

"ಬುದ್ಧ ಆಗೋಕೆ ಮೊದಲು ಯುವರಾಜಾನೇ ತಾನೇ ಆಗಿದ್ದು...."

"ನಿನ್ನ ಜಾಣತನ ಬೇಡ, ಸರಿಯಾಗಿ ಹೇಳು.... ಒಂದು ಕೆಲಸ ಮಾಡೋಣ. ನಾನು ರಾಜನ ವೇಷ ಹಾಕ್ತೀನಿ.... ನೀನು ರಾಣಿಯ ವೇಷ ಹಾಕು.... ಏನಂತೀಯಾ?"

"ಅಂಥಾದ್ದು ಯಾವುದಿದೆ?"

"ನಾನು ದುಷ್ಯಂತ ಮಹಾರಾಜನಂತೆ ವೇಷ ಹಾಕ್ತೀನಿ. ನೀನು ಶಕುಂತಲೆಯ ವೇಷ ಹಾಕು ಚೆನ್ನಾಗಿರುತ್ತೆ."

"ಏನು ಚೆನ್ನಾಗಿರುತ್ತೆ? ಶಕುಂತಲೆ ಕಣ್ವ ಋಷಿಯ ಮಗಳು. ಆಶ್ರಮದಲ್ಲಿ ಬೆಳೆದವಳು...."

"ಆದರೇನಾಯ್ತು? ದುಷ್ಯಂತ ಮೆಚ್ಚಿದ್ದು ಆ ಋಷಿಯ ಮಗಳನ್ನೇ. ಶಕುಂತಲೆ ಚೆನ್ನಾಗಿದ್ಲು ಅಂತ ತಾನೇ.... ಆ ಪಾತ್ರ ನಿನಗೆ ಸಿಕ್ಕಿದರೆ ತೆಪ್ಪಗೆ ಒಪ್ಕೋ, ಬೇಡ ಅನ್ಬೇಡ..."

"ಟೀಚರ್ರು ಒಪ್ಪದಿದ್ರೆ?"

"ಕೇಳೋಣ ಹೂಂ ಅಂದ್ರೆ ಸರಿ, ಇಲ್ದಿದ್ರೆ ಇಬ್ರಿಗೂ ಇಲ್ಲ" ಮೀರಾ ಕುಸುಮಳನ್ನು ಅಣಕಿಸಿದಳು.

ಟೀಚರ್ರು ಒಪ್ಪಿಕೊಂಡರು. ದೃಶ್ಯಗಳನ್ನು ವಿವರಿಸಿದರು. ಬೇಟೆಯಾಡಿ ಬಳಲಿದ ದುಷ್ಯಂತ, ಕಣ್ವರ ಆಶ್ರಮಕ್ಕೆ ಬರುತ್ತಾನೆ; ಹೂವಿನ ಗಿಡಗಳಿಗೆ ನೀರೆರೆಯುತ್ತಿದ್ದ ಚೆಲುವೆ ಶಕುಂತಲೆಯನ್ನು ಕಾಣುತ್ತಾನೆ. ಬಾಯಾರಿಕೆಯನ್ನು ನೀಗಿಸಿಕೊಳ್ಳಲು ಅವಳ ಬಳಿಗೆ ಬಂದು ಮಂಡಿಯೂರಿ ಕುಳಿತು, ನೀರಿಗೆ ಬೊಗಸೆಯನ್ನು ಒಡ್ಡುತ್ತಾನೆ. ಲಜ್ಜೆಯಿಂದ ಕೆಂಪಾದ ಅವಳ ಮುಖವನ್ನು ಕಂಡು ಆಕರ್ಷಿತನಾಗಿ, ತದೇಕನಾಗಿ ಅವಳನ್ನೇ ನೋಡುತ್ತಾನೆ. ಅವನ ನೋಟದಲ್ಲಿರುವ ಅನುರಾಗವನ್ನು ಕಂಡ ಶಕುಂತಲೆ ಮನ ಸೋತು ಪಾತ್ರೆಯ ನೀರನ್ನು ಅವನ ಬೊಗಸೆಗೆ ಸುರಿಯುತ್ತಾಳೆ. ಆದರೆ ಬೊಗಸೆ ತುಂಬಿ ನೀರು ನೆಲಕ್ಕೆ ಸುರಿದು ಹರಿದು ಹೋದರೂ, ಇಬ್ಬರಿಗೂ ಅದರ ಪರಿವೇ ಇಲ್ಲ. ಮನ್ಮಥನ ಶರ ಬಾಣದ ಪಂಜರದೊಳಗೆ ಸಿಲುಕಿದವರಂತೆ, ಪರಸ್ಪರ ಪ್ರೇಮಾನುರಾಗವನ್ನು ಹರಿಸುವಲ್ಲಿ ಮನ್ಮತ್ತರಾಗಿರುತ್ತಾರೆ.

ಇದು ಈ ದೃಶ್ಯದ ಸಾರಾಂಶ. ಟೀಚರ್ ಲೀಲಾರವರು ಶ್ರಮಪಟ್ಟು ಆಸಕ್ತಿ ವಹಿಸಿ, ಶಕುಂತಲೆ ಹಾಗೂ ದುಷ್ಯಂತನ ವೇಷಕ್ಕೆ ಬೇಕಾಗುವ, ವೇಷ ಭೂಷಣ, ಉಡುಗೆ ತೊಡುಗೆ ಪ್ರತಿಯೊಂದನ್ನೂ ಸಿದ್ಧಗೊಳಿಸಿದ್ದರು. ತಾವೇ ಖುದ್ದಾಗಿ, ಮೇಕಪ್ ಮಾಡುವ ಜವಾಬ್ದಾರಿಯನ್ನೂ ಹೊತ್ತಿದ್ದರು.

ಈ ಸ್ತಬ್ಧ ಚಿತ್ರವನ್ನು ಪ್ರದರ್ಶಿಸುವ ಸರದಿ ಬಂದಿತ್ತು. ಆಶ್ರಮದ ದೃಶ್ಯವನ್ನು ನಿರೂಪಿಸುವ ಸ್ಕ್ರೀನ್‌ನ್ನು ಇಳಿ ಬಿಟ್ಟಿದ್ದರು. ಅದರ ಮುಂಭಾಗದಲ್ಲಿ ನೀರಿನ ಪಾತ್ರೆಯನ್ನು ಹಿಡಿದು ವೈಯಾರದಿಂದ ಬಾಗಿ ನಿಂತ ಶಕುಂತಲೆ. ಅವಳ ಮುಂದೆ ಮಂಡಿಯೂರಿ ಕುಳಿತು, ಬೊಗಸೆ ಒಡ್ಡಿ ಅವಳನ್ನೇ ತದೇಕವಾಗಿ ದೃಷ್ಟಿಸುತ್ತಿರುವ ದುಷ್ಯಂತ ಮಹಾರಾಜನ ಆಕೃತಿಗಳು ಗೋಚರಿಸಿದವು. ಬೆಳಕು ಬೀರುವವರು, ಈ ಜೋಡಿಗಳ ಮೇಲೆ ಬಣ್ಣ ಬಣ್ಣದ ಬೆಳಕನ್ನು ಚೆಲ್ಲಿದರು. ಐದು ನಿಮಿಷಗಳವರೆಗೆ ಅದೇ ಭಂಗಿಯಲ್ಲಿ ಮೂಡಿ ಬಂದ ಸ್ತಬ್ಧ ಚಿತ್ರ

ಪ್ರೇಕ್ಷಕರನ್ನು ಮುದಗೊಳಿಸಿತ್ತು. ಚಪ್ಪಾಳೆ ತಟ್ಟಿ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು.

ಆಶ್ರಮದ ವಾತಾವರಣಕ್ಕೆ ಹೊಂದುವಂತಹ ಸರಳವಾದ ಉಡುಪನ್ನು ಧರಿಸಿದ್ದ ಸುಂದರ ಯುವತಿ ಶಕುಂತಲೆ, ರಾಜನ ಪೋಷಾಕನ್ನು ಧರಿಸಿ, ರಾಜಗಾಂಭೀರ್ಯವನ್ನು ಮೆರೆದ ದುಷ್ಯಂತ ಎಲ್ಲರಿಗೂ ಇಷ್ಟವಾದರು. ಫೋಟೋಗ್ರಾಫರ್ ಫ್ಲಾಷ್ ಬೆಳಕನ್ನು ಚೆಲ್ಲಿ ಕ್ಲಿಕ್ ಮಾಡಿದ್ದ. ಅಂಕದ ಪರದೆ ಕೆಳಗೆ ಇಳಿದಿತ್ತು. ಮೀರಾ ಉದ್ವೇಗದಿಂದ ಬೆವೆತು ಹೋಗಿದ್ದಳು. ಕುಸುಮ ಹೆಮ್ಮೆಯಿಂದ ಉಬ್ಬಿ ಹೋಗಿದ್ದಳು....

ಮೀರಾಳ ಬಗ್ಗೆ ಚಿಂತಿಸುತ್ತಿದ್ದ ಕುಸುಮಳಿಗೆ ಆ ದಿನ ನೆನಪಿಗೆ ಬಂದಿತು. ಆ ದಿನಗಳು ಎಷ್ಟು ಸೊಗಸಾಗಿದ್ದವು! ತಾನು ಅವಳಿಗೆ ಒತ್ತಾಸೆ ನೀಡದೇ ಇದ್ದಿದ್ದರೇ....ಅವಳು ನನ್ನೊಂದಿಗೆ ಸಹಕರಿಸದೇ ಇದ್ದಿದ್ದರೆ.... ಆ ದಿನ ನಾವಿಬ್ಬರೂ ಸ್ತಬ್ಧ ಚಿತ್ರದಲ್ಲಿ ಭಾಗವಹಿಸಲು ಆಗುತ್ತಲೇ ಇರಲಿಲ್ಲವೇನೋ.... ಇಷ್ಟು ವರ್ಷಗಳ ನಂತರ ಮೀರಾಳನ್ನು ಕಂಡ ಮೇಲೆ ತನಗೆ ಆ ವಿಷಯ ನೆನಪಿಗೆ ಬಂದಿತು.... ಅವಳು ಮರೆತೇ ಬಿಟ್ಟಿದ್ದಾಳೋ ಏನೋ, ನೆನಪಿಸಬೇಕು ಎಂದುಕೊಂಡು ಫೋನನ್ನೆತ್ತಿಕೊಂಡಳು.

ಅವಳೇ ರಿಸೀವರ್‌ನ್ನೆತ್ತಿದ್ದಳು.... "ಮೀರಾ.... ನಾನು ನಿನ್ನ ಬಗ್ಗೇನೇ ಯೋಚಿಸ್ತಿದ್ದೆ.... ಮಾತನ್ನಾಡೋಣ ಅಂತ ಅನ್ನಿಸ್ತು. ಫೋನ್ ಮಾಡ್ದೆ.... ಫ್ರೀಯಾಗಿದೀಯಾ ತಾನೆ? ಮಾತಾಡ್ಬಹುದಾ?"

"ಇಷ್ಟು ದಿನಗಳು ನನ್ನನ್ನು ಮರೆತೇ ಬಿಟ್ಟಿದ್ದೆ.... ಈಗ ಅಷ್ಟೊಂದು ಪ್ರೀತಿ ಹೇಗೆ ಬರ್ತಿದೆ ನಿಂಗೆ?"

"ಸಾರೀ ಕಣೆ.... ನೀನು ಇದೇ ಊರಿನಲ್ಲಿದೀಯ ಅಂತ ತಿಳಿದಿದ್ದರೆ ಖಂಡಿತಾ ಮೀಟ್ ಮಾಡ್ತಿದ್ದೆ.... ನಿಮ್ಮ ತಂದೆಗೆ ಟ್ರಾನ್ಸ್‌ಫರ್ ಆಗಿ ಬೇರೆ ಊರಿಗೆ ಹೋದ್ಮೇಲೆ, ನೀನೇ ಪತ್ತೆ ಇಲ್ಲ. ನನಗೆ ಪತ್ರ ಬರೆಯಬಹುದಾಗಿತ್ತು ಅಲ್ವಾ? ನಾನು ಅದೇ ಊರಿನಲ್ಲಿದ್ದೆನಲ್ಲ...."

"ಬಿಡು, ಏನೇನೋ ನಡೆದು ಹೋಯ್ತು.... ಅದನ್ನೆಲ್ಲ ನೆನಪಿಸಿಕೊಳ್ಳಲೂ ನನಗಿಷ್ಟವಿಲ್ಲ.... ಈಗ ನಾನು ಹಾಯಾಗಿದೀನಿ...."

"ನಿನ್ನ ಮುಖವನ್ನು ನೋಡಿದ್ರೆ ಹಾಗೆನ್ನಿಸುಲ್ಲ. ಏನೋ ಕೊರೀತಾ ಇದೆ ಅಂತ ಅನ್ಸುತ್ತೆ. ನನಗೆ ಹೇಳೋದಾದ್ರೆ ಹೇಳು. ನಿನ್ನ ಬೇಸರ ಕಡಿಮೆ ಆಗುತ್ತೆ."

"ಹಾಗೇನೂ ಇಲ್ಲ...."

"ಹೋಗ್ಲಿ ಬಿಡು. ನಮ್ಮಿಬ್ಬರ ಫೋಟೋ, ಅದೇ ಶಕುಂತಲೆ,

ದುಷ್ಯಂತನ ಫೋಟೋ ನಿನ್ನ ಹತ್ರ ಇದೆಯಾ? ನನ್ನ ಹತ್ರ ಇಲ್ಲ. ನಮ್ಮ ತಂದೆಗೆ ಹೆದರಿ, ಎಲ್ಲಿ ಮುಚ್ಚಿಟ್ಟೆನೋ, ನನಗೆ ಸಿಗಲೇ ಇಲ್ಲ. ಅದು ಇದ್ದಿದ್ದರೆ, ನಿನ್ನ ನೆನಪು ಬರದೇ ಇರ್ತಿತ್ತಾ?"

ಅತ್ತಲಿಂದ ಅವಳ ಧ್ವನಿ ಕೇಳಲಿಲ್ಲ. ಲೈನನ್ನು ಕಟ್ ಮಾಡಿದ ಧ್ವನಿ ಕೇಳಿಸಿತು. ಅಂಥಾ ಮಾತನ್ನು ನಾನೇನು ಆಡಿದೆ? ಇದ್ದಕ್ಕಿದ್ದಂತೆ ಅವಳಿಗೆ ಏನಾಯ್ತು? ತಿಳಿದುಕೊಳ್ಳಬೇಕೆಂಬ ಆಸೆ ಪ್ರಬಲವಾಯಿತು ಇವಳಿಗೆ. ಮತ್ತೆ ಮತ್ತೆ ನಂಬರನ್ನು ಡಯಲ್ ಮಾಡಿದಳು. ಆದರೆ ಯಾರೂ ಎತ್ತಲಿಲ್ಲ. ಛೆ ಏನಾಯಿತು ಇವಳಿಗೆ! ಮೊದಲು ಹೀಗಿರಲಿಲ್ಲ.... ಟೈಫಾಯ್ಡ್ ಜ್ವರ ಬಂದಾಗ ಮೆದುಳಿಗೆ ಏನೋ ಆಗಿರಬೇಕು. ಅವಳ ಆಲೋಚನೆಗೆ ಅವಳಿಗೇ ನಗು ಬಂದಿತು. ಒಂದು ಮಗುವಿನ ತಾಯಿಯಾಗಿದಾಳೆ.... ಎಲ್ಲಾ ರೀತಿಯಿಂದಲೂ ಸರಿಯಾಗಿದಾಳೆ.... ತಾತ್ಕಾಲಿಕವಾಗಿ ಏನೋ ಮನಸ್ಸು ಕೆಟ್ಟಿರಬಹುದು ಎಂದು, ತನಗೆ ತಾನೇ ಉತ್ತರವನ್ನು ಹೇಳಿಕೊಂಡಳು.

*****

"ನನ್ನ ಮಗುವಿನ ಹುಟ್ಟಿದ ಹಬ್ಬ.... ಒಂದು ಚಿಕ್ಕ ಪಾರ್ಟಿಯನ್ನು ಇಟ್ಟುಕೊಂಡಿದೀನಿ. ನೀನು ಭರತ್‌ನ ಕರ್‍ಕೊಂಡು ಬರ್ಬೇಕು" ಕುಸುಮ ಮೀರಳನ್ನು ಆಹ್ವಾನಿಸಿದಳು. ಬಹುಶಃ ಅವಳು ಬರುಲ್ಲ. ತಾನೇ ಅವಳ ಮನೆಗೆ ಹೋಗಿ ಸ್ವೀಟ್ಸ್ ಕೊಟ್ಟು ಬೈದು ಬರಬೇಕು ಅಂತ ಅಂದುಕೊಂಡಿದ್ದಳು. ಆದರೆ ಹಾಗಾಗಲಿಲ್ಲ. ಮೀರಾ ಸಮಯಕ್ಕೆ ಸರಿಯಾಗಿ ಮಗನೊಡನೆ ಬಂದಳು. ಇವಳಿಗೆ ಆಶ್ಚರ್ಯವೂ ಆಗಿತ್ತು. ಸಂತೋಷವೂ ಆಗಿತ್ತು.

ಮಗನ ಫ್ರೆಂಡ್ಸ್ ಹತ್ತಾರು ಹುಡುಗರು ಮಾತ್ರ ಬಂದಿದ್ದರು. ಮೀರಾ ಪ್ರಶ್ನಾರ್ಥಕವಾಗಿ ನೋಡಿದಳು. "ಬರೀ ಇವನ ಫ್ರೆಂಡ್ಸ್‌ಗಳು ಮಾತ್ರ....ಬೇರೆ ಯಾರನ್ನೂ ನಾನು ಕರೆದಿಲ್ಲ. ನನ್ನ ಗಂಡ ಊರಲ್ಲಿಲ್ಲ, ಟೂರ್ ಹೋಗಿದಾರೆ"

"ಎಲ್ಲಿಗೆ ಹೋಗಿದಾರೆ" ಅಂತ ಅವಳು ವಿಚಾರಿಸಲಿಲ್ಲ. ಅವಳೇ ಆಲ್ಬಂನ್ನು ಹೊರ ತೆಗೆದು, ತನ್ನ ಗಂಡನ, ಹಾಗೂ ಗಂಡನ ಮನೆಯವರ ಫೋಟೋಗಳನ್ನು ತೋರಿಸಿದಳು. ಅವಳು ಯಾವ ಆಸಕ್ತಿಯನ್ನೂ ತೋರಿಸದವಳಂತೆ ಸುಮ್ಮನಿದ್ದಳು.

"ಈಗ ನೀನು ಹೇಳು.... ನಿನ್ನ ಬಗ್ಗೆ.... ನಿನ್ನ ಗಂಡನ ಬಗ್ಗೆ.... ನಿನ್ನ ಫ್ಯಾಮಿಲಿಯ ಬಗ್ಗೆ...."

"ನನ್ನ ಬಗ್ಗೆ ನಾನು ನಿಂಗೆ ಹೇಳಿದ್ದಾಗಿದೆ. ಇನ್ಯಾರ ಬಗ್ಗೆಯೂ

ನಂಗೆ ಏನೂ ಗೊತ್ತಿಲ್ಲ...."

"ಏನೇ ಹಾಗಂದ್ರೆ? ನಿನ್ನ ಗಂಡನ ಮೇಲೆ ನಿನಗೆ ಕೋಪಾನಾ?"

"ಕೋಪ ಮಾಡ್ಕೊಳ್ಳೋಕೆ ನಾನ್ಯಾರು? ನನ್ನ ಜತೇಲಿ ಇದ್ರೆ ತಾನೇ ಕೋಪ ತಾಪ ಎಲ್ಲಾ?"

"ಅಂದ್ರೇ.... ನಿನ್ನ ಗಂಡ? ಸಾರೀ ಕಣೇ..."

"ಸಾರೀ ಯಾಕೇ.... ಎಲ್ಲೋ ಇದಾರೆ...."

"ಏನೂಂತ ಸರಿಯಾಗಿ ಹೇಳು ಮೀರಾ.... ಡೈವೋರ್ಸ್ ಆಗಿದ್ಯೇನೇ?"

"ಇಲ್ಲ, ಡೈವೋರ್ಸ್ ತಗೊಂಡಿಲ್ಲ...."

"ಹಾಗಾದ್ರೆ ಬೇರೆ ಏನು ಕತೆ?..... ಬೇರೆ ಅಫೇರ್ಸ್?"

"ಇರಬಹುದೇನೋ ನಂಗೊತ್ತಿಲ್ಲ...."

"ಸರಿಯಾಗಿ ವಿಚಾರಿಸದೇ ಮೋಸ ಆಯ್ತೇನೇ? ನೀನು ಅವನನ್ನು ಸುಮ್ಮನೆ ಬಿಡಬಾರದಾಗಿತ್ತು......"

"ಹೋಗ್ಲಿ ಬಿಟ್ಬಿಡು. ಅದು ಮುಗಿದ ಅಧ್ಯಾಯ. ಅವತ್ತು ಕೇಳಿದ್ಯಲ್ಲ ನಮ್ಮಿಬ್ಬರ ಫೋಟೋ ಇದೆಯಾ ಅಂತ.....? ಆ ಫೋಟೋನೇ ಕಾರಣ.... ಈ ದಿನ ನಾನು ಹೀಗೆ ಒಂಟಿಯಾಗಿ ಇರುಕ್ಕೆ.... ತಿಳೀತಾ?"

"ಏನೇ.... ಅದು ಹೇಗೆ ಕಾರಣ ಆಗುತ್ತೆ?"

"ಹೇಳ್ತೀನಿ ಕೇಳು.... ನಾವು ಪರಸ್ಪರ ಒಬ್ಬರನ್ನೊಬ್ಬರು ಒಪ್ಪಿದ್ದೆವು. ಮದುವೆ ಚೆನ್ನಾಗಿ ನಡೆಯಿತು.... ನಂತರ ಹನಿಮೂನ್‌ಗೆ ಹೋದೆವು...ಏನೇನೋ ಮಾತನ್ನಾಡಿದೆವು. ನಿನ್ನ ಅತ್ಯಂತ ಸಂತಸದ ವಿಷಯ ಯಾವುದು ಅಂತ ಕೇಳಿದರು.... ಆಗ ನಾನು ನನ್ನ ಸ್ಕೂಲಿನ ಬಗ್ಗೆ.... ವಾರ್ಷಿಕೋತ್ಸವದ ಬಗ್ಗೆ..... ನೃತ್ಯದ ಬಗ್ಗೆ.... ಸ್ತಬ್ಧ ಚಿತ್ರದ ಬಗ್ಗೆ ಎಲ್ಲಾ ಹೇಳಿದೆ. ಎಷ್ಟು ಜಾಲಿಯಾಗಿತ್ತು ಆ ದಿನಗಳು.... ನಾನು ನನ್ನ ಫ್ರೆಂಡ್ ಇಬ್ಬರೂ ಶಕುಂತಲೆ ದುಷ್ಯಂತನ ವೇಷವನ್ನು ಹಾಕಿದ್ದೆವು.... ನನ್ನ ಪರ್ಸ್‌ನಲ್ಲಿ ಆ ದಿನ ತೆಗೆದ ಫೋಟೋ ಇದೆ, ತೋರಿಸ್ಲಾ ಎಂದು ಹೇಳಿ, ಉತ್ಸಾಹದಿಂದ ಫೋಟೋನ ಅವರ ಮುಂದೆ ಹಿಡಿದೆ.

ಇದ್ದಕ್ಕಿದ್ದಂತೆ ಅವರು ಮೌನಿಯಾಗಿದ್ದರು. ಅಗತ್ಯಕ್ಕಿಂತ ಹೆಚ್ಚು ಗಂಭೀರವಾಗಿದ್ದರು. ಫೋಟೋವನ್ನು ಕಸಿದುಕೊಂಡು ಹರಿದು ಹಾಕಿದರು. ಅವರು ಯಾಕೆ ಹೀಗೆ ಮಾಡಿದರೆಂದು ನನಗೆ ಗೊತ್ತಾಗಲಿಲ್ಲ.

"ಏನಾಯ್ತು? ಆ ಫೋಟೋ ಏನ್ಮಾಡ್ತು?" ಅಂತ ವ್ಯಥೆಯಿಂದ ಕೇಳಿದೆ.

"ನನಗೆ ಇಂಥವೆಲ್ಲಾ ಇಷ್ಟ ಇಲ್ಲ" ಎಂದು ಹೇಳಿ, ನನ್ನ ಪರ್ಸ್‌ನಲ್ಲಿದ್ದ ನನ್ನ ಡ್ಯಾನ್ಸ್ ಮಾಡುವಾಗ ತೆಗೆದಿದ್ದ ಫೋಟೋಗಳನ್ನು ಪರಪರನೆ ಹರಿದು ಬಿಸಾಡಿದರು. "ಯಾಕೆ ಏನಾಯ್ತು" ಎಂದು ಕೇಳುವ ಧೈರ್ಯವೇ ನನಗಿರಲಿಲ್ಲ. ಅವರ ಆ ಅವತಾರಕ್ಕೆ ಹೆದರಿದ್ದೆ. ನನ್ನ ತಪ್ಪು ಏನಿರಬಹುದೆಂದು ನನಗೆ ಹೊಳೆಯಲೇ ಇಲ್ಲ. ಆ ಕ್ಷಣವೇ ಮತ್ತೆ ಹಿಂದಿರುಗಿದೆವು. ನನ್ನನ್ನು ಅವರ ತಂದೆಯ ಮನೆಯಲ್ಲಿ ಬಿಟ್ಟು ತಾವು ಎಲ್ಲಿಯೋ ಹೊರಟು ಹೋದರು.

ಹೋಗುವ ಮೊದಲು ತಂದೆ ತಾಯಿಯ ಹತ್ತಿರ ಏನು ಹೇಳಿದ್ದರೋ ನನಗೆ ತಿಳೀದು. ಒಂದೆರಡು ದಿನಗಳ ನಂತರ ಅವರು ನನ್ನನ್ನು ನನ್ನ ತಂದೆಯ ಮನೆಗೆ ಕರೆ ತಂದು ಬಿಟ್ಟರು. ಆಮೇಲೆ ಅಮ್ಮನಿಂದ ನನಗೆ ವಿಷಯ ತಿಳಿಯಿತು. ನಾನು ನೃತ್ಯ ಕಲಿತಿದ್ದು, ಸ್ಟೇಜ್ ಮೇಲೆ ಡ್ಯಾನ್ಸ್ ಮಾಡಿದ್ದ ವಿಷಯವನ್ನು ಹೇಳಿರಲಿಲ್ಲವಂತೆ.... ಅದು ಮೋಸವಂತೆ. ಅಲ್ಲದೇ, ಅವರಿಗೆ ನರ್ತಿಸುವ, ಅಭಿನಯಿಸುವ ನಟಿ ಪತ್ನಿ ಬೇಡವಂತೆ.... ಗೃಹಿಣಿಯಾಗಿರುವವಳು ಅದನ್ನೆಲ್ಲಾ ಮಾಡಿರಲೇ ಬಾರದು.... ಅದನ್ನೆಲ್ಲಾ ನನಗೆ ತಿಳಿಸದೇ ಮುಚ್ಚಿಟ್ಟು ಮೋಸ ಮಾಡಿದರು ಅಂತ ಅಪವಾದ ಹೊರೆಸಿ ತನ್ನ ಪಾಡಿಗೆ ತಾನು ಎಲ್ಲೋ ಹೊರಟು ಹೋದರು ಅಂತ.

"ಆಮೇಲೆ ಅವರ ಬಗ್ಗೆ ವಿಚಾರಿಸಲೇ ಇಲ್ಲವಾ? ಅವರು ಮತ್ತೆಂದೂ ಬರಲೇ ಇಲ್ವಾ?"

ಇಲ್ಲ ಎನ್ನುವಂತೆ ತಲೆಯಾಡಿಸಿದಳು.

"ಮತ್ತೆ ಮಗು?.... ಭರತ್ ಯಾರ ಮಗ?"

"ಇವನು ನನ್ನ ಮಗ.... ನನ್ನ ತಂಗಿಯ ಮಗನನ್ನು ದತ್ತು ತೆಗೆದುಕೊಂಡು ಸಾಕುತ್ತಾ ಇದೀನಿ...."

"ಮತ್ತೆ ಮದುವೆ ಆಗಬಹುದಾಗಿತ್ತಲ್ಲೇ ಮೀರಾ.... ಸುಮ್ಮನೇ ಜೀವನಾನ ಹಾಳು ಮಾಡ್ಕೊಂಡೆ ನೀನು...."

"ನಾನೂ ಡೈವೋರ್ಸ್ ಕೇಳಲಿಲ್ಲ. ಅವನೂ ಕೊಡಲಿಲ್ಲ. ಒಂದಲ್ಲ ಒಂದು ದಿನ ನನ್ನ ಬಳಿಗೆ ಹಿಂದಿರುಗಿ ಬಂದರೂ ಬರಬಹುದು ಅಂತ ಕಾದೆ... ಆದರೆ ಅವನು ಇನ್ನು ಬರುವುದಿಲ್ಲ ಅಂತ ಖಾತರಿಯಾಗಿದೆ...."

"ಅವನು ಎಲ್ಲಿದಾನೆ ಅಂತ ನಿಂಗೆ ಗೊತ್ತಾ? ನಾನು ಅವನ ಹತ್ತಿರ ಮಾತನ್ನಾಡಿ, ಇದೆಲ್ಲಾ ಹುಡುಗಾಟ.... ನಾನೇ ಆ ದುಷ್ಯಂತ.... ಇವಳು ಡ್ಯಾನ್ಸ್ ಬಿಟ್ಟು ಎಷ್ಟೋ ವರ್ಷ ಆಯ್ತು ಅಂತ ಹೇಳ್ತೀನಿ...."

"ಬಿಡು.... ಅಂಥ ಗಂಡ ನನಗೂ ಬೇಡ.... ಈಗ ಅವನಿಗೆ ನನ್ನ

ಮೇಲೆ ಪ್ರೀತಿ ಬರುವುದು ಸಾಧ್ಯವಿಲ್ಲ.... ನನಗೂ ಅವನ ಬಗ್ಗೆ ಯಾವ ಭಾವನೆಗಳಿಲ್ಲ."

"ಹೀಗೇ ಎಷ್ಟು ವರ್ಷ ಒಂಟಿಯಾಗಿ ಇರ್ತೀಯೇ?"

"ಒಂಟಿಯಾಗಿ ಎಲ್ಲಿದೀನಿ! ಭರತ್ ಇದಾನೆ, ಸುಂದರಮ್ಮ ಇದಾರೆ.... ನನ್ನ ವೃತ್ತಿ ನನ್ನೊಂದಿಗಿದೆ...."

"ಆದರೂ ನಿನಗೆ ಹೀಗೆ ಅನ್ಯಾಯವಾಗಬಾರದಾಗಿತ್ತು. ಒಂದು ರಾತ್ರಿಯಾದರೂ ನಿನ್ನೊಂದಿಗೆ ಕಳೆದಿದ್ದರೆ, ಅವನನ್ನು ಮೆಚ್ಚಬಹುದಾಗಿತ್ತು. ಅವನಲ್ಲೇ ಏನೋ ದೋಷವಿರಬೇಕು.... ಇನ್ನು ನೀನು ಸುಮ್ಮನಿರಬೇಡ.... ಅವನು ಎಲ್ಲಿದಾನೆ ಅಂತ ಪತ್ತೆ ಹಚ್ಚು. ಡೈವೋರ್ಸ್ ತಗೋ.... ಮತ್ತೆ ಮದುವೆಯಾಗು...."

"ಮದುವೆಯಾಗಿದ್ದವಳು, ಡೈವೋರ್ಸ್ ತಗೊಂಡವಳು.... ಒಂದು ಮಗುವಿನ ತಾಯಿ... ನನ್ನನ್ನು ಯಾರೇ ಮದುವೆಯಾಗ್ತಾರೆ?"

"ಯಾರಾದ್ರೂ ಸಿಕ್ಕೇ ಸಿಗ್ತಾರೆ....ನನ್ನ ಗಂಡನಿಗೆ ಹೇಳ್ತೀನಿ. ಅವರ ಕಲೀಗ್ಸ್ ಯಾರಾದ್ರೂ ಇದ್ದೇ ಇರ್ತಾರೆ...."

"ಬೇಡವೇ ಬೇಡ.... ನನಗೆ ಎರಡನೇ ಮದುವೆ ಬೇಡ.... ನಾನಿನ್ನೂ ಅಪ್ಪಟ ಕುಮಾರಿಯಾಗಿದೀನಿ. ಅವರ್‍ಯಾರೋ ಬಂದು ಅನುಮಾನದಿಂದ ಕೇಳುವ ಪ್ರಶ್ನೆಗೆ ನಾನು ಉತ್ತರಿಸಲು ಇಷ್ಟವಿಲ್ಲ. ನಿಜವನ್ನೇ ಹೇಳಿದರೂ ನಂಬುವುದಿಲ್ಲ. ನನ್ನ ಮರು ಮದುವೆಯ ಚಿಂತೆ ನಿನಗೆ ಬೇಡ. ನಾನು ಹೊರಡ್ಲಾ?"

"ಇವತ್ತು ರಾತ್ರಿ ಇಲ್ಲಿಯೇ ಇದ್ದು ಬಿಡು. ಭರತ್ ನೋಡು, ನನ್ನ ಮಗನೊಡನೆ ಹೇಗೆ ಹೊಂದಿಕೊಂಡು ಇದಾನೆ. ಸುಂದರಮ್ಮನಿಗೆ ಫೋನು ಮಾಡಿ ಬರುಲ್ಲ ಅಂತ ಹೇಳಿ ಬಿಡು." ತುಂಬಾ ಬಲವಂತ ಮಾಡಿದ ಮೇಲೆ ಇರಲು ಒಪ್ಪಿಕೊಂಡಳು. ಇಬ್ಬರೂ ಕುಳಿತು ಹರಟುತ್ತಾ ಊಟವನ್ನು ಮಾಡಿದರು. ಮಧ್ಯೆ ರಾತ್ರಿ ಕಳೆದರೂ. ನಿದ್ದೆ ಕಣ್ಣನ್ನೆಳೆಯುವವರೆಗೂ ಹೈಸ್ಕೂಲಿನ ದಿನಗಳನ್ನು ನೆನೆಸಿಕೊಂಡರು. ಅಷ್ಟಾದರೂ. ಮೀರಾ ತನ್ನ ಗಂಡನ ಬಗ್ಗೆಯಾಗಲೀ, ಅವರ ಮನೆಯವರ ಬಗ್ಗೆಯಾಗಲೀ ಹೇಳಿಕೊಳ್ಳಲಿಲ್ಲ. ಇವಳನ್ನು, ಇವಳ ವಿಷಯಗಳನ್ನು ಕುರಿತು ಕೇಳಲಿಲ್ಲ. ಕುಸುಮ ಅಚ್ಚರಿಗೊಂಡಿದ್ದಳು. ಬಹುಶಃ ಗಂಡಸರನ್ನೇ ದ್ವೇಷಿಸುತ್ತಾಳೆ ಅಂತ ಕಾಣುತ್ತೆ. ಕೆದಕಿ ಕೇಳಿ, ಅವಳ ಚಿತ್ತವನ್ನು ಕಲಕುವುದು ಯಾಕೆ ಎಂದುಕೊಂಡು ಸುಮ್ಮನಾಗಿದ್ದಳು.

ಬೆಳಗ್ಗೆ ಇನ್ನೂ ಕತ್ತಲೆ ಕತ್ತಲೆಯಾಗಿರುವಾಗಲೇ, ಕರೆಗಂಟೆಯ

ಸದ್ದಾದಾಗ, ಕುಸುಮ ಎದ್ದು ಬಂದು ಬಾಗಿಲನ್ನು ತೆರೆದಿದ್ದಳು. ಟೂರ್‌ನಿಂದ ಗಂಡ ವಾಪಸ್ಸಾಗಿದ್ದ.... ಕೈ ಕಾಲು ತೊಳೆದು ಅವನು ತಮ್ಮ ಬೆಡ್ ರೂಮಿಗೆ ಹೋಗಲಿದ್ದವನನ್ನು ಕರೆದಳು.

"ಸಾರೀ.... ನೀವು ಇವತ್ತೇ ಬರ್ತಿದೀರಿ ಅಂತ ಗೊತ್ತಾಗ್ಲಿಲ್ಲ...."

"ಅದಕ್ಕೆ ಸಾರೀ ಯಾಕೆ? ಶ್ರೇಯಸ್ ಬರ್ತ್ ಡೇ ಅಂತ ಬೇಗನೇ ಹೊರಟು ಬಿಟ್ಟೆ. ಆದರೆ ಬಸ್ಸು ಮಿಸ್ ಆಯ್ತು... ಬೇರೆ ಬಸ್ಸು ಸಿಗುಕ್ಕೆ ತಡವಾಯ್ತು.... ಒಬ್ಬನೇ ಟ್ಯಾಕ್ಸಿ ಮಾಡ್ಕೊಂಡು ಬರೋದ್ಯಾಕೆ ಅಂತ ಸುಮ್ಮನಾಗಿಬಿಟ್ಟೆ...."

"ಪರವಾಗಿಲ್ಲ ಬಿಡಿ...."

"ನಾನೂ ಸ್ವಲ್ಪ ಹೊತ್ತು ಮಲಗ್ತೀನಿ. ಬಸ್ಸಿನ ಜರ್ನಿ ಕಂಫರ್ಟಬಲ್ ಆಗಿರಲಿಲ್ಲ... ತುಂಬಾ ಆಯಾಸ ಆಗಿದೆ. ಶ್ರೇಯೂ ಮಲಗಿದಾನೆ ಅಲ್ವಾ?"

"ಒಂದ್ನಿಮಿಷ ಮನೋಜ್.... ನೀವು ಗೆಸ್ಟ್ ರೂಂನಲ್ಲಿ ಮಲಕ್ಕೊಳ್ಳಿ...."

"ಯಾಕೆ ಕುಸುಮಾ? ಈಗ ಸ್ನಾನ ಮಾಡುಕ್ಕೆ ಬೇಜಾರು...."

"ಅದಲ್ಲ ಮನೋಜ್.... ನನ್ನ ಫ್ರೆಂಡ್ ಮಲಗಿದಾಳೆ...."

"ನಿನ್ನ ಫ್ರೆಂಡಾ.... ಯಾರಪ್ಪಾ ಅದು? ಯಾವಾಗ ಬಂದ್ರು?.... ಎಂದೂ ಯಾರೂ ಬಂದಿರ್ಲಿಲ್ಲ....ಅದೇನು ಹೊಸ ಪರಿ?"

"ಅಕಸ್ಮಾತ್ತಾಗಿ ಮದುವೆ ಮನೇಲಿ ಸಿಕ್ಕಿದ್ದಳು.... ಗುರುತು ಹಿಡಿದೆ ಅಂತ ಹೇಳಿರ್ಲಿಲ್ವಾ....ನೀವೂ ಊರ್ನಲ್ಲಿರ್ಲಿಲ್ಲ. ಶ್ರೇಯಸ್ ಬರ್ತ್‌ಡೇಗೆ ಅವಳ ಮಗ ಭರತ್‌ನ ಕರ್ಕೊಂಡು ಬಾ ಅಂತ ಕರೆದಿದ್ದೆ.... ನಾನೇ ಬಲವಂತ ಮಾಡಿ ಉಳಿಸ್ಕೊಂಡೆ. ನಂಗೇನು ಗೊತ್ತಿತ್ತು ನೀವು ಬರ್ತೀರಿ ಅಂತ?"

"ಓ... ಕೇ... ಆದರೆ ಒಬ್ಬನಿಗೇ ಗೆಸ್ಟ್ ರೂಂನಲ್ಲಿ ಮಲಗೋಕೆ ಇಷ್ಟವಿಲ್ಲ. ಕಂಪೆನಿ ಕೊಡ್ತೀಯಾ ಸ್ವಲ್ಪ ಹೊತ್ತು?" ತುಂಟನಗೆಯನ್ನು ನಕ್ಕ.

"ಮನೋಜ್... ಬೆಳಗಾಗ್ತಾ ಬಂದಿದೆ. ಅವಳೇನಂದ್ಕೊಳ್ತಾಳೆ? ನೀವು ಹೋಗಿ ರೆಸ್ಟ್ ತಗೊಳ್ಳಿ.... ನಾನೂ ಸ್ವಲ್ಪ ಹೊತ್ತು ಮಲಗಿರ್ತೀನಿ...." ಅವಳು ಅತ್ತ ತಿರುಗಿದಳು. ಮನೋಜ್ ವಿಧೇಯನಂತೆ ಗೆಸ್ಟ್ ರೂಂಗೆ ಹೋಗೆ ಬಾಗಿಲನ್ನು ಹಾಕಿಕೊಂಡ.

ಕಾಲಿಂಗ್ ಬೆಲ್ ಸದ್ದಾದಾಗಲೇ ಮೀರಳಿಗೆ ಎಚ್ಚರವಾಗಿತ್ತು. ಗಂಡ ಹೆಂಡಿರ ಮಾತುಗಳೂ ಕೇಳಿಸಿದ್ದವು. ಕುಸುಮ ಒಳಗೆ ಬಂದಾಗ ನಿದ್ದೆಯನ್ನು ನಟಿಸಿದಳು.

ಸ್ವಲ್ಪ ಬೆಳಕು ಹರಿದ ಮೇಲೆ, ಮೀರಾ ತಾನೂ ಎದ್ದು ಮಗನನ್ನು

ಎಬ್ಬಿಸಿದಳು. "ಮಲಗಿರ್ಲಿ ಬಿಡು ಮೀರಾ.... ಈ ಚಳೀಲ್ಲಿಯಾಕೆ ಎಬ್ಬಿಸ್ತೀಯಾ?"

"ಇವನನ್ನು ಸ್ಕೂಲಿಗೆ ಕಳಿಸ್ಬೇಕು. ನಾನೂ ಬ್ಯಾಂಕಿಗೆ ಹೋಗ್ಬೇಕು...."

"ಇವತ್ತು ರಜ ಹಾಕು ಮೀರಾ.... ಬೆಳಿಗ್ಗೆ ನನ್ನ ಗಂಡನೂ ಊರಿಗೆ ಬಂದರು. ಅವರನ್ನು ಪರಿಚಯ ಮಾಡಿಸಿಕೊಡ್ತೀನಿ...."

"ಇಲ್ಲ ಕುಸುಮಾ, ರಜ ಇಲ್ಲ." ಎನ್ನುತ್ತಾ ಭರತ್‌ನನ್ನು ಎಬ್ಬಿಸಿದಳು.

"ಹೋಗ್ಲೀ.... ನನ್ನ ಗಂಡನಿಗೆ ಹೇಳ್ತೀನಿ, ನಿನಗೆ ಡ್ರಾಪ್ ಕೊಡ್ತಾರೆ."

"ಬೇಡವೇ ಬೇಡ.... ನನ್ನ ಪಾಡಿಗೆ ನಾನು ಹೋಗ್ತೀನಿ...." ಎಂದು ಸಿದ್ಧಳಾದಳು. ಮಗನನ್ನು ಸಿದ್ಧ ಮಾಡಿದಳು.

"ನನ್ನ ಗಂಡ ಏನೂ ಅಂದ್ಕೊಳುಲ್ಲ ಮೀರಾ.... ನಾನು ಎಬ್ಬಿಸ್ತೀನಿ...."

ಮೀರಾ ಅವಳ ಕೈ ಹಿಡಿದಳು "ಬೇಡ ಅಂದ್ನಲ್ಲ... ಪ್ಲೀಸ್ ಇಂಥಾ ವಿಷಯಕ್ಕೆ ನನಗೆ ಬಲವಂತ ಮಾಡ್ಬೇಡ." ಸ್ವಲ್ಪ ಒರಟಾಗಿ ಹೇಳಿದಳು.

"ನನ್ನ ಗಂಡ ಒಳ್ಳೆಯವರು ಕಣೇ.... ನಿಂಗೆ ಯಾವ ಸಂಕೋಚವೂ ಬೇಡ." ಮೀರಾ ಆ ಮಾತಿಗೆ ಉತ್ತರಿಸದೇ, ಮಗನ ಕೈ ಹಿಡಿದು ಎಳೆದುಕೊಂಡು ರೂಮಿನಿಂದ ಆಚೆಗೆ ಬಂದಳು.

"ಹೋಗ್ಲೀ ಕಾಫೀನಾದ್ರೂ ಕುಡಿದು ಹೋಗು.... ಭರತ್‌ಗೆ ಹಾಲನ್ನು ಕುಡಿಸು. ಅಂಥಾ ಅವಸರ ಏನು?"

"ಸರಿ, ಕಾಫೀನ ಕುಡಿದೇ ಹೋಗ್ತೀನಿ. ಹಾಲು ಬೆಚ್ಚಗಿರಲಿ, ಅರ್ಧ ಚಮಚ ಸಕ್ಕರೆ ಹಾಕು ಸಾಕು." ಎಂದು ಹೇಳಿ ಡೈನಿಂಗ್ ಕುರ್ಚಿಯ ಮೇಲೆ ಭರತ್‌ನನ್ನು ಕೂರಿಸಿಕೊಂಡು ಕುಳಿತಳು. ಕುಸುಮ, ಕಾಫಿಯನ್ನು, ಹಾಲನ್ನು ತಂದಿತ್ತಳು. ತಾನೂ ಕಾಫಿಯನ್ನು ಹೀರುತ್ತಾ ಕುಳಿತಳು. ಆಗಾಗ್ಗೆ ಮೀರಳ ಕಡೆ ನೋಡುತ್ತಿದ್ದಳು. ಅವಳ ಮುಖದ ಗೊಂದಲವನ್ನು ಗಮನಿಸಿದಳು. ಏಕೆಂದು ಅರ್ಥವಾಗಿರಲಿಲ್ಲ.

ಮನೆಯ ಮುಂಬಾಗಿಲ ಬಳಿಯೇ ಆಟೋ ರಿಕ್ಷಾ ಸಿಕ್ಕಿತ್ತು. ಅವರಿಬ್ಬರೂ ಹತ್ತಿದರು. ಆಟೋ ಚಲಿಸಿದ ನಂತರ ಬಾಗಿಲನ್ನು ಹಾಕಿಕೊಂಡು ಒಳಗೆ ಬಂದಳು.

*****

ಹತ್ತು ಹದಿನೈದು ದಿನಗಳು ಕಳೆದಿದ್ದವು. ಮೀರಳೊಡನೆ ಮಾತನಾಡ ಬೇಕೆಂದುಕೊಂಡು ಮನೆಗೆ ಫೋನು ಮಾಡಿದಳು. ಅಡಿಗೆಯ್ಯಾಕೆ ಎತ್ತಿಕೊಂಡು ಅವರು ಊರಿನಲ್ಲಿಲ್ಲ, ಮಗನೊಡನೆ ಟ್ರಿಪ್ ಹೋಗಿದಾರೆ" ಎಂದಳು.

"ಅವರು ಬಂದ ನಂತರ ನನಗೆ ಫೋನು ಮಾಡುಕ್ಕೆ ಹೇಳಿ" ಎಂದಳು.

"ಅವರಿಗೆ ಬೇರೆ ಊರಿಗೆ ವರ್ಗವಾಗಿದೆ. ಅದಕ್ಕೆ ಅವರ ಸ್ನೇಹಿತರು ಪಾರ್ಟಿ ಕೊಡಿಸಲು ಕರೆದುಕೊಂಡು ಹೋಗಿದಾರೆ, ಯಾವಾಗ ಬರ್ತಾರೋ ಗೊತ್ತಿಲ್ಲ.... ಅವರ ಮೊಬೈಲ್‌ಗೆ ಫೋನು ಮಾಡಿ" ಎಂದು ಹೇಳಿ ನಂಬರನ್ನು ಕೊಟ್ಟಳು.

ಅವಳ ಮೇಲೆ ತುಸು ಕೋಪ ಬಂದರೂ, ಮೊಬೈಲ್‌ಗೆ ಡಯಲ್ ಮಾಡಿದಳು. ನಾಟ್ ರೀಚಬಲ್ ಅಂತ ಬಂತು. ತುಥ್ ಎಂದು ಬೈದುಕೊಂಡು ಫೋನನ್ನು ಸೋಫಾದ ಮೇಲೆ ಎಸೆದಳು. ಪೇಪರ್ ಓದುತ್ತಾ ಕುಳಿತಿದ್ದ ಮನೋಜ್ ನಸುನಕ್ಕ.

"ನಿನ್ನ ಫ್ರೆಂಡ್ ಮಾತಿಗೆ ಸಿಕ್ಕಲಿಲ್ಲ ಅಂತ ಅದರ ಮೇಲ್ಯಾಕೆ ಕೋಪ?.... ಮನೆಗೇ ಹೋಗಿ ಮಾತಾಡು.... ಬೇಕಾದ್ರೆ ಕರ್‍ಕೊಂಡು ಹೋಗ್ತೀನಿ" ಎಂದ.

"ಅವಳು ಟ್ರಿಪ್ ಹೋಗಿದಾಳೆ..... ಮನೇಲಿಲ್ಲ. ಬೇರೆ ಊರಿಗೆ ವರ್ಗ ಆಗಿದೆಯಂತೆ. ಅದನ್ನೂ ನಂಗೆ ಹೇಳಲಿಲ್ಲ. ನಾನೂ ಅವಳೂ, ಎಷ್ಟು ಬೆಸ್ಟ್ ಫ್ರೆಂಡ್ಸ್ ಆಗಿದ್ದೆವು ಗೊತ್ತಾ?..... ಎಷ್ಟೋ ವರ್ಷಗಳ ಮೇಲೆ ಸಿಕ್ಕಿದಳು ಅಂತ ಸ್ನೇಹಾನ ತೋರ್‍ಸಿದ್ರೆ ಅವಳಿಗೆ ಬೇಡ.... ಅದೇ ಕೊಬ್ಬು...."

"ಕೆಲವರ ಗುಣಾನೇ ಹಾಗಿರುತ್ತೆ. ಅದಕ್ಕೆ ಯಾಕೆ ಅಪ್ಸೆಟ್ ಆಗ್ತೀಯ.... ಅವಳು ಸಿಕ್ಕಲೇ ಇಲ್ಲ ಅಂತ ಅಂದ್ಕೋ...."

"ಅವತ್ತು ರಾತ್ರಿಯೆಲ್ಲಾ ತುಂಬಾ ಮಾತನ್ನಾಡಿದೆವು. ಬೆಳಗಾಗ್ತಿದ್ದ ಹಾಗೇ ಏನೋ ಟೆನ್ಷನ್ನು. ಎದ್ದು ಹೊರಟೇ ಹೋದ್ಲು.... ಆಮೇಲೆ ಫೋನನ್ನೇ ಮಾಡಿಲ್ಲ.... ನಾನೇ ಮಾಡಿದ್ರೂ ಸಿಕ್ಕಲಿಲ್ಲ. ಮತ್ತೆಂದಾದ್ರೂ ಸಿಕ್ಕಲಿ ಚೆನ್ನಾಗಿ ತರಾಟೆಗೆ ತ್ಗೊತೀನಿ...."

"ಹೋಗಲಿ ಬಿಡು ಅಂತ ಅಂದ್ನಲ್ಲ. ಅವಳ ತಾಪತ್ರಯ ಎಂಥದೋ?"

"ಏನೂ ತಾಪತ್ರಯವಿಲ್ಲ. ಅಪ್ಪ ಅಮ್ಮ ಇಲ್ಲ, ಗಂಡ ಇಲ್ಲ.... ಒಂದು ಮಗು ಇದೆ. ಅದನ್ನು ನೋಡ್ಕೋಳ್ಳೋಕೆ, ಅಡಿಗೆ ಮಾಡುಕ್ಕೆ ಸಹಾಯಕರಿದಾರೆ. ಬ್ಯಾಂಕಿಗೆ ಹೋಗ್ತಾಳೆ.... ಎಲ್ಲಾ ಅನುಕೂಲವೂ ಇದೆ.... ಹಾಯಾಗಿದಾಳೆ...."

"ಹಾಯಾಗಿದೀನಿ ಅಂತ ಹೇಳ್ಕೊಂಡ್ಲಾ?"

"ಕಷ್ಟ ಏನನ್ನೂ ಹೇಳ್ಕೊಳ್ಳಲಿಲ್ಲ.... ಹಾಯಾಗಿರಬಹುದು ಅಂತ ಅಂದ್ಕೊಂಡೆ"

"ಮತ್ತೆ ಯಾಕೆ ಮದುವೆ ಆಗಿಲ್ಲವಂತೆ? ಕೇಳ್ಬೇಕಾಗಿತ್ತು...."

"ಅವಳು ಗಂಡು ದ್ವೇಷಿ...." ನಕ್ಕಳು. ಅವನೂ ನಕ್ಕ. ಅವಳು ಮೊದಲು ಹೀಗಿರಲಿಲ್ಲ. ಅವಳ ಅಪ್ಪ ಅಮ್ಮನಿಗೆ ಗಂಡು ಮಕ್ಕಳಿರಲಿಲ್ಲ. ಎಷ್ಟೋ ವರ್ಷಗಳವರೆಗೆ ಗಂಡು ಹುಡುಗರ ಉಡುಪನ್ನೇ ಧರಿಸುತ್ತಿದ್ದಳಂತೆ. ಆದರೆ ಬೆಳೆದು ದೊಡ್ಡವಳಾದ ಮೇಲೆ, ಹೆಚ್ಚು ಎತ್ತರ ಬೆಳೆಯಲೇ ಇಲ್ಲ. ಕುಳ್ಳಗಿದ್ದಳು. ಕೆಲವೂ ಹುಡುಗಿಯರು 'ಕುಳ್ಳಿ ಮೀರಾ' ಅಂತ ಚುಡಾಯಿಸುತ್ತಿದ್ದರು.

ಮನೋಜ್ ಕತ್ತೆತ್ತಿದ.... ಅವಳ ಹೆಸರು 'ಮೀರಾ' ಅಂತ. ಡ್ಯಾನ್ಸ್ ಕಲಿತಿದ್ದಳು. ಸ್ಕೂಲ್ ಡೇಗೆ ಪ್ರೋಗ್ರಾಂ ಕೊಟ್ಟಿದ್ದಳು.... ಅವಳಿಗೆ ನಾಟಕದಲ್ಲಿ ಪಾತ್ರ ಮಾಡಬೇಕು ಅಂತ ಆಸೆ.... ಅದೂ ಗಂಡು ಹುಡುಗನ ವೇಷ....ಆದರೆ ಪಾಪ....ಕುಳ್ಳಿ ಅಂತ ಅಂದು ಬಿಡುತ್ತಿದ್ದರು. ಅಲ್ಲದೇ ತೆಳ್ಳಗೆ ಬೆಳ್ಳಗೆ ಜಿರಲೆ ತರಹ ಇದ್ಲು...." ಅವನು ಗೊಂದಲದಲ್ಲಿದ್ದಂತೆ ಅನ್ನಿಸಿತು. ಆದರೂ ತಡೆದು ನುಡಿದ.....

"ಪಾಪ ಇಷ್ಟು ವರ್ಷದ ಮೇಲೆ ಯಾಕೆ ಆಡ್ಕೋತಿದೀಯ... ?"

"ಮತ್ತೆ? ಕೋಪ ಬರುಲ್ವಾ? ಅವಳನ್ನು ಶಕುಂತಲೆಯ ಪಾತ್ರಕ್ಕೆ ಒಪ್ಪಿಸಿದವಳೇ ನಾನು. ಇಲ್ದಿದ್ರೆ ಅವಳಿಗೆ ದುಷ್ಯಂತನ ಪಾತ್ರ ಮಾಡ್ಬೇಕು ಅಂತ ಬಹಳ ಆಸೆ ಇತ್ತು. ಅವಳಿಗೆ ಹಾಕಿದ್ರೆ ಖಂಡಿತಾ ಒಪ್ಪುತ್ತಿರಲಿಲ್ಲ...."

"ಇದನ್ನೆಲ್ಲಾ ನೀನು ಎಂದೂ ನನಗೆ ಹೇಳಿರಲೇ ಇಲ್ಲ...."

"ನೀವು ಕೇಳಲಿಲ್ಲ. ನಾನು ಹೇಳಲಿಲ್ಲ. ಈಗ ಹೇಳ್ತಿದೀನಿ ಕೇಳಿ.... ಅವಳ ಜೊತೆ ದುಷ್ಯಂತನ ವೇಷವನ್ನು ಹಾಕಿದೋರು ಯಾರು ಅಂತ ಹೇಳಿ ನೋಡೋಣ...."

"ನಂಗೇನ್ಗೊತ್ತು? ಅವಳು ನಿನ್ನ ಫ್ರೆಂಡು ಅಂತಲೇ ಗೊತ್ತಿರ್ಲಿಲ್ಲ ನನಗೆ...."

"ನಾನು....! ನಾನು ದುಷ್ಯಂತನ ಪಾತ್ರವನ್ನು ಮಾಡಿದ್ದೋಳು...." ಅವಳು ಹೆಮ್ಮೆಯಿಂದ ಹೇಳಿದಾಗ ಅವನ ಮುಖ ಕಪ್ಪಿಟ್ಟಿತು.

"ನೀನು? ನೀನು ವೇಷ ಹಾಕಿದ್ಯಾ?" ಆವೇಶದಿಂದ ಕೇಳಿದ.

"ಹೂಂ.... ಏನೀಗ? ಅದೂ ಒಂದು ಕಾಲ.... ನನ್ನ ಟೀಚರ್ ನನ್ನನ್ನು ಬಲವಂತವಾಗಿ ಒಪ್ಪಿಸಿದರು.... ನಮ್ಮಪ್ಪನಿಗೆ ಇವೆಲ್ಲಾ ಇಷ್ಟವಿರಲಿಲ್ಲ ಅಂತ ಅವರಿಗೆ ಗೊತ್ತಾಗದ ಹಾಗೆ ನಾನು ದುಷ್ಯಂತನಾಗಿದ್ದೆ....." ಅವನ ಚಿತ್ತ ಅಲ್ಲೋಲ ಕಲ್ಲೋಲವಾಗಿತ್ತು. ಅವಳ ಮಾತಿನ ಮೇಲೆ ಗಮನವಿರಲಿಲ್ಲ.... ಸರಸರನೆ ಹೊರಬಂದು ಪೋರ್ಟಿಕೋದಲ್ಲಿ ನಿಂತು ತಂಗಾಳಿಗೆ ಮೈ ಒಡ್ಡಿದ. ಕುಸುಮ ಹಿಂದೆಯೇ ಬಂದಳು. "ಯಾಕೆ ಏನಾಯ್ತು? ಮುಖ ಎಲ್ಲಾ

ಏನೋ ಒಂಥರಾ ಆಗಿದೆಯಲ್ಲ ಯಾಕೆ?" ಆತಂಕದಿಂದ ಕೇಳಿದಳು.

"ಒಳಗೆ ಸಫೋಕೇಟ್ ಆಗ್ತಿತ್ತು. ತಂಗಾಳಿ ಬೀಸ್ತಿದೆ ಅಂತ ಬಂದು ನಿಂತೆ" ಎಂದ ಅವಳ ಕಡೆ ತಿರುಗದೇ. ಅಷ್ಟರಲ್ಲಿ ಒಳಗಿನ ಫೋನು ರಿಂಗಾಗಿತ್ತು. ಅವಳು ಒಳಗೆ ಹೋಗಿದ್ದಳು. ಇವನು ಯೋಚಿಸಿ ಯೋಚಿಸಿ ಸುಸ್ತಾಗಿದ್ದ.

****

ಎರಡು ದಿನಗಳ ನಂತರ ಅಳೆದೂ ಸುರಿದೂ, ಮನೋಜ ಮೀರಳ ಮನೆಗೆ ಬಂದ. ಅವಳು ಇವನನ್ನು ನೋಡಿ ಕೆಟ್ಟ ಮುಖವನ್ನು ಮಾಡಿದಳು. 'ಬನ್ನಿ' ಎಂದು ಕರೆಯಲಿಲ್ಲ. 'ಯಾಕೆ ಬಂದಿದೀರಿ' ಎಂದೂ ಕೇಳಲಿಲ್ಲ. ಇವನೇ ಒಳಗೆ ಬಂದ. ಅಡಿಗೆಯಾಕೆ ಭರತ್‌ನನ್ನು ಎತ್ತಿಕೊಂಡು ಹೊರಗೆ ಹೋಗಿದ್ದಳು. ಇವನೇ ಮಾತಿಗೆ ಪ್ರಾರಂಭಿಸಿದ.

"ಬೇರೆ ಊರಿಗೆ ಟ್ರಾನ್ಸ್‌ಫರ್ ಆಗಿದೆಯಂತೆ, ಕುಸುಮ ಹೇಳಿದಳು. ಸಾರೀ.... ಮೀರಾ.... ನೀವು ಕುಸುಮಳ ಫ್ರೆಂಡ್ ಅಂತ ಗೊತ್ತಿರ್ಲಿಲ್ಲ..." ಅವಳು ಮಾತನ್ನಾಡದೇ ಮೌನವಾಗಿದ್ದಳು.

"ನನ್ಮೇಲೆ ಕೋಪಾನಾ? ನೀವು ಯಾಕೆ ಮತ್ತೆ ಮದುವೆಯಾಗಲಿಲ್ಲ? ಒಬ್ಬ ಮಗ ಇದಾನಂತೆ...."

"ಅದು ನನ್ನ ವೈಯಕ್ತಿಕ ವಿಚಾರ...." ಬಾಯಿ ಬಿಟ್ಟಳು.

"ಹೌದು... ಕೇಳುವ ಹಕ್ಕು ನನಗಿಲ್ಲ.... ಆದರೂ ಒಂದ್ಮಾತು ಹೇಳೋಣ ಅಂತ ಬಂದೆ.... ದಯವಿಟ್ಟು ನನ್ನನ್ನು ಕ್ಷಮಿಸಿಬಿಡಿ...."

"ಇಷ್ಟು ವರ್ಷದ ಮೇಲೆ ಕ್ಷಮೆ ಕೇಳ್ಬೇಕು ಅಂತ ಅನ್ನಿಸ್ತಾ....?"

"ಸಾರೀ.... ಆಗ ನಂಗೆ ಏನಾಗಿತ್ತು ಅಂತ ನಂಗೇ ಗೊತ್ತಿಲ್ಲ...."

"ಅದಕ್ಕೆ ನನ್ನನ್ನು ಬಲಿ ತಗೊಂಡ್ರಾ? ನನ್ನ ಅಪ್ಪ ಅಮ್ಮನ ಸಾವಿಗೂ ನೀವೇ ಕಾರಣ.... ನನ್ನನ್ನು ಒಂಟಿಯನ್ನಾಗಿ ಮಾಡಿ, ನೀವು ಮತ್ತೆ ಮದುವೆ ಆದ್ರಲ್ಲ.... ಈಗ ಅವಳು ನನ್ನ ಫ್ರೆಂಡ್ ಅಂತ ಗೊತ್ತಾಯ್ತಲ್ಲ, ಅವಳನ್ನು ಬಿಟ್ಟು ಬಿಡ್ತೀರಾ?"

"ಅವಳ ತಪ್ಪೇನಿದೆ? ಅವಳು ನನ್ನ ಹೆಂಡ್ತಿ....ಒಬ್ಬ ಮಗನೂ ಇದಾನೆ."

"ನನ್ನದೂ ಯಾವ ತಪ್ಪಿರಲಿಲ್ಲ.... ನಾನೂ ನಿಮ್ಮ ಹೆಂಡ್ತಿಯಾಗಿದ್ದೆ...."

"ಹೌದು.... ಆದರೆ ನನಗೆ ಡ್ಯಾನ್ಸ್ ಅಂದರೆ ಆಗುಲ್ಲ.... ಅದನ್ನು ನಿಮ್ಮ ತಂದೆ ತಿಳಿಸಲಿಲ್ಲ.... ಡ್ಯಾನ್ಸು, ನಾಟಕ ಅದನ್ನೆಲ್ಲಾ ದ್ವೇಷಿಸ್ತೀನಿ."

"ಯಾಕೆ? ಕುಸುಮ ದುಷ್ಯಂತನ ವೇಷ ಹಾಕಿದ್ಲು.... ಅದನ್ನು ನಿಮಗೆ ಇನ್ನೂ ಹೇಳಿಲ್ವಾ?.... ಹೇಳಿದರೆ ಅವಳನ್ನೂ ಬಿಟ್ಟು ಬಿಡ್ತೀರಾ?"

"ನೀವು ಮತ್ತೆ ನನ್ನ ಬಾಳಿಗೆ ಬರೋದಾದ್ರೆ ಬಿಟ್ಟು ಬಿಡ್ತೀನಿ..."

"ಆಂ! ಏನಂದ್ರೀ! ಹುಡುಗಾಟ ಆಡ್ತಿದೀರಾ?.... ನಿಮ್ಮ ಫೋಟೋನ ನೋಡಿದ ಕೂಡ್ಲೇ ನಂಗೆ ನಿಮ್ಮ ಗುರುತು ಸಿಕ್ತು. ಕುಸುಮಂಗೆ ಹೇಳಲಿಲ್ಲ.... ಹೇಳಿದ್ರೆ ಏನಾಗ್ತಿತ್ತು ಗೊತ್ತಾ?"

"ಥ್ಯಾಂಕ್ಯೂ ಮೀರಾ... ಈ ವಿಷಯ ಕುಸುಮಂಗೆ ಎಂದೂ ಗೊತ್ತಾಗ್ಬಾರ್ದು...."

"ಮತ್ತೆ? ನನ್ನ ಬಳಿಗೆ ಮತ್ತೆ ಬರುವ ಮಾತನ್ನಾಡಿದ್ರೀ? ಆಗ ಗೊತ್ತಾಗುತ್ತಲ್ಲ."

"ನೀವು ಒಪ್ಪಿಕೊಂಡರೆ, ನಾನು ಅವಳಿಗೆ ಎಲ್ಲಾ ನಿಜವನ್ನೂ ಹೇಳಿ ಬಿಡ್ತೀನಿ...."

"ನನಗೆ ನಿಮ್ಮ ಬಗ್ಗೆ ಯಾವ ಆಸಕ್ತಿಯೂ ಇಲ್ಲ, ಹೊರಟು ಹೋಗಿ...." ಅವಳು ಬಾಗಿಲ ಕಡೆಗೆ ಬೊಟ್ಟು ಮಾಡಿದಳು. ಕೆಟ್ಟ ಮುಖವನ್ನು ಹೊತ್ತು ಅವನು ಆಚೆಗೆ ಬಂದ.

****

ಫೋನು ರಿಂಗಾದಾಗ ಕುಸುಮ ಎತ್ತಿಕೊಂಡಳು. ಮೀರಾ ಮಾತನಾಡಿದಳು..... "ನನ್ನ ದುಷ್ಯಂತ ಎಲ್ಲಿದಾನೆ ಅಂತ ಪತ್ತೆಯಾಗಿದಾನೆ.... ಅವನಿಂದ ದೂರ ಹೊರಟು ಹೋಗ್ತಿದೀನಿ. ವರ್ಗ ಮಾಡಿಸ್ಕೊಂಡಿದೀನಿ" ಎಂದಳು.

"ಯಾಕೇ ಹೀಗ್ಮಾಡ್ದೇ?.... ಹಳೆಯ ಸ್ನೇಹಿತೆ ಸಿಕ್ಕಿದ್ಲು ಅಂತ ಖುಷಿಯಾಗಿದ್ದೆ. ಅದನ್ನು ಹಾಳು ಮಾಡಿಬಿಟ್ಟೆಯಲ್ಲ...."

"ಅದರಿಂದ ನಂಗೆ ನಿಂಗೆ ಇಬ್ಬರಿಗೂ ಒಳ್ಳೆಯದೇ.... ನನ್ನನ್ನು ಮೊದಲಿನಂತೆ ಮರೆತು ಬಿಡು...." ಎಂದಿದ್ದಳು.

"ಯಾಕೇ ಹೀಗಂತೀಯಾ? ನಾನೇನ್ಮಾಡ್ದೇ?"

"ಶಕುಂತಲೆ ದುಷ್ಯಂತನ್ನ ಮರೆತೇ ಬಿಟ್ಟಿದ್ದಳು, ಮತ್ತೆ ಪ್ರತ್ಯಕ್ಷನಾದರೆ....? ಅವನನ್ನು ನಾನು ಈಗ ಒಪ್ಪಿಕೊಳ್ಳಲಾರೆ.... ಅದಕ್ಕೆ ಇದೇ ಸರಿಯಾದ ಪರಿಹಾರ...."

"ನಾನು ಅವನ ಹತ್ರ ಮಾತಾಡ್ತೀನಿ.... ಎಲ್ಲಿದಾನೆ ಹೇಳು, ನೀನು

ಹೇಳಲೇ ಬೇಕು...."

"ಹೇಳುಕ್ಕೆ ನಂಗೆ ಇಷ್ಟವಿಲ್ಲ. ಆದರೂ ಹೇಳಿ ಬಿಡ್ತೀನಿ ಕೇಳು. ಅವನು ನಿಮ್ಮ ಮನೇಲೇ ಇದಾನೆ...." ರಹಸ್ಯವನ್ನು ಬಿಚ್ಚತೊಡಗಿದಳು.

"ನಿನ್ನ ದುಷ್ಯಂತ, ನಮ್ಮ ಮನೇಲಾ?.... ನಾನೇ ತಾನೇ ಆ ವೇಷ ಹಾಕಿದ್ದು.... ಅದಕ್ಕೂ ಇದಕ್ಕೂ ಏನು ಸಂಬಂಧ?.... ನಿನ್ನ ತಲೆ ಸರಿಯಾಗಿದೆ ತಾನೇ?"

"ಹೂಂ.... ನನ್ನ ತಲೆ ಸರಿಯಾಗಿಯೇ ಇದೆ. ಆದ್ದರಿಂದ ನನ್ನದೊಂದು ರಿಕ್ವೆಸ್ಟ್.... ನಿನ್ನ ಗಂಡನ ಎದುರಿಗೆ ನನ್ನ ಬಗ್ಗೆ ಯಾವ ಮಾತನ್ನೂ ಆಡಬೇಡ.... ಏನನ್ನೂ ಹೇಳಬೇಡ.... ನಾನು ಆ ದಿನವೇ ಫೋಟೋ ನೋಡಿ ಗುರುತಿಸಿದೆ... ಆದರೆ ಕೇಳಲಿಲ್ಲ...."

"ಯಾಕೇ ಹೀಗೆ ಮಾತಾಡ್ತಿದೀಯ... ನಂಗೆ ಒಂಥರಾ ಭಯ ಆಗ್ತಿದೆ....."

"ಭಯ ಪಡ್ಬೇಡ ಕುಸುಮಾ.... ನಿನಗೆ ಒಳ್ಳೇದಾಗ್ಲೀ ಅಂತ ಹಾರೈಸ್ತೀನಿ.... ನಾನು ಈ ಒಂಟಿ ಜೀವನಕ್ಕೆ ಒಗ್ಗಿ ಹೋಗಿದೀನಿ.... ಆದರೆ ನೀನು ಒಂಟಿಯಾಗಿ ಇರಲಾರೆ.... ಭರತ್‌ಗೆ ತಂದೆ ಯಾರು ಅಂತ ಗೊತ್ತಿಲ್ಲ. ಆದರೆ ಶ್ರೇಯಸ್‌ಗೆ.... ತಂದೆಯ ಆಶ್ರಯ ಬೇಕು.... ಆದ್ದರಿಂದ ನನ್ನ ಹೆಸರನ್ನು ನಿನ್ನ ಮನೆಯಲ್ಲಿ ಎತ್ತಬೇಡ...."

"ತಡೀ.... ತಡೀ.... ಮೀರಾ.... ನನಗೆ ಈಗ ಸ್ವಲ್ಪ ಸ್ವಲ್ಪ ಅರ್ಥ ಆಗ್ತಿದೆ.... ನೀನು ಮನೋಜ್ ಬಗ್ಗೆ ಹೇಳ್ತಿಲ್ಲ ತಾನೇ?"

ಮೀರಾ ಉತ್ತರಿಸಲಿಲ್ಲ. ರಿಸೀವರ್‌ನ್ನು ಇಟ್ಟ ಸದ್ದು ಕೇಳಿಸಿತ್ತು. ಕುಸುಮ ಸೋತವಳಂತೆ ಕುಸಿದು ಕುಳಿತಳು. ಇವಳಿಗೆ ಉತ್ತರ ಸಿಕ್ಕಿತ್ತು.

* * *

ಸಂಧಾನ

ದಿ|| ವೆಂಕಮ್ಮನವರ ವೈಕುಂಠ ಸಮಾರಾಧನೆಯ ಕಾರ್ಯವು ಸಾಂಗವಾಗಿ ನೆರವೇರಿತ್ತು. ಬಂಧು ಮಿತ್ರರು ಆಗಮಿಸಿ, ಆಕೆಯ ಮಕ್ಕಳೊಡನೆ ನಾಲ್ಕು ಸಾಂತ್ವನದ ನುಡಿಗಳನ್ನಾಡಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿದ್ದರು. ಬ್ರಾಹ್ಮಣರು ಭೋಜನದ ನಂತರ ಆಶೀರ್ವಚನವನ್ನು ನೀಡಿದರು. ಯಥೋಚಿತ ದಾನ ದಕ್ಷಿಣೆಗಳನ್ನು ಸ್ವೀಕರಿಸಿ, ಶೇಷಮ್ಮನವರನ್ನು ವೈಕುಂಠಕ್ಕೆ ತಲುಪಿಸುವ ವಚನಗಳನ್ನು ಹೇಳಿದರು. ಅಲ್ಲಿ ಹಾಜರಿದ್ದವರೆಲ್ಲಾ, ಕಿವಿಗೊಟ್ಟು ಆಲಿಸಿದರು.

ಮೃತರ ಶರೀರದಿಂದ ಬೇರ್ಪಟ್ಟ ಆತ್ಮವು ಹೇಗೆ ಪರಮಾತ್ಮನನ್ನು ಸೇರುತ್ತದೆ ಎನ್ನುವುದನ್ನು ಪುರೋಹಿತರು ಸವಿಸ್ತಾರವಾಗಿ ವರ್ಣಿಸಿದರು. ತಾಯಿಯ ಕರ್ಮಾಂತರಗಳನ್ನು ಯಾವ ಲೋಪವೂ ಇಲ್ಲದಂತೆ ಶ್ರದ್ಧಾ ಭಕ್ತಿಗಳಿಂದ ಆಚರಿಸಿದ ಮಕ್ಕಳನ್ನು ಹೊಗಳಿದರು. ಅವರ ಕರ್ತವ್ಯವನ್ನು ಶ್ಲಾಘಿಸಿದರು.

"ನೀವುಗಳು ಮಾಡಿದ ದಾನ, ಧರ್ಮ, ಪುಣ್ಯ ಕೆಲಸಗಳೆಲ್ಲವೂ ನಿಮ್ಮ ಪಿತೃಗಳಿಗೆ ಸಂತೃಪ್ತಿಯನ್ನು ನೀಡಿರುತ್ತದೆ.... ಈ ಒಂದು ವರ್ಷವನ್ನು ನೀವು ನಿಮ್ಮ ತಾಯಿಯ ನೆನಪಿನಲ್ಲಿ ಕಳೆಯುತ್ತೀರಿ. ಅವರನ್ನು ಸ್ಮರಿಸುತ್ತೀರಿ. ಅವರಿಗಾಗಿ ಪ್ರತಿಯೊಂದು ಕೆಲಸವನ್ನೂ ಮಾಡುತ್ತೀರಿ.... ವೆಂಕಮ್ಮನವರು, ನಿಜಕ್ಕೂ ಭಾಗ್ಯವಂತರು. ನಿಮ್ಮಂಥ ಸತ್ಪುತ್ರರನ್ನು ಪಡೆದ ಅವರೇ ಧನ್ಯರು...." ಹೊಗಳಿದರು.

ಎಲ್ಲರೂ ಮೌನವಾಗಿ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಮಕ್ಕಳುಗಳು ತಲೆ ತಗ್ಗಿಸಿ ಕುಳಿತಿದ್ದರು. ಸೊಸೆಯಂದಿರು ಪರಸ್ಪರ ಮುಖ ಮುಖ ನೋಡಿಕೊಂಡರು. ಪುರೋಹಿತರ ಮಾತುಗಳು ಇನ್ನೂ ಮುಗಿದಿರಲಿಲ್ಲ.

ದಾನಗಳಲ್ಲಿ ಅನೇಕ ಬಗೆಗಳಿವೆ. ಅವುಗಳಲ್ಲಿ ಶ್ರೇಷ್ಠವಾದುದು

ಗೋದಾನ.... ಅದಕ್ಕಿಂತ ಮಿಗಿಲಾದ ದಾನ ಕನ್ಯಾದಾನ. ಹಾಗೆಯೇ, ಸುವರ್ಣ ದಾನ, ಭೂದಾನ ಕೂಡಾ ಶ್ರೇಯಸ್ಕರ. ಈ ಕಾಲದಲ್ಲಿ ಎಲ್ಲರೂ ಹೆಚ್ಚು ಹೆಚ್ಚು ಗಳಿಸುತ್ತೀರಿ.... ಸಂಪಾದನೆಯ ಅರ್ಧಕ್ಕಿಂತ ಹೆಚ್ಚಿನ ಭಾಗವನ್ನು ನಿಮ್ಮ ಮಕ್ಕಳ ವಿದ್ಯಾಭಿವೃದ್ಧಿಗಾಗಿ, ಖರ್ಚು ಮಾಡುತ್ತೀರಿ. ಊಟ ತಿಂಡಿ, ಬಟ್ಟೆ ಬರೆ, ನೋಟ ನಡಿಗೆ ಇತ್ಯಾದಿಗಳಿಗಾಗಿ ಸಾಕಷ್ಟು ವ್ಯಯ ಮಾಡುತ್ತೀರಿ....ಇನ್ನು ಮುಂದೆ ನಿಮ್ಮ ಸಂಪಾದನೆಯ ಹಣದ ಒಂದು ಪಾಲು, ಕೇವಲ ಒಂದೇ ಒಂದು ಪಾಲಿನ ಹಣವನ್ನು ನಿಮ್ಮ ಪಿತೃಗಳ ಕಾರ್ಯಕ್ಕಾಗಿ ಖರ್ಚು ಮಾಡಿ. ಅದರಿಂದ ನಿಮಗೆ ನೆಮ್ಮದಿ ಸಿಗುತ್ತದೆ.... ಅವರ ಆಶೀರ್ವಾದ ಸದಾ ಕಾಲ ನಿಮ್ಮ ಮೇಲಿರುತ್ತದೆ.... ನಿಮ್ಮಗಳ ಅಭಿವೃದ್ಧಿಯಾಗುತ್ತದೆ. ಅವರುಗಳು ಮಕ್ಕಳ ಅಭಿವೃದ್ಧಿಗಾಗಿ ಶ್ರಮಿಸುತ್ತಾರೆ. ಅವರನ್ನು ಅವರ ಶ್ರಮವನ್ನು ನೆನೆಸಿಕೊಂಡು ವರ್ಷಕ್ಕೊಮ್ಮೆ ಅವರುಗಳನ್ನು ಶ್ರದ್ಧಾ ಭಕ್ತಿಗಳಿಂದ ನೆನೆಸಿಕೊಂಡು, ಅವರ ಸದ್ಗತಿಗಾಗಿ ಪ್ರಾರ್ಥಿಸಿ.... ಅವರ ಹೆಸರಿನಲ್ಲಿ ಅನ್ನದಾನಾದಿಗಳನ್ನು ಮಾಡಿ, ದಕ್ಷಿಣೆಯನ್ನು ಕೊಟ್ಟು ಬ್ರಾಹ್ಮಣರನ್ನು ಸಂತೃಪ್ತಿಗೊಳಿಸುವುದು ನಿಮ್ಮ ಕರ್ತವ್ಯವಾಗಿರುತ್ತದೆ...." ಪುರೋಹಿತರ ಮಾತುಗಳು ಮುಂದುವರೆದಿತ್ತು...

ಅಚ್ಯುತನ ಕಣ್ಣುಗಳು ತುಂಬಿ ಬಂದವು. ತಾಯಿಯ ನೆನಪು ಉಮ್ಮಳಿಸಿಕೊಂಡು ಬಂದು ಎದೆ ಭಾರವಾಗಿತ್ತು. ಅಚ್ಯುತ ಅಮ್ಮನ ಮುದ್ದಿನ ಮಗ. ವೆಂಕಮ್ಮ ತನ್ನ ಹದಿನಾರನೆಯ ವಯಸ್ಸಿನಲ್ಲಿ ಮೊದಲ ಗಂಡು ಮಗುವನ್ನು ಹೆತ್ತಳು. ಅತ್ತೆ, ಮಾವ, ತಾಯಿ, ತಂದೆ ಹೇಳಿದಂತೆ ಸಂಸಾರವನ್ನು ನಿಭಾಯಿಸಿ ಕೊಂಡು ಬಂದವಳು. ಅಚ್ಯುತನನ್ನು ಕಂಡರೆ ಬಲು ಅಕ್ಕರೆ.... ಬೆಳೆದು ದೊಡ್ಡವನಾದ ಅಚ್ಯುತ, ತನ್ನ ತಾಯಿ ಕೇವಲ ತನಗಿಂತ ಹದಿನಾರು ವರ್ಷ ದೊಡ್ಡವಳು ಅಂತ ತಿಳಿದಾಗ ಒಂಥರಾ ನಾಚಿಕೆ ಎನಿಸಿತ್ತು. ತನ್ನಿಂದಾಗಿ ತನ್ನ ಅಮ್ಮನಿಗೆ ಎಷ್ಟು ಕಷ್ಟವಾಗಿರಬಹುದು? ಬೆಳೆಸುವಾಗ ತಾನೆಷ್ಟು ತೊಂದರೆ ಕೊಟ್ಟಿರಬಹುದು? ಅಂತ ಅನ್ನಿಸಿದಾಗ, ತಾನು ಅಮ್ಮನಿಗಾಗಿ ಏನಾದರೂ ಮಾಡಬೇಕೆಂದೆನಿಸುತ್ತಿತ್ತು.

ಬಿ. ಎ., ಬಿ. ಎಡ್. ಮುಗಿಸಿ, ಹೈಸ್ಕೂಲಿನಲ್ಲಿ ಉಪಾಧ್ಯಾಯನಾಗಿದ್ದ. ಹೆಚ್ಚು ಸಂಬಳ ಸಿಗುತ್ತಿರಲಿಲ್ಲ. ತಾಯಿಯ ಒತ್ತಡಕ್ಕೆ ಮಣಿದು ಜಲಜಳನ್ನು ಮದುವೆಯಾಗಿದ್ದ. ಜಲಜ ಅವನ ಸೋದರ ಮಾವನ ಮಗಳೇ.... ಅವಳ ನ್ನೆಂದೂ ಸರಿಯಾಗಿ ನೋಡಿದವನೇ ಅಲ್ಲ. ಆಸಕ್ತಿಯ ನೋಟವನ್ನು ಅವಳ ಮೇಲೆ ಹರಿಸಿರಲಿಲ್ಲ. ಮದುವೆಯ ನಂತರವೂ ಅವಳೊಡನೆ ಸಲುಗೆಯಿಂದ ಇರಲು ಕಷ್ಟವೆನಿಸುತ್ತಿತ್ತು. ಈ ಮುಜುಗರಗಳ ಮಧ್ಯೆಯೂ ಮೂರು ಮಕ್ಕಳ

ತಂದೆಯಾಗಿದ್ದ. ಇಬ್ಬರು ಗಂಡು ಮಕ್ಕಳು.... ಒಬ್ಬಳು ಮಗಳು.... ಮಗಳು ನೋಡಲು ವೆಂಕಮ್ಮನಂತೆಯೇ ಇದ್ದಳು. ಪ್ರೀತಿಯಿಂದ ಮಗಳನ್ನು 'ತಾಯೀ' ಎಂತಲೇ ಕರೆಯುತ್ತಿದ್ದ....

"ಅಪ್ಪಾ...." ಎಂದು ಮಗಳು ಹತ್ತಿರ ನಿಂತು ಕರೆದಾಗ ಅಚ್ಯುತ ತನ್ನ ಯೋಚನಾ ಲೋಕದಿಂದ ಎಚ್ಚೆತ್ತ. ಅತ್ತಿತ್ತ ನೋಡಿದ. ಬ್ರಾಹ್ಮಣರು, ಮಂತ್ರ ವನ್ನು ಉಚ್ಚರಿಸುತ್ತಲೇ ಇದ್ದರು. ಬಂಧುಗಳಲ್ಲಿ ಕೆವು ಹಿರಿಯರು ಶುಭ ಸ್ವೀಕಾರದ ಸಮಯದಲ್ಲಿ ಕೊಡಲೆಂದು ಹೊಸ ಬಟ್ಟೆಗಳನ್ನು ತಂದಿದ್ದರು. ಆ ವಸ್ತ್ರಗಳನ್ನು ನೋಡಿ. ಅಚ್ಯುತನಿಗೆ ದುಃಖವನ್ನು ತಡೆಯಲಾಗಿರಲಿಲ್ಲ. ಬಿಕ್ಕಿ ಬಿಕ್ಕಿ ಅತ್ತ. ಅಮ್ಮ ನಮ್ಮನ್ನು ಬಿಟ್ಟು ಹೋಗಿದ್ದಾಳೆ. ಅವಳ ಕರ್ಮವನ್ನು ಮಾಡಿ ಮುಗಿಸಿದ್ದಕ್ಕೆ ಈ ಉಡುಗೊರೆ!.... ಅವುಗಳನ್ನು ಅಲ್ಲಿಯೇ ಬಿಟ್ಟು, ಎದ್ದು ತನ್ನ ರೂಮಿಗೆ ಹೋಗಿದ್ದ....

ರಾಮನಾಥ ಅಣ್ಣ ಎದ್ದು ಹೋದ ದಿಕ್ಕನ್ನೇ ದಿಟ್ಟಿಸಿದ. ಅವನಿಗೂ ಎದ್ದು ಹೋಗಬೇಕೆನ್ನಿಸಿತ್ತು.... ಹದಿನೈದು ದಿನಗಳಿಂದ ಇದೇ ವಾತಾವರಣದಲ್ಲಿ ಇದ್ದು ಅವನ ಮನಸ್ಸು ಗೊಂದಲಗಳಿಂದ ತುಂಬಿ ಹೋಗಿತ್ತು. ಅಮ್ಮ ಇನ್ನೂ ಕೆಲವು ವರ್ಷಗಳು ಬದುಕಿದ್ದಿದ್ದರೆ ಚೆನ್ನಾಗಿತ್ತು.... ತಾನು ಅಮ್ಮನಿಗಾಗಿ ಏನೂ ಮಾಡಲಾಗಿರಲಿಲ್ಲ.... ಅದಕ್ಕೆ ತನ್ನ ಹೆಂಡತಿಯೇ ಕಾರಣ.... ಅವಳ ಕಡೆ ದೃಷ್ಟಿ ಹರಿಯಿತು.

ಭಾರ್ಗವಿ ರಾಮನಾಥನ ಪತ್ನಿ. ಹೆಸರಿಗೆ ತಕ್ಕಂತೆ ಸ್ವಲ್ಪ ಮಟ್ಟಿಗೆ ಜೋರು ಎನ್ನುವ ಸ್ವಭಾವದವಳೇ.... ಅವಳ ಬಾಯಿಗೆ ಹೆದರಿ, ರಾಮನಾಥ ಅವಳು ಹೇಳಿದುದಕ್ಕೆ ತಲೆಯಾಡಿಸಿ ಬಿಡುತ್ತಿದ್ದ. ಈ ದಂಪತಿಗಳಿಗೆ ಮೂರು ಜನ ಗಂಡು ಮಕ್ಕಳು. ಅದೇ ಹೆಮ್ಮೆ ಭಾರ್ಗವಿಗೆ. ಮಾತು ಮಾತಿನಲ್ಲಿ ತೋರಿಸಿಕೊಳ್ಳುತ್ತಿದ್ದಳು. ತನ್ನ ಪತ್ನಿಗೆ ತಾಯಿಯನ್ನು ಕಂಡರೆ ಅಷ್ಟಕಷ್ಟೇ ಎಂದು ರಾಮನಾಥನಿಗೆ ತಿಳಿದಿತ್ತು. ಆದರೆ ತಾಯಿಗೆ ಭಾರ್ಗವಿಯ ಬಗ್ಗೆ ಯಾವ ಕೆಟ್ಟ ಭಾವನೆಗಳೂ ಇಲ್ಲ ಎನ್ನುವುದನ್ನೂ ಬಲ್ಲ. ಈಗ ಅಂಥಾ ಅಮ್ಮನೇ ಇಲ್ಲ. ಈ ಭಾರ್ಗವಿಯ ದೆಸೆಯಿಂದಾಗಿ ತಾನು ತಾಯಿಯ ಬಗ್ಗೆ ಹೆಚ್ಚು ಗಮನ ಕೊಡಲಿಲ್ಲವೆಂದು ವ್ಯಸನವಾಗಿತ್ತು. ಕಣ್ಣುಗಳು ತೇವಗೊಂಡವು. ಅವನ ಪೆಚ್ಚಾಗಿದ್ದ ಮುಖವನ್ನು ಭಾರ್ಗವಿ ಗಮನಿಸಿದ್ದಳು. ಮುಖ ಬಿಗಿಯಾಯಿತು.

ಶ್ರೀಹರಿ ಕಿರಿಯ ಮಗ. ತಾಯಿಗೆ ಪ್ರೀತಿ ಪಾತ್ರನಾದವನು. ತಾಯಿಯ ತೊಡೆಯ ಮೇಲೆ ಮಲಗಿಯೇ ಬಾಲ್ಯವನ್ನು ಕಳೆದವನು. ತಾಯಿಯ

ಸೆರಗನ್ನು ಹಿಡಿದು ಅವಳ ಹಿಂದೆ ಹಿಂದೆಯೇ ತಿರುಗಿ ಬೆಳೆದವನು. ಅಣ್ಣಂದಿರಿಗೆ ಕಾಣದಂತೆ ತಾಯಿ ಕೊಡುತ್ತಿದ್ದ ತಿಂಡಿ ತಿನಿಸುಗಳನ್ನು ಮರೆಯಲ್ಲಿ ತಿಂದು ಚಿಕ್ಕ ವಯಸ್ಸಿನಲ್ಲಿ ಯಾವ ಜವಾಬ್ದಾರಿಯೂ ಇಲ್ಲದೇ ಹಾಯಾಗಿ ತಿರುಗಾಡಿ ಕೊಂಡಿದ್ದವನು. ಮದುವೆ ವಯಸ್ಸಿಗೆ ಬಂದಾಗ ವೆಂಕಮ್ಮ ತನ್ನ ಕಡೆಯ ಹುಡುಗಿಯನ್ನು ಮನೆ ತುಂಬಿಸಿಕೊಂಡಿದ್ದಳು. ಸುಗುಣ, ಹೆಸರಿಗೆ ತಕ್ಕಂತೆ ಸುಗುಣಿಯೇ. ಗಂಡನಿಗೆ ಬೇಕಾದವಳಾಗಿ, ಅತ್ತೆ ಮಾವನ ಸೇವೆಯನ್ನು ಶ್ರದ್ಧೆಯಿಂದ ಮಾಡಿದವಳು. ತಾಯಿ ತನಗಾಗಿ ಉತ್ತಮ ಪತ್ನಿಯನ್ನು ಆರಿಸಿರು ವಳೆಂಬ ಹೆಮ್ಮೆ ಇವನಿಗೆ. ಸುಗುಣ ಅತ್ತಿಗೆಯರಂತೆ ಅಲ್ಲ ಎಂಬ ಅರಿವಿತ್ತು. ಅಭಿಮಾನದಿಂದ ಹೆಂಡತಿಯ ಕಡೆ ನೋಡಿದ. ಅವಳು ಕಣ್ಣು ಮುಚ್ಚಿ, ತನ್ಮಯತೆಯಿಂದ ವಾಚನವನ್ನು ಆಲಿಸುತ್ತಿದ್ದಳು.

****

ಪುರೋಹಿತರ ಆಶೀರ್ವಚನ ಕಾರ್ಯಕ್ರಮ ಮುಗಿದಿತ್ತು. ಬಂದ ನೆಂಟರಿಷ್ಟರೆಲ್ಲಾ ಸಂತಾಪವನ್ನು ವ್ಯಕ್ತ ಪಡಿಸಿ, ಸಮಾಧಾನದ ಮಾತುಗಳನ್ನಾಡಿ ಹಿಂತಿರುಗಿದ್ದರು. ಮನೆಯಲ್ಲಿ ಗಾಢ ಮೌನ. ಜೊತೆಗೆ ಆಯಾಸ. ಎಲ್ಲರೂ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆದರೆ ಸೊಸೆಯರಿಗೆ ಬಿಡುವಿಲ್ಲ. ಅಡಿಗೆ ಯವರ, ಬಾಡಿಗೆಗೆ ತಂದ ಪಾತ್ರೆ ಪಡಗಗಳ ಕಡೆ ಗಮನ ಹರಿಸಬೇಕಾಗಿತ್ತು. ಜಲಜ, ಸುಗುಣ ಅಡಿಗೆ ಮನೆಯ ಕಡೆ ಗಮನವಿತ್ತಿದ್ದರೆ, ಭಾರ್ಗವಿ, ಹೊರಗಿನ ಶಾಮಿಯಾನ, ಬಾಡಿಗೆ ಕುರ್ಚಿಗಳ ಕಡೆ ಗಮನ ಹರಿಸಿದ್ದಳು.

"ಅಕ್ಕಾ, ಭಾವ ತುಂಬಾ ಬೇಸರ ಮಾಡಿಕೊಂಡಿದ್ದಾರೆ.... ಪುರೋ ಹಿತರು ಮಾತುಗಳನ್ನಾಡುತ್ತಿದ್ದಾಗ, ದುಃಖ ತಡೆಯಲಾರದೇ ಎದ್ದು ಹೊರಟು ಹೋದರು. ಪಾಪ...." ಸುಗುಣ ಲೊಚಗುಟ್ಟಿದ್ದಳು.

"ಹೌದು, ಸುಗುಣ.... ಇವರಿಗೆ ಅಮ್ಮ ಎಂದರೆ ಅಚ್ಚುಮೆಚ್ಚು. ಅವರ ಅಗಲಿಕೆಯ ದುಃಖವನ್ನು ಸಹಿಸುಕ್ಕೇ ಆಗ್ತಿಲ್ಲ...ನನಗಂತೂ ಹೇಳಿ ಹೇಳಿ ಸಾಕಾಯ್ತು...."

"ಈ ದುಃಖವನ್ನು ಅಷ್ಟು ಸುಲಭವಾಗಿ ಮರೆಯುಕ್ಕೆ ಆಗುತ್ತಾ ಅಕ್ಕಾ.... ಎಷ್ಟಾಗಲೀ, ಮೊದಲ ಮಗ, ತಾಯಿಗೆ ಹತ್ತಿರವಾಗಿದ್ದವರು. ತಾಯಿಯ ಬಗ್ಗೆ ವಿಪರೀತ ಅನುಕಂಪ.... ಜವಾಬ್ದಾರಿ...."

"ಹಿರಿಯ ಮಗನಾದರೇನು? ಕಿರಿಯ ಮಗನಾದರೇನು? ಎಲ್ಲರಿಗೂ ಅತ್ತೆ ಅಮ್ಮನೇ.... ಎಲ್ಲರ ಮೇಲಿನ ಪ್ರೀತಿ ಒಂದೇ ತರಹ ಇತ್ತು. ನೀನ್ಯಾಕೆ

ಹೀಗೆ ಮಾತಾಡ್ತಿದೀಯೋ....? ಆದರೆ ನಮ್ಮ ನಮ್ಮ ಸಂಸಾರ ಬೆಳೆದ ಮೇಲೆ ಈ ಮಕ್ಕಳುಗಳೇ ಸ್ವಲ್ಪ ಮಟ್ಟಿಗೆ ಬದಲಾಗಿದ್ದಾರೆ ಅಂತ ಅತ್ತೆ ಹೇಳ್ತಿದ್ರು. ಅದು ನಿಜವೇನೋ ಅಂತ ಈಗ ಅನ್ನಿಸ್ತಿದೆ...." ಅತ್ತ ಇತ್ತ ನೋಡಿ ನುಡಿದಳು.

"ಹೌದು, ಅಕ್ಕಾ. ನನಗೂ ಹಾಗೇ ಅನ್ನಿಸ್ತಿದೆ....ಆದರೆ ಭಾರ್ಗವಿ ಅಕ್ಕನ ಸ್ವಭಾವವೇ ಬೇರೆ. ಒಂದು ದಿನವೂ ಅತ್ತೆಯ ಬಗ್ಗೆ ಒಳ್ಳೆಯ ಅಭಿಪ್ರಾಯ ವಿರಲಿಲ್ಲ...."

"ಶ್ರೀಮಂತರ ಮನೆಯಿಂದ ಬಂದವಳು ಭಾರ್ಗವಿ. ಅವಳಿಗೆ ನಾವ್ಯಾರೂ ಸರಿ ಹೋಗ್ತಿರಲಿಲ್ಲ. ಅದಕ್ಕೇ ತಾನೇ, ಗಂಡ ಮಕ್ಕಳೊಂದಿಗೆ ಬೇರೆ ಇರುತ್ತಿದ್ದುದು...."

"ಈಗ ಮುಂದೆ ಏನ್ಮಾಡ್ತಾರೋ? ತಡೆಯೋಕೆ ಅತ್ತೆಯೂ ಇಲ್ಲವಲ್ಲ...."

"ಬೇರೆ ಮನೆ ಮಾಡಿಕೊಂಡು ಹೋಗಬಹುದು.... ಗಂಡು ಮಕ್ಕಳು ಇಬ್ಬರೂ ಒಳ್ಳೆಯ ಕೆಲಸದಲ್ಲಿದಾರೆ....ಸಾಕಷ್ಟು ಸಂಪತ್ತೂ ಇದೆ...."

"ಅವರನ್ನು ಹೋಗುಕ್ಕೆ ಬಿಡಬಾರದು ಅಕ್ಕಾ. ಅತ್ತೆಯ ಆಸೆಯೂ ಅದೇ ಆಗಿತ್ತು. ಈಗಿನಂತೆ ಮೇಲಿನ ಮನೆಯಲ್ಲಿ ಅವರ ಪಾಡಿಗೆ ಅವರಿರಲಿ...."

"ಏನೋ ಅವರವರೇ ನಿರ್ಧಾರ ತಗೊಳ್ಳಲಿ. ನಮಗ್ಯಾಕೆ? ನಾನು ಈ ಮನೆಗೆ ಸೊಸೆಯಾಗಿ ಬಂದಾಗ, ಅತ್ತೆ ಮಾವ ಅನುಕೂಲವಾಗಿರಲಿಲ್ಲ. ಈ ಮಕ್ಕಳುಗಳ ಸಂಪಾದನೆಯ ಹಣದಲ್ಲೇ ಈ ಮನೆಯನ್ನು ಕಟ್ಟಿಸಿದ್ದು. ಮೇಲಿನ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. ರಾಮನಾಥನೇ ಇರತೊಡಗಿದ ಮೇಲೆ ಬಾಡಿಗೆಯೂ ಇಲ್ಲ, ಎಂಥದೂ ಇಲ್ಲ.... ಆದರೆ ಯಾರ ವಿರೋಧವೂ ಇರಲಿಲ್ಲ..."

"ಹೋಗಲಿ ಬಿಡಿ ಅಕ್ಕಾ.... ಅತ್ತೆ ಎಂದೂ ಈ ಮಾತುಗಳನ್ನು ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ...."

"ಅದಕ್ಕೆ ಕಾರಣ ನಿನ್ನ ಗಂಡ.... ದೊಡ್ಡವನಾದ ಮೇಲೆ ಅಮ್ಮನಿಗೆ ಕಷ್ಟವಾಗಬಾರದು ಅಂತ ತಾನು ಕಷ್ಟಪಟ್ಟು ದುಡಿದ.... ನೀನು ಅವರ ಸೇವೆ ಮಾಡಿದೆ.... ನೀವಿಬ್ಬರೂ ಅಚ್ಚು ಮೆಚ್ಚಿನ ಮಗ ಸೊಸೆ.... ನಾವೇ ಯಾತಕ್ಕೂ ಬೇಡ.... ಹಿರಿತನ ಹುಟ್ಟಿನಲ್ಲಿ ಮಾತ್ರ.... ಆದರೆ ನಮಗೆ ಎಳ್ಳಷ್ಟೂ ಬೆಲೆ ಇರಲಿಲ್ಲ...."

"ಹಾಗ್ಯಾಕೆ ಅಂದ್ಕೋತೀರಿ ಅಕ್ಕಾ....? ಅತ್ತೆ ಎಂದಾದ್ರೂ ಏನಾದ್ರೂ ಆಡಿದ್ರಾ?"

"ಆಡಿರ್ಲಿಲ್ಲ.... ಆದರೆ ಅವರ ಮನಸ್ನಲ್ಲಿ ಏನಿತ್ತೋ.... ಭಾರ್ಗವಿ

ಏನೇ ಅಂದ್ರೂ ತೆಪ್ಪಗೆ ಇರುತ್ತಿದ್ರಲ್ಲ.... ನಾನೋ ಹಿರಿ ಸೊಸೆ! ಅಥವಾ ಅವಳೋ.... ಎನ್ನುವಂತೆ...."

"ಎಲ್ಲಾ ಮುಗೀತಲ್ಲ.... ಒಂದು ಕೊಂಡಿಯೂ ಇಲ್ಲ.... ಎಲ್ಲ ಅವರವರ ಪಾಡು ಇನ್ನು ಮುಂದೆ... ಏನೇನು ಮಾತುಗಳು ಬರುತ್ತೋ.... ಆತಂಕ ವಾಗುತ್ತೆ....."

"ಎಂತೆಂಥದೋ ಮಾತುಗಳು ಬರುಕ್ಕೆ ಆಸ್ಪದ ಕೊಡಬಾರದು ಸುಗುಣಾ.... ನಾನೂ ನೀನೂ ಒಂದಾಗಿದ್ದರೆ, ಭಾರ್ಗವಿಗೆ ಬುದ್ಧಿ ಬರುತ್ತೆ.... ಇಷ್ಟವಿಲ್ಲದಿದ್ದರೆ ಮಕ್ಕಳ ಮನೆಗೆ ಹೋಗಲಿ...."

"ಸುಗುಣಾ...." ಎಂದು ಕೂಗುತ್ತಾ ಒಳ ಬಂದ ಭಾರ್ಗವಿಯನ್ನು ಕಂಡು ಇಬ್ಬರೂ ಮಾತನ್ನು ನಿಲ್ಲಿಸಿ ಅವಳನ್ನೇ ದಿಟ್ಟಿಸಿದರು....

"ಓ.... ಅಕ್ಕಾ ನೀವೂ ಇಲ್ಲೇ ಇದೀರಾ? ಏನೋ ಮಾತಾಡ್ತಿದ್ರಿ ಅಂತ ಕಾಣ್ಸುತ್ತೆ..... ನಾನೂ ಆಮೇಲೆ ಬರ್ತೀನಿ...." ಬೆನ್ನು ತಿರುಗಿಸಿದಳು.

"ನಿಂತ್ಕೋ ಭಾರ್ಗವಿ.... ನೀನು ಸುಗುಣಾನ ಹತ್ರ ಏನು ಬೇಕೋ ಅದನ್ನು ಹೇಳು ನಾನೇ ಹೋಗ್ತೀನಿ...." ವನಜ ಎರಡು ಹೆಜ್ಜೆ ಮುಂದೆ ಬಂದಳು.

"ಅಯ್ಯೋ..... ನಾನೇನಂದೆ ಈಗ?.... ಸುಗುಣಾ, ಶ್ರೀಹರಿನ್ನ ಸ್ವಲ್ಪ ಕರೀತೀಯಾ? ಬಿಲ್ ಸೆಟ್ಲ್ ಮಾಡ್ಬೇಕಾಗಿತ್ತು...."

"ಹೂಂ.... ನೋಡ್ತೀನಿ...." ಸುಗುಣಾ ಹೊರಟಳು.

"ಮಲಗಿದ್ರೆ ಎಬ್ಬಿಸ್ಬೇಡ ಸುಗುಣಾ.... ಹದಿನೈದು ದಿನಗಳಿಂದ ಸರಿಯಾಗಿ ಊಟ ಇಲ್ಲ, ನಿದ್ದೆ ಇಲ್ಲ...." ಜಲಜ ಎಂದಳು.

"ಯಾರಿಗೂ ಇಲ್ಲ.... ದಿಂಬಿಗೆ ತಲೆ ಕೊಟ್ಟರೆ ಸಾಕು ಎನಿಸಿದೆ...." ಭಾರ್ಗವಿ ಆಕಳಿಸುತ್ತಾ ನುಡಿದಳು. ವನಜ ಉತ್ತರಿಸಲಿಲ್ಲ. ಸುಗುಣ ತನ್ನ ರೂಮಿಗೆ ಹೋದಳು. ತಕ್ಷಣವೇ ಹಿಂತಿರುಗಿದಳು.

"ಅವರು ಎದ್ದು ಹೊರಗೆಲ್ಲೋ ಹೋಗಿದಾರೆ.... ಭಾವ ಹೇಳಿದ್ರು, ಅವರೇ ಬಂದು ಬಿಲ್ ಸೆಟ್ಲ್ ಮಾಡ್ತಾರಂತೆ...."

"ಯಾವ ಭಾವ? ಅಚ್ಯುತ ಭಾವಾನ....?" ಅಚ್ಚರಿಯಿಂದ ಕೇಳಿದಳು.

"ಯಾಕೆ? ಎಲ್ಲಾದಕ್ಕೂ ಅಚ್ಯುತ ಭಾವನೇ ಬರ್ಬೇಕಾ? ರಾಮನಾಥನಿಗೆ ಯಾವ ಜವಾಬ್ದಾರಿಯೂ ಇಲ್ವಾ?" ಅಷ್ಟರಲ್ಲಿ ರಮಾಕಾಂತ ಎದ್ದು ಬಂದಿದ್ದ....

"ಅತ್ಗೇ ಕಾಫಿ ಇದ್ದರೆ ಬಿಸಿ ಮಾಡ್ಕೊಡಿ...." ಅಲ್ಲಿದ್ದ ಮಣೆಯ ಮೇಲೆ ಕುಳಿತ.

"ನಿನ್ನ ಹೆಂಡ್ತಿಗೆ ಹೇಳಪ್ಪಾ..... ನನ್ನ ಕೈ ಮುಸುರೆ ಆಗಿದೆ...."

"ಇಲ್ಲೆ ಎಲ್ಲೆಲ್ಲಿ ಏನೇನಿದೆ ಅಂತ ನಂಗೆ ಗೊತ್ತಿಲ್ಲ....ಸುಗುಣ ನಿನ್ನ ಭಾವಂಗೆ ಕಾಫಿ ಕೊಡು. ಹಾಗೇ ನಂಗೂ,.... ಸ್ವಲ್ಪ ಬಿಸಿಯಾಗಿರಲಿ...." ಎಂದು ಹೇಳಿ ಹೊರಕ್ಕೆ ನಡೆದಳು. ಜಲಜ ಮೂತಿ ಸೊಟ್ಟ ಮಾಡಿ ಸುಗುಣಳ ಕಡೆ ನೋಡಿದಳು. ಸುಗುಣ ಗಮನಿಸದವಳಂತೆ ಸ್ಟವ್ ಹೊತ್ತಿಸಿದಳು.

*****

"ಏನ್ರೀ, ಏನು ಯೋಚನೆ ಮಾಡ್ತಿದೀರಿ....? ತಿಥಿಗೆ, ವೈಕುಂಠ ಸಮಾರಾಧನೆಗೆ ಅಷ್ಟು ಖರ್ಚಾಯಿತು, ಇಷ್ಟು ಖರ್ಚಾಯಿತು ಅಂತ ಹೇಳಿದ್ರೆ ನಂಬಬೇಡಿ.... ಹಾಗೇ ನಾನೂ ಕೊಡ್ತೀನಿ ಅಂತ ಒಪ್ಕೊಂಡು ಬಿಡ್ಬೇಡಿ...." ಜಲಜ ಪಟಪಟನೆ ನುಡಿದಾಗ ಅಚ್ಯುತ ರೇಗಿದ.

"ಸ್ವಲ್ಪ ಸುಮ್ನೆ ಇರ್ತೀಯಾ? ನಾನು ಬೇರೆ ಏನನ್ನೋ ಯೋಚಿಸ್ತಿದ್ದೆ. ರಮೇಶ ಯಾವಾಗ ವಾಪಸ್ಸು ಹೋಗ್ತಾನಂತೆ?"

"ಇರ್ಲಿ ಬಿಡಿ ಇನ್ನೂ ನಾಲ್ಕು ದಿನ..... ನಿಮಗೇನು ಕಷ್ಟ ಆಗ್ತಿದೆ ಈಗ? ಈ ನಡುವೆ ಬರೋದೇ ಅಪರೂಪ ಆಗಿದೆ...."

"ಇರ್ಲಿ ಬಿಡು.... ಆದರೆ ರಜ ಇರಬೇಕಲ್ಲ. ಆಫೀಸು ನಮ್ಮ ಚಿಕ್ಕಪ್ಪನ ಮಗನದಲ್ಲ.... ಹದಿನೈದು ದಿನಗಳಿಂದ ಇದಾನೆ.... ಕೆಲಸದಿಂದ ತೆಗೆದು ಹಾಕಿದರೆ ಏನ್ಮಾಡ್ತಾನೆ.....?"

"ಅಯ್ಯೋ, ಯಾಕೆ ಹೀಗೆ ರೇಗಾಡ್ತೀರಿ? ಅವನಿಗೂ ಜವಾಬ್ದಾರಿ ಇದೆ.... ನೀವೇನೂ ಹೆದರ್ಕೋಬೇಡಿ. ದಂಡಪಿಂಡವಾಗಿ ಮನೇಲಿ ಕೂತ್ಕೊಳುಲ್ಲ... ಹಾಗೇನಾದ್ರೂ ಆದ ಪಕ್ಷದಲ್ಲಿ.... ನಿಮ್ಮ ಆಸ್ತಿಪಾಲನ್ನು ತಗೊಂಡು ಕೊಡಿ, ಬಿಸಿನೆಸ್ ಮಾಡಲಿ...."

"ಅದನ್ನೆಲ್ಲ ನಾನು ಮಾತಾಡುಲ್ಲ.... ಹಿರಿಯ ಮಗನಾಗಿ, ಮನೆಯನ್ನು ಭಾಗ ಮಾಡುವ ಮಾತನ್ನಾಡಬಾರ್ದು ನಾನು ತಿಳ್ಕೋ...."

"ಹಾಗಾದ್ರೆ ಹಿರಿಯ ಮಗನ ಜವಾಬ್ದಾರಿ ಏನು? ಅವರು ಹೇಳಿದ ಹಾಗೆ ಕೇಳ್ಕೊಂಡು ಇರೋದಾ?"

"ಅದ್ರಲ್ಲಿ ತಪ್ಪೇನಿದೆ ಹೇಳು.....?" ಮುಗ್ಧನಂತೆ ಕೇಳಿದ.

"ನಿಮ್ಗೆ ಯಾವುದ್ರಲ್ಲೂ ತಪ್ಪು ಇದೆ ಅಂತ ಅನ್ಸೋದೇ ಇಲ್ಲ. ಯಾಕೆ ಹೇಳಿ.... ಹಾಗೆ ನಿಮ್ಮಮ್ಮ ಬೆಳೆಸಿ ಬಿಟ್ಟಿದ್ದಾರೆ.... ಮೊದ್ದು ಮೊದ್ದಾಗಿ...."

"ಈಗ ಅಮ್ಮನ್ನ ಯಾಕೆ ಮಾತಿಗೆ ತರ್ತೀಯಾ... ಪಾಪ ಸತ್ತು ಸ್ವರ್ಗದಲ್ಲಿದಾಳೆ"

"ಯಾಕೆ ತರ್ಬಾರ್ದು?.... ಈ ವರ್ಷ ರಮೇಶಂಗೆ ಮದುವೆ ಮಾಡೋಣ ಅಂತ ಅಂದ್ಕೊಂಡಿದ್ದೆ.... ಇನ್ನೊಂದ್ವರ್ಷ ಆ ಸುದ್ಧೀನೇ ಎತ್ತುವ ಹಾಗಿಲ್ಲವಲ್ಲಾ...."

"ಇದ್ರಿಂದ ಏನು ನಷ್ಟ?.... ರಮೇಶ್ಗಂಗೂ, ಸುರೇಶಂಗೂ ಒಟ್ಟಿಗೇ ಮದುವೆ ಮಾಡಿದ್ರಾಯ್ತು...."

"ಎಲ್ಲವನ್ನೂ ಎಷ್ಟು ಸುಲಭವಾಗಿ ಹೇಳಿ ಬಿಡ್ತೀರಿ?.... ಇಷ್ಟು ವರ್ಷವಾದ್ರೂ ಪಲ್ಲವೀಗೆ ಮದುವೆ ಮಾಡುಕ್ಕೆ ಆಯ್ತಾ?.... ವಯಸ್ಸಾಗಿ ಹೋಯ್ತಲ್ಲ...."

"ಅದಕ್ಕೆ ನಾನು ಹೊಣೇನಾ? ನೀವೇ ತಾಯಿ ಮಗಳು.... ಯಾವ ಗಂಡು ಬಂದ್ರೂ ಮೂಗು ಸರಿಯಾಗಿಲ್ಲ, ಕಿವಿ ಸರಿಯಾಗಿಲ್ಲ ಅಂತ ಒಪ್ಪದೇ ಇದ್ದದ್ದು.... ಇಲ್ದೇ ಇದ್ರೆ ಮದುವೆಯಾಗಿ ಎಷ್ಟೋ ವರ್ಷಗಳಾಗಿರುತಿದ್ವು.... ಅಮ್ಮ ಈ ಕೊರಗ್ನಲ್ಲೇ ಸತ್ತಳು.... ಈ ವರ್ಷದಲ್ಲಿ ಯಾವ್ದಾದ್ರೂ ಅವಳಿಗೆ ತಕ್ಕಂಥ ಗಂಡನ್ನು ನೋಡಿ ಮದುವೆ ಗೊತ್ತು ಮಾಡಿ ಕನ್ಯಾದಾನ ಮಡೋಣ.... ಆ ಪುಣ್ಯವಾದ್ರೂ ಅಮ್ಮನಿಗೇ ಸೇರ್ಲಿ...."

"ಈ ಪುಣ್ಯ ನಿಮ್ಮಮ್ಮಂಗೆ ಸೇರ್ಲಿ ಅಂತ ಮದುವೆ ಮಾಡ್ಕೋ ಅಂತ ನಾನು ಬಲವಂತ ಮಾಡುಲ್ಲ. ಅವಳಿಗೆ ಆ ಆಸೆಯೇ ಹೊರಟು ಹೋಗಿದೆ. ಮತ್ತೆ ನಾನು ಕೆದಕುಲ್ಲ. ಕನ್ಯಾದಾನದ ಪುಣ್ಯ ಬೇಕಾಗಿರೋದು ನಿಮ್ಮಮ್ಮಂಗೆ ತಾನೇ? ನಿಮ್ಮ ಮಂಜರಿಗೆ ಮದುವೆ ಮಾಡುಕ್ಕೆ ಹೇಳಿ....ಅವಳೂ ಮೊಮ್ಮಗಳೇ ತಾನೇ...."

"ಅದಿನ್ನೂ ಚಿಕ್ಕದು.... ಇನ್ನೂ ಓದ್ತಾ ಇದೆ.... ಇಷ್ಟು ಬೇಗ ಮದ್ವೇನಾ?"

"ಯಾರು ಏನು ಬೇಕಾದ್ರೂ ಮಾಡ್ಕೊಳ್ಳಿ.... ನಂಗೆ ನಿದ್ದೆ ಬರ್ತಿದೆ. ಬೆಳಗ್ನಿಂದ ಓಡಾಡಿ ಓಡಾಡಿ ಆಯಾಸ ಆಗಿದೆ..." ಎನ್ನುತ್ತಾ ಮುಸುಕೆಳೆದು ಮಲಗಿದಳು.

****

"ಭಾರ್ಗವಿ, ಪುರೋಹಿತರು ಹೇಳಿದ ಮಾತನ್ನು ಕೇಳಿಸ್ಕೊಂಡ್ಯಾ?...ಈ ಒಂದು ವರ್ಷದೊಳಗೆ ಯಾವುದೇ ಪುಣ್ಯಕಾರ್ಯ ಮಾಡಿದರೂ, ಅದು ನಮ್ಮ ಅಮ್ಮನ ಸದ್ಗತಿಗೆ, ನಮ್ಮ ಶ್ರೇಯಸ್ಸಿಗೆ. ನಮಗೆ ಒಂದು ಹೆಣ್ಣು ಹುಡುಗಿ ಇದ್ದಿದ್ದರೆ ಚೆನ್ನಾಗಿತ್ತು ಅಂತ ಅನ್ನಿಸ್ತಿದೆ.... ಕನ್ಯಾದಾನ ಮಾಡುವ ಭಾಗ್ಯ ನಮಗಿಲ್ಲವಲ್ಲ ಅಂತ ಬೇಸರವಾಗ್ತಿದೆ...." ರಾಮನಾಥನೆಂದ.

"ಆಗ ನಮಗೆ ನಾಲ್ಕು ಮಕ್ಕಳಾಗಿರುತ್ತಿದ್ರು.... ಈಗಲೇ ಮಕ್ಕಳು ಜಾಸ್ತಿ

ಅಂತ ಆಗ ಈಗ ಗೊಣಗ್ತಾ ಇರ್ತೀರಿ... ಹೊತ್ತೋಳು ನಾನು; ಹೆತ್ತೋಳು ನಾನು. ಹೆಣ್ಣಿಗೆ ಒದಗುವ ಕಷ್ಟ ಏನೂಂತ ನಂಗೊತ್ತು.... ಮಗಳು ಇಲ್ಲದೇ ಇರೋದು ಒಳ್ಳೇದೇ ಆಯ್ತು..." ಭಾರ್ಗವಿ ಎಂದಳು.

"ಕನ್ಯಾದಾನ ಎಲ್ಲಕ್ಕಿಂತ ಶ್ರೇಷ್ಠವಾದ ದಾನವಂತೆ...ಆ ಪುಣ್ಯ ನಮ್ಮ ಪಾಲಿಗಿಲ್ಲವಲ್ಲ. ಅದೇ ನನ್ನನ್ನು ಬಾಧಿಸುತ್ತಿದೆ...."

"ಅದಕ್ಯಾಕೆ ಕೊರಗ್ತೀರಿ? ನಿಮ್ಮ ಅಣ್ಣನಿಗೆ ಹೇಳಿ... ಈಗ್ಲೂ ಪಲ್ಲವಿಗೆ ಗಂಡನ್ನು ಹುಡುಕಿ ಮದುವೆ ಮಾಡ್ಲಿ... ಧಾರೆ ಎರೆಯುವಾಗ... ನೀವೂ ಎರೆದರೆ ಆಯ್ತು...ಕನ್ಯಾದಾನ ಮಾಡಿದಂತಾಗುತ್ತದೆ...."

"ಅವಳಿಗೆ ವಯಸ್ಸು ಮೀರಿ ಹೋಗಿದೆಯಲ್ಲ...ಗಂಡು ಸಿಗಬೇಕಲ್ಲ. ಅಣ್ಣ ಅತ್ತಿಗೆ ಅವಳ ಮದುವೆಯ ಆಸೆಯನ್ನೇ ಬಿಟ್ಟು ಬಿಟ್ಟಿದ್ದಾರೆ...."

"ಹಾಗಾದ್ರೆ ನಿಮ್ಮ ತಮ್ಮಂಗೆ ಹೇಳಿ.... ಮಂಜರಿಗೆ ಗಂಡನ್ನು ನೋಡ್ಲೀ.... ಅವನಿಗೇನು ಕಡಿಮೆ? ಅದ್ಧೂರಿಯಾಗಿ ಮಾಡಿಕೊಡ್ತಾನೆ....ನೋಡೋಕೂ ಚೆನ್ನಾಗಿದೆ. ದಮ್ಮಯ್ಯಾ ಅಂತ ಅವರಾಗೇ ಬಂದು ಮಾಡ್ಕೊಂಡು ಹೋಗ್ತಾರೆ.... ಎಲ್ರೂ ಧಾರೆ ಎರೆದು ಕೊಟ್ಟರಾಯ್ತು...."

"ಅದಿನ್ನೂ ಚಿಕ್ಕದು. ಅದರ ಓದು ಮುಗಿದಿಲ್ಲ. ಅಲ್ಲದೇ, ಈಗ್ಲಿಂದ ಸಂಸಾರ ತಾಪತ್ರಯ ಯಾಕೆ? ನಾವಾಗಿಯೇ ಸಂಸಾರಕ್ಕೆ ತಳ್ಳಿದಂತಾಗುತ್ತೆ...."

"ಗೊತ್ತಾಯ್ತಾ ಈಗ್ಲಾದ್ರೂ? ಸಂಸಾರದಲ್ಲಿ ತಾಪತ್ರಯ ಅಂತ.... ನಾನು ಎಷ್ಟು ಅನುಭವಿಸಿದೀನಿ ಅಂತ ನಂಗೇ ಗೊತ್ತು? ವಕ್ರ ತುಟಿ ಮಾಡಿದಳು.

"ನಿನಗೇನು ಕಡಿಮೆ ಮಾಡಿದ್ದೀನಿ ಹೇಳು? ನೀನು ಹೇಳಿ ಹೇಳಿದ ಹಾಗೆ ಕೇಳಿದೀನೋ ಇಲ್ವೋ... ನಾವೇ ಬೇರೆ ಸಂಸಾರ ಹೂಡಿದೀವಿ. ಅಮ್ಮಂಗೆ ಸುತರಾಂ ಇಷ್ಟವಿರಲಿಲ್ಲ.... ಅವಳು ಬಹಳ ನೊಂದ್ಕೊಂಡಿದ್ಲು...."

"ಅಮ್ಮಂಗೆ ಇಷ್ಟವಿರಲಿಲ್ಲ. ಅವಳ ಆತ್ಮಕ್ಕೆ ನೋವಾಗುತ್ತೆ ಅಂತ ಸಧ್ಯ ಈಗ ಒಟ್ಟಿಗೇ ಇರೋಣ ಅಂತ ಹೇಳ್ಬಿಟ್ಟೇಡಿ...."

"ಈಗ ಅಮ್ಮನ ಸೇವೇನೇನೂ ಮಾಡ್ಬೇಕಾಗಿಲ್ಲವಲ್ಲ...ಆದ್ರೂ ಒಂದ್ಸಾರಿ ಬೇರೆ ಬಂದ್ಮೇಲೆ ಮತ್ತೆ ಒಟ್ಟಿಗೆ ಹೇಗೆ ಇರೋಕೆ ಸಾಧ್ಯ?"

"ಸಧ್ಯ.... ಅಷ್ಟಾದ್ರೂ ತಿಳೀತಲ್ಲ ನನ್ನ ರಾಜಂಗೆ....ಅದಿರ್ಲಿ...ಈ ಮನೇನ ನಿಮ್ಮ ಹೆಸರಿಗೇ ಮಾಡಿಸ್ಕೊಂಡ್ಬಿಡಿ.... ಏನಾದ್ರೂ ತಕರಾರು ಬಂದೀತು..."

"ತಕರಾರು ಯಾಕೆ?"

"ಅಣ್ಣ ತಮ್ಮಂದಿರು ನೀವು ಮೂರು ಜನ. ಮನೆ ಇರೋದು ಎರಡೇ. ಇಬ್ಬರೂ ಸೇರಿ ನಿಮಗೆ ನಾಮ ಹಾಕಾರು...."

"ಅವರಿಬ್ಬರೂ ಅಂಥೋರಲ್ಲ..."

"ಯಾವ ಹುತ್ತದಲ್ಲಿ ಯಾವ ಹಾವಿದೆಯೋ ಯಾರಿಗೆ ಗೊತ್ತು? ನಿಮ್ಮ ಅತ್ತಿಗೆ ಈ ಸಮಯ ಬಂದೀತೇ ಅಂತ ಕಾಯ್ತಿದ್ರು ಅಂತ ಕಾಣುತ್ತೆ.... ಅತ್ತಿಗೆ ಸುಗುಣ ಒಂದಾಗಿ ಬಿಟ್ಟಿದ್ದಾರೆ...."

"ಸುಗುಣ ಒಳ್ಳೆ ಹುಡುಗಿ... ಅಂಥಾ ಆಲೋಚನೆ ಮಾಡುಲ್ಲ..."

"ನಿಮಗೆ ಬೇರೆಯವರೆಲ್ಲಾ ಒಳ್ಳೆಯವ್ರು ನಾನು ಮಾತ್ರ ಕೆಟ್ಟೋಳು. ನಮಗೆ ಮೂರು ಜನ ಗಂಡು ಮಕ್ಕಳು. ಅವರಿಗೆ ಎರಡೆರಡು.... ಅಷ್ಟೇ...."

"ಹೆಣ್ಣು ಮಕ್ಕಳೂ ಇದಾರಲ್ಲ.... ಅವರೇನು ಹೊರಗಿನವರೇ...."

"ಮದುವೆ ಆಗಿಲ್ಲವಲ್ಲ... ಪಲ್ಲವಿ ವೃದ್ಧ ಕನ್ಯೆ... ಈ ಜನ್ಮದಲ್ಲಿ ಮದುವೆ ಆಗುತ್ತೋ... ಇಲ್ವೋ...."

"ಹೀಗೆಲ್ಲಾ ಮಾತಾಡ್ಬೇಡ ಭವಾನಿ.... ಈಗ ಸುಮ್ನೆ ಮಲಕ್ಕೋ... ಹದಿನೈದು ದಿನಗಳಿಂದ ಸರಿಯಾಗಿ ನಿದ್ದೆ ಇಲ್ಲ...ನೀನೂ ಮಧ್ಯಾಹ್ನ ಮಲಗಿಲ್ಲ ಅಂತ ಕಾಣುತ್ತೆ...."

"ನಿದ್ದೇನೇ ಹೊರಟು ಹೋಯ್ತು...." ಎಂದು ಗೊಣಗುತ್ತಾ ಗಂಡನಿಗೆ ಒತ್ತಿಕೊಂಡು ಮಲಗಿದಳು.

*****

"ಸುಗುಣಾ, ನಮ್ಮ ಮಂಜರೀಗೆ ಎಷ್ಟು ವರ್ಷ?" ಶ್ರೀಹರಿ ಇದ್ದಕ್ಕಿದ್ದಂತೆ ಕೇಳಿದಾಗ ಸುಗುಣ ನಕ್ಕಳು.

"ಯಾಕ್ರೀ... ನಿಮ್ಮ ಮಗಳಿಗೆ ಎಷ್ಟು ವರ್ಷ ಅಂತ ನಿಮಗೇ ನೆನಪಿಲ್ವಾ?"

"ನೆನಪಿಲ್ದೇ ಏನು? ಆದರೆ ಎಷ್ಟು ಬೇಗ ಬೆಳೆದು ಬಿಟ್ಟಿದ್ದಾಳೆ ಅಲ್ವಾ?... ಅಮ್ಮ ಬದುಕಿದ್ದಾಗ್ಲೇ ಮದುವೆ ಮಾಡಿದ್ದರೆ ಚೆನ್ನಾಗಿರ್ತಿತ್ತು. ಅಮ್ಮನಿಗೂ ಸಂತೋಷ ಆಗ್ತಿತ್ತು...."

"ಅವಳ ಓದು ಮುಗಿದ ಮೇಲೆ ಮದುವೆ ಅಂತ ಅಂದುಕೊಂಡಿದ್ದೆವು ಅಲ್ವಾ? ಈಗ ಎತ್ತರಕ್ಕೆ ಬೆಳೆದಿದಾಳೆ ಅಷ್ಟೇ....ವಯಸ್ಸು ಚಿಕ್ಕದೇ..."

"ಅದೇನೋ ಸರಿ.... ಆದರೆ ಪಲ್ಲವಿ ತರಹ ಎಲ್ಲಿ ಹಾಗೇ ಉಳಿದು ಬಿಡ್ತಾಳೋ ಅಂತ ಆತಂಕ ಆಗುತ್ತೆ.... ಅಣ್ಣನಿಗೆ ಅದೇ ಚಿಂತೆ ಅಂತ ಅನ್ಸುತ್ತೆ"

"ಹಾಗೇನೂ ಆಗುಲ್ಲ ಬಿಡಿ... ಮಂಜರಿ ನಾನು ಬೆಳೆಸಿರುವವಳು. ಪಲ್ಲವಿ ಥರ ಮೊಂಡು ಅಲ್ಲ. ನಾನು ಹೇಳಿದ ಹುಡುಗನ್ನ ಕಣ್ಣು ಮುಚ್ಚಿ ಮದುವೆ ಆಗ್ತಾಳೆ.... ಯಾವ ಪ್ರತಿಷ್ಠೆಯೂ ಇಲ್ಲ.... ನನ್ನ ಮಗಳಿಗೆ...."

"ನಂಗೊಂದು ಆಸೆ ಸುಗುಣ.... ನೀನೇನಂತೀಯೋ?"

"ನಿಮ್ಮಾಸೆ ಏನು ಅಂತ ನಾನು ಹೇಳ್ಲಾ? ನಾನೂ ಅದನ್ನೇ ಯೋಚಿಸ್ತಿದ್ದೆ.... ಓದು ಮುಗಿದ್ದಿದ್ರೆ, ಈ ವರ್ಷದಲ್ಲಿ ಮದುವೆ ಮಾಡಬಹುದಾಗಿತ್ತು.... ಕನ್ಯಾದಾನ ಮಾಡಿದ ಶ್ರೇಯಸ್ಸು ನಮಗೆ ಸಿಕ್ಕಿರುತ್ತಿತ್ತು....ನಿಮ್ಮ ತಾಯಿಗೆ ಪುಣ್ಯ ಸಿಗ್ತಿತ್ತು...ಇದೇ ಆಸೆ ತಾನೇ....?" ಮುಗುಳ್ನಕ್ಕಳು.

"ಹೌದು ಸುಗುಣಾ, ಇದೇ ನನ್ನಾಸೆ.... ನೀನು ನನ್ನ ಸಹಧರ್ಮಿಣಿಯಾದದ್ದಕ್ಕೂ ಸಾರ್ಥಕ.... ನನ್ನನ್ನು ಎಷ್ಟು ಚೆನ್ನಾಗಿ ಅರ್ಥ ಮಾಡಿಕೊಂಡಿದೀಯಲ್ಲ...."

"ಹೊಗಳಿದ್ದು ಸಾಕು... ಇನ್ನೆರಡು ವರ್ಷ ಬಿಟ್ಟು ಮಗಳಿಗೆ ಮದುವೆ ಮಾಡಿದರಾಯ್ತು... ಈ ವರ್ಷದೊಳಗೆ ಗೋದಾನ ಮಾಡಿದರೆ? ಅದೂ ಶ್ರೇಷ್ಠವಾದ ದಾನವೇ.... ಪಲ್ಲವಿಗೆ ಮದುವೆ ಆಗುತ್ತೋ ಇಲ್ಲವೋ ಯಾರಿಗ್ಗೊತ್ತು?"

"ಅಚ್ಯುತ, ರಾಮನಾಥ ಏನಂತಾರೋ.... ಅವರನ್ನು ಒಂದ್ಮಾತು ಕೇಳ್ಬೇಕು"

"ಏನಂತಾರೆ? ಖರ್ಚನ್ನು ಮೂರು ಜನವೂ ಹಂಚಿಕೊಂಡ್ರಾಯ್ತು.... ಮೂರು ಜನಕ್ಕೂ ಸ್ವಲ್ಪ ಸ್ವಲ್ಪ ಪುಣ್ಯ ಸಿಗಲಿ...."

"ಅಚ್ಯುತಣ್ಣನ ಹತ್ರ ಹಣ ಕಾಸಿನ ವಿಷಯವನ್ನು ಮಾತಾಡುಕ್ಕೆ ಕಷ್ಟವಾಗುತ್ತೆ. ಅವನೀಗ ರಿಟೈರ್ ಆಗ್ತಿದಾನೆ. ಅವನದೂ ದೊಡ್ಡ ಸಂಸಾರ. ರಮೇಶ ಬೇರೆ ಊರಿನಲ್ಲಿದಾನೆ. ಅವನ ಖರ್ಚು ಸಂಪಾದನೆ ಯಾವುದೂ ಗೊತ್ತಿಲ್ಲ. ಸುರೇಶ ಕೆಲಸವನ್ನು ಹುಡುಕ್ತಿದಾನೆ. ಪಲ್ಲವಿಯೂ ಇಲ್ಲೇ ಇದಾಳೆ. ಈಗಾಗ್ಲೇ ಬೇಕಾದಷ್ಟು ಖರ್ಚಾಗಿದೆ....ಅವನು ಅನುಮಾನಿಸಿದರೆ?"

"ರಾಮನಾಥ ಭಾವನ್ನ ಕೇಳಿದರೆ....?"

"ಅತ್ತಿಗೆ ಒಪ್ಪಬೇಕಲ್ಲ. ಅವನ ಮಗ ಮದುವೆಯ ವಯಸ್ಸಿಗೆ ಬಂದಿದಾನೆ.... ಆದ್ರೂ ಅತ್ತಿಗೆಗೆ ಹೆದರ್ತಾನೆ....?"

"ಅವರಿಗೇನು ಕಮ್ಮಿ? ಕೇಳ್ನೋಡಿ... ಎಷ್ಟೋ ವರ್ಷಗಳಾಗಿ ಹೋಯ್ತು.... ಬೇರೆ ಆಗಿ. ಬಾಡಿಗೆಯ ಖರ್ಚಿಲ್ಲ. ಮಗ ಇಂಜನಿಯರ್ ಆಗಿದಾನೆ. ಭಾವ ಇನ್ನೂ ಸರ್ವಿಸ್ನಲ್ಲಿದ್ದಾರೆ...."

"ನೀನೇ ಯಾಕೆ ಅತ್ತಿಗೆಯ ಹತ್ರ ಮಾತಾಡಬಾರದು....?"

"ಬೇಡ.... ನೀವುಗಳೇ ಅಣ್ಣ ತಮ್ಮಂದಿರು ಒಂದು ನಿರ್ಧಾರಕ್ಕೆ ಬನ್ನಿ. ನಾನು ಮಾತಾಡಿದ್ರೆ ಅಧಿಕ ಪ್ರಸಂಗಿತನವಾಗುತ್ತೆ.... ಅಕ್ಕ ಭಾವನಿಗೆ ಹೇಳದೇ ಹೋಗಬಹುದು."

"ಹೌದು, ಅತ್ತಿಗೆ ಅಂಥೋರೇ.... ನಾನು ಸಮಯ ನೋಡಿ, ಅಣ್ಣಂದಿರ ಹತ್ರ ಮಾತಾಡ್ತೀನಿ.... ಈಗ ಮಾತು ಸಾಕು. ಮಲಕ್ಕೋ.... ಬೆಳಗ್ನಿಂದ ಓಡಾಡಿ ಓಡಾಡಿ ಸುಸ್ತಾಗಿಲ್ವಾ?"

"ಸುಸ್ತಾಗಿದೆ, ಆದರೆ ನೀವು ಮಾತಿಗೂ ಸಿಕ್ಕಿರಲಿಲ್ಲ. ಸಧ್ಯ, ಎಲ್ಲ ಕೆಲಸವೂ ಸಾಂಗವಾಗಿ ನೆರವೇರಿತಲ್ಲ.... ಅತ್ತೆಯ ಆತ್ಮಕ್ಕೆ ತೃಪ್ತಿ ಆಗಿರಲೇ ಬೇಕು...."

"ಹೌದು ಸುಗುಣಾ, ಯಾವುದಕ್ಕೂ ಕಡಿಮೆ ಮಾಡ್ಲಿಲ್ಲ.... ಆದ್ರೂ ಅಮ್ಮ ಇನ್ನೂ ಕೆಲವು ವರ್ಷಗಳು ಬದುಕಿದ್ದಿದ್ರೆ ಚೆನ್ನಾಗಿತ್ತು. ಒಂದಾದ್ರೂ ಮರಿ ಮಗುವಿನ ಮುಖವನ್ನು ನೋಡಬೇಕಾಗಿತ್ತು...."

"ಅದು ನಮ್ಮ ಕೈಯಲ್ಲಿದೆಯಾ? ಪಲ್ಲವಿಗೆ ಸರಿಯಾದ ವಯಸ್ಸಿಗೆ ಮದುವೆ ಆಗಿ ಬಿಟ್ಟಿದ್ದರೆ, ಎರಡು ಮಕ್ಕಳಾದ್ರೂ ಇರ್ತಿದ್ದವು.... ರಮೇಶನಿಗೂ ಮದುವೆ ಆಗಿ ಮಕ್ಕಳು ಇರುತ್ತಿದ್ದವು...."

"ನಾವು ನಮ್ಮ ಮಕ್ಕಳಿಗೆ ಬೇಗ ಮದುವೆ ಮಾಡಿ ಬಿಡೋಣ.... ಮುಂದೆ ಮುಂದೆ ತಳ್ಳುವುದು ಬೇಡ...."

"ಅರ್ಜೆಂಟೇನು? ನಿಮ್ಮ ಅಣ್ಣಂದಿರ ಮಕ್ಕಳ ಮದುವೆ ಮೊದಲು ಆಗಲಿ. ಈ ವರ್ಷವಂತೂ ಕಳೆಯಬೇಕಲ್ಲ...." ಹಾಸಿಗೆಯ ಮೇಲಿನ ಹೊದಿಕೆ ಯನ್ನೆಳೆದುಕೊಂಡು ಹೊದ್ದು ಮಲಗಿದಳು."

"ಮಕ್ಕಳು ಮಲಗಿದ್ವಾ?"

"ಎಲ್ರೂ ರೂಮಿನಲ್ಲಿದ್ದಾರೆ.... ಮಲಗಿದಾರೋ, ಓದ್ತಾ ಇದಾರೋ. ಹದಿನೈದು ದಿನಗಳಾಯ್ತು.... ನಾನಂತೂ ವಿಚಾರಿಸುಕ್ಕೆ ಆಗೇ ಇಲ್ಲ...."

"ಮಕ್ಕಳಿಗೆ ಬೇಸರ ಆಗ್ಬಾರ್ದು. ಅದ್ರಲ್ಲೂ ಮಂಜರೀಗೆ....ಅಮ್ಮನ ಮುದ್ದಿನ ಮೊಮ್ಮಗಳು ಅವಳು. ಅಜ್ಜಿಯ ನೆನಪ್ನಲ್ಲೇ ಕೊರಗ್ತಿದ್ದರೆ? ....ನಾಳೆ ಯಿಂದ ಮಕ್ಕಳ ಕಡೆ ಗಮನ ಕೊಡು. ಈಗ ಮಲಕ್ಕೋ...." ಎನ್ನುತ್ತಾ ರೂಮಿನ ದೀಪವನ್ನಾರಿಸಿ, ಮಂಚದ ಮೇಲೆ ಉರುಳಿಕೊಂಡ. ತಕ್ಷಣಕ್ಕೆ ನಿದ್ದೆ ಬರಲಿಲ್ಲ. ತಾಯಿಯೊಡನೆ ಕಳೆದ ಬಾಲ್ಯ, ಯೌವನ, ನಂತರದ ದಿನ ಗಳು ಮೇಲೆ ಮೇಲೆ ನೆನಪಿಗೆ ಬಂದವು. ಕಣ್ಣುಗಳು ತುಂಬಿ ಬಂದವು. ಎಲ್ಲಾ ಮುಗಿದು ಹೋಯ್ತು...ಎಂದು ಹೇಳಿಕೊಂಡು ಅತ್ತು, ತನಗೆ ತಾನೇ ಸಮಾಧಾನವನ್ನು ಹೇಳಿಕೊಂಡ.

"ಪುರೋಹಿತರು ದಾನದ ವಿಷಯ ಹೇಳಿದ್ರಲ್ಲ.... ಆ ಬಗ್ಗೆ ಏನು ತೀರ್ಮಾನ ತಗೊಂಡ್ರೀ?" ರಾಮನಾಥ, ಹೆಂಡತಿ ಮನೆಯಲ್ಲಿಲ್ಲದ

ಸಮಯವನ್ನು ನೋಡಿ ಪ್ರಶ್ನಿಸಿದ.

"ಯಾವ ದಾನದ ಬಗ್ಗೆ ಹೇಳ್ತಿದೀಯ?" ಶ್ರೀಹರಿ ಕೇಳಿದ.

"ಕನ್ಯಾದಾನ, ಗೋದಾನ, ಭೂದಾನ.... ಇತ್ಯಾದಿ...."

"ತಕ್ಷಣಕ್ಕೆ, ಈ ವರ್ಷದಲ್ಲೇ ಮಂಜರಿಗೆ ಮದುವೆ ಮಾಡುವ ಆಲೋಚನೆ ನನಗಿಲ್ಲ... ಅವಳಿನ್ನೂ ಚಿಕ್ಕವಳು...."

"ಪಲ್ಲವಿಗೆ ಮಾಡಬಹುದಲ್ಲ... ಆ ಬಗ್ಗೆ ಯೋಚಿಸಿದೀಯಾ ಅಚ್ಯುತ....?"

"ಇಲ್ಲ... ಇದುವರೆಗೇ ಯಾವ ಗಂಡೂ ಸಿಕ್ಕಿಲ್ಲ... ವರ್ಷದೊಳಗೇ ಆಗಿ ಹೋಗುತ್ತೆ ಅಂತ ನಾನು ಹೇಗೆ ಹೇಳ್ಲೀ?.... ಪಲ್ಲವಿ ಒಪ್ಪಬೇಕಲ್ಲ..."

"ಸರಿ ಬಿಡು...ಕನ್ಯಾದಾನದ ವಿಷಯ ಇಲ್ಲ ಅಂತಾಯ್ತು...ಭೂದಾನವೂ ಸುಲಭವಲ್ಲ.... ಗೋದಾನ ಮಾಡಬಹುದಲ್ಲ...."

"ಆ ಆಲೋಚನೆ ನನಗೂ ಇದೆ. ಆದರೆ ನೀವಿಬ್ರೂ ಏನಂತೀರೋ ಅಂತ ನಾನು ಸುಮ್ಮನಿದ್ದೆ...."

"ಯಾಕೆ? ....ಏನು ಸಮಸ್ಯೆ....?"

"ಇನ್ನೇನು ಸಮಸ್ಯೆ....? ಹಣದ್ದೇ ಸಮಸ್ಯೆ....ಎಷ್ಟು ಖರ್ಚಾಗುತ್ತೋ ಏನೋ?...ಈಗಾಗ್ಲೇ ಬೇಕಾದಷ್ಟು ಖರ್ಚಾಗಿದೆ...."

"ಖರ್ಚು ಅಂತ ಯೋಚಿಸಿದರೆ ಆಗುಲ್ಲ. ಗೋದಾನ ಒಂದನ್ನಾದ್ರೂ ಮಾಡೋಣ.... ಇದರಿಂದ ಅಮ್ಮನ ಆತ್ಮಕ್ಕೆ ಸದ್ಗತಿ ಸಿಗಲಿ. ಮೂರು ಮೂರು ಜನ ಗಂಡು ಮಕ್ಕಳು....ದಾನ ಕೊಡುವ ಸಮಯದಲ್ಲಿ ಹಿಂದು ಮುಂದೆ ನೋಡಿ ಬಿಟ್ಟರು ಅಂತ ಯಾರೂ ಅಂದ್ಕೋಬಾರದು...."

"ಅಮ್ಮ ಅಂಥೋಳಾಗಿರಲಿಲ್ಲ... ನಮ್ಮ ಪರಿಸ್ಥಿತಿ, ಸ್ಥಿತಿ, ಗತಿ ಎಲ್ಲಾ ತಿಳಿದಿತ್ತು...."

"ನೆಂಟರಿಷ್ಟರಿಗೂ ಗೊತ್ತಾಗಲಿ, ನಮಗೇನೂ ಕಡಿಮೆ ಇಲ್ಲ ಅಂತ...."

"ಅವರಿವರನ್ನು ಮೆಚ್ಚಿಸೋಕೆ ನಾವು ಮಾಡಬೇಕಾಗಿಲ್ಲ. ನಾವುಗಳೂ ತಕ್ಕ ಮಟ್ಟಿಗೆ ಅನುಕೂಲವಾಗಿದೀವಿ... ನೋಡೋಣ... ಇನ್ನೂ ಎಂಟ್ಹತ್ತು ತಿಂಗಳು ಟೈಂ ಇದೆಯಲ್ಲ...."

"ಸರಿಯಪ್ಪಾ.... ನನಗೇನಾದ್ರೂ ಒಬ್ಬಳು ಮಗಳಿದ್ದಿದ್ರೆ ಇಷ್ಟು ಹೊತ್ತಿಗೆ ಮದುವೆ ತಯಾರಿ ನಡೆಸಿರ್ತಿದ್ದೆ...."

"ಏನು ನಿನ್ನ ಮಾತಿನ ಅರ್ಥ..? ಹೇಗೂ ನಿನಗೆ ಹೆಣ್ಣು ಮಕ್ಕಳಿಲ್ಲವಲ್ಲ. ನಿನಗ್ಯಾಕೆ ಕನ್ಯಾದಾನದ ಚಿಂತೆ?"

"ನಮ್ಮ ಮನೇಲಿ ಇಬ್ಬಿಬ್ಬರು ಕನ್ಯೆಯರಿದಾರೆ.... ಆದರೂ ಈ ವರ್ಷದಲ್ಲಿ ಕನ್ಯಾದಾನ ಮಾಡುಕ್ಕೆ ಆಗುಲ್ಲವಲ್ಲ ಅಂತ.... ನಿಮ್ಮಿಬ್ಬರಿಗೂ ಏನೂ ಅನ್ನಿಸ್ತಿಲ್ವಾ?"

"ಅನ್ನಿಸೋದು ಬೇರೆ. ನಡೆಯೋದು ಬೇರೆ ರಾಮನಾಥ.... ಅಮ್ಮ ಇಷ್ಟು ಬೇಗ ಸತ್ತು ಹೋಗ್ತಾಳೆ ಅಂತ ನಾವೇನಾದ್ರೂ ಅಂದ್ಕೊಂಡಿದ್ವಾ?.... ಅಮ್ಮನ ಅಗಲಿಕೆಯ ದುಃಖವೇ ಇನ್ನೂ ಕಡಿಮೆ ಆಗಿಲ್ಲ.... ನಮ್ಮ ನಮ್ಮಲ್ಲಿ ಭಿನ್ನಾಭಿಪ್ರಾಯ ಬಂದರೆ, ಉಳಿದವರು ಅದರ ದುರುಪಯೋಗವನ್ನು ಪಡಿಸಿಕೊಳ್ತಾರೆ....ನಾವು ಮೊದಲಿನಂತೆ ಒಗ್ಗಟ್ಟಾಗಿರೋಣ.... ಅದು ಮುಖ್ಯ...."

"ಮೊದಲು ತಾನೇ ಎಲ್ಲಿ ಒಗ್ಗಟ್ಟಾಗಿದ್ವೀ? ....ಅಮ್ಮನಿಗೆ ಆ ಕೊರಗಿರಲಿಲ್ವಾ? ....ಈಗ ನಮ್ಮ ನಮ್ಮ ಸಂಸಾರವೂ ಬೆಳೆದಿದೆ.... ಭಾಗ ಮಾಡಿಕೊಳ್ಳೋಣ...."

"ಇಷ್ಟು ಬೇಗ....? ವರ್ಷವಾದ್ರೂ ಕಳೀಲಿ....ಅವಸರ ಏನು....?"

"ಅವಸರ ಏನಿಲ್ಲ. ಮಾತಿಗೆ ಬಂತು ಹೇಳಿದೆ.... ಬೇಜಾರು ಮಾಡ್ಕೋಬೇಡಿ...."

"ಪರವಾಗಿಲ್ಲ.... ಮನಸ್ನಲ್ಲಿ ಇದ್ದುದನ್ನು ಹೇಳಿದೀಯ... ಮುಂದೆ ಅದೂ ಇತ್ಯರ್ಥವಾಗಬೇಕಾದ್ದೇ... ಗೋದಾನಕ್ಕೆ ವ್ಯವಸ್ಥೆ ಮಾಡ್ತೀನಿ... ಯಾವುದಾದರೂ ಗೋವು ಸಂರಕ್ಷಣಾ ಕೇಂದ್ರದಲ್ಲಿ ಗೋದಾನ ಮಾಡೋಣ...."

"ಒಂದ್ಮಾತು ಶ್ರೀಹರಿ, ಗೋದಾನದ ಖರ್ಚು ನನಗಿರಲಿ. ಅಮ್ಮನ ಹೆಸರ್ನಲ್ಲಿ ಗೋದಾನ ಮಾಡಿದ ಪುಣ್ಯವಾದರೂ ನನಗೆ ಸಿಗಲಿ...."

"ಯಾಕಪ್ಪಾ ಅಷ್ಟು ಸ್ವಾರ್ಥತನ...?"

"ನಿಮ್ಮಿಬ್ಬರಿಗೂ ಕನ್ಯಾದಾನ ಮಾಡುವ ಭಾಗ್ಯ ಇದೆ. ಆ ಭಾಗ್ಯ ನನಗಿಲ್ಲ.... ನಿಮ್ಮಿಬ್ಬರಿಗೂ ಅದೇ ಕೊರಗು.... ಅದಕ್ಕೇ...."

"ಸರಿ, ನಿನ್ನಿಷ್ಟ.... ಆದರೆ ಅತ್ತಿಗೆಯ ಹತ್ತಿರ ಮಾತನಾಡಿ ಒಂದು ನಿರ್ಧಾರಕ್ಕೆ ಬಾ.... ನಾಳೆ ನಿಷ್ಠೂರದ ಮಾತುಗಳು ಬೇಡ...."

"ಈ ವಿಷಯ ಗುಟ್ಟಾಗಿರಲಿ... ಭಾರ್ಗವಿಗಾಗಲೀ, ಮಕ್ಕಳಿಗಾಗಲೀ ತಿಳಿಯೋದು ಬೇಡ. ನನಗೂ ಈ ಕಜಕಜೆ ಇಷ್ಟವಿಲ್ಲ...."

"ಯೋಚಿಸಿ ದೃಢ ನಿರ್ಧಾರಕ್ಕೆ ಬಾ ರಾಮನಾಥ. ನಮ್ಮದೇನೂ ಅಭ್ಯಂತರವಿಲ್ಲ. ಅಥವಾ ನಾವೂ ಹಣ ಕೊಡಬೇಕೂಂತ ಇದ್ದರೆ, ಈಗಲೇ ಹೇಳಿ ಬಿಡು... ಅತ್ತಿಗೆಯ ಕೈಯಲ್ಲಿ ಆಡಿಸುವುದು ಬೇಡ."

"ಇಲ್ಲ, ಶ್ರೀಹರಿ... ಇದು ನನ್ನ ದೃಢ ನಿರ್ಧಾರ. ಯಾವುದೇ

ಬದಲಾವಣೆಗಳಿಲ್ಲ... ನೀನು ವ್ಯವಸ್ಥೆ ಮಾಡು. ನಾನು ಚೆಕ್ ಕೊಡ್ತೀನಿ...ಎಲ್ಲರೂ ಬಸ್ ಮಾಡಿಕೊಂಡು ಹೋಗಿ ಬರೋಣ..." ರಮಾಕಾಂತ ತಮ್ಮನ ಕೈ ಹಿಡಿದು ಹೇಳಿದ.

ಮೈಸೂರಿನ ಸಮೀಪದ ಹಳ್ಳಿಯಲ್ಲಿದ್ದ ಒಂದು ಗೋ ಸಂರಕ್ಷಣಾ ಕೇಂದ್ರದಲ್ಲಿ ಮಾತನಾಡಿ, ಗೋದಾನಕ್ಕೆ ಎಲ್ಲಾ ವ್ಯವಸ್ಥೆಯನ್ನೂ ಮಾಡಿಸಲಾಗಿತ್ತು. ದಾನವನ್ನು ಸ್ವೀಕರಿಸಲು ಒಬ್ಬ ಬ್ರಾಹ್ಮಣರನ್ನು ಗೊತ್ತು ಮಾಡಿದ್ದರು. ಕೆಲವೇ ತಿಂಗಳ ಕೆಳಗೆ ಕರುವನ್ನು ಹಾಕಿದ್ದ, ಯಥೇಚ್ಛವಾಗಿ ಹಾಲನ್ನು ಕೊಡುವ ಹಸುವೊಂದನ್ನು ಖರೀದಿಸಿ, ದಿನಾಂಕವನ್ನು ಗೊತ್ತು ಮಾಡಿದ್ದರು.

ಮನೆಯವರಲ್ಲದೇ, ಹತ್ತಿರದ ಸಮೀಪದ ನೆಂಟರಿಷ್ಟರೊಂದಿಗೆ ಆ ಆಶ್ರಮಕ್ಕೆ ಹೋಗಿ ಬರಲು ವಿಶೇಷ ಬಸ್ಸೊಂದನ್ನು ಸಹ ಗೊತ್ತು ಮಾಡಿದ್ದರು. ಅಚ್ಯುತ ತನ್ನ ಹೆಂಡತಿ ಮಕ್ಕಳೊಂದಿಗೆ ಹೋಗಿ ಬರಲು ಸಿದ್ಧತೆ ಮಾಡಿಕೊಂಡಿದ್ದ. ರಾಮನಾಥನ ಮಗ ಬೇರೆ ಊರಿನಲ್ಲಿದ್ದುದರಿಂದ ಬರಲಾಗುವುದಿಲ್ಲವೆಂದು ಹೇಳಿದ್ದ. ಶ್ರೀಹರಿನ ಪರಿವಾರವೂ ಹೊರಟಿದ್ದರು. ಅವನ ಮಗಳು ತನಗೆ ಕಾಲೇಜಿಗೆ ರಜವನ್ನು ಹಾಕಿ ಬರಲಾಗುವುದಿಲ್ಲವೆಂದು ಗಲಾಟೆ ಮಾಡಿದ್ದರೂ, ಸುಗುಣ ತಿಳುವಳಿಕೆ ಹೇಳಿ ಹೊರಡಿಸಿದ್ದಳು. ಅವಳು ತನ್ನ ಇಬ್ಬರು ಸ್ನೇಹಿತೆಯರನ್ನೂ ಜತೆಯಲ್ಲಿ ಕರೆತರುವುದಾಗಿ ಹೇಳಿದಾಗ ಯಾರೂ ಬೇಡ ಎನ್ನಲಿಲ್ಲ.

ಬೆಳಗಿನ ಝಾವದಲ್ಲೇ ಎದ್ದು ಎಲ್ಲರೂ ಸಿದ್ಧರಾಗಿದ್ದರು. ಸಮಯಕ್ಕೆ ಸರಿಯಾಗಿ ಬಸ್ಸು ಮನೆಯಿಂದ ಹೊರಟಿತು. ಮಾರ್ಗ ಮಧ್ಯದಲ್ಲಿ ಕೆಲವರನ್ನು ಹತ್ತಿಸಿಕೊಳ್ಳಬೇಕಾಗಿತ್ತು. ಸುಗುಣನ ತಮ್ಮನ ಮನೆಯ ಬಳಿಗೆ ಬರುವಷ್ಟರಲ್ಲಿ ಮಂಜರಿ ತನಗೆ ತಲೆ ನೋವೆಂದು ಮಂಕಾಗಿ ಬಿಟ್ಟಿದ್ದಳು. ವಾಂತಿ ಬರುವಂತೆ ಆಗುತ್ತದೆಂದು ಹೇಳಿ ತಾನು ತನ್ನ ಸೋದರ ಮಾವನ ಮನೆಯಲ್ಲಿ ರೆಸ್ಟ್ ತೆಗೆದುಕೊಳ್ಳುವುದಾಗಿ ಹೇಳಿ ಉಳಿದುಕೊಂಡಳು. ಅವಳೊಂದಿಗೆ ಅವಳ ಸ್ನೇಹಿತೆಯರೂ ಉಳಿದುಕೊಂಡರು. ಸುಗುಣ ಆತಂಕಗೊಂಡಳು ಹಾಗೇ ಬೇಸರಗೊಂಡಳು.

ಗೋದಾನದ ಕಾರ್ಯಕ್ರಮ, ಶಾಸ್ತ್ರೋಕ್ತವಾಗಿ, ವೈಭವಯುತವಾಗಿ ನೆರವೇರಿತು.... ಕ್ಯಾಮೆರಾ ತಂದಿದ್ದವರು ಫೋಟೋಗಳನ್ನು ತೆಗೆದುಕೊಂಡರು. ಅಲ್ಲಿಯೇ ಎಲ್ಲರಿಗೂ ಊಟಕ್ಕೆ ವ್ಯವಸ್ಥೆ ಮಾಡಿದ್ದರು. ಊಟಕ್ಕೆ ಕುಳಿತಿದ್ದ ಸಮಯದಲ್ಲಿ ಸುಗುಣಳಿಗೆ, ಮಂಜರಿಯ ಸ್ನೇಹಿತೆಯಿಂದ ಫೋನು ಬಂದಿತು. ಅವಳು ಅರ್ಧ ಊಟದಲ್ಲೇ ಎದ್ದು ಗಂಡನ ಬಳಿಗೆ ಬಂದಳು.

"ಮಂಜರಿ, ಸುಸ್ತಾಗಿ ತಲೆ ತಿರುಗಿ ಬಿದ್ದು ಬಿಟ್ಟಳಂತೆ. ಅವಳನ್ನು ಹತ್ತಿರದ ಆಸ್ಪತ್ರೆಗೆ ಸೇರಿಸಿದಾರಂತೆ...ನಾವು ಈಗಲೇ ಹೊರಟು ಬಿಡೋಣ...."

"ಎಲ್ಲರ ಊಟವೂ ಮುಗಿಯಲಿ, ಹೊರಡೋಣ....ನಾನು ಆಸ್ಪತ್ರೆಗೇ ಫೋನು ಮಾಡಿ ವಿಚಾರಿಸ್ತೀನಿ...ಯಾವ ಆಸ್ಪತ್ರೆಯಂತೆ?" ಕೇಳಿದ.

"ಯಾವುದೋ ಆಸ್ಪತ್ರೆಯ ಹೆಸರನ್ನು ಹೇಳಿದಳು. ಸರಿಯಾಗಿ ಗೊತ್ತಾಗಲಿಲ್ಲ... ಅಲ್ಲಿಯೇ ಹೋಗಿ ವಿಚಾರಿಸೋಣ. ಇವರೆಲ್ಲಾ ನಿಧಾನವಾಗಿ ಬರಲಿ. ಅಲ್ಲದೇ ಎಲ್ಲರೂ ಕೆ.ಆರ್.ಎಸ್. ಗೆ ಹೋಗಿ ಬರ್ಬೇಕು ಅಂತ ಮಾತಾಡ್ತಿದ್ರು... ಆದರೆ ನನಗೆ ಈಗ ಎಲ್ಲಿಗೂ ಹೋಗುವ ಮನಸ್ಸಿಲ್ಲ...."

"ಅಷ್ಟ್ಯಾಕೆ ಆತಂಕ ಸುಗುಣ....? ಡಾಕ್ಟರು ನೋಡ್ಕೋತಾರೆ.... ಹೋಗೋಣ...."

"ನಿಮಗೆ ನನ್ನ ಆತಂಕ ಅರ್ಥವಾಗುಲ್ಲ.... ಈಗ ಒಂದೆರಡು ತಿಂಗಳು ಗಳಿಂದ ಅವಳು ಮಂಕಾಗಿದ್ದಳು. ಏನೋ ಗಂಭೀರ ಸಮಸ್ಯೆ ಇರಬಹುದು. ಆದಷ್ಟು ಬೇಗ ಹೋಗೋಣ....ನನಗೆ ತಡ ಮಾಡುಕ್ಕೆ ಇಷ್ಟವಿಲ್ಲ...."

"ಸರಿ, ಹಾಗಾದ್ರೆ ಎಲ್ರಿಗೂ ಹೇಳಿ ಬಿಡೋಣ..."

"ಬೇಡ, ಯಾರಿಗೂ ಹೇಳೋದು ಬೇಡ. ಅವರೆಲ್ಲಾ ನಿಧಾನವಾಗಿ, ಸುತ್ತಾಡಿಕೊಂಡು ಬರಲಿ. ನಾವು ಬೇರೆ ಟ್ಯಾಕ್ಸಿ ಮಾಡಿಕೊಂಡು ಹೊರಡೋಣ. ..." ಅವಳ ಕಸಿವಿಸಿಯ ಮುಖವನ್ನು ಕಂಡು ಅವನೂ ಗಂಭೀರನಾದ.... ಕೆಲವರಿಗೆ ಮಾತ್ರ ವಿಷಯವನ್ನು ತಿಳಿಸಿ, ಟ್ಯಾಕ್ಸಿಯಲ್ಲಿ ಹೊರಟರು. ಅವರೊಂದಿಗೆ ಸುಗುಣನ ತಮ್ಮ, ತಮ್ಮನ ಹೆಂಡತಿಯೂ ಹೊರಟರು.

ಅವರ ಮನೆಯ ಹತ್ತಿರದ ನರ್ಸಿಂಗ್ ಹೋಂಗೆ ಬಂದರು. ಅವರಿಗಾಗಿ ಕಾಯುತ್ತಿದ್ದ ಮಂಜರಿಯ ಸ್ನೇಹಿತೆಯರು ಅವರನ್ನು ವಾರ್ಡಿಗೆ ಕರೆದೊಯ್ದರು. ಮಂಜರಿ ನಿದ್ದೆಯನ್ನು ನಟಿಸಿದಳು. ಶ್ರೀಹರಿ ಡಾಕ್ಟರನ್ನು ಕಂಡು ಬರಲು ಹೊರ ಬಂದ. ಮಂಜರಿಯ ಸ್ನೇಹಿತೆಯರು ಅಲ್ಲಿಂದ ಹೊರಟು ಬಿಟ್ಟರು.

ಡಾಕ್ಟರ್ ಹೇಳಿದ ವಿಷಯವನ್ನು ಕೇಳಿ ಶ್ರೀನಾಥನಿಗೆ ಶಾಕ್! ಮಂಜರಿ ಎರಡು ತಿಂಗಳ ಗರ್ಭಿಣಿ!

"ಏನು ಹೇಳ್ತಿದೀರಿ ಡಾಕ್ಟರ್.... ಅವಳಿಗಿನ್ನೂ ಮದುವೆಯಾಗಿಲ್ಲ. ಇನ್ನೊಮ್ಮೆ ಸರಿಯಾಗಿ ಚೆಕಪ್ ಮಾಡಿ ಪ್ಲೀಸ್...." ವಿನಂತಿಸಿಕೊಂಡ.

"ಅನುಮಾನವೇ ಇಲ್ಲ ಮಿಸ್ಟರ್. ಇದು ಮಾರ್ನಿಂಗ್ ಸಿಕ್ ನೆಸ್.... ಬಹಳ ಸುಸ್ತಾಗಿದ್ದಳು. ಅದಕ್ಕೇ ಡ್ರಿಪ್ಸ್ ಹಾಕಿದೀವಿ.... ಅವಳ ಬಾಯ್‌ಫ್ರೆಂಡ್

ಸಹ ಅಡ್ಮಿಟ್ ಮಾಡುವಾಗ ಬಂದಿದ್ದ..."

ಶ್ರೀಹರಿ ಕೋಪ ಅಪಮಾನಗಳಿಂದ ಕೆಂಪಾದ. ಮಂಜರಿಗೆ ಬಾಯ್ ಫ್ರೆಂಡ್... ತಾನು, ಅವಳಿನ್ನೂ ಚಿಕ್ಕವಳೆಂದು ಭಾವಿಸಿದ್ದೆನಲ್ಲ... ಯಾವಾಗ ಹೀಗೆಲ್ಲಾ ಆಯಿತು?.... ಯಾಕೆ ಹೀಗಾಯ್ತು?..." ಎಂದುಕೊಂಡ.

"ನಿಮ್ಮ ಮಿಸೆಸ್ ಬಂದಿದ್ದರೆ ಅವರನ್ನು ಕರೆದುಕೊಂಡು ಬನ್ನಿ. ನಾನು ಅವರ ಹತ್ತಿರ ಮಾತನ್ನಾಡ್ತೀನಿ..." ಎಂದರು ಡಾಕ್ಟರ್ರು.... ಶ್ರೀನಾಥ ಎದ್ದ. ಸುಗುಣಳಿಗೆ ಈ ವಿಷಯ ತಿಳಿದಿತ್ತು. ಅದಕ್ಕೇ ಆತಂಕಗೊಂಡಿದ್ದಳು ಎಂದು ಕೊಂಡು, ಸುಗುಣಳ ಮೇಲೆ ಅಸಹನೆಗೊಂಡ. ವಾರ್ಡಿನೊಳಕ್ಕೆ ಬಂದು ಮಗಳ ಮುಖವನ್ನೂ ನೋಡಲು ಇಷ್ಟವಾಗಲಿಲ್ಲ. ನರ್ಸನ್ನು ಕರೆದು, ಸುಗುಣ ಳನ್ನು ಕರೆಸಿದ. ಗಂಡನ ಮುಖವನ್ನು ಕಂಡು ಅವಳು ಮತ್ತೂ ಆತಂಕ ಗೊಂಡಳು.

"ಏನಾಗಿದೆ ಮಂಜರೀಗೆ? ಡಾಕ್ಟರು ಏನಂದ್ರು?" ಗಾಬರಿಯಿಂದ ಕೇಳಿದಳು.

"ಡಾಕ್ಟರು ನಿನ್ನ ಹತ್ರ ಮಾತಾಡ್ಬೇಕಂತೆ, ಹೋಗು" ಬಿರುಸಾಗಿ ಹೇಳಿದ.

"ಯಾಕ್ರೀ ರೇಗ್ತೀರಿ? ....ಏನಾಯ್ತು ಅಂತ ಹೇಳ್ಬಾರ್ದಾ?"

"ನೀನೇ ಹೋಗಿ ತಿಳ್ಕೋ... ನಾನು ಆಚೆ ಇರ್ತೀನಿ" ಎಂದು ಹೇಳಿದ. ಸುಗುಣ ಅನುಮಾನಿಸುತ್ತಾ ಡಾಕ್ಟರಿದ್ದ ಕೋಣೆಗೆ ಬಂದಳು. ತನ್ನ ಪರಿಚಯವನ್ನು ಹೇಳಿಕೊಂಡು ಕೈ ಮುಗಿದಳು, ಕೇಳಿದಳು,

"ನನ್ನ ಮಗಳಿಗೆ ಏನಾಗಿದೆ ಡಾಕ್ಟ್ರೇ....? ಎನಿ ಸೀರಿಯಸ್ ಪ್ರಾಬ್ಲಂ..?"

"ಇಲ್ಲ, ಸೀರಿಯಸ್ ಏನಿಲ್ಲ. ಗಾಬರಿಯಾಗ್ಬೇಡಿ.... ಆದರೆ ಹೇಗೆ ಹೇಳ್ಬೇಕೋ ತಿಳೀತಿಲ್ಲ. ಅವಳಿಗೆ ಇನ್ನೂ ಮದುವೆ ಆಗಿಲ್ಲ ಅಂತ ತಿಳೀತು... ಆದಷ್ಟು ಬೇಗ ಮದುವೆ ಮಾಡಿ ಬಿಡಿ...."

"ಯಾಕೆ? ಯಾಕೆ ಡಾಕ್ಟರ್?"

"ನಿಮ್ಮ ಮಗಳು ಪ್ರೆಗ್ನೆಂಟ್ ಆಗಿದಾಳೆ...."

"ಏನು? ...ತಮಾಷೆ ಮಾಡ್ತಿದೀರಾ ಡಾಕ್ಟರ್?"

"ನಾನ್ಯಾಕೆ ತಮಾಷೆ ಮಾಡ್ಲೀ....? ಇರೋ ವಿಷಯ ಹೇಳ್ತಿದೀನಿ... ಹೌದು ಇದು ತಕ್ಷಣಕ್ಕೆ ನಂಬಲು ಕಷ್ಟವಾಗುತ್ತೆ.... ಆದರೂ, ನಿಮ್ಮ ಮಗಳು ಬಾಯ್ ಫ್ರೆಂಡ್ ಜತೆ ಸುತ್ತಾಡ್ತಿರಬಹುದು ಅನ್ನುವ ಅನುಮಾನ ನಿಮಗೆ ಬರ್ಲಿಲ್ವಾ?"

"ಇಲ್ಲ ಡಾಕ್ಟರ್.... ಮಂಜರಿ ಅಂಥವಳಲ್ಲ. ಇನ್ನೂ ಚಿಕ್ಕವಳು.

ಏನೋ ಮೋಸ ಆಗಿದೆ...." ಅವಳ ಕಣ್ಣುಗಳಲ್ಲಿ ನೀರು ತುಂಬಿಕೊಂಡಿತು.

"ಅತ್ತರೆ ಏನು ಪ್ರಯೋಜನ? ನಿಮ್ಮ ಮಗಳ ಬಾಯ್ ಫ್ರೆಂಡ್ ಸಹ ಬಂದಿದ್ದ. ಅವನೇ ಅಡ್ಮಿಟ್ ಮಾಡಿಸಿದ್ದು.... ತಮ್ಮಿಬ್ಬರ ನಡುವೆ ಸಂಬಂಧ ಇತ್ತು ಅಂತ ಅವನು ಒಪ್ಪಿಕೊಂಡಿದಾನೆ. ಇದೆಲ್ಲ ನಮಗೆ ಸಂಬಂಧಿಸಿದ ವಿಷಯ ಅಲ್ಲ... ಆದರೂ, ನಿಮಗೆ ತಿಳಿಸಬೇಕಾದದ್ದು ನನ್ನ ಕರ್ತವ್ಯ ಅಂತ ತಿಳಿಸಿದೀನಿ.... ಇನ್ನು ನಿಮಗೆ ಬಿಟ್ಟಿದ್ದು...."

"ಅಬಾರ್ಷನ್ ಆಗುವಂತೆ ಇಂಜೆಕ್ಷನ್ ಕೊಟ್ಟು ಬಿಡಿ ಡಾಕ್ಟರ್...." ಕೈ ಮುಗಿದಳು ಸುಗುಣ....

"ನಾವು ಹಾಗೆ ಮಾಡುವಂತಿಲ್ಲ. ಅವರಿಬ್ಬರೂ ಮದುವೆಯಾಗಲು ಸಿದ್ಧರಾಗಿದಾರೆ, ಮದುವೆ ಮಾಡಿ ಬಿಡಿ...."

"ಅವಳ ಓದು ಮುಗಿದಿಲ್ಲ, ಮದುವೆ ಆಗ್ಬಿಟ್ರೆ... ಎಲ್ರೂ ನಗುಲ್ವಾ?"

"ಅದನ್ನು ಮುಚ್ಚಿ ಹಾಕುವುದು ನಿಮ್ಮ ಕೈಯಲ್ಲಿದೆ.... ಅವಿವೇಕ ನಡೆದು ಹೋಗಿದೆ. ಪೇರೆಂಟ್ಸ್, ನೀವುಗಳು ಸರಿ ಮಾಡಲು ಪ್ರಯತ್ನಿಸಿ.... ಆಗದೇ ಹೋದರೆ ಆಮೇಲೆ ಅಬಾರ್ಷನ್ ಬಗ್ಗೆ ಯೋಚಿಸಿ... ಆದರೆ ಅದನ್ನೆಲ್ಲ ಈ ನರ್ಸಿಂಗ್ ಹೋಂನಲ್ಲಿ ಮಾಡುವುದಿಲ್ಲ. ಬೇರೆ ವ್ಯವಸ್ಥೆ ಮಾಡಿಕೊಳ್ಳಿ.... ಇದು ನಮಗೆ ಸಂಬಂಧಿಸಿದ್ದಲ್ಲ...."

"ಹಾಗೆನ್ನಬೇಡಿ ಡಾಕ್ಟರ್.... ಇದು ನಮ್ಮ ಮನೆಯ ಮರ್ಯಾದೆ ಪ್ರಶ್ನೆ...."

"ಮರ್ಯಾದೆ ಹೇಗೆ ಉಳಿಸ್ಕೋಬೇಕು ಅಂತ ನೀವು ಯೋಚಿಸ್ಬೇಕು.... ನೀವೇ ರಂಪ ಮಾಡಿಕೊಂಡರೆ ಎಲ್ಲರಿಗೂ ತಿಳಿದೇ ತಿಳಿಯುತ್ತೆ.... ಅದನ್ನೆಲ್ಲ ಹೇಗೆ ಮಾಡ್ತೀರೋ, ಅದು ನಿಮಗೆ ಬಿಟ್ಟದ್ದು. ಈಗ ನನಗೆ ಹೊತ್ತಾಯ್ತು.... ನಾಳೆ ಡಿಸ್ಚಾರ್ಜ್ ಮಾಡಿಸಿಕೊಂಡು ಕರ್‍ಕೊಂಡು ಹೋಗಿ...." ಆಕೆ ಹೇಳಿದಾಗ ಸುಗುಣ ವಿಧಿ ಇಲ್ಲದೇ ಎದ್ದಳು. ಮುಖ ಕಪ್ಪಿಟ್ಟು ಹೋಗಿತ್ತು. ವಾರ್ಡಿಗೆ ಬಂದು ಮಗಳೊಡನೆ ಮಾತನಾಡುವ ಮನಸ್ಸಿರಲಿಲ್ಲವಾದುದರಿಂದ ಗಂಡನನ್ನು ಹುಡುಕಿಕೊಂಡು ಬಂದಳು. ಅವಳ ತಮ್ಮನೂ ಅಲ್ಲೇ ಇದ್ದ.

"ಏನಾಯ್ತೇ ಸುಗುಣಾ? ಡಾಕ್ಟರು ಏನಂದ್ರು? ಭಾವನೂ ಕಂಗೆಟ್ಟಿದ್ದಾರೆ..."

"ಮಂಜರಿ ನಮ್ಮ ಮರ್ಯಾದೇನ ಕಳೆದು ಬಿಟ್ಲು.... ಏನು ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ...." ತಮ್ಮ ಊಹಿಸಿದ.

"ಅವಳನ್ನು ಕೊಂದು ಹಾಕಿ ಬಿಡ್ತೀನಿ...." ಶ್ರೀಹರಿ ಗುಡುಗಿದ.

"ಇಲ್ಲಿ, ಅಬಾರ್ಷನ್ ಮಾಡಿಸುಲ್ಲವಂತೆ. ನಾಳೆ ಡಿಸ್ಚಾರ್ಜ್

ಮಾಡಿಸ್ಕೊಂಡು ಹೋಗಿ ಅಂತಂದ್ರು...."

"ಅವಳು ನನ್ನ ಮನೆಗೆ ಬರುವುದು ಬೇಡ.... ಎಲ್ಲಾದ್ರೂ ಹೋಗ್ಲೀ...."

"ತಾಳ್ಮೆಯಿಂದ ಮಾತಾಡಿ ಭಾವ... ಬೇರೆಲ್ಲಿಗೆ ಹೋಗ್ತಾಳೆ... ಬೇಸರಗೊಂಡು ಆತ್ಮಹತ್ಯೆಗೆ ಪ್ರಯತ್ನ ಪಟ್ಟರೇ?"

"ಒಳ್ಳೇದೇ ಆಯ್ತು...."

"ಕೇಸು ಆಗುತ್ತೆ.... ಎಲ್ಲರಿಗೂ ತಿಳಿಯುತ್ತೆ...."

"ಹಾಗಂತ, ಈ ವಿಷಯಾನ ಮುಚ್ಚಿಡೋಕೆ ಆಗುತ್ತಾ ರವಿ? ಕೆಲವೇ ತಿಂಗಳುಗಳಲ್ಲಿ ಎಲ್ರಿಗೂ ಗೊತ್ತಾಗುತ್ತೆ?"

"ಇಬ್ರಿಗೂ ಮದುವೆ ಮಾಡಿ ಬಿಡಿ ಅಂತ ಡಾಕ್ಟರು ಹೇಳಿದರು...."

"ಮಾಡಿ ಬಿಡಿ....ಹೇಗೂ ಈ ವರ್ಷದೊಳಗೆ ಕನ್ಯಾದಾನ ಮಾಡಬೇಕು ಅಂತ ಪುರೋಹಿತರು ಹೇಳಿದ್ರಲ್ಲ...."

"ನೀನು ಸುಮ್ನಿರು ರವಿ.. ಅವನ್ಯಾರೊ ಏನೋ? ....ಮದುವೆಯಾಗಿಲ್ಲದೆ ಕದ್ದು ಇಂಥ ಕೆಲಸ ಮಾಡಿಕೊಂಡಿದಾಳೆ ಅಂತ ನೆನೆಸ್ಕೊಂಡ್ರೇ ಮೈಯಲ್ಲಾ ಥಗ ಥಗ ಅಂತ ಉರಿಯುತ್ತೆ.... ಅವಳೀಗ ಕನ್ಯೆಯಲ್ಲ... ಇಂಥಾ ಕನ್ಯಾದಾನಕ್ಕೆ ಏನು ಅರ್ಥ ಇದೆ....?"

"ಅದನ್ನೆಲ್ಲ ನಿಧಾನವಾಗಿ ಯೋಚಿಸೋಣ.... ಈಗ ಮನೆಗೆ ಹೋಗೋಣ ಬನ್ನಿ. ರಾತ್ರಿ ಮಂಜರಿಯ ಜತೆಗೆ ನನ್ನ ಹೆಂಡತಿ ಇರ್ತಾಳೆ.... ಯೋಚಿಸ್ಬೇಡಿ...."

"ಯೋಚಿಸುಕ್ಕೆ ಏನು ಬಾಕಿ ಇದೆ ರವಿ? ....ನನಗೆ ಮನೆಗೆ ಹೋಗುಕ್ಕೇ ಮನಸ್ಸಿಲ್ಲ. ಕೇಳಿದವರಿಗೆ ಏನು ಹೇಳಲಿ....?" ನಿಟ್ಟುಸಿರನ್ನು ಬಿಟ್ಟ.

"ಮನೆಯವರಿಗೆ ತಿಳಿದೇ ತಿಳಿಯುತ್ತೆ...."

"ನಿನ್ನ ಮಗಳನ್ನು ನೀನು ಸರಿಯಾಗಿ ನೋಡ್ಕೊಳ್ಳಲಿಲ್ಲ.... ಎಲ್ಲಾ ನಿನ್ನಿಂದಲೇ" ಹೆಂಡತಿಯನ್ನು ದೂಷಿಸಿದ.

"ಯಾರ ಮನೆಯ ಹೆಣ್ಣು ಮಕ್ಕಳೂ ಕಾಲೇಜಿಗೆ ಹೋಗುಲ್ವಾ? ....ಎಲ್ಲರೂ ಹೀಗೇ ಏನಾದ್ರೂ ಮಾಡ್ಕೋತಾರಾ....?"

"ನಮ್ಮ ಗ್ರಹಚಾರ... ಪಲ್ಲವಿ ಗಂಭೀರವಾಗಿ ತಾನಾಯಿತು ತನ್ನ ಕಾಲೇಜು ಓದು ಅಂತ ಇರ್ಲಿಲ್ವಾ? ....ಇವಳಿಗೇನು ಬಂತು?"

"ನಿಮ್ಮಮ್ಮನ ಮುದ್ದು ಹೆಚ್ಚಾಗಿತ್ತು... ಈಗ ಯಾರನ್ನ ಏನಂದು ಏನು ಪ್ರಯೋಜನ? ಮುಂದೇನು ಮಾಡೋದು ಅಂತ ಯೋಚಿಸಿ...."

"ನೀನು ತಾಯಿ, ನೀನು ಯೋಚಿಸು. ನನ್ನ ಕಣ್ಣೆದುರಿಗೆ ಅವಳು

ಬರೋದೇ ಬೇಡ...." ಅಷ್ಟರಲ್ಲಿ ರಾಮನಾಥ ಫೋನು ಮಾಡಿದ್ದ. ಮಂಜರಿ ಹೇಗಿದ್ದಾಳೆಂದು ವಿಚಾರಿಸಿದ. ಇವನು ಏನೋ ಒಂದು ಹೇಳಿ ಮಾತನ್ನು ತುಂಡರಿಸಿದ. ಅಷ್ಟರಲ್ಲಿ ರವಿಯ ಹೆಂಡತಿ ಅವರಿದ್ದಲ್ಲಿಗೆ ಬಂದಳು.

"ನೀವೆಲ್ಲಾ ಇಲ್ಲಿ ಇದೀರಾ? ಡಾಕ್ಟರು ಏನಂದ್ರು?" ಸುಗುಣ ಉತ್ತರಿಸುವ ಮೊದಲೇ ಶ್ರೀಹರಿ ಅಲ್ಲಿಂದ ಕದಲಿದ್ದ. ರವಿ ಅವನ ಹಿಂದೆ ನಡೆದ. ಸುಗುಣ ಕೆಳದನಿಯಲ್ಲಿ ವಿಷಯವನ್ನು ತಿಳಿಸಿದಳು.

"ಎಂಥಾ ಅವಿವೇಕ ಆಗಿ ಹೋಯ್ತು ನೋಡು ಶಾರದಾ.... ನಮಗೆ ಗೊತ್ತಾಗ್ಲೇ ಇಲ್ಲ. ಈಗ ಏನ್ಮಾಡ್ಬೇಕು ಅಂತ ತೋಚ್ತಿಲ್ಲ...."

"ಅಬಾರ್ಷನ್ ಮಾಡಿಸಿ ಬಿಡೋಣ...."

"ಇಲ್ಲಿ ಮಾಡುಲ್ಲವಂತೆ. ನಿನಗೆ ಬೇರೆ ಆಸ್ಪತ್ರೆ ಎಲ್ಲಿದೆ ಅಂತ ಏನಾದ್ರೂ ಗೊತ್ತಾ?"

"ಗೊತ್ತಿಲ್ಲ... ವಿಚಾರಿಸಿದ್ರಾಯ್ತು.... ಮಂಜರಿಯ ಫ್ರೆಂಡ್ಸ್ ಎಲ್ಲಾ ಹೊರಟು ಹೋಗಿವೆ.... ಯಾರು ಅಂತ ಕೇಳಿದ್ದಿದ್ರೆ, ಚೆನ್ನಾಗಿ ತದುಕಬಹುದಾಗಿತ್ತು...."

"ಅವನೇ ಇಲ್ಲಿಗ ಅಡ್ಮಿಟ್ ಮಾಡಿದಾನೆ.... ಅವನಿಗೆ ಫೋನು ಮಾಡಿ ಕರೆಸಿಕೊಂಡಿದಾಳೆ....ಏನೂ ತಿಳೀದ ಹುಡುಗಿ ಅಂತ ಅಂದ್ಕೊಂಡು ಮೋಸ ಹೋದೆವು...."

"ಅವನು ಮೋಸ ಮಾಡಿರಬಹುದು ಅತ್ತಿಗೆ.... ಅವನನ್ನು ಕರೆಸಿ ಮಾತಾಡಿ ಅತ್ತಿಗೆ. ಈ ಖರ್ಚನ್ನೆಲ್ಲ ಅವನೇ ಕೊಡ್ಲೀ...."

"ಹಣ ಯಾರಿಗೆ ಬೇಕಾಗಿದೆ? ಮರ್ಯಾದೆ ಉಳಿದರೆ ಸಾಕಾಗಿದೆ?"

"ಹೇಗೂ ಹದಿನೆಂಟು ವರ್ಷಗಳಾಗಿವೆಯಲ್ಲ. ಮದುವೆ ಮಾಡಿಬಿಡಿ...."

"ಮೊದಲು ಈ ಪಿಂಡಾನ ತೆಗೆಸಬೇಕು.... ಆದಷ್ಟು ಬೇಗ ಇವಳನ್ನು ಬೇರೆ ಡಾಕ್ಟರಿಗೆ ತೋರಿಸಿ ಮಾತಾಡ್ಬೇಕು...."

"ನಾಳೆ ಡಿಸ್ಚಾರ್ಜ್ ಮಾಡ್ತಾರೆ ಅಂತ ನರ್ಸು ಹೇಳಿದ್ಲು...."

"ತಕ್ಷಣಕ್ಕೆ ಇವಳನ್ನು ನಾಲ್ಕು ದಿನ ನಿಮ್ಮ ಮನೇಲಿಟ್ಕೊಂಡಿರುಕ್ಕೆ ಆಗುತ್ತಾ ಶಾರದಾ.... ನಿನ್ನ ಅಣ್ಣ ಅಂತೂ ತಲೆ ಕೆಡಿಸ್ಕೊಂಡಿದಾರೆ...."

"ಅದಕ್ಕೇನಂತೆ, ನಾನೇ ಹೇಳೋಣ ಅಂತಿದ್ದೆ. ಮಂಜರಿ ಒಂದೇ ಸಮನೆ ಅಳ್ತಿದ್ದಳು.... ಆ ಹುಡುಗನ ಹತ್ತಿರ ಮಾತಾಡ್ತಿದ್ಲು...."

"ಕಪಾಲಕ್ಕೆ ಹೊಡೆಯ ಬೇಕಾಗಿತ್ತು.... ನನಗೆ ಇವತ್ತು ಮನೆಗೆ ವಾಪಸ್ಸು ಹೋಗುವ ಮನಸ್ಸೇ ಇಲ್ಲ.... ಅಥವಾ ಇವಳ ಜೊತೆ ಇರೋಕೂ ಇಷ್ಟವಿಲ್ಲ...."

"ನಾನು ಇಲ್ಲಿ ಇರ್ತೀನಿ ಅತ್ತಿಗೆ. ನೀವು ನಿಮ್ಮ ಮನೆಗೆ ಹೋಗಿ...."

"ಇವರು ಒಂಟಿಯಾಗಿ ಬಿಡ್ತಾರಲ್ಲ. ಅಣ್ಣಂದಿರು ಅತ್ತಿಗೆಯರು ಕೇಳಿದ್ದಕ್ಕೆ ಉತ್ತರಿಸುವ ಚೈತನ್ಯ ಇವರಲ್ಲಿಲ್ಲ...."

"ಹಾಗಾದ್ರೆ ಈಗಲೇ ಎಲ್ರಿಗೂ ಹೇಳಿ ಬಿಡ್ತೀರಾ....?"

"ಮತ್ತೇನು ಮಾಡೋದು? ಅವರೂ ನಮ್ಮವರೇ.... ಎಲ್ಲಾ ತಿಳಿಸ಼್ಲೇ ಬೇಕಲ್ವಾ?.... ಬೇರೆಯವರಿಂದ ಗೊತ್ತಾದ್ರೆ ಅನ್ನದೇ ಬಿಡ್ತಾರಾ?"

"ಅದೂ ನಿಜ...." ಇಬ್ಬರೂ ಮಾತಾಡುತ್ತಾ ನಿಂತರು. ಶ್ರೀಹರಿ ಮತ್ತೆ ಬಂದ.

"ನಾನು ಮನೆಗೆ ಹೋಗ್ತಿದೀನಿ. ನೀನೇನ್ಮಾಡ್ತೀಯಾ?"

"ನಾನೂ ಬರ್ತೀನಿ..." ಇಬ್ಬರೂ ಮನೆಯ ದಾರಿಯನ್ನು ಹಿಡಿದರು.

****

"ನಾನು ನಿಮ್ಮಿಬ್ಬರ ಹತ್ರ ಮುಖ್ಯವಾದ ವಿಷಯವನ್ನು ಮಾತಾಡ್ಬೇಕು. ನನ್ನ ಆಫೀಸು ರೂಮಿಗೆ ಬನ್ನಿ" ಎಂದು ಶ್ರೀಹರಿ ತನ್ನ ಅಣ್ಣಂದಿರಿಗೆ ಫೋನಿನಲ್ಲಿ ತಿಳಿಸಿದ. ಇಬ್ಬರೂ ಅವನ ಆಫೀಸು ರೂಮಿಗೆ ಬಂದರು.

"ಇದು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ವಿಷಯ. ನೀವಿಬ್ಬರೂ ನನ್ನ ಅಣ್ಣಂದಿರು. ನಿಮಗೆ ತಿಳಿಯಲೇ ಬೇಕು ಎನ್ನುವ ಉದ್ದೇಶದಿಂದ ತಿಳಿಸುತ್ತಿದ್ದೀನಿ...." ಶ್ರೀಹರಿ ಪೀಠಿಕೆ ಹಾಕಿದ.

"ಏನಾಯ್ತು ಅಂತ ಮೊದಲು ಹೇಳು. ಏನೇ ಸಮಸ್ಯೆಯಿರಲಿ, ಒಟ್ಟಾಗಿ ಬಗೆ ಹರಿಸೋಣ. ನಮ್ಮ ಬೆಂಬಲ ನಿನ್ನೊಂದಿಗೆ ಇದೆ."

"ಮಂಜರಿಯಿಂದ ಅವಿವೇಕ ನಡೆದು ಹೋಗಿದೆ. ಅವಳು ತಾಯಿ ಯಾಗಲಿದ್ದಾಳೆ..."

"ಆಂ! ಏನು ಹೇಳ್ತಿದೀಯ? ಇದೆಲ್ಲಾ ಹೇಗೆ ನಡೆಯಿತು? ಯಾರು ಆ ಮೋಸಗಾರ....?" ರಾಮನಾಥ ಕೇಳಿದ. ಅಚ್ಯುತ ಕೈ ಕಟ್ಟಿ ನಿಂತಿದ್ದ.

"ಅವನು ಮೋಸಗಾರ ಇರಬಹುದು. ಆದರೆ ಈ ಮಂಜರಿಯೂ ನಮ್ಮ ನಂಬಿಕೆಗೆ ಮೋಸ ಮಾಡಿ ಬಿಟ್ಲು...."

"ಆಯ್ತು... ಅವಿವೇಕ ನಡೆದು ಹೋಗಿದೆ. ಅದು ಸರಿ ಹೋಗ್ಬೇಕು.... ಆದಷ್ಟು ಬೇಗ ಆಪರೇಷನ್ನೋ, ಅಬಾರ್ಷನ್ನೋ ಮಾಡಿಸಿದ್ರಾಯ್ತು...."

"ಅದಕ್ಕೆ ಡಾಕ್ಟ್ರು ಒಪ್ತಿಲ್ಲ..."

"ಅವರು ಕೇಳಿದಷ್ಟು ಹಣವನ್ನು ಕೊಡೋಣ...."

"ಹಣ ಕೊಟ್ರೂ ಮಾಡುಲ್ಲ. ಕಾನೂನು ಒಪ್ಪುಲ್ಲ...."

"ಯಾವ ಕಾನೂನು, ಮದುವೆ ಇಲ್ಲದ ಹುಡುಗಿ ತಾಯಿಯಾಗುಕ್ಕೆ ಒಪ್ಪುತ್ತೆ....? ನಾನು ಲಾಯರ್ರ ಹತ್ರ ಮಾತಾಡ್ತೀನಿ...."

"ನಾನೂ ಲಾಯರ್ರ ಹತ್ರ ಮಾತಾಡಿದೆ. ಇಬ್ಬರಿಗೂ ಆದಷ್ಟು ಬೇಗ ಮದುವೆ ಮಾಡಿ ಬಿಡಿ ಅಂತಂದ್ರು....ನಂಗೆ ದಿಕ್ಕು ತೋಚದಂತಾಗಿದೆ...."

"ಅದರಲ್ಲಿ ತಲೆ ಕೆಡಿಸಿಕೊಳ್ಳುವಂಥಾದ್ದು ಏನಿದೆ.....ಆದಷ್ಟು ಬೇಗ ಮದುವೆ ಮಾಡಿ ಬಿಡು.... ನಿನಗೆ ಕನ್ಯಾದಾನ ಮಾಡಿದ ಪುಣ್ಯ ಸಿಗುತ್ತೆ...." ಅಚ್ಯುತ ಹೇಳಿದಾಗ, ಶ್ರೀಹರಿ ಪೆಚ್ಚಾಗಿ ನಕ್ಕ.

"ತಮಾಷೆಯಾಗಿದೆ ನಿನ್ನ ಮಾತು. ಇದೆಂಥಾ ಕನ್ಯಾದಾನ? ಮೊದಲನೆಯದಾಗಿ ಅವಳೀಗ ಕನ್ಯೆಯಲ್ಲ. ಮದುವೆಗೆ ಮೊದಲೇ ಗರ್ಭಿಣಿಯಾಗಿರುವ ಯುವತಿ... ಅಲ್ಲದೇ ಈ ಮದುವೆ ನಮ್ಮಿಬ್ಬರಿಗೆ ಇಷ್ಟವಿಲ್ಲ. ಹುಡುಗ ನಮ್ಮ ಜಾತಿಯವನಲ್ಲ. ನಮಗಿಂತ ಕೆಳಜಾತಿಯವನು...."

"ಏನಂದೇ? ಕೆಳಜಾತಿಯವನಾ? ಇಂಥೋನ ಜೊತೆ ನಿನ್ನ ಮಗಳಿಗೆ ಸ್ನೇಹ ಹೇಗೆ ಬೆಳೀತು? ಇಲ್ಲಿಯವರೆಗೆ ಹೇಗೆ ಬಂತು? ....ನಮ್ಮ ವಂಶ, ನಮ್ಮ ಸಂಪ್ರದಾಯ, ಆಚಾರ ವಿಚಾರ ಇದನ್ನೆಲ್ಲ ಮರೆತು ಬಿಟ್ಲಾ ನಿನ್ನ ಮಗಳು?" ರಾಮನಾಥ ಸಿಡಿದು ನುಡಿದ.

"ಅವಿವೇಕ ನಡೆಯುವದೇ ಹೀಗೆ.... ಜಾತಿ ಮತ, ಆಚಾರ ಸಂಪ್ರದಾಯಗಳು ನೆನಪಿಗೆ ಬಂದಿಲ್ಲದೇ ಇರುವುದರಿಂದಲೇ ಈ ಪರಿಸ್ಥಿತಿ ಬಂದಿದೆ.... ಈಗ ಇದನ್ನು ಸರಿ ಮಾಡಬೇಕಾದ ಕರ್ತವ್ಯ ನಮ್ಮದು. ಮದುವೆ ಮಾಡಿ, ಮರ್ಯಾದೆಯನ್ನು ಕಾಪಾಡಿಕೊಳ್ಳೋಣ. ಬೇರೆ ದಾರಿಯೇ ಇಲ್ಲ..." ಅಚ್ಯುತ ನುಡಿದದ್ದು ಇಬ್ಬರಿಗೂ ಸರಿ ಹೋಗಿರಲಿಲ್ಲ.

"ನಾನು ಅವಳ ಹತ್ರ ಮಾತಾಡಿ, ಅಬಾರ್ಷನ್‌ಗೆ ಒಪ್ಪಿಸ್ತೀನಿ. ಆಮೇಲೆ ಅವನ ಮೇಲೆ ಕಂಪ್ಲೆಂಟ್ ಕೊಡೋಣ... ಅವನನ್ನು ಸುಮ್ಮನೆ ಬಿಡಬಾರದು...." ರಾಮನಾಥನೆಂದ.

"ಅವಳೀಗ ರವಿಯ ಮನೇಲಿದಾಳೆ.... ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿಸ್ಕೊಂಡು ಅಲ್ಲಿಗೆ ಕರೆದ್ಕೊಂಡು ಹೋಗಿದಾರೆ...."

"ನಾನೂ ಭಾರ್ಗವೀನೂ ಕರ್ಕೊಂಡು ಹೋಗ್ತೀನಿ. ಇಬ್ಬರೂ ಸೇರಿ ಅವಳಿಗೆ ತಿಳುವಳಿಕೆ ಹೇಳ್ತೀವಿ..."

"ಬೇಡ ರಾಮನಾಥ. ನೀನೊಬ್ಬನೇ ಹೋಗಿ ಮಾತಾಡು. ಭಾರ್ಗವಿ ಬೇಡ. ಈಗಲೇ ಭಾರ್ಗವಿಗಾಗಲೀ, ಜಲಜಂಗಾಗಲೀ ತಿಳಿಯೋದು ಬೇಡ...." ಅಚ್ಯುತನೆಂದ.

"ಅವರೂ ಮನೆಯೋರೇ.... ತಿಳಿಸದಿದ್ರೆ ನಾಳೆ ಅವರು ನಮ್ಮನ್ನೇ ಅಂತಾರೆ...."

"ಈಗ್ಲೇ ತಿಳಿಸೋದು ಬೇಡ ಅಂತ ನಂಗನ್ನುತ್ತೆ. ಇನ್ನು ನಿನ್ನಿಷ್ಟ...."

"ನಮ್ಮಲ್ಲೇ ಒಮ್ಮತವಿಲ್ಲ. ಶ್ರೀನಾಥಂಗೆ ನಮ್ಮ ಸಹಕಾರ ಸಿಗೋದಾದ್ರೂ ಹೇಗೆ? ನಿನ್ನ ಮನಸ್ನಲ್ಲಿ ಏನಿದೆ? ಸರಿಯಾಗಿ ಹೇಳು...."

"ನಾನೂ ಒಬ್ಬ ಮಗಳಿಗೆ ತಂದೆ. ಅವಳಿಗೆ ಮದುವೆಯ ವಯಸ್ಸು ಮೀರಿದೆ. ಅವಳು ತನ್ನ ಪ್ರಾಯದ ಕಾಲದಲ್ಲಿ ಯಾರನ್ನಾದ್ರೂ ಪ್ರೀತಿಸಿದೀನಿ ಅಂತ ಹೇಳಿದ್ದರೆ, ನಾನು ಅವರಿಬ್ಬರ ಮದುವೆಗೆ ಒಪ್ಪುತ್ತಿದ್ದೆ.... ಆದರೆ ಆ ಧೈರ್ಯ ಪಲ್ಲವಿಗಿರಲಿಲ್ಲ. ಮಂಜರಿ ಮುಂದುವರೆದ ಹೆಣ್ಣು....ಅವಳ ಇಷ್ಟಕ್ಕೆ ಬೆಲೆ ಕೊಡೋಣ... ಇಲ್ಲದಿದ್ದರೆ, ಹೆಣ್ಣು ಮಕ್ಕಳ ಮನಸ್ಸು ಬಹಳ ಸೂಕ್ಷ್ಮ..."

"ಅವಳು ಆತ್ಮಹತ್ಯೆ ಮಾಡ್ಕೊಳ್ತೀನಿ ಅಂತ ಹೆದರಿಸಿದ್ರೆ ನಾನು ಹೆದರೋಲ್ಲ...."

"ಹೋಗಲಿ... ಸುಗುಣಳ ಮನಸ್ನಲ್ಲಿ ಏನಿದೆ?"

"ಕಂಗಾಲಾಗಿದಾಳೆ... ಅತ್ತೂ ಅತ್ತೂ ಸೊರಗಿ ಹೋಗಿದಾಳೆ, ಮಂಜರಿಯನ್ನು ದ್ವೇಷಿಸ್ತಾಳೆ...."

"ಇದೇ ತಪ್ಪು ಶ್ರೀಹರಿ... ದ್ವೇಷಿಸಿದ್ರೆ ತಿದ್ಕೋತಾಳಾ? ....ನಡೆದದ್ದೆಲ್ಲ ಸರಿ ಹೋಗುತ್ತಾ....?"

"ಅಚ್ಯುತ ಹೇಳ್ತಿರೋದು ಸರಿ ಕಾಣ್ತಿಲ್ಲ.... ನಾಲ್ಕು ದಿನ ಅವಳ ಪಾಡಿಗೆ ಅವಳನ್ನು ಬಿಡೋಣ.... ಅವಳಿಗೇ ತಾನು ಮಾಡಿದ್ದು ತಪ್ಪು ಅಂತ ಅನ್ನಿಸಿ, ಅಬಾರ್ಷನ್‌ಗೆ ಖಂಡಿತಾ ಒಪ್ತಾಳೆ....ಆ ನಂಬಿಕೆ ನನಗಿದೆ...." ರಾಮನಾಥನೆಂದ.

"ಸುಗುಣ ತುಂಬಾ ಕುಗ್ಗಿ ಹೋಗಿದಾಳೆ. ಮಂಜರಿ ಹೀಗೆ ಮಾಡ್ಕೋಬಾರ್ದಾಗಿತ್ತು...." ಜಲಜ ಗಂಡನೊಡನೆ ಹೇಳಿದಾಗ ಅವನು ಕಕ್ಕಾಬಿಕ್ಕಿ.

"ಮಂಜರಿ ಏನ್ಮಾಡಿದ್ಲು?...ಯಾವ ವಿಷಯ...?" ಪೆದ್ದನಂತೆ ಕೇಳಿದ.

"ಆಹಾಹಾ... ಏನೂ ಗೊತ್ತಿಲ್ಲದೋರ ಥರ ಆಡ್ಬೇಡಿ. ಶ್ರೀಹರಿ ನಿಮಗೆ ಹೇಳಿಲ್ವಾ?.... ಮಂಜರಿ ಬಸಿರಿಯಂತೆ.... ನಿಮ್ಮಮ್ಮನ ಆತ್ಮಕ್ಕೆ ಸದ್ಗತಿ ಸಿಕ್ತು..." ವ್ಯಂಗ್ಯವನ್ನಾಡಿದಳು.

"ಜಲಜಾ? ಹೀಗೆಲ್ಲಾ ಆಡ್ಕೋಬೇಡ....ಮಂಜರಿಗೆ ತಿಳುವಳಿಕೆ ಇದ್ದಿದ್ರೆ ಹೀಗಾಗ್ತಿತ್ತಾ?.... ಅವಿವೇಕ ನಡೆದಿದೆ ಅಷ್ಟೇ...."

"ಅವಿವೇಕ ನಡೆದಿದೆ, ಪರಿಣಾಮ ಹೀಗಾಗಿದೆ. ಅನುಭವಿಸೋರು

ನಾವು, ಕೇಳಿದ್ದೋರ್ಗೆ ಏನು ಹೇಳ್ತೀರಿ?"

"ಮದುವೆ ನಡೆದು ಹೋದ್ರೆ ಯಾರೂ ಏನೂ ಕೇಳುಲ್ಲ...."

"ವರ್ಷದೊಳಗೇ ಕನ್ಯಾದಾನ ಮಾಡಿ ಪುಣ್ಯ ಗಳಿಸ್ತೀರಾ?...."

"ಹಂಗಿಸಿ ಮಾತಾಡ್ಬೇಡ ನೀನು.... ಮಂಜರಿ ಬೇಸರ ಪಟ್ಕೊಂಡು ಆತ್ಮಹತ್ಯೆ ಮಾಡ್ಕೊಂಡ್ರೆ? ಅದರ ಶಾಖ ನಮಗೆಲ್ಲಾ ತಟ್ಟುತ್ತೆ.... ಪಲ್ಲವಿಗೆ ಮದುವೆ ಮಾಡುಕ್ಕೆ ಆಗ್ಲಿಲ್ಲ.... ಈಗ ಇವರಿಬ್ಬರ ಸಂಬಂಧವನ್ನು ತಪ್ಪಿಸುವುದು ಪಾಪ ಅಂತ ನನಗನ್ನಿಸುತ್ತೆ...."

"ಸರಿ, ಏನು ಬೇಕಾದ್ರೂ ಮಾಡ್ಕೊಳ್ಳಿ.... ಅವಳಿಗೆ ಹುಟ್ಟುವ ಮಗುವನ್ನು ಎತ್ಕೊಂಡು ಮುದ್ದಾಡಿ ನಂಗೇನು? ....ಬೇರೆ ಯಾರಿಗೂ ಮದುವೆಯಿಲ್ಲ, ಇವಳಿಗೆ ಅರ್ಜೆಂಟಿತ್ತು ಮಗೂನ ಹೆರೋಕೆ?"

"ಹೀಗೆಲ್ಲಾ ಮಾತಾಡ್ಬೇಡ, ಸುಗುಣ ಏನಂದ್ಕೊಳ್ತಾಳೆ?......"

"ಅವಳು ಹೊಟ್ಟೆ ಸಂಕಟದಿಂದ ಒದ್ದಾಡ್ತಿದಾಳೆ...."

"ಅವಳ ಆರೋಗ್ಯ ಕೆಟ್ಟು ಹೋಗುತ್ತೆ. ನೀನಾದ್ರೂ ತಿಳುವಳಿಕೆ ಹೇಳ್ಬಾರ್ದಾ?"

"ನಾನು ಯಾರಿಗೂ ತಿಳುವಳಿಕೆ ಹೇಳುಲ್ಲ. ಮೊದಲ್ನಿಂದ ಅತ್ತೆಗೆ ಅವಳು ಅಚ್ಚು ಮೆಚ್ಚಿನ ಸೊಸೆ. ಈಗ ಮೊಮ್ಮಗಳು ಅಜ್ಜಿಗೆ ಸರಿಯಾದ ಮರ್ಯಾದೆಯನ್ನೇ ಕೊಡ್ತಿದಾಳೆ... ಪಲ್ಲವಿ ಏನಾದ್ರೂ ಹೀಗೆ ಮಾಡಿದ್ರೆ ಬಾಯಿಗೆ ಬಂದ ಹಾಗೆ ಆಡ್ಕೊಂಡು ನಗ್ತಿದ್ರೋ ಇಲ್ವೋ...."

"ಇಂಥಾ ವಿಷಯಕ್ಕೆ ಮನೆ ಮನೆಯೋರೇ ಆಡ್ಕೊಂಡು ನಗ್ತಾರಾ? ....ಒಟ್ಟಾಗಿ ಸಮಸ್ಯೆಯನ್ನು ಎದುರಿಸ್ಬೇಕು. ಇದೆಲ್ಲಾ ನಿಂಗೆಲ್ಲಿ ಅರ್ಥವಾಗುತ್ತೆ?...." ಹೆಂಡತಿಯ ಮೇಲೆ ಗದರಿ, ತನ್ನ ಪಾಡಿಗೆ ತಾನು ಪಕ್ಕಕ್ಕೆ ತಿರುಗಿ ಮಲಗಿದ.

"ಆಹಾ! ನಂಗೆ ಏನೂ ಅರ್ಥವಾಗುಲ್ಲ.... ಸ್ವಂತ ಮಗಳ ಮದುವೆಗೆ ಯಾವ ಆಸಕ್ತಿಯೂ ಇಲ್ಲ.... ಈಗ ಬೇರೆಯವರ ಮಗಳಿಗೆ ಮದುವೆ ಮಾಡಿಸುಕ್ಕೆ ಆತುರದಿಂದ ಹೊರಟಿದೀರಲ್ಲ, ನಿಮಗೆ ಏನೂ ಅನ್ನಿಸೋಲ್ವಾ?"

"ಯಾಕೆ ಅನ್ನಿಸೋಲ್ಲ....?" ಅಚ್ಯುತ ಇತ್ತ ತಿರುಗಿದ. ನೀವು ತಾಯಿ ಮಗಳು ಒಂದಾಗಿ ಯಾವ ಗಂಡನ್ನೂ ಒಪ್ಪದಿದ್ರೆ ನಾನು ಏನು ಮಾಡುಕ್ಕಾಗುತ್ತೆ....?"

"ಹಾಗಾದ್ರೆ, ಮೊದಲು ಪಲ್ಲವಿಗೆ ಒಬ್ಬ ವರನನ್ನು ಹುಡುಕಿ, ನಾನು ಏನಾದ್ರೂ ಮಾತಾಡಿದ್ರೆ ಕೇಳಿ.... ನಾನು ಪಲ್ಲವೀನ ಒಪ್ಪಿಸ್ತೀನಿ...."

"ಈಗ ಪಲ್ಲವಿಗೆ ವಯಸ್ಸಾಗಿದೆ. ಸುಲಭವಾಗಿ ವರ ಎಲ್ಲಿ ಸಿಗ್ತಾನೆ?"

"ಮಂಜರಿ ಬಗ್ಗೆ ತೋರಿಸೋ ಆಸಕ್ತೀನಾ, ನಿಮ್ಮ ಮಗಳ ಬಗ್ಗೆಯೂ ತೋರಿಸಿ ಯಾಕಾಗುಲ್ಲ....?"

"ಮಂಜರಿ, ಅವಳೇ ತಾನೇ ಒಬ್ಬ ಹುಡುಗನ್ನ ನೋಡ್ಕೊಂಡಿದಾಳೆ. ನಿನ್ನ ಮಗಳಿಗೂ ಹಾಗೇ ಮಾಡುಕ್ಕೆ ಹೇಳು....ನಾನು ಕನ್ಯಾದಾನ ಮಾಡ್ತೀನಿ...."

"ಒಳ್ಳೇ ಕನ್ಯಾದಾನದ ಹುಚ್ಚು ನಿಮಗೆ....ಮಂಜರಿ ಕನ್ಯೆಯಾಗಿ ಉಳಿದಿದಾಳಾ? ತಾಯಿಯಾಗ್ತಿದಾಳೆ.... ತಾಯೀ....?"

"ಕಿರುಚ್ಬೇಡ.... ನಂಗೂ ಗೊತ್ತು.... ಮರ್ಯಾದೆ ಹೋಗುವ ಮೊದಲು ಮದುವೆ ಮಾಡಿ ಕೈ ತೊಳ್ಕೊಳ್ಳೋಣ ಅಂತಂದೆ. ಇದು ತಪ್ಪಾ?"

"ಏನು ಕೈ ತೊಳ್ಕೊಳ್ಳೋದು? ಅವನು ನಾಯಕರ ಜಾತಿಯವನಂತೆ. ಮೀನು, ಮಾಂಸ ತಿಂತಾನೆ. ಕುಲಗೆಟ್ಟು ಹೋಯ್ತು ನಿಮ್ಮ ವಂಶ.... ನಿಮ್ಮ ಪಿತೃಗಳ ಆತ್ಮ ಲಬ ಲಬ ಅಂತಿರುತ್ತೆ...."

"ಬಾಯ್ಮುಚ್ಚು.... ಏನೇನೋ ಮಾತಾಡ್ಬೇಡ.... ಆದದ್ದಾಗಿದೆ. ಅದನ್ನು ಸರಿಪಡಿಸೋಣ ಅಂತ ಹೇಳ್ದೆ. ಮನೆಗೆ ಹಿರಿಯವನು ಅಂತ ನನಗೆ ಬೆಲೆ ಕೊಟ್ಟು ಮಾತಾಡ್ತಾರೆ. ಅದರಿಂದ ನಿಂಗೇನು ತೊಂದರೆ....?"

"ತೊಂದರೆ ನನಗೆ ಏನೂ ಇಲ್ಲ. ಎಲ್ಲಾ ತೊಂದರೆ ನಿಮ್ಮ ಮನೆಗೇ. ಭಾರ್ಗವಿಗೆ ಮೊದಲೇ ಅಹಂಕಾರ. ತಿಳಿದ್ರೆ ಸುಮ್ಮನಿರ್ತಾಳಾ? ಟಾಂ ಟಾಂ ಹೊಡೆದ್ಕೊಂಡು ಬರ್ತಾಳೆ...."

"ಕೇಳೋ ಜನ ನಾಲ್ಕು ದಿನ ಕೇಳಿಸ್ಕೊಳ್ತಾರೆ. ಹಳೇದಾದ ಮೇಲೆ ಸುಮ್ಮನಾಗ್ತಾರೆ. ನೀನು ಭಾರ್ಗವಿಗೆ ಏನೂ ಹೇಳ್ಬೇಡ...."

"ನನಗೂ ಅವಳಿಗೂ ಮಾತೇ ಇಲ್ಲ...."

"ಸುಗುಣನ್ನ ಸ್ವಲ್ಪ ಗಮನಿಸು.... ಒಬ್ಬಳೇ ಆಗಿ ಬಿಡ್ತಾಳೆ....ಮಗಳು ಹೀಗೆ, ಶ್ರೀಹರಿನೋ ಕೋಪಿಷ್ಠ. ಏನಾದ್ರೂ ಹೆಚ್ಚು ಕಡಿಮೆ ಮಾಡ್ಕೊಂಡಾಳು...."

"ಸುಮ್ನೇ ಅಳ್ತಾಳೆ.... ಏನ್ಮಾತಾಡೋದು?" ಗೊಣಗಿಕೊಂಡು ಮಲಗಿದಳು.

"ನನ್ನ ಹತ್ರಾನೇ ಎಲ್ಲಾ ಮುಚ್ಚಿಡ್ತೀರಿ....? ಮಂಜರಿ ವಿಷಯಾನ ನಂಗೆ ಯಾಕೆ ಹೇಳ್ಲಿಲ್ಲ....?" ಭಾರ್ಗವಿ ಘಟ್ಟಿಸಿ ಕೇಳಿದಳು.

"ಯಾವ ಮಂಜರಿ?" ರಮಾಕಾಂತ ನಟಿಸಿದ.

"ಎಷ್ಟು ಜನ ಮಂಜರಿಯರಿದಾರೆ ಈ ಮನೇಲಿ? ಯಾವೋನ ಜತೆಯೋ ಸಂಬಂಧವನ್ನಿಟ್ಟುಕೊಂಡು ಈಗ ಪ್ರೆಗ್ನೆಂಟ್ ಅಂತೆ...."

"ನಿಂಗ್ಯಾರು ಹೇಳಿದ್ರು....?" ಗಾಬರಿಯಿಂದ ಪ್ರಶ್ನಿಸಿದ.

"ನಿಮ್ಮ ನಾದಿನಿ, ನಿಮ್ಮ ಅತ್ತಿಗೆಯ ಹತ್ತಿರ ಅತ್ಕೊಂಡು ಹೇಳ್ತಿದ್ದುದನ್ನು ನಾನು ಕೇಳಿಸ್ಕೊಂಡೆ...."

"ಮಾತನ್ನು ಕದ್ದು ಕೇಳಿಸಿಕೊಳ್ಳುವ ಚಪಲ ಯಾಕೆ ಅಂತ....?"

"ಮಾತನ್ನು ಮರೆಸ್ಬೇಡಿ.... ಶ್ರೀಹರಿ ಹೇಳಿಲ್ವಾ ನಿಮ್ಗೆ....?"

"ಹೂಂ, ಹೇಳ್ದ. ನೀನು ಮೆಲ್ಲಗೆ ಮಾತಾಡು. ಮಕ್ಕಳಿಗೆ ಗೊತ್ತಾಗ ಬಾರ್ದು...."

"ಗೊತ್ತಾಗ್ಲಿ ಬಿಡಿ.... ಅವಳೇನು ಹೊರಗಿನವಳಾ? ....ಅಲ್ಲಾ ಎಷ್ಟು ಧೈರ್ಯ ಅವಳಿಗೆ.... ಮೊನ್ನೆ ತಾನೇ, ಇನ್ನೂ ಚಿಕ್ಕವಳು.... ಬಾಯಿಗೆ ಬೆರಳಿಟ್ಟರೆ ಕಚ್ಚೋಕೆ ಬರುಲ್ಲ, ಅಷ್ಟು ಮುಗ್ಧೆ ಅಂತ ಹೇಳ್ಕೊಂಡ್ರೀ...."

"ಹಾಗೇನೂ ಹೇಳಲಿಲ್ಲ ನಾನು. ಬಿಡು ಅದು ಅವರಿಗೆ ಸಂಬಂಧಿಸಿದ ವಿಷಯ...."

"ಯಾಕೆ? ನಮಗೆ ಸೇರಿದ ವಿಷಯ ಅಲ್ವಾ? ....ನಾಳೆ ನನ್ನ ಮಗ ಯಾರೋ ಇತರೇ ಜಾತಿಯವಳನ್ನು ಪ್ರೀತಿಸ್ತಿದೀನಿ ಅಂತ ಹೇಳಿ, ಅವಳನ್ನೇ ಮದುವೆಯಾಗ್ತೀನಿ ಅಂತ ಹಠ ಹಿಡಿದ್ರೆ ಏನ್ಮಾಡ್ತೀರಿ?"

"ಮಂಜರಿಗೆ, ತಿಳುವಳಿಕೆ ಇಲ್ಲದ ವಯಸ್ಸು, ಅವಿವೇಕ ನಡೆದಿದೆ.... ನಿನ್ನ ಮಗ ತಿಳಿದೂ ತಿಳಿದೂ ಎಡವಟ್ಟು ಮಾಡಿದ್ರೆ, ಅವನಿಗೆ ಈ ಮನೇಲಿ ಜಾಗವಿಲ್ಲ...."

"ಒಬ್ಬರಿಗೊಂದು ನ್ಯಾಯ; ಇನ್ನೊಬ್ಬರಿಗೆ ಇನ್ನೊಂದು ನ್ಯಾಯ ವೇನ್ರೀ.....?"

"ಮಂಜರಿ ಮದುವೆ ಮಾಡ್ಕೊಂಡು, ಈ ಮನೆಯಿಂದ ಹೊರಕ್ಕೆ ಹೋಗ್ತಾಳೆ.... ಆದರೆ ನಿನ್ನ ಮಗನ ಹೆಂಡತಿ.... ಇಲ್ಲಿಗೇ ತಾನೇ ಬರೋದು...?"

"ಹಾಗಾದ್ರೆ ಮಂಜರಿ ಸಂಬಂಧ ಕಡಿದು ಹೋಗುತ್ತಾ? ಅವಳ ಗಂಡನ್ನ ಈ ಮನೆಗೆ ನೀವ್ಯಾರೂ ಸೇರಿಸುಲ್ವಾ?"

"ಅದ್ಹೇಗೆ ಸೇರಿಸೋದು ಭಾರ್ಗವಿ? ....ನಾವು ಸಂಪ್ರದಾಯಸ್ಥರು. ಅವರ ಸಂಪ್ರದಾಯವೇ ಬೇರೆ.... ಏನಾದ್ರೂ ಮಾಡ್ಕೊಳ್ಳಲಿ ನಮ್ಗೇನು?"

"ನನಗೇನಾದ್ರೂ ಇಂಥಾ ಒಬ್ಬಳು ಮಗಳಿದ್ದಿದ್ರೆ, ಕೈ ಕಾಲು ಕಟ್ಟಿ, ದನದ ಕೊಟ್ಟಿಗೇಲಿ ಕಟ್ಟಿ ಹಾಕ್ತಿದ್ದೆ. ಮೊದಲು ಫ್ರೀಯಾಗಿ ಬಿಟ್ರು.... ಸರಿಯಾಗಿ ಕೈ ಕೊಟ್ಲು. ಈಗ ಅದ್ಯಾಕೆ ತಮ್ಮನ ಮನೇಲಿ ಬಿಟ್ಟಿದಾರೆ....?"

"ನಂಗೊತ್ತಿಲ್ಲ, ನೀನೇ ಕೇಳ್ಬಹುದಾಗಿತ್ತಲ್ಲ...."

"ಕೇಳಿದ್ರೆ ಹೇಳ್ಬೇಕಲ್ಲ. ಅಬಾರ್ಷನ್ ಮಾಡಿಸಿರಬಹುದು.... ರೆಸ್ಟ್

ಗೋಸ್ಕರ ಅಲ್ಲಿ ಬಿಟ್ಟಿರಬಹುದು...."

"ಇರಬಹುದು...."

"ಸಾಕು, ಈ ಜಾಣತನದ ಮಾತು. ಎಲ್ಲಾ ಗೊತ್ತಿದ್ದೂ ನಾಟ್ಕ ಆಡ್ಬೇಡಿ...."

"ಇಲ್ಲಾ ಭಾರ್ಗವಿ, ನಾನೇಕೆ ನಾಟ್ಕ ಆಡ್ಲಿ? ಶ್ರೀಹರಿ ಹೇಳಿದ್ದು ನಿಜ, ನಾನು ಸುಮ್ಮನೇ ಕೇಳಿಸ್ಕೊಂಡೆ.... ಅಚ್ಯುತನೇ ವಿಪರೀತ ಮಾತಾಡಿದ್ದು...."

ಭಾರ್ಗವಿ ಗೊಳ್ ಅಂತ ನಕ್ಕಳು.... "ಯಾರು? ಅಚ್ಯುತ ಭಾವಾನಾ.... ಅವರ ಮಗಳು ವೃದ್ಧ ಕುಮಾರಿಯಾಗಿಯೇ ಕೂತಿದ್ದಾಳೆ.... ಅದನ್ನು ಮರೆತು ಮಾತಾಡಿದ್ರಾ?... ತಮಾಷೆಯಾಗಿದೆ. ಮಂಜರಿ ಮಾಡಿದ್ದು ತಪ್ಪು ಅಂತಂದ್ರೋ... ಸರಿ ಅಂತಂದ್ರೋ...."

"ಸರಿ ಅಂತ ಯಾರಿಗನ್ಸುತ್ತೆ?.... ಆದರೆ ಮುಂದೆ ಮಂಜರಿಯ ಗತಿ ಏನು ಅನ್ನೋ ಚಿಂತೆ ಎಲ್ರಿಗೂ... ನಿಂಗೇನನ್ಸುತ್ತೆ?"

"ನಿಜ ಹೇಳ್ಲಾ? ....ಮಂಜರಿ ಮಾಡಿದ್ದು ತಪ್ಪೇನಲ್ಲ. ಈ ಕಾಲವೇ ಹಾಗಿದೆ.... ಆ ಹುಡುಗ ಇವಳಿಗೆ ತಕ್ಕವನಾಗಿದ್ರೆ, ಜಾತಿ ಯಾವುದಾದ್ರೇನು? ಕುಲ ಯಾವುದಾದ್ರೇನು? ....ಜೈ ಅಂತ ಮದುವೆ ಮಾಡಿ ಕಳಿಸೋದು...."

"ಶ್ರೀಹರಿ ಇದಕ್ಕೆ ಒಪ್ಪುಲ್ಲ. ಅವನಿಗೆ ಮಗಳಿನ ಮೇಲೆ ಭಾರೀ ಸಿಟ್ಟು. ನಾನೇನು ಮದುವೆ ಮಾಡ್ತಿರ್ಲಿಲ್ವಾ? ಇವಳಿಗೆ ಅರ್ಜೆಂಟೇನಿತ್ತು ಅಂತ ಅತ್ತ...."

"ಈಗ ಅತ್ತರೆ ಏನು ಪ್ರಯೋಜನ? ಮೊದಲ್ನಿಂದ ಹದ್ದು ಬಸ್ತಿನಲ್ಲಿಟ್ಟು ಕೊಳ್ಳಬೇಕಾಗಿತ್ತು. ಸರಿಯಾಗಿ ಬುದ್ಧಿ ಕಲಿಸಿದ್ಲು.... ಇಷ್ಟಕ್ಕೆಲ್ಲ ನಿಮ್ಮ ಅಮ್ಮನೇ ಕಾರಣ... ಮುದ್ದು ಮಾಡೀ ಮಾಡೀ.... ಕೆಡಿಸಿಬಿಟ್ಟರು.... ಈ ವರ್ಷದೊಳಗೇ ಮದುವೆ ಮಾಡಿ ಮುಗಿಸುಕ್ಕೆ ಹೇಳಿ. ವರ್ಷದೊಳಗೇ ಮರಿ ಮಗ ಹುಟ್ತಾನೆ.... ಆ ಪುಣ್ಯವಾದರೂ ಸಿಗಲಿ...."

"ಇದು ತಮಾಷೆಯ ವಿಷಯವಲ್ಲ ಭಾರ್ಗವಿ.. ಮಂಜರಿ ಈ ಮನೆಯ ಮಗಳು. ಅವಳ ಒಳಿತು ಕೆಡುಕು ನಮ್ಮೆಲ್ಲರಿಗೂ ಸೇರಿದ್ದು.... ನಿನಗೂ ಆ ಹುಡುಗಿಯ ಮೇಲೆ ಯಾವ ದ್ವೇಷವೂ ಇಲ್ಲ, ಒಲವಿದೆ ಅಲ್ವಾ?"

"ನಮಗೆ ಹೆಣ್ಣು ಮಕ್ಕಳಿರಲಿಲ್ಲ.... ಅವಳನ್ನು ಆಸೆಯಿಂದ ಮುದ್ದಾಡ್ತಿದ್ದೆ. ಹೀಗೆ ಮಾಡ್ಕೋತಾಳೆ ಅಂತ ಗೊತ್ತಿದ್ದಿದ್ರೆ, ನಾಲ್ಕು ಏಟು ಹಾಕಿ ತಿಳುವಳಿಕೆ ಹೇಳ್ತಿದ್ದೆ...."

"ಈಗ ನೀನು ಹೋಗಿ ಮಾತನಾಡಿಸು. ಆ ಹುಡುಗಿಗೆ ಖುಷಿ ಯಾಗುತ್ತೆ...."

"ನಾನ್ಹೇಗ್ರೀ ಹೋಗ್ಲೀ.... ಶ್ರೀಹರಿಗೆ ಗೊತ್ತಾದ್ರೆ ಬೈತಾನೆ ಅಷ್ಟೇ...."

"ನಾನು ಅದಕ್ಕೆ ವ್ಯವಸ್ಥೆ ಮಾಡ್ತೀನಿ.... ಮಾತಾಡಿಸ್ತೀಯಾ?"

"ಹೂಂ, ನೋಡೋಣ...."

"ನೋಡೋಣ ಅಲ್ಲ, ಮಾತಾಡು.... ಯಾಕೆ ಹೀಗಾಯ್ತು? ....ಅವನೇನಾದ್ರೂ ಹೆದರಿಕೆ ಬೆದರಿಕೆ ಹಾಕಿದ್ನಾ?..... ಮೋಸ ಮಾಡಿದ್ನಾ ಅಂತ ಕೇಳಿ ತಿಳ್ಕೋ...."

"ಹೇಳದೇ ಇದ್ದರೆ....?"

"ಸ್ವಂತ ತಾಯಿ ಸುಗುಣ ಮಾತಾಡ್ಸಿಲ್ಲ. ಅವಳಿಗೆ ಹೆದರಿ, ಶಾರದಾ ಮಾತಾಡಿಲ್ಲ. ಅತ್ತಿಗೆ ತನಗ್ಯಾಕೆ ಅಂತ ಕೇಳುಲ್ಲ.... ನೀನು ಕೇಳಿ ತಿಳ್ಕೋ ಪ್ಲೀಸ್...."

"ಪ್ಲೀಸ್ ಏನೂ ಬೇಡ.... ನಾನು ಮಾತಾಡ್ತೀನಿ...."

"ಥ್ಯಾಂಕ್ಯೂ ಭಾರ್ಗವಿ..." ಅವಳ ಕೈ ಅದುಮಿದ.

"ಶ್ರೀಹರಿ ಏನಂತಾನೋ....?"

"ಆ ಚಿಂತೆ ನನಗಿರಲಿ...." ರೆಪ್ಪೆಗಳನ್ನು ಮುಚ್ಚಿಕೊಂಡು ಕತ್ತು ಬಾಗಿಸಿ ನುಡಿದ.

*****

"ಏನ್ರೀ ಶಾರದಾ ಹೇಗಿದೀರಿ?.... ಇಲ್ಲೇ ಷಾಪಿಂಗ್‌ಗೆ ಅಂತ ಬಂದಿದ್ದೆ. ಹಾಗೇ ನಮ್ಮ ಮಂಜರೀನ ನೋಡಿ ಮಾತನ್ನಾಡಿಸ್ಕೊಂಡು ಹೋಗೋಣ ಅಂತ ಬಂದೆ...." ಭಾರ್ಗವಿ ದೇಶಾವರಿಯ ನಗೆಯನ್ನು ನಕ್ಕು ಒಳಗೆ ಬಂದಳು.

"ಹೇಗಿದೀರಿ ದೊಡ್ಡಮ್ಮ?" ಎನ್ನುತ್ತಾ, ಸೋಫಾದ ಮೇಲೆ ಕುಳಿತಿದ್ದ ಮಂಜರಿ ಎದ್ದು ನಿಂತಳು. ಭಾರ್ಗವಿ ಅವಳನ್ನು ಮೇಲಿನಿಂದ ಕೆಳಗೆ ಎರಡೆರಡು ಬಾರಿ ನೋಡಿದಳು. ಮಂಜರಿಯ ಮುಖ ಕೆಂಪಾಗಿತ್ತು. ನಾಚಿ, ತಲೆಯನ್ನು ತಗ್ಗಿಸಿದಳು.

"ಇದ್ದಕ್ಕಿದ್ದಂತೆ ತಲೆ ನೋವು, ವಾಂತಿ ಅಂತ ನರ್ಸಿಂಗ್ ಹೋಂಗೆ ಸೇರಿದೆ ಅಂತ ತಿಳಿದಾಗ್ನಿಂದ ಆತಂಕವಾಗಿತ್ತು. ಈಗ ಹುಶಾರಾಗಿದೀಯಾ?" ಆತ್ಮೀಯತೆಯನ್ನು ಸುರಿಸುತ್ತಾ ಕೇಳಿದಳು.

"ಹುಂ, ದೊಡ್ಡಮ್ಮ. ಈಗ ಹುಶಾರಾಗಿದೀನಿ. ಸ್ವಲ್ಪ ವೀಕ್ ನೆಸ್ ಆಗಿತ್ತು ಅಷ್ಟೇ...."

"ಮತ್ತೆ? ....ಮನೆಗೆ ಬರಬಹುದಲ್ಲ... ನೀನು ಇಲ್ಲದೇ ಮನೆ ಭಣ ಭಣ ಅಂತಿದೆ. ಅಜ್ಜಿ ಹಾಗೆ ಹೊರಟು ಹೋದ್ರು.... ಅವರ ಮುದ್ದಿನ

ಮೊಮ್ಮಗಳು ನೀನು ಮನೆ ಬಿಟ್ಟು ಇಲ್ಲೆಲ್ಲೋ ಇದೀಯ...."

"ಇದು ನನ್ನ ಮಾಮನ ಮನೆ. ಅಮ್ಮನೇ ಇಲ್ಲಿರು ಅಂತ ಹೇಳಿದ್ದು...."

"ಗೊತ್ತು.... ಇವರೂ ಎಲ್ರೂ ನಮ್ಮವರೇ....ಆದರೆ ನಾವುಗಳ್ಯಾರೂ ಇಲ್ಲಿ ಬಂದು ಇರುಕ್ಕೆ ಆಗುಲ್ಲವಲ್ಲ..... ಏನ್ರೀ ಶಾರದಾ.... ಇವಳು ಇಲ್ಲಿದಾಳೆ ಅಂತ ನಾವುಗಳು ಪದೇ ಪದೇ ಬಂದರೆ ನಿಮಗೆ ತೊಂದ್ರೆ ಆಗುಲ್ವಾ?"

"ತೊಂದ್ರೆ ಏನ್ಬಂತು? ....ಆದರೆ...."

"ತೊಂದ್ರೆ ಅಲ್ಲ; ಮುಜುಗರ.... ಅದೇನೇ ಇರಲಿ... ನಾನು ಇವಳನ್ನು ಕರೆದುಕೊಂಡು ಹೋಗುಕ್ಕೆ ಅಂತ ಬಂದಿದೀನಿ, ಕಳಿಸ್ಕೊಡೀಪ್ಪಾ.... ಮಂಜೂ ಹೊರಡು...."

"ಇಲ್ಲ ದೊಡ್ಡಮ್ಮಾ.... ನಾನು ಆ ಮನೆಗೆ ಬರುಲ್ಲ. ಅಮ್ಮಂಗೆ, ಅಪ್ಪಂಗೆ ನನ್ನ ಮೇಲೆ ಕೋಪ.... ನಾನು ಎಲ್ಲಿಗೂ ಬರುಲ್ಲ"

"ಮತ್ತೇ? ಇಲ್ಲೇ ಇರ್ತೀಯಾ? ....ನೋಡಿದವರು ಏನಂತಾರೆ?"

"ಆ ಚಿಂತೆ ಅವರಿಗಿರಬೇಕಾಗಿತ್ತು.... ನಾನು ಎಲ್ಲಿದ್ರೇನು ಅವರಿಗೆ?"

"ಹಾಗೆಲ್ಲಾ ಮಾತಾಡ್ಬಾರ್ದು ಮಂಜೂ.... ಸಿಟ್ಟು ಎಷ್ಟು ದಿನ ಇರುತ್ತೆ.... ನೀನು ಬಂದು ಬಿಡು, ಎಲ್ಲಾ ಸರಿ ಹೋಗುತ್ತೆ...."

"ಒಂದು ಕಂಡೀಷನ್ ಮೇಲೆ ನಾನು ಆ ಮನೆಗೆ ಬರ್ತೀನಿ.... ನೀವು ಅಮ್ಮನ್ನ ಒಪ್ಪಿಸಿ, ಅಪ್ಪನ್ನ ಒಪ್ಪಿಸುವಂತೆ ಹೇಳ್ಬೇಕು....ನಾನು ಮನೋಜನನ್ನು ಮದುವೆ ಆಗುಕ್ಕೆ ಒಪ್ಪಿದರೆ ಮಾತ್ರ....."

"ಅಯ್ಯೋ ಒಪ್ಪಿಸಿದ್ರಾಯ್ತು... ಅದ್ಯಾವ ಮಹಾ ದೊಡ್ಡ ಕೆಲಸ?"

"ಇಲ್ಲ ಭಾರ್ಗವಿಯವರೇ.... ಶ್ರೀಹರಿ ಒಪ್ಪುವಂತೆ ಅನ್ನಿಸುಲ್ಲ... ಒಪ್ಪದಿದ್ದರೆ ಇವಳು ಮನೆ ಬಿಟ್ಟು ಮನೋಜನ ಮನೆಗೆ ಓಡಿ ಹೋಗ್ತಾಳಂತೆ.... ನನಗಂತೂ ತಿಳುವಳಿಕೆ ಹೇಳೀ ಹೇಳೀ ಸಾಕಾಗಿದೆ, ನೀವಾದ್ರೂ ಸ್ವಲ್ಪ ಬುದ್ಧಿ ಹೇಳಿ...."

"ಹೂಂ...' ಎಂದು ತಲೆಯಾಡಿಸಿ, ನೀನು ಹೋಗು ಎನ್ನುವಂತೆ ಶಾರದಳಿಗೆ ಕಣ್ಣು ಸಂಜ್ಞೆ ಮಾಡಿದಳು. ಶಾರದಾ ಅಡಿಗೆ ಮನೆಯ ಕಡೆಗೆ ತೆರಳಿದಳು. ಭಾರ್ಗವಿ, ಅವಳ ಸಮೀಪಕ್ಕೆ ಸರಿದು ಕುಳಿತಳು. ಅವಳ ಭುಜದ ಮೇಲೆ ಕೈಯನ್ನಿಟ್ಟಳು. ಅವಳು ಕೊಸರಿಕೊಂಡು ಅತ್ತ ಮುಖ ತಿರುಗಿಸಿದಳು. ಭಾರ್ಗವಿ ಬಲವಂತವಾಗಿ ಅವಳ ಮುಖವನ್ನು ತನ್ನ ಕಡೆಗೆ ತಿರುಗಿಸಿಕೊಂಡಳು. "ಹೆದರ್ಬೇಡ ಮಂಜೂ... ನಾನು ನಿನ್ನ ಕಡೆಗಿದೀನಿ..." ಎಂದು ಕೆಳದನಿಯಲ್ಲಿ ಹೇಳಿದಳು. ಮಂಜರಿ ನಂಬದವಳಂತೆ ಮುಖ

ಮಾಡಿದಳು. "ನಾನು ನಿನ್ನ ಹತ್ರ ಮಾತಾಡ್ಬೇಕು ಅಂತಲೇ ಬಂದಿರೋದು.... ಏನೇನು ನಡೀತು? ....ಮನೋಜ ನಿನ್ನನ್ನು ಎಷ್ಟರ ಮಟ್ಟಿಗೆ ಪ್ರೀತಿಸ್ತಾನೆ? ...ಮೋಸ ಮಾಡುಲ್ಲ ಅಂತ ಏನು ಗ್ಯಾರಂಟಿ?...." ಎಂದು ಕೇಳಿದಳು.

ಮಂಜರಿ ತಮ್ಮಿಬ್ಬರ ಪ್ರೇಮ ಪ್ರಕರಣವನ್ನು ತಿಳಿಸಿದಳು. "ನಾವಿಬ್ಬರೂ ಒಬ್ಬರನ್ನೊಬ್ಬರು ಗಾಢವಾಗಿ ಪ್ರೀತಿಸ್ತೀವಿ...." ಎಂದಳು.

"ಪ್ರೀತಿಸಿದ ಮೇಲೆ ಹೀಗ್ಯಾಕೆ ಮಾಡ್ಕೊಂಡೆ....? ಮದುವೆ ಆಗೋವರ್ಗೂ ಕಾಯಬಾರದಾಗಿತ್ತಾ...? ಎಲ್ರೂ ನಿನ್ನನ್ನೇ ದೂಷಿಸೋದು...?"

"ಅಜ್ಜಿ ಸತ್ಹೋದ್ರಲ್ಲ... ಆ ಸಮಯದಲ್ಲಿ ನನಗೆ ಅಳೂನೇ ತಡೆಯೋಕೆ ಆಗ್ತಿರ್ಲಿಲ್ಲ... ಆ ಸಮಯದಲ್ಲಿ ಹೀಗೆ ಆಗ್ಹೋಯ್ತು.... ನಂಗೆ ಗೊತ್ತಾಗ್ಲೇ ಇಲ್ಲ...."

"ಇದು ತಪ್ಪಲ್ವಾ ಮಂಜೂ... ಅಜ್ಜಿ ಸತ್ತ ದುಃಖ ಎಲ್ರಿಗೂ ಇತ್ತಲ್ವಾ...?"

"ಅಜ್ಜಿ ನನ್ನನ್ನು ತುಂಬಾ ಪ್ರೀತಿಸ್ತಿದ್ರು ಅಲ್ವಾ?....ಅವರನ್ನು ಕಳ್ಕೊಂಡು ನಾನು ಒಂಟಿಯಾಗ್ಬಿಟ್ಟೆ ಅಂತ ಅನ್ನಿಸ್ತಿತ್ತು.... ಒಬ್ಬಳೇ ಕೂತ್ಕೊಂಡು ಅಳ್ತಿದ್ದೆ....ನನ್ನ ಒಂಟಿತನವನ್ನು ದೂರ ಮಾಡಿದವನು ಮನೋಜ...."

"ಅವನಿಗೆ ನೀನು ತಾಯಿಯಾಗುವ ವಿಷಯ ಗೊತ್ತಾ....?"

"ಹೂಂ ಗೊತ್ತು.... ಅವನು ಖುಷಿಯಾಗಿದಾನೆ.... ಆದಷ್ಟು ಬೇಗ ಮದುವೆ ಮಾಡಿಕೊಂಡು ಬಿಡೋಣ ಅಂತ ಹೇಳ್ತಾನೇ ಇದಾನೆ...."

"ಹಾಗಾದ್ರೆ ಅವನ ಮನೆಯವರಿಗೆ ಈ ವಿಷಯ ಗೊತ್ತು ಅನ್ನು.... ಅವರ ಮನೇಲಿ ಯಾರ್‍ಯಾರಿದಾರೆ...?"

"ಅವನಿಗೆ ತಾಯಿಯಿಲ್ಲ. ಅಕ್ಕ ಭಾವ ಬೇರೆ ಊರಿನಲ್ಲಿದ್ದಾರೆ. ಅಣ್ಣ ಅತ್ತಿಗೆ ಜತೇಲಿದಾರೆ.... ತಂದೆ ಇದಾರೆ.... ಎಲ್ಲರಿಗೂ ಗೊತ್ತಾಗಿದೆ ಅಂತ ಹೇಳ್ದ. ಅವರೆಲ್ಲರಿಗೂ ನನ್ನ ಮೇಲೆ ಪ್ರೀತಿ ಇದೆ...."

"ಸರಿ ಬಿಡು. ಮತ್ತಿನ್ನೇನು.... ಅವರ ವಿರೋಧ ಇಲ್ಲ ಅಂತಂದ ಮೇಲೆ ಸೀದಾ ನಮ್ಮ ಮನೆಗೆ ಬಂದು ಮಾತಾಡಲಿ. ಶ್ರೀಹರಿ ಒಪ್ಪದೇ ಏನ್ಮಾಡ್ತಾನೆ?"

"ಅವರು ನಮ್ಮ ಜನ ಅಲ್ಲ. ಬೇರೆ ಯಾವುದೋ ಜನ....ಅದಕ್ಕೆ ಅವರಿಗೆ ಭಯ. ಅಪ್ಪ ಒಪ್ಪಿಕೊಳ್ಳದಿದ್ರೆ ಅಂತ.... ಅಲ್ಲದೇ ಅವರು ಗಂಡಿನವರು ಅಲ್ವಾ ದೊಡ್ಡಮ್ಮ ಅವರೇ ಬಂದು ಹೇಗೆ ಕೇಳ್ತಾರೆ....?"

"ಅರೇ!.... ಇಷ್ಟೆಲ್ಲಾ ತಿಳ್ಕೊಂಡಿದೀಯ.... ಸ್ವಲ್ಪ ಹುಶಾರಾಗಿರ್ಬೇಕಾಗಿತ್ತು ನೀನು... ಅಬಾರ್ಷನ್ ಮಾಡಿಸ್ಕೋ.... ಈಗ್ಲಿಂದ ಈ ಜವಾಬ್ದಾರಿ ಯಾಕೆ?....

ಎರಡು ಮೂರು ವರ್ಷ ಹಾಯಾಗಿದ್ದು.... ಆಮೇಲೆ ತಾಯಿಯಾಗುವಂತೆ...."

"ಇಲ್ಲ ದೊಡ್ಡಮ್ಮ... ನನಗೆ ಈ ಮಗು ಬೇಕೇ ಬೇಕು.... ಅಜ್ಜಿ ಕನಸ್ನಲ್ಲಿ ಬಂದು ಹೇಳಿದಾರೆ.... ಅವರೇ ಮತ್ತೆ ಜನ್ಮ ಘಡೀತಿದಾರಂತೆ...."

"ಏನು? ....ನಿನ್ನ ಅಜ್ಜಿ? ....ನಿನ್ನ ಮಗುವಾಗಿ? ....ನಿನ್ನ ಹೊಟ್ಟೇಲಿ? ....ಇದನ್ನೆಲ್ಲಾ ಈ ಕಾಲದಲ್ಲಿ ಯಾರು ನಂಬ್ತಾರೆ ಮಂಜೂ...." ಅಡ್ಡಡ್ಡ ತಲೆಯಾಡಿಸಿದಳು.

"ಜಾತಿ ಮತ ಅಂತ ಭೇದ ಭಾವಗಳನ್ನಿಟ್ಟುಕೊಂಡು.... ಇದನ್ನು ಯಾರು ನಂಬ್ತಾರೋ ಬಿಡ್ತಾರೋ, ನಾನು ನಂಬಿದೀನಿ... ನನಗೆ ಈ ಮಗು ಬೇಕೇ ಬೇಕು. ನಮ್ಮಿಬ್ಬರ ಮದುವೆ ನಡೆದ್ರೂ ಸರಿ... ನಡೆಯದಿದ್ದರೂ ಸರಿ...."

"ಹೀಗೆಲ್ಲಾ ಮಾತಾಡಿದ್ರೆ ನಿಮ್ಮಪ್ಪಂಗೆ ಕೋಪ ಬರದೇ ಇರುತ್ತಾ? ....ಉಪಾಯವಾಗಿ ಮಾತಾಡ್ಬೇಕು...."

"ನನ್ನ ಪರವಾಗಿ ಮಾತಾಡುಕ್ಕೆ ಯಾರಿದಾರೆ ಹೇಳಿ ದೊಡ್ಡಮ್ಮ....ಅಮ್ಮ ಕೂಡಾ ಮತ್ತೆ ನನ್ನನ್ನು ಮಾತನ್ನಾಡಿಸಿಲ್ಲ.... ಈಗ ನೀವು ಇಲ್ಲಿಗೆ ಬಂದಿರುವ ವಿಷಯ ಅವರಿಗೆ ಗೊತ್ತಾ? ....ಅಬಾರ್ಷನ್ ಮಾಡಿಸ್ಕೊಳ್ಳಕ್ಕೆ ಒಪ್ಪಿಸುಕ್ಕೆ ನಿಮ್ಮನ್ನು ಕಳಿಸಿದಾರಾ?"

"ಇಲ್ಲ ಮಂಜರಿ... ನಿನ್ನ ದೊಡ್ಡಪ್ಪ ನನ್ನನ್ನು ಇಲ್ಲಿಗೆ ಕಳಿಸಿದಾರೆ....ಅವರಿಗೆ ನಿನ್ನ ಮೇಲೆ ಪ್ರೀತಿ, ನಮಗೆ ಹೆಣ್ಣು ಮಕ್ಕಳಿಲ್ಲವಲ್ಲ.... ಅದಕ್ಕೇ.... ಹೋಗಲಿ, ಮನೋಜ ನಿನ್ನನ್ನು ಭೇಟಿಯಾಗಿದ್ನಾ? ಫೋನನ್ನಾದ್ರೂ ಮಾಡಿದ್ನಾ?"

"ಇಲ್ಲ ದೊಡ್ಡಮ್ಮ.... ನಾನು ಇಲ್ಲಿ ಇರೋದ್ರಿಂದ ಅವನು ಬರುಕ್ಕೆ ಸಂಕೋಚಗೊಂಡಿರಬಹುದು.... ಫೋನು ಮಾಡುಕ್ಕೆ ಹೆದರಿರಬಹುದು..."

"ಸಂಕೋಚ, ಹೆದರಿಕೆ ಇದ್ದರೆ ನಿನ್ನನ್ನು ಹೇಗೆ ಮದುವೆಯಾಗ್ತಾನೆ?"

"ನನ್ನ ಫ್ರೆಂಡ್ ಮುಖಾಂತರ ನನ್ನ ಬಗ್ಗೆ ತಿಳಿದುಕೊಂಡಿದಾನೆ.... ಒಂದಲ್ಲ ಒಂದು ನಿನ ಬಂದೇ ಬರ್ತಾನೆ...."

"ಆದರೆ ಯಾವಾಗ....? ಅಲ್ಲೀವರೆಗೆ ಕಾಯೋದು ಹೇಗೆ....? ನೀನು ಪ್ರೆಗ್ನೆಂಟ್ ಅಂತ ನೋಡ್ದೋರ್ಗೆಲ್ಲಾ ಗೊತ್ತಾಗುತ್ತೆ?....ಅಪವಾದ ಬರುತ್ತೆ....ಅವನ ಮನಸ್ಸೂ ಬದಲಾಗಬಹುದು...."

"ಅವನು ಅಂಥೋನಲ್ಲ...."

"ಒಳ್ಳೆಯವನಿರಬಹುದು. ಆದರೆ ಧೈರ್ಯವೇ ಇಲ್ಲವಲ್ಲ... ನನಗೆ

ಅವನ ಫೋನು ನಂಬರನ್ನು ಕೊಡು.... ನಾನು ಅವನ ಹತ್ರ ಮಾತಾಡ್ತೀನಿ...."

"ನೀವಾ? ....ಪ್ಲೀಸ್ ಅವನನ್ನು ಬೈಯಬೇಡಿ ದೊಡ್ಡಮ್ಮಾ...."

"ನಿನ್ನನ್ನೇ ಬೈಯಲಿಲ್ಲ; ಅವನನ್ಯಾಕೆ ಬೈಯಲಿ? ತಪ್ಪು ಇಬ್ಬರದ್ದೂ ಇದೆ.... ಅವನನ್ನು ಯಾರೂ ಅನ್ನಲ್ಲ.... ನಿನ್ನನ್ನು ಎಲ್ರೂ ಅಂತಾರೆ...."

"ನಿಮಗೂ ಈ ಪ್ರೀತಿ ಪ್ರೇಮ ಎಲ್ಲಾ ತಪ್ಪು ಅಂತ ಅನ್ಸುತ್ತಾ ದೊಡ್ಡಮ್ಮಾ...."

"ನಮ್ಮ ಕಾಲದಲ್ಲಿ ಬಹಳವೇ ತಪ್ಪು ಅಂತ ಅನ್ನಿಸ್ತಿತ್ತು.... ಈಗ ಕಾಲ ಬದಲಾಗಿದೆ. ಆದರೂ ನೀನು ದುಡುಕಿ ಬಿಟ್ಟೆ ಮಂಜೂ...."

"ಹಾಗಾದ್ರೆ ನೀವೂ ನಂಗೆ ಸಹಾಯ ಮಾಡುಲ್ವಾ? ....ನನ್ನ ಕಡೆಗಿಲ್ವಾ?"

"ಇದೀನಿ.... ಈಗ ನಾನು ನಿನ್ನ ಕಡೆಗೇ ಇದೀನಿ.... ನನ್ನಿಂದ ಏನು ಸಹಾಯ ಬೇಕು ಹೇಳು...."

"ಹಾಗಾದ್ರೆ, ಈ ಮನೆಯಿಂದ ಕರ್ರೊಂಡು ಹೋಗಿ, ನನ್ನನ್ನು ಮನೋಜನ ಮನೆಗೆ ಬಿಟ್ಟು ಬನ್ನಿ...."

"ಸುಮ್ಸುಮ್ನೇ..... ಹೀಗೆ.... ಅದಕ್ಕೊಂದು ರೀತಿ ನೀತಿ ಬೇಡ್ವಾ? .... ಅದಕ್ಕೆ ಕೇಳಿದ್ದು.... ಅವನ ನಂಬರನ್ನು ಕೊಡು...ಅವನ ಮನಸ್ನಲ್ಲಿ ಏನಿದೆ ಅಂತ ತಿಳ್ಕೋತೀನಿ...."

ಮಂಜರಿ ಅರೆ ಧೈರ್ಯದಿಂದ ಅವನ ಫೋನು ನಂಬರನ್ನು ಕೊಟ್ಟಳು. ಶಾರದಾ ಕೊಟ್ಟ ಕಾಫಿಯನ್ನು ಕುಡಿದು ಅಲ್ಲಿಂದ ಹೊರಟಳು. ನಾನು ಇಲ್ಲಿಗೆ ಬಂದಿದ್ದ ವಿಚಾರವನ್ನು ಶ್ರೀಹರಿಗಾಗ್ಲೀ, ಸುಗುಣಂಗಾಗ್ಲೀ ಹೇಳ್ಬೇಡ.... ಅವರಿಗೆ ಇಷ್ಟವಾಗುಲ್ಲ..." ಎಂದಳು. ಶಾರದಾ ಒಳಗಿನಿಂದಲೇ ಇವರುಗಳ ಮಾತನ್ನು ಕೇಳಿಸಿಕೊಂಡಿದ್ದಳು. ಈಗಾಗಲೇ ಒಂದು ವಾರದಿಂದ ಮಂಜರಿಯನ್ನು ನೋಡಿಕೊಂಡಿದ್ದು ಸಾಕೆನ್ನಿಸಿತ್ತು. ಆದರೆ ಇಲ್ಲಿಂದ ಕರ್ರೊಂಡು ಹೋಗಿ ಎಂದು ಸುಗುಣನಿಗೆ ಹೇಳಲು ಹಿಂಜರಿದಿದ್ದಳು. ಅವರ ಪ್ಲ್ಯಾನ್ ಏನಿದೆ ಅಂತ ಸಹ ಕೇಳಲು ಹಿಂಜರಿದಿದ್ದಳು. ಈಗ ಭಾರ್ಗವಿ ಬಂದುದು ಒಂದು ತರಹದಲ್ಲಿ ನಿರಾಳವಾಗಿತ್ತು.... ಅವರೆಲ್ಲರೂ ಒಂದೇ ಮನೆಯವರು ಏನಾದ್ರೂ ಮಾಡ್ಕೊಳ್ಳಲಿ ಎಂದು ಸುಮ್ಮನಾಗಿ ಬಿಟ್ಟಳು.

"ನಮ್ಮ ಹುಡುಗೀನ ಚೆನ್ನಾಗಿ ನೋಡ್ಕೊಳ್ಳೀಪ್ಪಾ.... ತಾಯಿಯಾಗಲಿದ್ದಾಳೆ. ಸಧ್ಯದಲ್ಲೇ ಮದು ಮಗಳು ಕೂಡಾ ಆಗಲಿದ್ದಾಳೆ...." ಮಂದಹಾಸದಿಂದ ನುಡಿದಳು. "ಹಣ್ಣು ಹಂಪಲುಗಳನ್ನು ತಿನ್ನಲು ಕೊಡಿ. ಚೆನ್ನಾಗಿ ನಿದ್ದೆ ಮಾಡಲಿ. ಸಧ್ಯಕ್ಕೆ ಕಾಲೇಜಿಗೆ ಹೋಗುವುದು ಬೇಡ. ಮದುವೆ ನೆರವೇರುವವೆಗೆ ಇವಳು

ಮನೆಯಿಂದಾಚೆ ಹೋಗುವುದೇ ಬೇಡ..." ಶಾರದಾ ಉಗುಳು ನುಂಗಿದಳು.

"ಈ ಮದುವೆ ನೆರವೇರುತ್ತೆ ಅಂತ ಅಂತೀರಾ ಅತ್ಗೇ...."

"ನೆರವೇರಲೇ ಬೇಕು, ಇಲ್ದಿದ್ರೆ ಮನೆಯ ಮರ್ಯಾದೆಯ ಗತಿಯೇನು? ಮುಂದೆ ಮಂಜರಿಯ ಪಾಡೇನು?"

"ನಿಮ್ಮ ಮೈದುನನ ಕೋಪ ಕಡಿಮೇನೇ ಆಗದಿದ್ರೆ?"

"ಮಕ್ಕಳ ಮೇಲೆ, ತಂದೆ ತಾಯಿ ಎಷ್ಟು ದಿನ ಕೋಪ ಮಾಡಿ ಕೊಂಡಿರುಕ್ಕೆ ಸಾಧ್ಯ? ಹೇಳು ಶಾರದಾ.... ಮಂಜರಿ ಈ ಮನೆಯ ಮುದ್ದಿನ ಮಗಳು....ಅವನ ಕೋಪ ತಣ್ಣಗಾಗುತ್ತೆ...."

"ಹಾಗಾದ್ರೆ ಯಾವಾಗ ಕರ್ಕೊಂಡು ಹೋಗ್ತೀರಿ?"

"ಹೀಗೆ ಕೇಳ್ತೀಯಲ್ಲಾ ಶಾರದಾ.... ಇವಳಿಂದ ತೊಂದರೆ ಆಗ್ತಿದೆಯಾ?"

"ಅಕ್ಕ ಪಕ್ಕದವರು ಗುಸು ಗುಸು ಮಾತಾಡಿಕೊಳ್ತಿದಾರೆ....ಮನೋಜ ಒಂದೆರಡು ಸಾರಿ ಬಂದಿದ್ದ.... ಮಾತಾಡುಕ್ಕೆ ಬಿಡದೆ ಹಾಗೇ ಕಳಿಸಿ ಬಿಟ್ಟೆ... ಇವರುಗಳಿಗೆ ಅನುಮಾನ ಕುತೂಹಲ.... ನಂಗೂ ಮುಜುಗರವಾಗುತ್ತೆ...."

"ಸುಗುಣನ ಹತ್ರ ಮಾತಾಡು ಶಾರದಾ...."

"ಅವರು ಬೇಸರದಲ್ಲಿದ್ದಾರೆ ಅತ್ಗೇ.... ಹೇಗೆ ಕೇಳಲಿ? ....ನೀವು ಮಾತಾಡಿ ಅವರನ್ನು ಒಪ್ಪಿಸಿ... ಎಲ್ಲರಿಗೂ ನಿರಾತಂಕ...." ಭಾರ್ಗವಿ ಶಾರದಳ ಮನದ ಇಂಗಿತವನ್ನು ಅರಿತಳು.

"ಆಗ್ಲಿ.... ಸಮಯ ನೋಡಿ ಮತಾಡ್ತೀನಿ... ಒಪ್ಪಿಸುಕ್ಕೆ ಪ್ರಯತ್ನ ಪಡ್ತೀನಿ.... ಒಪ್ಪದಿದ್ರೆ, ನಾನೇ ಬಂದು ಕರ್ಕೊಂಡು ಹೋಗ್ತೀನಿ.... ನನ್ನ ಮನೇಲಿಟ್ಟು ಕೊಳ್ತೀನಿ.... ನೀನು ಚಿಂತೆ ಮಾಡ್ಬೇಡ...." ಎಂದು ಧೈರ್ಯ ಹೇಳಿ, ಅಲ್ಲಿಂದ ನಡೆದಳು.

****

"ಮನೋಜ್.... ನಾನು ಭಾರ್ಗವಿ ಅಂತ, ಮಂಜರಿಯ ದೊಡ್ಡಮ್ಮ.... ನಾನು ಈಗಲೇ ನಿನ್ನ ಹತ್ರ ಮಾತಾಡ್ಬೇಕು.... ಎಲ್ಲಿ ಸಿಗ್ತೀಯಾ?" ಕೇಳಿದಳು.

"ಏನು ವಿಷಯ ಆಂಟೀ? ...ಮಂಜರಿ ಹುಶಾರಾಗಿದಾಳೆ ತಾನೇ?" ಕೇಳಿದ.

"ಅದನ್ನೆಲ್ಲಾ ಫೋನಿನಲ್ಲಿ ಹೇಳುಕ್ಕಾಗುಲ್ಲ.... ಇನ್ನರ್ಧ ಗಂಟೆಯೊಳಗೆ ನೀನು ನಮ್ಮ ಮನೆಯ ಹತ್ತಿರ ಇರುವ ದೇವಸ್ಥಾನಕ್ಕೆ ಬಾ...." ಎಂದು ಹೇಳಿ ಸ್ವಿಚ್ ಆಫ್ ಮಾಡಿದಳು.... ನಂತರ ರಾಮನಾಥನಿಗೆ ಫೋನು ಮಾಡಿ ಅವನಿಗೂ ಅಲ್ಲಿಗೆ ಬರುವಂತೆ ಹೇಳಿದಳು. ಸಿದ್ಧಳಾಗಿ, ದೇವಸ್ಥಾನದ ಕಡೆಗೆ

ನಡೆದಳು. ಅಲ್ಲಿದ್ದ ಮರದ ಕೆಳಗಿದ್ದ ಕಲ್ಲು ಬೆಂಚಿನ ಮೇಲೆ ಕುಳಿತು, ಮನೋಜನಿಗಾಗಿ ಕಾಯತೊಡಗಿದಳು.

ಸ್ವಲ್ಪ ಹೊತ್ತಿನ ನಂತರ, ಬೈಕಿನಲ್ಲಿ ಇಬ್ಬರು ಹುಡುಗರು ಬಂದಿಳಿದರು. ಅತ್ತಿತ್ತ ನೋಡುತ್ತಾ ಅನುಮಾನದಿಂದ ಬರುತ್ತಿದ್ದವನನ್ನು ಕಂಡು, ಅವನೇ ಮನೋಜನಿರಬಹುದೆಂದು ಭಾವಿಸಿದಳು. ಹತ್ತಿರ ಬಂದವನನ್ನು ಪ್ರಶ್ನಿಸಿದಳು. "ನೀನು ಯಾರಿಗಾದರೂ ಎದುರು ನೋಡ್ತಿದೀಯಾ?"

"ಹೌದು ಆಂಟೀ... ಮಂಜರಿಯ ದೊಡ್ಡಮ್ಮ ಫೋನು ಮಾಡಿದ್ರು.... ಅವರು ನೀವೇ ಇರಬಹುದಾ?" ಅನುಮಾನದಿಂದ ಕೇಳಿದ.

"ಇರಬಹುದು ಏನು? ನಾನೇ ಆ ದೊಡ್ಡಮ್ಮ... ಈ ಹುಡುಗ ಯಾರು? ಒಬ್ಬನೇ ಬರೋಕೆ ಹೆದರಿದ್ಯಾ? ಹೊಡೆಸಿ, ಬಡೆಸಿ, ಕೆಡವಿ ಹಾಕಿಬಿಡ್ತೀವಿ ಅಂತ...." ನಗುತ್ತಾ ಪ್ರಶ್ನಿಸಿದಳು.

"ಇವನು ನನ್ನ ಫ್ರೆಂಡ್.... ಹರೀಶ್.... ಬೈಕ್ ಅವನದ್ದೇ...." ಅಷ್ಟರಲ್ಲಿ ಅಲ್ಲಿಗೆ ರಾಮನಾಥನೂ ಬಂದ. ಭಾರ್ಗವಿ ಪರಸ್ಪರ ಪರಿಚಯ ಮಾಡಿಕೊಟ್ಟಳು. ರಾಮನಾಥ ಮನೋಜನನ್ನೇ ಆಗಾಗ್ಗೆ ನೋಡಿದ....ಯಾವ ಹೆಚ್ಚುಗಾರಿಕೆಯೂ ಕಂಡು ಬರಲಿಲ್ಲ. ಆದರೂ ತನ್ನ ಸಂದೇಹ ನಿವಾರಣೆಗಾಗಿ ಕೆಲವು ಮುಖ್ಯವಾದ ವಿಷಯಗಳನ್ನು ಕೇಳಿ ತಿಳಿದುಕೊಂಡ.

"ನಾನು ಮಂಜರೀನ ತುಂಬಾ ಪ್ರೀತಿಸ್ತೀನಿ.... ನಮ್ಮಿಬ್ಬರ ಮದುವೆಗೆ ಏನು ಅಡ್ಡಿ ಅಂತ ನಂಗೆ ತಿಳೀತಿಲ್ಲ....ನಾನು ಬೇರೆ ಜಾತಿಯವನು ಅಂತ ತಿಳಿದೂ ಮಂಜರಿ ನನ್ನನ್ನು ಇಷ್ಟ ಪಟ್ಟಿದ್ದಾಳೆ....ಇದರಲ್ಲಿ ನನ್ನ ತಪ್ಪೇನಿದೆ?"

"ಈಗ ತಪ್ಪು, ಸರಿ ಅಂತ ನೋಡ್ತಾ ಕೂತುಕೊಳ್ಳುವ ಸಮಯ ಅಲ್ಲ. ನಿಮ್ಮ ಸ್ನೇಹ, ಪ್ರೀತಿ ತುಂಬಾ ಮುಂದುವರೆದಿದೆ.... ಮಂಜರಿಯ ಅಪ್ಪ, ಅಮ್ಮನಿಗೆ ಮಗಳ ಮೇಲೆ ಎಲ್ಲಾ ಅಧಿಕಾರ ಇದೆ. ಅದನ್ನು ಇಲ್ಲ ಅಂತ ಯಾರಿಗೂ ಹೇಳುಕ್ಕೆ ಸಾಧ್ಯವಿಲ್ಲ... ಅವರು ಮದುವೆಗೆ ಒಪ್ತಾರೆ ಅನ್ನೋ ನಂಬಿಕೆ ಇಟ್ಕೋಬೇಡ...."

"ಹೀಗ್ಯಾಕೆ ಹೇಳ್ತೀರಿ ಸಾರ್? ....ನೀವು ಅವರ ಅಣ್ಣ.... ಅವರನ್ನು ಒಪ್ಪಿಸಬಹುದಲ್ಲ...."

"ಇಲ್ಲ, ಇದರಿಂದ ನಮ್ಮ ನಮ್ಮಲ್ಲಿ ಒಡಕು ಉಂಟಾಗುತ್ತದೆ.... ನಾವು ಇನ್ನೂ ಎಷ್ಟೋ ವರ್ಷಗಳು ಒಟ್ಟಿಗೆ ಇರಬೇಕು.... ನಮ್ಮ ಸಂಬಂಧ ಕೆಟ್ಟು ಹೋಗುವುದು ನನಗೆ ಇಷ್ಟವಿಲ್ಲ...."

"ಇದನ್ನು ಹೇಳೋಕೆ ಇಲ್ಲಿಗೆ ಕರೆಸಿದ್ರಾ?"

"ಮಂಜರಿಯ ತಂದೆ ತಾಯಿ ಒಪ್ಪದಿದ್ರೆ, ಏನು ಮಾಡ್ಬೇಕು ಅಂತ ನೀವಿಬ್ರೂ ಎಂದೂ ಮಾತನ್ನಾಡಿಕೊಂಡಿರ್ಲಿಲ್ವಾ?"

"ಈ ಅನುಮಾನ ನಮಗೆ ಇದ್ದೇ ಇತ್ತು.... ಆದರೆ...."

"ನಿನ್ನ ತಂದೆ ತಾಯಿಗೂ ಒಪ್ಗೆ ಇಲ್ವಾ?"

"ನನಗೆ ಅಮ್ಮ ಇಲ್ಲ; ಅಪ್ಪನಿಗೆ ಯಾವ ಚಿಂತೆಯೂ ಇಲ್ಲ. ಅಣ್ಣ, ಅತ್ತಿಗೆ, ಅಕ್ಕ, ಭಾವ ಎಲ್ಲರೂ ಒಪ್ಪಿಕೊಂಡಿದಾರೆ....ಆದರೆ ಸಂಪ್ರದಾಯದ ಪ್ರಕಾರ....?"

"ಇಲ್ಲಿ ಸಂಪ್ರದಾಯದ ಪ್ರಕಾರ ಏನೂ ನಡೆಯುಲ್ಲ....ನಮ್ಮ ಸಂಪ್ರದಾಯವೇ ಬೇರೆ. ನಿಮ್ಮ ಸಂಪ್ರದಾಯವೇ ಬೇರೆ. ಪ್ರೀತಿಸಿ ಮದುವೆ ಯಾಗುವಾಗ, ಯಾವ ಸಂಪ್ರದಾಯವೂ ಮಧ್ಯೆ ಬರಬಾರದು... ಶ್ರೀಹರಿ ಒಪ್ತಾನೆ ಅಂತ ನೀವುಗಳು ಕಾಯ್ತಾ ಕೂತಿದ್ರೆ.... ಮಂಜರಿ ತಾಯಿಯಾಗ್ತಾಳೆ.... ನೀನು ತಂದೆ ಆಗ್ತೀಯ ಅಷ್ಟೇ...."

"ಹಾಗಾದ್ರೆ ಈಗ ಏನ್ಮಾಡ್ಬೇಕು ಅಂತೀರಾ?"

"ಅದನ್ನ ನನ್ನನ್ನೇನು ಕೇಳ್ತೀಯಯ್ಯಾ?....ಪ್ರೀತಿಸುವಾಗ ನನ್ನನ್ನು ಕೇಳಿದ್ರಾ? ಸಲುಗೆ, ಸಂಬಂಧದ ಸಮಯದಲ್ಲಿ ನನ್ನ ಸಲಹೆ ಕೇಳಿದ್ರಾ?"

"ಆದರೆ.... ಈಗ ಹೊಸ ಜೀವನವನ್ನು ಶುರು ಮಾಡಬೇಕಾಗಿದೆ.... ಸಮಾಜದವರು ಒಪ್ಪಬೇಕು ಅಲ್ವಾ?"

"ಮಾತನ್ನ ಮಾತ್ರ ಚೆನ್ನಾಗಿ ಆಡ್ತೀಯ....ಸಮಾಜದ ಭಯ ನಿನಗಿದೆ.... ಹಾಗೇ ಸಮಾಜ ಮೆಚ್ಚುವಂತೆ ಹೇಗಿರಬೇಕು ಅಂತ ನಾನು ಹೇಳಿ ಕೊಡಬೇಕಾ? ನೀವಿಬ್ರೂ ಮೆಜಾರಿಟಿಗೆ ಬಂದಿದೀರಿ.... ರಿಜಿಸ್ಟರ್ಡ್ ಮದುವೆಯಾಗು.... ಮಂಜರೀನ ನಿನ್ನ ಮನೆಗೆ ಕರ್‍ಕೊಂಡು ಹೋಗು...."

"ಅವಳು ಇದಕ್ಕೆ ಒಪ್ತಿಲ್ಲ..."

"ಬೇರೆ ಎಲ್ಲಾದಕ್ಕೂ ಒಪ್ಪಿಸಿದೀಯ.... ಹಾಗಾದರೆ ಅಬಾರ್ಷನ್‌ಗೆ ಅವಳನ್ನು ಒಪ್ಪಿಸು....ಆಮೇಲೆ ಅವಳನ್ನು ಮರೆತು ಬಿಡು...."

"ಅದು ಮಾತ್ರ ಸಾಧ್ಯವಿಲ್ಲ.... ನನಗೆ ಹುಟ್ಟಲಿರುವ ಮಗುವೂ ಬೇಕು; ಮಂಜರಿಯೂ ಬೇಕು..."

"ಹಾಗಾದರೆ ನನ್ನ ಮಾತನ್ನು ಕೇಳು. ಎಲ್ಲವೂ ನಮ್ಮ ಇಷ್ಟದಂತೆ ನಡೆಯಲು ಸಾಧ್ಯವಿಲ್ಲ... ನಾನು ಈಗಲೇ ಮಂಜರಿಯನ್ನು ಕರೆಸ್ತೀನಿ.... ಇಲ್ಲಿ ದೇವಸ್ಥಾನದಲ್ಲಿ ಅವಳ ಕೊರಳಿಗೆ ತಾಳಿಯನ್ನು ಕಟ್ಟು.... ನಮ್ಮ ಮನೆಗೆ ಕರ್‍ಕೊಂಡು ಬಾ.... ಶ್ರೀಹರಿ ಆಶೀರ್ವಾದ ಮಾಡಿದರೂ ಸರಿ ಮಾಡದಿದ್ದರೂ

ಸರಿ. ಅವಳನ್ನು ನಿನ್ನ ಮನೆಗೆ ಕರೆದುಕೊಂಡು ಹೋಗು.... ಎಷ್ಟು ದಿನಾಂತ ಆ ಹುಡುಗಿಯನ್ನು ಕಂಡೋರ ಮನೇಲಿ ಬಿಟ್ಟಿರುತ್ತೀಯಾ? ಬೇಜಾರು ಮಾಡ್ಕೊಂಡು ಆತ್ಮಹತ್ಯೆ ಮಾಡ್ಕೊಂಡ್ರೆ ಏನ್ಮಾಡ್ತೀಯಾ?"

"ಇಲ್ಲ, ಮಂಜರಿ ಅಂಥೋಳಲ್ಲ..."

"ಆದರೂ ಕಾಲ ಒಂದೇ ತರಹ ಇರೋದಿಲ್ಲ.... ಈಗೇನು ಹೇಳು.... ಮಂಜರಿಗೆ ಫೋನು ಮಾಡ್ಲಾ?...ನೀನೇ ಮಾತಾಡ್ತೀಯ?"

"ಮೊದಲು ನೀವು ಮಾತಾಡಿ ಸಾರ್... ಆಮೇಲೆ ನಾನೂ ಮಾತಾಡ್ತೀನಿ..." ರಾಮನಾಥ ಡಯಲ್ ಮಾಡಿದ. ಶಾರದಾ ಫೋನನ್ನೆತ್ತಿಕೊಂಡಳು....

"ನಾನು ಮಂಜರಿ ಹತ್ರ ಮಾತಾಡ್ಬೇಕು.... ಅವಳಿಗೆ ಫೋನು ಕೊಡು" ಎಂದು ಹೇಳಿದ. ಮಂಜರಿ ಲೈನಿಗೆ ಬಂದಳು. ಅವಳೊಡನೆ ಮಾತನಾಡಿ, ಅವಳ ಒಪ್ಪಿಗೆಯನ್ನು ಕೇಳಿ ತಿಳಿದುಕೊಂಡು ಕೆಲವು ಸಲಹೆಗಳನ್ನು ನೀಡಿದ. ನಂತರ ಮತ್ತೆ ಶಾರದಾಳೊಂದಿಗೆ ಮಾತಾಡಿದ. ಭಾರ್ಗವಿಯೂ ಮಾತಾಡಿದಳು.... ಶಾರದಾ ಹೂಂಗುಟ್ಟಿದಳು.

"ಮಂಜರಿ ಇನ್ನರ್ಧಗಂಟೆಯೊಳಗೆ ಇಲ್ಲಿಗೆ ಬರುತ್ತಾಳೆ. ಅಷ್ಟರಲ್ಲಿ ನಾನು ಅರ್ಚಕರೊಡನೆ ಮಾತಾಡಿರ್ತೀನಿ...." ಎಂದು ಹೇಳಿ, ರಾಮನಾಥ, ದೇವಸ್ಥಾನದ ಕಡೆಗೆ ಹೊರಟ. ಭಾರ್ಗವಿಯೂ ಅವನ ಹಿಂದೆ ನಡೆದಳು.

*****

ಸ್ವಲ್ಪ ಹೊತ್ತಿನಲ್ಲೇ ಶಾರದಾ ಮಂಜರಿಯನ್ನು ಕರೆದುಕೊಂಡು ದೇವಸ್ಥಾನದ ಬಳಿಗೆ ಬಂದಳು. ಭಾರ್ಗವಿಯ ಕೈಗೆ ಮಂಜರಿಯನ್ನು ಒಪ್ಪಿಸಿ, ಭಯದಿಂದ ನುಡಿದಳು. "ಏನಾಗುತ್ತೋ ಅಂತ ಭಯವಾಗುತ್ತೆ ಅತ್ಗೇ.. ಸುಗುಣಂಗೆ, ಶ್ರೀಹರಿಗೆ ನಾನೂ ಈ ಮದುವೇಲಿ ಶಾಮೀಲಾಗಿದೀನಿ ಅಂತ ತಿಳಿದ್ರೆ ನನ್ನನ್ನು ಸುಮ್ಮನೆ ಬಿಡ್ತಾರಾ?"

"ಹಾಗೆಲ್ಲಾ ಏನೂ ಆಗೋಲ್ಲ.... ಇವರಿಬ್ಬರೂ ಮೆಜಾರಿಟಿಗೆ ಬಂದಿದಾರೆ.... ಈಗ ದೇವರ ಅನುಮತಿಯೂ ಸಿಕ್ಕಿದೆ.... ಹೇಗೂ ಇವರಿಬ್ಬರಿಂದ ತಪ್ಪು ನಡೆದಿದೆ. ಅವಕ್ಕೆ ಇವರಿಬ್ಬರೇ ಜವಾಬ್ದಾರರಾಗುತ್ತಾರೆ.... ಶ್ರೀಹರಿ ಮೊಂಡ, ಅವನಿಗೆ ಅವನ ಮಗಳೇ ಸರಿ. ಈಗ ನೀನು ಮನೆಗೆ ವಾಪಸ್ಸು ಹೋಗು" ಎಂದು ಹೇಳಿ ಅವಳನ್ನು ಕಳಿಸಿ ಬಿಟ್ಟಳು.

ಸ್ವಲ್ಪ ಹೊತ್ತಿನಲ್ಲೇ ಮನೋಜ ಮಂಜರಿಯ ಕೊರಳಿಗೆ ಅರಿಶಿನದ ಕೊಂಬು ಕಟ್ಟಿದಮಂಗಳ ಸೂತ್ರವನ್ನು ಕಟ್ಟಿದ. ಹೂವಿನ ಹಾರಗಳನ್ನು

ಬದಲಾಯಿಸಿಕೊಂಡು, ಅರ್ಚನೆ ಮಾಡಿಸಿ, ದೇವರಿಗೆ ನಮಸ್ಕರಿಸಿದರು. ರಾಮನಾಥ ಮಂಜರಿಯನ್ನು ತಬ್ಬಿಕೊಂಡು ಹೇಳಿದ.. "ನೀನೇನೂ ಹೆದರಬೇಡ ಮಂಜರಿ...ದೇವರ ಸಮ್ಮುಖದಲ್ಲಿ ಮದುವೆ ನಡೆದಿದೆ. ಇನ್ನೂ ಯಾರೂ ಏನೂ ಮಾಡುಕ್ಕಾಗುಲ್ಲ.... ಆದರೆ ಈಗ ನಾವು ಒಂದು ಸಣ್ಣ ನಾಟಕವನ್ನು ಆಡಲೇ ಬೇಕು. ಈಗ ನಾವಿಬ್ಬರೂ ಮನೆಗೆ ಹೋಗುತ್ತೇವೆ... ನೀನು ಇವಳನ್ನು ಕರೆದುಕೊಂಡು ಬಾ.... ಶ್ರೀಹರಿ ಒಪ್ಪಲೇಬೇಕಾಗುತ್ತದೆ." ಎಂದು ಹೇಳಿ, ಇಬ್ಬರನ್ನೂ ಆಶೀರ್ವದಿಸಿದ. ರಾಮನಾಥ, ಭವಾನಿ ಮನೆಗೆ ಹಿಂತಿರುಗಿದರು.

ಅನುಮಾನಿಸುತ್ತಲೇ ಮನೆಯೊಳಗೆ ಕಾಲಿಟ್ಟರು. ಶ್ರೀಹರಿ ಫೋನಿನಲ್ಲಿ ಯಾರೊಂದಿಗೋ ಮಾತನ್ನಾಡುತ್ತಿದ್ದ. ಸುಗುಣ ಮುಸಿ ಮುಸಿ ಅಳುತ್ತಿದ್ದಳು. ವನಜ ಅವಳ ಬಳಿ ಸಪ್ಪೆ ಮುಖ ಹಾಕಿಕೊಂಡು ನಿಂತಿದ್ದಳು. ಅನಂತ ತಲೆಯ ಮೇಲೆ ಕೈ ಹೊತ್ತು ಕುಳಿತಿದ್ದ. ಉಳಿದವರು ಅಲ್ಲಲ್ಲೇ ನಿಂತಿದ್ದರು.

"ಅಚ್ಯುತ, ಯಾಕೆ ಹೀಗೆಲ್ಲಾ ಕೂತಿದೀರಿ? ಏನಾಯ್ತು?" ಏನೂ ತಿಳಿಯದವನಂತೆ ಕೇಳಿದ....

"ಮಂಜರಿ ಮನೇಲಿ ಇಲ್ವಂತೆ, ಶಾರದಾ ಫೋನು ಮಾಡಿದ್ದಳು...." ರಾಮನಾಥ ಭಾರ್ಗವಿಯ ಕಡೆ ನೋಡಿದ. ಇಬ್ಬರೂ ಕಣ್ಣಿನಲ್ಲೇ ನಕ್ಕೊಂಡರು. ಶ್ರೀಹರಿ ಪೋಲೀಸರಿಗೆ ಫೋನು ಮಾಡ್ತಿದಾನೆ...."

"ಪೋಲೀಸ್‌ಗಾ? ಯಾಕೆ? ಕಳೆದು ಹೋಗುಕ್ಕೆ ಅವಳೇನು ಮಗೂನಾ?"

"ಆ ಹುಡುಗನ ಮೇಲೆ ಕಂಪ್ಲೆಂಟ್ ಕೊಡ್ತಾನಂತೆ... ಕಿಡ್ನಾಪ್ ಮಾಡಿದಾನೆ ಅಂತ...."

"ಪೋಲೀಸ್ ತನಕ ಹೋಗ್ಬೇಕಾ? ...ನಾಚಿಕೆಗೇಡು...." ಭಾರ್ಗವಿ ಎಂದಳು.

"ನೀನು ಸುಮ್ನಿರು ಭಾರ್ಗವಿ... ಮಂಜರಿ ಕಾಣೆಯಾಗಿದಾಳೆ ಅಂತ ಅಂದ್ಮೇಲೆ, ಆ ಹುಡುಗನ ಮೇಲೆ ಅನುಮಾನ ಬರೋದು ಸಹಜ ತಾನೇ...?"

"ನಾನು ಅಷ್ಟೊತ್ನಿಂದ ಹೇಳ್ತಾನೇ ಇದೀನಿ....ಈ ರಂಪ ರಾದ್ಧಾಂತ ಎಲ್ಲಾ ಬೇಡ. ಅವರಿಬ್ಬರ ಮದುವೆಗೆ ಒಪ್ಕೋ ಅಂತ..." ಅನಂತನೆಂದ. ಶ್ರೀಹರಿ ರಿಸೀವರ್‌ನ್ನು ಕುಕ್ಕಿ, ಕುರ್ಚಿಯ ಮೇಲೆ ಕುಕ್ಕರಿಸಿದ.

"ನಾನು ಈಗ್ಲೇ ಪೋಲೀಸ್ ಸ್ಟೇಷನ್‌ಗೆ ಹೋಗ್ಬೇಕು. ನಿನ್ನ ಮಗಳ ಫೋಟೋ ತೆಗೆದ್ಕೊಡು..." ಸುಗುಣ ಕಣ್ಣೊರೆಸಿಕೊಂಡು ಎದ್ದಳು. ಅಷ್ಟರಲ್ಲಿ ಮನೆಯ ಮುಂದೆ ಬೈಕ್ ನಿಂತ ಸದ್ದಾಯಿತು. ಎಲ್ಲರ ಗಮನ ಅತ್ತ

ಹರಿಯಿತು. ಮನೋಜ ಹಾಗೂ ಮಂಜರಿ ಮನೆಯೊಳಗೆ ಕಾಲಿಟ್ಟರು...

"ಅಲ್ಲೇ ನಿಂತ್ಕೋ..." ಶ್ರೀಹರಿ ಅಬ್ಬರಿಸಿದ. ಸುಗುಣ ಅತ್ತ ನಡೆದಳು.... ಭಾರ್ಗವಿಯೂ ಅತ್ತ ಬಂದಳು.

"ಮಂಜರೀ... ಏನಿದೆಲ್ಲಾ? ...ಎಲ್ಹೋಗಿದ್ದೆ?" ರಾಮನಾಥ ಕೇಳಿದ.

"ಮಂಜರೀನ ಕರ್ಕೊಂಡು ಬಂದಿದೀನಿ.... ಆದರೆ, ನಿಮ್ಮ ಮಗಳಾಗಿ ಅಲ್ಲ; ನನ್ನ ಪತ್ನಿಯಾಗಿ. ನಾವಿಬ್ಬರೂ ಮದುವೆಯಾಗಿದೀವಿ..." ಎಲ್ಲರ ಗಮನವೂ ಅವಳ ಕೊರಳ ಕಡೆಗೆ ತಿರುಗಿತು. ಕೈಯಲ್ಲಿದ್ದ ಹಾರಗಳನ್ನು ಕಂಡರು.

"ನಿನಗ್ಯಾರು ಈ ಅಧಿಕಾರವನ್ನು ಕೊಟ್ಟರು? ...ನಾನು ನಿನ್ನ ಮೇಲೆ ಕಂಪ್ಲೆಂಟ್ ಕೊಡ್ತೀನಿ..." ಶ್ರೀಹರಿ ಅಬ್ಬರಿಸಿದ.

"ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಿದ ದಿನಾಂಕದಿಂದಲೇ, ಈ ಅಧಿಕಾರ ನನಗೆ ಸಿಕ್ಕಿತು. ನಾವಿಬ್ಬರೂ ಮೆಜಾರಿಟಿಗೆ ಬಂದಿದೀವಿ... ನಮ್ಮಿಬ್ಬರ ಮದುವೆಯನ್ನು ತಡೆಯಲು ನಿಮಗ್ಯಾರಿಗೂ ಅಧಿಕಾರವಿಲ್ಲ...."

"ಏನಂದೆ? ನಾನು ಇವಳ ಅಪ್ಪ... ನನಗೆ ಅಧಿಕಾರ ಇಲ್ವಾ? ...ಏ ನಡೆಯೇ ಒಳಗೆ...." ಮಂಜರಿಯ ಕಡೆ ಬಿರುಗಣ್ಣುಗಳನ್ನು ಬಿಟ್ಟ.

"ಅಪ್ಪಾ.... ಅಂಥಾ ತಪ್ಪನ್ನು ನಾವು ಏನೂ ಮಾಡಿಲ್ಲ.... ಮದುವೆ ಆಗಿದೀವಿ.... ನಾನು ಈಗ ಮನೋಜನ ಮನೆಗೆ ಅವರ ಮನೆಯ ಸೊಸೆಯಾಗಿ ಹೋಗ್ತಿದೀನಿ... ಇನ್ನು ಮುಂದೆ ನನ್ನನ್ನು ಬೈಯುವ ಹಕ್ಕು ನಿಮಗಿಲ್ಲ...."

"ಹೌದು ಸಾರ್.... ಮಂಜರಿ ನನ್ನ ಪತ್ನಿ. ದೇವರ ಸಮ್ಮುಖದಲ್ಲಿ ಮದುವೆಯಾಗಿದೀನಿ.... ನಿಮಗೆ ತಿಳಿಸುವುದು, ಧರ್ಮ ಅಂತೆನ್ನಿಸಿತು... ನಿಮಗೆ ಮನಸ್ಸಿದ್ದರೆ ಆಶೀರ್ವಾದ ಮಾಡಿ...." ವಿನಯದಿಂದ ಕೈ ಮುಗಿದ.

"ನನ್ನ ಇಚ್ಛೆಗೆ ವಿರುದ್ಧವಾಗಿ ಮದುವೆಯಾಗಿರುವ ನಿಮ್ಮಿಬ್ಬರಿಗೆ ನನ್ನ ಆಶೀರ್ವಾದ ಖಂಡಿತಾ ಸಿಗೋಲ್ಲ.... ಇಲ್ಲಿಂದ ತೊಲಗಿ ಹೋಗು...."

"ಅಷ್ಟು ಕಠೋರನಾಗ್ಬೇಡ ಶ್ರೀನಾಥ.... ನಮ್ಮ ಮನೆಯ ಮಗಳು ಇವಳು...ಆದದ್ದಾಗಿ ಹೋಯ್ತು... ಇಬ್ಬರನ್ನೂ ಕ್ಷಮಿಸಿ ಬಿಡು..." ರಾಮನಾಥ, ಅಚ್ಯುತ ಇಬ್ಬರೂ ನುಡಿದರು.

"ಹೌದು ಶ್ರೀಹರಿ ಎಲ್ಲೋ ಪರದೇಸಿಯಂತೆ, ಅವಿತಿಟ್ಟುಕೊಂಡಿರ ಬೇಕಾದ ಅಗತ್ಯ ಏನಿದೆ? ಯಾರಿಗೂ ತಿಳಿಯದಂತೆ ತಾಯಿಯಾದರೆ, ಅದು ಮರ್ಯಾದೆ ತರುವ ವಿಷಯಾನಾ? ಗೌರವವಾಗಿ ಸಂಸಾರ ನಡೆಸಲಿ, ಆಶೀರ್ವಾದ ಮಾಡು...." ಜಲಜ ನುಡಿದಳು.

"ಹೌದು ರೀ. ಈ ಪ್ರಕರಣ ಎಲ್ಲಾ ಇಲ್ಲಿಗೇ ಮುಗಿಯಲಿ? ಇನ್ಯಾಕೆ ಅಡ್ಡಿ ಮಾಡ್ಬೇಕು? ನಮ್ಮ ಒಪ್ಪಿಗೆಯಂತೂ ಬೇಕಿಲ್ಲ... ಇನ್ನೇಮ ಆಡಿ ಪ್ರಯೋಜನ?"

"ನೀನೂ ಇವರ ಕಡೆಗೆ ಸೇರಿ ಬಿಟ್ಟೆಯಾ?"

"ಹಾಗಲ್ಲ ಶ್ರೀಹರಿ.... ಈ ಮದುವೆಗೆ ವಿರೋಧ ನಮ್ಮ ಮನೆಯಿಂದ ಮಾತ್ರ. ಅವರ ಮನೆಯವರು ಒಪ್ಪಿಗೆ ಕೊಟ್ಟಿದ್ದಾರೆ.... ಆ ಮನೆಯಲ್ಲಿ ಮಂಜರಿಗೆ ಸ್ವಾಗತವಿದ್ದೇ ಇದೆ. ನೀನು ಈಗ ಮನಸ್ಸನ್ನು ಬದಲಾಯಿಸದಿದ್ದರೆ, ಮಗಳನ್ನು ಕಳೆದುಕೊಳ್ಳುತ್ತೀಯ. ಆ ಕೊರಗು ಜೀವಮಾನವೆಲ್ಲಾ ನಿನ್ನಲ್ಲಿ ಉಳಿಯುತ್ತದೆ" ರಾಮನಾಥನೆಂದ.

"ಸರಿ, ಯಾರು ಏನು ಬೇಕಾದ್ರೂ ನಿರ್ಧರಿಸಿ... ಈ ರಾತ್ರಿ ಮಂಜರಿ ಇಲ್ಲಿರಲಿ. ನಿಮ್ಮ ಮಗಳಾಗಿ ಅಲ್ಲ; ನನ್ನ ಪತ್ನಿಯಾಗಿ. ನಾಳೆ ದಿನ ನಾವು ಕುಟುಂಬ ಸಮೇತರಾಗಿ ಬಂದು ಸಾಂಪ್ರದಾಯಿಕವಾಗಿ, ಇವಳನ್ನು ನಮ್ಮ ಮನೆಗೆ ಕರೆದುಕೊಂಡು ಹೋಗುತ್ತೇನೆ...." ಮನೋಜನೆಂದ.

"ಈಗಲೇ ಕರ್‍ಕೊಂಡ್ಹೋಗು...."

"ಅದು ನಿಮಗೇ ಅವಮಾನ. ಮಗಳು ಮನೆಬಿಟ್ಟು ಓಡಿ ಹೋದಳು ಅನ್ನುವ ಅಪಖ್ಯಾತಿ ನಿಮಗೇ ಅಂಟುತ್ತದೆ.... ಯೋಚಿಸಿ"

"ನೀನು ತಿಳುವಳಿಕೆ ಹೇಳಬೇಕಾಗಿಲ್ಲ.... ಈಗಲೇ ಪೋಲೀಸರಿಗೆ ತಿಳಿಸ್ತೀನಿ" ಎನ್ನುತ್ತಾ ಫೋನು ಇಟ್ಟ ಕಡೆಗೆ ನಡೆದ.

"ಸರಿ, ನನ್ನ ಮೇಲೆ ನಿಮಗೆ ಇಷ್ಟೂ ಪ್ರೀತಿ ಇಲ್ಲದಿದ್ದ ಮೇಲೆ, ನಾನು ಇಲ್ಲಿ ಒಂದು ಗಳಿಗೆಯೂ ಇರುವುದಿಲ್ಲ. ನಿಮ್ಮ ಭಾಗಕ್ಕೆ ನಾನು ಇಲ್ಲ ಅಂತ ತಿಳಿದುಕೊಳ್ಳಿ... ನಡೆ ಮನೋಜ್.... ನನ್ನನ್ನು ಇಲ್ಲಿಂದ ಕರ್‍ಕೊಂಡು ಹೋಗು...." ಮಂಜರಿ ನುಡಿದಳು.

"ಮನೆ ಬಾಗಿಲಿಗೆ ಬಂದಿರುವ ಮಗಳಿಗೆ ಅವಮಾನ ಮಾಡ್ಬೇಡ ಶ್ರೀಹರಿ... ಪಲ್ಲವಿಗೆ ಮದುವೆ ಆಗ್ಲಿಲ್ಲ ಅಂತ ಈಗಲೂ ಪರಿತಾಪ ಪಡ್ತಿದೀನಿ... ದೇವರ ನಿಯಾಮಕ ಹೀಗೇ ಇದ್ದರೆ ನೀನು ಬದಲಾಯಿಸುಕ್ಕೆ ಸಾಧ್ಯವಿಲ್ಲ... ಒಪ್ಕೋ..." ಅನಂತನೆಂದ.

"ಶ್ರೀಹರಿ ದಿಕ್ಕು ತೋಚದವನಂತೆ ಸುಮ್ಮನೆ ಕುಳಿತ. ಅಷ್ಟರಲ್ಲಿ ಮನೋಜನ ತಂದೆ ಫೋನು ಮಾಡಿದ್ದರು. ಎಲ್ಲಿದೀಯೋ....? ಪೋಲೀಸರು ನಿನ್ನನ್ನ ಹುಡುಕ್ತಿದಾರೆ.... ಬೇಗ ಮನೆಗೆ ಬಾ...."

"ಅಪ್ಪಾ, ನಾನು ಇಲ್ಲಿ ಮಂಜರಿಯ ಮನೇಲಿದೀನಿ.... ನೀವು ಈಗಲೇ ಬನ್ನಿ..." ಎಂದ.

"ಯಾರೂ ಬರೋದು ಬೇಡ.... ಸಂಪ್ರದಾಯದ ಪ್ರಕಾರ ನಾವೇ ನಿಮ್ಮ ಮನೆಗೆ ಬರ್ತೀವಿ...." ಅಚ್ಯುತ ನುಡಿದಾಗ, ಶ್ರೀಹರಿ ಸುಮ್ಮನೇ ಕುಳಿತಿದ್ದ.... ಅದನ್ನು ಶುಭ ಸೂಚನೆಯೆಂದೇ ಎಲ್ಲರೂ ಅರಿತರು. ಶ್ರೀಹರಿ ನಿಧಾನವಾಗಿ ತಡೆ ತಡೆದು ನುಡಿದ.

"ನೀನು ಹೋಗಿ ಮಾತಾಡ್ಕೊಂಡು ಬಾ....ಅಚ್ಯುತ, ನೀನು ಈ ಮನೆಗೆ ಹಿರಿಯ". ಎಲ್ಲರೂ ವಿಸ್ಮಯದಿಂದ ಅವನ ಕಡೆ ನೋಡಿದರು. ಶ್ರೀಹರಿ ಚೇತನವನ್ನೆಲ್ಲ ಕಳೆದುಕೊಂಡವನಂತೆ ಕುಳಿತಿದ್ದ.

"ಹೌದು... ನಾನೇ ಹೇಳ್ತಿದೀನಿ.... ಆದರೆ, ನಾನು ಈಗಲೂ ಮನಃ ಪೂರ್ವಕವಾಗಿ ಒಪ್ಪಿಗೆ ಕೊಟ್ಟಿಲ್ಲ... ಮಂಜರಿ ಅಮ್ಮನ ಮುದ್ದಿನ ಮೊಮ್ಮಗಳು.... ಅಮ್ಮ ಕನಸ್ನಲ್ಲಿ ಬಂದು ಕೇಳಿದ್ರೆ ಏನುತ್ತರ ಕೊಡ್ಲೀ?.... ಹೇಳು...."

"ಹೌದು, ಶ್ರೀಹರಿ. ನಿನ್ನ ಸಂಕಟ ಅರ್ಥವಾಗುತ್ತೆ. ಆದರೆ ಇದರಲ್ಲೇ ನಮ್ಮ ಒಳಿತು ಅಂತ ನಿಂಗೆ ಅರ್ಥವಾಯ್ತಲ್ಲ. ಅದೇ ಸಮಾಧಾನ...."

"ಇವನ ಮನೆಯವರು ದೊಡ್ಡ ಹೃದಯದವರು ಅಂತ ಎಲ್ಲರೂ ಅವರನ್ನು ಹೊಗಳ್ತಾರೆ.... ಆಗ ಮಂಜರಿಯ ಮುಖ ಚಿಕ್ಕದಾಗುತ್ತೆ.... ಅವರಿಗೆ ಸರಿ ಸಮಾನರಾಗಿ ನಾವು ಇರ್ಬೇಕು.... ಆಗಲೇ ಕೊಟ್ಟ ಮನೆಯಲ್ಲಿ ಸ್ಥಾನ ಮಾನ...." ರಾಮನಾಥನೆಂದ.

"ಆಯ್ತು.... ನಾನು ಮತ್ತೆ ಮನಸ್ಸನ್ನು ಬದಲಾಯಿಸುವುದರೊಳಗೆ, ಸಾಂಪ್ರದಾಯಿಕವಾಗಿ ಅದೇನೇನು ಮಾತುಕತೆ ನಡೆಯಬೇಕೋ, ಕೆಲಸ ಕಾರ್ಯಗಳು ಆಗಬೇಕೋ ಆ ಜವಾಬ್ದಾರಿ ನಿಮ್ಮಿಬ್ಬರದು.... ನಾನು ಯಾವುದನ್ನೂ ಹೇಳುವ ಕೇಳುವ ಸ್ಥಿತಿಯಲ್ಲಿಲ್ಲ...."

"ಆದರೂ.... ನೀನು ನಮ್ಮೊಂದಿಗೆ ಇರಲೇ ಬೇಕು...." ಅಚ್ಯುತನೆಂದ.

"ಥ್ಯಾಂಕ್ಯೂ ಸಾರ್.... ನೀವೆಲ್ಲಿ ನಿಮ್ಮ ಹಠವನ್ನೇ ಸಾಧಿಸ್ತೀರೋ ಅಂತ ಭಯವಾಗಿತ್ತು...." ಮನೋಜನೆಂದ.

"ನೀನು ಮಾತಾಡ್ಬೇಡ... ನೀನು ಇನ್ನೂ ಅಳಿಯನಾಗಿಲ್ಲ...." ಶ್ರೀಹರಿಯೆಂದ. ರಾಮನಾಥ, ಮನೋಜನನ್ನು ತನ್ನ ಕಡೆಗೆ ಎಳೆದು, ಸುಮ್ಮನಿರು ಎನ್ನುವಂತೆ ಸಂಜ್ಞೆ ಮಾಡಿ, ಅಚ್ಯುತನ ಕಡೆ ತಿರುಗಿದ. ಅತ್ತಿಗೆಯ ಕಡೆ ತಿರುಗಿ ಸಂಜ್ಞೆ ಮಾಡಿದ.

"ಅಚ್ಯುತ, ಅತ್ತಿಗೆಯನ್ನು ಕರೆದುಕೊಂಡು, ನೀನು ಈಗಲೇ ಇವರ ಮನೆಗೆ ಹೊರಡು. ಶುಭಸ್ಯ ಶೀಘ್ರಂ ಅಂತ ತಡ ಮಾಡ್ಬೇಡ..." ಎಂದ. ವನಜಾ ಸಿದ್ಧಳಾಗಲು ಒಳಗೆ ನಡೆದಿದ್ದಳು. ಸುಗುಣ ಅವಳ ಬಳಿ ಸಾರಿದಳು.

"ಅಕ್ಕಾ ನಿಮಗೆ ಬೇಸರ ಏನಿಲ್ಲ ತಾನೇ....?"

"ಇಲ್ಲ ಸುಗುಣ.... ನನಗ್ಯಾಕೆ ಬೇಸರ?....ಸಧ್ಯ ನೀವಿಬ್ಬರೂ ಒಪ್ಪಿಗೆ ಕೊಟ್ರಲ್ಲ. ಆಗುವ ಮಂಗಳ ಕಾರ್ಯ ಸುಸೂತ್ರವಾಗಿ ನೆರವೇರಿದರೆ ಸಾಕಾಗಿದೆ... ಇಲ್ಲದಿದ್ದರೆ ಅತ್ತೆಯ ಆತ್ಮ ಎಷ್ಟು ನೊಂದುಕೊಳ್ಳುತ್ತಿತ್ತೋ...."

"ಆದರೂ, ಮಂಜರಿ ನಮಗೆ ಇಂಥಾ ಶಿಕ್ಷೆಯನ್ನು ಕೊಡಬಾರದಾಗಿತ್ತು.... ಇವರ ಮುಖದ ನಗೆಯೇ ಮಾಸಿ ಹೋಗಿದೆ.... ಅಮ್ಮನ್ನ ಕಳೆದುಕೊಂಡ ದುಃಖದಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ.... ಈಗ ಈ ಶಾಕ್..."

"ಕಾಲಾಯ ತಸ್ಮೈ ನಮಃ ಅಂತ.... ಕಾಲ ಎಲ್ಲವನ್ನೂ ಮರೆಸುತ್ತದೆ. ಮೊಮ್ಮಗುವಿನ ಆಟ ಪಾಠವನ್ನು ನೋಡಿ ಶ್ರೀಹರಿಯ ಮುಖದಲ್ಲೂ ಮಂದಹಾಸ ಮಿನುಗುತ್ತದೆ. ಮನೆಯಲ್ಲಿ ಹುಟ್ಟಿ ಬುರುತ್ತಿರುವ ಮೊದಲ ಮೊಮ್ಮಗು. ಅದನ್ನು ಸಂಭ್ರಮದಿಂದ ಬರಮಾಡಿಕೊಳ್ಳೋಣ...."

"ಆದರೂ ನಗೆ ಪಾಟಲು ಆಗಿ ಹೋಯ್ತಲ್ಲ ಅಕ್ಕಾ... ಮೊದಲು ಮದುವೆ...ನಂತರ ಮಗು ಆಗ್ಬೇಕಾಗಿತ್ತು...."

"ಈಗ ಅದನ್ನೇ ಸರಿ ಮಾಡಿಕೊಳ್ಳಬೇಕಾಗಿದೆ.... ಈ ಅವಿವೇಕವೋ, ಆಕಸ್ಮಿಕವೋ ನಡೆಯದೇ ಇದ್ದಿದ್ದರೆ, ಮಂಜರಿಯ ಮದುವೆ ಈ ವರ್ಷದಲ್ಲೇ ನೆರವೇರುತ್ತಿತ್ತಾ?.... ಅತ್ತೆಯವರ ಅಪೇಕ್ಷೆ ಇದೇ ಆಗಿತ್ತು ಅಂತ ಕಾಣುತ್ತೆ...."

"ಆದರೂ, ಹೀಗಾಗಬಾರದಾಗಿತ್ತು...."

"ಶ್ರೀಹರಿ, ಒಪ್ಗೆ ಕೊಟ್ಟಿದ್ದಾನೆ.... ನೀನು ಕೊರಗ್ಬೇಡ.... ಈ ಮನೆಯಲ್ಲಿ ಇನ್ನೂ ಅನೇಕ ಮಂಗಳ ಕಾರ್ಯಗಳು ನಡೆಯಬೇಕಾಗಿದೆ.... ಹೊತ್ತಾಗುತ್ತೆ, ನಾವು ಹೊರಡ್ತೀವಿ...."

"ಮನೆ, ಮಠ ಎಲ್ಲಾ ಸರಿಯಾಗಿ ನೋಡ್ಕೊಂಡು ಬನ್ನಿ ಅಕ್ಕಾ.... ಮಂಜರಿ ಅಲ್ಲಿ ಸುಖವಾಗಿರ್ಬೇಕು.... ಹಾಗೇ ಹೂವು ಹಣ್ಣುಗಳನ್ನು ತಗೊಂಡು ಹೋಗಿ...." ಮರೆಯದೇ ಹೇಳಿದಳು.

"ಸುಖವನ್ನು ಮಂಜರಿಯೇ ಆರಿಸಿಕೊಂಡಿದ್ದಾಳೆ.... ಸುಮ್ಮನಿದ್ದು ಬಿಡು...." ಎಂದು ಹೇಳಿ ಹೊರಕ್ಕೆ ಬಂದಳು. ಅಚ್ಯುತ, ಹೆಂಡತಿಯೊಂದಿಗೆ ಹೊರಟ.

****

ಕೆಲವೇ ದಿನಗಳೊಳಗೆ ಮಂಜರಿ ಮನೋಜರ ವಿವಾಹ ನೆರವೇರಿತು. ಶ್ರೀಹರಿ ತಮ್ಮ ಮನೆಯ ಸಂಪ್ರದಾಯದಂತೆ ಮದುವೆಯನ್ನು ಮಾಡಿಕೊಟ್ಟ. ಅದಕ್ಕೆ ಅವರ ಮನೆಯವರ ವಿರೋಧವಿರಲಿಲ್ಲ. ಮಗಳನ್ನು ಸಾಂಪ್ರದಾಯಿಕವಾಗಿ

ಅವರ ಮನೆಗೆ ಕರೆದೊಯ್ದು ಒಪ್ಪಿಸಿ ಕೊಟ್ಟ. ಆದರೆ ಇದುವರೆಗೆ ಯಾವ ಮಾತನ್ನೂ ಶ್ರೀಹರಿ ಆಡಿರಲಿಲ್ಲ.

ಮನೆಗೆ ಹಿಂತಿರುಗಿದ ಶ್ರೀಹರಿ ರೂಮಿನಲ್ಲಿ ಕುಳಿತು ಮನಸಾರೆ ಅತ್ತ. ತಾಯಿಯ ಪಟದ ಮುಂದೆ ನಿಂತ... "ಅಮ್ಮಾ ನನ್ನನ್ನು ಕ್ಷಮಿಸಿ ಬಿಡು. ನಾನು ಮಾಡಿದ್ದು ಸರಿಯೋ ತಪ್ಪೋ ನನಗೆ ಗೊತ್ತಿಲ್ಲ..." ಎಂದ. ಹಿಂದೆ ಬಂದು ನಿಂತಿದ್ದ ಸುಗುಣ ಅವನ ಭುಜದ ಮೇಲೆ ಕೈಯಿಟ್ಟಳು.

"ಅತ್ತೆಯವರ ಇಚ್ಛೆ ಇದೇ ಆಗಿತ್ತು ಅಂತ ಕಾಣುತ್ತೆ. ಇಲ್ಲಿದಿದ್ದರೆ ಖಂಡಿತಾ ಹೀಗಾಗುತ್ತಿರಲಿಲ್ಲ. ನಾವು ಎಷ್ಟೇ ವಿರೋಧಿಸಿದರೂ, ಮದುವೆ ನಡೆದೇ ನಡೆಯಿತು. ವರ್ಷದೊಳಗೆ ಮದುವೆಯೂ ಆಯಿತು. ಮೊಮ್ಮಗುವೂ ಹುಟ್ಟುತ್ತೆ. ನಿಮ್ಮ ತಾಯಿ ಮತ್ತೆ ಈ ಮನೆಗೆ ಜನ್ಮ ಎತ್ತಿ ಬರ್ತಾರೆ.... ನೋಡ್ತೀರಿ...." ಸಮಾಧಾನ ಹೇಳಿದಳು.

ಶ್ರೀಹರಿ ಸುಮ್ಮನೆ ಹೆಂಡತಿಯ ಕಡೆ ನೋಡಿದ. ಆ ನೋಟದಲ್ಲಿ ಅಸಹಾಯಕತೆ, ಅಸಮಾಧಾನ ಎರಡೂ ಬೆರೆತಿದ್ದವು. ಅನಿರೀಕ್ಷಿತ ಘಟನೆಗಳಿಂದ ಆಘಾತಗೊಂಡ ಕಸಿವಿಸಿ ಮುಖದಲ್ಲಿ ಕಂಡು ಬರುತ್ತಿದ್ದವು. ನಮ್ಮ ಮಗಳು ನಮಗೇ ಯಾಕೆ ಹೀಗೆ ಮೋಸ ಮಾಡಿಬಿಟ್ಟಳು? ಎನ್ನುವ ಗೊಂದಲಕ್ಕೊಳಗಾಗಿದ್ದ. "ಪಲ್ಲವಿಗೆ ಮದುವೆಯಾಗಲಿಲ್ಲ ಎನ್ನುವ ಕೊರಗು ಅಣ್ಣನಿಗೆ ಇದ್ದರೂ, ಅವನು ನನ್ನಂಥೆ ವ್ಯಥೆಗೊಂಡಿಲ್ಲ...." ಎಂದ.

"ಪಲ್ಲವಿಗೆ ಸರಿಯಾದ ವಯಸ್ಸಿನಲ್ಲಿ ಮದುವೆ ನಡೆದು ಹೋಗಿದ್ದರೆ, ಈ ರೀತಿ ಖಂಡಿತಾ ನಡೆಯುತ್ತಿರಲಿಲ್ಲ. ಬಹುಶಃ, ಅವಳಂತೆ ತಾನೂ ಎಲ್ಲಿ ಉಳಿದು ಬಿಡುತ್ತೀನೋ ಎಂದು ಹೆದರಿರಬಹುದು...." ಎಂದು ಹೇಳಬೇಕೆಂದುಕೊಂಡರೂ, ಸುಗುಣ ಹೇಳಲಿಲ್ಲ. ಮೌನವಾಗಿ, ಅವನ ವ್ಯಥೆಯಲ್ಲಿ ಪಾಲುದಾರಳಾದಳು.

"ನಿಮ್ಮಮ್ಮ ಪುಣ್ಯಾತ್ಗಿತ್ತಿ ಕಣ್ರೀ.... ಅಂತೂ ತಮ್ಮ ಆಸೆಯನ್ನು ಈಡೇರಿಸಿಕೊಂಡರು.... ಗೋದಾನದ ಪುಣ್ಯ.... ಕನ್ಯಾದಾನದ ಪುಣ್ಯ... ಸದ್ಗತಿಯೋ ಸದ್ಗತಿ..." ಭಾರ್ಗವಿ ಗಂಡನ ತೋಳು ಚಿವುಟಿ ನುಡಿದಳು.

"ನೋಯುತ್ತೆ ಕಣೇ.... ನನ್ನನ್ಯಾಕೆ ಚಿವುಟ್ತೀಯಾ? ....ಎಲ್ಲಾ ಪುಣ್ಯಕ್ಕೂ ಅಚ್ಯುತ, ಶ್ರೀಹರಿಯೇ ಕಾರಣರು. ನಾನು ಏನಿದ್ದರೂ ಶುನಶ್ಯೇಪ..."

"ಏನ್ರೀ ಹಾಗಂದ್ರೆ?"

"ಮಧ್ಯದವನು, ಆಟಕ್ಕುಂಟು ಲೆಖ್ಖಕ್ಕಿಲ್ಲ... ಅಂತ.... ಹಿರಿಮಗ ಅನಂತ, ಅಪ್ಪನಿಗೆ ಬೇಕಾದವನು, ವಂಶೋದ್ಧಾರಕ ಅಂತ.... ಕಿರಿಯವನು ಶ್ರೀಹರಿ,

ಅಮ್ಮನಿಗೆ ಪ್ರಿಯವಾದವನು, ಮುದ್ದಿನ ಮಗ ಅಂತ...."

"ಆಯ್ತಲ್ಲ ಇಬ್ಬರಿಂದಲೂ.... ನಿಮ್ಮಮ್ಮನಿಗೆ ಸದ್ಗತಿ ಸಿಗ್ತಲ್ಲ...ಹೋಗ್ಲಿ ಬಿಡಿ... ನಾನು ಪ್ರವೇಶಿಸದೇ ಇದ್ದಿದ್ದರೇ.... ಮಂಜರಿ ಮದುವೆ ಇಲ್ಲದೇ ತಾಯಿಯಾಗಿರುತ್ತಿದ್ದಳು. ಎಲ್ಲರಿಗಿಂತ ಹೆಚ್ಚಿನ ಪುಣ್ಯ ನಮಗೇ ಸಿಗ್ಬೇಕು...."

"ಹೌದು ಭಾರ್ಗವಿ, ನಾವಿಬ್ಬರೂ ಧೈರ್ಯ ವಹಿಸದೇ ಇದ್ದಿದ್ದರೇ, ಏನೇನಾಗಿ ಹೋಗ್ತಿತ್ತೋ.... ಆದರೂ ಶ್ರೀಹರಿಗೆ ಸಮಾಧಾನವಿಲ್ಲ. ಮುಖದಲ್ಲಿ ಪೆಚ್ಚು ಕಳೆ ಬಂದು ಬಿಟ್ಟಿದೆ. ಮನೋಜ ಏನಾದ್ರೂ ಬಾಯಿ ಬಿಟ್ಟರೆ, ನನಗೂ ಇದೆ ಮರ್ಯಾದೆ..."

"ಅಂಥಾ ಹುಡುಗ ಅಂತ ಅನ್ಸಲ್ಲ... ಸಭ್ಯನೇ.... ಮಂಜರಿ ಬುದ್ಧಿವಂತೆ. ಲವ್ ಮಾಡಿದ್ರೂ ಒಳ್ಳೆಯ ಹುಡುಗನನ್ನೇ ಆರಿಸಿಕೊಂಡು ಲವ್ ಮಾಡಿದಾಳೆ.... ಪಾಪ ಪಲ್ಲವಿ.... ಅವಳೂ ಹೀಗೇ ಯಾರನ್ನಾದ್ರೂ ತಾನೇ ನೋಡ್ಕೊಂಡಿದ್ರೆ, ಇಷ್ಟು ಹೊತ್ತಿಗೆ, ನಿಮ್ಮಣ್ಣ ಅಜ್ಜ ಆಗಿರ್ತಿದ್ರು.... ಶ್ರೀಹರಿ ಎಲ್ಲರಿಗಿಂತ ಚಿಕ್ಕವನು. ಅವನೇ ಮೊದಲು ತಾತ ಆಗ್ತಿದಾನೆ... ವರ್ಷ ಕಳೀತಿದ್ದ ಹಾಗೇಯೇ ನಮ್ಮ ನಂದೂಗೆ ಮದುವೆ ಮಾಡಿ ಬಿಡೋಣ..." ಆಸೆಯಿಂದ ಹೇಳಿದಳು.

"ಮೊದಲು ಕೇಳ್ಕೋಡು... ಅವನೂ ಯಾರನ್ನಾದ್ರೂ ಲವ್ ಮಾಡಿರಬಹುದು..."

"ಹೆದರಿಸ್ಬೇಡಿ.... ಯಾವುದೋ ಹುಡ್ಗೀನ ನಮ್ಮ ಸೊಸೆ ಅಂತ ಹೇಗ್ತೀ ಒಪ್ಕೊಳ್ಳೋದು...."

"ಈಗ ಮನೋಜನ್ನ ಅಳಿಯ ಅಂತ ಒಪ್ಕೊಳ್ಳಲಿಲ್ವಾ ಹಾಗೇ.... ಹಾಗೇನಾದ್ರೂ ಯಾರನ್ನಾದ್ರೂ ಲವ್ ಮಾಡಿದ್ದರೆ, ನಾವು ವಿರೋಧಿಸುವುದು ಬೇಡ. ಸಂತೋಷವಾಗಿ ಒಪ್ಕೊಳ್ಳೋಣ..." ಭಾರ್ಗವಿ ಪೆಚ್ಚಾದಳು.

"ದೇವ್ರೇ.... ನನ್ನ ಮಗನಿಗೆ ಅಂಥಾ ಬುದ್ಧಿಯನ್ನು ಕೊಡ್ಬೇಡ..." ಕೈ ಮುಗಿದು ಕಣ್ಣು ಮುಚ್ಚಿ ದೇವರಲ್ಲಿ ಬೇಡಿದಳು. ರಮಾಕಾಂತ ನಕ್ಕ.

****

"ಅಂತೂ ಅವರಿಬ್ಬರೂ ಅಮ್ಮನಿಗೆ ಪ್ರೀತಿ ಪಾತ್ರರಾದರು. ನೀವೇ ಯಾತಕ್ಕೂ ಬೇಡದವರಾದ್ರೀ.... ಗೋದಾನದ ಪುಣ್ಯವೆಲ್ಲಾ ರಮಾಕಾಂತನಿಗೆ, ಕನ್ಯಾದಾನದ ಪುಣ್ಯ ಶ್ರೀಹರಿಗೆ.... ನಮಗೇನ್ರೀ ಸಿಕ್ತು?"

"ಹಾಗ್ಯಾಕೆ ಅಂದ್ಕೋತೀಯ ಜಲಜಾ.... ನಮಗೂ ಪಾಲಿದೆ.... ದೊಡ್ಡೋನಾಗಿ ಎಲ್ಲವನ್ನೂ ನೆರವೇರಿಸಿದವನು ನಾನೇ ಅಲ್ವಾ?" ಅನಂತನೆಂದ.

"ಆದ್ರೇನು? ನಿಜ ಏನೂಂತ ಅವರಿಬ್ಬರಿಗೂ ಗೊತ್ತು. ಮೇಲಿರುವ ಮಹಾತಾಯಿ ನಿಮ್ಮಮ್ಮನಿಗೂ ಗೊತ್ತು...."

"ಅದಕ್ಕೆ ನಾನೇನು ಮಾಡ್ಲೀ...? ನನ್ನ ಕೈಲಿ ಏನಿತ್ತು....? ಅಷ್ಟೊಂದು ಹಣ ಎಲ್ಲಿದೆ?.... ಪಲ್ಲವಿಗೆ ಗಂಡನ್ನು ಎಲ್ಲಿಂದ ಹಿಡ್ಕೊಂಡು ಬರ್ಲಿ?...ಬಡ ಮೇಷ್ಟ್ರು ನಾನು.... ನನಗೆ ಗೊತ್ತಿರೋದು ಒಂದೇ...ಪಾಠ ಹೇಳಿಕೊಡೋದು... ವಿದ್ಯಾದಾನ ಮಾಡ್ತಿದೀನಲ್ಲ. ಅಷ್ಟು ಸಾಕು...."

"ಒಂದು ಚೂರು ಭೂಮೀನ ಕೊಡ್ಕೊಂಡು, ಭೂದಾನ ಮಾಡಿದ್ರೆ?"

"ತಮಾಷೇನಾ ಜಲಜಾ?" ನಗುತ್ತಾ ಕೇಳಿದ. "ಭೂಮಿ ಚಿನ್ನವಾಗಿದೆ.... ಸುಲಭವಾಗಿ ಎಲ್ಲಿ ಸಿಗುತ್ತೆ? ...ಒಂದು ವೇಳೆ ಇತ್ತು ಅಂತ ಅಂದ್ಕೊಂಡ್ರೂ ದಾನ ಕೊಟ್ಟರೆ ನಮಗೆ ಏನು ಉಳಿಯುತ್ತೆ....? ಎಷ್ಟು ಕೊಟ್ಟರೂ ಖರ್ಚಾಗದೇ ಉಳಿಯೋದು ಅಂದ್ರೇ ಈ ವಿದ್ಯೆ ಒಂದೇ... ಶಕ್ತಿ ಇರುವವರೆಗೂ ಮಕ್ಕಳಿಗೆ ಪಾಠ ಹೇಳಿಕೊಡ್ತೀನಿ ಅಮ್ಮನ ಹೆಸರ್ನಲ್ಲಿ...."

"ಬಡ ಮೇಷ್ಟ್ರು ಅಂತ ನಿಮ್ಮ ತಮ್ಮಂದಿರೇ ಹಂಗಿಸ್ತಾರೆ... ನಮ್ಮ ಪಾಲಿನ ಆಸ್ತಿಯನ್ನು ಮಾರಿ ಬಿಡೋಣ.... ಆ ಹಣದಲ್ಲಿ ಅಂಗೈಯಗಲವಾದರೂ ಸರಿ. ಜಮೀನನ್ನು ತಗೊಂಡು ದಾನ ಮಾಡೋಣ... ವಿದ್ಯಾದಾನ ಮಾಡ್ತಾನೇ ಇದೀರಲ್ಲ... ಸಾಕು. ಭೂದಾನ ಮಾಡೋಣ...."

"ಇದು ಆಗ ಹೋಗದ ಮಾತು.. ಅಲ್ಲದೇ ನಮ್ಮಪ್ಪ ಕಷ್ಟಪಟ್ಟು ಕಟ್ಟಿಸಿರುವ ಮನೆ.... ಇದನ್ನು ಮಾರೋದೇನು ಬೇಡ.... ನಿನ್ನ ಮಕ್ಕಳು ಸಂಪಾದಿಸ್ತಾರಲ್ಲ.... ಆಗ ಸ್ವಂತ ಭೂಮಿಯನ್ನು ಕೊಂಡು ಕೊಳ್ಳೋಣ.... ಆಗ ಅದನ್ನು ಇಟ್ಟುಕೊಳ್ಳದೇ ದಾನ ಮಾಡೋಣ ಅಂತ ನೀನೇ ಯೋಚಿಸು. ಸಧ್ಯಕ್ಕೆ ಆಗೋದು ವಿದ್ಯಾದಾನ ಒಂದೇ...."

"ಆಗ ನನ್ನ ಮಾತನ್ನು ಯಾರು ಕೇಳ್ತಾರೆ...? ಅಲ್ಲದೇ ಅದು ಅವರವರ ಸ್ವಂತ ಆಸ್ತಿ.... ಸ್ವಂತ ಆಸೆ... ನನಗೆಲ್ಲಿದೆ ಅವಕಾಶ? ಏನೋ ಹೇಳಿದ್ರೆ ಏನೋ ಆಡ್ತೀರಿ...."

"ಆಸೆಗೆ ಮಿತಿ ಎಲ್ಲಿದೆ? ...ಭಾರ್ಗವಿ, ಸುಗುಣಕ್ಕಿಂತ ಹೆಚ್ಚು ಮೆರೆಯ ಬೇಕು ಎಂಬ ಆಸೆ ನಿನಗೆ.... ನಿನಗೊಂದು ಹೊಸ ಸುದ್ಧಿ ಹೇಳ್ಲಾ?" ಉತ್ಸುಕನಾಗಿ ಕೇಳಿದ.

"ಏನದು?" ಬೇಸರದಿಂದ ಕೇಳಿದಳು.

"ನನ್ನ ಮಾತು ಅಂತಂದ್ರೆ ನಿಂಗೆ ಬೇಸರ, ಹೋಗ್ಲಿ ಬಿಡು...."

"ಹೇಳಿ, ಕೇಳ್ಬಿಟ್ಟೇ ಮಲಗ್ತೀನಿ.... ಇಲ್ದಿದ್ರೆ ನಿಮಗೆ ನಿದ್ದೆ ಬರುಲ್ಲ...."

"ಈ ವರ್ಷದ ಸಾಲಿನಲ್ಲಿ, ಅತ್ಯತ್ತಮ ಸಾಧನೆ ಮಾಡಿದವರಿಗೆ ಕೊಡುವ ಪುರಸ್ಕಾರದ ಪಟ್ಟಿಯಲ್ಲಿ ನನ್ನ ಹೆಸರೂ ಇದೆ...."

"ಆಂ! ಎನ್ನುತ್ತಾ ಎದ್ದು ಕುಳಿತಳು.

"ಹೌದು ಜಲಜಾ.... 'ಉತ್ತಮ, ದಕ್ಷ ಶಿಕ್ಷಕ, ಉಪಾಧ್ಯಾಯ' ರಿಗೆ ಕೊಡುವ ಪುರಸ್ಕಾರ ನನಗೂ ಸಿಗುತ್ತಿದೆ.... ರಾಷ್ಟ್ರಪತಿಯವರಿಂದ.... ಅಮ್ಮನ ಆಶೀರ್ವಾದದ ಫಲ...."

"ಹೌದಾ?.... ಈಗ ಹೇಳ್ತಿದೀರಲ್ಲ...," ಖುಷಿಯಿಂದ ಮುಖ ಅರಳಿತ್ತು.

"ಮನೇಲಿ ಈ ಅವಾಂತರಗಳ ನಡುವೆ ನಂಗೇ ಮರೆತು ಹೋಗಿತ್ತು... ನಿಂಗೇ ಇಷ್ಟು ಸಂತೋಷವಾಗಿರುವಾಗ, ಅಪ್ಪ ಅಮ್ಮನಿಗೆ ಎಷ್ಟು ಸಂತಸವಾಗಿರುಲ್ಲ?" ಕೃತಜ್ಞತೆಯಿಂಧ ತಂದೆ ತಾಯಿಯ ಭಾವಚಿತ್ರಕ್ಕೆ ಕೈ ಮುಗಿದ.... ಜಲಜ ತೃಪ್ತಿಯಿಂದ ಬೀಗಿದಳು.

* * *

ಯಾರ ತಪ್ಪು?

"ಭ್ರೂಣ ಹತ್ಯೆ ಮಹಾಪಾಪ ಅಂತಾರೆ.... ನಾನು ಅಬಾರ್ಷನ್ ಮಾಡಿಸ್ಕೊಳ್ಳಲ್ಲ" ವರ್ಷಾ ಖಡಾ ಖಂಡಿತವಾಗಿ ಹೇಳಿದಳು. ಹರ್ಷ ಅವಳನ್ನು ತನ್ನ ಕಡೆಗೆ ತಿರುಗಿಸಿಕೊಂಡ.

"ನನ್ನ ಮಾತನ್ನು ಕೇಳು ವರ್ಷಾ.... ನಮಗೆ ಈಗಲೇ ಮಕ್ಕಳು ಬೇಡ. ಜವಾಬ್ದಾರಿ ಹೆಚ್ಚಾಗುತ್ತೆ. ಇನ್ನೆರಡು ವರ್ಷ ಆರಾಮವಾಗಿರೋಣ...."

"ಆ ಮಾತನ್ನು ನಿಮ್ಮಮ್ಮನಿಗೆ ಹೇಳಿ.... ಈಗಾಗ್ಲೇ ಮದುವೆಯಾಗಿ ಎರಡು ವರ್ಷಗಳಾಯ್ತು.... ಮಗುವಾಗುವ ಸೂಚನೆಯೇ ಇಲ್ಲ ಅಂತ ಹಂಗಿಸಿ ಅಂತಾರೆ...." ಅಳುವ ಧ್ವನಿ ಮಾಡಿದಳು.

"ಅಮ್ಮಂಗೆ ಗೊತ್ತಾಗುಲ್ಲ. ಅವಳು ಹಳೇ ಕಾಲದವಳು. ಈ ಕಾಲದಲ್ಲಿ ಅದಕ್ಕೆಲ್ಲಾ ಪ್ಲಾನ್ ಮಾಡ್ಬೇಕಾಗುತ್ತೆ ವರ್ಷಾ.... ನೀನೂ ಕೆಲಸಕ್ಕೆ ಹೋಗ್ತೀಯಾ.... ಎಲ್ಲಾ ಕಷ್ಟ ಆಗುತ್ತೆ.... ಇದೊಂದ್ಸಾರಿ ನನ್ಮಾತನ್ನು ಕೇಳ್ಬಿಡು.... ಪ್ಲೀಸ್...."

"ಇಲ್ಲಾರೀ ಏನೇ ಕಷ್ಟ ಇದ್ದರೂ ನಂಗೇ ತಾನೇ... ನಿಮ್ಮಮ್ಮಂಗೆ ಮೊಮ್ಮಗು ಬೇಕು ತಾನೇ.... ಅವರೇ ಬಾಣಂತನವನ್ನು ಮಾಡ್ಲಿ. ಅವರೇ ಮಗುವನ್ನು ನೋಡಿಕೊಳ್ಳಲಿ." ಸವಾಲೆಸೆಯುವಂತೆ ಹೇಳಿದಳು.

"ಅಮ್ಮಂಗೆ ಆಸೆ ಅಂತ ನಾವು ನಮ್ಮ ಲೈಫ್‌ನ ಎಂಜಾಯ್ ಮಾಡೋದು ಬೇಡ್ವಾ?.... ಏನೋ ಲೆಖ್ಖಾಚಾರ ತಪ್ಪಿಹೋಯ್ತು... ಇನ್ಮುಂದೆ ಎಚ್ಚರಿಕೆಯಿಂದ ಇದ್ದರಾಯ್ತು.... ನನ್ನನ್ನು ಕಂಪೆನಿಯಿಂದ ಫಾರಿನ್ನಿಗೆ ಕಳಿಸ್ತಿದಾರೆ. ನನ್ನ ಜೊತೆ ನಿಂಗೆ ಬರುವ ಆಸೆ ಇಲ್ವಾ?"

"ಫಾರಿನ್ನಿಗಾ? ಈಗ ಹೇಳ್ತಿದೀರಲ್ಲ ಹರ್ಷಾ.... ಹೋಗ್ಲಿ ಬಿಡಿ. ನೀವು ಹೋಗ್ಬನ್ನಿ.... ನೀವು ಬರುವ ಹೊತ್ತಿಗೆ ತಂದೆ ಆಗಿರ್ತೀರಾ.... ಇದಕ್ಕಿಂತ

ಬೇರೇನು ಬೇಕು?"

"ಅಂದರೇ.... ನೀನು ತಾಯಿಯಾಗೋದು ಅಂತ ನಿರ್ಧರಿಸಿ ಬಿಟ್ಟಿದೀಯಾ ಅನ್ನು. ನಥಿಂಗ್ ಡೂಯಿಂಗ್. ನೀನು ನಾಳೇನೇ ಡಾಕ್ಟರ ಹತ್ರ ಹೋಗಿ ಅದೇನು ಅಡ್ವೈಸ್ ತಗೋತೀಯೋ ತಗೋ.... ಫಾರಿನ್ ಟ್ರಿಪ್‌ಗೆ ಸಿದ್ಧ ಮಾಡ್ಕೋ...."

"ನನ್ನನ್ನು ಎಂಥಾ ಸಂಧಿಗ್ಧ ಪರಿಸ್ಥಿತಿಗೆ ಸಿಕ್ಕಿಸ್ತೀರಿ.... ನನ್ನ ಜೊತೆ ನೀವೂ ಬನ್ನಿ. ನೀವೇ ಡಾಕ್ಟರ ಹತ್ರ ಮಾತಾಡಿ...."

"ಇಲ್ಲ ವರ್ಷಾ, ಇದೆಲ್ಲಾ ನಿನ್ನ ಕೆಲಸ.... ನನ್ನನ್ನು ಇದಕ್ಕೆಲ್ಲ ಕರೀಬೇಡ..."

"ಏನ್ರೀ ನೀವೂ, ಏನೋ ನನ್ನದೇ ತಪ್ಪು ಅನ್ನೋ ತರಹ ಮಾತಾಡ್ತೀರಲ್ಲ. ನನ್ನಷ್ಟೇ ಜವಾಬ್ದಾರಿ ನಿಮಗೂ ಇರಬೇಕು.... ನೀವು ಬರದಿದ್ರೆ ನಾನು ಅಮ್ಮನ ಮನೆಗೆ ಹೊರಟು ಹೋಗ್ತೀನಿ. ಬಾಣಂತನ ಮುಗಿಯುವ ವರೆಗೂ ಬರುಲ್ಲ...." ಸುಮ್ಮನೇ ಎಂಬಂತೆ ಹೇಳಿದಾಗ ಮೆತ್ತಗಾದ.

ವರ್ಷ ತಾಯಿಯ ಮನೆಗೆ ಹೋದರೆ, ಅವರುಗಳಿಗೆಲ್ಲ ವಿಷಯ ತಿಳಿಯುತ್ತೆ. ಅವರಿಂದ ಅಮ್ಮ ಅಪ್ಪನಿಗೆ ತಿಳಿಯುತ್ತೆ.... ಅವರೆಲ್ಲಾ ಹಿಂದಿನ ಕಾಲದವರು, ಯಾರೂ ಅಬಾರ್ಷನ್‌ಗೆ ಒಪ್ಪಿಗೆ ಕೊಡುವುದಿಲ್ಲ. ಆಗ ಸುಮ್ಮನಾಗಬೇಕಾಗುತ್ತದೆ. ಅದರ ಬದಲು ವರ್ಷಳ ಜೊತೆ ಡಾಕ್ಟರ ಬಳಿಗೆ ಹೋಗಿ ಮಾತನಾಡುವುದೇ ಒಳ್ಳೆಯದು ಅಂತ ಎಂದುಕೊಂಡ.

ಮೊದಲು ವರ್ಷಾಳನ್ನು ಕೂಲಂಕಷವಾಗಿ ಪರೀಕ್ಷಿಸಿದ ಡಾ॥ ಶಕುಂತಲ, ಇವರಿಬ್ಬರ ಕಡೆ ನೋಡಿ ಮುಗುಳ್ನಕ್ಕಳು. "ಎಲ್ಲಾ ನಾರ್ಮಲ್ ಆಗಿದೆ. ಯಾವ ಚಿಂತೆಯೂ ಬೇಡ.... ತಿಂಗಳು ತಿಂಗಳು ಬಂದು ಚೆಕಪ್ ಮಾಡಿಸ್ಕೊಂಡ್ರೆ ಸಾಕು" ಎಂದಳು.

ಹರ್ಷ, ವರ್ಷಳ ಕಡೆ ನೋಡಿ, ಮಾತಿಗೆ ಆರಂಭಿಸಿದ. "ಡಾಕ್ಟರ್, ನಮಗೆ ಈಗಲೇ ಮಗುವಿನ ಜವಾಬ್ದಾರಿ ಬೇಡ.... ಪ್ಲೀಸ್ ಅಬಾರ್ಷನ್ ಆಗುವಂತೆ ಏನಾದ್ರೂ ಮಾಡಿ..." ಡಾಕ್ಟರ್ ಆಶ್ಚರ್ಯದಿಂದ ನೋಡಿದಳು.

"ಏನ್ಹೇಳ್ತಿದೀರಿ ಮಿ॥ ಹರ್ಷ.... ಇದು ನಿಮ್ಮ ಮೊದಲನೆಯ ಮಗು. ಸಂತಸದಿಂದ ಸ್ವಾಗತಿಸಿ.... ಮದುವೆಯಾಗಿ ಎರಡೂವರೆ ವರ್ಷ ಆಗಿದೆಯಲ್ಲ.... ಈಗ ಯಾವ ಪ್ರಾಬ್ಲಂ....?"

"ನಾವಿಬ್ಬರೂ ಫಾರಿನ್ನಿಗೆ ಹೋಗಬೇಕಾಗಿದೆ.... ಈಗ ನನ್ನ ಮಿಸೆಸ್ ಪ್ರೆಗ್ನೆಂಟ್ ಅಂತ ತಿಳಿದರೆ, ಸ್ವಲ್ಪ ಪ್ರಾಬ್ಲಂ ಆಗುತ್ತೆ"

"ಅದು ನಿಮ್ಮ ಸ್ವಂತ ವಿಷಯ. ಆದರೆ ಅಬಾರ್ಷನ್‌ನ ನಾನು ಸಜೆಸ್ಟ್ ಮಾಡುಲ್ಲ..... ಎಲ್ಲಾ ರೀತಿಯಿಂದಲೂ ಸರಿ ಇರುವ ಭ್ರೂಣವನ್ನು ತೆಗೆಯುವ ಕೆಲಸವನ್ನು ನಾನು ಮಾಡುವುದಿಲ್ಲ...."

"ಹಾಗಲ್ಲ ಡಾಕ್ಟರ್.... ನಾವು ಈ ಮಗುವನ್ನು ಪಡೆಯಲು ಯಾವ ರೀತಿಯಿಂದಲೂ ಪ್ರಿಪೇರ್ ಆಗಿರ್ಲಿಲ್ಲ. ಇದು ಆಕ್ಸಿಡೆಂಟಲ್ ಆಗಿ ಆದದ್ದು...."

ಡಾಕ್ಟರ್ ಕಿರು ನಗೆ ನಕ್ಕಳು... "ಆಕ್ಸಿಡೆಂಟಲ್ ಆದರೂ, ಇದು ನಿಮ್ಮ ಮಗು. ಈಗಲಿಂದ ಪ್ರಿಪೇರ್ ಆಗಿ... ಈಗಾಗ್ಲೇ ನಿಮ್ಮ ಮಿಸೆಸ್ ಮೂರು ತಿಂಗಳ ಪ್ರೆಗ್ನೆಂಟ್ ಆಗಿದಾರೆ.... ಅಲ್ಲದೇ ಈಗ ವಯಸ್ಸೂ ಸರಿಯಾಗಿದೆ.... ಈಗ ಅಬಾರ್ಷನ್ ಚಿಂತೆಯನ್ನು ಬಿಡಿ.... ಈ ಮಗು ಹುಟ್ಟಿದ ನಂತರ, ಮುಂದೆ ಕೇರ್ ಫುಲ್ ಆಗಿರಿ. ಇದು ನನ್ನ ಅಡ್ವೈಸ್...." ಹರ್ಷ ಮುಗುಳ್ನಗಲಿಲ್ಲ.

"ನಮ್ಮ ಫಾರಿನ್ ಟ್ರಿಪ್ ಹಾಳಾಗುತ್ತಲ್ಲ ಡಾಕ್ಟರ್..."

"ಫಾರಿನ್ನಿಗೆ ಹೋಗಿ ಬರುವ ಅವಕಾಶ ಮುಂದೆಯೂ ಸಿಗಬಹುದು.... ವರ್ಷಾ ನೀವೇನಂತೀರಿ?" ವರ್ಷಾ ತಲೆ ತಗ್ಗಿಸಿದಳು. ಕಣ್ಣಿನಂಚಿನಿಂದ ನೀರು ಜಿನುಗಿತ್ತು. ಮಗುವಿನ ಮೇಲಿನ ಆಸೆಯನ್ನು ಅವಳ ಮೌನ ತಿಳಿಸಿತ್ತು. ಹರ್ಷಾನ ಮುಖ, ಕೆಂಪಾಗಿತ್ತು. ಎದ್ದು ಹೊರಗೆ ಹೋಗಿದ್ದ. ವರ್ಷ ವ್ಯಥೆಯಿಂದ ಡಾಕ್ಟರ ಕಡೆ ನೋಡಿದಳು. "ನೀವು ಧೈರ್ಯವಾಗಿರಿ ವರ್ಷಾ. ನಿಮ್ಮ ಮಗುವಿಗೆ ಏನೂ ಆಗುವುದಿಲ್ಲ. ನಿಧಾನವಾಗಿ ನಿಮ್ಮ ಪತಿಯನ್ನು ಕನ್ವಿನ್ಸ್ ಮಾಡಿ.... ನಿಮ್ಮ ಅತ್ತೆ ಮಾವನಿಗೆ ಮೊಮ್ಮಗು ಬೇಕಾಗಿದೆ ಅಂತ ಅಂದ್ರಿ.... ನಿಮ್ಮ ಅತ್ತೆ, ನಿಮ್ಮ ಪತಿಯ ಹತ್ತಿರ ಮಾತಾಡಲಿ.... ಇವರೂ ಸುಮ್ಮನಾಗುತ್ತಾರೆ. ಆಲ್ ದಿ ಬೆಸ್ಟ್" ಎಂದು ಹೇಳಿ ಕಳಿಸಿದಳು.

"ಅತ್ತೇ ನಾನು ಅಮ್ಮನ ಮನೆಗೆ ಹೋಗಿ, ಹದಿನೈದು ದಿನಗಳು ಅಲ್ಲಿದ್ದು ಬರ್ತೀನಿ" ಊಟ ಮಾಡುವಾಗ ವರ್ಷಾ ಅತ್ತೆಗೆ ಹೇಳಿದಳು.

"ಈಗ್ಯಾಕಮ್ಮಾ....? ಈಗೇನು ಹಬ್ಬವೇ ಹರಿದಿನವೇ?....ನಿಮ್ಮ ತಂದೆ ತಾಯಿ, ಎಲ್ಲರೂ ಹುಶಾರಾಗಿದಾರೆ ತಾನೇ?"

"ಹುಂ.... ನಂಗೋಸ್ಕರ ಹೋಗ್ತಿದೀನಿ. ಇಲ್ಲಿಯೇ ಇದ್ರೆ ರೆಸ್ಟ್ ಸಿಗುಲ್ಲ. ಅಲ್ಲಿ ಆದ್ರೆ, ಅಮ್ಮ ಎಲ್ಲಾ ನೋಡ್ಕೋತಾಳೆ..."

"ಅಂಥಾದ್ದೇನಾಗಿದೆ ಈಗ? ರೆಸ್ಟ್ ಯಾಕೆ ಈಗ? ನಾವು ಹಿರಿಯೋರು ಅಂತ ಮನೇಲಿ ಇದ್ರೂ ನಮಗೆ ಏನೂ ತಿಳಿಸುಲ್ಲ. ನಾನು ಅತ್ತೆ ಇರಬಹುದು. ಆದರೆ ನನಗೆ ಹೇಳಬಾರದಂಥ ವಿಷಯ ಏನು? ಈಗ್ಲಾದ್ರೂ ಹೇಳು...."

"ನಾನು ಗರ್ಭಿಣಿ ಆಗಿರಬಹುದು ಅನ್ನೋ ಅನುಮಾನ ನಿಮಗೆ

ಬರ್ಲೇ ಇಲ್ವಾ ಅತ್ತೇ...." ಅತ್ತೆಯ ಮುಖ ಅಗಲವಾಗಿತ್ತು.

"ಹೌದೇನಮ್ಮಾ.... ಈಗ ಹೇಳ್ತಿದೀಯಲ್ಲ.... ಆಫೀಸಿಗೆ ರಜ ಹಾಕು.... ನಿಂಗೇನು ಬೇಕೋ ಕೇಳು. ನಾನು ಮಾಡಿಕೊಡ್ತೀನಿ.... ಮನೆಗೆ ಮೊದಲ ಮೊಮ್ಮಗು ಬರುತ್ತೆ ಅಂತಂದ್ರೆ ನಂಗೆ ಸಂಭ್ರಮ ಇಲ್ವಾ?.... ಈಗ್ಲೇ ನಿನ್ನ ಮಾವನವರಿಗೆ ಹೇಳ್ತೀನಿ....ಅವರೂ ಖುಷಿ ಪಡ್ತಾರೆ...."

"ಅಪ್ಪಂಗೆ ಏನೂ ಹೇಳ್ಬೇಡಮ್ಮ.... ಖುಷಿ ಪಡುವ ವಿಷಯ ಏನೂ ಅಲ್ಲ. ನಾನೇ ಇವಳನ್ನು ತವರು ಮನೆಗೆ ಕಳಿಸ್ತಿದೀನಿ. ಅಬಾರ್ಷನ್ ಮಾಡಿಸ್ಕೊಂಡು ಬರ್ತಾಳೆ...." ಹರ್ಷ ಹೇಳಿದಾಗ ಆಕೆ ಬೆರಗಾಗಿ ಮಗನನ್ನೇ ನೋಡಿದಳು.

"ಏನಂದೇ? ಅಬಾರ್ಷನ್ನಾ? ಯಾಕೆ?.... ಅಂಥದ್ದೇನಾಗಿದೆ?.... ಎಲ್ಲಾ ನಾರ್ಮಲ್ ಆಗಿದೆ ತಾನೇ? ನನ್ನ ತನಕ ಯಾವ ವಿಷಯವೂ ಬರುಲ್ಲವಲ್ಲ...ನಾನು ನಾಳೇನೇ ನನ್ನ ಪರಿಚಯದ ಡಾಕ್ಟರ್ ಹತ್ರ ಕರ್ಕೊಂಡು ಹೋಗ್ತೀನಿ.... ಏನೇ ಸಮಸ್ಯೆ ಇದ್ದರೂ ಸರಿ ಮಾಡ್ತಾರೆ...."

"ಏನೂ ಸಮಸ್ಯೆ ಇಲ್ಲಾ ಅತ್ತೇ.... ಎಲ್ಲಾ ನಾರ್ಮಲ್ ಆಗಿದೆ.... ಡಾಕ್ಟರು ನೋಡಿ ಹೇಳಿದಾರೆ...."

"ಮತ್ತೆ?... ಮತ್ತೇನು?.... ನನ್ನ ಮಗನ ಮಗುವನ್ನು ತೆಗೆಸುವ ಆಸೆ ನಿಂಗ್ಯಾಕೆ ಬಂತು? ಆ ಅಧಿಕಾರವನ್ನು ನಿನಗ್ಯಾರು ಕೊಟ್ರು?"

"ಅವಳ ತಪ್ಪೇನಿಲ್ಲಮ್ಮ.... ನನಗೆ ಈಗಲೇ ಮಗುವಿನ ಜವಾಬ್ದಾರಿ ಬೇಡ... ನಾನೇ ಅಬಾರ್ಷನ್ ಮಾಡಿಸ್ಕೋ ಅಂತ ಹೇಳಿದೀನಿ..." ವರ್ಷ ಮೌನಿಯಾದಳು.

"ಏನು? ಏನು ಬಂತೋ ನಿಂಗೆ?.... ಮದುವೆಯಾಗಿ ಮೂರು ವರ್ಷ ಆಗ್ತಾ ಬಂತು. ಮಕ್ಕಳಾಗಿಲ್ಲ ಅಂತ ನಾನು ಕೊರಗಿದ್ರೆ.... ಅದು ನಿಮಗೆ ತಿಳೀಲಿಲ್ವಾ..? ನಿಂಗೆ ಈಗಾಗ್ಲೇ ಮೂವತ್ತೆರಡು ವರ್ಷ. ಇವಳಿಗೆ ಇಪ್ಪತ್ತೆಂಟು.... ಈಗ ನೀವಿಬ್ಬರೂ ಚಿಕ್ಕವರೇನಲ್ಲ.... ಮಗುವನ್ನು ಸಾಕುವ ಜವಾಬ್ದಾರಿಯ ವಯಸ್ಸು ನಿಮ್ಮಿಬ್ಬರಿಗೂ ಆಗಿದೆ..."

"ನಾವಿಬ್ರೂ ಫಾರಿನ್ನಿಗೆ ಹೋಗಿ ಬಂದ್ಮೇಲೆ ಮಗುವಿನ ಬಗ್ಗೆ ಯೋಚಿಸಿದ್ರೆ ಆಯ್ತು.... ಈಗ ಬೇಡ...."

"ಇದು ನಮ್ಮ ಮೊಮ್ಮಗು... ಇದರ ಮೇಲೆ ನಮಗೂ ಹಕ್ಕು ಇದೆ. ಮಗುವನ್ನು ತೆಗೆಸುವ ಕೆಟ್ಟ ಆಲೋಚನೆ ಮಾತ್ರ ಮಾಡ್ಬೇಡ.... ಮುಂದೆ ಇವಳಿಗೆ ಮಕ್ಕಳೇ ಆಗದಿದ್ರೆ...."

"ಹಾಗೇನೂ ಆಗುಲ್ಲಮ್ಮ... ನಾವಿಬ್ಬರೂ ಇನ್ನೂ ಚಿಕ್ಕವರು...."

"ಏನು ಚಿಕ್ಕವರು?... ಈ ವಯಸ್ಸಿಗೆ ನನಗೆ...."

"ನಿನ್ನ ಕಾಲದ ಮಾತನ್ನು ಬಿಡಮ್ಮ... ಈಗ ಕಾಲ ಬದಲಾಗಿದೆ... ಈಗ ನಾನು ತಂದೆಯಾಗಲು ತಯಾರಿಲ್ಲ ಅಷ್ಟೇ... ಮುಂದಿನ ತಿಂಗಳು ನಾವಿಬ್ಬರೂ ಫಾರಿನ್ನಿಗೆ ಹೋಗಿ ಮೂರು ತಿಂಗಳ ನಂತರ ವಾಪಸ್ಸು ಬರ್ತೀವಿ ಅಷ್ಟೇ...."

"ನೀನು ಇಷ್ಟು ಕೆಟ್ಟವನು ಅಂತ ನಾನು ಅಂದುಕೊಂಡಿರಲಿಲ್ಲ ಹರ್ಷ. ಭ್ರೂಣಹತ್ಯೆ ಮಹಾಪಾಪ ಕಣೋ... ನಾನು ಇದನ್ನು ಆಗಗೊಡಿಸುವುದಿಲ್ಲ... ಈಗಲೇ ನಿಮ್ಮ ಅಪ್ಪನ ಹತ್ರ ಮಾತಾಡ್ತೀನಿ."

"ಅಮ್ಮಾ ಇದು ನಮ್ಮ ಸ್ವಂತ ವಿಷಯ. ಇದರಲ್ಲಿ ನೀನು ತಲೆ ಹಾಕ್ಬೇಡ. ನಾನು ನಾಳೆ ಇವಳನ್ನು ಇವಳ ಅಪ್ಪನ ಮನೆಗೆ ಬಿಟ್ಟು ಬರ್ತೀನಿ" ಎಂದು ಹೇಳಿ ರೋಷದಿಂದ ಎದ್ದು ಹೋಗಿದ್ದ. ಅಳುತ್ತಿದ್ದ ವರ್ಷಳನ್ನು ಅತ್ತೆ ಸಮಾಧಾನಗೊಳಿಸಿದ್ದಳು.

"ಇವನ ಮಾತನ್ನು ಕೇಳಿ ನೀನು ದುಡುಕಬೇಡ.... ನಿನ್ನ ತಾಯಿ ತಂದೆ ಕೂಡಾ ಇಂಥಾ ಪಾಪದ ಕೆಲಸಕ್ಕೆ ಕೈ ಹಾಕುವುದಿಲ್ಲ... ನೋಡೋಣ... ದೇವರಿದಾನೆ. ಎಲ್ಲಾ ಒಳ್ಳೇದಾಗುತ್ತೆ" ಹಾಗೆ ಹೇಳಿದರೂ, ಆಕೆಗೂ ಸಮಾಧಾನ ವಿರಲಿಲ್ಲ. ಇವಳಿಗೂ ಬೇಸರವಾಗಿತ್ತು.

ತಾನು ಪ್ರೆಗ್ನೆಂಟ್ ಅಂತ ಗಂಡನಿಗೆ ತಿಳಿದಾಗಿನಿಂದ ಒಂದೇ ಮಾತನ್ನು ಕೇಳಿ ಕೇಳಿ ಬೇಸರವಾಗಿತ್ತು. ಹಾಗಾದರೆ ತನಗೆ ಯಾವ ಅಧಿಕಾರವೂ ಇಲ್ಲವೇ?.... ಈ ಬಾರಿ ತವರು ಮನೆಗೆ ಹೋದವಳು ಹಿಂತಿರುಗಿ ಬರುವುದಿಲ್ಲ. ನಾನು ಇವನಿಗೆ ಬೇಕಾಗಿದ್ದರೆ ಇವನಾಗಿಯೇ ಬಂದು ಕರೆದುಕೊಂಡು ಹೋಗಲಿ... ತಾನಂತೂ ಸೋಲುವುದಿಲ್ಲ ಎಂದು ನಿರ್ಧರಿಸಿದ್ದಳು....

****

ದಿಢೀರನೇ ಬಂದು ಇಳಿದ ಮಗಳು ಅಳಿಯನನ್ನು ಕಂಡು, ವರ್ಷಳ ತಂದೆ ತಾಯಿ ಅಚ್ಚರಿಯನ್ನು ಹೊರ ಹಾಕಿದರು. ಆದರೂ ಸಂತಸದಿಂದ ಸ್ವಾಗತಿಸಿದರು. ಸ್ವಲ್ಪ ಹೊತ್ತಿನಲ್ಲೇ ಅಳಿಯ ಹೊರಟು ನಿಂತಾಗ ಮತ್ತೂ ಅಚ್ಚರಿಯಾಗಿತ್ತು.

"ಇದೇನು ಹೀಗೆ ಬಂದು ಹಾಗೆ ಹೊರಟು ಬಿಡ್ತಿದ್ದೀರಿ. ಎರಡು ದಿನ ಇಲ್ಲಿದ್ದು ಹೋಗಬಹುದಲ್ಲ" ಮಾವ ಹೇಳಿದ್ದರು.

"ಇಲ್ಲ, ನಂಗೆ ಬಿಡುವಿಲ್ಲ. ಫಾರಿನ್ನಿನ ಟ್ರಿಪ್‌ಗೆ ಸಿದ್ಧತೆ ಮಾಡಿಕೊಳ್ಳ ಬೇಕಾಗಿದೆ. ಇವಳನ್ನು ಕರೆದುಕೊಂಡು ಹೋಗುಕ್ಕೆ ಬರ್ತೀನಿ" ಎಂದು ಹೇಳಿ ಕಾರನ್ನು ಹತ್ತಿದ್ದ. ವರ್ಷ ಪೆಚ್ಚಾಗಿದ್ದುದನ್ನು ತಾಯಿ ಗಮನಿಸಿದ್ದಳು. ಕಾರು ಅತ್ತ ಹೊರಟ ಮೇಲೆ ಮಗಳನ್ನು ಪಿಸುದನಿಯಲ್ಲಿ ಕೇಳಿದಳು.

"ಏನೇ ವರ್ಷಾ, ನಿಮ್ಮಿಬ್ಬರಲ್ಲಿ ಏನಾದ್ರೂ ವಿರಸ ಬಂದಿದೆಯೇನೇ? ಇಲ್ಲಿ ಬಂದು ನಿನ್ನನ್ನು ಬಿಟ್ಟು ತಕ್ಷಣವೇ ಹೊರಟು ಬಿಟ್ರಲ್ಲಾ.... ಯಾಕೋ ಅಸಮಾಧಾನ ಮಾಡ್ಕೊಂಡಂತೆ ಅನ್ನಿಸ್ತು...."

"ಏನಿಲ್ಲಮ್ಮ ಹಾಗೇನಿಲ್ಲ. ನಿಮ್ಮನ್ನೆಲ್ಲಾ ನೋಡ್ಬೇಕು ಅಂತ ಅನ್ನಿಸ್ತು.... ಹಠ ಮಾಡಿ ಹೊರಡಿಸಿದೆ. ಅದಕ್ಕೇ ಅವರಿಗೆ ಸ್ವಲ್ಪ ಕೋಪ..." ಎಂದು ಹೇಳಿ ಸುಮ್ಮನಾಗಿದ್ದಳು.

ರಾತ್ರಿ ಮಲಗುವ ಸಮಯದಲ್ಲಿ, ತಾಯಿ ಮಗಳು ಇದ್ದಲ್ಲಿಗೆ ಬಂದಳು. ಮಗಳ ಮುಖವನ್ನೇ ಗಮನಿಸಿ ಕೇಳಿದಳು. "ಏನೇ ವರ್ಷಾ, ಹುಶಾರಾಗಿ ದೀಯಾ ತಾನೇ? ಬಿಳುಚಿ ಹೋಗಿದೀಯಲ್ಲೇ.... ಅತ್ತೇ ಮಾವ ಚೆನ್ನಾಗಿ ನೋಡ್ಕೋತಿದಾರೆ ತಾನೇ?"

ವರ್ಷಾ ಪೆಚ್ಚಾಗಿ ನಕ್ಕಳು... "ಮೂರು ವರ್ಷದಿಂದ ಅಲ್ಲಿದೀನಿ... ಈಗ ಹೊಸ್ದಾಗಿ ಕೇಳ್ತಿದೀಯಲ್ಲ. ನನಗೇನೂ ತೊಂದರೆ ಇಲ್ಲ, ಆರಾಮವಾಗಿದೀನಿ"

"ಇಲ್ಲ ವರ್ಷಾ... ನೀನು ಆರಾಮವಾಗಿಲ್ಲ. ಏನೋ ನಿನ್ನನ್ನು ಕೊರೀತಾ ಇದೆ ಅಂತ ಅನ್ನಿಸ್ತಿದೆ.... ಏನು ವಿಷಯ ಅಂತ ನಮಗಲ್ಲದೇ ಇನ್ಯಾರಿಗೆ ಹೇಳ್ತೀಯಾ?"

"ಹೌದಮ್ಮಾ ಒಂದು ಸಮಸ್ಯೇಲಿ ಸಿಕ್ಕಿ ಬಿದ್ದಿದೀನಿ.... ನಂಗೆ ನಿಮ್ಮ ಸಹಕಾರ ಸಲಹೆ ಬೇಕು. ನನಗೆ ಅವರ ಮನೆಗೆ ಹೋಗುಕ್ಕೆ ಇಷ್ಟವಿಲ್ಲ. ಇನ್ಮುಂದೆ ಇಲ್ಲೇ ಇದ್ದು ಬಿಡ್ತೀನಿ...."

ತಾಯಿ ಬೆಚ್ಚಿದಳು.... "ಯಾಕೇ ವರ್ಷಾ ಏನಾಯ್ತೇ.... ಈಗ್ತಾನೇ ಏನೂ ಇಲ್ಲ ಅಂತಂದೆ, ಮತ್ತೇನೀಗ?"

"ನಂಗೆ ಮಕ್ಕಳಾಗಿಲ್ಲ ಅಂತ ಅತ್ತೆಗೆ ಅಸಮಾಧಾನ.... ಈಗ್ಲೇ ಮಗು ಬೇಡ ಅಂತ ನನ್ನ ಗಂಡನ ಆಸೆ...."

"ನಿನ್ನ ಅತ್ತೆಗೆ ಅಷ್ಟೂ ತಿಳಿಯಬೇಡ್ವೇ? ಆಗೋ ಕಾಲಕ್ಕೆ ಆಗುತ್ತೆ. ಬೇಕಾದರೆ ಸರಿಯಾದ ಡಾಕ್ಟರಿಗೆ ತೋರಿಸಿ ಸಲಹೆ ಪಡೆದರಾಯ್ತು.... ಅದಕ್ಕೋಸ್ಕರ ಗಂಡನ ಮನೇನ ಬಿಟ್ಟು ಬರೋಕೆ ಆಗುತ್ತಾ?"

"ನೀನೇ ಹೇಳಮ್ಮ.... ಗಂಡನ ಆಸೆಗೆ ಒಪ್ಪಬೇಕೋ... ಅತ್ತೆಯ ಆಸೆಗೆ ಒಪ್ಪಬೇಕೋ?"

"ಅದ್ಸರೀ.... ಈಗಾಗ್ಲೇ ಮದುವೆಯಾಗಿ ಮೂರು ವರ್ಷ ಆಗ್ತಾ ಬಂದಿದೆ. ಈಗ ಮಗುವಾಗಿಬಿಡಬೇಕು... ನಿಮ್ಮ ಅತ್ತೆ ಮಾವಂಗೂ ಮೊಮ್ಮಕ್ಕಳನ್ನು ಆಡಿಸ್ಬೇಕು ಅಂತ ಆಸೆ ಇರುಲ್ವೇ?"

"ಹೌದಮ್ಮ, ಅತ್ತೆಗೆ ಮೊಮ್ಮಗ ಬೇಕು ಅಂತ ಆಸೆ. ಆದರೆ ಇದಕ್ಕೆ ನನ್ನ ಗಂಡನ ಒಪ್ಪಿಗೆ ಇಲ್ಲ. ಇಬ್ಬರ ಮಧ್ಯೆ ನಾನು ಒದ್ದಾಡ್ತಿದೀನಿ....ಈಗ ನಂಗೆ ಮೂರು ತಿಂಗಳಾಗಿದೆ...ಅಬಾರ್ಷನ್ ಮಾಡಿಸ್ಕೊಂಡು ಬಾ ಅಂತ ನಿನ್ನ ಅಳಿಯ ನನ್ನನ್ನು ಇಲ್ಲಿ ಬಿಟ್ಟು ಹೋಗಿದಾರೆ. ಮೊಮ್ಮಗನ್ನ ಎತ್ಕೊಂಡು ಬಾ ಅಂತ ಅತ್ತೆ ಹೇಳಿ ಕಳಿಸಿದ್ದಾರೆ....ನಂಗೆ ಏನು ಮಾಡ್ಬೇಕು ಅಂತ ಗೊತ್ತಾಗ್ತಿಲ್ಲ...."

"ಅಯ್ಯೋ ದೇವ್ರೇ.... ಅಳಿಯಂದಿರಿಗೆ ದೇವ್ರು ಯಾಕೆ ಇಂಥಾ ದುರ್ಬುದ್ಧಿ ಕೊಟ್ಟನೇ? ನೀನು ಸುಮ್ನಿದ್ದು ಬಿಡು...ಮಗುವಿನ ಮುಖ ನೋಡಿದ್ಮೇಲೆ ನಿನ್ನ ಗಂಡನ ಅಸಮಾಧಾನ ಹಾರಿ ಹೋಗುತ್ತೆ...."

"ಹೆಣ್ಣು ಮಗು ಹುಟ್ಟಿದರೆ, ಅತ್ತೆಗೆ ಅಸಮಾಧಾನವಾಗುತ್ತಲ್ಲಮ್ಮ...ನನಗೆ ಹುಟ್ಟುವ ಮಗು, ಯಾರಿಗೂ ಬೇಡದ ಮಗುವಾಗಿ ಬೆಳೆಯುತ್ತೆ. ಅದಕ್ಕೇ ನಾನು ಇಲ್ಲೇ ಇದ್ಬಿಡ್ತೀನಿ...ನಾನೇ ಸಾಕಿ ಬೆಳೆಸ್ತೀನಿ...."

"ಇದು ಆಗೋ ಕೆಲಸಾನೇನೇ ವರ್ಷಾ... ದಿಗಿಲಾಗುತ್ತಲ್ಲೇ... ಎಲ್ಲರೂ ಸ್ವಾರ್ಥಿಗಳು. ಇದರಲ್ಲಿ ಹುಟ್ಟುವ ಮಗುವಿನ ತಪ್ಪು ಏನಿರುತ್ತೆ? ನೀನು ಜಾಸ್ತಿ ಯೋಚಿಸ್ಬೇಡ.... ದೇವರ ಮೇಲೆ ಭಾರ ಹಾಕು. ಅವನೇ ನಿನ್ನ ಗಂಡನಿಗೆ ಸದ್ಬುದ್ಧಿಯನ್ನು ಕೊಡ್ತಾನೆ. ನಿನ್ನ ಅತ್ತೆಗೆ ತಿಳುವಳಿಕೆಯನ್ನು ನೀಡ್ತಾನೆ...." ಹಾಗೆ ಮಗಳಿಗೆ ಸಮಾಧಾನ ಹೇಳಿದರೂ, ಒಳಗೊಳಗೇ ಬೆವೆತಳು. ತಾನು ವರ್ಷಾಳ ಬಸುರಿಯಾಗಿದ್ದಾಗಿನ ದಿನಗಳು ನೆನಪಿಗೆ ಬಂದವು.

ಮದುವೆಯಾದ ವರ್ಷದಲ್ಲೇ ಅವಳು ಗರ್ಭಿಣಿಯಾಗಿದ್ದಳು. ಅತ್ತೆ ಸದಾ ಕಾಲವೂ ಮೊಮ್ಮಗ ಮೊಮ್ಮಗ ಅಂತ ಹಲುಬುತ್ತಿದ್ದರು. ನನ್ನ ಸೊಸೆಗೆ ಹುಟ್ಟುವುದು ಗಂಡು ಮಗುವೇ ಎಂದು ಎಲ್ಲರೊಡನೆ ಹೇಳಿಕೊಳ್ಳುತ್ತಿದ್ದರು. ಇವಳಿಗೆ ನಡುಕವುಂಟಾಗುತ್ತಿತ್ತು. ಗಂಡನೂ ಅತ್ತೆಯ ಮಾತನ್ನು ಅನುಮೋದಿಸುತ್ತಿದ್ದರು. ಜ್ಯೋತಿಷಿಗಳ ಬಳಿಗೆ ಹೋಗಿ, ಜಾತಕವನ್ನು ತೋರಿಸಿ, ಪ್ರಶ್ನೆಯನ್ನು ಕೇಳಿ ಬಂದಿದ್ದರು. ಶಾಸ್ತ್ರಿಗಳು ಮೊದಲ ಮಗು ಹೆಣ್ಣು ಮಗುವೇ ಹುಟ್ಟುವುದು ಎಂದು ಹೇಳಿದ್ದರಂತೆ. ಮನೆಗೆ ಬಂದವರೇ ಕೆಟ್ಟದಾಗಿ ಮಾತಾಡಿದ್ದರು....

"ನಿಂಗೆ ಹುಟ್ಟೋದು ಹೆಣ್ಣು ಮಗುವೇ ಅಂತೆ. ಅಮ್ಮಂಗೆ ಇಷ್ಟವಾಗುಲ್ಲ, ತೆಗೆಸಿ ಬಿಡು...." ಎಂದಿದ್ದರು.

"ಯಾಕೆ ಹೀಗೆ ಹೇಳ್ತಿದೀರಿ... ಹೆಣ್ಣೋ ಗಂಡೋ ಅದು ನಮ್ಮ ಮಗು. ಈಗಾಗ್ಲೇ ಮಗು ಹೊಟ್ಟೇಲಿ ಮಿಸುಕಾಡ್ತಿದೆ.... ತಮಾಷೆಗೂ ಹೀಗೆಲ್ಲಾ ಆಡ್ಬೇಡಿ..." ಎಂದಿದ್ದಳು.

"ಸ್ಕ್ಯಾನಿಂಗ್ ಮಾಡಿಸ್ಕೊಂಡು ಎಂಥಾ ಮಗು ಅಂತ ತಿಳ್ಕೋ.... ಮಗು ಹುಟ್ಟಿದ್ಕೂಡ್ಲೇ ಮಕ್ಕಳಿಲ್ಲದ ಯಾರಿಗಾದ್ರೂ ಕೊಟ್ಟು ಬಿಡೋಣ...." ಎಂದು ಕಟುವಾಗಿ ನುಡಿದಾಗ ಗಂಡನ ಮೇಲೆ ತಿರಸ್ಕಾರ ಹುಟ್ಟಿತ್ತು.

ಸೋನಾ ವಿಷನ್ ಟೆಸ್ಟ್ ಮಾಡಿದ ಡಾಕ್ಟರು, ಮಗುವಿನ ಸೆಕ್ಸ್ ಬಗ್ಗೆ ಹೇಳಲು ಇಷ್ಟ ಪಟ್ಟಿರಲಿಲ್ಲ. ಅದು ಕಾನೂನು ಬಾಹಿರ, ಅಲ್ಲದೇ ಮಗು ಆರೋಗ್ಯವಾಗಿರುವುದು ಮುಖ್ಯ... ಗಂಡು ಹೆಣ್ಣು ಅಂತ ಯಾಕೆ ಭೇದ ಮಾಡ್ತೀರಿ?.... ಈ ಕಾಲದಲ್ಲಿ ಇಬ್ಬರು ಒಂದೇ. ನೀವು ಬೆಳೆಸುವ ರೀತಿಯ ಬಗ್ಗೆ ಯೋಚಿಸಿ" ಎಂದು ಗಂಡನಿಗೆ ತಿಳುವಳಿಕೆ ಹೇಳಿದ್ದಳು. ಗಂಡನ ಅಸಮಾಧಾನ ಮುಂದುವರೆದಿತ್ತು.

ದಿನ ತುಂಬಿದ ಮೇಲೆ ಹುಟ್ಟಿದ್ದು ಹೆಣ್ಣು ಮಗುವೇ.... ಮೊದಲ್ನೇ ಮಗು ಗಂಡು ಹುಟ್ಟಿ ಬಿಟ್ಟರೆ, ಮುಂದಿನದು ಯಾವುದಾದ್ರೂ ಆಗುತ್ತೆ. ನಾನು ಮೊಮ್ಮಗ ಹುಟ್ತಾನೆ ಅಂತ ಅಂದ್ಕೊಂಡಿದ್ದೆ.... ಮುಂದಿನದು ಗಂಡು ಮಗುವಾಗುತ್ತೆ ಅಂತ ಏನು ಗ್ಯಾರಂಟಿ?" ಅತ್ತೆ ಹೇಳಿದಾಗ ಮನಸ್ಸು ಮುದುಡಿತ್ತು.

ವರ್ಷಳಿಗೆ ವರ್ಷ ತುಂಬುತ್ತಿದ್ದಂತೆ ಈಕೆ ಮತ್ತೆ ಗರ್ಭಿಣಿಯಾಗಿದ್ದಳು. ಗಂಡನಿಗೆ ವಿಷಯ ತಿಳಿದ ಕೂಡಲೇ, ಇವಳದ್ದೇ ತಪ್ಪು ಎನ್ನುವಂತೆ ಹಾರಾಡಿದ್ದ.... ಅವಳನ್ನು ಬಲವಂತವಾಗಿ ಡಾಕ್ಟರ ಬಳಿಗೆ ಕರೆದುಕೊಂಡು ಹೋಗಿದ್ದ.

"ಹುಟ್ಟುವ ಮಗು ಹೆಣ್ಣೋ ಗಂಡೋ ಅಂತ ದಯವಿಟ್ಟು ಹೇಳಿ ಡಾಕ್ಟರ್.... ಎಂದು ಕೇಳಿಕೊಂಡಿದ್ದ.

"ಈಗಲೇ ಹೇಳುಕ್ಕೆ ಆಗುಲ್ಲ. ಇನ್ನೂ ಮೂರು ನಾಲ್ಕು ತಿಂಗಳು ಕಳೆಯಬೇಕು" ಎಂದಿದ್ದರು ಡಾಕ್ಟರು. ವಿಷಯ ತಿಳಿದ ತಾಯಿ ಗೊಣಗಿದ್ದಳು.

"ಬೇಗ ಮತ್ತೆ ಮಗು ಹುಟ್ಟಿದರೆ ಅದು ಹೆಣ್ಣೇ.... ಒಟ್ನಲ್ಲಿ ಗಂಡು ಮಗುವಿನ ಮುಖವನ್ನು ಯಾವಾಗ ನೋಡ್ತೀನೋ...."

"ನೋಡು ಅಮ್ಮಂಗೂ ಬೇಸರ ಆಗಿದೆ.... ಮಗೂನ ತೆಗೆಸ್ಬಿಡು...." ಗಂಡ ಮತ್ತೆ ಹೇಳಿದಾಗ ಒಪ್ಪಿಕೊಂಡಿದ್ದಳು. ಬೇರೊಬ್ಬ ಡಾಕ್ಟರ ಬಳಿಗೆ

ಕರೆದುಕೊಂಡು ಹೋಗಿದ್ದ.

"ಮೊದಲ ಮಗು ತುಂಬಾ ಚಿಕ್ಕದು ಡಾಕ್ಟರ್. ಮಗುವನ್ನು ಸಾಕುವುದು ಕಷ್ಟ ಆಗುತ್ತೆ. ಇವಳ ಆರೋಗ್ಯವೂ ಕೆಡುತ್ತೆ ಎಂದು ಹೇಳಿ ಉಪಾಯದಿಂದ ಅಬಾರ್ಷನ್‌ಗೆ ಒಪ್ಪಿಸಿದ್ದ. ಆದಿನ ಇವಳ ಬಹಳ ವ್ಯಥೆಗೊಂಡಿದ್ದಳು ಆದರೆ ಅತ್ತೆ ವ್ಯಥೆಗೊಂಡಿರಲಿಲ್ಲ. ಅದಾದ ಮೇಲೆ ವರ್ಷಳಿಗೆ ಮೂರು ವರ್ಷಗಳು ತುಂಬುವವರೆಗೂ, ಅವಳು ಗರ್ಭಿಣಿಯಾಗದಂತೆ ಎಚ್ಚರವಹಿಸಿದ್ದಳು.

ಆದರೆ ಅತ್ತೆಯ ಮೊಮ್ಮಗನನ್ನು ಕಾಣುವ ಹಂಬಲ ಮುಂದುವರೆದಿತ್ತು. ಮಗ ಜ್ಯೋತಿಷಿಯ ಬಳಿಗೆ ಹೋಗಿದ್ದ. ಅವರು ನಾಲ್ಕು ಹೆಣ್ಣು ಮಕ್ಕಳ ನಂತರ ಗಂಡು ಮಗುವಾಗುವ ಯೋಗ ಇದೆ ಎಂದು, ಅಂಕಿ ಅಂಶಗಳನ್ನು ಗುಣಿಸಿ ಹೇಳಿದ್ದರು. ಅವರಿಗೆ ದಕ್ಷಿಣೆಯನ್ನು ಕೊಟ್ಟು ಹಿಂತಿರುಗಿದ್ದ. ಈಗಾಗಲೇ ಒಬ್ಬಳು ಮಗಳಿದ್ದಾಳೆ. ಒಂದು ಅಬಾರ್ಷನ್ ಮಾಡಿಸಿದ್ದೇನೆ. ಅದು ಹೆಣ್ಣು ಮಗುವೇ ಆಗಿದ್ದಿರಬಹುದು. ಇನ್ನೆರಡು ಬಾರಿ ಅಬಾರ್ಷನ್ ಮಾಡಿಸಿದರೆ, ನಾಲ್ಕು ಹೆಣ್ಣು ಮಕ್ಕಳ ಲೆಖ್ಖ ಸಿಗುತ್ತದೆ ಎಂದು ತನ್ನಲ್ಲೇ ಯೋಚಿಸಿಕೊಂಡ. ಕಾರ್ಯ ಪ್ರಯತ್ನವನ್ನು ನಡೆಸಿದ. ಪತ್ನಿ ಗರ್ಭಿಣಿ ಎಂದು ಖಚಿತವಾದ ಕೂಡಲೇ ಅವಳನ್ನು ಉಪಾಯವಾಗಿ, ತನ್ನ ಪರಿಚಯದ ನರ್ಸಿಂಗ್ ಹೋಂಗೆ ಕರೆದುಕೊಂಡು ಹೋಗಿ, ಡಾಕ್ಟರಿಗೆ ಏನೋ ಒಂದು ಸುಳ್ಳು ಕಾರಣವನ್ನು ಹೇಳಿ, ಹೆಚ್ಚು ಹಣ ಕೊಟ್ಟು ಅಬಾರ್ಷನ್ ಮಾಡಿಸಿದ್ದ. ಹೆಂಡತಿ ವ್ಯಥೆಯಿಂದ ಕೇಳಿದಾಗ, ಸಮಾಧಾನಗೊಳಿಸಿದ್ದ. ಈಗಾಗಲೇ ಒಬ್ಬಳು ಮಗಳಿದ್ದಾಳೆ. ಒಬ್ಬ ಮಗನೂ ಹುಟ್ಟಲಿ ಅಂತ ನನ್ನಾಸೆ. ನಿನಗೂ ಆ ಆಸೆ ಇದೆ ಅಂತ ಅಂದ್ಕೋ ತೀನಿ. ಅಮ್ಮನಿಗೂ ಮೊಮ್ಮಗನ ಆಸೆ...."

"ಮತ್ಯಾಕೆ ಅಬಾರ್ಷನ್ ಮಾಡ್ಸಿದ್ರಿ.... ವರ್ಷ ದೊಡ್ಡವಳಾಗಿದಾಳೆ. ಈ ಮಗು ಗಂಡು ಹುಟ್ಟುತ್ತಿತ್ತೋ ಏನೋ!"

"ಇಲ್ಲ, ನಾನೊಬ್ಬ ಜ್ಯೋತಿಷಿ ಹತ್ತಿರ ಹೋಗಿದ್ದೆ. ಅವರ ಪ್ರಕಾರ, ನಾಲ್ಕು ಹೆಣ್ಣು ಮಕ್ಕಳ ಯೋಗ ನಮಗಿದೆ. ನಂತರ ನಮಗೆ ಮಗ ಹುಟ್ಟೋದು ಅಂತ.... ನಮಗೆ ಒಬ್ಬಳು ಮಗಳು ಇದಾಳೆ.... ಇನ್ನೊಬ್ಬ ಮಗ ಸಾಕು.... ಆಮೇಲೆ ನಾನೇ ಆಪರೇಷನ್ ಮಾಡಿಸ್ಕೊತೀನಿ." ಇವಳು ಕೆಟ್ಟ ಮುಖ ಮಾಡಿದ್ದಳು.

"ಇಂಥಾ ನೀಚ ಬುದ್ಧಿ ನಿಮಗಿದೆ ಅಂತ ನಂಗೆ ಗೊತ್ತಿರ್ಲಿಲ್ಲ" ಎಂದಳು.

"ಇದರಲ್ಲಿ ನೀಚತನ ಏನು? ನಮ್ಮ ಒಳ್ಳೇದಕ್ಕೆ ತಾನೇ?"

"ಭ್ರೂಣ ಹತ್ಯೆ ಮಹಾಪಾಪ ಅಂತಾರೆ.... ಅಲ್ಲದೇ ನನ್ನ ಹೆಲ್ತ್ ಗತಿ

ಏನಾಗುತ್ತೆ ಅಂತ ಯೋಚಿಸಿದೀರಾ? ಈಗಾಗ್ಲೇ ಎರಡು ಸಾರಿ ಅಬಾರ್ಷನ್ ಮಾಡ್ಸಿದೀರಿ..."

"ಸಾರೀ.... ಇನ್ನೊಂದು ಸಲ ನನಗೆ ಸಹಕರಿಸಿ ಬಿಡು... ಆಮೇಲೆ ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುವ ಜವಾಬ್ದಾರಿ ನನ್ನದು.... ಮಗ ಹುಟ್ಟಿ ಬಿಟ್ಟರೆ ಅಮ್ಮನ ಗೊಣಗಾಟವೂ ಇರುಲ್ಲ" ಅವಳ ಮನಸ್ಸನ್ನು ಒಲಿಸುವ ಪ್ರಯತ್ನ ಮಾಡಿದ್ದ.

"ಈ ಸಾರೀ ನಾನು ಬಸುರಿ ಆದರೆ, ನಾನು ಯಾವುದೇ ಕಾರಣಕ್ಕೂ ಅಬಾರ್ಷನ್ ಮಾಡಿಸ್ಕೊಳ್ಳುಲ್ಲ. ಹೆಣ್ಣು ಮಗುವಾದರೂ ಪರವಾಗಿಲ್ಲ" ಹಠದಿಂದ ಹೇಳಿದ್ದಳು.

"ಆದರೆ, ಈ ಬಾರಿ ಅವಳು ಗರ್ಭಿಣಿಯಾಗಿದ್ದೇನೆಂದು ತಕ್ಷಣಕ್ಕೆ ತಿಳಿಸಲಿಲ್ಲ. ಅವನಿಗೇ ಅನುಮಾನ ಬಂದು ಪುಸಲಾಯಿಸಿ ಕೇಳಿದಾಗ ಅವಳು ಬೇಡಿಕೊಂಡಿದ್ದಳು. ಅವನು ಹೆಚ್ಚು ಮಾತಾಡದೇ, ಅವಳಿಗೇ ತಿಳಿಯದಂತೆ, ಔಷಧಿಯನ್ನು ನುಂಗಿಸಿದ್ದ. ಎರಡು ಮೂರು ದಿನಗಳ ನಂತರ ಗರ್ಭ ಕರಗಿತ್ತು. ಅವನು ಸಂತಾಪವನ್ನು ವ್ಯಕ್ತಪಡಿಸಿದ್ದ....

"ನೋಡು ದೇವರ ನಿಯಾಮಕ ಇದೇ ಆಗಿತ್ತು ಅಂತ ಕಾಣುತ್ತೆ. ನೀನು ಮತ್ತೆ ಗರ್ಭಿಣಿ ಆದರೆ, ನಾನು ಚೆನ್ನಾಗಿ ನೋಡಿಕೊಳ್ತೀನಿ. ನಿನಗೆ ಯಾವ ತೊಂದರೆಯನ್ನೂ ಕೊಡುವುದಿಲ್ಲ. ಹೆಣ್ಣು ಮಗುವಾದರೂ ಪರವಾಗಿಲ್ಲ ಎಂದು ಸಮಾಧಾನ ಹೇಳಿದ್ದ. ಅವಳು ಅವನ ಮಾತನ್ನು ನಂಬದಿದ್ದರೂ ಸುಮ್ಮನಾಗಿದ್ದಳು.

ಅತ್ತೆ, ಗೊಣಗಿದ್ದಳು.... "ನಮಗೆ ಏನನ್ನೂ ತಿಳಿಸುವುದಿಲ್ಲ. ನೀವು ನೀವೇ ಏನೇನೋ ಮಾಡ್ಕೋತೀರಿ.... ನಿನ್ನ ಹೆಂಡತಿಗೆ ಇನ್ನೆರಡು ಮಕ್ಕಳನ್ನು ಹೆರೋಕೆ ಏನು ಕಷ್ಟವಂತೆ....? ಅತೀ ನಾಜೂಕು.... ಸರಿಯಾದ ಡಾಕ್ಟರಿಗೆ ತೋರಿಸು.... ಪದೇ ಪದೆ ಅಬಾರ್ಷನ್ ಆದರೆ, ಅವಳಿಗೂ ಒಳ್ಳೇದಲ್ಲ. ಅವಳಿಗೇನಾದ್ರೂ ಆದರೆ, ಈ ಮಗೂನ ಯಾರು ನೋಡ್ಕೋತಾರೆ....?"

"ಇಲ್ಲಮ್ಮ ಇವಳಿಗೆ ಏನೂ ಆಗಿಲ್ಲ. ಸರಿಯಾಗಿದಾಳೆ. ಹಣ್ಣು ಹಾಲು, ಟಾನಿಕ್ ತಗೊಂಡ್ರೆ ಮೊದಲಿನಂತಾಗ್ತಾಳೆ. ಮುಂದಿನ ವರ್ಷದ ಹೊತ್ತಿಗೆ ನಿನಗೆ ಮೊಮ್ಮಗ ಹುಟ್ಟಿರ್ತಾನೆ" ಗಂಡ ತಾಯಿಯೊಡನೆ ಹೇಳುತ್ತಿದ್ದುದನ್ನು ಕೇಳಿಸಿಕೊಂಡಿದ್ದಳು.

"ಅದ್ಹೇಗೆ ಹೇಳ್ತೀಯ ಗಂಡು ಮಗುವೇ ಹುಟ್ಟುತ್ತೆ ಅಂತ.... ಆದರೆ ನಾನು ಈಗಲೇ ಹೇಳಿದೀನಿ ನೋಡು... ನನಗೆ ಒಬ್ಬ ಮೊಮ್ಮಗ ಬೇಕೇ

ಬೇಕು. ಹಾಗಂತ ನಿನ್ನ ಹೆಂಡತಿಗೆ ಹೇಳು.... ಅದೂ ಇದು ತಿಂದು ಆರೋಗ್ಯ ವನ್ನು ತಾನೂ ಕೆಡಿಸಿಕೊಂಡು ನಮಗೂ ಕೆಟ್ಟ ಹೆಸರು ತರ್ತಾಳೆ" ಇವಳು ಹಲ್ಲು ಕಡಿದಿದ್ದಳು.

ಗಂಡ ಒಳಗೆ ಬರುವುದನ್ನೇ ಕಾದಿದ್ದವಳು. ಅವನ ಮೇಲೆ ಹರಿ ಹಾಯ್ದಳು. "ನನ್ನ ತಪ್ಪೇನಿದೆ? ಪಾಪ ಮಾಡಿಸ್ತಾ ಇರೋರು ನೀವು. ಇದರ ಮೇಲೆ ನಿಮ್ಮ ತಾಯಿಯ ಆಪಾದನೆ. ನಾನು ಅವರಿಗೆ ನಿಜ ಹೇಳಿ ಬಿಡ್ತೀನಿ"

"ನನ್ನನ್ನು ಕೆಟ್ಟೋನನ್ನಾಗಿ ಮಾಡ್ಬೇಕು ಅಂತಿದ್ರೆ ಹೇಳು. ಅಮ್ಮ ನನ್ನನ್ನು ಬೈದರೆ ನಿಂಗೆ ಸಂತೋಷ ಆಗುತ್ತಾ?" ಕೇಳಿದ್ದ.

"ನನ್ನನ್ನು ಅವರು ಅಂದ್ರೂ ಕೇಳಿಸ್ಕೊಂಡು ಸುಮ್ಮನಿದ್ರಲ್ಲ" ಅದಕ್ಕೆ ಅವನು ಉತ್ತರಿಸಲಿಲ್ಲ. ಗಂಡ ಹೆಂಡತಿಯರ ಮಧ್ಯೆ ಮುನಿಸು ಮುಂದು ವರೆದಿತ್ತು. ಆದರೂ ಕಡೆಗೆ ಸೋತವಳು ಇವಳೇ.

ಈಗ ಇವಳು ಐದನೇ ಬಾರಿ ಗರ್ಭಿಣಿಯಾಗಿದ್ದಳು. ವರ್ಷನಿಗೆ ಐದು ವರ್ಷ ತುಂಬಿತ್ತು. ಅವಳ ಎದುರಿಗೆ ಎಷ್ಟೋ ಮಾತುಗಳನ್ನಾಡಲು ಆಗುತ್ತಿರಲಿಲ್ಲ. ಅವನು ಅಕರಾಸ್ತೆಯಿಂದ ಹೆಂಡತಿಯನ್ನು ಡಾಕ್ಟರ ಬಳಿಗೆ ಕರೆದುಕೊಂಡು ಹೋಗಿದ್ದ. ಅವರು ಎಂಥದೋ ಟೆಸ್ಟ್ ಮಾಡಿ, ಹುಟ್ಟಲಿರು ವುದು ಗಂಡು ಮಗು ಎಂದು ತಿಳಿಸಿದ್ದರು. ಇವನು ಉಬ್ಬಿ ಹೋದ. ಹೆಂಡತಿಯ ಕೈ ಕುಲುಕಿ ಕಂಗ್ರಾಟ್ಸ್ ಎಂದಿದ್ದ. ಅವನು ಹೊರಗೆ ಎದ್ದು ಹೋಗಿದ್ದಾಗ ಇವಳು ಡಾಕ್ಟರನ್ನು ಕೇಳಿದ್ದಳು.

"ನನಗೆ ನಾಲ್ಕು ಬಾರಿ ಅಬಾರ್ಷನ್ ಆಗಿದೆ. ನನ್ನ ಆರೋಗ್ಯ ಮೊದಲಿ ನಂತೆ ಇಲ್ಲ. ನನಗೆ ಆತಂಕ ಆಗುತ್ತಿದೆ. ಈ ಸಾರಿಯೂ ಅಬಾರ್ಷನ್ ಆಗಿ ಹೋದ್ರೆ?"

"ಇಲ್ಲ, ಹಾಗಾಗುಲ್ಲ. ಈ ಮೊದಲು ನಾಲ್ಕು ಬಾರಿಯೂ ನಿನ್ನ ಗಂಡ ಉದ್ದೇಶ ಪೂರ್ವಕವಾಗಿ ಅಬಾರ್ಷನ್ ಮಾಡಿಸಿದ್ದರು. ಈ ಬಾರಿ ಅವರು ನಿಮ್ಮನ್ನು ಬಹಳ ಚೆನ್ನಾಗಿ ನೋಡಿಕೊಳ್ತಾರೆ. ನೋಡ್ತಿರಿ. ಕೆಲವು ದಿನಗಳಲ್ಲೇ ನಿಮ್ಮ ಆರೋಗ್ಯ ಚೆನ್ನಾಗಿ ಸುಧಾರಿಸುತ್ತದೆ. ಯಾವ ಚಿಂತೆಯನ್ನೂ ಮಾಡಬೇಡಿ. ಆಲ್ ದಿ ಬೆಸ್ಟ್" ಎಂದಿದ್ದಳು.

"ಭ್ರೂಣ ಹತ್ಯೆ ಮಹಾ ಪಾಪ ಅಂತಾರೆ. ಇದಕ್ಕೆ ನೀವೂ ಒಪ್ಪಿದೀರಾ ಡಾಕ್ಟರ್?" ಕೇಳಿದ್ದಳು.

"ಹೆಣ್ಣು ಮಕ್ಕಳು ಬೇಡ ಅಂತ ಹೇಳಿಕೊಂಡು ಬರುವ ಅನೇಕರಿಗೆ ನಾನು ಸಹಾಯ ಮಾಡ್ತೀನಿ, ಅಷ್ಟೇ. ಅದರಿಂದ ನಿಮ್ಮಂಥೋರಿಗೆ ಅನುಕೂಲವೇ

ತಾನೇ.... ಅಲ್ಲದೇ ನಿಮ್ಮ ಗಂಡ ಕೇಳಿಕೊಂಡಿದ್ದಕ್ಕೆ ನಾನು ಸಹಾಯ ಮಾಡಿದ್ದು.... ಇದನ್ನು ನೀವು ನಿಮ್ಮ ಗಂಡನನ್ನೇ ಕೇಳಿ" ಎಂದಿದ್ದಳು. ಇವಳು ಸುಮ್ಮ ನಾಗಿದ್ದಳು.

ಅಂದಿನಿಂದ ಗಂಡನ ಅಕರಾಸ್ತೆ ಜಾಸ್ತಿಯಾಗಿತ್ತು. ಅತ್ತೆಯ ಉಪಚಾರ ಅತಿಯಾಗಿತ್ತು. ಹುಟ್ಟುವ ಮಗು ಗಂಡು ಎಂಬ ಸಂಭ್ರಮ ಮನೆಯಲ್ಲಿ ತುಂಬಿಕೊಂಡಿತ್ತು. ಇವಳು ಆಗಾಗ್ಗೆ ವರ್ಷಳನ್ನು ಕುರಿತು ಆತಂಕಗೊಳ್ಳುತ್ತಿದ್ದಳು. ಗಂಡು ಮಗು ಹುಟ್ಟಿದ ಮೇಲೆ, ಮಗಳ ಮೇಲಿನ ಉದಾಸೀನ ಮತ್ತೂ ಜಾಸ್ತಿಯಾಗಬಹುದು ಎಂದುಕೊಂಡು, ತಾನು ಮಗಳನ್ನು ಹೆಚ್ಚು ಹೆಚ್ಚು ಪ್ರೀತಿಸತೊಡಗಿದ್ದಳು.

ನವಮಾಸಗಳು ತುಂಬಿತ್ತು. ಒಂದು ಪ್ರಶಸ್ತವಾದ ದಿನದಲ್ಲಿ ಗಂಡು ಮಗುವನ್ನು ಹೆತ್ತಳು. ಎಲ್ಲರ ಸಡಗರ ಹೇಳತೀರದು. ಮಗುವಿನ ಮುಖವನ್ನು ನೋಡಿ, ತನ್ನ ಕಷ್ಟದ ದಿನಗಳನ್ನು ಮರೆತಳು. ಈ ಸಂಭ್ರಮಕ್ಕೆ ತಾನು ಹಾಗೂ ತನ್ನ ಮಗು ಕಾರಣ ಎಂಬ ಹೆಮ್ಮೆಯೂ ಮೂಡಿತು.

ಈಗ ಮಗಳು ಹೆಚ್ಚು ಕಡಿಮೆ ಅದೇ ತರಹದ ಸಮಸ್ಯೆಯನ್ನು ಎದುರಿಸುತ್ತಿದ್ದಾಳೆ. ತಾನು ಈಗ ಅವಳ ಪರ ನಿಲ್ಲಬೇಕು. ಏನೇ ಆದರೂ ಅಬಾರ್ಷನ್‌ಗೆ ಅವಕಾಶ ಕೊಡಬಾರದೆಂದುಕೊಂಡಳು.

*****

ಹೆಂಡತಿಯನ್ನು ನೆನೆಯುತ್ತಾ ಒಂಟಿಯಾಗಿ ಮಲಗಿದ್ದ ಹರ್ಷನನ್ನು ಕಾಲಿನ ಕಿರುಗೆಜ್ಜೆಯ ಸದ್ದು ಎಚ್ಚರಿಸಿತು. ಮಗುವೊಂದು ಡ್ಯಾಡಿ ಎಂದು ಕರೆದಂತೆ ಅನ್ನಿಸಿತು. ಎದ್ದು ಕೂತ, ಸುತ್ತಲೂ ನೋಡಿದ ಯಾರೂ ಕಾಣಲಿಲ್ಲ. ಡ್ಯಾಡಿ.... ನಿಮಗೆ ನನ್ನ ಮೇಲೆ ಪ್ರೀತಿ ಇಲ್ವಾ! ನಾನೇನು ತಪ್ಪು ಮಾಡಿದೀನಿ? ನಾನು ನಿಮ್ಮ ಮನೆಗೆ ಬರೋದನ್ನು ಬೇಡ ಅಂತ ಇದೀರಲ್ಲ ಅಂತ ಕೇಳಿದಂತಾಯಿತು. ಬೆಚ್ಚಿದ.... ಕಂಡದ್ದು ಕನಸು ಎಂದು ಅರಿವಾಗಲು ಕೆಲವು ನಿಮಿಷಗಳಾಯಿತು. ಆದರೂ ಮನಸ್ಸು ಅಲ್ಲೋಲ ಕಲ್ಲೋಲಗೊಂಡಿತು.

"ಹೌದು, ಹುಟ್ಟಲಿರುವ ಮಗುವಿನ ತಪ್ಪೇನಿದೆ? ಅಪರಾಧ ಮಾಡಲು ಹೊರಟಿರುವವನು ನಾನು. ತಪ್ಪು ನನ್ನದು. ಕನಸಿನ ಮಗುವಾದರೇನಂತೆ? ಇದು ನನ್ನ ಮಗು.... ಈ ಅಚಾತುರ್ಯವನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಈ ಮಗು ದಿನ ನಿತ್ಯ ನನ್ನನ್ನು ಕಾಡುವುದು ಖಂಡಿತಾ ಎಂದುಕೊಂಡ....

ಬೆಳಿಗ್ಗೆ ಎದ್ದವನೇ ಹೆಂಡತಿಯನ್ನು ಕರೆತರಲು ಹೊರಟ. ಕೇವಲ

ನಾಲ್ಕು ದಿನಗಳು ಕಳೆದಿವೆ. ಆದರೆ ತಾನು ಹೆಂಡತಿಯನ್ನು ಹಾಗೂ ಅವಳಿಗೆ ಹುಟ್ಟಲಿರುವ ಮಗುವನ್ನು ತಾನು ಪ್ರೀತಿಸುತ್ತೇನೆ ಎಂದು ಅರಿವಾಗಿತ್ತು....

ಗಂಡನನ್ನು ಕಂಡೊಡನೆ ವರ್ಷಳ ಮುಖ ಬಾಡಿತು. ತಾಯಿಯ ಉಪದೇಶದಿಂದ, ಏನೇ ಆದರೂ ತಾನು ಈ ಅಬಾರ್ಷನ್‌ಗೆ ಒಪ್ಪಬಾರದೆಂದು ನಿರ್ಧರಿಸಿದ್ದಳು. ಈಗ ಅವನು ಏನನ್ನುವನೋ?.... ಆತಂಕ ಕಾಡಿತ್ತು.

ಅವನು ಊರಿಗೆ ವಾಪಸ್ಸು ಕರೆದೊಯ್ಯಲು ಬಂದಿರುವುದಾಗಿ ತಿಳಿಸಿದಾಗ, ಬರುವುದಿಲ್ಲವೆಂದಳು. "ಸಾರಿ ವರ್ಷ... ನಾನು ಏನು ಅಪರಾಧ ಮಾಡುಕ್ಕೆ ಹೊರಟಿದ್ದೆ ಎನ್ನುವ ಅರಿವು ನನಗಾಗಿದೆ.... ನನ್ನನ್ನು ಕ್ಷಮಿಸು" ಎಂದ. ಇವಳು ಕರಗಿ ಹೋದಳು.

****

ಕೆಲವು ತಿಂಗಳುಗಳ ನಂತರ ಅವನು ಫಾರಿನ್ನಿಗೆ ಹೊರಟು ಹೋಗಿದ್ದ. ವರ್ಷ ಬಾಣಂತನಕ್ಕೆಂದು ತವರಿಗೆ ಬಂದಿದ್ದಳು. ಮೂರು ತಿಂಗಳ ನಂತರ ಅವನು ಊರಿಗೆ ವಾಪಸ್ಸು ಬಂದ ದಿನವೇ ಅವನಿಗೊಂದು ಸಿಹಿ ಸುದ್ಧಿ ಕಾದಿತ್ತು. ವರ್ಷ ಅವಳಿ ಮಕ್ಕಳಿಗೆ ಜನ್ಮ ನೀಡಿದ್ದಳು! ಏರ್‌ಪೋರ್ಟ್‌ನಿಂದ ಸೀದಾ ಅವಳನ್ನು ಕಾಣಲೆಂದು ಹೊರಟ....

ಅವನನ್ನು ಕಂಡ ವರ್ಷ ಪೆಚ್ಚು ನಗೆಯನ್ನು ನಕ್ಕಳು. ಎರಡು ತೊಟ್ಟಿಲುಗಳಲ್ಲಿ ಮಲಗಿದ್ದ, ಮುದ್ದಾದ ಮಕ್ಕಳನ್ನು ನೋಡಿದ. ತಾನು ಎರಡು ಮಕ್ಕಳ ತಂದೆಯಾಗಿದ್ದೇನೆ ಎಂದು ಹಿಗ್ಗಿದ.... ವರ್ಷ ಗಂಡನನ್ನು ಬೆರಗಾಗಿ ನೋಡುತ್ತಲೇ ಇದ್ದಳು. ಕೆಲವು ತಿಂಗಳ ಕೆಳಗೆ ಇವನು ಮಗುವಿನ ಜವಾಬ್ದಾರಿಯನ್ನು ಹೊರಲು ನಿರಾಕರಿಸಿದ್ದ.... ಈಗ ಒಟ್ಟಿಗೆ ಎರಡು ಮಕ್ಕಳು, ಅದೂ ಎರಡೂ ಹೆಣ್ಣು ಮಕ್ಕಳು.... ಈ ಸುದ್ಧಿಯನ್ನು ತಿಳಿದು ಇಷ್ಟು ಖುಷಿಯಾಗಿದ್ದಾನೆಂದರೆ.... "ಕಂಗ್ರಾಟ್ಸ್ ವರ್ಷಾ.... ನಾನೀಗ ಎರಡು ಹೆಣ್ಣು ಮಕ್ಕಳ ತಂದೆ.... ಡಬಲ್ ಧಮಾಕ...." ಎಂದು ನಗುತ್ತಾ ಹೇಳಿದಾಗ ಇವಳು ಸುಸ್ತು!!

* * ○ * *

ಮೌನದ ಒಡಲೊಳಗೆ

"ಪುಷ್ಪಾ... ವಿಷಯ ಗೊತ್ತಾಯಾ?" ತಂಗಿ ಶಿಲ್ಪಾ ಪಿಸುದನಿಯಲ್ಲಿ ಮೊಬೈಲನ್ನು ಬಲಗಿವಿಯ ಕಡೆಗೆ ತಂದು ಕೇಳಿದಳು.

"ಯಾವ ವಿಷಯಾ? ಯಾರ ವಿಷಯಾ ಹೇಳ್ತೀದೀಯಾ? ಸ್ವಲ್ಪ ಜೋರಾಗಿ ಮಾತಾಡು. ಸರ್ರ್ಯಾಗಿ ಕೇಳಿಸ್ತಿಲ್ಲ....

"ಅಲ್ಲಿ ನಿನ್ನ ಅಕ್ಕ ಪಕ್ಕ ಯಾರೂ ಇಲ್ಲ ತಾನೇ...? ಅಪ್ಪ ನಿಂಗೆ ಫೋನು ಮಾಡಿದ್ರಾ?... ಪುಷ್ಪಳ ಕಿವಿ ಚುರುಕಾಯಿತು.

"ಅಪ್ಪಾನಾ? ಇಲ್ವಲ್ಲಾ....ಏನಂತೆ? ಮತ್ತೆ ಮಗನ ಜೊತೆ ಜಗಳ ಆಡಿದ್ರಂತಾ?" ಬೇಸರ, ಆತಂಕಗಳಿಂದ ಕೇಳಿದಳು.

"ಇಲ್ಲ ಅದಲ್ಲ...ನಂಗೆ ಹೇಳೋಕೆ ಒಂಥರಾ ಆಗ್ತಿದೆ..."

"ರಾಗ ಎಳೀಬೇಡ. ಆದೇನೂಂತ ಬೇಗ ಹೇಳು..." ಸಿಡುಕಿದಳು.

"ಅಪ್ಪ ಮದ್ವೆ ಮಾಡ್ಕೊಂಡ್ರಂತೆ..."

"ಆಂ!" ಎಂದು ಉದ್ಗಾರ ತೆಗೆದವಳ ಬಾಯಿ ಹಾಗೇ ಅಗಲವಾಗಿತ್ತು. ತಂಗಿ ಹೇಳಿದುದನ್ನು ಕಿವಿ ನಂಬಲಿಲ್ಲ....ಏನಂದೆ?...ತಮಾಷೆ ಮಾಡ್ತಿದೀಯಾ?"

"ನಾನ್ಯಾಕೆ ತಮಾಷೆ ಮಾಡ್ಲೀ...? ನಾನು ಆ ಸ್ಥಿತೀಲಿದೀನಾ? ಅಪ್ಪ ನಂಗೆ ಹೇಳಿದ್ದನ್ನ ನಾನು ನಿಂಗೆ ಹೇಳ್ತಿದೀನಿ. ಅಪ್ಪ ಇವತ್ತು ಬೆಳಿಗ್ಗೆ ಯಾವುದೋ ದೇವಸ್ಥಾನದಲ್ಲಿ ಮದುವೆ ಆದ್ರಂತೆ..."

"ಹಾಗಂತ ಅಪ್ಪಾನೇ ನಿಂಗೆ ಹೇಳಿದ್ರಾ? ಎಲ್ಲೋ ಜೋಕ್ ಮಾಡಿರ್ಬೇಕು, ನೀನು ನಂಬಿ ಬಿಟ್ಯಾ?...." ತಂಗಿಗೆ ಹಾಗೆ ಹೇಳಿದರೂ ಮನದಲ್ಲಿ ಆತಂಕದ ಗೆರೆಗಳು ಎಳೆದವು.

"ಇಲ್ಲ.... ಪುಷ್ಪಾ ತಮಾಷೆ ಅಲ್ಲ.... ಸಾವಿತ್ರಿ ಟೀಚರ್ ಅಂತ ಇರ್ಲಿಲ್ವಾ, ಅವರನ್ನೇ ಅಂತೆ ಮದುವೆ ಆಗಿರೋದು... ನಿಂಗೆ ಯಾಕೆ

ಹೇಳಲಿಲ್ವೋ.... ನಂಗೆ ಮಾತ್ರ ಯಾಕೆ ಹೇಳಿದ್ರೋ...?

"ನನ್ನ ಗಂಡಂಗೆ, ನನ್ನ ಅತ್ತೆ ಮಾವಂಗೆ ಈಗ್ಲೇ ತಿಳಿಯೋದು ಬೇಡ ಅಂತ ಅನ್ನಿಸಿರಬಹುದು.... ಆದರೆ ಎಷ್ಟು ದಿನಾಂತ ಮುಚ್ಚಿಡೋಕೆ ಆಗುತ್ತೆ....ನೀನು ಜ್ಯೋತಿಗೆ ಫೋನು ಮಾಡಿ, ನಿಜವೋ ಸುಳ್ಳೋ ಅಂತ ತಿಳ್ಕೋಬೇಕಾಗಿತ್ತು. ನನ್ನನ್ನು ಕೇಳಿದ್ರೆ?" ದನಿ ಅಸಹನೆಯಿಂದ ತುಂಬಿತ್ತು.

"ಅತ್ತಿಗೆಯ ಫೋನು ಸ್ವಿಚ್‌ಆಫ್ ಆಗಿತ್ತು. ಅಣ್ಣಂಗೆ ಮಾಡುಕ್ಕೇ ಹೆದರಿಕೆ ಆಯ್ತು... ಅಲ್ಲಿ ಏನು ರಂಪ ರಾದ್ಧಾಂತ ಆಗಿದೆಯೋ ಅಂತ ಭಯ ಆಗ್ತಿದೆ ಕಣೇ....

"ನಂಗೂ ಅವನ ಹತ್ರ ಮಾತಾಡೋಕೆ ಭಯ, ನೋಡೋಣ, ಸಮಯ ನೋಡ್ಕೊಂಡು ಮಾತಾಡ್ತೀನಿ. ನೀನ್ಯಾಕೆ ಒಂದೆರಡು ದಿನ ಊರಿಗೆ ಹೋಗಿ ಬರಬಾರ್ದು? ಅಪ್ಪ ಹೇಳಿದ್ದು ನಿಜವಾದ್ರೆ, ನಿನ್ನ ಹೊಸ ಅಮ್ಮನನ್ನು ನೋಡಿದ ಹಾಗಾಗುತ್ತೆ."

"ನೀನೂ ಬರೋದಾದ್ರೆ, ನಾನೂ ಬರ್ತೀನಿ, ನಿಂಗೂ ಹೊಸ ಅಮ್ಮನನ್ನು ನೋಡ್ಬೇಕು ಅಂತ ಅನ್ನಿಸ್ತಿದೆ ಅಲ್ವಾ?"

"ಸಾವಿತ್ರಿ ಟೀಚರ್‌ನ ತುಂಬಾ ವರ್ಷಗಳ ಹಿಂದೆ ನೋಡಿದ್ದೆ. ಆಗ ನೋಡೋಕೆ ಸುಮಾರಾಗಿದ್ರು. ಈಗ ಹೇಗಿದಾರೋ....? ಆದರೆ ಟೀಚರ್ ಗುಣ ಮಾತ್ರ ಒಳ್ಳೇದಿತ್ತು... ಎಲ್ರನ್ನು ಪ್ರೀತಿಯಿಂದ ಮಾತನಾಡಿಸ್ತಿದ್ರು."

"ಈಗ ಅವರು ಸ್ಟೆಪ್ ಮದರ್....ಗುಣ ಹೇಗಿರುತ್ತೋ, ಅಪ್ಪ ಹೀಗೆ ಮಾಡ್ಬಾರ್ದಾಗಿತ್ತು. ನಮಗೆಲ್ಲಾ ಮೋಸ ಮಾಡ್ಬಿಟ್ರು....ಈ ವಯಸ್ನಲ್ಲಿ ಅವರಿಗೆ ಮದ್ವೆ ಅಗತ್ಯ ಏನಿತ್ತು?"

"ಮೊದಲು ನಿಜ ಏನೂಂತ ತಿಳೀಲಿ... ಆಮೇಲೆ ಕಾರಣವೂ ಗೊತ್ತಾಗುತ್ತೆ. ಈಗ ಈ ಮಾತು ಸಾಕು, ನಿನ್ನ ವಿದ್ಯಾಭ್ಯಾಸ ಹೇಗೆ ನಡೀತಿದೆ? ಹಾಸ್ಟೆಲ್ಲಿನಲ್ಲಿ ಏನೂ ತೊಂದ್ರೆ ಇಲ್ಲ ತಾನೇ? ಹಬ್ಬಕ್ಕೆ ಇಲ್ಲಿಗೇ ಬಾ....ಎರಡು ದಿನ ಇದ್ದು ಹೋಗುವಂತೆ."

"ನೋಡೋಣ, ನಂಗೀಗ ಯಾವ ಹಬ್ಬದ ಮೂಡೂ ಇಲ್ಲ, ಇಡ್ತೀನಿ ಬೈ..." ಶಿಲ್ಪಾ ಮಾತನ್ನು ಮುಗಿಸಿದ್ದಳು. ಪುಷ್ಪಾ ನಿಟ್ಟುಸಿರು ಬಿಟ್ಟು, ತೆರೆದ ಕಿಟಕಿಗೆ ಮುಖವೊಡ್ಡಿ ನಿಂತಳು. ತಂಗಿ ಹೇಳಿದ ಮಾತುಗಳಿಂದ ಅವಳ ಚಿತ್ತ ಕಲಕಿ ಹೋಗಿತ್ತು. ಅವಳು ಹೇಳಿದ ಮಾತು ನಿಜವೇ ಆಗಿದ್ದರೆ, ಅಪ್ಪನಿಗೆ ಈ ವಯಸ್ನಲ್ಲಿ ಮದುವೆಯಾಗುವ ಅವಶ್ಯಕತೆ ಇತ್ತೇ? ಎನಿಸದೇ ಇರಲಿಲ್ಲ.

*   *   *

ಸಂದೀಪ್, ನಾನು.... ಜ್ಯೋತಿ.... ಎಲ್ಲಿದೀರಿ? ಏನ್ಮಾಡ್ತೀದೀರಿ? ಹೇಗಿದೀರಿ ಯಾವಾಗ ವಾಪಸ್ಸು ಬರ್ತೀರಿ?" ಅವನು ಅತ್ತಲಿಂದ ಹಲೋ ಎಂದೊಡನೆಯೇ ಪ್ರಶ್ನೆಗಳನ್ನು ಸರಸರನೆ ಕೇಳಿದಳು.

"ಏನಾಯ್ತು ಜ್ಯೋತಿ, ಎಲ್ಲಿಂದ ಮಾತಾಡ್ತಿದೀಯ? ನಿನ್ನ ಫೋನಿಗೇನಾಯ್ತು, ಎಲ್ಲಾ ಹುಶಾರಾಗಿದೀರಿ ತಾನೇ?....ದೀಪು ಹೇಗಿದಾನೆ?" ಅವನೂ ಆತಂಕದಿಂದ ಪ್ರಶ್ನಿಸಿದ. ಅವಳು ನಿಡಿದಾದ ಉಸಿರನ್ನು ಬಿಟ್ಟಿದ್ದು ಕೇಳಿಸಿತ್ತು" ಏನಾಯ್ತು ಜ್ಯೋತಿ....ಏನಾದ್ರೂ ಸೀರಿಯಸ್ ಪ್ರಾಬ್ಲಂ? ತಕ್ಷಣ ಬರಬೇಕಾಗಿದ್ರೆ ಹೇಳು..." ಒತ್ತಾಯ ಮಾಡಿದ.

"ಹಾಗೇನಿಲ್ಲ ಸಂದೀಪ್, ಎಲ್ಲಾ ಹುಶಾರಾಗಿದೀವಿ....ಆದ್ರೆ, ನಿಮ್ಮಪ್ಪ ಒಂದು ಪ್ಲಾಬ್ಲಂ ಮಾಡಿಬಿಟ್ಟಿದ್ದಾರೆ."

"ಅಪ್ಪಾನಾ.... ಏನ್ಮಾಡ್ದ ಅವನು? ಜಗಳ ಆಡಿದ್ನಾ? ಬೈದ್ನಾ?" ರೋಷದಿಂದ ಕೇಳಿದಾಗ ಅವಳು ಎಚ್ಚೆತ್ತಳು.

"ಪ್ಲೀಸ್....ಕೂಲ್‌ಡೌನ್ ನಂಗೇನೂ ಆಗಿಲ್ಲ....ನೀವು ಬಿ.ಪಿ. ರೈಸ್ ಮಾಡ್ಕೋಬೇಡಿ..."

"ಏನಾಯ್ತು ಅಂತ ಸರ್ಯಾಗಿ ಹೇಳು ಜ್ಯೋತಿ, ಇಲ್ಲಿ ನನ್ನ ಎದೆ ಹೊಡ್ಕೋತಿದೆ. ನಿನ್ನ ತಂಟೆಗೆ ಬಂದಿದ್ನಾ?"

"ಛೇ....ಎಂಥಾ ಕೆಟ್ಟ ಆಲೋಚನೆ ನಿಮ್ಮದು? ಹಾಗ್ಯಾಕೆ ಮಾಡ್ತಾರೆ ಅವರು? ನಾನು ಅವರ ಸೊಸೆ...."

" ನಂಗೆಲ್ಲಾ ಗೊತ್ತು. ಆ ಮನುಷ್ಯಂಗೆ ನಿಯತ್ತಿಲ್ಲ. .. ನಿನ್ನನ್ನ ವಕ್ರವಾಗಿ ನೋಡ್ತಾನೆ ಅಂತ ನಂಗೊತ್ತು.."

"ಅಂಥಾ ಅನುಮಾನ ಪಡುವ ಅಗತ್ಯ ಇಲ್ಲ....ಅವರು ಮತ್ತೊಂದು ಮದುವೆಯಾಗಿಬಿಟ್ಟಿದ್ದಾರೆ...."

"ಏನಂದೆ.... ಮತ್ತೆ ಮದ್ವೇನಾ? ನಂಗೆ ಗೊತ್ತಿತ್ತು.... ಹೀಗೆ ಏನಾದ್ರೂ ಮಾಡ್ತಾನೆ ಅಂತ.... ನಂಬಿಕೆಗೆ ಅರ್ಹನಲ್ಲ.... ಹೆಂಗ್ಸು ಇಲ್ಲದಿದ್ರೆ ಆಗುಲ್ವಂತಾ ಅವನ್ಗೆ.?

"ಏನೇನೋ ಮಾತಾಡ್ಬೇಡಿ ಸಂದೀಪ್.... ಎಷ್ಟಾಗಲೀ ಅವರು ನಿಮ್ಮ ತಂದೆ, ನೀವು ಹೀಗೇ ಮಾತಾಡಿದ್ರೆ, ನಮ್ಮ ದೀಪೂನೂ ಹೀಗೇ ಮಾತಾಡೋ ದನ್ನ ಕಲೀತಾನೆ ಅಷ್ಟೆ...."

"ನಂಗೆ ಅಷ್ಟು ಗೊತ್ತಾಗುಲ್ವಾ? ಅವನೆದುರ್ಗೆ ಆಡ್ತೀನಾ? ಹೋಗ್ಲಿ ಯಾರು ಆ ಹೆಂಗ್ಸು? ಚಿಕ್ಕೋಳಾ.... ನೀನು ನೋಡಿದ್ಯಾ? ನೀನು ಅವಳ ಹತ್ರ ಮಾತಾಡ್ಬೇಡ..

"ಇಲ್ಲ, ನಾನು ಆಕೇನ ಇನ್ನೂ ನೋಡಿಲ್ಲ....ನಂಗೂ ವಿಷಯ ಗೊತ್ತಿರ್ಲಿಲ್ಲ, ಶಿಲ್ಪಾ ಫೋನು ಮಾಡಿ ಹೇಳಿದ್ಲು..."

"ಅವಳಿಗೆ ಹೇಗೆ ಗೊತ್ತಾಯ್ತಂತೆ? ಅವಳು ಬಂದಿದಾಳಾ?"

"ಅವಳ್ಗೆ ನಿಮ್ಮ ತಂದೇನೇ ಫೋನು ಮಾಡಿ ಹೇಳಿದ್ರಂತೆ, ನಂಗೂ ತಕ್ಷಣಕ್ಕೆ ಶಾಕ್ ಆಯ್ತು....ಅವಳೂ ಕಸಿವಿಸಿಗೊಂಡಿದ್ದಾಳೆ. ಈ ವಿಷಯ ನಿಜಾನಾ ಅಂತ ನನ್ನನ್ನೇ ಕೇಳಿದ್ಲು, ನಿಜ ಇರಬಹುದು ಅಲ್ವಾ ಸಂದೀಪ್..."

"ಸುಳ್ಯಾಕೆ ಹೇಳ್ತಾನೆ ಆ ಮನುಷ್ಯ? ನಿಜಾನೇ ಇರಬಹುದು. ನಿನ್ನ ಪಾಡಿಗೆ ನೀನು ಸುಮ್ಮನಿದ್ದು ಬಿಡು, ಏನೂ ಗೊತ್ತಿಲ್ಲ ಅನ್ನೋಳ ತರಹ ನಾನು ನಾಳೆ ಬೆಳಗ್ಗೇನೇ ಬಂದು ಬಿಡ್ತೀನಿ, ನೀನು ವರಿ ಮಾಡ್ಕೋಬೇಡ...."

"ನಂಗೆ ಏನೂ ವರಿ ಇಲ್ಲ, ನನ್ನ ವರಿ ಎಲ್ಲಾ ನಿಮ್ದೇ....ಮೊದ್ಲೇ ಅಪ್ಪ ಮಗನಿಗೆ ಎಣ್ಣೆ ಸೀಗೇಕಾಯಿ, ಬರ್ತಿದ್ದ ಹಾಗೇ ಜಗಳ ಆಗುತ್ತಲ್ಲ ಅಂತ ನಿಮಗೆ ವಿಷಯ ತಿಳಿಸ್ದೆ....ನಾನು ಇಡ್ತೀನಿ, ದೀಪು ಸ್ಕೂಲಿಂದ ಬರೋ ಹೊತ್ತಾಯ್ತು, ಮನೆಗೆ ಹೋಗ್ತೀನಿ, ಪಬ್ಲಿಕ್ ಬೂತ್‌ನಿಂದ ಮಾತಾಡ್ತೀದೀನಿ. ಓ.... ಕೇ...?

"ಓ.... ಕೇ.... ಹುಶಾರು, ನಾನು ಹೇಳಿದ್ದೆಲ್ಲಾ ನೆನಪಿದೆ ತಾನೇ..."

"ಹೂಂ, ನೀವು ಕೂಲ್ ಆಗಿರಿ ಸಂದೀಪ್....

"ಕೂಲ್ ಆಗಿರಕ್ಕೆ ಈ ಮನುಷ್ಯ ಎಲ್ಲಿ ಬಿಡ್ತಾನೆ?" ಎಂದು ಗೊಣಗಿದ್ದು ಅವಳಿಗೆ ಕೇಳಿಸಿತ್ತಾದರೂ ಲೈನ್ ಕಟ್ ಮಾಡಿದಳು. ಗಂಡನ ಬಗ್ಗೆಯೇ ಚಿಂತಿಸುತ್ತಾ ಸಮೀಪದಲ್ಲಿದ್ದ ಆಟೋ ಸ್ಟ್ಯಾಂಡಿಗೆ ಬಂದಳು.

ಸಂದೀಪ, ಜ್ಯೋತಿ ಪ್ರೀತಿಸಿ ಮದುವೆಯಾದವರು. ಈ ಮದುವೆಗೆ ಅವಳ ಮನೆಯಲ್ಲಿ ವಿರೋಧವಿರಲಿಲ್ಲ. ಅವಳಿಗೆ ತಾಯಿ ಇರಲಿಲ್ಲ. ತಂದೆ ಹಾಗೂ ಅಣ್ಣಂದಿರು ಒಪ್ಪಿಗೆಯನ್ನು ಕೊಟ್ಟಿದ್ದರು. ಆದರೆ ಸಂದೀಪನ ತಂದೆ ತಾಯಿಗೆ ಈ ಮದುವೆ ಇಷ್ಟವಿರಲಿಲ್ಲ. ಆದರೆ ಸಂದೀಪನ ಹಠಕ್ಕೆ ಮಣಿದು ಒಪ್ಪಿಗೆಯನ್ನು ಕೊಟ್ಟಿದ್ದರು. ಹಾಗಾಗಿ, ಜ್ಯೋತಿಗೆ ಈ ಮನೆಯಲ್ಲಿ ಹಾರ್ದಿಕ ಸ್ವಾಗತವೇನೂ ಇರಲಿಲ್ಲ. ಈ ವಿಷಯವನ್ನು ಸಂದೀಪ ಇಂದಿಗೂ ಮರೆತಿಲ್ಲ. ಆದರೆ ಜ್ಯೋತಿ ಮರೆಯಲು ಪ್ರಯತ್ನಿಸಿ ಈ ಮನೆಗೆ ಹೊಂದಿಕೊಂಡಿದ್ದಳು.

ಸೊಸೆ ಬಸಿರಿ ಎಂದು ತಿಳಿದಾಗ, ತಾಯಿ ಮಾನವೀಯತೆಯನ್ನು

ತೋರಿದ್ದಳು. ತಾಯಿಯಿಲ್ಲದ ತವರಿಗೆ ಬಾಣಂತನಕ್ಕೆ ಕಳಿಸದೇ, ತಾನೇ ಬಾಣಂತನವನ್ನು ಮಾಡಿದ್ದಳು. ಇದ್ದಕ್ಕಿದ್ದಂತೆ, ಹೃದಯಾಘಾತದಿಂದ ಅತ್ತೇ ತೀರಿಹೋದಾಗ, ವಿಪರೀತ ದುಃಖಗೊಂಡಿದ್ದಳು. ತಾಯಿಯ ಸಾವಿಗೆ ತಂದೆಯೇ ಕಾರಣ ಎಂಬಂತೆ ಸಂದೀಪ ತಂದೆಯನ್ನು ಮತ್ತೂ ದ್ವೇಷಿಸ ತೊಡಗಿದ. ಇದಕ್ಕೆ ಮತ್ತೂ ಒಂದು ಕಾರಣವೂ ಇತ್ತು. ಕೆಲಸವನ್ನು ಕಳೆದು ಕೊಂಡಿದ್ದ ಸಂದೀಪ, ವಾಸವಾಗಿದ್ದ ಮನೆಯ ಮೇಲೆ ಸಾಲ ತೆಗೆದುಕೊಂಡು ತಾನೇ ಬಿಸನೆಸ್ ಮಾಡಬೇಕೆಂದುಕೊಂಡು, ತಂದೆಯೊಡನೆ ನಿಷ್ಠೂರವಾಗಿ ಮಾತನಾಡಿದಾಗ, ತಂದೆ ಮಗನನ್ನೇ ದೂಷಿಸಿ, ಸಾಲವನ್ನೂ ತೆಗೆದು ಕೊಡಲು ನಿರಾಕರಿಸಿದ್ದ. 'ಹಾಗಾದರೆ' ನನ್ನ ಪಾಲನ್ನು ನನಗೆ ಕೊಡಿ ಎಂದು ಪೀಡಿಸ ಲಾರಂಭಿಸಿದ. ಈ ವಿಷಯವಾಗಿಯೂ, ತಂದೆ ಮಗನ ಮಧ್ಯೆ ವೈಮನಸ್ಯ ಮತ್ತೂ ಹೆಚ್ಚಾಗಿತ್ತು. ತಂದೆ ಮಗನ ಜಗಳಕ್ಕೆ ಬೇಸತ್ತು, ಶಿಲ್ಪಾ, ಬೇರೆ ಊರಿಗೆ ಓದಲೆಂದು ಹೊರಟು ಹೋಗಿದ್ದಳು.

ಅಡುಗೆ ಮನೆಯ ಕೆಲಸವೆಲ್ಲಾ ಈಗ, ಜ್ಯೋತಿಯ ಹೆಗಲಮೇಲೆ ಬಿದ್ದಿತು. ಮನೆಗೆ ಬೇಕಾದ ಸಾಮಾನು ಸರಂಜಾಮುಗಳನ್ನು ಮಾವನೇ ತರಿಸಿ ಹಾಕುತ್ತಿದ್ದುದರಿಂದ ಮನೆಯ ಖರ್ಚಿಗೆ, ಸಂದೀಪ ಏನನ್ನೂ ಖರ್ಚು ಮಾಡಬೇಕಾಗಿರಲಿಲ್ಲ. ಆದರೂ ಅವನ ಅಸಹನೆ ದಿನ ದಿನಕ್ಕೂ ಹೆಚ್ಚುತ್ತಿತ್ತು. ಯಾವುದೋ ಸಣ್ಣಪುಟ್ಟ ಕೆಲಸಗಳಿಂದ ಅಲ್ಪಸ್ವಲ್ಪ ಸಂಪಾದಿಸುತ್ತಿದ್ದ. ಅಪ್ಪನ ಹಂಗಿನಲ್ಲಿ ತಾನು ಇದ್ದೇನೆಂಬ ಕೊರಗು ಅವನನ್ನು ರೇಗಿಸುತ್ತಿತ್ತು. ಅಪ್ಪನಿಗಾಗಿ ತನ್ನ ಹೆಂಡತಿ ಅಡುಗೆ ಮಾಡುವುದು, ಬಡಿಸುವುದು, ಇವೆಲ್ಲವನ್ನು ಸಹಿಲಾಗುತ್ತಿರ ಲಿಲ್ಲ..." ಮನೇಲೆ ಕೂತ್ಕೊಂಡು ಅಪ್ಪನ ಸೇವೆ ಮಾಡಬೇಕಾಗಿಲ್ಲ.... ಕೆಲಸಕ್ಕೆ ಸೇರ್ಕೋ.... ಹೇಗೂ ಮಗು ದೊಡ್ಡದಾಗಿದೆ ಎಂದು ಪೀಡಿಸಲಾರಂಭಿಸಿದ. ಅವಳಿಗೆ ಇಷ್ಟವಿಲ್ಲದಿದ್ದರೂ, ಗಂಡನ ಮಾತನ್ನು ವಿರೋದಿಸಲಾಗದೇ, ಸಮೀಪದಲ್ಲಿದ್ದ ಸ್ಕೂಲೊಂದರಲ್ಲಿ ಟೀಚರ್ ಆಗಿ ನೇಮಕಗೊಂಡಳು. ಮನೆಯ ಕೆಲಸ, ಮಗುವಿನ ಲಾಲನೆ ಪಾಲನೆ, ಹಾಗೂ ಸ್ಕೂಲಿಗೆ ಹೋಗಿ ಬರುವುದು ಕಷ್ಟವೆನಿಸಿದರೂ, ಸಹಿಸಿಕೊಂಡು ದುಡಿಯುತ್ತಿದ್ದುದನ್ನು ಗಮನಿಸಿದ ಮಾವ, ಸೊಸೆಗೆ ತಿಳುವಳಿಕೆ ಹೇಳಿದರು.

"ನೀನು ಸಂಪಾದಿಸಲೇಬೇಕು ಎಂಬ ಅಗತ್ಯ ಇಲ್ಲ ನಿನ್ನ ಗಂಡನ ಮಾತನ್ನು ಕೇಳಿ ನೀನೂ ಕಷ್ಟಪಡ್ತೀಯಾ, ಮಗು ಇನ್ನೂ ಚಿಕ್ಕದು, ಅದನ್ನು ಸರಿಯಗಿ ಬೆಳೆಸುವ ಕೆಲಸ ನಿನ್ನದು, ಕೆಲಸವನ್ನು ಬಿಟ್ಟುಬಿಡು" ಎಂದರು.

ಅದನ್ನು ಅವಳು ಗಂಡನೊಡನೆ ಹೇಳಿದ್ದಳು. ಅವನ ಪಿತ್ತ ನೆತ್ತಿಗೇರಿತ್ತು,

ಆ ಮುದುಕಂಗೆ ನಿನ್ನ ಕೈಲಿ ಸೇವೆ ಮಾಡಿಸ್ಕೋಬೇಕು ಅಂತ ಆಸೆ. ರಿಟೈರ್ ಆಗಿ ಮನೇಲೇ ಬಿದ್ದಿರ್ತಾನೆ, ಅವನ್ಗಂತೂ ನಾಚ್ಕೆ ಇಲ್ಲ ಅಂತಾದ್ರೆ, ನಿಂಗೂ ಇಲ್ವಾ... ನೀನು ನನ್ನ ಹೆಂಡ್ತಿ, ಅವನ ತೊತ್ತಲ್ಲ, ಅವನು ಹೇಳಿದ್ದಾಗೆ ಕೇಳ ಬೇಕಾಗಿಲ್ಲ. ಇವತ್ನಿಂದ ನೀನು ಅವನಿಗಾಗಿ ಅಡುಗೆ ತಿಂಡಿ ಏನನ್ನೂ ಮಾಡ ಬೇಕಾಗಿಲ್ಲ, ನಾನು ಹೇಳಿದ ಹಾಗೇ ಕೇಳೋದಾದ್ರೇ ನನ್ನ ಮನೇಲಿರು, ಇಲ್ಲದಿದ್ರೆ ನಿಮ್ಮಪ್ಪನ ಮನೆಗೆ ಹೋರಟ್ಹೋಗು..." ತಂದೆಗೆ ಕೇಳಿಸುವಂತೆ ಅಬ್ಬರಿಸಿದ್ದ. ಅವಳು ಪೆಚ್ಚಾಗಿದ್ದಳು.

ಮಗನ ಅತಿರೇಕದ, ಅವಿವೇಕದ ಮಾತುಗಳಿಂದ ತಂದೆಗೂ ಬೇಸರ ವಾಗಿತ್ತು ಅವನ್ನ ಮ್ಹಾತುಗಳು ಅಸಹ್ಯವಾಗಿ ಕಂಡಿತ್ತು. ನನ್ನ ಮೇಲಿನ ಸಿಟ್ಟಿಗೆ, ನನ್ನ ಮೇಲೆ ಅನುಮಾನ ಇದು ಹೀಗೇ ಮುಂದುವರೆದರೆ, ಹೆಂಡತಿಯನ್ನು ಸಂದೇಹದಿಂದ ನೋಡಿ, ಮನೆಯಿಂದ ಓಡಿಸಿದರೂ, ಓಡಿಸಿದನೇ.... ಆಗ ಅಪವಾದ ಬರುವುದು ತನ್ನ ಮೇಲೇಯೇ ಎಂದುಕೊಂಡು, ತಾನು ಹೋಟೆಲಿನಲ್ಲಿ ತಿಂಡಿಕಾಫಿ, ಹಾಗೂ ಊಟವನ್ನು ಮಾಡಿಕೊಳ್ಳಲು ಪ್ರಾರಂಭಿಸಿದ. ಈ ವಿಷಯ ತಿಳಿದರೂ, ಸಂದೀಪ ತನಗೆ ಸಂಬಂಧಿಸಿದುದೇ ಅಲ್ಲ ಎಂಬಂತೆ ಸುಮ್ಮನಾಗಿದ್ದ. ಇವರಿಬ್ಬರ ಮಧ್ಯೆ ನೊಂದವಳು ಜ್ಯೋತಿಯೇ." ಇಲ್ಲಿ ಇದ್ದುಕೊಂಡು ಅವರಿಗಾಗಿ ಅಡುಗೆ ತಿಂಡಿ ಮಾಡದಿದ್ದರೆ, ಈ ಮನೇಲ್ಯಾಕಿರ್ಬೇಕು? ಅವರ ಖರ್ಚಿನಲ್ಲಿ ನಾವು ಊಟ ಮಾಡ್ಬೇಕಾ? ನಾವೇ ಬೇರೆ ಮನೆ ಮಾಡ್ಕೊಂಡು ಹೋಗೋಣ...." ಗಂಡನನ್ನು ಒಪ್ಪಿಸಲು ನೋಡಿದಳು.

"ನಿನಗೇನಾದ್ರೂ ಬುದ್ಧಿ ಗಿದ್ಧಿ ಇದೆಯಾ?....ನಾನು ಶ್ರೀಮಂತನಲ್ಲ. ಬಾಡಿಗೆ ಕೊಡುಕ್ಕೆ ಎಲ್ಲಿದೆ ದುಡ್ಡು? ಇನ್ನೆರಡು ವರ್ಷ ಕಳೆದ್ರೆ, ಮಗೂನ ಬೇರೆ ಸ್ಕೂಲಿಗೆ ಸೇರಿಸ್ಬೇಕಾಗುತ್ತೆ... ಇದು ನನ್ನ ತಾತನ ಮನೆ, ಇದರಲ್ಲಿ ನನಗೂ ಅಧಿಕಾರ ಇದೆ, ಅಮ್ಮ ಅಂತೂ ಹೋದ್ಲು.... ಬೇಕಾದ್ರೆ, ಅವನೇ ಯಾವುದಾದ್ರೂ ವೃದ್ಧಾಶ್ರಮಕ್ಕೆ ಸೇರ್ಕೊಳ್ಳಲಿ. ನಾನಂತೂ ಈ ಮನೇನ ಬಿಟ್ಟು ಹೋಗುಲ್ಲ.... ನಾನೂ ಒಳ್ಳೆಯ ಕೆಲಸಕ್ಕೆ ಪ್ರಯತ್ನ ಪಡ್ತಿದೀನಿ, ನೀನು ಹತ್ತು ಮಕ್ಕಳಿಗೆ ಟ್ಯೂಷನ್ ಹೇಳ್ಕೊಡು..."

"ಟ್ಯೂಷನ್ ಕ್ಲಾಸ್ ಮಾಡುಕ್ಕೆ ಮನೇಲಿ ಸರಿಯಾದ ಜಾಗ ಎಲ್ಲಿದೆ?..."

"ನಾನು ಅವನ ಹತ್ರ ಮಾತಾಡ್ತೀನಿ, ಮುಂದಿನ ರೂಮನ್ನು ಬಿಟ್ಟು ಕೊಡ್ಲಿ" ಅವನಿಗ್ಯಾಕೆ ರೂಮು? ಅವನಿಗ್ಯಾಕೆ ಪ್ರೈವೆಸಿ? ಕೆಟ್ಟದಾಗಿ ನಕ್ಕು ನುಡಿದಾಗ ಇವಳಿಗೆ ಅಸಹ್ಯವೆನಿಸಿತ್ತು.

"ಪ್ಲೀಸ್, ನನ್ನೆದುರಿಗೆ ಹೀಗೆಲ್ಲಾ ಮಾತಾಡ್ಬೇಡಿ, ಎಷ್ಟಾಗಲೀ ಅವರು ನಿಮ್ಮ ತಂದೆ, ಯಾರಿಗಾದ್ರೂ ಕೇಳಿಸಿದ್ರೆ ಏನಂದ್ಕೊಳ್ತಾರೆ? ನಾನು ಕೆಟ್ಟವಳಾಗ್ತೀನಿ ಅಷ್ಟೇ...."

"ಅದೇನು ಆ ಮುದುಕನ ಮೇಲೆ ನಿನಗೆ ಅಕ್ಕರೆ? ಅವನು ವ್ಯಂಗ್ಯವಾಗಿ ನುಡಿದಾಗ ಅವಳು ಸುಮ್ಮನಾದಳು. ಒಬ್ಬ ಮಗ, ತಂದೆಯಾದವನನ್ನು ಇಷ್ಟು ಅಸಭ್ಯವಾಗಿ ಕಾಣುತ್ತಾನೆಂದರೇ.... ಅವಳಿಗೆ ಅರ್ಥವಾಗದ ವಿಷಯ. ಅವನು ತಂದೆಯೊಡನೆ ಏನೂ ಮಾತಾಡಿದನೋ, ಇವಳು ಮತ್ತೆ ಕೇಳಲಿಲ್ಲ. ಕೆಲವೇ ದಿನಗಳಲ್ಲಿ ಮುಂದಿನ ರೂಮನ್ನೂ ಕೆಳಗಿನ ಮನೆಯನ್ನು ಇವರುಗಳಿಗೆ ಬಿಟ್ಟುಕೊಟ್ಟು ಆತ ಮೇಲಿನ ರೂಮಿನಲ್ಲಿ ಇರತೊಡಗಿದರು. ಆ ರೂಮಿಗೆ ಹೊರಗಿನಿಂದ ಮೆಟ್ಟಿಲುಗಳಿದ್ದವು. ಹಾಗಾಗಿ ಆತ ಈ ಕಡೆಗೆ ಬರುವುದೇ ಕಡಿಮೆ ಆಗಿತ್ತು. ಬೆಳಗಿನ ಹೊತ್ತು ಸ್ನಾನಕ್ಕೆ ಮಾತ್ರ ಈ ಮನೆಯೊಳಗೆ ಬರತೊಡಗಿದರು.

"ಅವನಿಗೆ ನನ್ನನ್ನು ಕಂಡ್ರೆ ಆಗುಲ್ಲ, ಆದರೆ, ನಿಂಗೆ ಕಷ್ಟ ಆಗುತ್ತೆ, ಅಂತ ನಾವು ಹೇಳಿದ್ದಕ್ಕೆಲ್ಲಾ ಒಪ್ಪಿಕೊಳ್ತಿದಾನೆ. ಇದೇ ನಂಗೆ, ಇಷ್ಟ ಆಗಲ್ಲ, ಅವನ ಮೇಲೆ ಕೇಸು ಹಾಕಿ, ಈ ಮನೇನ ನನ್ನ ಹೆಸರಿಗೆ ಬರಸ್ಕೊಂಡು ಅವನನ್ನು ಈ ಮನೆಯಿಂದ ಹೊರಕ್ಕೆ ಹಾಕ್ತೀನಿ."

ಅವರ್ಮೇಲೆ ಯಾಕೆ ಇಂಥ ದ್ವೇಷ ಅಂತ ಕೇಳಬೇಕೆಂದುಕೊಂಡರೂ, ಗಂಡನ ಸ್ವಭಾವ ತಿಳಿದ ಅವಳು ಸುಮ್ಮನಾಗಿದ್ದಳು. ಕೆಲವೇ ದಿನಗಳ ನಂತರ, ಪುಷ್ಪಾ ಹಾಗೂ ಶಿಲ್ಪಾರನ್ನು ಕರೆಸಿ, ಅವರುಗಳ ಎದುರಿಗೆ, ಈ ವಿಷಯವನ್ನು ಎತ್ತಿದ. ಲಾಯರನ್ನು ಕರೆಸಿ ಮಾತನಾಡಿದಾಗ, ಆ ಮನೆಯ ಮೇಲೆ, ಆತನಿಗೆ ಹಾಗೂ ಆತನ ಮೂರು ಮಕ್ಕಳಿಗೂ ಹಕ್ಕು ಇರುವುದಾಗಿ ತಿಳಿಸಿದಾಗ, ಅವನಿಗೆ ನಿರಾಸೆ ಆಗಿತ್ತು. ನಾಲ್ಕು ಭಾಗದಲ್ಲಿ ತನಗೆ ಸಿಗುವುದು ಬಹಳ ಕಡಿಮೆ, ಅದರಿಂದ ತನಗೆ ಏನೂ ಲಾಭವಿಲ್ಲ ಅಂತ ತಿಳಿದಾಗ ಪೆಚ್ಚಾಗಿದ್ದ. ಅಕ್ಕನಾಗಲೀ, ತಂಗಿಯಾಗಲೀ, ತಮ್ಮ ಭಾಗವನ್ನು ಅವನಿಗೆ ಬಿಟ್ಟು ಕೊಡುವುದಾಗಿ ಹೇಳದಿದ್ದಾಗ, ಅಲ್ಲಿಂದ ಎದ್ದು ಹೋಗಿದ್ದ.

ಆಮೇಲೆ, ಹೆಣ್ಣು ಮಕ್ಕಳು ತಂದೆಯೊಡನೆ ಏನೂ ಮಾತನಾಡಿದರೋ, ಏನು ತೀರ್ಮಾನ ತೆಗೆದುಕೊಂಡರೋ, ಅವನು ಕೇಳಲಿಲ್ಲ, ಕೆಲವೇ ತಿಂಗಳುಗಳಲ್ಲಿ ಆತ ಪ್ರತ್ಯೇಕವಾಗಿ ವಾಸಿಸತೊಡಗಿದರು. ಮಗನಿಗೆ ಕಾಣದಂತೆ, ಮೊಮ್ಮಗುವಿಗೆ ತಿಂಡಿ ತಂದುಕೊಟ್ಟು ಮುದ್ದಿಸುತ್ತಿದ್ದರು. ಸೊಸೆಯನ್ನು ಮಾತನಾಡಿಸಿ, ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರು, ಗಂಡನಿಗೆ ತಿಳಿದರೆ,

ತನ್ನ ಗತಿಯೇನೋ ಎಂದು ಹೆದರುತ್ತಿದ್ದಳು.

* * *

ರಿಕ್ಷಾದಿಂದ ಇಳಿದು, ಚಾಲಕನಿಗೆ ದುಡ್ಡನ್ನು ಕೊಟ್ಟು ಗೇಟನ್ನು ತೆರೆದಳು. ಮಾವ ಇವಳಿಗೇ ಕಾಯುತ್ತಿರುವಂತೆ ಅನ್ನಿಸಿತ್ತು. ಸಣ್ಣಗೆ ದಿಗಿಲೂ ಆಗಿತ್ತು. "ನಿನ್ನತ್ರ ಸ್ವಲ್ಪ ಮಾತಾಡ್ಬೇಕಾಗಿತ್ತು.... ಒಂದೈದು ನಿಮಿಷ ಬರೋಕೆ ಆಗುತ್ತಾ?"

"ನನ್ನಿಂದ ಏನಾದ್ರೂ ಕೆಲ್ಸ ಆಗ್ಬೇಕಾಗಿತ್ತಾ?"

"ನಿಂಗೆ ಒಬ್ಬರನ್ನ ಪರಿಚಯ ಮಾಡಿಕೊಡಬೇಕಾಗಿತ್ತು." ಅವಳ ಎದೆ ಸಣ್ಣಗೆ ನಡುಗಿತ್ತು. ಮುಖದ ಕಳೆ ಬದಲಾಗಿತ್ತು. ಆತ ಮುಂದೆ ಮುಂದೆ ನಡೆದು ಮಹಡಿಯ ಮೆಟ್ಟಿಲಗಳನ್ನೇರಿದಾಗ, ಇವಳು ಅವರನ್ನು ಹಿಂಬಾಲಿಸಿದ್ದಳು.

ಸೋಫಾದ ಮೇಲೆ ಕುಳಿತಿದ್ದ ಹೆಂಗಸು, ಇವರಿಬ್ಬರನ್ನೂ ಕಂಡೊಡನೆ ಎದ್ದು ನಿಂತಳು. "ಜ್ಯೋತಿ ಇವರು ಸಾವಿತ್ರಿ ಅಂತ.... ಇವರು ಇಲ್ಲೇ ನನ್ನ ಜತೇಲಿರ್ತಾರೆ, ನಾನು ಇವರನ್ನು ಮದುವೆಯಾಗಿದೀನಿ, ಆಕೆ ಮುಗುಳ್ನಕ್ಕಳು. ಜ್ಯೋತಿ ಕೈಮುಗಿದು 'ನಮಸ್ಕಾರ' ಎಂದಳು. ಇವಳು ನನ್ನ ಸೊಸೆ.... ಜ್ಯೋತಿ...." ಆಕೆ ಗೊತ್ತು ಎಂಬಂತೆ ತಲೆಯಾಡಿಸಿ ಕೈ ಮುಗಿದಳು. ಮುಂದೇನು ಮಾತಾಡ ಬೇಕೆಂದು ತಿಳಿಯದೇ ಜ್ಯೋತಿ ಹಾಗೇ ನಿಂತಳು. "ನಿಂಗೆ ಆಶ್ಚರ್ಯ ಆಗ್ತಿರ ಬಹುದು. ನಾನು ಬಹಳ ಒಂಟಿಯಾಗ್ಬಿಟ್ಟಿದ್ದೆ. ಆದ್ದರಿಂದ ಈ ವಯಸ್ನಲ್ಲಿ ಮತ್ತೆ ಮದುವೆಯಾದೆ." ಜ್ಯೋತಿ ಬೆರಗಿನಿಂದ ಅವರನ್ನೇ ನೋಡಿದಳು.

"ಸಂದೀಪ ಹೇಗೂ ಊರ್ನಲ್ಲಿಲ್ಲ, ಇವತ್ತು ನೀವಿಬ್ರೂ ಇಲ್ಲಿಗೇ ಊಟಕ್ಕೆ ಬಂದು ಬಿಡಿ, ಹೋಟೆಲ್ನಿಂದ ಊಟ ತರಿಸ್ತೀನಿ."

"ಪರವಾಗಿಲ್ಲ ಮಾವ."

"ಅವನು ಬೈತಾನೆ ಅಂತ ಹೆದರ್ಕೇನಾ?" ನಗುತ್ತಾ ಕೇಳಿದ.

"ಹಾಗೇನಿಲ್ಲ, ದೀಪೂನ ಕಳಿಸ್ತೀನಿ...."

"ಸರಿಯಮ್ಮ ನಿನ್ನಿಷ್ಟ... ಸಾವಿತ್ರಿ, ಜ್ಯೋತಿ ತುಂಬಾ ಒಳ್ಳೆಯ ಹುಡುಗಿ, ನಿಮಗೆ ಒಳ್ಳೆಯ ಸ್ನೇಹಿತೆ ಆಗ್ತಾಳೆ.... ನಿಮಗೆ ಏನೇ ಬೇಕಾದ್ರೂ ಇವಳನ್ನ ಕೇಳಿ ತಿಳಿದುಕೊಳ್ಳಬಹುದು" ಸಾವಿತ್ರಿ ವಿಶ್ವಾಸ ಪೂರ್ವಕವಾದ ಮಂದಹಾಸ ವನ್ನು ಬೀರಿದಾಗ, ಜ್ಯೋತಿಯೂ ಮುಗುಳ್ನಕ್ಕಳು.

'ಬರ್ತೀನಿ' ಎಂದು ಕೈ ಮುಗಿದು ಕೆಳಗಿಳಿದು ಬಂದಳು. ಮುಖದ ಬೆವರನ್ನು ಒರೆಸಿಕೊಂಡು, ಮುಂಬಾಗಿಲನ್ನು ತೆರೆದಳು. ಕೆಲವೇ ನಿಮಿಷಗಳಲ್ಲಿ ದೀಪು ಸ್ಕೂಲಿನಿಂದ ವಾಪಸ್ಸಾಗಿದ್ದ. ಅವನಿಗೆ ತಿಂಡಿಯನ್ನು ಕೊಟ್ಟು ಹಾಲನ್ನು ಕುಡಿಸಿದಳು. "ಹೋಗು ಸ್ವಲ್ಪ ಹೊತ್ತು ಆಟ ಆಡ್ಕೊಂಡು ಬಾ.... ಆಮೇಲೆ

ಹೋಂ ವರ್ಕ್ ಮಾಡುವಂತೆ" ಎಂದು ಹೇಳಿ ಮುದ್ದಿಸಿ, ಕಳಿಸಿ ಮುಂಬಾಗಿಲನ್ನು ಭದ್ರಪಡಿಸಿಕೊಂಡು ಕುಳಿತಳು. ಮನದ ನೋಟ, ಸಾವಿತ್ರಿಯ ಸುತ್ತಮುತ್ತ ಹರಿಯಿತು.

* * *

ಫೋನು ರಿಂಗಾಯಿತು. ಎತ್ತಿಕೊಂಡು ಹಲೋ ಎಂದಳು. ಅತ್ತಲಿಂದ ಶಿಲ್ಪಾ ಮಾತಾಡಿದ್ದಳು. "ಅತ್ತಿಗೆ ನಾನು.... ಎಂದಳು.

"ಹೂಂ, ಗೊತ್ತಾಯ್ತು, ಹೇಳು" ಎಂದಳು ಮುದಡಿದ ಮನಸ್ಸಿನಿಂದ

"ಅಣ್ಣಂಗೆ ವಿಷಯ ಹೇಳಿದ್ರಾ? ಏನಂದ...?"

"ನಾಳೆ ನಾಡಿದ್ದರಲ್ಲಿ ಬರಬಹುದು.... ನಿಮ್ಮಣ್ಣ ಬಹಳ ಅಪ್ಸೆಟ್ ಆಗಿರುವಂತೆ ಅನ್ನಿಸ್ತು.... ಬಂದ್ಮೇಲೆ ಏನು ರಂಪ ಆಗುತ್ತೋ ಅಂತ ಭಯ ಆಗ್ತಿದೆ ಕಣೇ.... ನೀನೂ ಬಂದಿದ್ರೆ ಚೆನ್ನಾಗಿತ್ತು.

ರಜ ಸಿಗ್ಬೇಕಲ್ಲ ಅತ್ಗೇ.... ಹೋಗ್ಲಿ ನೀವು ಅವರನ್ನ ನೋಡಿದ್ರಾ ಮಾತನ್ನಾಡಿಸಿದ್ರಾ? ಹೇಗಿದಾರೆ?"

"ಹೂಂ, ನಿಮ್ಮ ತಂದೆ ನನ್ನನ್ನ ಕರೆದು ಅವರಿಗೆ ಪರಿಚಯ ಮಾಡಿಕೊಟ್ರು.... ಚೆನ್ನಾಗಿ ಮಾತಾಡಿದ್ರು, ಆದ್ರೆ, ನಂಗೆ ನಿಮ್ಮಣ್ಣಂದೇ ಹೆದರಿಕೆ, ಪುಷ್ಪಾನಾದ್ರೂ ಬಂದಿದ್ರೆ ಚೆನ್ನಾಗಿತ್ತು.

"ನಿಮಗ್ಯಾಕೆ ಹೆದರ್ಕೆ ಬಿಡಿ ಅತ್ಗೇ.... ಅಣ್ಣಂಗೆ ಮೊದಲ್ನಿಂದ್ಲೂ ಅಪ್ಪನ್ನ ಕಂಡ್ರೆ ಆಗುಲ್ಲ, ಅಪ್ಪಾನೇ ಸರಿ ಹೋಗಿಸ್ಕೊಂಡು ಹೋಗ್ತಿದ್ರು.... ಆದ್ರೂ ಅಪ್ಪ ಹೀಗೆ ಮಾಡ್ಬಾರ್ದಾಗಿತ್ತು. ತಿಂಡಿ, ಅಡುಗೇನ ನೀವು ಮಾಡಿ ಕೊಟ್ಟಿದ್ದಿದ್ರೆ ಹೀಗಾಗ್ತಿರ್ಲಿಲ್ಲ."

"ನೀನೂ ನನ್ನನ್ನ ಬ್ಲೇಮ್ ಮಾಡ್ಬೇಡ ಶಿಲ್ಪಾ.... ನಿಮ್ಮಣ್ಣನ ಮಾತನ್ನು ಮೀರುಕ್ಕೆ ಆಗುತ್ತಾ ನಾನು...? ನೀನು ಇಲ್ಲೇ ಇದ್ದಿದ್ರೇ ಎಲ್ಲಾ ಸರಿಯಗಿರ್ತಿತ್ತು ಹೀಗಾಗ್ತಿರ್ಲಿಲ್ಲ.."

"ನಾನು ಅಲ್ಲೇ ಇದ್ದಿದ್ರೆ, ಪ್ರತಿ ವರ್ಷವೂ ಫೇಲಾಗ್ತಿದ್ದೆ ಅಷ್ಟೇ.... ಹೋಗ್ಲಿ ಬಿಡಿ ನಾನು ಅಕ್ಕನ ಹತ್ರ ಮಾತಾಡಿದೀನಿ, ಅವಳು ನಾಳೆ ನಾಡಿದ್ದರಲ್ಲಿ ಬರಬಹುದು. ಅಣ್ಣ ಅಪ್ಪನ ಹತ್ರ ಜಗಳ ಆಡದ ಹಾಗೆ ನೋಡ್ಕೊಳ್ಳಿ ಪ್ಲೀಸ್..."

"ಇದೊಳ್ಳೆ ಚೆನ್ನಾಯ್ತು.... ನಾನು ಹೇಳಿದ ಹಾಗೇ ಸಂದೀಪ್ ಕೇಳೋರಲ್ಲ.... ಹೀಗೇ ನಡೆದ್ರೆ ನಾನು ಎಲ್ಲಿಗೇ ಹೋಗ್ಲಿ ಹೇಳು..."

"ಸಾರೀ ಅತ್ಗೆ ನಿಮ್ಗೆ ಇಂತಾ ಕಷ್ಟ ಬರಬಾರ್ದಾಗಿತ್ತು...."

"ಪ್ರೀತಿಸಿ ಮದುವೆಯಾದ್ರೂ ಸುಖ ಮಾತ್ರ ಇಲ್ಲ, ಪ್ರೀತಿಯ ಸೊಸೆಯಂತೂ ಆಗ್ಲೇ ಇಲ್ಲ, ಈಗ ಈ ಹೊಸ ಹೆಂಗಸು ಬೇರೆ ಬಂದಿದಾರೆ, ಮುಂದೆ ಏನೋ, ನೀವೂ ನಿಮ್ಮ ಅಪ್ಪನ ಮಕ್ಕಳೇ ತಾನೇ? ಬಂದು ತಿಳುವಳಿಕೆ ಹೇಳಿ"

"ನಾವು ತಿಳುವಳಿಕೆ ಹೇಳಿದ್ರೆ ಅಪ್ಪ ಕೇಳಿಬಿಡ್ತಾರಾ? ಈಗ ಅಪ್ಪನ್ನ ಸರಿ ಮಾಡೋಕೆ ಈ ಹೆಂಗ್ಸೆ ಸರಿ. ಅವರ ಪಾಡಿಗೆ ಅವರು ಇರ್ತಾರೆ ಬಿಡಿ... ನಂಗೆ ನಿಮ್ಗೆ ಅವರ ಗೊಡವೆ ಯಾಕೆ?"

"ನಿನ್ನ ಮದುವೆ ಆಗ್ಬೇಕಲ್ಲ ಶಿಲ್ಪಾ.... ಆಮೇಲೆ ಅವರು ಏನು ಮಾಡ್ಕೊಂಡಿದ್ರೂ ನಡೀತಿತ್ತು."

"ನನ್ನ ಮದುವೆಗೂ, ಈ ಪ್ರಸಂಗಕ್ಕೂ ಯಾವ ಸಂಬಂಧವೂ ಇಲ್ಲ, ನಾನು ಹೀಗೇ ಇದ್ದು ಬಿಡ್ತೀನಿ.... ಮದುವೆ ಆದೋರೆಲ್ಲಾ ಎಷ್ಟು ಸುಖವಾಗಿದಾರೆ ಅಂತ ನಾನೂ ನೋಡ್ತಾನೇ ಇದೀನಲ್ಲ.... ಹೊತ್ತಾಯ್ತಾ ಈಗ ಇಡ್ತೀನಿ, ಅಣ್ಣ ಬಂದ್ಮೇಲೆ ಏನು ಮಾತುಕತೆ ನಡೀತು ಅಂತ ಫೋನು ಮಾಡಿ ತಿಳ್ಕೊತೀನಿ ಅಂತ ಫೋನು ಇಟ್ಟು ಬಿಟ್ಟಳು. ಈ ಮಾವ ತಾನು ಒಂಟಿ ಅಂತ ಮತ್ತೆ ಮದುವೆ ಆದ್ರು.... ಇಲ್ಲಿ ನಾನು ಒಂಟಿ ಅಲ್ವಾ? ನನಗೆ ಯಾವ ಆಪ್ತರಿದಾರೆ? ನನ್ನ ಬಗ್ಗೆ ಯಾರಿಗೂ ಏನೂ ಅನ್ನಿಸೋದೇ ಇಲ್ವಾ?"

"ಅಮ್ಮಾ, ತಾತ ಕರೀತಿದಾರೆ ಹೋಗ್ಲಾ?" ದೀಪಕ್ ಕೇಳಿದಾಗ ಆಲೋಚನೆಯ ಗುಂಗಿನಿಂದ ಹೊರಬಂದಳು.

"ಬೇರೆ ಬಟ್ಟೆ ಹಾಕ್ಕೊಂಡು ಹೋಗು. ಈ ಬಟ್ಟೆ ಕೊಳಕಾಗಿದೆ ಎನ್ನುತ್ತಾ ಮಗನ ಉಡುಪನ್ನು ಬದಲಾಯಿಸಿದಳು. "ಬೇಗ ಬಂದ್ಬಿಡು, ಇನ್ನು ನೀನು ಹೋಂವರ್ಕ್ ಮಾಡಿಲ್ಲ, ಟ್ಯೂಷನ್ ಮಕ್ಕಳೂ ಸಹ ಯಾಕೋ ಬಂದಿಲ್ಲ" ಎನ್ನುತ್ತಾ ಎದ್ದಳು ಹೊರಬಾಗಿಲಿಗೆ ಬಂದು ನಿಂತವಳಿಗೆ ಅಕ್ಕ ಪಕ್ಕದವರು ತಮ್ಮ ಮನೆಯ ಕಡೆಯೇ ನೋಡುತ್ತಿದ್ದಾರೆಂದೆನಿಸಿ, ಮುಜುಗರವಾಯಿತು ತಮ್ಮ ಮನೆಯಲ್ಲಿನ ತಂದೆ ಮಗನ ಕದನ, ಮಾವನ ಮರುಮದುವೆ, ತಮಾಷೆಯಾಗಿ ಆಡಿಕೊಳ್ಳುವ ವಸ್ತು ಸಿಕ್ಕರೆ ಬಿಟ್ಟಾರೆಯೆ? ಕೇಳಿದವರಿಗೆ ನಾನು ಏನು ಹೇಳಲಿ? ಇದರ ಬದಲು, ತಾವು ಬೇರೆ ಮನೆ ಮಾಡಿಕೊಂಡು ಹೊರಟು ಹೋಗಿದ್ದರೇ ಚೆನ್ನಾಗಿತ್ತೆನಿಸಿತು. ನಮಸ್ತೇ ಮಿಸ್ ಟ್ಯೂಷನ್ ಮಕ್ಕಳು ಒಕ್ಕೊರಲಿನಲ್ಲಿ ನುಡಿದಾಗ ಎಚ್ಚೆತ್ತಳು.

ಟ್ಯೂಷನ್ ಕ್ಲಾಸ್ ಮುಗಿದಿತ್ತು. ಆ ಮಕ್ಕಳುಗಳು ಹೊರಟು ಹೋಗಿದ್ದರು. ಮೇಲಿನ ಮನೆಗೆ ಹೋಗಿದ್ದ ಮಗ ಇನ್ನೂ ಹಿಂತಿರುಗಿರಲಿಲ್ಲ. ಹಾಗೇ ದಿಕ್ಕು ತೋಚದವಳಂತೆ ಕುಳಿತಿದ್ದಳು ಫೋನಿನ ಟ್ರಿನ್ ಟ್ರಿನ್ ಅವಳನ್ನು

ಎಬ್ಬಿಸಿತು. ಅತ್ತಲಿಂದ ಪುಷ್ಪಾ ಫೋನು ಮಾಡಿದ್ದಳು.

"ಹೇಗಿದ್ದೀಯಾ ಜ್ಯೋತಿ? ಊಟಾ ಆಯ್ತಾ?" ವಿಚಾರಿಸಿದ್ದಳು.

"ಇನ್ನೂ ಇಲ್ಲ.... ಒಬ್ಬಳೇ ಊಟ ಮಾಡುಕ್ಕೆ ಬೇಜಾರು...." ಮಾತನ್ನು ಸೇರಿಸಿದಳು.

"ಯಾಕೇ ದೀಪು ಆಗಲೇ ಮಲಗಿ ಬಿಟ್ನಾ?"

"ಇಲ್ಲ, ಅವನ ತಾತ ಕರ್ಕೊಂಡು ಹೋಗಿದಾರೆ, ಅಲ್ಲೇ ಊಟ ಮಾಡ್ಕೊಂಡು ಬರ್ತಾನೆ...".

"ಹೌದಾ? ಅಪ್ಪ ಹೇಗಿದಾರೆ? ನೀನು ಮಾತಾಡಿದ್ಯಾ?"

"ಹೂಂ, ಅವರೇ ಕರೆದು, ಅವರ ಮಿಸೆಸ್‌ನ ಪರಿಚಯ ಮಾಡಿಸಿಕೊಟ್ರು, ನನ್ನನ್ನು ಊಟಕ್ಕೆ ಕರೆದಿದ್ರು ನಾನು ಹೋಗಲಿಲ್ಲ."

"ಓ.... ಸಂದೀಪ, ಏನಾದ್ರೂ ಅನ್ನಬಹುದು ಅಂತ ಹೋಗ್ಲಿಲ್ವಾ?"

"ನಂಗೆ ಸಂದೀಪಂದೇ ಭಯ ಪುಷ್ಪಾ, ಮೊದಲೇ ಅಪ್ಪ ಮಗನ ಸಂಬಂಧ ಚೆನ್ನಾಗಿಲ್ಲ, ಇನ್ನೇನು ರಂಪ ಆಗುತ್ತೋ ಅಂತ..."

"ಹೊಸಬರ ಎದುರ್ಗೆ ಹಾಗೆಲ್ಲಾ ಆಡ್ತಾರ? ನೀನು ಹೆದರ್ಬೇಡ, ನೀವುಗಳು ಅಪ್ಪನ್ನ ಚೆನ್ನಾಗಿ ನೋಡ್ಕೊಂಡಿದ್ದಿದ್ರೆ, ಹೀಗೇ ಆಗ್ತಿರ್ಲಿಲ್ಲ..." ವಿಷಾದದಿಂದ ನುಡಿದಾಗ, ಇವಳ ಹುಬ್ಬುಗಳು ಗಂಟಿಕ್ಕಿದವು.

"ಇದ್ರಲ್ಲಿ ನನ್ನ ತಪ್ಪೇನಿದೆ ಪುಷ್ಪಾ? ನಾನೆಂದೂ ಅಗೌರವವಾಗಿ ನಡ್ಕೊಂಡಿಲ್ಲ" ಸ್ವಲ್ಪ ಜೋರಾಗಿಯೇ ನುಡಿದಳು.

"ಸ್ಸಾರಿ ಜ್ಯೋತಿ ಇದು ಅಪ್ಪನ ನಿರ್ಧಾರ ನಾವೂ ಏನೂ ಮಾಡುಕ್ಕೇ ಆಗಲ್ಲ ಸಂದೀಪ ಯಾವಾಗ ಬರ್ತಾನಂತೆ?

"ಬೇಗ ಬರಬಹುದು.... ಕೆಲಸದ ಮೇಲೆ ಹೋಗಿದಾರಲ್ಲ, ಅವರಿಗೊಂದು ಒಳ್ಳೇ ಕೆಲಸ ಇದ್ದಿದ್ದಿದ್ರೆ ಹೀಗೆಲ್ಲ ಆಗ್ತಿರ್ಲಿಲ್ವೇನೋ...? ಯಾವಾಗ ನೋಡಿದ್ರೂ ಬರೀ ಟೆನ್ಸನ್ ಅವರ್ಗೂ ಸುಖವಿಲ್ಲ ನಂಗೂ ಸುಖವಿಲ್ಲ... ನನ್ನ ಬೇಸರವನ್ನು ಹೇಳಿಕೊಳ್ಳಲು ಯಾವ ಆಪ್ತರೂ ಇಲ್ಲ.... ನನ್ನ ಬಗ್ಗೆ ಯಾರ್ಗೂ ಏನೂ ಅನ್ನಿಸೋದೇ ಇಲ್ಲ, ಅಮ್ಮನಾದ್ರೂ ಇದ್ದಿದ್ದಿದ್ರೆ...."

"ನಮಗೂ ಅಮ್ಮ ಇಲ್ಲ ಜ್ಯೋತಿ ಇದೇ ಕಾರಣ ಇರಬಹುದು ಸಂದೀಪ ಹೀಗಾಡುಕ್ಕೇ ಅವನು ನನ್ಹತ್ರವೂ ಕ್ಲೋಸ್ ಆಗಿಲ್ಲ. ನಿಮಗೆ ಅವನ ಬೇಸರ ತಿಳಿಯುತ್ತಲ್ಲ... ನೀವೇ ಅವನನ್ನು ಸಮಾಧಾನಗೊಳಿಸ್ಬೇಕು."

"ನನ್ನ ಮಾತಿಗೆ ಬೆಲೆ ಎಲ್ಲಿದೆ?...ಇಲ್ಲಿ ಏನೇನು ನಡೆದಿದೆ ಅಂತ ನಿಮಗ್ಯಾರ್ಗೂ ಗೊತ್ತಿಲ್ಲ. ಶಿಲ್ಪಾನಾದ್ರೂ ಇಲ್ಲೇ ಇದ್ದಿದ್ರೆ ಚೆನ್ನಾಗಿತ್ತು."

"ಅವಳ ವಿದ್ಯಾಭ್ಯಾಸ ಮುಖ್ಯ ಅಲ್ವಾ ಜ್ಯೋತಿ... ಈ ಬಾರಿಯ ಪರೀಕ್ಷೆ ಮುಗಿದ್ಮೇಲೆ, ಅವಳ ಡಿಗ್ರಿ ಕೋರ್ಸ್ ಮುಗಿಯುತ್ತೆ, ಆಮೇಲೆ ಅವಳ ಮದುವೆ ಆಗಿಬಿಟ್ರೆ.... ಆಮೇಲೆ ನಿರಾತಂಕ, ಆದರೆ, ಅಪ್ಪನ ಈ ಹೊಸ ಸಂಬಂಧ ಶಿಲ್ಪಾಳ ಮದುವೆಗೆ ಏನು ಅಡ್ಡಿ ತರುತ್ತೋ ಅಂತ ಭಯ ಆಗುತ್ತೆ."

"ಮಾವಂಗೂ ಈ ಯೋಚ್ನೇ ಇರ್ಬೇಕಾಗಿತ್ತು ಅಲ್ವಾ....?"

"ಏನೇನೋ ಆಗಿಹೋಯ್ತು. ಶಿಲ್ಪಾ ಹೇಳ್ದೇ ಇದ್ದಿದ್ರೇ ನಂಗೆ ಈ ವಿಷಯ ತಿಳೀತಾನೇ ಇರ್ಲಿಲ್ಲ, ಅವಳೂ ಸ್ವಲ್ಪ ಅಪ್ಸೆಟ್ ಆಗಿದಾಳೆ..."

"ನಿಮ್ಮ ಮನೇಲಿ ಎಲ್ರಿಗೂ ವಿಷಯ ತಿಳಿದಿರಬಹುದು ಅಲ್ವಾ!"

"ಇಲ್ಲ, ನಾನಿನ್ನು ಹೇಳಿಲ್ಲ, ಮೊದ್ಲು ನನ್ನ ಗಂಡಂಗೆ ಹೇಳ್ತೀನಿ, ಅವರು ಹೇಗೆ ಹೇಳಿದ್ರೆ ಹಾಗೆ. ಈಗ ಇಡ್ತೀನಿ, ಸಂದೀಪ ಬಂದ್ಮೇಲೆ, ಏನು ಮಾತುಕತೆ ನಡಿತು ಅಂತ ತಿಳ್ಕೊಳ್ಳೋಕೆ, ನಾನೇ ಮತ್ತೆ ಮಾಡ್ತೀನಿ, ನೀನು ಏನೂ ಮಾಡ್ಬೇಡ" ಅವಳು ಮಾತು ಮುಗಿಸಿದ್ದಳು.

ಜ್ಯೋತಿ ನಿಟ್ಟುಸಿರು ಬಿಟ್ಟಳು. ಪುಷ್ಪಾ ಇನ್ನು ತನ್ನ ಅತ್ತೆಯವರಿಗೆ ಈ ಹೊಸಾ ವಿಷಯವನ್ನು ತಿಳಿಸಿಲ್ಲ, ತಾನೂ ತನ್ನ ತಂದೆಯಮನೆಯವರಿಗೆ ತಿಳಿಸಬೇಕೋ ಬೇಡವೋ... ಅವರುಗಳ ಪ್ರತಿಕ್ರಿಯೆ ಹೇಗೋ ಅಣ್ಣಂದಿರು ನನ್ನವರು ನಿಜ, ಆದರೆ ಅತ್ತಿಗೆಯರು? ಯಾರ್‍ಯಾರ ಮನಸ್ನಲ್ಲಿ ಏನೋ? ಸಂದೀಪ ಮೊದಲು ಬರಲಿ.... ಅವನು ಹೇಳೋದು ಬೇಡ ಅಂತಂದ್ರೆ ನಾನು ಯಾರಿಗೂ ತಿಳಿಸೋದೇ ಇಲ್ಲ" ಎಂದುಕೊಂಡಳು.

* * *

ಕಾಲಿಂಗ್ ಬೆಲ್ ಸದ್ದಾದಾಗ ಬೆಚ್ಚಿದಳು. ಸಂದೀಪನೇ ಬಂದು ಬಿಟ್ಟನೇನೋ ಎಂದುಕೊಂಡು, ಉಸಿರನ್ನು ಬಿಗಿಹಿಡಿದು, ಮುಂಬಾಗಿಲನ್ನು ತೆರೆದಳು. ಎದುರಿಗೆ ಅಣ್ಣ ಸುನೀಲ್ ನಿಂತಿದ್ದ ಒಂದು ಗಳಿಗೆ ಮನಸ್ಸು ನಿರಾಳ ಗೊಂಡರೂ, ಮರುಗಳಿಗೆಂಯೇ ಇವನ್ಯಾಕೆ ಬಂದನೋ ಅಂತಂದುಕೊಂಡಳು.

"ಹಾಯ್ ಜ್ಯೋತಿ, ಹೇಗಿದೀಯೇ?" ಎನ್ನುತ್ತಾ ಅವನು ಒಳಕ್ಕೆ ಬಂದೇ ಬಿಟ್ಟ. ಇವಳು ಕಣ್ಣು ಕಣ್ಣು ಬಿಟ್ಟಳು "ಅದ್ಯಾಕೆ ಹಾಗೆ ನೋಡ್ತಿಯಾ? ನಾನೇ.... ಸುನೀಲ.... ಸ್ವಲ್ಪ ಕಾಫಿ ಇದ್ರೆ ಕೊಡ್ತೀಯಾ.... ಸಣ್ಣಗೆ ತಲೆ ನೋಯ್ತಿದೆ..."

"ಬರ್ತಿದೀನಿ ಅಂತ ಫೋನು ಮಾಡಬಾರದಾಗಿತ್ತಾ ನೀನು? ಊಟ ಮಾಡುವಂತೆ ಕೈ ಕಾಲು ತೊಳೆದ್ಕೋ, ಡಿಕಾಕ್ಷನ್ ಮುಗಿದು ಹೋಗಿದೆ."

"ಓ.... ಕೇ.... ನೋ ಪ್ರಾಬ್ಲಂ, ಊಟಾನೇ ಮಾಡ್ತೀನಿ ಏನಡಿಗೆ?"

"ಏನಿದೆಯೋ ಅದು" ಎಂದು ಅವಳು ಸಿಡುಕಿ ನುಡಿದಾಗ ಅವನು ನಗುತ್ತಾ ಬಚ್ಚಲ ಮನೆಯ ಕಡೆಗೆ ನಡೆದ. ಕೈ ಕಾಲು ಮುಖ ತೊಳೆದು, ಒರೆಸಿಕೊಂಡು ಡೈನಿಂಗ್ ಟೇಬಲ್ ಬಳಿ, ಕುರ್ಚಿಯನ್ನೆಳೆದುಕೊಂಡು ಕೂತ. ಜ್ಯೋತಿ, ಬೆಳಿಗ್ಗೆ ಮಾಡಿದ್ದ ಅಡುಗೆಯನ್ನು ಬಿಸಿ ಮಾಡಿ ತಂದಿತ್ತಳು.

"ದೀಪು ಎಲ್ಲಿ ಕಾಣ್ತಿಲ್ಲ? ಮಲಗಿದಾನಾ? ನಿನ್ನ ಊಟ ಆಯ್ತಾ?"

"ಅದೇನು ಹೀಗೆ ದಿಡೀರನೇ ಬಂದುಬಿಟ್ಟೆ?" ತಟ್ಟೆ ಇಟ್ಟು ಬಡಿಸುತ್ತಾ ಕೇಳಿದಳು.

"ನಿನ್ನನ್ನು ನೋಡ್ಬೇಕು ಅಂತ ಅನ್ನಿಸ್ತು, ಅಪ್ಪ ಹೇಳ್ತಾನೇ ಇದ್ರು ಹೋಗಿ ನೋಡ್ಕೊಂಡು ಬಾ ಅಂತ. ಸಂದೀಪ ಯಾವಾಗ ಬರ್ತಾರೆ?"

"ಅವರು ಊರಲಿಲ್ಲ ಅಂತ ನಿಂಗೆ ಹೇಗೆ ತಿಳಿತು?"

"ಅವಡು ಇದ್ದಿದ್ರೆ, ಬಂದು ಮಾತನ್ನಾಡಿಸ್ತಿರಲಿಲ್ವಾ.... ಓ.... ಕೇ.... ಊಟ ಮಾಡ್ಬಿಟ್ಟು ಮಾತಾಡೋಣ ನೀನೂ ಕೂತ್ಕೋ...." ತನಗೂ ಒಂದು ತಟ್ಟೆಯನ್ನು ತಂದಿಟ್ಟುಕೊಂಡು ಬಡಿಸಿಕೊಂಡಳು. ಕತ್ತು ಬಗ್ಗಿಸಿ ಊಟ ಮಾಡು ತ್ತಿದ್ದ ಅಣ್ಣನನ್ನೇ ನೋಡಿದೂ ಇವನಿಗೆ ವಿಷಯವನ್ನು ತಿಳಿಸುವುದೋ ಬೇಡವೋ ಎಂದು ಯೋಚಿಸುತ್ತಿದ್ದಳು. "ಯಾಕೇ... ಊಟಾನೇ ಮಾಡ್ತಿಲ್ಲ ಏನೋ ಯೋಚಿಸ್ತೀದ್ದೀಯಾ...?"

"ಏನಿಲ್ಲ ಸುನೀಲ್, ನೀನು ಯಾವಾಗ ವಾಪಸ್ಸು ಹೋಗ್ತಿದೀಯಾ...?"

"ಅರೇ... ಈಗಿನ್ನೂ ಬರ್ತಿದೀನಿ ಹೋಗು ಅಂತ ಪ್ರರೋಕ್ಷವಾಗಿ ಹೇಳ್ತಿದೀಯಲ್ಲೆ, ಯಾಕೆ ನಾನು ಬಂದದ್ದು ಸರಿ ಹೋಗ್ಲಿಲ್ವೆ?"

"ಹಾಗಲ್ಲ ಇಲ್ಲಿ ವಿಷಯ ನಿಂಗೊತ್ತಿಲ್ಲ."

"ನಂಗೆಲ್ಲ ಗೊತ್ತು, ಬೆರಳನ್ನು ಚೀಪುತ್ತಾ ಹೇಳಿದ, ನಿಧಾನವಾಗಿ

"ಆಂ! ಏನ್ಗೊತ್ತು?"

"ಸಂದೀಪನ ತಂದೆ ಮತ್ತೆ ಮದುವೆಯಾಗಿದಾರೆ ಅದೇ ತಾನೇ?"

"ನಿಂಗೆ ಹೇಗೆ ತಿಳೀತು! ಯಾರು ಹೇಳಿದ್ರು?" ಕಣ್ಣರಳಿಸಿದಳು.

" ನಿಜಾನೇ ತಾನೆ? ಅದರಲ್ಲೇನು ಮುಚ್ಚು ಮರೆ?"

"ಅಂದ್ರೇ... ಅವರು ಮಾಡಿದ್ದು ಸರಿ ಅಂತೀಯಾ?"

"ಸರಿಯೋ, ತಪ್ಪೋ.... ನಿಜ ತಾನೇ? ಅಲ್ಲದೇ ನಿರ್ಧಾರ ಅವರದ್ದು ಅದು ಸರಿಯಲ್ಲ, ಅಂತ ಹೇಳುಕ್ಕೇ ನಾವ್ಯಾರು?"

"ನಿಂಗೆ ಸಂದೀಪನ ನೇಚರ್ ಗೊತ್ತಿಲ್ಲ, ಅದೇ ದೊಡ್ಡ ಇಷ್ಯೂ

ಆಗುತ್ತೆ"

"ಅದಕ್ಕೇ ನಾನು ಈಗ ಇಲ್ಲಿಗೆ ಬಂದಿರೋದು, ಸಂದೀಪನಿಗೆ ತಿಳುವಳಿಕೆ ಹೇಳ್ತೀನಿ"

"ನಿಂಗೂ ಅವರ್ಗೂ ಮನಸ್ತಾಪ ಆಗುತ್ತೆ. ನೀನು ಸುಮ್ಮನಿರು, ಅದ್ಸರಿ ನಿಂಗೆ ಯಾರೂ ಹೇಳಿದ್ರು ಅಂತ ನೀನು ಹೇಳ್ಲೇ ಇಲ್ಲ, ಮಾವ ಏನಾದ್ರೂ ಫೋನು ಮಾಡಿದ್ರಾ ಅಪ್ಪನೇ ನಿನ್ನನ್ನ ಕಳ್ಸಿದ್ರಾ?"

"ಇಲ್ಲ.... ನಿಂಗೆ ಆಶ್ಚರ್ಯ ಆಗಬಹುದು, ನಂಗೆ ತಿಳಿಸ್ದೋಳು ಶಿಲ್ಪಾ, ಅವಳೇ ನನ್ನನ್ನ ಕಳ್ಸಿದ್ದು."

"ಶಿಲ್ಪಾನಾ? ಅವಳು ಹೇಳಿದ್ಲು ಅಂತ ಬಂದ್ಬಿಟ್ಯಾ? ನನ್ನನ್ನ ಒಂದ್ಮಾತು ಕೇಳ್ಬಾರ್ದಾಗಿತ್ತಾ?"

"ಅತ್ತಿಗೆ ಒಬ್ಬರೇ ಆಗ್ಬಿಟ್ಟಿದಾರೆ, ಅಣ್ಣನೂ ಇಲ್ಲ, ನೀನೂ ಹೋಗು ಅಂತ ಶಿಲ್ಪಾ ಹೇಳಿದ್ಲು, ಬಂದ್ಬಿಟ್ಟೆ, ಅಪ್ಪಂಗೆ, ನಾನು ಇಲ್ಲಿಗೆ ಬಂದಿರುವ ವಿಚಾರ ಗೊತ್ತಿಲ್ಲ"

"ಶಿಲ್ಪಾ ನಿಂಗ್ಯಾಕೆ ಹೇಳಿದ್ಲು ಅಂತ....?"

"ಈಗ ಊಟ ಮುಗಿಸು, ಹೆಚ್ಗೆ ಯೋಚಿಸ್ಬೇಡ....ನಾನು ದೀಪೂನ ನೋಡಿಬರ್ತೀನಿ"

"ಅವನು ಮನೇಲಿಲ್ಲ, ತಾತನ ಮನೆಗೆ ಹೋಗಿದಾನೆ, ಅಲ್ಲೇ ಊಟ ಮಾಡ್ಕೊಂಡು ಬರ್ತಾನೆ..."

"ನಾನು ಹೋಗಿ ಕರ್ಕೊಂಡ್ಬರ್ತೀನಿ...."

"ಬೇಡ ಬರ್ತಾನೆ ಬಿಡು, ಅಪ್ಪ ಹೇಗಿದಾರೆ! ಮನೇಲಿ ಎಲ್ಲಾ ಹೇಗಿದಾರೆ? "

"ಅಪ್ಪಾನೂ ಹೀಗೆ, ಮತ್ತೊಂದು ಮದುವೆ ಆಗಿದ್ದಿದ್ರೆ ಅವರ ಒಂಟಿತನ ಕಳೀತಿತ್ತು ಅಂತ ಅನ್ನಿಸ್ತಿದೆ, ಅವರ್‍ಯಾಕೆ ಮತ್ತೆ ಮದುವೆ ಆಗ್ಲಿಲ್ವೋ?"

"ಆಗ ನೀವೆಲ್ಲಾ ಮಲತಾಯಿ ಕೈಯಲ್ಲಿ ಬೆಳೆದಿರ್ತಿದ್ರಿ..."

"ಎಲ್ಲಾ ಮಲತಾಯೀರೂ ಕೆಟ್ಟೋರಾಗಿರಲ್ಲ ಜ್ಯೋತಿ...."

"ನಾನು ಹಾಗೆಲ್ಲಿ ಅಂದೆ. ನೀನು ಸುಮ್ನೆ ಮಾತಿಗೆ ಮಾತು ಬೆಳೆಸ್ತಿದೀಯಾ ನಾನು ಕರೆದು ಬರ್ತಿನಿ...." ಎಂದು ಎದ್ದು ಹೊರಟಳು. ಅಷ್ಟರಲ್ಲಿ ದೀಪೂನೇ ಬಂದು ಬಾಗಿಲನ್ನು ತಳ್ಳಿದ. ಅಲ್ಲಿಯೇ ಕುಳಿತಿದ್ದ ಮಾವನನ್ನು ಕಂಡು, "ಮಾವಾ...." ಎನ್ನುತ್ತಾ ಓಡಿ ಬಂದು ತಬ್ಬಿಕೊಂಡ.

"ಮೆಲ್ಗೆ.... ಮೆಲ್ಗೆ.... ಮಾವಂಗೆ ಪೆಟ್ಟಾಗುತ್ತೆ" ಜ್ಯೋತಿ ಎಚ್ಚರಿಸಿದಳು.

"ಪೆಟ್ಟಾಯ್ತಾ ಮಾವ?" ಎನ್ನುತ್ತಾ ಅವನು ಸುನೀಲನ ತೊಡೆಯನ್ನೇರಿದ.

"ತಾತನ ಮನೆಗೆ ಒಬ್ಬರು ಹೊಸಾ ಆಂಟಿ ಬಂದಿದಾರೆ. ನಾನು ಅಲ್ಲೇ ಊಟ ಮಾಡ್ದೆ. ತುಂಬಾ ಚಾಕ್ಲೇಟ್ಸ್ ಕೊಟ್ಟಿದಾರೆ" ಜೇಬುಗಳಲ್ಲಿ ತುಂಬಿಕೊಂಡಿದ್ದ ಚಾಕ್ಲೇಟ್‌ಗಳನ್ನು ಮುಟ್ಟಿಕೊಂಡ. ಅಣ್ಣತಂಗಿ ಮುಖ ಮುಖ ನೋಡಿಕೊಂಡರು.

"ಹೋಗು ದೀಪು, ಹೋಂವರ್ಕ್ ಮಾಡು.. ನಿದ್ದೆ ಮಾಡಿಬಿಡ್ತೀಯಾ..."

"ಇಲ್ಲ ಮಮ್ಮೀ....ನಾನು ಮಾವನ ಜತೆ ಮಾತಾಡ್ಬೇಕು, ಆಟ ಆಡ್ಬೇಕು,

"ಅದೆಲ್ಲಾ ಆಮೇಲೆ, ಮೊದಲು ಹೋಂವರ್ಕ್ ಮಾಡು ಮಾವಾ ಇಲ್ಲೇ ಇರ್ತಾನೆ" ಮಗನನ್ನು ಕೈ ಹಿಡಿದು ಎಳೆದಳು.

"ಹೌದಾ ಮಾವ? ಹಾಗಾದ್ರೆ ನಾನಿವತ್ತು ರಾತ್ರಿ ನಿಂಜೊತೇನೇ ಮಲಗ್ತೀನಿ" ಎನ್ನುತ್ತಾ ಬೇಸರದ ಮುಖವನ್ನು ಮಾಡಿ, ಸ್ಕೂಲ್ ಬ್ಯಾಗ್‌ನ್ನು ಎಳೆದುಕೊಂಡ. ಜ್ಯೋತಿ ಅತ್ತ ಗಮನಹರಿಸಿದಳು.

* * *

ದೀಪು ನಿದ್ದೆ ಹೋಗಿದ್ದ ಅಕ್ಕ ತಮ್ಮನ ಮಾತುಕತೆ ಕೆಳದನಿಯಲ್ಲಿ ಮುಂದುವರೆದಿತ್ತು. ಇದ್ದಕ್ಕಿದ್ದಂತೆ ಯಾರೋ ಜೋರು ಧ್ವನಿಯಲ್ಲಿ ಮಾತಾನಾಡುತ್ತಿರುವಂತೆ ಕೇಳಿಸಿದಾಗ ಇಬ್ಬರೂ ಮಾತನ್ನು ನಿಲ್ಲಿಸಿದರು. ಗಂಡನ ಧ್ವನಿ! ಇಬ್ಬರೂ ಮುಖ ಮುಖ ನೋಡಿಕೊಂಡರು. "ಸಂದೀಪ ಆಟೋದವನ ಹತ್ರ ಜಗಳ ಆಡ್ತಿದಾರೆ"....ಎನ್ನುತ್ತಾ ಎದ್ದು ಬಂದು ಬಾಗಿಲನ್ನು ತೆಗೆದು ಇಣುಕಿದಳು. ಗೇಟಿನ ಬಳಿ ಯಾವ ಆಟೋರಿಕ್ಷಾ ನಿಂತಿರಲಿಲ್ಲ. ಮೇಲಿನ ಮನೆಯ ಕಡೆಯಿಂದ ಅವನ ಧ್ವನಿ ಕೇಳಿ ಬರುತ್ತಿತ್ತು.

"ಅಪ್ಪನ ಹತ್ರ ಈ ಹೊತ್ನಲ್ಲಿ ಜಗಳ ಆಡ್ತಿದಾರೆ. ನಾನು ಹೋಗಿ ನೋಡ್ತೀನಿ ನೀನು ದೀಪು ಜೊತೆ ಇರು" ಎಂದು ಹೇಳಿ ಮಹಡಿ ಹತ್ತಿದಳು. ಇವಳನ್ನು ಕಂಡೊಡನೆ, ಸಂದೀಪ ಮಾತನ್ನು ನಿಲ್ಲಿಸಿ ಇತ್ತ ತಿರುಗಿ ಸಿಡುಕಿದ.

"ನೀನ್ಯಾಕೆ ಬಂದೆ ಇಲ್ಲಿಗೆ ಇಷ್ಟುಹೊತ್ನಲ್ಲಿ?"

"ಸಂದೀಪ್, ಅದೇನು ಮಾತು ಇಷ್ಟು ಹೊತ್ನಲ್ಲಿ! ಸುಮ್ಮನೆ ಬನ್ನಿ" ಕೈ ಎಳೆದಳು ಅವನು ಕೊಡವಿಕೊಂಡ.

"ನಾನು ಇವನ ಹತ್ರ ಮಾತಾಡ್ತಿದೀನಿ.... ನಿಂಗೆ, ಇದಕ್ಕೆ ಸಂಬಂಧವಿಲ್ಲ, ನೀನು ಹೋಗು"

"ದೀಪು ಹೆದರ್ಕೊಂಡು ಅಳ್ತಿದಾನೆ. ಪ್ಲೀಸ್ ಬನ್ನಿ...."

"ನೀನು ಹೋಗು ಅಂದ್ರೆ ಹೋಗು, ನನ್ನ ಪ್ರಶ್ನೆಗೆ ಇವನು ಉತ್ತರ ಹೇಳಲೇ ಬೇಕು.... ಏನು ಹುಡುಗಾಟ ಇವನದ್ದು?"

"ಹುಡುಗಾಟ ಅಲ್ಲ, ಇದು ನನ್ನ ಪರ್ಸನಲ್ ವಿಷಯ, ಸಾವಿತ್ರಿ ಈಗ ನನ್ನ ಪತ್ನಿ, ಹುಚ್ಚು ಹುಚ್ಚಾಗಿ ಮಾತಾಡ್ಬೇಡ, ಈಗ ನೀನು ಹೋಗು. ಬೆಳಿಗ್ಗೆ ನಿಧಾನವಾಗಿ ಮಾತಾಡೋಣ."

"ಇಲ್ಲ ಈಗ್ಲೇ ಹೇಳು, ನನಗೆ ನಿನ್ನ ಮಾತಿನ್ಮೇಲೆ ನಂಬ್ಕೆ ಇಲ್ಲ, ಯಾರು ಆ ಹೆಂಗ್ಸು? ಅಮ್ಮಂಗೆ ದ್ರೋಹ ಮಾಡೋಕೆ ನಿಂಗೆ ನಾಚ್ಕೆ ಆಗುಲ್ವಾ? ಈಗ್ಲೇ ಆ ಹೆಂಗ್ಸನ ಮನೆಯಿಂದಾಚೆ ಕಳ್ಸು...."

"ಹುಶ್, ಅಕ್ಕ ಪಕ್ಕದವರಿಗೆಲ್ಲಾ ಕೇಳ್ಸುತ್ತೆ, ಮೆಲ್ಲಗೆ ಮಾತಾಡಿ"

"ಏನು ಮೆಲ್ಲಗೆ ಮಾತಾಡೋದು! ನನ್ನ ಎದೆ ಉರಿದು ಹೋಗ್ತಿದೆ. ಅಮ್ಮಂಗೆ ಮೋಸ ಮಾಡಿದ ಮನುಷ್ಯ ಇವನು. ಅಮ್ಮ ಸಾಯಲಿ ಅಂತ ಕಾಯ್ತಿದ್ದ, ಎಷ್ಟು ದಿನದಿಂದ ಈ ಹೆಂಗ್ಸಿನ ಸಹವಾಸ ಇತ್ತೋ?"

"ಪ್ಲೀಸ್ ಷಟಪ್...." ಸಾವಿತ್ರಿ ರೂಮಿನಿಂದ ಹೊರಗೆ ಬಂದು ಗಡುಸಾಗಿ ಹೇಳಿದಳು. ಅವನು ಮಾತನ್ನು ನಿಲ್ಲಿಸಿ ಆಕೆಯನ್ನು ಕೆಕ್ಕರಿಸಿ ನೋಡಿದ.

"ಓ..... ನೀನೇನಾ....ಇವನ ಪ್ರೇಯಸಿ?"

"ಮರ್ಯಾದೆ ಕೊಟ್ಟು ಮಾತಾಡು ನಮ್ಮ ವಿಷಯಕ್ಕೆ ಬಾಯಿ ಹಾಕಿ ಪ್ರಶ್ನಿಸುವ ಅಧಿಕಾರಿ ಯಾರಿಗೂ ಇಲ್ಲ, ಇದು ನಾವಿಬ್ಬರೂ ಮದುವೆಯಾ ಗಿರುವುದರ ಪ್ರೂಫ್ ಎನ್ನುತ್ತ ಕಾಗದದ ಹಾಳೆಗಳನ್ನು ಅವನ ಮುಂದೆ ಹಿಡಿದಳು. ಅವನು ತೆಗೆದಕೊಳ್ಳಲಿಲ್ಲ "ಇಷ್ಟು ಹೊತ್ನಲ್ಲಿ ಬಂದು ಗಲಾಟೆ ಮಾಡ್ತಿದೀರೆಂದು ನಾನು ಈಗಲೇ ಪೋಲೀಸರಿಗೆ ಫೋನು ಮಾಡಿದರೆ....? ಏನ್ಮಾಡ್ತೀಯಾ?"

"ಏನು ಹೆದರಿಸ್ತೀಯಾ ನನ್ನನ್ನ?"

"ಈಗ ಸುಮ್ಮನೇ ಹೋಗು, ಇಲ್ಲದಿದ್ರೆ ಪರಿಸ್ಥಿತಿ ನೆಟ್ಟಗಿರುಲ್ಲ, ಮೊದಲು ಮರ್ಯಾದೆ ಕೊಟ್ಟು ಮಾತನಾಡುವುದನ್ನು ಕಲಿಯಪ್ಪಾ, ಇವನನ್ನು ಕರ್ಕೊಂಡು ಹೋಗಮ್ಮ....

"ಬನ್ನಿ ಸಂದೀಪ್," ಗಂಡನ ಕೈ ಎಳೆದಳು, ಅವಳ ಮುಖ ನಾಚಿಕೆ, ಸಂಕೋಚ ಅವಮಾನಗಳಿಂದ ಕೆಂಪಾಗಿತ್ತು.

"ಬೆಳಿಗ್ಗೆ ಬಂದು ವಿಚಾರಿಸಿಕೊಳ್ತೀನಿ, ಈ ಮನೇಲಿ ಯಾರು ಇರ್ಬೇಕು,

ಯಾರು ಇರ್ಬಾರ್ದು ಅಂತ ನಿಮಗೇ ತಿಳಿಯುತ್ತೆ" ಎಂದು ಅವರಿಬ್ಬರ ಕಡೆ ಬೆರಳು ಮಾಡಿ, ಕೆಕ್ಕರುಗಣ್ಣನ್ನು ಬಿಡುತ್ತಾ ಕೆಳಗಿಳಿದು ಬಂದ. ಅವನ ಹಿಂದೆಯೇ ಇಳಿದು ಬಂದ ಜ್ಯೋತಿ, ಅಕ್ಕಪಕ್ಕದ ಕೆಲವರ ಮನೆಯಲ್ಲಿ ದೀಪಗಳು ಉರಿಯುತ್ತಿದ್ದುದನ್ನು ಗಮನಿಸಿದಳು. ಹೃದಯ ಒಂದು ಹಿಡಿಯಾಗಿತ್ತು, "ಗಂಡ ಯಾಕೆ ಹೀಗಾಡ್ತಾನೆ, ಇವನಿಗೆ ಏನಾಗಿದೆ?" ಅವಳ ಎದೆ ಸಣ್ಣಗೆ ನಡುಗಿತು.

ಚಪ್ಪಲಿಯನ್ನು ಬಾಗಿಲ ಬಳಿ ಬಿಟ್ಟು ರೂಮಿಗೆ ಬಂದ. ಮಂಚದ ಮೇಲೆ ಕುಳಿತಿದ್ದ ಸುನೀಲ ಎದ್ದು ನಿಂತ. "ಓ.... ನೀನಾ? ಏನು ಬಂದದ್ದು" ಒರಟಾಗಿ ಕೇಳಿದ್ದ.

"ಈ ಊರ್ನಲ್ಲಿ ಸ್ವಲ್ಪ ಕೆಲಸ ಇತ್ತು.... ಬೆಳಿಗ್ಗೆ ವಾಪಸ್ಸು ಹೋಗ್ತೀನಿ"

"ಯಾಕೆ? ನಿಮ್ಮೂರಿಗೆ ರಾತ್ರಿಯ ಬಸ್ಸು ಇಲ್ವಾ?" ಸುನೀಲ ಕೆಂಪಾಗಿದ್ದ.

"ಜ್ಯೋತಿನ ನೋಡ್ಕೊಂಡು ಹೋಗೋಣ ಅಂತ ಬಂದೆ. ದೀಪು ಹೋಗ್ಬೇಡ ಅಂತ ಹಠ ಮಾಡಿದ" ತಂಗಿಯ ಕಡೆ ನೋಡಿದ.

"ಸರಿ, ಸರಿ ಸ್ನಾನ ಮಾಡಿ ಬರ್ತೀನಿ, ಊಟಕ್ಕೆ ರೆಡಿ ಮಾಡು..." ಎಂದು ಹೆಂಡತಿಗೆ ಹೇಳಿ, ಬಚ್ಚಲು ಮನೆಯ ಕಡೆಗೆ ನಡೆದ. ಅಣ್ಣ ತಂಗಿ ಮುಖ ಮುಖ ನೋಡಿಕೊಂಡರು. ಇಬ್ಬರೂ ಅಡುಗೆ ಮನೆಯ ಕಡೆಗೆ ಬಂದರು.

"ಜ್ಯೋತಿ, ನಂಗ್ಯಾಕೋ ಭಯ ಆಗುತ್ತೆ ಮೊದಲು ಸಂದೀಪ ಹೀಗೆ ಇರ್ಲಿಲ್ಲ ಯಾರಾದ್ರೂ ಡಾಕ್ಟರ್ ಅಡ್ವೈಸ್ ಕೇಳಿದ್ರೆ ಒಳ್ಳೆದು ಅಂತ ಅನ್ಸುತ್ತೆ."

"ಅವರಿಗೆ ಅಪ್ಪನ ಮೇಲೆ ದ್ವೇಷ, ನಾವೇ ಬೇರೆ ಹೋದ್ರೆ ಸರಿ ಹೋಗ್ತಾರೆ.... ನಾನು ಹೇಳಿದರೂ ಒಪ್ಪಲಿಲ್ಲ..." ಎನ್ನುತ್ತಾ ಉಳಿದಿದ್ದ, ಅನ್ನ ಹುಳಿಯನ್ನು ಬಿಸಿ ಮಾಡಿದಳು. ಚಿಪ್ಸ್ ಪ್ಯಾಕೆಟ್ಟನ್ನು ತೆಗೆದು ಇಟ್ಟಳು. "ಸದ್ಯ ಇದೆಲ್ಲಾ ಇರೋದ್ರಿಂದ ಬದುಕಿದೆ..."

"ಹೊಡೆದು ಬೈದು ಮಾಡ್ತಾರಾ?" ಕೆಳದನಿಯಲ್ಲಿ ಕೇಳಿದ.

"ಇಲ್ಲ... ಹೀಗ್ಯಾಕೆ ಕೇಳ್ತೀಯಾ?" ಸುಳ್ಳನ್ನು ಹೇಳುವಾಗ ನಾಲಗೆ ತಡವರಿಸಿತ್ತು. ಮುಂಚೆ ಹೀಗಿರ್ಲಿಲ್ಲ.... ಈಚೆಗೆ ಬದಲಾಗಿದಾರೆ ಫ್ರೆಂಡ್ಸ್ ಮೋಸಮಾಡಿಬಿಟ್ರು., ಮಾವ ಬಿಸಿನೆಸ್ ಮಾಡುಕ್ಕೇ ಲೋನ್ ತೆಗೆಸಿಕೊಟ್ಟಿದ್ದರೆ ಹೀಗಾಗ್ತಿರಲಿಲ್ಲ ಅದೇ ಕೋಪ ಇವರಿಗೆ..."

"ನಿನ್ನ ಮಾವನ ಹತ್ರ ನಾನು ಮಾತಾಡ್ಲ? ಹಾಗೇ ಅಪ್ಪನ ಹತ್ರ ಮಾತಾಡಿ, ಫೈನಾನ್ಸ್ ಹೆಲ್ಪ್ ಮಾಡುವಂತೆ ಹೇಳ್ತೀನಿ"

"ಬೇಡ ಸುನೀಲ್, ಈಗ ಆ ಮಾತುಬೇಡ.... ಮುಂದೆ ನೋಡೋಣ" ಅಷ್ಟರಲ್ಲಿ ಸಂದೀಪ ಸ್ನಾನ ಮುಗಿಸಿ ಹೊರಬಂದ. ಬಿಸಿಯಾಗಿದ್ದ ಅಡುಗೆಯನ್ನು ಮಾತಿಲ್ಲದೆ ಊಟ ಮಾಡಿದ. ರೂಮಿಗೆ ಹೋಗಿ ಮಲಗಿಕೊಂಡ. ಉಳಿದ ಕೆಲಸಗಳನ್ನೆಲ್ಲ ಮುಗಿಸಿ ಬಂದ ಜ್ಯೋತಿ ಗಂಡ ಗಾಢನಿದ್ದೆಯಲ್ಲಿ ಮುಳುಗಿರುವುದನ್ನು ಕಂಡ ರೂಮಿನ ದೀಪವನ್ನಾರಿಸಿದಳು. ಅಣ್ಣನಿಗೆ ಹೊದ್ದಿಕೆ, ದಿಂಬುಗಳನ್ನು ಕೊಟ್ಟು ಬಂದು, ಮಗನ ಮಗ್ಗುಲಲ್ಲಿ ಮಲಗಿ, ಅವನನ್ನು ತಬ್ಬಿಕೊಂಡಳು. ಅದುವರೆಗೂ ಅದುಮಿಟ್ಟುಕೊಂಡಿದ್ದ ಬೇಗುದಿ, ಬಿಸಿ ನೀರಾಗಿ ಕಣ್ಣುಗಳಿಂದ ಹರಿಯಿತು.

* * *

ಬೆಳಿಗ್ಗೆ ಸುನೀಲ ಹೊರಡುತ್ತಿನೆಂದು ಹೊರಟಾಗ, ದೀಪು ಹಠ ಮಾಡಿದ "ಹೋಗ್ಬೇಡಾ ಮಾವಾ...." ಅವನ ಕೈಯನ್ನು ಬಲವಾಗಿ ಹಿಡಿದ, ಅಲ್ಲಿಯೇ ಕುಳಿತಿದ್ದ ಸಂದೀಪ ಜ್ಯೋತಿಯ ಕಡೆ ನೋಡಿದ.

"ದೀಪು, ಹಾಗೆಲ್ಲ ಹಠ ಮಾಡ್ಬಾರ್ದು, ಮಾವ ಮತ್ತೆ ಬರ್ತಾನೆ. ಈಗ ಹೋಗುಕ್ಕೆ ಬಿಡು" ಜ್ಯೋತಿ ಮಗನನ್ನು ರಮಿಸಲು ನೋಡಿದಳು.

"ಸುಮ್ನೆ ಇದ್ಹೋಗಿ ಸುನೀಲ್, ಅವನು ಅಷ್ಟು ಕೇಳ್ಕೋತಿದಾನೆ," ಸಂದೀಪ ಗಡುಸಾಗಿ ನುಡಿದಾಗ ಅಚ್ಚರಿಯಿಂದ ನೋಡುವ ಸರದಿ ಇವರಿಬ್ಬರದಾಗಿತ್ತು.

"ಸ್ಕೂಲಿಗೆ ಸಿದ್ಧವಾಗಿ ದೀಪು ಹೊರಟ ಜ್ಯೋತಿಯೂ ತಿಂಡಿಯನ್ನು ಅವರಿಬ್ಬರಿಗೂ ಕೊಟ್ಟು ಸಿದ್ಧಳಾದಳು. "ಸ್ಕೂಲಿಗೆ ರಜಾ ಹಾಕು, ಪುಷ್ಪಾ, ಶಿಲ್ಪಾ ಇಬ್ರೂ ಬರ್ತಾರೆ, ಸ್ಪೆಷಲ್ ಅಡುಗೆ ಮಾಡು, ಸಾಮಾನು ಏನಾದ್ರೂ ಬೇಕಾದ್ರೆ ಸುನೀಲ ತಂದ್ಕೊಡ್ತಾನೆ" ಸಂದೀಪ ಸಾಧಾರಣವಾದ ವಿಷಯ ಎಂಬಂತೆ ನುಡಿದ.

"ಪುಷ್ಪಾ, ಶಿಲ್ಪಾ ಬರ್ತಿದಾರಾ? ಈಗ ಹೇಳ್ತಿದೀರಲ್ಲ ಸಂದೀಪ್?"

"ಯಾವಾಗ ಹೇಳದ್ರೆ ಏನು ನಿಂಗೆ? ಅವರು ಕಳಿಸಿದ್ದ ಮೆಸೇಜ್‌ನ ನಾನು ಈಗ ಸ್ವಲ್ಪ ಹೊತ್ತಿನ ಕೆಳಗೆ ನೋಡ್ದೆ. ನಾನೇನು ಬನ್ನಿ ಅಂತ ಹೇಳಿರ್ಲಿಲ್ಲ, ಬರ್ಬೇಡಿ ಅಂತ ಹೇಗೆ ಹೇಳ್ಲಿ....? ಸುಮ್ನೆ ನಾನು ಹೇಳಿದಷ್ಟನ್ನು ಕೇಳು..."

"ಸರಿ ಸ್ಕೂಲ್ಗೆ ಫೋನ್ ಮಾಡಿ ಬರುಕ್ಕಾಗಲ್ಲ ಅಂತ ತಿಳಿಸ್ತೀನಿ, ಸುನೀಲ್ ಇವನ್ನು ಬಸ್‌ಸ್ಟಾಪ್ ತನಕ ಬಿಟ್ಟು ಬರ್ತೀಯಾ? ಅಣ್ಣನೊಡನೆ, ಮಗನನ್ನು ಕಳಿಸಿ, ಗಂಡನ ಎದುರಿಗೆ ಕುಳಿತಳು.

"ನಂಗೇನಾದ್ರೂ ಉಪದೇಶ ಮಾಡೋದಿದ್ರೆ ಮಾಡ್ಬೇಡ, ಹೇಗೂ ಅವರಿಬ್ರೂ ಬರ್ತಾರಲ್ಲ, ಆಗ ಏನಾದ್ರೊಂದು ಇತ್ಯರ್ಥ ಆಗ್ಲೇ ಬೇಕು."

"ಸುನೀಲನ ಎದುರಿಗೆ ರಾದ್ಧಾಂತ ನಡೀಬೇಕಾ? ಅವರ ಪಾಡಿಗೆ ಅವರನ್ನು ಬಿಡಿ... ನಮಗೇನು ತೊಂದರೆ?"

"ನಂಗೆ ತೊಂದ್ರೆ ಇಲ್ವಾ? ಅವನು ನನ್ನ ಪಾಲಿನ ದುಡ್ಡನ್ನು ನನಗೆ ಕೊಡದೆ, ತಾನು ಮಜಾ ಮಾಡ್ತಿದಾನೆ, ನಾನು ಸುಮ್ಮನಿರ್ಬೇಕಾ! ಸುನೀಲ್ ಹೊರಗಿನವನಲ್ಲ, ಅವನಿಗೂ ತಿಳೀಲಿ ಬಿಡು, ನಂಗೆ ಎಷ್ಟು ಅನ್ಯಾಯ ಆಗಿದೆ ಅಂತ....ನಿನ್ನ ಅಣ್ಣಂದಿರೂ ಎಚ್ಚೆತ್ತುಕೊಂಡು ಪಾಠ ಕಲೀಲಿ."

"ಈಗ ನಮಗೆ ಬರಬಾರದ ಕಷ್ಟ ಏನು ಬಂದಿದೆ? ನಾನು ಕೆಲಸಕ್ಕೆ ಸೇರ್ಕೊಂಡಿದೀನಿ, ನೀವೂ ಒಳ್ಳೆಯ ಕೆಲಸಕ್ಕೆ ಪ್ರಯತ್ನ ಪಡ್ತಾನೇ ಇದೀರಲ್ಲ."

"ಕೆಲಸ ಸರಿಯಾದದ್ದು ಸಿಗಬೇಕಾದ್ರೆ, ಲಂಚ ಸುರೀಬೇಕು, ಅದಕ್ಕೆ ಎಲ್ಲಿಂದ ತರ್ಲಿ? ಈಗ ಯಾರನ್ನೋ ಹೆಂಡ್ತಿ ಅಂತ ಕರ್ಕೊಂಡು ಬಂದಿದಾನೆ, ಇವನಿಗೇನಾದ್ರೂ ಆದ್ರೆ, ಆಸ್ತಿ ಎಲ್ಲಾ ಅವಳ ಪಾಲಿಗೆ ಹೋಗುತ್ತೆ.... ನಮಗೇನು ಸಿಗುತ್ತೇ?"

"ಅವರಿಗೆ ಇಷ್ಟ ಇದ್ದರೆ ಕೊಡಲಿ, ಇಲ್ಲದಿದ್ದರೆ ಬೇಡ, ಜಗಳ ಆಡಿ ಕಿತ್ಕೊಳ್ಳೋಕೆ ಆಗುತ್ತಾ.... ಈ ರಂಪ ರಾದ್ಧಾಂತ ಬೇಡ....ಪ್ಲೀಸ್....ಎಲ್ರೂ ನಗ್ತಾರೆ."

"ನಗೋರು ನನ್ನ ಸಹಾಯಕ್ಕೆ ಬರಲ್ಲ, ಅಪ್ಪ ಅನ್ನಿಸ್ಕೊಂಡ ಈ ಮನುಷ್ಯನೇ ದಗಾ ಹಾಕ್ತಿದಾನೆ, ನಾನು ಸುಮ್ಮನಿರಲ್ಲ ನೀನು ಬಾಯಿ ಹಾಕ್ಬೇಡ."

"ಏನು ಬೇಕಾದ್ರೂ ಮಾಡ್ಕೊಳ್ಳಿ..." ಕೋಪದಿಂದ ನುಡಿದಳು.

"ಹಾಗೆ ತೆಪ್ಪಗಿರು ನನ್ನ ಚಿನ್ನಾ.... ಎಂದು ಗಲ್ಲವನ್ನು ಸವರಿದ. ಅವಳು ಕೈ ಸರಿಸಿದಳು.

"ಈ ರೋಮಾನ್ಸ್ ಎಲ್ಲಾ ಯಾಕೆ ಬೇಕು ನನ್ಹತ್ರ.?"

"ಓ.... ನಾನು ಬೇಡ್ವಾ? ಯಾರು ಬೇಕು ನಿಂಗೆ? ಅವನು ಮತ್ತೆ ಮದುವೆ ಮಾಡ್ಕೊಂಡ ಅಂತ ನಿಂಗೂ ಬೇಜಾರಾ?" ಕೆಣಕಿದ.

"ಛೀ, ಹೀಗೆಲ್ಲಾ ಕೊಳಕು ಮಾತಾಡ್ಬೇಡಿ, ನನ್ಮೇಲೆ ಸಂಶಯ ಇದ್ದರೆ ನನ್ನನ್ಯಾಕೆ ಪ್ರೀತಿಸಿ ಮದುವೆಯಾದ್ರಿ..? ನಾನು ನೀವು ಹೇಳಿದ ಹಾಗೆ ಕೇಳ್ತಾನೇ ಇದೀನಲ್ಲ, ಇನ್ನೂ ನಿಮಗೆ ಸಂತೋಷ ಇಲ್ವಾ...?"

"ಏ... ಸುಮ್ನೇ ಕೆರಳಿಸ್ಬೇಡ.... ಮನೆಗೆ ಏನೇನು ಸಾಮಾನು ಬೇಕು ಅಂತ ಲಿಸ್ಟು ಬರಿ, ಸುನೀಲನ ಹತ್ರ ತರಿಸು, ನನ್ಹತ್ರ ದುಡ್ಡಿಲ್ಲ"

"ನಾನೆಲ್ಲಿ ಕೇಳ್ದೆ ದುಡ್ಡನ್ನ!"

"ಮಾತಿಗೆ ಮಾತಾಡ್ಬೇಡ ಜ್ಯೋತಿ.... ನನ್ನ ತಲೆ ಸರಿಯಾಗಿ ಓಡ್ತಿಲ್ಲ, ನಿನ್ನ ಅತ್ತಿಗೆ ನಾದೀನೀರನ್ನ ಚೆನ್ನಾಗಿ ನೋಡ್ಕೋ... ಅವರನ್ನು ಚೆನ್ನಾಗಿ ಒಲಿಸ್ಕೋ.... ನಮ್ಮ ಸಹಾಯಕ್ಕೆ ಬರ್ತಾರೆ...ಇವತ್ತು ನೋಡ್ತೀರು ಡ್ರಾಮಾ ಹೇಗೆ ನಡೆಯುತ್ತೆ, ಮುಕ್ತಾಯ ಹೇಗೆ ಆಗುತ್ತೆ ಅಂತ. ಸುನೀಲ್ ಸಾಕ್ಷಿಯಾಗಿ ರ್ತಾನೆ." ವಿಚಿತ್ರವಾಗಿ ನಕ್ಕು ನುಡಿದ. ಆತಂಕದಿಂದ ಅವಳ ಎದೆ ಢವಗುಟ್ಟಿತು. 'ದೇವರೇ ಏನೂ ಅನಾಹುತವಾಗದಿರಲಿ, ಇವರಿಗೆ ಸದ್ಬುಧ್ಧಿಯನ್ನು ಕೊಡು' ಅಂತ ದೇವರಲ್ಲಿ ಪ್ರಾರ್ಥಿಸಿದಳು.

ಅನುಮಾನಿಸುತ್ತಾ ಒಳಬಂದು ಅತ್ತಿತ್ತ ನೋಡಿದ ಅಕ್ಕತಂಗಿಯರನ್ನು ಸಂದೀಪ ಬಿಗುಮಾನದಿಂದ ಸ್ವಾಗತಿಸಿದ "ಸುಮ್ನೆ ಬನ್ರೇ...ಇಲ್ಯಾವ ವಿ.ಐ.ಪಿ ನೂ ಇಲ್ಲ" ಇಬ್ಬರೂ ಪೆಚ್ಚಾಗಿ ನಕ್ಕರು. ಒಳಗಿನಿಂದ ಜ್ಯೋತಿ ಬಂದಳು.

"ಕಾಫಿ ಕೊಡ್ಲಾ....? ಏನೂ ತೋಚದವಳಂತೆ ಕೇಳಿದಳು.

"ಏನೂ ಬೇಡ, ಊಟಾನೇ ಮಾಡಿಬಿಡೋಣ. ನಿಮ್ದೂ ಯಾರದ್ದೂ ಇನ್ನೂ ಆಗಿಲ್ಲ ಅಂತ ಕಾಣುತ್ತೆ..."

"ಹೂಂ, ನಿಮಗೋಸ್ಕರಾನೇ ಕಾಯ್ತಾ ಇದ್ದೆವು. ಎದ್ದು ಕೈಕಾಲು ತೊಳೆದ್ಕೊಂಡು ಬನ್ನಿ, ನಾನು ಸುನೀಲನ್ನ ಕರೀತೀನಿ" ಜ್ಯೋತಿ ಹೇಳಿದೊಡನೆ, ಶಿಲ್ಪಾಳ ಮುಖ ಅರಳಿತ್ತು.

"ಸುನೀಲ ಬಂದಿದಾರಾ?" ಎಂದು ಉತ್ಸಾಹದಿಂದ ಕೇಳಿದವಳು ತಕ್ಷಣವೇ ನಾಲಗೆಯನ್ನು ಕಚ್ಚಿಕೊಂಡಳು. ಜ್ಯೋತಿ ಗಮನಿಸಿದಳು.

"ಹೂಂ,. ನಿನ್ನೆ ರಾತ್ರಿ ಬಂದ...." ಮುಂದೇನೂ ಹೇಳಬೇಡಿ ಎನ್ನುವಂತೆ ತುಟಿಗಳ ಮೇಲೆ ಬೆರಳನ್ನಿಟ್ಟು ಸಂಜ್ಞೆ ಮಾಡಿದಳು. ಪುಷ್ಪ ಒಳಕ್ಕೆ ನಡೆದಳು, ಸುನೀಲ ಕರೆದೊಡನೆ ಹೊರಕ್ಕೆ ಬಂದಿದ್ದ. ಶಿಲ್ಪಾ ಅವನು ಕಣ್ಣ ಕಣ್ಣಲ್ಲೇ ಮಾತನಾಡಿಕೊಂಡಿದ್ದನ್ನು ಜ್ಯೋತಿ ಗಮನಿಸಿದಳು. "ಹೋಗು...ಕೈ ಕಾಲು ತೊಳೆದ್ಕೊಂಡು ಬಾ ನಾನು ತಟ್ಟೆ ಹಾಕ್ತೀನಿ, ಇವನು ನಂಗೆ ಹೆಲ್ಪ್ ಮಾಡ್ತಾನೆ" ಶಿಲ್ಪಾ ಮುಗುಳ್ನಕ್ಕಳು.

ಎಲ್ಲರೂ ಒಟ್ಟಿಗೆ ಕುಳಿತು ಅವರವರೇ ಬಡಿಸಿಕೊಂಡು ಊಟ ಮಾಡಿದರು. ಶಿಲ್ಪಾ, ಸುನೀಲ ಆಗಾಗ್ಗೆ ಪರಸ್ಪರ ನೋಡಿಕೊಂಡು, ಕಣ್ಣಿನಲ್ಲೇ ಮಾತಾಡುತ್ತಿದ್ದುದು, ಜ್ಯೋತಿ ಹಾಗೂ ಪುಷ್ಪಳ ಗಮನಕ್ಕೆ ಬಂದಿತು. ಆದರೆ, ಜ್ಯೋತಿಯ ಅದನ್ನು ಮೀರಿದ ಆತಂಕ, ಅವಳನ್ನು ಆಗಾಗ್ಗೆ ಗಂಡನ ಕಡೆ ನೋಡುವಂತೆ ಮಾಡುತ್ತಿತ್ತು. ಅವನು ಯಾವುದೋ ಭಾರಿ ಆಲೋಚನೆಯಲ್ಲಿ

ರುವಂತೆ ಅನ್ನಿಸುತ್ತಿತ್ತು.

ಊಟ ಮುಗಿಸಿ, ಎಲ್ಲರೂ ಹೊರಗೆ ಹಾಲಿನಲ್ಲಿ ಕುಳಿತ ಮೇಲೆ, ಸಂದೀಪ ಮುಖ್ಯವಾದ ವಿಷಯವನ್ನು ಎತ್ತಿದ.."ಪುಷ್ಪಾ, ಅಪ್ಪ ಏನು ಮಾಡಿದಾನೆ ಅಂತ ಗೊತ್ತಾಯ್ತಲ್ಲ, ನೀವಿಬ್ರೂ ಹೋಗಿ, ಅವರಿಬ್ಬರಿಗೆ ಚೆನ್ನಾಗಿ ತಿಳುವಳಿಕೆ ಹೇಳಿ, ನಾನು ನಿನ್ನೇ ರಾತ್ರಿ ಚೆನ್ನಾಗಿ ಛೀಮಾರಿ ಹಾಕಿ ಬಂದಿದೀನಿ, ಅಕ್ಕತಂಗಿಯರು ಕೆಟ್ಟ ಮುಖ ಮಾಡಿ, ಜ್ಯೋತಿಯ ಕಡೆ ತಿರುಗಿದರು. ಅವಳು ತಲೆ ಎತ್ತದೇ ಕುಳಿತಿದ್ದಳು. "ನಿಮ್ಮಿಬ್ಬರ ಮುಖ ಕಂಡಾದರೂ, ಅವರಿಬ್ಬರಿಗೆ ನಾಚಿಕೆ ಆಗಲಿ, ಮದುವೆ ಅಂತೆ ಈ ವಯಸ್ನಲ್ಲಿ ಯಾಕೆ? ಒಂಟಿಯಾಗಿ ಇರುಕ್ಕೆ ಆಗುಲ್ವಂತಾ?"

"ನೀನು ದುಡುಕಿ ಮಾತಾಡಿ ಬಿಡ್ತೀಯ, ನಾವಿಬ್ರೂ ಬರೋವರೆಗೆ ಕಾಯಕ್ಕೇ ಆಗ್ತಿರ್ಲಿಲ್ವಾ?" ಪುಷ್ಪ ಕೇಳಿದಳು.

"ನೀವು ಬಂದೇ ಬರ್ತೀರಿ ಅಂತ ನಂಗೇನು ಗೊತ್ತಿತ್ತು...? ಅಲ್ಲದೇ ಇಲ್ಲಿ ಇರೋನು ನಾನು ನಂಗೆ ಮಾತಾಡುಕ್ಕೆ ಹಕ್ಕಿದೆ"

"ಸರಿ ನಿನ್ನ ಮಾತಿನ ಪ್ರಭಾವ ಅವರಿಬ್ಬರ ಮೇಲೆ ಬೀರಿದೆಯಾ?

"ನೀವಿಬ್ರೂ ಹೋಗಿ ನೋಡಿ, ಅದಕ್ಕೇ ತಾನೇ, ನಿಮಗೆ ಬರಹೇಳಿದ್ದು."

"ನಾನು ಮದುವೆಯಾಗಿ ಈ ಮನೆಯಿಂದ ಹೊರಕ್ಕೇ ಹೋಗಿರುವವಳು ಇವಳೂ ಮದುವೆಯಾಗಿ ಹೋಗೋಳೇ ತಾನೇ ನಮಗೆ ಏನು ಅಧಿಕಾರ ಇದೆ?"

"ಏನೇ ಹೀಗಾಂತಿ ಪುಷ್ಪಾ ಹಾಗಾದರೆ ಮುಂದೆ ನಿನ್ನ ಆಸ್ತಿಯ ಭಾಗ ಬೇಡ ಅಂತೀಯ? ನಿನ್ನ ಗಂಡ ಸುಮ್ಮನಿರ್ತಾರಾ? ಶಿಲ್ಪಾ ನೀನೇ ಹೇಳು ನಿನ್ನ ಪಾಲನ್ನು ನೀನು ಬಿಟ್ಟು ಬಿಡ್ತೀಯಾ?"

"ಈಗ ಆಸ್ತಿಯ ಮಾತೆಲ್ಲಾ ಯಾಕೆ ಸಂದೀಪ, ಅಪ್ಪ ಯಾಕೆ ಹೀಗೆ ಮಾಡಿದ್ರು ಅಂತ ತಿಳಿದುಕೊಳ್ಳೋಣ ಏನೋ ಬಲವಾದ ಕಾರಣ ಇರಲೇ ಬೇಕು."

"ನಂಗೊತ್ತು... ಏನು ಕಾರಣ ಅಂತ." ಹೆಂಡತಿಯ ಕಡೆ ನೋಡಿ ನಕ್ಕ

"ನೀನು ಸುಮ್ನಿರು ಎಲ್ಲರ ಎದುರ್ಗೂ ಏನೇನೋ ಆಡಿ ಬಿಡ್ತೀಯಾ" ಎಂದು ಹೇಳಿ ಸುನೀಲನ ಕಡೆ ನೋಡಿ, ತಂಗಿಯನ್ನು ಎಬ್ಬಿಸಿದಳು "ನಡಿಯೇ ಅಪ್ಪನ್ನ ಮಾತಾನಾಡಿಸ್ಕೊಂಡು ಬರೋಣ."

"ನೀನೂ ಬಾರೋ ನಮ್ಮಿಬ್ಬರನ್ನ ಕಳಿಸಿ, ಇಲ್ಲಿ ನೀನು ನಿಶ್ಚಿಂತೆಯಿಂದ

ಇರುಕ್ಕೆ ಆಗುಲ್ಲ" ಶಿಲ್ಪಾ ಅಣ್ಣನನ್ನು ಏಳಿಸಿದಳು.

"ಎಲ್ರೂ ಹೋಗೋಣ.... ಅವ್ರಿಗೂ ಗೊತ್ತಾಗಲಿ, ತಾವು ಮಾಡಿದ್ದು ತಪ್ಪು ಅಂತ. ಏಳಿ ಸುನೀಲ್."

"ಅವರ್‍ಯಾಕೆ ಅವರಿಗೂ ಇದಕ್ಕೂ ಏನು ಸಂಬಂಧ?" ಶಿಲ್ಪಾ ತಟ್ಟನೆ ಕೇಳಿದಳು ಸುನೀಲ ಸುಮ್ಮನಿರು ಎನ್ನುವಂತೆ ಕಣ್ಣು ಮಾಡಿದ.

"ಹೊರಗಿನವರು ಇದ್ದರೆ ಅವರೂ ಸ್ವಲ್ಪ ಮೆತ್ತಗಿರ್ತಾರೆ. ಇವರಿಗೂ ಹೇಳುವ ಕೇಳುವ ಅಧಿಕಾರ ಇದೆ ಇವರು ನನ್ನ ಭಾಮೈದ, ನೀವು ಹೊರಡಿ" ಅವನು ಎದ್ದ. ಜ್ಯೋತಿ ಕುಳಿತೇ ಇದ್ದಳು.

"ನಿಂಗೆ ಮಂತ್ರಾಕ್ಷತೆ ಕೊಟ್ಟು ಆಹ್ವಾನ ಕೊಡ್ಬೇಕಾ, ಅಥವಾ ನೀನು ಅವರ ಪಕ್ಷವೋ...?"

"ನೀನು ನಿನ್ನ ಹೆಂಡ್ತೀನ ತುಂಬಾ ಅಂತೀಯಪ್ಪಾ, ಕಡೇ ಪಕ್ಷ ನಮ್ಮ ಎದುರಿಗಾದ್ರೂ ಅನ್ನಬೇಡ, ಅವರ ಅಣ್ಣನ ಎದುರಿಗಾದ್ರೂ ನಿಂಗೆ ಸಂಕೋಚಬೇಡ್ವಾ"

"ನಿನ್ನ ಗಂಡ ನಿನ್ನನ್ನ ಅನ್ನುಲ್ವಾ? ಸುನೀಲ ಮದುವೆ ಆದ್ಮೇಲೆ ಹೆಂಡತೀನ ಹೇಗೆ ನೋಡ್ಕೋತಾರೆ ಅಂತ ನಾನೂ ನೋಡ್ತೀನಿ."

"ಇಲ್ಲಪ್ಪ, ನೀನು ಎಕ್ಸಪ್ಷನ್ ನೀನು ಯಾವುದೋ ಸಿಟ್ಟನ್ನು ಯಾರ ಮೇಲೋ ತೋರಿಸ್ತೀಯಾ ಏಳು ಜ್ಯೋತಿ ಬಂದ ಕೆಲಸ ಮುಗಿಲೀ, ನಾವು ಇವತ್ತು ರಾತ್ರಿಯೇ ವಾಪಸ್ಸು ಹೊರಡ್ಬೇಕು..." ಎಲ್ಲರೂ ಗಂಭೀರವಾದ ಮುಖಭಾವವನ್ನು ಹೊತ್ತು ನಿಧಾನವಾಗಿ ಮಹಡಿ ಮೆಟ್ಟಿಲನ್ನು ಹತ್ತಿದರು.

ಇವರುಗಳನ್ನೂ ನಿರೀಕ್ಷಿಸುತ್ತಾ ಇದ್ದರೇನೋ ಎಂಬಂತೆ, ತೆರೆದ ಮುಂಬಾಗಿಲ ಎದುರಿಗೆ, ನಂಜುಂಡಯ್ಯ ಹಾಗೂ ಸಾವಿತ್ರಿ ಕುಳಿತಿದ್ದರು. ಸಾವಿತ್ರಿ ತನ್ನ ಕೈಯಲ್ಲಿ ಕೆಲವು ಪತ್ರಗಳನ್ನಿಟ್ಟುಕೊಂಡಿದ್ದಳು. ಅನುಮಾನಿಸುತ್ತಾ ಅದರ ಕಡೆಯೇ ನೋಡುತ್ತಾ ಪುಷ್ಪಾ ಹಾಗೂ ಶಿಲ್ಪಾ ಮನೆಯೊಳಗೆ ಅಡಿ ಇಟ್ಟರು. ನಂಜುಂಡಯ್ಯ ಆಶ್ಚರ್ಯವನ್ನು ನಟಿಸಿದರು. "ಓ.... ಪುಷ್ಪಾ... ಅದೇನು ಅಕ್ಕ ತಂಗಿಯರು? ಒಟ್ಟಿಗೆ ಇದ್ದಕ್ಕಿದ್ದಂತೆ...?" ಕೇಳಿದರು.

"ಹೇಗಿದೀರಿ ಅಪ್ಪಾ? ಅವರಿಗೆ ಉತ್ತರಿಸದೇ, ಅವರ ಹಿಂದೆಯೇ ಬಂದ ಜ್ಯೋತಿ ಹಾಗೂ ಸುನೀಲನನ್ನು ಗಮನಿಸಿದರು. ಅವರಿಬ್ಬರ ಹಿಂದೆ ಸಂದೀಪನೂ ನಿಂತಿರುವುನೆಂದು ಅವರಿಗೆ ತಿಳಿದಿತ್ತು. ಆದರೆ ಅವನು ಒಳಕ್ಕೆ ಬರಲಿಲ್ಲ, ಇವರುಗಳು ಒಳಕ್ಕೆ ಬಂದು ನಿಂತರು.

"ಏನು? ಎಲ್ಲರೂ ಒಟ್ಟಿಗೇ.... ಏನೋ ನ್ಯಾಯ ಕೇಳುವವರಂತೆ

ಬಂದಿದೀರಿ.... ಶಿಲ್ಪಾ, ಬರ್ತಿದೀನಿ ಅಂತ ಯಾಕೆ ತಿಳಿಸ್ಬಾರ್ದಾಗಿತ್ತು ನೀನು? ಗಡುಸಾಗಿ ಪ್ರಶ್ನಿಸಿದರು.

"ಸಾರೀ.... ಅಪ್ಪಾ"

"ಸರಿ, ಬಂದಿದೀರಲ್ಲ ಕುತ್ಕೊಳ್ಳಿ ಅದೇನೇನು ಅನುಮಾನಗಳಿವೆಯೋ ಎಲ್ಲವನ್ನು ಕೇಳ್ಬಿಡಿ" ಅಕ್ಕ ತಂಗಿಯರು ಸಾವಿತ್ರಿಯ ಕಡೆ ನೋಡಿದರು. "ಮೊದಲು ಪರಸ್ಪರ ಪರಿಚಯ ಮಾಡಿಕೊಡ್ತೀನಿ... ಇವಳು ಸಾವಿತ್ರಿ ನನ್ನ ಪತ್ನಿ, ಸಾವಿತ್ರಿ ಇವರಿಬ್ಬರೂ ನನ್ನ ಹೆಣ್ಣು ಮಕ್ಕಳು ಪುಷ್ಪಾ ಹಾಗೂ ಶಿಲ್ಪಾ...." ಆಕೆ ಮುಗುಳ್ನಕ್ಕಳು ಅಕ್ಕ ತಂಗಿಯರು ಅನುಮಾನಿಸುತ್ತ 'ನಮಸ್ಕಾರ' ಎಂದರು... ನಿಮಗೆಲ್ಲಾ ಆಶ್ಚರ್ಯ ಹಾಗೂ ಅತಿರೇಕ ಅಂತ ಅನ್ನಿಸ್ತಿರಬಹುದು. ಆದರೆ ನಾನು ಮಾಡಿದ್ದು ಸರಿಯಿಲ್ಲ ಅಂತ ಕೆಲವರ ಅಭಿಪ್ರಾಯ ನಿಮಗೂ ಹಾಗೇ ಅನ್ನಿಸಿದ್ದರೆ ಹೇಳ್ಬಿಡಿ, ಪರವಾಗಿಲ್ಲ" ಬಾಗಿಲ ಕಡೆ ನೋಡುತ್ತಾ ನುಡಿದರು.

"ಅಲ್ಲಪ್ಪಾ.... ನಮಗೆ ಗೊತ್ತೇ ಇರ್ಲಿಲ್ಲ, ಒಂದ್ಮಾತು ತಿಳಿಸಿದ್ದರೆ.... ಹೀಗೆಲ್ಲಾ ಆಗ್ತಿರ್ಲಿಲ್ಲ...."

"ಏನಾಗಿದೆ ಈಗ? ತಿಳಿಸಿದ್ದರೆ ಏನಾಗ್ತಿತ್ತು, ನಿಮ್ಮ ಒಪ್ಪಿಗೆ ನನಗೆ ಬೇಕಿರಲಿಲ್ಲ, ಇದು ನನ್ನ ಸ್ವಂತ ವಿಷಯ."

"ಯಾವುದು ನಿನ್ನ ಸ್ವಂತ ವಿಷಯ? ಬೆಳೆದ ಮಕ್ಕಳಿದಾರೆ ಮೊಮ್ಮಕ್ಕಳಿದಾರೆ....ಈಗ್ಯಾಕೆ ಬೇಕಿತ್ತು ಅಂತ?" ಎಂದು ಎತ್ತರದ ಧ್ವನಿಯಲ್ಲಿ ಕೇಳುತ್ತಾ, ಬಾಗಿಲಿಗೆ ಬಂದು ನಿಂತ ಸಂದೀಪ.

"ಓ.... ನೀನೂ ಇದೀಯಾ? ಹಾಗಾದ್ರೆ ಇವನೇ ನಿಮ್ಮಗಳನ್ನ ಕರೆಸ್ಕೊಂಡಿದಾನೆ ಅಂತ ಅರ್ಥವಾಯಿತು. ನಾನೇ ತಿಳಿಸಿ, ನಿಮ್ಮಗಳನ್ನ ಕರೆಸಿಕೊಳ್ಳಬಹುದಾಗಿತ್ತು, ಆದರೆ ನಿಮ್ಮ ಮನಸ್ನಲ್ಲಿ ಏನಿದೆ ಅಂತಲೂ ನಂಗೊತ್ತು

"ಅಲ್ಲಪ್ಪಾ...." ಏನನ್ನೋ ಹೇಳಲು ಹೊರಟ ಶಿಲ್ಪಾಳನ್ನು ತಡೆದರು "ನೀನು ಎಲ್ಲರಿಗಿಂತ ಚಿಕ್ಕವಳು, ನಿನಗಿನ್ನೂ ಮದುವೆಯಾಗಿಲ್ಲ, ನಿನಗೆ ಕಾಲೇಜು, ಪಾಠ, ಇವುಗಳೆಲ್ಲಾ ಇವೆ.... ಎಲ್ಲರೂ ಅವರವರ ಸ್ವಂತ ಕೆಲಸಗಳಲ್ಲಿ, ಸ್ವಂತ ಆಲೋಚನೆಗಳಲ್ಲಿ ಬಿಸಿಯಾಗಿದೀರಿ, ನಾನು ನಿವೃತ್ತಿಯಾದವನು ನಾನು ಬಹಳ ಒಂಟಿಯಾಗ್ಬಿಟ್ಟಿದ್ದೆ. ಹೋಟೇಲಿನ ಊಟ ಮೈಗೆ ಒಗ್ಗಲಿಲ್ಲ, ಮತ್ತೀನೇನು ಮಾಡಬೇಕಾಗಿತ್ತು ನಾನು?" ಸಂದೀಪನ ಕಡೆ ಓರೆ ನೋಟ ಬೀರಿದ.

"ಯಾಕೆ? ನಾವುಗಳು ಇರ್ಲಿಲ್ವಾ? ಜ್ಯೋತಿ ಅಡುಗೆ ಮಾಡಿ ಬಡಿಸ್ತಿರ್ಲಿಲ್ವಾ! ಇದು ಬರೀ ನೆವ ಅಷ್ಟೇ..." ಸಂದೀಪ ಗುಡುಗಿದ.

"ನಿಜ ಏನು ಅಂತ ನಂಗಿಂತ ಚೆನ್ನಾಗಿ ನಿಂಗೇ ಗೊತ್ತು ಸಂದೀಪ,

ಜ್ಯೋತಿ ಎಷ್ಟಾಗಲೀ ನಿನ್ನ ಪತ್ನಿ, ನಾನು ವಿಧುರ.... ಅವನ ಮುಖ ಕಪ್ಪಾಗಿತ್ತು, ಪುಷ್ಪಾ ತಮ್ಮನ ಕಡೆ ನೋಡಿದಳು. ಜ್ಯೋತಿ ತಲೆತಗ್ಗಿಸಿದಳು. "ಈಗ ಜ್ಯೋತಿ ಅಡುಗೆ ಮಾಡಿ ಬಡಿಸೋದಾದ್ರೇ ನಾನು ನಿಸ್ಸಂಕೋಚವಾಗಿ ಊಟ ಮಾಡಬಲ್ಲೆ.... ಆದರೆ, ಈಗ ನನಗೆ ಆ ಅಗತ್ಯ ಇಲ್ಲ, ನಿಮ್ಮ ಪಾಡಿಗೆ ನೀವು ಇರಿ, ನಮ್ಮ ಪಾಡಿಗೆ ನಮ್ಮನ್ನು ಇರಲು ಬಿಡಿ, ಯಾವ ಮುಲಾಜು ಇಲ್ಲ"

"ಕೇಳ್ದೋರ್ಗೇ ಏನು ಹೇಳೋದು? ಎಲ್ಲಾ ಹಿಂದೆ ನಗ್ತಾರೆ...

"ಅಂಥೋರು, ನನ್ನ ಬಳಿಗೆ ಬರ್ಲಿ, ನಾನು ಉತ್ತರ ಹೇಳ್ತೀನಿ, ನಿಂಗ್ಯಾಕೆ ಸುಮ್ನೆ ಹಿಂಸೆ? ಇದ್ರಲ್ಲಿ ನಿನ್ನ ತಪ್ಪೇನಿದೆ?" ವ್ಯಂಗ್ಯವಾಗಿ ನುಡಿದರು.

"ಎಲ್ರೂ ನಮ್ಮನ್ನೇ ಕೆಟ್ಟವರನ್ನಾಗಿ ಮಾಡ್ತಾರೆ, ನಿಂಗೆ ಬೇಕಿತ್ತಾ!

"ಇನ್ಮೇಲಾದ್ರೂ ಸರಿಗೆ ಮರ್ಯಾದೆ ಕೊಟ್ಟು ಮಾತಾಡು...ಸಾವಿತ್ರಿಯ ಎದುರಿಗೆ ನಂಗೆ ಮುಜುಗರ ಮಾಡ್ಬೇಡ."

"ಮುಜುಗರ, ಅವಮಾನ ಎಲ್ರಿಗೂ ಆಗಿದೆ, ಮಾತಾಡ್ರೇ.... ಮಾತಾಡಿ ಅಂತ ಕರೆಸಿದ್ರೆ.... ತೆಪ್ಪಗೆ ಕುಳ್ತಿದೀರಲ್ಲ" ಸೋದರಿಯರನ್ನ ಜರಿದ.

"ಮಾತಾಡುಕ್ಕೇ ಏನೂ ಉಳಿದಿಲ್ಲ, ಕಾನೂನಿನ ರೀತ್ಯಾ ಮದುವೆ ಯಾಗಿದೀನಿ, ಇದನ್ನು ಯಾವ ನ್ಯಾಯಾಲಯವು ತಪ್ಪು ಅನ್ನಲ್ಲ, ಸಮಾಜ ಬಹಿಷ್ಕರಿಸುಲ್ಲ ನಿಮ್ಮಗಳಿಗೆ ಅವಮಾನ ಅನ್ನಿಸಿದರೆ ನನ್ನ ಸಹವಾಸಬೇ ಬೇಡ. ನಿಮ್ಮ ನಿಮ್ಮ ಪಾಡಿಗೆ ನೀವು ಇರಬಹುದು, ಇಲ್ಲಿ ಇರಲು ಇಷ್ಟವಿಲ್ಲ ದಿದ್ದರೆ ಬೇರೆ ಹೋಗಬಹುದು ನನಗೆ ಯಾವ ಅಭ್ಯಂತರವೂ ಇಲ್ಲ."

"ಎಷ್ಟು ಸುಲಭವಾಗಿ ಹೇಳ್ತೀಯ, ನಾನ್ಯಾಕೆ ಹೋಗ್ಲಿ? ಈ ಮನೆ ನಂಗೆ ಸೇರಿದ್ದು, ನಂಗೂ ಅಧಿಕಾರ ಇದೆ..."

"ನೀನು ಹಾಗೆ ತಿಳ್ಕೊಂಡಿದೀಯ.... ನಿಜ ತಿಳಿದ್ರೆ ನಿಂಗೇ ಶಾಕ್..."

"ಆಗ್ಲೇ ಈ ಆಸ್ತಿನೆಲ್ಲಾ ಈ ಹೆಂಗ್ಸಿನ ಹೆಸರ್ಗೆ ಮಾಡಿಸಿಬಿಟ್ಯಾ?... ನೋಡ್ರೇ.... ನೋಡಿ ಅಪ್ಪಾ ಅಪ್ಪಾ ಅಂತೀರಲ್ಲಾ ಏನು ಕೊಟ್ಟ? ಎಲ್ಲರ ಕೈಗೂ ಕೊಟ್ಟ ಚಿಪ್ಪು...." ಕೈ ತಿರುಗಿಸುತ್ತಾ ನುಡಿದ.

"ಷಟಪ್ ಈ ಮನೆ ನಂದೂ ಅಲ್ಲ ನಿಂದೂ ಅಲ್ಲ ಈ ಮೊದಲೇ ಸಾವಿತ್ರಿಯ ಹೆಸರಿಗೆ ಇರುವ ಮನೇನ ಮತ್ಯಾಕೆ ಇವಳ ಹೆಸರಿಗೆ ಬರೀಬೇಕು"

"ಒಳಗೊಳಗೇ ಕುತಂತ್ರ ಮಾಡಿ, ಈಗ ನಾಟ್ಕ ಆಡ್ಬೇಡ..."

"ನಾನು ಯಾವ ನಾಟಕವನ್ನು ಆಡ್ಬೇಕಾಗಿಲ್ಲ, ನಿಜ ಏನೂಂತ ನಿಂಗೆ ಗೊತ್ತಿಲ್ಲ, ಈ ಮನೆ ಸಾವಿತ್ರೀದೇ.... ಅದಕ್ಕೆ ತಕ್ಕ ಕಾಗದ ಪತ್ರಗಳಿವೆ"

"ಸುಳ್ಳು! ಸುಳ್ಳು! ನೀನು ಮೋಸಗಾರ.... ಎಂದು ಜೋರಾಗಿ ಕಿರುಚಿದ

ಸಂದೀಪ ಹಾಗೇ ಕುಸಿದು ಬಿದ್ದ. ಜ್ಯೋತಿ ಅವನ ಬಳಿಗೆ ಬಂದಳು. ಎಲ್ಲರೂ ಬೆಪ್ಪಾಗಿ, ಗಾಬರಿಯಿಂದ ಒಬ್ಬರನ್ನೊಬ್ಬರು ನೋಡಿದರು. ಕೆಲವೇ ನಿಮಿಷಗಳಲ್ಲಿ ಸಂದೀಪನನ್ನು ಸಮೀಪದ ನರ್ಸಿಂಗ್ ಹೋಂಗೆ ಸೇರಿಸಿದರು. ಅವನಿಗೆ ಲಘು ಹೃದಯಾಘಾತವಾಗಿತ್ತೋ ಬಿ.ಪಿ. ಏರಿತ್ತೋ ಡಾಕ್ಟರು ಹೇಳಬೇಕಾಗಿತ್ತು.

* * *

ಪೆಚ್ಚಾಗಿ ಕುಳಿತಿದ್ದ ಜ್ಯೋತಿಯ ಹೆಗಲ ಮೇಲೆ ಪುಷ್ಪಾ ಕೈಯನ್ನಿಟ್ಟಳು. ಹೈ ಬಿ.ಪಿ. ಇರೋನು ಅಷ್ಟ್ಯಾಕೆ ಎಕ್ಸೈಟ್ ಆಗ್ಬೇಕಾಗಿತ್ತು! ನೀನಾದ್ರೂ ಅವನಿಗೆ ತಿಳುವಳಿಕೆ ಹೇಳ್ಬೇಕಾಗಿತ್ತು"

"ಅವರು, ನನ್ಮಾತನ್ನು ಕೇಳಲ್ಲ ಪುಷ್ಪಾ, ಇಷ್ಟಕ್ಕೆಲ್ಲಾ ಅವರೇ ಕಾರಣ ಈಗ್ಲಾದ್ರೂ ಬುದ್ಧಿ ಬರುತ್ತಾ ಅಂತ ಯೋಚಿಸ್ತಿದ್ದೆ."

"ಅವನಿಗೆ ಹಾರ್ಟ್ ಅಟ್ಯಾಕ್ ಆಗಿದ್ರೆ ಅವನು ಇನ್ನೂ ಸೂಕ್ಷ್ಮ ಆಗ್ತಾನೆ, ನಿಂಗೇ ಕಷ್ಟ"

"ನೀವು ದೊಡ್ಡೋರು, ನೀವೇ ತಿಳುವಳಿಕೆ ಹೇಳ್ಬೇಕು"

"ನೀನೇ ನೋಡಿದ್ಯಲ್ಲ ಹೇಗೆ ಮಾತಾಡ್ತಾನೆ, ಅಪ್ಪ ಅಂತಂದ್ರೆ ಸ್ವಲ್ಪನಾದ್ರೂ ಗೌರವ ಬೇಡ್ವಾ? ಅದೂ, ಆಕೆಯ ಎದುರಿಗೆ, ನಿನ್ನ ಅಣ್ಣನ ಎದುರಿಗೆ ಹೀಗಾ ಮಾತಾಡೋದು? ಅವರೆಲ್ಲಾ ಏನಂದ್ಕೊಳ್ತಾರೆ? ಶಿಲ್ಪಾ ಹೆದರಿಬಿಟ್ಟಿದ್ದಾಳೆ. ಅವಳನ್ನು ಮಾತಾನಾಡಿಸಿ ಬರ್ತೀನಿ" ಎನ್ನುತ್ತಾ ತಂಗಿಯನ್ನು ಹುಡುಕಿಕೊಂಡು ಹೊರಟಳು. ಅಲ್ಲೊಂದು ಕಡೆ ಕುರ್ಚಿಯ ಮೇಲೆ ಕುಳಿತಿದ್ದ ಶಿಲ್ಪಾ ಹಾಗೂ ಸುನೀಲರನ್ನು ಕಂಡಳು. ಶಿಲ್ಪಾಳ ತಲೆ ಸುನೀಲನ ಭುಜಕ್ಕೆ ಒರಗಿತ್ತು. ಅವನ ಬಲಗೈ ಇವಳ ಭುಜವನ್ನು ಬಳಸಿತ್ತು. ಪುಷ್ಪಾ ಅಚ್ಚರಿಗೊಂಡಳು. ದಿಗಿಲೂ ಆಗಿತ್ತು. ಇವರಿಬ್ಬರಿಗೂ ಯಾವಾಗ ಸ್ನೇಹ ಪ್ರಾರಂಭವಾಯಿತು? ಇಷ್ಟು ಸಲುಗೆಯಾವಾಗ ಆಯಿತು? ಎಂದುಕೊಂಡು ಸನಿಹಕ್ಕೆ ಬಂದಳು. ಸುನೀಲ ಅವಳನ್ನು ಕಂಡು, ಶಿಲ್ಪಾಳಿಂದ ದೂರ ಸರಿದ. ಶಿಲ್ಪಾ ಅಕ್ಕನ ಕಡೆ ಪಿಳಿ ಪಿಳಿ ನೋಡಿದಳು.

"ಸಂದೀಪ್ ಹೇಗಿದಾರೆ?" ಸುನೀಲ್ ತಡವರಿಸುತ್ತಾ ಕೇಳಿದ. ಮುಖದಲ್ಲಿ ಗೊಂದಲದ ಗೆರೆಗಳು ಕಂಡವು.

"ಹೇಗಿದಾನೆ ಅಂತ ಗೊತ್ತಿಲ್ಲ, ಅಲ್ಲಿ ಜ್ಯೋತಿ ಒಬ್ಬಳೇ ಆಗಿದಾಳೆ."

ನಾನು ಮನೆಗೆ ಹೋಗ್ಬೇಕು. ಅಪ್ಪ ಫೋನುಮಾಡಿ ವಿಚಾರಿಸಿದ್ರು ನೀನೂ ಬರ್ತೀಯೇನೇ ಶಿಲ್ಪಾ? ನೀವು ಜ್ಯೋತಿಯ ಜತೆ ಇರ್ತೀರಾ?"

"ಅಫ್‌ಕೋರ್ಸ್ ನೀನು ಮನೆಗೆ ಹೋಗು ಶಿಲ್ಪಾ" ಶಿಲ್ಪಾ ಅವನ

ಮಾತಿಗೆ ಒಪ್ಪಿದಳು. ನಾನು ನಿಮಗೆ ರಿಕ್ಷಾ ತಂದು ಕೊಡ್ತೀನಿ" ಎನ್ನುತ್ತಾ ಸುನೀಲ ಅತ್ತ ನಡೆದ. ಇವರಿಬ್ಬರೂ ಅವನ ಹಿಂದೆ ನಡೆದರು, ಅಕ್ಕ ಏನನ್ನ ಪ್ರಶ್ನಿಸದಿದ್ದಾಗ ಶಿಲ್ಪಳೂ ಮೌನವನ್ನು ವಹಿಸಿದಳು.

"ನಾವಿಬ್ರು ಮನೆಗೆ ಹೋದೆವು ಅಂತ ಜ್ಯೋತಿಗೆ ಹೇಳಿ, ನೀವು ಇಲ್ಲೇ ಇರಿ, ನಾನು ಮತ್ತೇ ಬರ್ತೀನಿ" ಎಂದು ಹೇಳಿ ಪುಷ್ಪಾ ರಿಕ್ಷಾವನ್ನೇರಿದಳು. ಶಿಲ್ಪಾಳೂ ಹತ್ತಿ ಕುಳಿತು ಸುನೀಲನ ಕಡೆ ಕೈಯಾಡಿಸಿದಳು.

"ಶಿಲ್ಪಾ ಏನಿದೆಲ್ಲಾ? ನಿನಗೂ ಅವನಿಗೂ ಎಂಥಾ ಸ್ನೇಹ?" ರಿಕ್ಷಾ ಸ್ವಲ್ಪ ದೂರ ಚಲಿಸಿದ ನಂತರ ತಂಗಿಯನ್ನು ಕೇಳಿದಳು.

"ಐ ಲವ್ ಹಿಮ್" ಯಾವ ಅಳುಕೂ ಇಲ್ಲದೇ ನುಡಿದಳು.

"ಹಾಗಂತ? ಸಮಯ ಸಂದರ್ಭ ಒಂದೂ ಬೇಡ್ವಾ? ಅಪ್ಪನಿಗೆ ಗೊತ್ತಾದ್ರೆ ಸುಮ್ಮನಿರ್ತಾರಾ?"

"ಏನ್ಮಾಡ್ತಾರೆ? ಅವರೇ ಅವಾಂತರ ಮಾಡ್ಕೊಂಡಿದಾರೆ"

"ಹಾಗೆಲ್ಲಾ ಮಾತಾಡ್ಬೇಡ, ಅಪ್ಪ ಮಾಡಿದ್ದು ಸರಿಯಲ್ಲ ಅಂತ ಸಂದೀಪ ಗಲಾಟೆ ಮಾಡಿ, ತನಗೆ ತಾನೇ ಅಪಾಯ ತಂದ್ಕೊಂಡಿದಾನೆ, ಅಪ್ಪ ಹೇಳಿದ್ದೂ ಸರಿಯೇ ಅವರೂ ಒಂಟಿಯಾಗ್ಬಿಟ್ಟಿದ್ರು."

"ಯಾವುದಾದ್ರೂ ವೃದ್ಧಾಶ್ರಮಕ್ಕೆ ಸೇರಬಹುದಾಗಿತ್ತು. ಅಲ್ಲಿ ಅವರ ವಯಸ್ಸಿನವರೇ ಇರ್ತಿದ್ರು."

"ಶಿಲ್ಪಾ.... ಏನು ನಿನ್ನ ಮಾತಿನ ಅರ್ಥ.... ಅಪ್ಪ ಯಾಕೆ ವೃದ್ಧಾಶ್ರಮ ದಲ್ಲಿರ್ಬೇಕು? ನಾವುಗಳೆಲ್ಲಾ ಇಲ್ವಾ?"

"ಹಾಗಾದ್ರೆ ಅಪ್ಪನಿಗ್ಯಾಕೆ ಮಕ್ಕಳ ಜೊತೆ ಸರಿ ಹೋಗುಲ್ಲ?....ಅಣ್ಣ ಅತ್ತಿಗೆಯ ಜೊತೆ ಯಾಕೆ ಸರಿ ಹೋಗ್ಲಿಲ್ಲ! ಅತ್ತಿಗೆ ಕೆಟ್ಟವರಲ್ಲ"

"ಸಂದೀಪಂಗೆ ಏನೋ ಕಾಂಪ್ಲೆಕ್ಸ್ ಅದ್ಸರಿ.... ನಿನ್ನ ಸುನೀಲನ ಸ್ನೇಹ ಎಷ್ಟು ವರ್ಷದಿಂದ? ಅಪ್ಪ ಒಪ್ಪದಿದ್ರೆ ಏನ್ಮಾಡ್ತೀಯಾ?"

"ಅವರ ಒಪ್ಪಿಗೆ ಯಾರಿಗೆ ಬೇಕು? ನಾವಿಬ್ರೂ ಸಿವಿಲ್ ಮದುವೆ ಆಗ್ತೀವಿ, ಅಣ್ಣ ಅತ್ತಿಗೆ ಖಂಡಿತಾ ಒಪ್ತಾರೆ ಅಷ್ಟು ಸಾಕು"

"ನೀನೂ, ಸಂದೀಪನ ತರಹ ಮಾತಾಡ್ಬೇಡ ಶಿಲ್ಪಾ, ಅವನಿಗೆ ಫೈನಾನ್ಸಿಯಲ್ ಪ್ರಾಬ್ಲಂ ಅವನು ಹುಶಾರಾಗಿ ಮನೆಗೆ ಬರುವವರೆಗೂ ತೆಪ್ಪಗೆ ಇರು. ಎಲ್ಲರ ಎದುರಿಗೆ ನಿನ್ನ ಸ್ನೇಹ ಸಲುಗೆ ತೋರಿಸ್ಬೇಡ, ಮೊದಲು ನಿನ್ನ ಎಜುಕೇಷನ್ ಮುಗೀಲಿ, ಇದಕ್ಕೆಲ್ಲ ಸಮಯ ಇದೆ" ಎಂದು ನಯವಾಗಿ ನುಡಿದಳು.

"ಸಂದೀಪ ಹೇಗಿದಾನೆ? ಡಾಕ್ಟರು ಏನಂದ್ರು?" ನಂಜುಂಡಯ್ಯ ಕಾತುರ ಆತಂಕದಿಂದ ಮಗಳನ್ನು ಕೇಳಿದರು.

"ಟ್ರೀಟ್‌ಮೆಂಟ್ ನಡೀತಿದೆ. ಅವನು ನಿದ್ದೆ ಮಾಡ್ತಿದ್ದ; ಗಾಬರಿ ಏನಿಲ್ಲ ಎಂದಿದಾರೆ, ಅವರ ಹತ್ರ ದುಡ್ಡಿಲ್ಲ ಅಪ್ಪಾ... ಖರ್ಚಿಗೆ ಏನ್ಮಾಡೋದು? ಜ್ಯೋತಿ ಅಳ್ತಾ ಇದ್ಲು."

"ಹಣದ ಚಿಂತೆ ಬೇಡ ಪುಷ್ಪಾ ಎಷ್ಟು ಖರ್ಚಾದರೂ ಪರ್ವಾಗಿಲ್ಲ, ನಾನು ಕೊಡ್ತೀನಿ, ಸಂದೀಪ ಹುಷಾರಾಗಿ ಮನೆಗೆ ಬರ್ಬೇಕು, ಅಷ್ಟಾದರೆ ಸಾಕು"

"ಕೆಲವು ದಿನ ರೆಸ್ಟ್ ತಗೊಳ್ಳಲ್ಲ ಸುಮ್ನೆ ಟೆನ್ಷನ್ ಮಾಡ್ಕೋತಾನೆ ಅವನು ಏನೇನೋ ಆಡ್ದ ನಿಮಗೆ ಬೇಜಾರಿಲ್ವಾ?"

"ಬೇಜಾರಾಗುತ್ತೆ.... ನನಗೂ ಅವನ ಮೇಲೆ ಕೋಪ ಇದೆ, ಆದರೆ ಇದು ಸಮಯ ಅಲ್ಲ ಜ್ಯೋತಿ ಒಳ್ಳೆಯ ಹುಡುಗಿ ಅವಳಿಗೆ ಅವಳ ಮಗನಿಗೆ ಅನ್ಯಾಯವಾಗಬಾರದು."

"ಆದ್ರೂ ಯಾಕೋ ಏನೋ ಯಾವುದೂ ಸರಿ ಹೋಗ್ತಿಲ್ಲ, ನೀವು ಕೇಳಿದಾಗ ಹಣ ಕೊಡ್ಲಿಲ್ಲ, ಸಾಲ ಕೊಡಿಸ್ಲಿಲ್ಲ ಅಂತ ಅವನಿಗೆ ನಿಮ್ಮ ಮೇಲೆ ಕೋಪ"

"ನನ್ನ ಹತ್ರ ತಾನೇ ದುಡ್ಡು ಎಲ್ಲಿದೆ? ಶಿಲ್ಪನ ಮದುವೆಗೆ ಅಂತ ಒಂದಿಷ್ಟು ಫಿಕ್ಸೆಡ್‌ನಲ್ಲಿ ಇಟ್ಟಿದೀನ್ನಿ, ಈ ಮನೆ ನನ್ನದಲ್ಲ, ನಂಬು ಸಾವಿತ್ರೀದು ಈ ಮನೆ ಇದರ ಮೇಲೆ ಸಾಲ ತೆಗೆಸಿಕೊಡು ಅಂತ ನಾನು ಹೇಗೆ ಕೇಳಲಿ!

"ಯಾಕಪ್ಪಾ ಹೀಗೆ ಮಾಡಿದ್ರಿ?ಮದುವೆಗೆ ಮೊದಲೇ ಸಾವಿತ್ರಿ ಹೆಸರಿಗೆ ಮನೇನ ಯಾಕೆ ಮಾಡಿದ್ರಿ? ಅಂಥಾ ಗಂಭೀರವಾದ ವಿಷಯ ಏನಿತ್ತು?"

"ನಿಂಗೆ ಗೊತ್ತಿಲ್ಲದ ಅನೇಕ ವಿಷಯಗಳಿವೆ ಪುಷ್ಪಾ, ಸಮಯ ಬಂದಾಗ ಹೇಳ್ತೀನಿ"

"ನಿಮ್ಮ ಈ ನಿರ್ಧಾರದಿಂದ ಸಂದೀಪ ಹ್ಯಾಪಿಯಾಗಿಲ್ಲ, ಶಿಲ್ಪನ್ನ ಮದುವೆಯಾಗೋರು ಪ್ರಶ್ನೆ ಮಾಡಿದ್ರೆ ಏನ್ಹೇಳ್ತೀರಿ?"

"ಆ ಸಮಯ ಬಂದಾಗ ನೋಡಿಕೊಳ್ಳೋಣ, ಈಗ ಸಂದೀಪನ ಆರೋಗ್ಯ ಮುಖ್ಯ ಅವನನ್ನು ಚೆನ್ನಾಗಿ ನೋಡಿಕೊಳ್ತೀನಿ ಅಂತ ಅವನ ಅಮ್ಮನಿಗೆ ಮಾತು ಕೊಟ್ಟಿದೀನಿ, ಅದನ್ನ ನಾನು ಈಗ ನಡೆಸಲೇ ಬೇಕು ಇಲ್ಲದಿದ್ದರೆ ಅವನ ಅಮ್ಮನಿಗೆ ಅನ್ಯಾಯ ಮಾಡಿದಂತಾಗುತ್ತದೆ"

"ಅವನಿಗೆ, ಅಮ್ಮ ಸುಖವಾಗಿರ್ಲಿಲ್ಲ ಅನ್ನೋ ಅಸಮಾಧಾನ ಕೂಡಾ

ಇದೆ, ಯಾಕಪ್ಪಾ ಹೀಗಾಯ್ತು, ಸಾವಿತ್ರಿಯ ಸ್ನೇಹ ನಿಮಗೆ ಮುಂಚೆನಿಂದ ಇತ್ತಾ? ಅಳುಕಿನಿಂದ ಕೇಳಿದಳು, ಆತ ಮಗಳನ್ನೇ ವಿಚಿತ್ರವಾಗಿ ನೋಡಿದರು.

"ಪುಷ್ಪಾ, ಇದುವರೆಗೂ ನಿಮಗ್ಯಾರಿಗೂ ಹೇಳದ ಕೆಲವು ವಿಷಯಗಳಿವೆ. ಸಂದೀಪನಿಗೆ ತಿಳಿಯಬಾರದು ಅಂತ ನಾನು ಮುಚ್ಚಿಟ್ಟಿದ್ದೆ. ಈಗ ಮೊದಲು ಬ್ಯಾಂಕಿಗೆ ಹೋಗಿ ದುಡ್ಡು ಡ್ರಾ ಮಾಡಿ, ಆಸ್ಪತ್ರೆಯ ಖರ್ಚಿಗೆ ಬಿಲ್ ಪೇ ಮಾಡೋಣ ನಿಧಾನವಾಗಿ ನಿನ್ನ ಹತ್ರ ಮಾತಾಡ್ತೀನಿ, ಈ ರಾತ್ರಿ ಸುನೀಲ ಅಲ್ಲಿ ಇರಲಿ, ಜ್ಯೋತಿ ಮನೆಗೆ ಬರಲಿ ದೀಪು ಸ್ಕೂಲಿಂದ ಬಂದು ಆಟ ಆಡೋಕೆ ಹೋಗಿದಾನೆ. ಅವನಿಗೆ ಏನೂ ಗೊತ್ತಿಲ್ಲ" ಇಬ್ಬರೂ ಹತ್ತಿರದ ಬ್ಯಾಂಕಿಗೆ ಹೋಗಿ ಹಣವನ್ನು ಡ್ರಾ ಮಾಡಿ ಅಲ್ಲಿಂದ ಸೀದಾ ನರ್ಸಿಂಗ್ ಹೋಂಗೆ ಬಂದರು.

* * *

ಒಬ್ಬಳೇ ಕುಳಿತಿದ್ದ ಶಿಲ್ಪಾ ಸುನೀಲನ ಫೋನಿಗೆ ಡಯಲ್ ಮಾಡಿದಳು. ಆದರೆ ಲೈನ್ ಸಿಕ್ಕಿರಲಿಲ್ಲ. ಬೇಸರಗೊಂಡು ಮುಂಬಾಗಿಲಿಗೆ ಬಂದು ನಿಂತಳು. ಅಕ್ಕ, ಸುನೀಲನ ಜತೆ ತನ್ನ ಮದುವೆಗೆ ಸಹಾಯ ಮಾಡುತ್ತಾಳೋ, ಅಥವಾ ಅಡ್ಡಿ ಪಡಿಸುತ್ತಾಳೋ ಹಾಗೇನಾದರೂ ಆದರೆ, ತಾನು ಈ ಮನೆಯಿಂದ ದೂರವಾದರೂ ಸರಿ, ಅವನನ್ನೇ ಮದುವೆ ಮಾಡಿಕೊಳ್ಳಬೇಕು. ಆಗಲೂ ಮನೆಯಲ್ಲಿ ಹೀಗೇ ಗಲಾಟೆ, ಗೊಂದಲ, ರಂಪ ರಾದ್ಧಾಂತವಾಗಬಹುದು. ಎಲ್ಲರೂ ನನ್ನನ್ನು ಸುನೀಲನನ್ನು ಬಾಯಿಗೆ ಬಂದಂತೆ ಅನ್ನಬಹುದು. ನನ್ನನ್ನು ದೂರ ಮಾಡಬಹುದು. ಹೇಗೂ ಈಗಾಗಲೇ ನಾನು ಈ ಮನೆಯಿಂದ ದೂರ ಇದೀನಿ, ಆಮೇಲೆ ಪೂರ್ತಿಯಾಗಿ ಈ ಸಂಬಂಧಗಳು ಕಡಿದು ಹೋಗಬಹುದು. ಆದರೆ ಯಾಕೋ ಈ ಅನಿಸಿಕೆ ಅವಳಿಗೆ ದುಃಖವನ್ನುಂಟು ಮಾಡಿತು. ಗಂಟಲುಬ್ಬಿ ಬಂದಿತು. ಇಷ್ಟಕ್ಕೆಲ್ಲ ಅಪ್ಪನೇ ಕಾರಣ. ನನ್ನ ಮದುವೆಯ ಚಿಂತೆಯನ್ನು ಬಿಟ್ಟು ತಾನೇಕೆ ಈ ವಯಸ್ನಲ್ಲಿ ಮದುವೆಯಾಗಬೇಕಾಗಿತ್ತು! ನನಗಾದ್ರೂ ಹೇಳಿದ್ದರೆ, ಓದನ್ನು ಬಿಟ್ಟು ಬಂದು, ಇಲ್ಲಿದ್ದುಕೊಂಡು. ಅಪ್ಪನಿಗೆ ರುಚಿ ರುಚಿಯಾದ ಅಡುಗೆಯನ್ನು ಮಾಡಿ ಬಡಿಸುತ್ತಿದ್ದೆ. ಈ ಅನಿಸಿಕೆಗೆ ಅವಳಿಗೆ ಒಳಗೊಳಗೇ ನಗು ಬಂತು. "ತಾನು ಯಾವ ಅಡುಗೆಯನ್ನು ಕಲಿತಿದ್ದೇನೆ? ಅಮ್ಮ, ಅತ್ತಿಗೆ, ಅಕ್ಕ, ಇವರುಗಳು ಮಾಡಿ ಹಾಕಿದ್ದನ್ನು ಕೂತು ತಿನ್ನುವುದಕ್ಕೆ ಮಾತ್ರ ಬರುತ್ತೆ, ತಕ್ಷಣವೇ ಅವಳಿಗೆ ತನಗೆ ಹೊಟ್ಟೆ ಹಸಿಯುತ್ತಿರುವ ಅನುಭವವಾಯಿತು. ಆದರೆ, ಒಳಗೆ ಅಡುಗೆ ಮನೆಗೆ ಹೋಗಿ ಹುಡುಕಿ ತಾನೇ ಹಾಕಿಕೊಂಡು ತಿನ್ನಲು ಬೇಡವೆನ್ನಿಸಿತು. ಆಸ್ಪತ್ರೆಯಲ್ಲಾದರೂ ಇದ್ದಿದ್ದರೆ,

ಕ್ಯಾಂಟೀನಿನಲ್ಲಿ ಕಾಫಿ ಕುಡಿದು, ಏನಾದರೂ ತಿಂಡಿ ತಿನ್ನಬಹುದಾಗಿತ್ತು, ಸುನೀಲನಾದರೂ ಬಂದಿದ್ದರೆ.... ಮತ್ತೇ ಅವನ ನಂಬರನ್ನು ಡಯಲ್ ಮಾಡಿದಳು. ಆದರೆ ಸ್ವಿಚ್ ಆಫ್ ಎಂದು ಬಂದಿತು. ಅದು ಆಸ್ಪತ್ರೆ, ಅಲ್ಲಿ ಪೇಶೆಂಟ್‌ಗಳಿಗೆ ಡಿಸ್ಟರ್ಬ್ ಮಾಡುವಂತಿಲ್ಲ. ಹೇಗೂ ಮನೇಲಿ ಬೇರೆ ಯಾರೂ ಇಲ್ಲ, ಅಪ್ಪನ ಹೊಸ ಹೆಂಡತಿಯನ್ನು ಕೇಳಿದರೆ, ಕಾಫಿ ಮಾಡಿ ಕೊಡಬಹುದು ತಿನ್ನಲು ಏನಾದರೂ ಖಂಡಿತಾ ಕೊಡುತ್ತಾರೆ ಎಂದುಕೊಂಡು ಬಾಗಿಲನ್ನು ಮುಂದಕ್ಕೆ ಎಳೆದುಕೊಂಡು ಮಹಡಿಯನ್ನೇರಿದಳು. ಓರೆ ಮಾಡಿದ್ದ ಬಾಗಿಲ ಮೇಲೆ ಬೆರಳನ್ನು ಮೆಲ್ಲಗೆ ಬಡಿದಳು 'ಯಾರು' ಎನ್ನುತ್ತಾ ಸಾವಿತ್ರಿ ಬಂದು ಬಾಗಿಲನ್ನು ತೆರೆದಳು. ಆಕೆ ಬಲವಂತದ ನಗೆಯನ್ನು ನಕ್ಕಳು. "ನಿಮ್ಮ ತಂದೆ ಮನೇಲಿಲ್ಲ..." ಎಂದಳು.

"ಗೊತ್ತು ಆಂಟೀ.... ಕುಡಿಯೋಕೆ ನೀರು ಬೇಕಾಗಿತ್ತು..."

"ಬಾ ಕೊಡ್ತೀನಿ ಕೂತ್ಕೋ" ಆಕೆ ಹಾಗೆ ಹೇಳಿದೊಡನೆ ಒಳಕ್ಕೆ ಬಂದಳು.

ನೀರನ್ನು ತಂದಿತ್ತು "ತಿಂಡಿ ತಿಂತೀಯಾ ಕೊಡ್ಲಾ?" ಸಾವಿತ್ರಿ ಕೇಳಿದಳು.

"ಪ್ಲೀಸ್, ಹೊಟ್ಟೆ ತುಂಬಾ ಹಸೀತಿದೆ..." ಸಂಕೋಚವಿಲ್ಲದೇ ಹೇಳಿದಳು. ಅವಳು ತಿಂಡಿಯ ತಟ್ಟೆಯನ್ನು ಇಡುತ್ತಿದ್ದಂತೆ ತಟ್ಟನೆ ತೆಗೆದು ಕೊಂಡು ತಿನ್ನತೊಡಗಿದಳು.

"ನಿಧಾನವಾಗಿ ತಿನ್ನು ಅವಸರ ಏನಿಲ್ಲ" ಮೆಲುವಾಗಿ ನಕ್ಕು ನುಡಿದಳು.

"ಆಂಟೀ, ನಾನು ಇಲ್ಲಿ ತಿಂಡಿ ತಿಂದೆ ಅಂತ ಯಾರಿಗು ಹೇಳ್ಬೇಡಿ"

"ಯಾಕೆ? ಯಾರಾದ್ರೂ ಏನಾದ್ರೂ ಬೈತಾರೆ ಅಂತ ಭಯಾನ, ದೀಪು ಸ್ಕೂಲ್ನಿಂದ ಬಂದವನು, ತಿಂಡಿ ತಿಂದು ಆಟಕ್ಕೆ ಹೋಗಿದಾನೆ, ಯಾರೂ ಏನೂ ಅನ್ನಲ್ಲ, ಇನ್ನು ಸ್ವಲ್ಪ ಹಾಕ್ಲಾ?"

"ಹೂಂ ಆಂಟಿ, ತುಂಬಾ ಚೆನ್ನಾಗಿದೆ, ಹಾಸ್ಟೆಲ್ಲಿನ ಊಟ ತಿಂಡಿ ಇಷ್ಟೂ ಚೆನ್ನಾಗಿರುಲ್ಲ" ಎಂದು ಹೇಳಿ ಮತ್ತಷ್ಟನ್ನು ಹಾಕಿಸಿಕೊಂಡಳು. ಆಕೆ ಬಿಸಿ ಬಿಸಿಯಾದ ಕಾಫಿಯನ್ನು ತಂದಿಟ್ಟಳು. ನಿಧಾನವಾಗಿ ಕಾಫಿಯನ್ನು ಕುಡಿದು 'ಥ್ಯಾಂಕ್ಸ್ ಆಂಟೀ' ಎಂದಳು

"ಈಗ ಸಂದೀಪ್ ಹೇಗಿದಾನೆ? ಡಾಕ್ಟರ್ ಏನಂದ್ರು?"

"ಏನೂ ಗೊತ್ತಿಲ್ಲ ಫೋನ್ ಕನೆಕ್ಟ್ ಆಗ್ತಿಲ್ಲ, ನಾನು ಹೋಗ್ಲಾ" ಎಂದಳು.

"ನಿನ್ನಿಷ್ಟ ನಾನೂ ಒಬ್ಬಳೇ ಇದೀನಿ ಏನಾದ್ರೂ ಮಾತಾಡುಕ್ಕೆ ಇಷ್ಟವಿದ್ರೆ

ಆಡು. ಹಾಸ್ಟೆಲ್ ಹೇಗಿದೆ? ಕಾಲೇಜು ಹೇಗಿದೆ? ಪರೀಕ್ಷೆ ಯಾವಾಗ?" ವಿಚಾರಿಸಿದಳು.

"ಎಲ್ಲಾ ಸರಿಯಾಗಿದೆ, ಕೆಲಸಕ್ಕೂ ಟ್ರೈ ಮಾಡ್ತಿದೀನಿ, ಆಂಟೀ ನಾನೊಂದು ಮಾತು ಕೇಳ್ಲಾ? ನೀವು ತಪ್ಪು ತಿಳ್ಕೋಬಾರ್ದು?"

"ಪರವಾಗಿಲ್ಲ ಕೇಳು" ಆಕೆಯೂ ಕುಳಿತಳು "ಮನೇಲಿ ಇಷ್ಟೆಲ್ಲಾ ಗಲಾಟೆ ಆಯ್ತು, ನಿಮಗೆ ತುಂಬಾ ಬೇಜಾರಾಗಿರಬಹುದು ಅಲ್ವಾ?"

"ಸ್ವಲ್ಪ ಬೇಜರಾಯ್ತು ಆದರೆ ಸ್ವಲ್ಪ ಮಟ್ಟಿಗೆ ನಿರೀಕ್ಷಿಸಿದ್ದೆ, ಆದರೆ ಸಂದೀಪ್ ಇಷ್ಟು ಸೀರಿಯಸ್ ಆಗಿ ತಗೊಂಡಿದಾನೆ ಅಂತ ನಾನು ಅಂದ್ಕೊಂಡಿರಲಿಲ್ಲ.... ಹುಷಾರು ತಪ್ಪುವಷ್ಟು ಟೆನ್ಷನ್ ಮಾಡ್ಕೊಂಡಿದಾನೆ ಅಂತ ಗೊತ್ತಿರ್ಲಿಲ್ಲ"

"ಅವನು ಮೊದಲ್ನಿಂದ್ಲೂ ಅಷ್ಟೇ, ಅಪ್ಪ ಮಾಡಿದ್ದೆಲ್ಲಾ ತಪ್ಪಾಗಿಯೇ ಕಾಣುತ್ತೆ ಅಪ್ಪನ್ನ ಹೇಟ್ ಮಾಡ್ತಾನೆ, ಈ ಜಗಳ, ವಾದ ನೋಡೀ ನೋಡೀ ಬೇಜಾರಾಗಿಯೇ ನಾನು ಬೇರೆ ಊರಿಗೆ ಓದುಕ್ಕೆ ಅಂತ ಹೋದದ್ದು."

"ನಂಗೊತ್ತು...." ಅಚ್ಚರಿಯಿಂದ ಆಕೆಯನ್ನು ನೋಡಿದಳು "ನಿಮ್ಮ ತಂದೆ ನನಗೆ ಎಲ್ಲವನ್ನು ಹೇಳಿದಾರೆ...."

"ಓ...ಅಪ್ಪ ಎಲ್ಲಾ ಹೇಳಿದಾರಾ? ಅಪ್ಪ ಅಮ್ಮನ ಬಗ್ಗೆಯೂ ಹೇಳಿರಬಹುದು ಅಲ್ವಾ?....ಅವರನ್ನ ನೀವು ಎಲ್ಲಿ ಮೀಟ್ ಮಾಡಿದ್ರಿ? ಅಪ್ಪ ನಿಮಗೆ ಹೇಗೆ ಪ್ರಪೋಸ್ ಮಾಡಿದ್ರು?" ಆಕೆ ನಾಚಿಕೊಳ್ಳಲಿಲ್ಲ.

"ಅದೆಲ್ಲಾ ಒಂದು ದೊಡ್ಡ ಕತೆ. ಇನ್ನೆಂದಾದ್ರೂ ಹೇಳ್ತೀನಿ, ಸಂದೀಪ ಹುಷಾರಾಗಿ ಮನೆಗೆ ಬರಲಿ, ಇಲ್ಲೇ ಹತ್ತಿರದಲ್ಲಿ ದೇವಾಸ್ಥಾನ ಇದೆಯಲ್ಲಾ ಅಲ್ಲಿಗೆ ಹೋಗಿ ಸಂದೀಪನ ಹೆಸರ್ನಲ್ಲಿ ಅರ್ಚನೆ ಮಾಡಿಸ್ಕೊಂಡು ಬರ್ತೀನಿ, ನೀನೂ ಬರೋದಾದ್ರೇ ಬಾ" ಕರೆದಳು.

"ಮನೇಲಿ ಯಾರೂ ಇಲ್ವಲ್ಲಾ ಆಂಟಿ, ದೀಪೂ ಬಂದ್ರೆ...?"

"ಸರಿ, ನೀನು ಮನೇಲಿರು, ನಿಮ್ಮ ತಂದೆ ಬಂದು ಕೇಳಿದ್ರೆ, ದೇವಸ್ಥಾನಕ್ಕೆ ಹೋಗಿದೀನಿ ಅಂತ ಹೇಳ್ಬಿಡು" ಇಬ್ಬರೂ ಕೆಳಗಿಳಿದು ಬಂದರು.

* * *

ಆ ರಾತ್ರಿ ಎಲ್ಲರೂ ಮೇಲಿನ ಮನೆಯಲ್ಲಿ ಊಟ ಮಾಡಿದರು. ಅಡುಗೆ ರುಚಿಯಾಗಿದ್ದರೂ, ಯಾರಿಗೂ ಹೊಗಳುವ ಮೂಡ್ ಇರಲಿಲ್ಲ, ಆಟ ಆಡಿ ಸುಸ್ತಾಗಿದ್ದ ದೀಪಕ್, ತಾತನ ಹಾಸಿಗೆಯ ಮೇಲೆ ಮಲಗಿದ ಕೆಲವೇ ಕ್ಷಣಗಳಲ್ಲಿ ನಿದ್ದೆ ಹೋಗಿದ್ದ. "ಇಲ್ಲೇ ಮಲಗಿರ್ಲಿ ಬಿಡಮ್ಮ.... ಎಬ್ಬಿಸೋದು

ಬೇಡ" ನಂಜುಂಡಯ್ಯ ನುಡಿದಾಗ, ಜ್ಯೋತಿ, ಸಾವಿತ್ರಿಯ ಕಡೆ ನೋಡಿದಳು.

"ನಿಮಗೆ ತೊಂದರೆ...." ತೊದಲಿದಳು

"ತೊಂದರೆ ಏನ್ಬಂತು" ದೀಪು ಜೊತೆ ಮಲಗುವುದರಲ್ಲಿ ತೊಂದ್ರೆ ಏನು! ನಿಂಗೂ ಬೇಜಾರಾಗುಲ್ಲ ಪುಷ್ಪಾ, ಶಿಲ್ಪಾ ಇಬ್ರೂ ಇದಾರೆ, ಮಾತಾಡ್ತಾ ಸಮಯ ಕಳೆಯೋದೇ ಗೊತ್ತಾಗಲ್ಲ, ಯಾವ ಆತಂಕವೂ ಬೇಡ, ಹೇಗೂ ನಿನ್ನ ಅಣ್ಣ ಅಲ್ಲಿ ಇದಾನಲ್ಲ, ಡಾಕ್ಟರು ಏನೂ ಗಾಬರಿ ಇಲ್ಲ ಅಂತ ಹೇಳಿದಾರಲ್ಲ"

"ಮರತೇ ಬಿಟ್ಟಿದ್ದೆ, ದೇವಸ್ಥಾನದಿಂದ ಪ್ರಸಾದ ತಂದಿದ್ದೆ. ಎಲ್ರಿಗೂ ಕೊಡ್ತೀನಿ" ಸಾವಿತ್ರಿ ಪ್ರಸಾದದ ಕುಂಕುಮ, ಹಾಗೂ ಕಲ್ಲು ಸಕ್ಕರೆಯನ್ನು ಕೊಟ್ಟಳು. ಎಲ್ಲರ ಹೃದಯ ತುಂಬಿ ಬಂದಿತು. ಎಲ್ಲರೂ ಕೆಳಗಿಳಿದು ಬಂದರು. ಅವರುಗಳೊಂದಿಗೆ ಸಾವಿತ್ರಿಯೂ ಕೆಳಗಿಳಿದು ಬಂದಳು. ತನ್ನ ಬಗ್ಗೆ ಅಕ್ಕನಿಗೆ ಏನು ಹೇಳಿಬಿಡುವಳೋ ಎಂಬಂತೆ ಶಿಲ್ಪಾ ಆತಂಕದಿಂದ ಕೇಳಿದಳು.

"ಏನಾದ್ರೂ ಹೇಳ್ಬೇಕಾಗಿತ್ತಾ ಆಂಟೀ"

"ನಾನು ನಿಮ್ಮಗಳ ಜೊತೆ ಮಲಕ್ಕೋತಿನಿ, ನಾಳೆ ನಾಡಿದ್ದರಲ್ಲಿ ನೀವುಗಳು ವಾಪಸ್ಸು ಹೊರಟು ಹೋಗ್ತೀರಿ, ಹೇಗೂ ನಿಮ್ಮ ತಂದೆ ಮೊಮ್ಮಗನ ಜತೆ ಮಲಗ್ತಾರೆ ಅಲ್ಲಿ ಬೇರೆ ಹಾಸಿಗೆಯೂ ಇಲ್ಲ" ಯಾರು ಮಾತಾಡಲಿಲ್ಲ.

ಜ್ಯೋತಿ ಎಲ್ಲರಿಗೂ ಹಾಸಿಗೆ, ಹೊದಿಕೆ ಹಾಗೂ ದಿಂಬುಗಳನ್ನು ಹೊಂದಿಸಿಕೊಟ್ಟಳು. ಎಲ್ಲರ ಮೌನವನ್ನು ಮುರಿಯುವವಳಂತೆ ಶಿಲ್ಪಾ ಮಾತನ್ನಾಡಿದಳು "ಆಂಟೀ ಈ ಮುಂಚೆ ಎಲ್ಲಿದ್ರಿ? ನಿಮ್ಮ ಊರು ಯಾವುದು? ನಿಮ್ಮ ಮನೇಲಿ ಯ್ಯಾರ್ಯ್ಯಾರಿದಾರೆ? ನಿಮ್ಮ ಮನೆಯವರು ಈ ಮದುವೆಗೆ ಒಪ್ಪಿಕೊಂಡ್ರಾ?" ಸಾವಿತ್ರಿ ತಬ್ಬಿಬ್ಬುಕೊಂಡಳು. ಪುಷ್ಪಾ ತಂಗಿಯನ್ನು ಗದರಿದಳು.

"ಶಿಲ್ಪಾ ಮಲಕ್ಕೊಳ್ಳೋಣ ಎಲ್ರಿಗೂ ಸುಸ್ತಾಗಿದೆ"

"ಪರವಾಗಿಲ್ಲ ಕೇಳಲಿ ಬಿಡು ಪುಷ್ಪಾ, ನಾನಾಗಿಯೇ ನಾನು ಹೇಳ್ತೀನೋ ಇಲ್ವೋ, ನಿಮಗೂ ಈ ಸಂಬಂಧ ತಿಳಿಯೋದೇ ಇಲ್ಲ"

"ನೀವು ನಮ್ಮ ತಂದೆಯ ಪತ್ನಿ, ನಮಗೆ ಚಿಕ್ಕಮ್ಮ ಅದು ಗೊತ್ತು, ಆದರೂ, ನಿಮ್ಮ ತಂದೆ ಮನೆಯವರ ಬಗ್ಗೆ ನೀವು ಹೇಳದಿದ್ರೆ ನಮಗೆ ತಿಳಿಯೋದಾದ್ರೂ ಹೇಗೆ! ಅಪ್ಪನ್ನ ಕೇಳುಕ್ಕೆ ಆಗುತ್ತಾ?"

"ತಾನಾಗಿಯೇ ತಿಳಿಯುತ್ತೆ.... ಆಂಟಿ ಇಲ್ಲೇ ಇರ್ತಾರಲ್ಲ ಅವಸರ ಏನು?"

"ಅಣ್ಣ ಬಂದ್ಮೇಲೇ ಕೇಳುಕ್ಕೆ ಆಗುತ್ತಾ? ಇವತ್ತು ಅವಕಾಶ ಸಿಕ್ಕಿದೆ, ನಾನು ನಾಳೆ ನಾಡಿದ್ದರಲ್ಲಿ ವಾಪಸ್ಸು ಹೊರಟು ಹೋಗ್ತೀನಿ, ಅವನು ಮನೆಗೆ

ಬಂದ್ಮೇಲೆ ಮತ್ತೆ ಏನೇನು ಗಲಾಟೆ ಆಗುತ್ತೋ?" ಜ್ಯೋತಿಯ ಮುಖ ಕಪ್ಪಿಟ್ಟಿತು. ಅವಳು ಗೋಡೆಯ ಕಡೆಗೆ ತಿರುಗಿ ಮಲಗಿದಳು. ಕಣ್ಣಿನಿಂದ ನೀರು ಇಳಿದಿತ್ತು. ಅವಳು ಬಿಕ್ಕಳಿಸಿದ್ದು ಎಲ್ಲರಿಗೂ ಕೇಳಿಸಿತ್ತು.

"ಶಿಲ್ಪಾ ಸುಮ್ನಿರು ಅಂದ್ರೆ ಕೇಳಲಿಲ್ಲ ಜ್ಯೋತಿಗೆ ಬೇಸರ ಆಯ್ತು. ಅವನಿಗೆ ಹುಶಾರಿಲ್ಲ ಅಂತ ಮೊದಲೇ ಕಂಗಾಲಾಗಿದಾರೆ"

"ಎಲ್ರಿಗೂ ಬೇಸರ ಆಗಿದೆ ಪುಷ್ಪಾ ಆಂಟಿ, ಅವನ ಹೆಸ್ರನಲ್ಲಿ ಅರ್ಚನೆ ಮಾಡಿಸ್ಕೊಂಡು ಬಂದಿದಾರೆ.... ಇವರಿಗಾಗಲೀ, ಅಪ್ಪನಿಗಾಗಲೀ, ಅವನ ಮೇಲೆ ದ್ವೇಷ ಇಲ್ಲ. ಅಣ್ಣಂಗೆ ಇದೆಲ್ಲಾ ಅರ್ಥವಾಗ್ತಿಲ್ಲವಲ್ಲ... ನನಗೆ ಅದೇ ಬೇಸರ. ಹೀಗೆ ದ್ವೇಷ ಸಾಧಿಸ್ಕೊಂಡು ಒಟ್ಟಿಗೆ ಇರೋ ಬದಲು ಅಣ್ಣ ಅತ್ತಿಗೆ ಬೇರೆ ಮನೆ ಮಾಡಿಕೊಂಡು ಹೋಗಲಿ ಅದ್ರಿಂದ ಎಲ್ರಿಗೂ ಒಳ್ಳೆದಾಗುತ್ತೆ"

"ಬೇಡ.... ಸಂದೀಪ ಬೇರೆ ಮನೆ ಮಾಡ್ಕೊಂಡು ಹೋಗೋದೇನೂ ಬೇಡ, ಅವರುಗಳೇ ಇಲ್ಲಿರಲಿ.... ನಾನೇ ಹೊರಟು ಹೋಗ್ತೀನಿ, ಹೇಗೂ ನನಗೆ ಒಂಟಿ ಜೀವನ ಅಡ್ಜಸ್ಟ್ ಆಗಿತ್ತು, ಆದರೆ, ಒಂದು ರಿಕ್ವೆಸ್ಟ್... ನಿಮ್ಮ ತಂದೇನ ಒಪ್ಪಿಸ್ಬೇಕು, ಹಾಗೇ ಅವರ ಊಟ ತಿಂಡಿಗೆ ವ್ಯವಸ್ಥೆ ಮಾಡ್ಬೇಕು."

"ಬೇಡ ಆಂಟೀ, ನೀವು ಎಲ್ಲಿಗೂ ಹೋಗಕೂಡದು. ನಾನು ಪರೀಕ್ಷೆ ಮುಗಿದ್ಮೇಲೆ ನಿಮ್ಮ ಜತೇಲೇ ಇರ್ತೀನಿ ನನಗೆ ನಿಮ್ಮ ಅಗತ್ಯ ಇದೆ, ಅಣ್ಣ ಸಿಡುಕ, ಎಲ್ರನ್ನು ಬೈದು ಅಂದು ರೇಗಿಸ್ತಾನೆ."

"ಸುಮ್ನಿರ್ಬಾರ್ದಾ ಶಿಲ್ಪಾ.... ಜ್ಯೋತಿ ನಿದ್ದೆ ಮಾಡ್ತಿದಾಳೆ ಅವಳಿಗೆ ಡಿಸ್ಟರ್ಬ್ ಆಗುತ್ತೆ. ಇದು ನಿನ್ನ ಹಾಸ್ಟೆಲ್ ರೂಂ ಅಲ್ಲ, ಮನೆ" ಜ್ಯೋತಿ ಎದ್ದು ಕುಳಿತಳು.

"ನಂಗೆ ನಿದ್ದೆ ಬರ್ತಿಲ್ಲ, ನಂಗೇನೂ ಡಿಸ್ಟರ್ಬ್ ಆಗ್ತಿಲ್ಲ."

"ಎಲ್ರಿಗೂ ಟೈಂ ಪಾಸ್ ಆಗುತ್ತೆ, ನಿಮ್ಮ ಬಗ್ಗೆ ಹೇಳಿ ಆಂಟೀ, ಮತ್ತೆ ಇಂಥ ಸಮಯ ಸಿಗಲ್ಲ, ಅಣ್ಣನ ಎದುರ್‍ಗೆ ಇಷ್ಟು ಮಾತಾಡುಕ್ಕೆ ಆಗುತ್ತಾ? ಇವರಿಗೆ ಅಣ್ಣನ ಮೇಲೆ ಕೋಪ ಇಲ್ಲ, ಅತ್ತಿಗೆಗೆ ಹರ್ಟ್ ಆಗುಲ್ಲ"

"ಹೌದು ಶಿಲ್ಪಾ ಹೇಳೋದು ಸರಿ, ಈಗ ಮುಖ್ಯವಾಗಿ ನೀವು ಮೂವರಿಗೂ ಈ ವಿಷಯ ತಿಳಿಸುವುದೇ ಒಳ್ಳೇದು, ಎಲ್ಲರೂ ಸರಿಯಾಗಿ ಕುಳಿತರು ಜ್ಯೋತಿ ಎದ್ದು ಕುಳಿತಳು, "ನಾನು ನಿಮ್ಮ ತಂದೆ ಒಟ್ಟಿಗೇ ಮೈಸೂರಿನ ಕಾಲೇಜಿನಲ್ಲಿ ಓದುತ್ತಿದ್ದಾಗ, ನಮ್ಮಿಬ್ಬರ ಪರಿಚಯ ಸ್ನೇಹಕ್ಕೆ ತಿರುಗಿ, ನಂತರ ನಾವಿಬ್ಬರೂ ಒಬ್ಬರನ್ನೊಬ್ಬರು ಪ್ರೀತಿಸಲು ಪ್ರಾರಂಭಿಸಿದೆವು. ಡಿಗ್ರಿ ಮುಗಿಸಿ, ನಿಮ್ಮ ತಂದೆ ಬೇರೆ ಊರಿಗೆ ಮುಂದಿನ ವ್ಯಾಸಂಗಕ್ಕೆ ಹೊರಟುಹೋದರು.

ನಾನು ಸ್ಕೂಲೊಂದರಲ್ಲಿ ಟೀಚರ್ ಆಗಿ ಕೆಲಸಕ್ಕೆ ಸೇರಿಕೊಂಡೆ. ಈ ಸಮಯದಲ್ಲಿ ನನ್ನ ಅಕ್ಕ ಯಾರೋ ಬೇರೆ ಜಾತಿಯವನನ್ನು ಪ್ರೀತಿಸಿ, ನಮ್ಮ ಮನೆಯವರ ಇಷ್ಟಕ್ಕೆ ವಿರುಧ್ಧವಾಗಿ ಅವನನ್ನು ಮದುವೆಯಾಗಿ ಅವನ ಜೊತೆ ಹೊರಟು ಹೋಗಿದ್ದಳು. ನಮ್ಮ ತಂದೆಗೆ ಅವಮಾನವಾದಂತಾಗಿ, ಅದೇ ಕೊರಗಿನಲ್ಲಿ ತೀರಿಹೋದರು. ಮನೆಯ ಜವಾಬ್ದಾರಿ ನನ್ನ ಹೆಗಲ ಮೇಲೆ ಬಿದ್ದಿತು. ಈ ಕಾರಣದಿಂದಾಗಿ ನಮ್ಮ ಪ್ರೀತಿಯ ವಿಷಯವನ್ನು ನನ್ನ ಮನದೊಳಗೇ ಅವಿತಿಟ್ಟೆ. ಇದೇ ವಿಷಯವಾಗಿ ನಿಮ್ಮ ತಂದೆಯೊಡನೆ ಮಾತಾಡಿದೆ. ನಾನು ನಿರಾಕರಿಸಿದ್ದರಿಂದ ಬೇಸರಗೊಂಡ ನಿಮ್ಮ ತಂದೆ ನಿಮ್ಮ ಅಜ್ಜಿಯ ಆಪೇಕ್ಷೆಯಂತೆ, ಅವರು ಗೊತ್ತು ಮಾಡಿದ ಹುಡುಗಿಯನ್ನು ಮದುವೆಯಾದರು. ನನಗೆ ನಿರಾಸೆ ಆಗಿತ್ತು, ನಿಮ್ಮ ತಂದೆ ಎಲ್ಲಿದಾರೆ, ಏನು ಮಾಡ್ತಿದಾರೆ ಎಂದು ತಿಳಿದುಕೊಳ್ಳುವುದು ನನಗೆ ಕಷ್ಟವಲ್ಲದಿದ್ದರೂ, ನಾನು ಸುಮ್ಮನಿದ್ದು ಬಿಟ್ಟೆ.

ಆದರೆ, ಒಂದು ದಿನ ನಿಮ್ಮ ತಂದೆ ನನ್ನನ್ನು ಹುಡುಕಿಕೊಂಡು ನನ್ನ ಬಳಿಗೆ ಬಂದರು ಅವರ ಪತ್ನಿ ಬಸ್ ದುರಂತದಲ್ಲಿ ತೀರಿಹೋಗಿದ್ದರು. ಎರಡು ವರ್ಷದ ಅವರ ಮಗಳು ತಾಯಿಯಿಲ್ಲದ ತಬ್ಬಲಿಯಾಗಿದ್ದಳು. ಅವಳಿಗೆ ತಾಯಿಯಾಗಿ ಬರ್ತೀಯಾ ಅಂತ ಕೇಳಿದರು. ನಾನು ತಕ್ಷಣಕ್ಕೆ ಒಪ್ಪಿಕೊಳ್ಳಲು ಕೆಲವು ಕಾರಣಗಳು ಅಡ್ಡಿಯಾಗಿದ್ದವು. ಅವರನ್ನು ನಮ್ಮ ಮನೆಗೆ ಕರೊದೊಯ್ದು, ನಮ್ಮ ಮನೆಯ ಸಮಸ್ಯೆಗಳನ್ನು ತಿಳಿಸಿದೆ. ಯಾರದ್ದೋ ಯಾವುದೋ ಸೇಡಿಗೆ ಗುರಿಯಾಗಿ, ಕೊಲ್ಲಲ್ಪಟ್ಟಿದ್ದ ಗಂಡನ ಮನೆಯಲ್ಲಿ ತಿನ್ನಲೂ ಗತಿಯಿಲ್ಲದ ಸ್ಥಿತಿಯಲ್ಲಿದ್ದ ನನ್ನ ಅಕ್ಕ ತನ್ನ ಚಿಕ್ಕ ಮಗನೊಂದಿಗೆ, ನಮ್ಮ ಮನೆಗೆ ಬಂದು ಸೇರಿದ್ದಳು. ಅವಳ ದುಃಸ್ಥಿತಿಗೆ ಮನನೊಂದು ನಮ್ಮ ತಾಯಿ ಅವಳನ್ನು ಮನೆಗೆ ಸೇರಿಸಿಕೊಂಡಿದ್ದರು. ಅವಳು ಮತ್ತೆ ಗರ್ಭಿಣಿಯಾಗಿದ್ದಳು. ಅವಳಿಗೆ ಅವಳ ಮಕ್ಕಳಿಗೆ ಮುಂದೆ ಕಷ್ಟವಾಗಬಾರದೆಂದು ನಮ್ಮ ತಂದೆಯ ಹೆಸರಿನಲ್ಲಿದ್ದ ಮನೆಯನ್ನು ಅಕ್ಕನ ಹೆಸರಿಗೆ ವರ್ಗಾಯಿಸಿ, ಅನುಕೂಲ ಮಾಡಿಕೊಟ್ಟಿದ್ದೆವು. ನನಗೆ ಸಂಬಳ ಬರುತ್ತಿದ್ದುದರಿಂದ, ನನಗೆ ಹಣಕಾಸಿನ ಸಮಸ್ಯೆ ಇರಲಿಲ್ಲ.

ಇದ್ದಕ್ಕಿದ್ದಂತೆ ನನ್ನ ಮನಸ್ಸಿನಲ್ಲಿ ಒಂದು ಆಲೋಚನೆ ಹುಟ್ಟಿಕೊಂಡಿತು. ಕೊರೆಯಲು ಪ್ರಾರಂಭಿಸತೊಡಗಿತು. ಅದೇ ವಿಷಯವಾಗಿ ನಿಮ್ಮ ತಂದೆ ಯೊಡನೆ ಮಾತನಾಡಿ, ಅವರನ್ನು ಒಪ್ಪಿಸಲು ಸಫಲಳಾದೆ. ಅಕ್ಕನನ್ನು ಒಪ್ಪಿಸಿದೆ. ಮಕ್ಕಳು ತಂದೆ ಇಲ್ಲದೇ ಅನಾಥರಂತೆ ಬೆಳೆಯುವುದು ಅವಳಿಗೂ ಬೇಕಿರಲಿಲ್ಲ. ಕೆಲವೇ ದಿನಗಳಲ್ಲಿ ನನ್ನ ಅಕ್ಕನೊಡನೆ ನಿಮ್ಮ ತಂದೆಯ ಮದುವೆ ನೆರವೇರಿತು.

ಆಕೆ ಹೇಳುತ್ತಿದ್ದುದನ್ನು ಒಂದು ಕತೆಯೆಂಬಂತೆ ಬಾಯಿ ಬಿಟ್ಟು ಕೇಳಿಕೊಳ್ಳುತ್ತಿದ್ದವರು, ಬೆಚ್ಚಿದವರಂತೆ ಬೆರಗು ಗಣ್ಣುಗಳಿಂದ ಮುಖ ಮುಖ ನೋಡಿಕೊಂಡರು ಕತೆಯ ಕಾವು, ತಮ್ಮನ್ನೇ ಬಿಸಿಗೊಳಿಸುತ್ತಿದೆಯೆನಿಸಿತ್ತು.

ನಿಮಗೆಲ್ಲಾ ಆಘಾತವಾಗಿರಬಹುದು, ಇದೇ ನಡೆದದ್ದು, ಸರೋಜ ನನ್ನ ಅಕ್ಕ ಸಂದೀಪ, ಶಿಲ್ಪಾ ನನ್ನ ಅಕ್ಕನ ಮಕ್ಕಳು, ಪುಷ್ಪಾ ಮೊದಲ ಹೆಂಡತಿಯ ಮಗಳು, ಆದರೆ ಎಲ್ಲಾ ಮಕ್ಕಳನ್ನು ಒಂದೇ ರೀತಿಯಲ್ಲಿ ನೋಡಿಕೊಂಡರು ಶಿಲ್ಪಾ ಹುಟ್ಟಿದಾಗ ನಮ್ಮ ತಾಯಿಯೇ ಬಾಣಂತನ ಮಾಡಿದರು. ಆಮೇಲೆ ನನಗೆ ಬೇರೆ ಊರಿಗೆ ವರ್ಗವಾಯಿತು. ನಾನು ಹೊರಟುಹೋದೆ. ಅಮ್ಮ ಮಾತ್ರ ಇಲ್ಲೇ ಇದ್ದರು. ನಾನು ಅಪರೂಪಕ್ಕೆ ಬಂದು ಹೋಗಿ ಮಾಡುತ್ತಿದ್ದೆ"

ತಾನು ಈ ಹಿಂದೆ, ಸಾವಿತ್ರಿ ಟೀಚರ್‌ನ್ನು ತಾನು ನೋಡಿದ ನೆನಪು ಪುಷ್ಪಳಿಗಿತ್ತು. ಆ ಸಾವಿತ್ರಿ ಟೀಚರ್‌ಗೂ ತನ್ನ ತಾಯಿಗೂ ಅಕ್ಕತಂಗಿಯರ ಸಂಬಂಧವಿರಬಹುದೆಂದು ಅವಳಿಗೆ ಗೊತ್ತಿರಲಿಲ್ಲ. ಗೊಂದಲಗಳಿಂದ ಅವಳ ಮನಸ್ಸು ಗೋಜಲಾಗಿತ್ತು. ಆಕೆ ತನ್ನ ಸ್ವಂತ ತಾಯಿಯಲ್ಲ, ಆ ಅನಿಸಿಕೆ ಹಿತವಾಗಿರಲಿಲ್ಲ. ಆಕೆ ಸ್ವಂತ ಮಗಳಂತೆಯೇ ತನ್ನನ್ನು ಪಾಲಿಸಿ, ಪೋಷಿಸಿ ಬೆಳೆಸಿ ದೊಡ್ಡವಳನ್ನಾಗಿ ಮಾಡಿದ್ದರು. ತನಗೆ ಆಕೆಯ ಮೇಲೆ ಗೌರವವಿತ್ತು. ಆಕೆಗೆ ತನ್ನ ಮೇಲೆ ಅಕ್ಕರೆಯಿತ್ತು. ಸಂದೀಪ ತನ್ನ ಸ್ವಂತ ತಮ್ಮನಲ್ಲ. ಶಿಲ್ಪಾ ತನ್ನ ಸ್ವಂತ ತಂಗಿಯಲ್ಲ. ಈ ವಿಷಯಗಳು ಬಹಿರಂಗಗೊಳ್ಳದೇ ಇದ್ದಿದ್ದರೆ ಚೆನ್ನಾಗಿತ್ತು. ಇಷ್ಟೆಲ್ಲಾ ಈ ಶಿಲ್ಪಾಳ ದೆಸೆಯಿಂದ.... ಅವಳಿಗೆ ನನಗಿಂತ ಹೆಚ್ಚಿನ ಆಘಾತವಾಗಿರಬೇಕು. ಈ ವಿಷಯ ಸಂದೀಪನಿಗೆ ತಿಳಿದರೆ ಏನಾಗಬಹುದು? ನಂಬದೇ ಏನೇನು ಗಲಾಟೆ ಮಾಡುವನೋ?"

ಈ ವಿಷಯಗಳಾವುದೂ ಮಕ್ಕಳಿಗೆ ತಿಳಿಯಬಾರದು ಅಂತ ನಿಮ್ಮ ತಂದೆ ಬಯಸಿದ್ದರು. ಸಂದೀಪ ಸ್ವಂತ ನನ್ನ ಅಕ್ಕ ಮಗನೇ ಆದರೂ, ಅವನಿಗೆ ನಾವು ಸ್ವಂತದವರಾಗಲಿಲ್ಲ. ನಿಮ್ಮ ತಂದೆಯನ್ನು ಅವನು ಎಂದೂ ಗೌರವಿಸಲಿಲ್ಲ. ಆದರೆ ಅವರು ಎಂದೂ ತಮ್ಮ ಕರ್ತವ್ಯವನ್ನು ಮರೆಯಲಿಲ್ಲ. ಆದರೂ ತಂದೆ ಮಗನ ಮಧ್ಯೆ ಬಿರುಕು ದೊಡ್ಡದಾಗುತ್ತಲೇ ಹೋಯಿತು.

ಈ ಮಧ್ಯೆ, ಸಂದೀಪ ಜ್ಯೋತಿ ಒಬ್ಬರನ್ನೊಬ್ಬರು ಪ್ರೀತಿಸಿ ಮದುವೆ ಯಾದರು. ಅಕ್ಕನಿಗೆ ಈ ಮದುವೆ ಸುತರಾಂ ಇಷ್ಟವಿರಲಿಲ್ಲ. ಸಂದೀಪ ತನ್ನ ಮಾತನ್ನು ಕೇಳುವುದಿಲ್ಲವೆಂದುಕೊಂಡು, ನಿಮ್ಮ ತಂದೆ ಸುಮ್ಮನಾಗಿ ಬಿಟ್ಟಿದ್ದರು. ಅಕ್ಕನಿಗೆ ಜ್ಯೋತಿಯ ಬಗ್ಗೆ ಆದರವಿಲ್ಲವೆನ್ನುವುದು. ನಿಮ್ಮ

ತಂದೆಗೆ ತಿಳಿದಿತ್ತು. ಇದ್ದಕ್ಕಿದ್ದಂತೆ ಅಕ್ಕ ತೀರಿಹೋದಾಗ, ನಿಮ್ಮ ತಂದೆಗೆ ಮಗನಿಗಿಂತ ಸೊಸೆಯ ಮೇಲೆ ಅಕ್ಕರೆ ಬೆಳೆಯಿತು ಇದನ್ನು ತಪ್ಪಾಗಿ ತಿಳಿದವನು ಸಂದೀಪ, ಶಿಲ್ಪಾಳು ತನ್ನ ಓದಿನ ನೆವವನ್ನು ಒಡ್ಡಿ ಬೇರೆ ಊರಿಗೆ ಹೊರಟು ಹೋಗಿದ್ದಳು. ನಿಮ್ಮ ತಂದೆ ಒಂಟಿಯಾಗಿಬಿಟ್ಟಿದ್ದರು. ನನ್ನೊಡನೆ ತಮ್ಮ ಅಳಲನ್ನು ಹೇಳಿಕೊಂಡಿದ್ದರು. ಅವರು ನಾನು ಇಲ್ಲಿ ಬಂದು ಇರುವಂತೆ ಕೇಳಿಕೊಂಡರು. ಈ ವಯಸ್ನಲ್ಲಿ ಮದುವೆಯಾಗುವ ಬಯಕೆಯಾಗಲೀ, ಅವಶ್ಯಕತೆಯಾಗಲೀ ಇಬ್ಬರಿಗೂ ಇರಲಿಲ್ಲ. ಆದರೆ ನಿಮ್ಮ ತಂದೆಗೆ ಕೆಲವು ಅನಿವಾರ್ಯತೆಗಳಿದ್ದವು.

ಅಕ್ಕನ ಹೆಸರಿನಲ್ಲಿದ್ದ ಈ ಮನೆಯನ್ನು ಅವಳ ನಿಧನದ ನಂತರ, ನನ್ನ ಹೆಸರಿಗೆ ಮತ್ತೆ ವರ್ಗಾಯಿಸಿ ಬಿಟ್ಟಿದ್ದರು. ಈಗಲೂ ಈ ಮನೆ ನನ್ನ ಹೆಸರಿನಲ್ಲಿದೆ. ನಿಮ್ಮ ತಂದೆ ತಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಒಪ್ಪುತ್ತಿಲ್ಲ, ಆದರೆ ಈ ವಿಷಯಗಳನ್ನು ನಾನು ತಿಳಿಸದೇ ಇದ್ದರೆ, ನಿಮ್ಮ ತಂದೆ ಕೆಟ್ಟವ ರಾಗಿಯೇ ಉಳಿದು ಬಿಡುತ್ತಿದ್ದರು. ಆದ್ದರಿಂದ ನಿಮಗೆ ತಿಳಿಸುವುದು ಸರಿ ಎನಿಸಿತು" ಸಾವಿತ್ರಿ ಮಾತನ್ನು ನಿಲ್ಲಿಸಿ, ಎಲ್ಲರ ಕಡೆ ನೋಡಿದಳು. ಅಲ್ಲಿ ಅಸಹನೀಯ ಮೌನ ಮನೆ ಮಾಡಿತ್ತು "ಸಾರೀ ಮಕ್ಕಳಾ.... ನಿಮ್ಮ ನಿದ್ದೆಯನ್ನು ಕೆಡಿಸಿದೆ ನಿಮ್ಮ ಮನಸ್ಸನ್ನು ಕೆಡಿಸಿದೆ. ಆದರೆ, ನಾನು ನಿಮ್ಮೆಲ್ಲರನ್ನೂ ತುಂಬಾ ಪ್ರೀತಿಸ್ತೀನಿ, ಸಂದೀಪ ಬಹಳ ಒರಟ. ಆದರೆ ಜ್ಯೋತಿ ಬಹಳ ಒಳ್ಳೆಯ ಹುಡುಗಿ. ನಾನು ಅವಳನ್ನು ನನ್ನ ಮಗಳು ಅಂತ ಭಾವಿಸ್ತೀನಿ, ಜ್ಯೋತಿ ನಿನ್ನ ಗಂಡ ಏನೇ ಹೇಳಲಿ, ನೀನು ಅವನಿಗೆ ಹೆದರುವ ಅಗತ್ಯವಿಲ್ಲ, ಕ್ರಮೇಣ ಎಲ್ಲಾ ಸರಿ ಹೋಗುತ್ತೆ, ನಾನು ಬಂದಿದೀನಲ್ಲ, ಎಲ್ಲವನ್ನು ಒಂದೊಂದಾಗಿ ಸರಿ ಮಾಡ್ತೀನಿ"

"ನಾನು ಚಿಕ್ಕವಳಾಗಿದ್ದಾಗ ನಿಮ್ಮನ್ನು ನೋಡಿದ ನೆನಪು ಸ್ವಲ್ಪ ಸ್ವಲ್ಪ ಇದೆ. ಆಗಲೂ ನೀವು ಒಳ್ಳೆಯವರಾಗಿದ್ರಿ. ಆದರೆ ಸಂಬಂಧ ಏನು ಅಂತ ತಿಳಿದಿರಲಿಲ್ಲ. ಈಗ ನಮ್ಮ ತಂದೆಯ ಬಾಳಿಗೆ ಮತ್ತೆ ಬಂದಿದೀರಿ. ನಿಮಗೆ ಎಷ್ಟು ಥ್ಯಾಂಕ್ಸ್ ಹೇಳಿದರೂ ಸಾಲದು" ಪುಷ್ಪಾ ಸಾವಿತ್ರಿಯ ಕೈ ಹಿಡಿದಳು.

"ನಮ್ಮಿಬ್ಬರ ಮದುವೆಯಿಂದ ನಿನ್ನ ಗಂಡನ ಮನೆಯಲ್ಲಿ ಯಾವ ಮುಜುಗರದ ವಾತಾವರಣ ಉಂಟಾಗುಲ್ಲ ತಾನೇ....?"

"ಇಲ್ಲ, ಇದು ಅಪ್ಪನ ಸ್ವಂತ ವಿಷಯ. ನಮ್ಮ ಮನೆಯವರಿಗೆ ಅರ್ಥವಾಗುತ್ತೆ."

"ಜ್ಯೋತಿ ನಿನಗೇನನ್ನಿಸುತ್ತೆ?"

"ಇಲ್ಲ ಮೇಡಂ, ನಮ್ಮ ಮನೆಯಲ್ಲೂ ಯಾವ ಮಾತೂ ಬರಲ್ಲ."

"ನೀವ್ಯಾಕೆ ಹೆದರ್ತೀರಿ? ಯಾವ ಮಾತೂ ಏಳೋದಿಲ್ಲ" ಶಿಲ್ಪಾ ಹೇಳಿದಾಗ ಪುಷ್ಪಾ ತಂಗಿಯ ಮುಖವನ್ನು ತನ್ನೆಡೆಗೆ ತಿರುಗಿಸಿಕೊಂಡಳು.

"ಈಗ ನಿನ್ನ ವಿಷಯ ಒಂದು ಇತ್ಯರ್ಥವಾಗಲೇ ಬೇಕು. ಈಗ ನೀವು ನಮ್ಮೆಲ್ಲರ ತಾಯಿಯ ಸ್ಥಾನದಲ್ಲಿದೀರಿ. ಇವಳು ಸುನೀಲನ್ನ ಪ್ರೀತಿಸ್ತಾಳೆ, ನೀವೇ ಅಪ್ಪನಿಗೆ ಈ ವಿಷಯವನ್ನು ತಿಳಿಸ್ಬೇಕು, ಜ್ಯೋತಿ ನಿಮ್ಮ ಅಣ್ಣ ಈ ಬಗ್ಗೆ ನಿಮ್ಮ ಹತ್ರ ಏನನ್ನಾದ್ರೂ ಹೇಳಿದಾರಾ!"

"ಇಲ್ಲ ಪುಷ್ಪಾ, ನನಗೆ ಈ ವಿಷಯ ತಿಳೀದು, ಅನುಮಾನ ಕೂಡಾ ಇಲ್ಲ, ಇಬ್ಬರೂ ಒಬ್ಬರನ್ನೊಬ್ಬರು ನಿಜವಾಗಿಯೂ ಪ್ರೀತಿಸುತ್ತಿದ್ದರೆ, ಆದಷ್ಟು ಬೇಗ ಮದುವೆಯಾಗಲಿ, ನಾನು ಅಪ್ಪನ ಹತ್ರ ಮಾತಾಡ್ತೀನಿ, ಅವರು ಖಂಡಿತಾ ಒಪ್ತಾರೆ."

"ಆದರೆ, ಈ ಮನೇಲಿ ಪ್ರೀತಿಯ ಆಸೆ ಹೆಚ್ಚಾಗಿ ನಿರಾಸೆಯನ್ನೇ ತಂದಿದೆ. ಅದನ್ನು ಯೋಚಿಸ್ಬೇಕಲ್ಲಾ ಜ್ಯೋತಿ"

"ಸುನೀಲ್ ಅಂಥೋರಲ್ಲ..."

"ನೀನು ಸುಮ್ನಿರು, ನಾವು ದೊಡ್ಡೋರು ಇದೀವಿ"

"ಆಸೆ, ನಿರಾಸೆ ಅಂತ ಏನೇನೋ ಮಾತಾಡಿ, ಹೆದರಿಸ್ತಿದೀಯ ನೀನು"

"ಹೆದರ್ಬೇಡ ಶಿಲ್ಪಾ ನಾನು ಜ್ಯೋತಿ ನಿಮ್ಮ ಪ್ರೀತಿಗೆ ಸಹಾಯ ಸಹಕಾರ ಎಲ್ಲಾ ನೀಡ್ತೀವಿ, ಅಷ್ಟಕ್ಕೂ ನಿಂಗ್ಯಾಕೆ ಆತಂಕ? ಸುನೀಲ, ಜ್ಯೋತಿಯ ಅಣ್ಣ ಒಳ್ಳೆಯ ಸ್ವಭಾವದವನು"

"ನಾನು ಸಂದೀಪನ ತಂಗಿ, ಅವನಂತೇ ಅಂತ ಎಲ್ರೂ ಎಂದು ಕೊಂಡು ಬಿಟ್ರೇ.... ಆ ಮನೇಲಿ ಇನ್ನೂ ಇಬ್ಬರು ಅತ್ತಿಗೆಯರಿದಾರೆ. ಅದೇ ಭಯ ನಂಗೆ."

"ನಾನು ಸುನೀಲನ ಹತ್ರ ಮಾತಾಡ್ತೀನಿ, ನೀನು ಆತಂಕ ಪಡ್ಬೇಡ" ಜ್ಯೋತಿ ಶಿಲ್ಪಾಳ ಬೆನ್ನು ಸವರಿದಳು. ಶಿಲ್ಪಾ ಅತ್ತಿಗೆಯ ಭುಜಕ್ಕೆ ಒರಗಿದಳು.

ಇಪ್ಪತ್ನಾಲ್ಕು ಗಂಟೆಗಳ ಅಬ್ಸರ್ವೇಶನ್ ನಂತರ, ಸಂದೀಪನನ್ನು ವಾರ್ಡ್‌ಗೆ ಕರೆತಂದಿದ್ದರು. ಕಣ್ಣುಬಿಟ್ಟು ನೋಡಿದವನಿಗೆ ಮೊದಲು ಕಂಡವಳು ಜ್ಯೋತಿ ಅವಳ ಪಕ್ಕ ದೃಷ್ಟಿ ಹಾಯಿಸಿದ "ದೀಪು ಎಲ್ಲಿ? ನಾನು ಅವನನ್ನು ನೋಡ್ಬೇಕು" ಕ್ಷೀಣವಾಗಿ ನುಡಿದ.

"ಆಸ್ಪತ್ರೇಲಿ ಮಕ್ಕಳನ್ನು ಬಿಡೋದಿಲ್ಲ, ಸ್ಕೂಲಿನಿಂದ ಬಂದ್ಮೇಲೆ,

ಫೋನಿನಲ್ಲಿ ಮಾತನಾಡೋರಂತೆ."

"ನನ್ನನ್ನ ಮನೆಗೆ ಕರ್ಕೊಂಡು ಹೋಗು ನಂಗೆ ಇಲ್ಲಿ ಬೇಜಾರಾಗ್ತಿದೆ. ನಾನು ಅಲ್ಲೇ ರೆಸ್ಟ್ ತಗೋತೀನಿ, ಅಷ್ಟಕ್ಕೂ ನನಗೆ ಏನೂ ಆಗಿಲ್ಲ ಇಲ್ಯಾಕೆ ಇರಬೇಕು?"

"ಮನೇಲಿ ನಿಮ್ಮನ್ನ ಯಾರೂ ನೋಡ್ಕೋತಾರೆ? ಇಲ್ಲಿ ನರ್ಸುಗಳಿದಾರೆ ಡಾಕ್ಟರುಗಳಿದಾರೆ.... ನಾನು ಸ್ಕೂಲಿಗೆ ಹೋಗ್ಬೇಕು"

"ಹೇಗೋ ಆಗುತ್ತೆ. ಈಗಾಗ್ಲೇ ಎಷ್ಟು ಖರ್ಚಾಗಿದೆಯೋ, ನೀನು ಹೇಗೆ ಮ್ಯಾನೇಜ್ ಮಾಡ್ದೆ? ಸುನೀಲನ ಹತ್ರ ಇಸ್ಕೊಂಡ್ಯಾ? ಅವನು ಏನಂದ್ಕೊಂಡ್ನೋ..."

"ಈಗ್ಯಾಕೆ ಆ ಚಿಂತೆ ಎಲ್ಲಾ.... ಅನಗತ್ಯ ಟೆನ್ಷನ್ ಮಾಡ್ಕೋಬೇಡಿ ಬಿಡಿ.."

"ಇದೇ ನಂಗೆ ಕೋಪ ಜ್ಯೋತಿ ಎಲ್ಲಾ ಈ ಮನುಷ್ಯನಿಂದಲೇ ಅಪ್ಪ ಅನ್ನಿಸ್ಕೊಂಡೋನ್ನಿಂದ ನಂಗೇನು ಉಪಯೋಗ ಆಗಿದೆ ಹೇಳು? ಈ ಸಮಯದಲ್ಲಾದರೂ ಹಣ ಬೇಕಾ ಅಂತ ಕೇಳೋನಲ್ಲ, ನಂಗೊತ್ತು..." ಕಣ್ಣುಗಳಲ್ಲಿ ಆಕ್ರೋಶ ತುಂಬಿತ್ತು" ಏನು ಹೇಳಬೇಕೆಂದು ಅವಳಿಗೆ ತೋಚಲಿಲ್ಲ. ಅಷ್ಟರಲ್ಲಿ ಶಿಲ್ಪಾ, ಪುಷ್ಪಾ ಹಾಗೂ ಸುನೀಲ ವಾರ್ಡಿನೊಳಕ್ಕೆ ಬಂದರು.

"ಹೇಗಿದೀರಿ ಸಂದೀಪ್..." ಸುನೀಲ ಕೈ ಕುಲುಕಿ ವಿಚಾರಿಸಿದ.

"ನೀವೇ ನೋಡ್ತಿದೀರಲ್ಲ... ನೀವಾದ್ರೂ ಡಾಕ್ಟರ್ ಹತ್ರ ಮಾತಾಡಿ, ನಾನೀಗ ಸರಿಯಾಗಿದೀನಿ, ಡಿಸ್ಚಾರ್ಜ ಮಾಡಿಸಿ... ಸುಮ್ನೆ ಆಸ್ಪತ್ರೆ ಬಲ್ ಹೆಚ್ಚಾಗುತ್ತೆ. ಇವಳಿಗೆ ಅರ್ಥವಾಗಲ್ಲ"

"ಬೇಡ ಸಂದೀಪ್ ಇನ್ನೆರಡು ದಿನ ಇಲ್ಲೇ ರೆಸ್ಟ್ ತಗೋ... ಇಲ್ಲಿ ಹೊತ್ತು ಹೊತ್ತಿಗೆ ಔಷಧ ಉಪಚಾರ ಎಲ್ಲವನ್ನು ನರ್ಸುಗಳೂ ನೋಡ್ಕೋತಾರೆ"

"ನಿಂಗೆ ನನ್ನ ಕಷ್ಟ ಏನ್ಗೊತ್ತು? ನರ್ಸಿಂಗ್ ಹೋಂನ ಖರ್ಚಿಗೆ ಹಣಾನ ಎಲ್ಲಿಂದ ತರೋದು! ನನ್ನ ಅಕೌಂಟ್‌ನಲ್ಲಿ ಒಂದು ಪೈಸೆ ಇಲ್ಲ. ಈಗಾಗ್ಲೇ ಎಷ್ಟಾಯ್ತೋ? ನೀವುಗಳೂ ಎಷ್ಟೂಂತ ಖರ್ಚು ಮಾಡ್ತೀರಿ?"

"ಅದನ್ನೆಲ್ಲ ನೀನ್ಯಾಕೆ ಯೋಚನೆ ಮಾಡ್ತೀಯಾ?"

"ನಾನಲ್ದೇ ಇನ್ಯಾರು ಯೋಚ್ನೆ ಮಾಡ್ಬೇಕು? ನಂಗೆ ತಾನೇ ಹುಶಾರಿಲ್ಲ"

"ಅದ್ಸರಿ.... ಅದಕ್ಕೆ ಹೇಳ್ದೆ ಈಗ ರೆಸ್ಟ್ ತಗೋ ಆಮೆಲೆ ನಿಧಾನವಾಗಿ ಯೋಚನೆ ಮಾಡಿದ್ರಾಯ್ತು" ಮೆಲುವಾಗಿ ನಗುತ್ತಾ ನುಡಿದಳು.

"ಈಗ್ಲಾದ್ರೂ ನಿಮ್ಮಪ್ಪ ಹಣ ಕೊಡ್ತಾನಾ ಅಂತ ಕೇಳು.... ಈಗ್ಲೂ ಕೈ

ಬಿಚ್ಚದಿದ್ದರೆ ಅವನು ಮನುಷ್ಯನೇ ಅಲ್ಲ" ಜ್ಯೋತಿ ಓರೆ ಕಣ್ಣುಗಳಿಂದ ಪುಷ್ಪಳನ್ನು ನೋಡಿ, ಅಲ್ಲಿಂದ ಎದ್ದು ಹೊರಕ್ಕೆ ಬಂದು ನಿಂತಳು" ಅರೇ.... ಇವಳಿಗೇ ನಾಯ್ತು ಅಂತ. ನನಗೆ ಅವನಿಂದ ತೊಂದರೆ ಆಗ್ತಿದೆ. ಇವಳಿಗೆ ಅವನ ಮೇಲೆ ಅನುಕಂಪ ಇದನ್ನೇ ನಂಗೆ ಕಂಡರಾಗುಲ್ಲ"

"ಪಾಪ, ಜ್ಯೋತಿನ್ಯಾಕೆ ಅಂತೀಯಾ? ನಿಂಗೆ ಹುಶಾರಿಲ್ಲ ಅಂತ ಸರಿಯಾಗಿ ಊಟ ಮಾಡಿಲ್ಲ ನಿದ್ದೆ ಮಾಡಿಲ್ಲ, ದೀಪು ಸ್ಕೂಲ್ನಿಂದ ಬರೋ ಹೊತ್ತಾಯ್ತು. ನಾನೂ ಜ್ಯೋತಿ ಈಗ ಮನೆಗೆ ಹೋಗ್ತೀವಿ."

"ನನ್ನ ಮಾತು ಅಂತಂದ್ರೆ ನಿಂಗೂ ಅಷ್ಟಕಷ್ಟೇ... ಅಂತು ನಮ್ಮ ಕಷ್ಟಕ್ಕೆ ಯಾರೂ ಇಲ್ಲ ಅಂತಾಯ್ತು" ಮೂತ್ತಿ ಸೊಟ್ಟ ಮಾಡಿದ.

"ನೀನು ಸುಮ್ನೆ ಏನೇನೋ ಯೋಚ್ನೆ ಮಾಡಿ ಮನಸ್ಸು ಕೆಡಿಸ್ಕೋಬೇಡ"

"ಹಾಗಾದ್ರೆ ಅಪ್ಪನ ಹತ್ರ ಮಾತಾಡಿ, ಒಂದು ಸೆಟ್ಲ್ ಮಾಡಿಸು ನಂದೇನು ಭಾಗ ಇದೆಯೋ ಅದನ್ನು ಕೊಟ್ಟು ಬಿಡ್ಲಿ. ನಾನು ಅವನ ಮುಖ ಕೂಡಾ ಕಾಣದಷ್ಟು ದೂರ ಹೊರಟು ಹೋಗ್ತೀನಿ" ಅಷ್ಟರಲ್ಲಿ ಶಿಲ್ಪನ ಕೈಯಲ್ಲಿದ್ದ ಮೊಬೈಲ್ ರಿಂಗ್ ಟೋನ್ ಹಾಡಿತು. ಶಿಲ್ಪ ಕಣ್ಣು ಸನ್ನೆ ಮಾಡಿ, ನಿಂಗೆ ಎಂದು ಪುಷ್ಪಳಿಗೆ ಹೇಳಿ ಅವಳನ್ನು ಹೊರಕ್ಕೆ ಕರೆದುಕೊಂಡು ಹೋದಳು. ಸಂದೀಪ ನಿಟ್ಟುಸಿರು ಬಿಟ್ಟು ಕಣ್ಣುಮುಚ್ಚಿ ಮಲಗಿದ. ಮಾತಾಡಿದ ಆಯಾಸಕ್ಕೋ ಏನೋ ಅವನಿಗೆ ನಿದ್ದೆ ಬರುವಂತಾಗಿತ್ತು.

ನಂಜುಂಡಯ್ಯ, ಸಂದೀಪನ ಆರೋಗ್ಯವನ್ನು ವಿಚಾರಿಸಿ ಇನ್ನು ಎಷ್ಟು ದಿನಗಳು ನರ್ಸಿಂಗ್ ಹೋಂನಲ್ಲಿರಬೇಕಾಗುತ್ತದೆಂದು ವಿಚಾರಿಸಿದ್ದರು. "ಅಪ್ಪ ಕೆಟ್ಟೋರಲ್ಲ ಜ್ಯೋತಿ ಇವನಿಗ್ಯಾಕೆ ಅರ್ಥವಾಗುಲ್ವೋ?" ಪುಷ್ಪಾ ನೊಂದು ನುಡಿದಿದ್ದಳು.

"ನಂಗೆ ಅರ್ಥವಾಗುತ್ತೆ ಪುಷ್ಪಾ...ಅದರೆ ಈಗ ನಿಜಾಂಶವನ್ನು ಇವರಿಗೆ ತಿಳಿಸುವರ್‍ಯಾರು? ತಿಳಿದಾಗ ಇವರ ಮನಸ್ಥಿತಿ ಏನಾಗುತ್ತೋ ಭಯ ಆಗುತ್ತೆ"

"ನಿಜ ತಿಳೀದೇ ಇದ್ದರೆ, ಇವನು ಹೀಗೇ ಆಡ್ತಾನೇ ಇರ್ತಾನೆ. ಜ್ಯೋತಿ ಹೊತ್ತಾಗುತ್ತೆ ನಡೀ ಮನೆಗೆ ಹೋಗೋಣ ಸಂದೀಪ ಸ್ವಲ್ಪ ಹೊತ್ತು ನಿದ್ದೆ ಮಾಡ್ಲಿ. ಇಲ್ಲಿ ಯಾರಾದ್ರೂ ಒಬ್ಬರು ಇದ್ದರೆ ಸಾಕು" ಅತ್ತ ಬಂದ ಸುನೀಲ ಒಪ್ಪಿಗೆಯನ್ನು ಸೂಚಿಸಿದ.

"ನಾನೂ ಸುನೀಲನ ಜತೇಲಿ ಇರ್ತೀನಿ" ಶಿಲ್ಪಾ ತಟ್ಟನೆ ನುಡಿದಳು.

"ಆಮೇಲೆ ಒಬ್ಬಳೇ ಹೇಗೆ ಬರ್ತೀಯಾ?"

"ನಂಗೆ ಅಭ್ಯಾಸ ಇದೆ. ನಮ್ಮೂರ್ನಲ್ಲಿ ನಾನೊಬ್ಬೇ ತಾನೇ ಓಡಾಡೋದು"

"ಅಲ್ಲಿಗೂ ಇಲ್ಲಿಗೂ ವ್ಯತ್ಯಾಸವಿದೆ. ಕತ್ತಲಾಗುಕ್ಕೆ ಮುಂಚೆ ಬಂದ್ಬಿಡು ಏನಾದ್ರೂ ಬೇಕಾಗಿದ್ರೆ ತಕ್ಷಣ ಫೋನು ಮಾಡಿ" ಎಂದು ಹೇಳಿ ಪುಷ್ಪಾ, ಜ್ಯೋತಿ ಅಲ್ಲಿಂದ ಹೊರಟರು.

* * *

ಡಾಕ್ಟರು ಬಂದು, ಸಂದೀಪನನ್ನು ಪರೀಕ್ಷಿಸಿ, ಎಲ್ಲವೂ ಸರಿಯಾಗಿದೆ ಎಂದು ತಿಳಿಸಿದರು. ಡಿಸ್ಚಾರ್ಜ ಪೇಪರಗಳನ್ನು ರೆಡಿ ಮಾಡಿಸ್ತೀನಿ ಆತಂಕ ಪಡುವಂಥದ್ದು ಏನಿಲ್ಲ, ಯಾವುದೋ ಉದ್ವೇಗಕ್ಕೆ ಒಳಗಾಗಿ, ಬಿ.ಪಿ. ಹೆಚ್ಚಾಗಿ, ಸ್ಟ್ರೆಸ್‌ಗೆ ಹೀಗಾಗಿದೆ ಅಷ್ಟೆ. ನಥಿಂಗ್‌ಟು ವರಿ ನಾಳೆ ನೀವು ಮನೆಗೆ ಹೋಗ ಬಹುದು ಸಂದೀಪ್ ಯೂ ಆರ್ ಪರ್ಫೆಕ್ಟ್ಲೀ ಆಲ್‌ರೈಟ್" ಡಾಕ್ಟರು ಸಂದೀಪನ ಬೆನ್ನು ಸವರಿದರು.

"ಸಂದೀಪ್ ಮುಗುಳ್ನಕ್ಕು "ಥ್ಯಾಂಕ್‌ಯೂ ಡಾಕ್ಟರ್" ಎಂದ.

ಡಾಕ್ಟರು ಹೊರಟು ಹೋಗಿದ್ದರು. ನರ್ಸು ಅತ್ತ ಹೋದ ಕೂಡಲೇ ಶಿಲ್ಪಾ ಸಂದೀಪನ ಬಳಿ ಕುಳಿತಳು "ಏನೇ ಶಿಲ್ಪಾ ನಿನ್ನ ಸ್ಟಡೀಸ್ ಹೇಗಿದೆ?" ಮಂದಹಾಸವನ್ನು ಬೀರಿ ವಿಚಾರಿಸಿದ.

"ನಿನ್ನ ಮುಖದಲ್ಲಿ ನಗುವನ್ನು ಕಂಡು ಎಷ್ಟೋ ವರ್ಷವಾಗಿತ್ತು. ನಿನಗೋಸ್ಕರ ಅತ್ತಿಗೆ ವರಿ ಮಾಡ್ಕೊಂಡಿದ್ದೆ ಮಾಡ್ಕೊಂಡಿದ್ದು ನೀನು ಪರ್ಫೆಕ್ಟ್ ಆಗಿದೀಯ ಅಂತ ಡಾಕ್ಟರು ಹೇಳಿದ್ದನ್ನ ಕೇಳಿದ್ಯೋ ಇಲ್ವೋ, ಅಪ್ಪನ್ನ ಹೆದರಿಸುಕ್ಕೇ ಏನಾದ್ರೂ ನಾಟಕ ಆಡಿದ್ಯೋ ಹೇಗೆ?" ನಗುತ್ತಾ ಕೇಳಿದಳು.

"ನಾನ್ಯಾಕೆ ನಾಟಕ ಆಡ್ಲಿ? ನನಗೆ ಅವನ ಮುಖ ನೋಡಿದ್ರೇ ನನ್ನ ಬಿ.ಪಿ. ಏರುತ್ತೆ ಜ್ಯೋತಿಗೆ ಅರ್ಥ ಆಗಲ್ಲ, ಮನೆಗೆ ಯಾರನ್ನೋ ಕರ್ಕೊಂಡ್ಬಂದು ಹೆಂಡ್ತಿ ಅಂತ ಇಟ್ಕೊಂಡಿದಾನೆ... ರೇಗುಲ್ವಾ?"

"ರೇಗಿದ್ರೆ ಏನುಪಯೋಗ ಅವರಿಗೆ ಅಡುಗೆ ಮಾಡಿ ಹಾಕುಕ್ಕೆ ಅಂತ ಮದ್ವೆ ಮಾಡ್ಕೊಂಡು ಕರೆತಂದಿದಾರೆ. ಇದರಿಂದ ನಿಂಗೇನು ತೊಂದ್ರೆ? ಅವರಿಗೂ ವಯಸ್ಸಾಗಿದೆ. ಹೋಟೆಲ್ಲಿನ ಊಟ ಮೈಗೆ ಆಗುಲ್ವಂತೆ ಒಂಟಿ ಯಾಗಿರ್ತಾರೆ ಅವರಿಗೆ ಕಂಪೆನಿಯೂ ಬೇಕಲ್ವಾ?"

"ಅದೇನು ಅಪ್ಪನ ಪರವಹಿಸಿ ಇಷ್ಟು ಮಾತಾಡ್ತಿದೀಯಾ ನೀನು ಹೊರಗೆಲ್ಲೋ ಇದೀಯ ನಾನು ತಾನೇ ಸದಾ ಇಲ್ಲೇ ಇರೋನು."

"ಹೌದು ನಾನು ಮದುವೆ ಮಾಡ್ಕೊಂಡು ಹೊರಟು ಹೋದ್ರೆ ಇಲ್ಲಿ

ನೀನು ಅತ್ತಿಗೆ, ದೀಪು ಮಾತ್ರ ದೀಪೂಗೂ ತಾತನ ಪ್ರೀತಿ ಬೇಕಲ್ವಾ?"

"ಪರವಾಗಿಲ್ವೇ, ಹೀಗೆ ಮಾತಾಡು ಅಂತ ಯಾರು ಹೇಳಿಕೊಟ್ರು?"

"ಯಾರ್‍ಯಾಕೆ ಹೇಳಿ ಕೊಡ್ತಾರೆ! ನಾನು ದೊಡ್ಡವಳಾಗಿದೀನಿ, ಎಲ್ಲರೂ ದೊಡ್ಡವರಾಗಿದೀವಿ, ಈಗ ಏನು ನಡೆದಿದೆ ಅದನ್ನ ಅಕ್ಸೆಪ್ಟ್ ಮಾಡ್ಕೋಬೇಕು ಅಲ್ವಾ? ಇದರಲ್ಲೇ ಎಲ್ರಿಗೂ ನೆಮ್ಮದಿ."

"ನನ್ಕೈಲಿ ಅಕ್ಸೆಪ್ಟ್ ಮಾಡ್ಕೊಳ್ಳೋಕೆ ಆಗುಲ್ಲ ನಾನಿರೋದೇ ಹೀಗೆ."

"ಹೀಗೇ ಇದ್ದರೆ ಹೇಗಾಗುತ್ತೆ ಸಂದೀಪ? ಇನ್ನು ಕೆಲವು ಗಂಭೀರವಾದ ವಿಷಯಗಳಿವೆ. ಅದನ್ನು ನೀನು ಅಕ್ಸೆಪ್ಟ್ ಮಾಡ್ಕೊಳ್ಳಲೇ ಬೇಕಾಗುತ್ತೆ.

"ಇದಕ್ಕಿಂತ ಗಂಭೀರವಾದ ವಿಷಯ ಇನ್ನೇನಿದೆ? ಆ ಮನುಷ್ಯ ಆಸ್ತಿನೆಲ್ಲಾ ಆ ಹೆಂಗಸಿಗೆ, ಕೊಟ್ಟಿರಬಹುದು ಇದನ್ನು ನಾನು ಹೇಗೆ ಅಕ್ಸೆಪ್ಟ್ ಮಾಡಿಕೊಳ್ಳಲಿ! ನಾನು ಫೈಟ್ ಮಾಡ್ತೀನಿ"

"ಚಿಕ್ಕಮ್ಮ ಒಪ್ಪಿದರೆ ಮಾತ್ರ ಸಾಧ್ಯ ಯಾಕೇಂದ್ರೆ ಮನೆ ಅವರ ಹೆಸರಿನಲ್ಲಿದೆ. ಈಗಾಗ್ಲೇ ಕೊಟ್ಟಾಗಿದೆ.

"ನಮಗ್ಯಾರಿಗೂ ಕೊಡಬಾರ್‍ದು ಅಂತಲೇ ಆ ಮನುಷ್ಯ ಹೀಗೆ ಮಾಡಿರೋರು ನಿಂಗೂ, ಪುಷ್ಪಂಗೂ ಸಮಪಾಲು ಸಿಗ್ಬೇಕು ಇಲ್ದಿದ್ರೆ ಆ ಹೆಂಗಸಿನ ಪಾಲಾಗುತ್ತೆ. ಸ್ವಂತ ತಂದೆಯಾದವನು, ಯಾರಾದ್ರೂ ಹೀಗೆ ಮಕ್ಕಳಿಗೆ ಮೋಸ ಮಾಡಿ, ಯಾವುದೋ ಹೆಂಗಸಿಗೆ ಕೊಟ್ಟರೆ, ಇದಕ್ಕಿಂತ ದೊಡ್ಡ ಮೋಸ ಯಾವುದಾದ್ರೂ ಇದೆಯಾ? ಅವನು ಅಪ್ಪ ಅಲ್ಲ ಮೋಸಗಾರ" ಶಿಲ್ಪಾ ಸಂದೀಪನ ಕೈ ಹಿಡಿದಳು.

"ಅವರು ಮೋಸಗಾರರೂ ಅಲ್ಲ; ನಮ್ಮ ಸ್ವಂತ ಅಪ್ಪನೂ ಅಲ್ಲ" ಅವನು ಅವಳ ಕೈ ಬಿಡಿಸಿಕೊಂಡು ಅವಳ ಕಡೆ ನೋಡಿದ ಏನೋ ತಮಾಷೆ ಮಾಡ್ತಿದಾಳೆ ಅನ್ನುವಂತಿತ್ತು ಅವನ ನೋಟ ವ್ಯಂಗ್ಯ ನಗೆಯನ್ನು ನಕ್ಕ.

"ನನ್ನ ಮಾತುಗಳು ನಿಂಗೆ ತಮಾಷೆಯಾಗಿ ಕಾಣ್ತಿರಬಹುದು. ಆದರೆ ನಾನು ಹೇಳಿದುದೆಲ್ಲಾ ನಿಜ. ಈ ವಿಷಯ ತಿಳಿದದ್ದು ನೆನ್ನೆ ಅಲ್ಲದೇ ನನಗೆ ಮಾತ್ರವಲ್ಲ ಅಕ್ಕಂಗೆ, ಅತ್ತಿಗೆಗೆ ಕೂಡ ತಿಳಿದಿದೆ. ಆದರೆ ಅವರುಗಳು ನಿನಗೆ ತಿಳಿಸಲು ಹಿಂಜರಿದರು ನಾನು ನಿನ್ನ ಸ್ವಂತ ತಂಗಿ ಆಗಿರುವುದರಿಂದ ನಿನಗೆ ಈ ವಿಷಯವನ್ನು ತಿಳಿಸ್ತೀದೀನಿ...." ಸುನೀಲ್ ಅವಳನ್ನು ತನ್ನ ಕಡೆಗೆ ತಿರುಗಿಸಿ ಕೊಂಡ.

"ಶಿಲ್ಪಾ ಏನು ಹೇಳ್ತಿದೀಯ ನೀನು. ಯಾಕೆ ಹೀಗೆಲ್ಲಾ ಮಾತಾಡ್ತೀ ದಿಯ? ಇದರ ಪರಿಣಾಮ ಏನಾಗುತ್ತೆ ಅಂತ ನಿಂಗೇನಾದ್ರೂ ಗೊತ್ತಾ?"

"ನೀವು ನನ್ನನ್ನು ಮದುವೆ ಆಗದೇ ಇರಬಹುದು. ನಾನು ಸಾವಿತ್ರಿ ಟೀಚರ್‌ನ ಅಕ್ಕನ ಮಗಳು, ನನ್ನ ತಂದೆ ನಂಜುಂಡಯ್ಯ ಅಲ್ಲ ಅಂತ ನಿಮ್ಮ ಮನೆಯವರಿಗೆ ತಿಳಿದರೆ, ನನ್ನನ್ನ ಸೊಸೆ ಅಂತ ಸ್ವೀಕರಿಸ್ತಾರಾ? ನಾವಿಬ್ರೂ ಪ್ರೀತಿಸುತ್ತಿರುವ ವಿಷಯವನ್ನು ನಾನು ಇದುವರೆಗೂ ಯಾರಿಗೂ ಹೇಳದೇ ಇದ್ದುದೇ ಒಳ್ಳೇದಾಯ್ತು ಇಲ್ಲದಿದ್ರೆ...."

"ಹಾಗೆಲ್ಲಾ ಏನೂ ಆಗಲ್ಲ, ನಾವು ಒಬ್ಬರನ್ನೊಬ್ಬರು ಪ್ರೀತಿಸುತ್ತಿರುವುದು ನಿಜ ತಾನೇ. ಆದರೆ ಇದೆಲ್ಲಾ ಏನು? ಈ ಸಾವಿತ್ರಿ ಟೀಚರ್ ನಿಮ್ಮ ತಾಯಿಯ ತಂಗಿ ಹೇಗೆ? ಇದನ್ನೆಲ್ಲ ನಿನಗ್ಯಾರು ಹೇಳಿದ್ರು?"

"ಇದನ್ನೆಲ್ಲಾ ಚಿಕ್ಕಮ್ಮನೇ ಹೇಳಿದ್ದು, ಆದ್ರೆ ಅವರು ನಮ್ಮ ಸ್ವಂತ ಅಪ್ಪ ಅಲ್ಲ ಅನ್ನೋ ವಿಷಯಾನ ಡೈಜೆಸ್ಟ್ ಮಾಡ್ಕೋಳ್ಳೊಕೆ ಆಗ್ತಿಲ್ಲ. ಪುಷ್ಪಾ ನನ್ನ ಸ್ವಂತ ಅಕ್ಕ ಅಲ್ಲ ಅನ್ನೋದನ್ನ ಹೇಗೆ ನಂಬಲಿ!

"ಈಗ ನಿಜವಾಗಿಯೂ ನಂಗೆ ಹಾರ್ಟ್ ಅಟ್ಯಾಕ್ ಆಗುತ್ತೆ ಅಷ್ಟೇ"

"ಇಲ್ಲ ಅಪ್ಪನಾಗಿದ್ದುಕೊಂಡು ಮೋಸ ಮಾಡಿದ್ರೂ ಅನ್ನೋ ದ್ವೇಷ, ನೋವು ನಿನಗೆ ಹಿಂದೆ ಮಾಡ್ತಿತ್ತು. ಈಗ ನಿನ್ನ ಹೃದಯ ನಿರಾಳವಾಗಿದೆ. ಯಾವ ರಕ್ತ ಸಂಬಂಧವೂ ಇಲ್ಲವಲ್ಲ"

"ಏನೇನೋ ಮಾತಾಡಿ, ನಿನ್ನ ಅಣ್ಣನ ಮನಸ್ಸನ್ನ ಕೆಡಿಸ್ತಿದೀಯ ನೀನು ಪ್ಲೀಸ್ ಸುಮ್ನಿರು" ಸುನೀಲ್ ಅವಳನ್ನು ಸುಮ್ಮನಾಗಿಸಲು ನೋಡಿದ.

"ಇಲ್ಲ ಸುನೀಲ್ ನಾನು ನಿನ್ನೆ ರಾತ್ರಿ ನಂಗೆ ಈ ವಿಷಯ ತಿಳಿದಾಗಿನಿಂದ ಯೋಚಿಸಿ ಯೋಚಿಸಿ ಸಾಕಾಯ್ತು, ಅಪ್ಪ ಸ್ವಂತ ಅಲ್ಲ, ಅಮ್ಮ ಬದುಕಿಲ್ಲ, ಈಗ ನನ್ನವನು ಇವನು ಮಾತ್ರ ಇವನೊಡನೆ ಹೇಗೆ ರಕ್ತವನ್ನು ಹಂಚಿಕೊಂಡಿದೀನೋ ಹಾಗೇ, ಇವನೊಡನೆ ನನ್ನ ಮನದ ವ್ಯಥೆಯನ್ನು ಹಂಚಿಕೊಳ್ಳುವುದು ಮುಖ್ಯ ಅಂತ ಅನ್ನಿಸ್ತು ನನ್ನ ಗೊಂದಲ, ಕಸಿವಿಸಿ ಇವನಿಗೆ ಅರ್ಥವಾಗಬಹುದು ಇನ್ನು ಮುಂದೆ ನಾನು ಹೇಗಿರಲಿ? ಇವನೇ ಒಬ್ಬನು ನನ್ನವನು ಇವನಿಗಲ್ಲದೇ ಇನ್ಯಾರಿಗೆ ಹೇಳಿಕೊಳ್ಳಲಿ?"

"ನಾನು ಏನು ಹೇಳಲಿ! ನಿನಗೆ ಹೇಗೆಬೇಕೋ ಹಾಗೆ ಮುಂದೆಯೂ ಇರಬಹುದಲ್ಲ ನನ್ನ ಹತ್ರ ಏನಿದೆ ಅಂತ ನನ್ನ ಜತೇಲಿ ಇರ್ತೀಯಾ! ಮದುವೆ ಮಾಡ್ಕೋ ಸುಖವಾಗಿರು ಅಷ್ಟೇ!" ಸಂದೀಪ ಪೆಚ್ಚಾಗಿ ನುಡಿದ.

"ಮದುವೆ! ಧಾರೆ ಎರೆದು ಕೊಡೋರು ಯಾರು? ನೀನು ಅತ್ತಿಗೇನೋ ಅಥವಾ

"ಅವರುಗಳೇ ಎರೆದುಕೊಡಲಿ ಇಲ್ಲದಿದ್ದರೆ ನೂರೆಂಟು ಪ್ರಶ್ನೆಗಳೂ

ಏಳುತ್ವೆ." ಸುನೀಲ್ ಮಧ್ಯೆ ಬಾಯಿ ಹಾಕಿದ.

"ನಿಮಗೆ ಏನೂ ಅನ್ನಿಸ್ತಿಲ್ವಾ ಸುನೀಲ್ ನಿಜ ತಿಳಿದ್ಮೇಲೆ ಮುಂಚಿನಂತೆ ನನ್ನನ್ನ ಪ್ರೀತಿಸುಕ್ಕೆ ಆಗುತ್ತಾ!"

"ಯಾಕಾಗುಲ್ಲಾ? ನನ್ನ ನಿನ್ನ ಸಂಬಂಧದ ಮಧ್ಯೆ ಬೇರೆ ಸಂಬಂಧಗಳು ಅಡ್ಡಿ ಆಗಬಾರದು ಕೇವಲ ಪ್ರೀತಿಗೆ ಮಾತ್ರ ಪ್ರಾಮುಖ್ಯತೆ ಇರ್ಬೇಕು"

"ಎಸ್. ಪ್ರೀತಿಗೆ ಮೋಸ ಆಗ್ಬಾರ್ದು ಪ್ರೀತಿಗೆ ಯಾವಾಗ಼್ೂ ಪ್ರಾಮುಖ್ಯತೆ ಇರಲೇಬೇಕು" ಸಂದೀಪ ಮಾತಾಡಿದ.

"ನೀನು ಅತ್ತಿಗೇನ ಚೆನ್ನಾಗಿ ನೋಡ್ಕೋತಿಲ್ಲ, ಅವರ ಒಳ್ಳೆಯತನಕ್ಕೆ ನೀನು ಬೆಲೆ ಕೊಡ್ತಿಲ್ಲ, ಅವರಿಗೆ ಅವಮಾನ ಮಾಡ್ತಿದೀಯ," ತನಗನ್ನಿಸಿದ್ದನ್ನು ಹೇಳಿದಳು.

"ಏಯ್, ಏನೇನೋ ಆಡ್ಬೇಡ ನೀನು ಅದೂ ಸುನೀಲನ ಎದುರಿಗೆ ಈ ಸುನೀಲ್ ಜ್ಯೋತಿಯ ಅಣ್ಣ ಜ್ಯೋತಿ ಏನಾದ್ರೂ ಸುನೀಲ್‌ನ ಜತೇಲಿ ತವರಿಗೆ ಹೊರಟು ಹೋದ್ರೆ, ನಾನು ಒಂಟಿಯಾಗಿ ಹೇಗಿರಲಿ"

"ಅತ್ತಿಗೆ ಹಾಗೆ ಮಾಡೋರಲ್ಲ, ಅವರು ತುಂಬ ಒಳ್ಳೆಯವರು ಅವರಿಗೋಸ್ಕರ ನೀನು ಸ್ವಲ್ಪ ಬದಲಾಗಲೇಬೇಕು ಇದು ನನ್ನ ಆಸೆ....ನೀನು ಅವರನ್ನು ಚೆನ್ನಾಗಿ ನೋಡ್ಕೋಬೇಕು ಅವರಿಗೆ ನೋವಾಗುವಂತೆ ನಡೆದು ಕೊಳ್ಳಬಾರದು"

"ಪ್ರಯತ್ನ ಪಡ್ತೀನಿ, ಆದರೆ, ಮನಃಸ್ಥಿತಿ ಪರಿಸ್ಥಿತಿ ಚೆನ್ನಾಗಿಲ್ಲವಲ್ಲ, ನಾನು ಏನು ಮಾಡ್ಲಿ?" ಪೇಚಾಡಿದ.

"ನಾನು ಇನ್ನೊಂದು ವಿಷಯ ಹೇಳಿದ್ರೆ ನಿಂಗೆ ಇನ್ನೂ ಆಶ್ಚರ್ಯ ಆಗಬಹುದು. ಅಪ್ಪ, ಈಗ ಮದುವೆ ಆಗಿದಾರಲ್ಲ, ಸಾವಿತ್ರಿ ಟೀಚರನ್ನ, ಅವರನ್ನ ತುಂಬಾ ಹಿಂದೆಯೇ ಪ್ರೀತಿಸಿದ್ದರಂತೆ, ಕ್ಲಾಸ್‌ಮೇಟ್ಸ್ ಆಗಿದ್ದರಂತೆ ಆದರೆ ಆಗ ವಿಧಿ ಅವರಿಬ್ಬರನ್ನು ಮದುವೆಯಾಗದಂತೆ ತಡೆದಿತ್ತು. ಅದಕ್ಕೆ ಕಾರಣ ಯಾರು ಗೊತ್ತಾ ನಮ್ಮ ಅಮ್ಮ. ಅಂದರೆ ನಮ್ಮಿಬ್ಬರ ಹೆತ್ತತಾಯಿ.... ಎಂದು ಹೇಳಿ ರಾತ್ರಿ ಸಾವಿತ್ರಿ ಹೇಳಿದುದನ್ನೆಲ್ಲ ತಿಳಿಸಿದಳು. ಸುನೀಲ್ ಗಂಭೀರನಾಗಿದ್ದ. ಸಂದೀಪ ಗೊಂದಲಕ್ಕೊಳಗಾಗಿದ್ದ ನಂಬಿದವನಂತೆ ಅಡ್ಡಡ್ಡ ತಲೆಯಾಡಿಸಿದ.

"ಅವರು ಹೇಳಿದ್ರು, ನೀನು ನಂಬಿಬಿಟ್ಯಾ?"

"ಸುಳ್ಳು ಹೇಳಿ ಅವರಿಗೇನಾಬೇಕಾಗಿದೆ" ಸಾವಿತ್ರಿ, ಅಮ್ಮನ ಸ್ವಂತ ತಂಗಿ ಅಕ್ಕನ ಮಕ್ಕಳ ಮೇಲೆ ಅವರಿಗೇನು ದ್ವೇಷ? ನಿನಗೆ ನನ್ನ ಮಾತಿನ ಮೇಲೆ ನಂಬಿಕೆ ಇಲ್ಲದಿದ್ರೆ ಅಕ್ಕನ್ನ ಕೇಳು, ಅತ್ತಿಗೇನ ಕೇಳು ಹಳೇ ಆಲ್ಬಂ

ಕಾಗದ ಪತ್ರ ಯಾವುದಾದ್ರೂ ಇದ್ದೇ ಇರಬಹುದು. ಇದು ನಮ್ಮ ಅಜ್ಜಿಯದೇ ಮನೆ. ಏನಾದರೂ ಪ್ರೂಫ್ ಸಿಗಬಹುದು. ಸಾವಿತ್ರಿ ಈ ಮನೇನ ನಮಗೇ ವಾಸಕ್ಕೆ ಬಿಟ್ಟು ಕೊಟ್ಟಿದ್ದರಲ್ಲ.

"ಹಾಗಾದ್ರೆ ಈ ಮನೆಯ ಮೇಲೆ ನಂಗೆ ನಿಂಗೆ ಮಾತ್ರ ಹಕ್ಕು ಇದೆ, ಸಾವಿತ್ರಿಗೆ ಯಾಕೆ ಮತ್ತೆ ಬರೆದುಕೊಟ್ಟಿದ್ದಾರೆ? ಸಾವಿತ್ರಿನೇ ವಾಪಸ್ಸು ಕಿತ್ತು ಕೊಂಡಿರಬಹುದಲ್ಲಾ ಇವರಿಗೇನು ಅಧಿಕಾರ ಇತ್ತು ವಾಪಸ್ಸು ಕೊಡೋಕೆ?"

"ಅಮ್ಮನ ನಂತರ, ಅವರ ತಂಗಿಗೇ ಹಕ್ಕು ಅದು ಸಹಜ. ಆದರೆ ಇದರಿಂದ ನಮಗೇನು ನಷ್ಟ ಆಗಿದೆ ಹೇಳು! ಅಪ್ಪ ನಮ್ಮೆಲ್ಲರನ್ನು ಓದಿಸಿದರು. ಎಲ್ಲರನ್ನು ಒಂದೇ ರೀತಿಯಲ್ಲಿ ಸಾಕಿ ಬೆಳೆಸಿದರು. ಅಮ್ಮನನ್ನು ಚೆನ್ನಾಗಿ ನೋಡಿಕೊಂಡರು. ಅದು ಅಪ್ಪನ ದೊಡ್ಡಗುಣ ಅಲ್ಲದೇ ಮತ್ತೇನು?"

"ಅಮ್ಮ ಸುಖವಾಗಿರ್ಲಿಲ್ಲ ಅಂತ ಅನ್ನಿಸ್ತಿತ್ತು. ಆಗಾಗ್ಗೆ ಅಳುತ್ತಿದ್ದಳು."

"ಅದಕ್ಕೆ ಅಮ್ಮನೇ ಕಾರಣ ಇರಬಹುದು ಮೊದಲ ಗಂಡನನ್ನು ಮರೆಯಕ್ಕೆ ಆಗದೇ ಇರಬಹುದು, ಇವರೊಡನೆ ಹೊರನೋಟಕ್ಕೆ ಹೆಂಡತಿಯಂತೆ ಬಾಳ್ವೆ ನಡೆಸುವುದು ಕಷ್ಟ ಎನಿಸಿರಬಹುದು. ನಿಜವಾದ ವಿಷಯವನ್ನು ತಿಳಿದು ಕೊಳ್ಳದೇ ಅಮ್ಮನ ಮೇಲಿನ ಪ್ರೀತಿಯಿಂದಾಗಿ, ಅಪ್ಪನನ್ನು ದ್ವೇಷಿಸುತ್ತಿದ್ದೆ ನೀನು ತಿರಸ್ಕಾರದಿಂದ ನೋಡುತ್ತಿದ್ದೆ ಇದು ಅಮ್ಮನಿಗೆ ನೋವನ್ನುಂಟು ಮಾಡಿರ ಬಹುದು ಅಪ್ಪನಿಗೆ ಹಿಂಸೆ ಆಗಿರಬಹುದು."

"ಅಮ್ಮ ಮತ್ಯಾಕೆ ಮದುವೆ ಆಗ್ಬೇಕಾಗಿತ್ತು? ಅಲ್ಲೇ ತಪ್ಪಾಗಿದ್ದುದು"

"ಯಾವ ಆಸರೆ ಇಲ್ಲದೆ, ಅನಾಥರಂತೆ ನಮ್ಮಿಬ್ಬರನ್ನು ಬೆಳೆಸಿದರೆ, ಈ ದಿನ ನಾವು ಈ ಸ್ಥಿತಿಯಲ್ಲಿರುತ್ತಿರಲಿಲ್ಲ, ಇದಕ್ಕೆಲ್ಲ ಸಾವಿತ್ರಿ ಟೀಚರ್ ಕಾರಣ ಅಪ್ಪ, ಅಮ್ಮನಿಗೆ ಹೊಸಬಾಳನ್ನು ಕೊಟ್ಟರು. ನಮ್ಮನ್ನು ಬೆಳೆಸಿ ಒಳ್ಳೆಯ ನಾಗರಿಕರನ್ನಾಗಿ ಮಾಡಿದರು. ಇದು ಅವರ ದೊಡ್ಡ ಗುಣವಲ್ಲದೇ ಮತ್ತೇನು?"

"ಶಿಲ್ಪಾ ಸ್ಟಾಪ್ ಇಟ್.... ಸುಮ್ಮನೇ ಆ ಮನುಷ್ಯನನ್ನು ನನ್ನೆದುರಿಗೆ ಹೊಗಳಬೇಡ. ನಾನು ಬೆಳೆದು ದೊಡ್ಡವನಾದ ಮೇಲೆ ನನಗೆ ನಿಜವನ್ನು ಹೇಳಬಹುದಾಗಿತ್ತಲ್ಲ ಯಾಕೆ ಹೇಳಲಿಲ್ಲ?"

"ಹೇಳಿದ್ದರೆ, ನೀನು ಮನೆ ಬಿಟ್ಟು ಹೋಗಿರುತ್ತಿದ್ದೆ. ಅತ್ತಿಗೆಯನ್ನು ನೀನು ಪ್ರೀತಿಸುತ್ತಿರಲಿಲ್ಲ, ಅಮ್ಮ ನಿನಗಾಗಿ ಕೊರಗಿ ಕೊರಗಿ ಏನಾಗುತ್ತಿದ್ದಳೋ.... ನಾನು ಇಷ್ಟೆಲ್ಲಾ ನಿನ್ನೆದುರಿಗೆ ಮಾತನಾಡುವ ಧೈರ್ಯವೇ ಬರುತ್ತಿರಲಿಲ್ಲ"

"ನೀವೆಲ್ಲರೂ ಸರಿ; ನಾನೊಬ್ಬನೇ ಕೆಟ್ಟವನು ನಾನು ಯಾರಿಗೂ

ಬೇಡ ನನ್ನ ಪಾಡಿಗೆ ನನ್ನನ್ನು ಬಿಡು ಸುನೀಲ್, ಇವಳನ್ನು ಹೊರಕ್ಕೆ ಕರೆದು ಕೊಂಡು ಹೋಗಿ"

"ಹೋಗ್ತೀನಿ. ಹೋಗುಕ್ಕೆ ಮುಂಚೆ ಇನ್ನೂ ಒಂದು ಮಾತನ್ನು ಹೇಳ್ಬಿಟ್ಟೇ ಹೋಗ್ತೀನಿ, ಇದುವರೆಗಿನ ನಿನ್ನ ಆಸ್ಪತ್ರೆಯ ಖರ್ಚಿನ ಬಿಲ್‌ನ್ನು ಕಟ್ಟಿರುವವರು ಯಾರು ಗೊತ್ತಾ? ಅಪ್ಪನೇ.... ನಿನಗೆ ತಿಳಿಸೋದು ಬೇಡ ಅಂತ ಹೇಳಿದ್ರು ನನ್ನ ಮಾತಿನ ಮೇಲೆ ನಂಬಿಕೆ ಇಲ್ಲದಿದ್ರೆ, ಸುನೀಲ್‌ನ್ನ ಕೇಳು, ಅಕ್ಕ ಇವರ ಕೈಗೆ, ಅಪ್ಪ ಕೊಟ್ಟ ಹಣವನ್ನು ಕೊಟ್ಟಿದಾಳೆ, ಹೇಳಿ ಸುನೀಲ್ ಸುಮ್ಮನೇ ನಿಂತಿದೀರಲ್ಲ"

"ನಾನೇನು ಹೇಳ್ಲಿ?" ನಿನ್ನ ತಂದೆ ಹೇಳೋದು ಬೇಡ ಅಂದಿದ್ರಲ್ಲ"

"ಸರಿ, ನಾನು ವಿಲನ್, ಆ ಮನುಷ್ಯ ಹೀರೋ, ಇನ್ನೂ ಆತನ ಗುಣಗಾನ ಸಾಕು. ಸಿಸ್ಟರ್‌ನ ಕರೀರಿ, ನೀವಿಬ್ರೂ ಹೋಗಿ" ಅವನು ವಿರುಧ್ವನಿ ಯಲ್ಲಿ ನುಡಿದ.

"ಶಿಲ್ಪಾ ಏನೇನೋ ಮಾತಾಡಿ, ನಿಮ್ಮಣ್ಣನ್ನ ಅಪ್ಸೆಟ್ ಮಾಡ್ದೆ ನಡೀ, ಈಗ ಮನೆಗೆ ಹೋಗು ಬೆಳಿಗ್ಗೆ ಮಾತಾಡೋಣ" ಸುನೀಲ್ ಅವಳನ್ನು ಬಲವಂತವಾಗಿ ಹೊರಕ್ಕೆ ಕರೆತಂದ. ಅಲ್ಲಿದ್ದ ನರ್ಸ್‌ನ್ನು ಕರೆದ. "ಪ್ಲೀಸ್ ಸ್ವಲ್ಪ ಬಿ.ಪಿ. ಚೆಕ್ ಮಾಡಿ ಅಪ್ಸೆಟ್ ಆಗಿದಾರೆ, ರಿಲಾಕ್ಸ್ ಆಗೋ ಹಾಗೆ ಏನಾದ್ರೂ ಇಂಜೆಕ್ಷನ್ ಕೊಡಿ" ಎಂದ.

"ಅಷ್ಟು ಮಾತಾಡಿದ್ರೆ ಇನ್ನೇನಾಗುತ್ತೆ ಸಾರ್, ನಿಮಗಾದರೂ ತಿಳಿಯಬೇಡ್ವಾ?" ಎನ್ನುತ್ತಾ ಅವಳು ಒಳಗೆ ನಡೆದಳು.

"ನಿನ್ನಿಂದಲೇ ಇಷ್ಟೆಲ್ಲಾ ಅಷ್ಟ್ಯಾಕೆ ಮಾತಾಡ್ಬೇಕಾಗಿತ್ತು? ಅದೂ ಏನೇನೇನೋ ಅಪ್ಸೆಟ್ ಆಗುವಂತೆ" ಶಿಲ್ಪಾಳನ್ನು ದೂಷಿಸಿದ.

"ನನಗೂ ಅಪ್ಸೆಟ್ ಆಗಿದೆ ಸುನೀಲ್ ನಾನು ಯಾರ ಹತ್ತಿರ ಹೇಳಿಕೊಳ್ಳಲಿ ಅವನು ಹುಷಾರಾಗಿದಾನೆ ಅಂತ ಡಾಕ್ಟರು ಹೇಳಿದಾರಲ್ಲ, ನಾಟ್ಕ ಆಡ್ತಿದಾನೆ"

"ಅದೆಲ್ಲಾ ನೀವು ಅಣ್ಣ ತಂಗಿಗೆ ಗೊತ್ತು ತಿಳಿದೂ ತಿಳಿದೂ ಅವರನ್ಯಾಕೆ ಕೆರಳಿಸ್ಬೇಕು? ಸಿಸ್ಟರ್ ನೋಡ್ಕೋತಾರೆ ನಿಂಗೆ ಆಟೋ ಗೊತ್ತು ಮಾಡ್ಕೊಡ್ತೀನಿ ನಡೀ"

"ನಾನೇ ಮಾಡ್ಕೋತೀನಿ ನೀವೇನೂ ಮಾಡಿಕೊಡ್ಬೇಕಾಗಿಲ್ಲ, ಎಂದು ಅವಳು ಸೆಟೆದು ನುಡಿದು ಅತ್ತ ಹೆಜ್ಜೆ ಹಾಕಿದಳು.

"ಸರಿ, ನೀವು ಅಣ್ಣ ತಂಗಿ ಒಂದೇ ತರಹ" ಎಂದು ಅವನು

ಜೋರಾಗಿಯೇ ಗೊಣಗಿದ್ದು ಅವಳಿಗೆ ಕೇಳಿಸಿತ್ತು. ನಿಂತು ಹಿಂತಿರುಗಿ, ದುರದುರನೆ ನೋಡಿ ಮತ್ತೆ ಮುಂದುವರೆದಳು "ಬೈ ಶಿಲ್ಪಾ" ಅವನು ನಗುತ್ತಾ ನುಡಿದಾಗ, ಅವಳೂ ತಿರುಗಿ ನೋಡಿ ಕೈಯಾಡಿಸಿದಳು.

* * *

ಸುನೀಲ್ ವಾರ್ಡಿನೊಳಕ್ಕೆ ಬಂದ ಸಿಸ್ಟರ್ ಅಲ್ಲಿಯೇ ಇದ್ದಳು. ಸಂದೀಪ ಕಣ್ಣು ಮುಚ್ಚಿ ಮಲಗಿದ್ದ "ನಿದ್ದೆ ಬಂದಿದೆಯಾ ಸಿಸ್ಟರ್?" ಮೆಲುದನಿಯಲ್ಲಿ ಕೇಳಿದ.

"ಇಲ್ಲ.... ನಿದ್ದೆ ಬಂದಿಲ್ಲ" ಸಂದೀಪ ಕಣ್ಣು ಬಿಟ್ಟು ನೋಡಿ ನುಡಿದ

"ಸಾರೀ ಸಂದೀಪ್"

"ಬೇಗ ಎಕ್ಸೈಟ್ ಆಗಿ ಬಿಡ್ತಾರೆ. ಅದೇ ಇವರ ಪ್ರಾಬ್ಲಂ...ಹೆಚ್ಚಿಗೆ ಮಾತಾಡ್ಬೇಡಿ ಸಾರ್" ಅವಳು ಸಂದೀಪನ ಕಡೆ ನೋಡಿ ನುಡಿದಳು. ಸಂದೀಪ ಮತ್ತೆ ಕಣ್ಣುಗಳನ್ನು ಮೆಚ್ಚಿಕೊಂಡ. ಸುನೀಲ್ ಹೊರಬಂದು ಕೈಕಟ್ಟಿ ನಿಂತ. ಸಿಸ್ಟರ್ ಹೋಗಿದ್ದಳು ಕಣ್ಣು ಮುಚ್ಚಿ ಮಲಗಿದ್ದ ಸಂದೀಪ, ತಂಗಿ ಆಡಿದ ಮಾತುಗಳನ್ನೇ ಮೆಲಕು ಹಾಕಿದ. ನಿಧಾನವಾಗಿ ಎಲ್ಲ ಅರಿವಿಗೆ ಬಂದಿತ್ತು. ನಂಜುಂಡಯ್ಯ ತನಗೆ ಜನ್ಮ ಕೊಟ್ಟ ತಂದೆಯಲ್ಲ ಆದರೂ ತನ್ನನ್ನು ಸಾಕಿ ಬೆಳಸಿದ. ತಂದೆಯ ಸ್ಥಾನದಲ್ಲಿ ನಿಂತುಕೊಂಡ ವ್ಯಕ್ತಿಯನ್ನು ತಾನು ಬಹಳ ಹೀನಾಯವಾಗಿ ನಡೆಸಿಕೊಂಡೆ. ತನಗೆ ಹೀಯ್ಯಾಳಿಸಿ ಅನ್ನಲು ಯಾವ ಅಧಿಕಾರವೂ ಇರಲಿಲ್ಲ. ತನಗೆ ಈ ಮುಂಚೆಯೇ ವಿಷಯ ತಿಳಿದಿದ್ದರೇ.... ಬಹುಶಃ ಈ ದ್ವೇಷ ಹುಟ್ಟುತ್ತಿರಲಿಲ್ಲ. ಕೃತಜ್ಞತೆ ಹುಟ್ಟುತ್ತಿತ್ತೋ ಏನೋ ಎಂಥಾ ಕೆಲಸ ಮಾಡಿ ಬಿಟ್ಟೆ! ಯಾಕೆ ಹಿಂಗೆ ಮಾಡಿದೆ ಅಂತ ತಾನು ಅವನನ್ನು ಕೇಳಲೇಬೇಕು. ತಾನು ಅವನೊಡನೆ ಮಾತನಾಡಲೇಬೇಕು. ಮನೆಯಲ್ಲಿ ಎಲ್ಲರ ಎದುರಿಗೆ ಮಾತನಾಡಲು ಕಷ್ಟವಾಗುತ್ತದೆ. ಎಲ್ಲವೂ ಇಲ್ಲಿಯೇ ಈಗಲೇ ಕ್ಲಿಯರ್ ಆಗಿ ಹೋಗಲಿ" ಎಂದುಕೊಂಡು ತಂಗಿಯ ಹೆಸರು ಹಿಡಿದು ಕರೆದ. ಸುನೀಲ್ ಒಳಕ್ಕೆ ಬಂದ

"ಶಿಲ್ಪಾ ಮನೆಗೆ ಹೋದ್ಲು, ಅವಳ ಪರವಾಗಿ ನಾನು ಸಾರಿ ಕೇಳ್ತೀನಿ ಸಂದೀಪ್ ಅವಳೂ ಯಾವುದೋ ಆವೇಶದಲ್ಲಿ ಮಾತಾಡಿ ಬಿಟ್ಟಳು"

"ನೀವ್ಯಾಕೆ ಸಾರಿ ಕೇಳ್ಬೇಕು ಇದು ನಮ್ಮಿಬ್ಬರ ವಿಷಯ ಅವಳು ಮನೆಗೆ ಹೋದದ್ದು ಒಳ್ಳೇದೇ ಆಯ್ತು. ನೀವು ಮನೆಗೆ ಫೋನು ಮಾಡಿ ನಂಜುಂಡಯ್ಯನಿಗೆ ತಕ್ಷಣ ಬರುವಂತೆ ಹೇಳಿ ನಾನು ಆ ಮನುಷ್ಯನ ಹತ್ರ ಮಾತಾಡ್ಬೇಕು"

ಸುನೀಲ್ ಬೆಚ್ಚಿ ಬಿದ್ದವನಂತೆ ನೋಡಿದ. "ಏನಾಯ್ತು ಸಂದೀಪ್ ಅವರ ಹತ್ರ ಏನು ಮಾತಾಡ್ಬೇಕು? ನಂಗೇ ಹೇಳಿ, ನಾನು ಹೇಳ್ತೀನಿ."

"ಪ್ಲೀಸ್ ಸುನೀಲ್ ಇದು ನಮ್ಮಿಬ್ಬರಿಗೆ ಸೇರಿದ ವಿಷಯ....ಆ ಮನುಷ್ಯನನ್ನ ಕರೆಸಿ ಅಷ್ಟು ಮಾಡಿ ನಿಮಗಾಗದಿದ್ದರೆ, ಸಿಸ್ಟರ್‌ನ ಕರೀರಿ ನಾನು ಫೋನು ಮಾಡಿಸ್ತೀನಿ...."

"ಆಸ್ಪತ್ರೆಯ ಬಿಲ್ ಪೇ ಮಾಡಿದಾರೆ ಅಂತ ಕೋಪಾನ ಸಂದೀಪ್?"

"ಪ್ಲೀಸ್ ಸುನೀಲ್ ನೀವೂ ಚರ್ಚೆ ಮಾಡ್ಬೇಡಿ ನಿಮ್ಕೈಲಿ ಆಗುತ್ತೋ ಇಲ್ಲವೋ ಅಷ್ಟು ಹೇಳಿ" ಕಠಿಣವಾಗಿ ನುಡಿದ. ಸುನೀಲ ಮೊಬೈಲ್ ಫೊನನ್ನು ಜೇಬಿನಿಂದ ತೆಗೆದ.

"ನನಗೆ ಅವರ ನಂಬರ್ರು ಗೊತ್ತಿಲ್ಲ.... ಹೇಳ್ತೀರಾ"

"ಎಲ್ಲಿ ಕೊಡಿ, ನಾನೇ ಡಯಲ್ ಮಾಡ್ತೀನಿ" ಎಂದು ಹೇಳಿ ಫೋನನ್ನು ರಭಸವಾಗಿ ಕಿತ್ತುಕೊಂಡು ನಂಬರಿಗೆ ಫೋನು ಮಾಡಿದ 'ಹಲೋ' ಎಂದವಳು ಸಾವಿತ್ರಿ "ನಾನು ನಂಜುಂಡಯ್ಯನ ಹತ್ರ ಸ್ವಲ್ಪ ಮಾತಾಡ್ಬೇಕು" ಒರಟಾಗಿ ಹೇಳಿದ. ಆತ 'ಹಲೋ' ಎಂದರು. ನಾನು ಈಗ್ಲೇ ನಿಮ್ಮ ಹತ್ರ ಅರ್ಜೆಂಟಾಗಿ ಮಾತಾಡ್ಬೇಕು ನರ್ಸಿಂಗ್‌ಹೋಂಗೆ ಬನ್ನಿ.... ಒಬ್ಬರೇ ಬರ್ಬೇಕು" ಎಂದು ಒರಟಾಗಿ ನುಡಿದು ಲೈನ್‌ಕಟ್ ಮಾಡಿ ಮೊಬೈಲ್‌ನ್ನು ಸುನೀಲನಿಗೆ ಹಿಂತಿರುಗಿಸಿದ.

* * *

ನಂಜುಂಡಯ್ಯ ಅಚ್ಚರಿಗೊಂಡ ಸಂದೀಪ ತನ್ನನ್ನು ಬಹುವಚನದಲ್ಲಿ ಮಾತನಾಡಿಸಿ ಕರೆದಿದ್ದ. ಏಕಿರಬಹುದು? ತಾನು ಆಸ್ಪತ್ರೆಯ ಬಿಲ್ ಕಟ್ಟಿರುವುದು ಇಷ್ಟವಾಗಿಲ್ಲದಿರಬಹುದು. ನೀನ್ಯಾಕೆ ಖರ್ಚು ಮಾಡ್ದೆ ಅಂತ ಕೇಳಿದರೆ, ಏನು ಹೇಳಲಿ! ಅಲ್ಲಿ ಆಸ್ಪತ್ರೆಯಲ್ಲಿ ಎಲ್ಲರ ಎದುರಿಗೆ ಬೈಯಬಹುದು. ಗಲಾಟೆ ಮಾಡಬಹುದು ತಾನು ಹೋಗದೇ ಇರುವುದೇ ವಾಸಿ ಎಂದುಕೊಂಡ. ಆದರೆ ಆಸ್ಪತ್ರೆಯಲ್ಲಿ ಮಲಗಿರುವವನು ಕರೆದಾಗ ಹೋಗದೇ ಇರುವುದೇ ಸರಿಯಲ್ಲ. ಎಲ್ಲರೂ ತನ್ನನ್ನೇ ತಪ್ಪು ತಿಳಿದುಕೊಳ್ತಾರೆ ಎಂದು ಅನುಮಾನಿಸುತ್ತಾ ನಿಂತವನನ್ನು ಸಾವಿತ್ರಿ ಎಚ್ಚರಿಸಿದಳು.

"ಯಾರದ್ದು ಫೋನು? ಏನು ಯೋಚಿಸ್ತಿದೀರಿ?"

"ಸಂದೀಪ ಮಾತಾಡಿದ್ದು, ನನ್ನನ್ನ ಕರೆದಿದಾನೆ..."

"ಯಾಕಂತೆ? ಹುಶಾರಾಗಿದಾನೆ ತಾನೇ? ಫೋನು ಮಾಡಿ ಕೇಳಿ ಅಥವಾ ಜ್ಯೋತಿಗೆ ಹೇಳಿ ಅಲ್ಲಿ ಅವನ ಜತೇಲಿ ಯಾರಿದಾರೆ?"

"ಯಾರಿದಾರೋ ಗೊತ್ತಿಲ್ಲ ಒಬ್ಬರೇ ಬನ್ನಿ ಅಂತ ಹೇಳಿದಾನೆ. ಏನು ಮಾತನಾಡೋದು ಇದೆಯೋ.... ಆತಂಕ ಆಗುತ್ತೆ...." ಹೋಗಲೋ ಬೇಡವೋ ಅಂತ ಯೋಚಿಸ್ತಿದ್ದೆ

"ಹುಶಾರಿಲ್ಲದೋನು, ಆಸ್ಪತ್ರೆಯಲ್ಲಿರುವಾಗ ಕರೆದ್ರೆ, ಹೋಗದೇ ಇದ್ರೆ ಚೆನ್ನಾಗಿರುಲ್ಲ, ಬೇಕಾದ್ರೆ ನಾನೂ ಬರ್ತೀನಿ ಹೊರಗೇ ಇರ್ತೀನಿ"

"ಬೇಡ, ನಾನೊಬ್ನೇ ಹೋಗ್ತೀನಿ, ಅಲ್ಲಿ ಯಾರಿದಾರೆ ಅಂತ ಜ್ಯೋತೀನ ಕೇಳ್ತೀನಿ" ಎನ್ನುತ್ತಾ ಕೆಳಗಿಳಿದ ಅಷ್ಟರಲ್ಲಿ ಮನೆ ಮುಂದೆ ಆಟೋ ರಿಕ್ಷಾ ನಿಂತಿತು. ಶಿಲ್ಪಾ ಇಳಿದಳು "ಶಿಲ್ಪಾ ಎಲ್ಲಿಂದ ಬರ್ತಿದೀಯಾ? ....ಒಬ್ಬಳೇ ಬಂದ್ಯಾ?" ಕೇಳಿದ.

"ಹೂಂ, ಆಸ್ಪತ್ರೆಯಿಂದ ಬರ್ತಿದೀನಿ ಎಂದು ಹೇಳಿ ಅಲ್ಲಿ ನಿಲ್ಲದೆ ಮನೆಯ ಕಡೆ ನಡೆದವಳನ್ನು ಹಿಡಿದು ನಿಲ್ಲಿಸಿದ.

"ಏನಾಯ್ತು, ಸಂದೀಪ ಹುಶಾರಾಗಿದಾನೆ ತಾನೇ...?"

"ಹೂಂ, ಏನಾಗಿದೆ ಅವನಿಗೆ ಹಾಯಾಗಿದಾನೆ" ಎಂದು ಹೇಳಿ ತೀಕ್ಷ್ಣವಾಗಿ ಆತನ ಕಡೆ ನೋಡಿದಳು.

"ಏನೋ ಮುಚ್ಚಿಡ್ತಾ ಇದಾನೆ, ಅವನ ಜತೇಲಿ ಯಾರಿದಾರೆ? ಅವನು ಯಾಕೆ ನಂಗೆ ಫೋನು ಮಾಡಿದ್ದ?" ಅವಳಿಗೆ ಅದು ಅಚ್ಚರಿ.

"ನಂಗೇನ್ಗೊತ್ತು! ಅಲ್ಲಿ ಸುನೀಲ್ ಇದಾರೆ. ಅವರನ್ನೇ ಕೇಳಿ" ಎಂದು ಹೇಳಿ ಒಳಕ್ಕೆ ಹೋಗಿ ಬಿಟ್ಟಳು. ನಂಜುಂಡಯ್ಯ ತನಗೆ ಕಾಲ್ ಬಂದ ನಂಬರ್‌ಗೆ ತಿರುಗಿಸಿ ಕಾಲ್ ಮಾಡಿದ ಸುನೀಲ್ ಫೋನನ್ನೆತ್ತಿಕೊಂಡ.

"ಈಗ್ತಾನೆ ಸಂದೀಪ್ ಫೋನು ಮಾಡಿದ್ದ ಯಾಕೆ? ಎನಿ ಸೀರಿಯಸ್?" ಪ್ರಶ್ನಿಸಿದ. ವಾರ್ಡಿನಿಂದ ಹೊರ ಬಂದ ಸುನೀಲ್ ಉತ್ತರಿಸಿದ.

"ಅಂಥಾದ್ದೇನಿಲ್ಲ, ನಿಮ್ಮ ಹತ್ರ ಏನೋ ಮಾತಾಡ್ಬೇಕಂತೆ, ಕಾಯ್ತಿದಾರ."

"ಅದೇ ಯಾಕೆ ಅಂತ?"

"ಏನೋ ನಂಗೊತ್ತಿಲ್ಲ ಸಾರ್, ಮಾತಾಡಿದ್ರೆ ಗೊತ್ತಾಗುತ್ತೆ"

"ಅವನ ಮೂಡ್ ಹೇಗಿದೆ? ಅಪ್ಸೆಟ್ ಆಗಿರುವಂತೆ ಅನ್ಸುತ್ತಾ?"

"ಏನೋ ಗೊತ್ತಿಲ್ಲ ಸಾರ್.... ಬರ್ತಿದೀರಿ ಅಲ್ವಾ ಸಾರ್....?"

"ಹೂಂ ಸರಿ, ಬರ್ತಿದೀನಿ, ಆದರೆ ಈ ವಿಷಯವನ್ನು ಅವನಿಗೆ ತಿಳಿಸ್ಬೇಡಿ.... ಬೇರೆ ಯಾರ್ಗೂ ಹೇಳ್ಬೇಡಿ"

"ಆಯ್ತು ಸಾರ್..."

"ಪುಷ್ಪಾ ಮಗಳನ್ನು ಕರೆದ. ಅವಳು ಗಾಬರಿಯಿಂದ ಆಚೆಗೆ ಬಂದಳು"

ನಾನು ಆಸ್ಪತ್ರೆಗೆ ಹೋಗ್ತಿದೀನಿ. ಸಂದೀಪ, ಒಬ್ಬನೇ ಬನ್ನಿ ಅಂತ ಘೋನು ಮಾಡಿ ಕರೆದಿದಾನೆ. ನೀವ್ಯಾರೂ ಆತಂಕ ಪಟ್ಕೋಬೇಡಿ.... ನಾನೇ ಫೋನು ಮಾಡ್ತೀನಿ, ಅಲ್ಲಿವರೆಗೂ ಯಾರೂ ಫೋನು ಮಾಡ್ಬೇಡಿ" ಎಂದು ಹೇಳಿ ಗೇಟು ತೆಗೆದು ಆಚೆಗೆ ಬಂದ. ಪುಷ್ಪಾಳ ಹಿಂದೆ ನಿಂತಿದ್ದ ಜ್ಯೋತಿ ಗೋಡೆಗೆ ಆತು ನಿಂತಳು.

"ಶಿಲ್ಪಾ, ಸಂದೀಪ ಏನಾದ್ರೂ ಹೇಳಿದ್ನ? ಯಾಕೆ ಕರೆದಿದಾನೆ ಅಪ್ಪನ್ನ?"

"ನಂಗೊತ್ತಿಲ್ಲ, ನಾನು ಅಲ್ಲಿಂದ ಹೊರಟಾಗ ಅವನು ಮಲಗಿದ್ದ ಬೇಕಾದ್ರೆ ಸುನೀಲ್ ಅಲ್ಲೇ ಇದಾರೆ ಕೇಳ್ಲಾ?"

"ಬೇಡ ಬಿಡು" ಎಂದು ಹೇಳಿದಳು ಮೂವರ ಮುಖವೂ ಕಳಾಹೀನಾವಾಗಿತ್ತು.

* * *

ಸುನೀಲನ ಜತೆಯಲ್ಲಿ ವಾರ್ಡಿನೊಳಗೆ ಬಂದ ನಂಜುಂಡಯ್ಯನನ್ನು ನೋಡಿ, ಸಂದೀಪ ಎದ್ದು ಕುಳಿತ. 'ಬನ್ನಿ' ಎಂದು ಕರೆಯದಿದ್ದರೂ ನಂಜುಂಡಯ್ಯ ಮಂಚದ ಬಳಿಗೆ ಬಂದರು 'ಹೇಗಿದೀಯಾ ಸಂದೀಪ?' ತಡೆ ತಡೆದು ಕೇಳಿದರು.

"ಮುಂಚೆ ಹೇಗಿದ್ನೋ ಹಾಗೇ ಇದೀನಿ ಅದಿರ್‍ಲಿ, ನೀವ್ಯಾಕೆ ಹೀಗೆ ಮಾಡಿದ್ದು? ನಂಜುಂಡಯ್ಯ ಸುನೀಲನ ಕಡೆ ನೋಡಿದ "ಸುನೀಲ್ ನೀವು ಸ್ವಲ್ಪ ಹೊರಗೆ ಇರಿ ನಾನು ಇವರ ಹತ್ರ ಮುಖ್ಯವಾದ ವಿಷಯ ಮಾತಾಡ್ಬೇಕು" ಸುನೀಲ್ ಇಬ್ಬರ ಕಡೆ ವಿಚಿತ್ರವಾಗಿ ನೋಡಿ ಹೊರಕ್ಕೆ ನಡೆದ.

"ನನ್ನ ಆಸ್ಪತ್ರೆ ಖರ್ಚಿನ ಬಿಲ್‌ನ ನೀವು ಕೊಡುವ ಅವಶ್ಯಕತೆ ಏನಿತ್ತು? ಯಾಕೆ ಕೊಟ್ರಿ?" ಈ ಪ್ರಶ್ನೆಯನ್ನು ಆತ ನಿರೀಕ್ಷಿಸಿದ್ದರೂ, ತಕ್ಷಣಕ್ಕೆ ಉತ್ತರ ಹೊಳೆಯಲಿಲ್ಲ. ನಿಮ್ಮನ್ನೇ ಕೇಳ್ತಿರೋದು, ನನಗೋಸ್ಕರ ಯಾಕೆ ಖರ್ಚು ಮಾಡಿದ್ರಿ?"

"ನೀನು ನನ್ನ ಮಗ, ಮಗನಿಗೋಸ್ಕರ ಮಾಡ್ದೆ."

"ಈ ಮುಂಚೆ ನನಗಾಗಿ ಹಣದ ಸಹಾಯವನ್ನು ಎಂದೂ ಮಾಡದವರು ನೀವು ಈಗ ಯಾಕೆ ಮಾಡ್ಬೇಕಾಗಿತ್ತು?"

"ಇದು ತಪ್ಪೇ?"

"ಹೂಂ, ತಪ್ಪೇಯ, ನಾನು ನಿಮ್ಮ ಸ್ವಂತ ಮಗನೇ ಅಲ್ಲದಿರುವಾಗ, ಈಗ ಖರ್ಚುಮಾಡಿ, ಎಲ್ಲರ ಕಣ್ಣಲ್ಲಿ ದೊಡ್ಡ ವ್ಯಕ್ತಿಯಾಗುವ ಆಸೆ ಅಲ್ವಾ?"

"ಹಾಗೇನಿಲ್ಲ.... ಯಾರನ್ನೇಕೆ ಮೆಚ್ಚಿಸ್ಬೇಕು ನಾನು? ಇದೆಂತಹ ಪ್ರಶ್ನೆ?

ನನ್ನ ಮಗನಲ್ಲ ಅಂತ ಏನೇನೋ ಯಾಕೆ ಮಾತಾಡ್ತೀಯ?"

"ನನಗೆ ಈಗ ನಿಜ ಎಲ್ಲಾ ಗೊತ್ತಾಗಿದೆ. ಏನನ್ನು ಮುಚ್ಚಿಡುವ ಪ್ರಯತ್ನ ಮಾಡ್ಬೇಡಿ, ನಿಮ್ಮ ಋಣದಲ್ಲಿ ಬದುಕಿರುವ ಆಸೆ ನನಗಿಲ್ಲ, ಒಂದಲ್ಲ ಒಂದು ದಿನ ನಿಮ್ಮ ಋಣ ತೀರಿಸ್ತೀನಿ. ನನಗೆ ಸ್ವಲ್ಪ ಸಮಯಬೇಕು"

"ಏನೇನೊ ಆಡ್ಬೇಡ, ನನಗೆ ನೋವಾಗ್ತಿದೆ...."

"ನಿಜ ತಿಳಿದು ನನ್ನ ಮನಸ್ಸಿಗೆ ಎಷ್ಟು ನೋವಾಯ್ತು ಅಂತ ನಿಮಗೇನಾದ್ರೂ ಗೊತ್ತಾಗಿದೆಯೋ? ಈ ಮೊದ್ಲೇ ಈ ವಿಷಯಗಳನ್ನು ನನಗ್ಯಾಕೆ ತಿಳಿಸ್ಲಿಲ್ಲ, ಆಗ ನಮ್ಮಿಬ್ಬರ ಮಧ್ಯೆ ಈ ಮನಸ್ತಾಪ ಖಂಡಿತಾ ಇರ್ತಿರ್‍ಲಿಲ್ಲ."

"ನೀನು ಏನು ಹೇಳ್ತಿದೀಯ ಅಂತ ನಂಗೆ ಅರ್ಥ ಆಗ್ತಿಲ್ಲ, ಈಗ ನಿನ್ನ ಮನಃಸ್ಥಿತಿಯೂ ಸರಿಯಾಗಿಲ್ಲ, ದೇಹಸ್ಥಿತಿಯೂ ಸರಿಯಾಗಿಲ್ಲ ಇಂಜೆಕ್ಷನ್, ಡ್ರಿಪ್‌ಗಳ ಪರಿಣಾಮಗಳಿಂದ ಏನೇನೋ ಮಾತಾಡ್ತಿದೀಯ.... ಈಗ ರೆಸ್ಟ್ ತಗೋ, ನಾಳೆ ಡಿಸ್ಚಾರ್ಜ ಮಾಡ್ತಾರಂತೆ, ಮನೇಲಿ ನಿಧಾನವಾಗಿ ಮಾತ ನಾಡೋಣ" ಸಂದೀಪ ಸುಮ್ಮನಾಗಲಿಲ್ಲ.

"ಈ ಮನೇಲಿ ಎಲ್ಲರ ಎದುರಿಗೆ ನಾನು ನಿಮ್ಮ ಹತ್ತಿರ ಮಾತ ನಾಡುಕ್ಕಾಗುಲ್ಲ. ಅಲ್ಲದೇ ಆ ಮನೆಯಲ್ಲಿ ನನಗೆ ಯಾವ ಅಧಿಕಾರವೂ ಇಲ್ಲವಲ್ಲ."

"ಹಕ್ಕು ಅಧಿಕಾರ ಅಂತ ಮಾತಾಡಬೇಡ ಹಾಗೆ ನೋಡಿದ್ರೆ ನನಗೆ ಅಲ್ಲಿ ಯಾವ ಅಧಿಕಾರ ಇಲ್ಲ. ನಿಮ್ಮ ಅಮ್ಮನಿಗೆ ಮಾತು ಕೊಟ್ಟಂತೆ ನಡೆದು ಕೊಂಡೆ. ಈಗ ನಿನಗೆ ನಾನು ಬೇಕಿಲ್ಲದೇ ಇದ್ದರೆ ನೇರವಾಗಿ ಹೇಳಿಬಿಡು. ನಾನೇ ಹೊರಟುಹೋಗ್ತೀನಿ, ಆದರೆ ಶಿಲ್ಪನ ಮದುವೆಗೆ ಇದರಿಂದ ಸಮಸ್ಯೆ ಉಂಟಾಗಬಹುದು ಪರಸ್ಪರ ಇಷ್ಟವಿಲ್ಲದಿದ್ದರೂ, ಹೊರಗಿನವರು ಬೆರಳೆತ್ತಿ ತೋರಬಾರದು ಅಂತ ನನ್ನಾಸೆ"

"ಸರಿ, ಶಿಲ್ಪಾ ತನ್ನ ಗಂಡನಾಗುವವನನ್ನು ತಾನೇ ಆಯ್ಕೆ ಮಾಡಿಕೊಂಡಿದಾಳೆ. ಆದಷ್ಟು ಬೇಗ ಅವಳ ಮದುವೆ ಮಾಡಿಬಿಡಿ. ಅಮ್ಮನಿಗೆ ಮಾತು ಕೊಟ್ಟಿದ್ದರೆ, ಧಾರೆಯನ್ನು ನೀವೇ ಎರೆದುಕೊಡಿ ಇಲ್ಲದಿದ್ದರೆ ಅದನ್ನೂ ನಾನೇ ಮಾಡ್ತೀನಿ."

" ನಾನೇ ಅವಳ ತಂದೆ, ನಾನಿನ್ನೂ ಬದುಕಿದೀನಿ. ನಾವೇ ಧಾರೆ ಎರೆದು ಕೊಡ್ತೀವಿ. ನಿಂಗ್ಯಾಕೆ ಸಂಶಯ..?"

"ಏನೇನೋ ಸಂಶಯಗಳು ನನಗೆ ಇದ್ದವು. ಈಗ ಸ್ವಲ್ಪ ಕ್ಲಿಯರ್ ಆಗಿದೆ. ಗೊಂದಲದಲ್ಲಿ ಇರುವವರು ನೀವೇ. ನಿಮಗೆ ಈ ಗೊಂದಲದಿಂದ

ಹೊರಕ್ಕೆ ಹೋಗಬೇಕು ಅಂತ ಅನ್ನಿಸ್ತಿದೆ... ಅದಕ್ಕೇ ತಬ್ಬಿಬ್ಬಾಗಿ ಮಾತಾಡ್ತಿದ್ದೀರಿ. ನೀವು ಹೋಗಬೇಕು ಅಂತ ಇದ್ದರೆ, ನಾನಂತೂ ತಡೆಯುಲ್ಲ, ಆದರೆ ಒಂದು ಕಂಡೀಷನ್ ನಿಮ್ಮ ಹೊಸ ಪತ್ನಿ ನಿಮ್ಮ ಜೊತೆ ಬರುವುದಿಲ್ಲ, ಅವರನ್ನು ಕರೆದೊಯ್ಯುವಂತಿಲ್ಲ" ಚೇಷ್ಟೆಯ ಧ್ವನಿಯಲ್ಲಿ ಹೇಳಿದ್ದು ಆತನಿಗೆ ಭಾಸವಾಗಲಿಲ್ಲ.

"ಸಾವಿತ್ರಿ ನನ್ನ ಪತ್ನಿ ಅವಳು ನನ್ನ ಜತೆಗೆ ಬರದೇ, ಇನ್ನೆಲ್ಲಿ ಇರ್ತಾಳೆ. ಅವಳು ನನ್ನ ಜೊತೆಯಲ್ಲಿ ಬರುವುದೇ ಧರ್ಮ..."

"ಸಾವಿತ್ರಿ ನನ್ನ ಚಿಕ್ಕಮ್ಮ.... ಚಿಕ್ಕಮ್ಮನನ್ನು ನೋಡಿಕೊಳ್ಳುವುದು ನನ್ನ ಕರ್ತವ್ಯ..."

"ಹಾಗಂತ ಯಾರು ಹೇಳಿದ್ರು? ನಾನೇ ನಿನ್ನ ಸ್ವಂತ ಅಪ್ಪನಲ್ಲ, ಅಂತಾದ್ರಲ್ಲಿ ನನ್ನ ಎರಡನೇ ಪತ್ನಿ ನಿನಗೆ ಮಲತಾಯಿ... ಇಲ್ಲಿ ನಿನ್ನ ಕರ್ತವ್ಯ ಏನಿದೆ?"

"ಇನ್ನು ನಿಮ್ಮ ನಾಟಕ ಸಾಕು, ನನಗೆ ಎಲ್ಲಾ ವಿಷಯ ತಿಳಿದಿದೆ, ನೀವು ನನ್ನ ಸ್ವಂತ ತಂದೆಯಂತೆ ಸಾಕಿ ಬೆಳೆಸಿದರೂ, ನಾನು ಮಲಮಗನಂತೆ ನಿಮ್ಮೊಂದಿಗೆ ವರ್ತಿಸಿದೆ, ಅಮ್ಮನಿಗಾಗಿ, ನಮ್ಮಗಳಿಗಾಗಿ, ನೀವು ನಿಮ್ಮ ಪ್ರೀತಿಯನ್ನೇ ತ್ಯಾಗ ಮಾಡಿದ್ದು ತಿಳಿದಿದೆ, ನಾನು ಅವಿವೇಕಿಯಾಗಿ, ಏನೇನೋ ಆಡಿ ಬಿಟ್ಟಿದ್ದೆನೆ. ಈಗ ನೀವು ನನ್ನನ್ನು ಕ್ಷಮಿಸಿದರೂ ಎಲ್ಲವನ್ನು ಮರೆಯುವುದು ಕಷ್ಟವೇ, ಆದರೂ ಕೈ ಮುಗಿದು, ಬಾಯಿ ತೆರೆದು, ಕ್ಷಮೆ ಕೇಳಿಕೊಳ್ತೀನಿ, ಸಾವಿತ್ರಿ ಯಾರೆಂದು ತಿಳಿಯದೇ ಅಗೌರವವಾಗಿ ಮಾತಾಡಿದೆ. ಈಗ ನೀವು ನನ್ನ ಸ್ವಂತ ತಂದೆ ಅಲ್ಲ ಎನ್ನುವ ನಿಜ ತಿಳಿದರೂ, ಚಿಕ್ಕಮ್ಮನ ಗಂಡ ಎನ್ನುವುದು ಸುಳ್ಳಲ್ಲ.... ಯವುದೋ ಆಸೆಯಿಂದ ಹೀಗೆಲ್ಲಾ ಮಾತಾಡ್ತಿದ್ದೀನಿ ಅಂತ ಭಾವಿಸ್ಬೇಡಿ ನನ್ನ ತಪ್ಪಿನ ಅರಿವು ನನಗಾಗಿದೆ. ನನ್ನ ಬಗ್ಗೆಯೇ ನನಗೆ ಹೇಸಿಗೆ ಎನಿಸುತ್ತೆ. ಆದರೆ, ಇನ್ನು ಮುಂದೆ ನಿಮ್ಮ ಸ್ವಂತಮಗನಂತೆ ಹೊಂದಿಕೊಂಡಿರಲು ಪ್ರಯತ್ನಿಸುತ್ತೀನಿ. ನನ್ನದೊಂದು ರಿಕ್ವೆಸ್ಟ್ ಇಲ್ಲಿ ನಮ್ಮಿಬ್ಬರ ನಡುವೆ ನಡೆದ ಮಾತನ್ನು ನೀವು ಯಾರಿಗೂ ಹೇಳಕೂಡದು. ಇಲ್ಲದಿದ್ದರೆ ನನಗೆ ಕಷ್ಟ ಆಗುತ್ತೆ."

"ಇಲ್ಲ ನಾನು ಯಾರಿಗೂ ಹೇಳಲ್ಲ, ನನ್ನನ್ನ ನಂಬು, ಆದರೆ ಈ ವಿಷಯ ನಿನಗೆ ಹೇಗೆ ಗೊತ್ತಾಯ್ತು, ಅಂತ ನೀನು ಹೇಳಲೇ ಇಲ್ಲ"

"ಮುಂದೆ ಎಂದಾದರೂ ತಾನಾಗಿಯೇ ಗೊತ್ತಾಗಬಹುದು... ಈಗ ಬೇಡ ಬಿಡಿ"

"ನನಗೆ ಈಗಲೂ ವಿಶ್ವಾಸ ಬರುತ್ತಿಲ್ಲ. ನೆನ್ನೆಗೂ, ಇಂದಿಗೂ ಎಷ್ಟು ವ್ಯತ್ಯಾಸ? ಇದು ಸಾಧ್ಯವಾ? ಒಂದೇ ದಿನದಲ್ಲಿ ಎಂಥಾ ಬದಲಾವಣೆ?"

"ನಾನು ಬದಲಾಗಿದೀನಿ ಅಂತ ಅಂದ್ಕೊಂಡಿದೀರಿ.... ಇಲ್ಲಿ ನಾನು ನಿಮ್ಮನ್ನು ಬದಲು ಮಾಡಿದೀನಿ ನಾನು ಆಗಲೂ ನಿಮ್ಮ ಸ್ವಂತ ಮಗನಾಗಿರಲಿಲ್ಲ. ಈಗಲೂ ಸ್ವಂತ ಮಗನಾಗಿಲ್ಲ, ಆದರೆ, ನೀವು ಅಪ್ಪನ ಸ್ಥಾನದಿಂದ ಚಿಕ್ಕಪ್ಪನ ಸ್ಥಾನಕ್ಕೆ ಬದಲಾಗಿದೀರಿ. ಹೌದಲ್ವಾ! ಅವನು ನಕ್ಕಾಗ, ಆತನಿಗೆ ನಗಬೇಕೆನಿಸಲಿಲ್ಲ. ಸಂಬಂಧಗಳ ರಹಸ್ಯ ಹೊರಬಿದ್ದದ್ದು ಆತನಿಗೆ ಖುಷಿಯನ್ನೇನೂ ಕೊಟ್ಟಿರಲಿಲ್ಲ. ಬರೀ ಈ ಬಲವಂತದ ಸಂಬಂಧಗಳಲ್ಲೇ ಬದುಕ ಬೇಕಾಯಿತಲ್ಲ ಅಂತೆನ್ನಿಸಿ ದರೂ, ಬಲವಂತವಾದರೂ ಸರಿ, ಇವನು ಸಾವಿತ್ರಿಯನ್ನು ಒಪ್ಪಿಕೊಂಡಿದಾನೆ, ಇನ್ನು ಮುಂದಾದರೂ, ಕಸಿವಿಸಿ, ಗಲಾಟೆ, ರಂಪ ರದ್ಧಾಂತ ಕಡಿಮೆಯಾಗ ಬಹುದೇನೋ ಅಂತಂದುಕೊಂಡಾಗ ಸ್ವಲ್ಪ ಸಮಾಧಾನವಾಗಿತ್ತು.

ತನ್ನ ಆದರ್ಶಗಳನ್ನು ಹೊಗಳಿ ಅಟ್ಟಕೇರಿಸಿರಲಿಲ್ಲ. ಸಹಾಯವನ್ನು ಮೆಚ್ಚಿ ಕೃತಜ್ಞತೆಯನ್ನು ತೋರಿರಲಿಲ್ಲ. ಇವನ ಜಾಯಮಾನವೇ ಇಷ್ಟು. ತಾನು ಇವನಿಂದ ಇನ್ನೇನನ್ನು ಅಪೇಕ್ಷಿಸುವಂತೆ ಇಲ್ಲ.

"ಏನು ಯೋಚಿಸ್ತಿದೀರಿ! ಮನಸ್ನಲ್ಲೇ ಬೈಯುತ್ತಿದೀರಾ!" ಅವನು ನಗುತ್ತಾ ಕೇಳಿದಾಗ ಇಲ್ಲ ಎನ್ನುವಂತೆ ತಲೆಯಾಡಿಸಿದ. "ನನ್ನ ಹಾಗೇ ನೀವೂ ಗೊಂದಲದಲ್ಲಿ ಇದೀರಿ, ನಾನೂ ತಟ್ಟನೆ ಬದಲಾಗುಕ್ಕೆ ಆಗಿಲ್ಲ, ನೀವೂ ಇನ್ನೂ ಅದೇ ಶಾಕ್‌ನಲ್ಲಿದೀರಿ, ಸ್ವಲ್ಪ ಮಟ್ಟಿನ ಪರಿವರ್ತನೆಗಾಗಿ ನಾನು ನರ್ಸಿಂಗ್ ಹೋಂ ಸೇರಬೇಕಾಯಿತು. ಒಂದು ತರಹ ಸ್ವಲ್ಪ ಜ್ಞಾನೋದಯ ವಾಗಿರಬಹುದು. ಆದರೆ ನಾನು ಒಳ್ಳೆಯವನು ಅಂತ ಭಾವಿಸಬೇಡಿ, ಬಹುಶಃ ವಂಶ ಪಾರಂಪರ್ಯವಾಗಿ ಬಂದ ಗುಣ ಇರಬಹುದು ಆದರೆ ಒಂದು ಮಾತ್ರ ಹೇಳ್ತೀನಿ ಇನ್ನು ಮುಂದೆ ನಾನು ತೊಂದರೆ ಕೊಡುವುದಿಲ್ಲ. ಹಿಂಸೆ ಮಾಡು ವುದಿಲ್ಲ ಇವನೊಬ್ಬ ಅಯೋಗ್ಯ ಅಂತ ಅಂದ್ಕೊಂಡು ಸಹಿಸಿಕೊಂಡಿದೀರಿ, ಅದಕ್ಕೆ ಥ್ಯಾಂಕ್ಸ್"

"ಹೀಗೆಲ್ಲಾ ಮಾತಾಡ್ಬೇಡ ನೀನು, ನಿನ್ನನ್ನ ಸಾಕಿ ಬೆಳೆಸಿದ ಮೇಲೆ, ನಾನು ಯಾವಾಗಲೂ ನಿನ್ನ ತಂದೆಯೇ ನೀನು ಯಾವಾಗಲೂ ನನ್ನ ಮಗನೇ"

"ನಿಮ್ಮದು ದೊಡ್ಡ ಗುಣ ಅದನ್ನು ತಿಳಿದಕೊಳ್ಳಲು ನಾನೆಂದೂ ಪ್ರಯತ್ನಿಸಲೇ ಇಲ್ಲ. ನನ್ನ ಬಗ್ಗೆಯೇ ನನಗೆ ಅಸಹ್ಯವಾಗ್ತಿದೆ"

"ಸಾಕು ಸಂದೀಪ್ ಇನ್ನೂ ನಿನ್ನನ್ನೇ ನೀನು ಎಷ್ಟು ಅಂದುಕೊಳ್ತೀಯಾ ಏನೋ ಕೆಟ್ಟಗಳಿಗೆ ಬಿರುಕು ಮೂಡಿತ್ತು. ಇನ್ನು ಮುಂದೆ ಹಾಗಾಗದಂತೆ ಎಚ್ಚರವಹಿಸಿದರೆ ಸಾಕು.... ನಾನು ಬೆಳಿಗ್ಗೆ ಬರ್ತೀನಿ ಈಗ ನೀನು ರೆಸ್ಟ್ ತಗೋ.... ಬೇಕೋ ಬೇಡವೋ ಎಷ್ಟೊಂದು ಮಾತಾಡಿದೀಯ. ಡಾಕ್ಟರಿಗೆ

ತಿಳಿದರೆ ಬೈತಾರೆ"

"ನಾನು ಸರಿಯಾಗಿದೀನಿ ಅಂತ ಡಾಕ್ಟರು ಸರ್ಟಿಫೈ ಮಾಡಿದಾರೆ. ಅಲ್ಲದೆ ಮಾತಾಡಿ ನಾನು ನಿರಾಳವಾಗಿದೀನಿ ಯೋಚನೆ ಮಾಡ್ಬೇಡಿ" ಮೆಲುವಾಗಿ ನಕ್ಕ

"ಸರಿ ದೇವರು ಒಳ್ಳೇದು ಮಾಡಲಿ ಗುಡ್‌ನೈಟ್" ಎಂದು ಹೇಳಿ ಆತ ಹೊರಗೆ ಬಂದ. ಸಂದೀಪನಲ್ಲಿ ಸ್ವಲ್ಪ ಮಾರ್ಪಾಡು ಕಂಡಿದೆ ಎನಿಸಿದರೂ ಪೂರ್ಣ ನಂಬಿಕೆ ಹುಟ್ಟಲಿಲ್ಲ. ತನ್ನನ್ನು ಎಷ್ಟು ಹೀನಾಯವಾಗಿ ಕಾಣುತ್ತಿದ್ದ. ಮುಂದೇನು!" ಎದುರಿಗೆ ಸುನೀಲ್ ಕಂಡ "ನಾನೀಗ ಮನೆಗೆ ಹೋಗ್ತಾ ಇದೀನಿ ಕ್ಯಾಂಟೀನಿಂದ ಊಟ ತರಿಸಿಕೊಡು, ನೀನೂ ಊಟ ಮಾಡು ದುಡ್ಡೇನಾದ್ರೂ ಬೇಕಾಗಿತ್ತಾ"

"ಬೇಡಾ ಸಾರ್, ನನ್ಹತ್ರ ಇದೆ. ಬೆಳಿಗ್ಗೆ ಡಿಸ್ಚಾರ್ಜ ಮಾಡ್ತಾರಂತೆ ಜ್ಯೋತಿ ಬರ್ತಾಳೆ ಅಲ್ವಾ?"

"ಇಲ್ಲ ನಾನೇ ಬರ್ತೀನಿ, ಹಣ ಕಟ್ಟಬೇಕು" ಎಂದು ಹೇಳಿ ಅವನ ಬೆನ್ನು ತಟ್ಟಿ ಮುಂದೆ ನಡೆದ ಸುನೀಲ ಅವರಿಬ್ಬರ ಮಾತುಗಳನ್ನು ಕೇಳಿಸಿಕೊಂಡಿದ್ದ ಸಂದೀಪ ಬದಲಾಗಲು ಸಾಧ್ಯವೇ? ಇದ್ಯಾವ ನಾಟಕಕ್ಕೆ ಪೀಠಿಕೆ ಅಂತ ಅವನಿಗೂ ಅನ್ನಿಸದೇ ಇರಲಿಲ್ಲ. ಏನಾದರೂ ಮಾಡಿಕೊಳ್ಳಲಿ, ಇದು, ನನ್ನ ಮನೆಯ ವಿಷಯವಲ್ಲ, ಎಂದು ತನಗೆ ತಾನೇ ಸಮಾಧಾನ ಹೇಳಿಕೊಂಡು ಒಳಕ್ಕೆ ಬಂದ. ಸಂದೀಪ ಗೆಲುವಾಗಿ ಕುಳಿತಿದ್ದ. ಸುನೀಲ್‌ನ ಕಡೆ ನೋಡಿ ಮುಗುಳ್ನಕ್ಕ.

"ನಿಮಗೂ ನನ್ನ ವರ್ತನೆಯಿಂದ ಆಶ್ಚರ್ಯವಾಗ್ತಿರಬಹುದು ಅಲ್ವಾ? ನಾನು ತಪ್ಪು ಮಾಡಿದೀನಿ ಅಂತ ನಂಗೆ ಅರ್ಥವಾಗ್ತಿದೆ. ಅದನ್ನು ಸರಿಪಡಿಸಿಕೊಳ್ಳಲು ಖಂಡಿತಾ ಪ್ರಯತ್ನ ಪಡ್ತೀನಿ. ಆದರೆ, ಎಲ್ಲರೂ ಮನೆ, ಆಸ್ತಿಯ ಕಾರಣದಿಂದ ಬದಲಾಗಿದಾನೆ ಅಂತ ಭಾವಿಸಬಾರದು. ನಾನು ಕಪಟಿ ಅಲ್ಲ, ಆದರೆ ಒರಟ ಬಹುಶಃ ನನ್ನ ಹುಟ್ಟುಗುಣ.... ಜ್ಯೋತಿಗೂ ಮಾನಸಿಕವಾಗಿ ಬಹಳ ಹಿಂಸೆ ಕೊಟ್ಟಿದೀನಿ....ಆದರೆ ಜ್ಯೋತಿ ಒಳ್ಳೆಯವಳೇ, ಅದನ್ನೆಲ್ಲ ಮನಸ್ನಲ್ಲಿಟ್ಟುಕೊಳ್ಳುವುದಿಲ್ಲ.

"ನಿಮ್ಮ ಮನೇಲಿ ಎಲ್ರೂ ಒಳ್ಳೆಯವರೇ ಸಂದೀಪ, ಈಗ ಎಲ್ಲಾ ಸರಿಹೋಯ್ತಲ್ಲ, ಇನ್ನ್ಯಾಕೆ ವರಿ? ನಾಳೆ ಮನೆಗೆ ಬರ್ತೀರಲ್ಲ, ಎಲ್ಲರೂ ಮೊದಲಿನಂತೆಯೇ ನಿಮ್ಮನ್ನು ಮಾತಾಡಿಸ್ತಾರೆ.... ಆತಂಕ ಬೇಡ ಊಟಕ್ಕೆ ಆರ್ಡ್‌ರ್ ಕೊಡ್ತೀನಿ. ಊಟ ಮಾಡಿ ಮಲಕ್ಕೊಳ್ಳಿ...." ಎನ್ನುತ್ತಾ ಫೋನನ್ನೆತ್ತಿಕೊಂಡ.

"ನಿಮಗೆ ತುಂಭಾ ಥ್ಯಾಂಕ್ಸ್ ಸುನೀಲ್.... ನಿಮಗೆ ಏನು ಕೆಲಸ ಇತ್ತೋ ಏನೋ ಮೂರು ದಿನಗಳಿಂದ ಇಲ್ಲೇ ಇದೀರಿ.... ಇದ್ಯಾವುದನ್ನು ನಿಮ್ಮ ಮನೇಲಿ ಹೇಳ್ಬೇಡಿ ಪ್ಲೀಸ್, ಎಲ್ರೂ ನಕ್ಕೋತಾರೆ ಅಷ್ಟೇ. ನಾನು ಜ್ಯೋತಿ ಹತ್ತಿರ ಮಾತಾಡ್ಬೇಕು, ಸ್ವಲ್ಪ ಫೋನು ಕೊಡಿ" ಸುನೀಲ್ ಊಟಕ್ಕೆ ಆರ್ಡ್‌ರ್ ಕೊಟ್ಟು, ತಾನು ಊಟ ಮಾಡಿ ಬರುತ್ತೇನೆಂದು ಕ್ಯಾಂಟೀನಿನ ಕಡೆ ಹೊರಟ. ಸಂದೀಪ ಜ್ಯೋತಿಯ ನಂಬರ್ರಿಗೆ ಡಯಲ್ ಮಾಡಿದ.

ಅಡುಗೆ ಮನೆಯಲ್ಲಿದ್ದ ಜ್ಯೋತಿ 'ಹಲೋ' ಎಂದಳು. ಸಂದೀಪ ಸಂಕ್ಷಿಪ್ತವಾಗಿ, ನಡೆದುದನ್ನು ತಿಳಿಸಿದ. "ನಾಳೆ ಹಬ್ಬದ ಅಡುಗೆ ಮಾಡು ಜ್ಯೋತಿ ಎಲ್ಲರೂ ಒಟ್ಟಿಗೇ ಕೂತು ಊಟ ಮಾಡೋಣ ಅಪ್ಪನಿಗೆ ಇಷ್ಟವಾದ ಅಡುಗೆಯನ್ನೇ ಮಾಡು ನಿನ್ನ ಕೈಯಾರೆ ಬಡಿಸು. ನನ್ನದೇನೂ ಆಕ್ಷೇಪಣೆ ಇಲ್ಲ" ಎಂದ.

"ಅವರುಗಳು ನಾನು ಕರೆದ್ರೆ ಬರ್ತಾರೋ ಇಲ್ವೋ, ನೀವೇ ಹೇಳಿ. ಆಸ್ಪತ್ರೆ ಬಿಲ್ ಹಣಕ್ಕೆ ಏನು ಮಾಡಲಿ? ನಂಗೆ ಅದೇ ಚಿಂತೆಯಾಗಿದೆ" ಎಂದಳು

"ಕೊಡುವ ಅಪ್ಪನು ಇರುವಾಗ ಬಿಡು ಬಿಡು ಚಿಂತೆಯನು" ಎಂದ ಹಗುರವಾಗಿ ನಗುತ್ತಾ

"ಇಷ್ಟೆಲ್ಲಾ ಹಗರಣವಾಗಿದೆ, ಅವರನ್ನು ಮತ್ತೆ ಮತ್ತೆ ಹೇಗೆ ಕೇಳೊದು?

"ಕೇಳೋದೇನೂ ಬೇಡ, ಅವರಿಗೆ ನನ್ನ ಸ್ಥಿತಿ ಅರ್ಥವಾಗಿದೆ. ಅವರೇ ಡಿಸ್ಚಾರ್ಜ ಮಾಡಿಸ್ಕೊಂಡು ಕರ್ಕೊಂಡು ಹೋಗ್ತಾರಂತೆ. ಮುಂದೆ ಅನುಕೂಲ ವಾದಾಗ ಎಲ್ಲವನ್ನು ತೀರಿಸಿಬಿಡೋಣ ಅದಕ್ಕೇ ಹೇಳಿದ್ದು ಒಳ್ಳೆಯ ಅಡುಗೆ ಮಾಡು ಅಂತ."

"ಆದ್ರೂ ನಂಗ್ಯಾಕೋ ಹೀನಾಯ ಅನ್ನಿಸುತ್ತೆ...."

"ಈಗ ಹೀನಾಯ ಪಟ್ಕೊಂಡ್ರೆ ಬದುಕುಕ್ಕೆ ಆಗಲ್ಲ, ಅವರು ನನ್ನ ಸ್ವಂತ ತಂದೆ ಅಲ್ಲ ನಿಜ ಆದರೆ ಸಾಕಿ ಬೆಳೆಸಿದಾರೆ. ಆ ಮಮತೆ ಅವರಲ್ಲಿದೆ. ಅಲ್ಲದೇ ಸಾವಿತ್ರಿ ಕೂಡ ಹೊರಗಿನವರಲ್ಲ ಎಲ್ಲರೂ ಒಂದಾಗಿ ಬಾಳೋಣ, ಅದಕ್ಕೆ ನಿನ್ನ ಸಹಕಾರ ಬೇಕು"

"ನಾನು ಎಂದೂ ಬೇಡ ಅಂದಿರ್ಲಿಲ್ಲ ಸಂದೀಪ್, ನನಗೆ ಅದೇ ಆಸೆ ಇತ್ತು...ಆದರೆ"

"ಆಗ ಬೇಡ ಎಂದವನು ನಾನೇ... ಆದರೆ ಇನ್ನು ಮುಂದೆ ಹಾಗಾಗುಲ್ಲ ನಾನು ಶ್ರವಣಕುಮಾರನಾಗುವುದು ಸಾಧ್ಯವಿಲ್ಲ. ಆದರೆ, ಒಳ್ಳೆಯ ಮಗನಾಗಲು

ಖಂಡಿತಾ ಪ್ರಯತ್ನ ಪಡ್ತೀನಿ ಪ್ರಾಮಿಸ್...."

"ನಿಮ್ಮ ಊಟ ಆಯ್ತಾ? ಸುನೀಲ್ ಅಲ್ಲೇ ಇದಾನಾ?"

"ಇಲ್ಲ, ನಂಗೆ ವಾರ್ಡಿಗೆ ಊಟ ತಂದುಕೊಡ್ತಾರೆ. ಅವನು ಕ್ಯಾಂಟೀನಿಗೆ ಹೋಗಿದಾನೆ..... ಅವನು ಶಿಲ್ಪನ್ನ ಪ್ರೀತಿಸ್ತಿದಾನಂತೆ. ಇದು ನಿಜಾನಾ? ನಿಂಗೆ ಗೊತ್ತಿತ್ತಾ? ನನ್ನನ್ನು ಮದುವೆಯಾಗಿ ನೀನು ಕಷ್ಟಪಟ್ಟೆ. ಹಾಗೇ ಶಿಲ್ಪನ್ನ ಮದುವೆಯಾಗಿ ಸುನೀಲ ಕಷ್ಟಪಡಬಾರ್ದು.... ಶಿಲ್ಪಾ ನನ್ನ ತಂಗಿ ಸುನೀಲನಿಗೆ ತಕ್ಕವಳಲ್ಲ..."

"ಪ್ರೀತಿಸಿದವರನ್ನು ಒಂದು ಮಾಡ್ಬೇಕು ಅಲ್ವಾ... ಸುನೀಲ ಅವಳನ್ನು ಚೆನ್ನಾಗಿ ನೋಡ್ಕೋತಾನೆ. ನನಗೆ ಆ ನಂಬಿಕೆ ಇದೆ..."

"ನೀನು ನನ್ನನ್ನು ನೋಡ್ಕೊಂಡ ಹಾಗೇ... ಐ ಆಮ್ ವೆರಿ ಸಾರಿ ಜ್ಯೋತಿ....ನನ್ನಿಂದ ನಿನ್ನ ಮನಸ್ಸಿಗೆ ಬೇಸರ ಆಗಿದೆ."

"ಆ ಮಾತೆಲ್ಲಾ ಈಗ್ಯಾಕೆ. ಚೆನ್ನಾಗಿ ಊಟ ಮಾಡಿ, ನಿದ್ದೆಮಾಡಿ ಬೆಳಿಗ್ಗೆ ಖುಷಿಯಾಗಿ ಮನೆಗೆ ಬರೋರಂತೆ..."

"ಇದೇ ಮಾತನ್ನು ಸುನೀಲ್ ಹೇಳಿದ. ಅಣ್ಣ ತಂಗಿ ಒಂದೇ ತರಹ.... ಓ.ಕೇ.. ಊಟ ಬಂತು... ಗುಡ್‌ನೈಟ್" ಎಂದು ಹೇಳಿ ಲೈನ್ ಕಟ್ ಮಾಡಿದ.

ಬೆಳಿಗ್ಗೆ ಸೂರ್ಯೋದಯವಾಗುವುದನ್ನೇ ಕಾಯುತ್ತಿದ್ದರೊ ಎಂಬಂತೆ, ಒಬ್ಬೊಬ್ಬರಾಗಿ ಎಲ್ಲರೂ ಎದ್ದರು. ಏನು ತಿಂಡಿ ಮಾಡಲಿ, ಏನು ಅಡುಗೆ ಮಾಡಲಿ? ಎಂದು ಆಲೋಚಿಸುತ್ತಾ ನಿಂತಿದ್ದವಳು, ಪುಷ್ಪಳನ್ನು ಕಂಡು, ಕಾಫಿಯನ್ನು ತಂದುಕೊಟ್ಟಳು.

'ಇವತ್ತು ಸಂದೀಪ ಮನೆಗೆ ಬರ್ತಿದಾನೆ. ಏನಾದರೂ ಸ್ಪೆಷಲ್ ತಿಂಡಿ ಅಥವಾ ಅಡುಗೆ ಮಾಡು ಜ್ಯೋತಿ' ಪುಷ್ಪಾ ಕಾಫಿಯನ್ನು ಹೀರುತ್ತಾ ನುಡಿದಳು.

"ಸಂದೀಪನೇ ರಾತ್ರಿ ಫೋನಿನಲ್ಲಿ ಸ್ಪೆಷಲ್ ಅಡುಗೆ ಮಾಡುಕ್ಕೆ ಹೇಳಿದಾರೆ ನೀವೂ ಸ್ವಲ್ಪ ಹೆಲ್ಪ್ ಮಾಡ್ಬೇಕಾಗುತ್ತೆ. ಹಾಗೇ ಒಂದ್ಮಾತು ಪುಷ್ಪಾ... ಸಂದೀನಪನ ಬಗ್ಗೆ ತಿರಸ್ಕಾರ ಇಟ್ಕೋಬೇಡಿ ಪುಷ್ಪಾ, ಇನ್ನು ಮುಂದೆಯೂ ಈಗಿನಂತೆ ಇರ್ಬೇಕು... ಪ್ಲೀಸ್"

"ಇದನ್ನು ನೀನು ನಂಗೆ ಹೇಳ್ಬೇಕಾ ಜ್ಯೋತಿ? ಈಗ ಅಂಥಾದ್ದೇನಾಗಿದೆ! ಸಾವಿತ್ರಿ ಚಿಕ್ಕಮ್ಮ ಇದನ್ನೆಲ್ಲ ಹೇಳದೇ ಇದ್ದಿದ್ದರೆ ಚೆನ್ನಾಗಿತ್ತು. ನಾನು ಮದುವೆಯಾಗಿ ಈ ಮನೆಯಿಂದ ಹೊರಗೆ ಹೋಗಿದೀನಿ. ತವರು ಮನೆಯ

ಸಂಬಂಧಗಳನ್ನು ಕೆಡಿಸಿಕೊಳ್ಳಲು ನನಗೆ ಖಂಡಿತಾ ಇಷ್ಟವಿಲ್ಲ... ನೀನೂ ಆತಂಕ ಪಟ್ಕೋಬೇಡ, ಅವನಿಗೆ ಏನು ಇಷ್ಟವೋ ಅದನ್ನೇ ಮಾಡು, ನಾನು ನಿನಗೆ ಏನು ಹೆಲ್ಪ್ ಮಾಡ್ಬೇಕು ಹೇಳು"

"ನಿಮ್ಮ ತಂದೆಗೆ ಏನು ಎಷ್ಟವೋ ಅದನ್ನೇ ಮಾಡು ಅಂತ ಹೇಳಿದಾರೆ, ನಿಮ್ಮ ತಂದೆಗೆ ಎಂಥಾ ಅಡುಗೆ ಇಷ್ಟ?

"ಹಾಗೆ ಹೇಳಿದಾನಾ! ಒಳ್ಳೇದೇ ಆಯ್ತು.... ಆದರೆ, ಅಪ್ಪ ಊಟಕ್ಕೆ ಬರದೇ ಇದ್ದರೆ, ಬೇಜಾರು ಮಾಡ್ಕೋಬೇಡ, ಅಲ್ಲಿಗೆ ಕಳಿಸಿಕೊಡು"

"ನೀವು ನಿಮ್ಮ ತಂದೆಯನ್ನು ಒಪ್ಪಿಸಿ ಕರೆತರಬೇಕು ಚಿಕ್ಕಮ್ಮನೂ ಬರಲಿ"

"ನೋಡೋಣ ಮೊದಲು ಸಂದೀಪ ಮನೆಗೆ ಬಂದು ಸೆಟ್ಲ್ ಆಗಲಿ, ಸುನೀಲ ಅಲ್ಲೇ ಇದಾನಲ್ಲ, ಅವನೇ ಕರ್ಕೊಂಡು ಬರ್ತಾನೆ ಅಲ್ವಾ!"

"ಬಿಲ್ ಕಟ್ಟಬೇಕಲ್ವಾ! ನಿಮ್ಮ ತಂದೆನೇ ಹೋಗಬಹುದೇನೋ... ನೀವು ಕೇಳ್ತೀರಾ! ಸುನೀಲನ ಹತ್ರ ಹಣ ಇದೆಯೋ ಇಲ್ವೋ!

"ಛೇ, ಅವನನ್ನು ಕೇಳೋದೇನು ಬೇಡ, ಇದುವರೆಗೂ ಅಪ್ಪನೇ ಕೊಟ್ಟಿಲ್ವಾ! ನಾನು ಅಪ್ಪನ ಹತ್ರ ಮಾತಾಡ್ತೀನಿ, ಈ ಶಿಲ್ಪಾ ಎಲ್ಲಿ ಹೋದ್ಲು! ಅವಳಿಗೂ ಒಂದಿಷ್ಟು ಅಡುಗೆ ಕೆಲಸಾನ ಕಲಿಸಿಕೊಡು... ಸದಾ ಫೋನಿನಲ್ಲಿ ಮಾತಾಡ್ತಾ ನಿಂತು ಬಿಟ್ರೆ, ಹೊಟ್ಟೆ ತುಂಬಿ ಹೋಗುತ್ತಾ?" ಇಬ್ಬರೂ ನಕ್ಕರು.

"ಏನು? ಇಬ್ರೂ ಯಾವ ಜೋಕ್ ಹೇಳ್ಕೊಂಡು ನಗ್ತಿದೀರಿ!" ಎನ್ನುತ್ತಾ ಶಿಲ್ಪಾನೂ ಅಲ್ಲಿಗೆ ಬಂದಳು.

"ಮುಖ ತೊಳೆದ್ಯೋ ಇಲ್ವೋ? ಆಗ್ಲೆ ಫೋನು ಹಿಡಕ್ಕೊಂಡು ಮಾತು ಯಾರ ಹತ್ರ ಮಾತಾಡ್ತಿದ್ದೆ?"

"ಸುನೀಲನ ಹತ್ರ... ಅವನನ್ನು ಎಬ್ಬಿಸಿದೆ. ಡಿಸ್ಚಾರ್ಜ ಮಾಡಿಸ್ಕೊಂಡು ಮನೆಗೆ ಬರ್ಬೇಡ್ವಾ! ಇವತ್ತೇ ಊರಿಗೆ ವಾಪಸ್ಸು ಹೋಗ್ತಾನಂತೆ. ಅತ್ತಿಗೆ ಕಾಫಿ ಕೊಡಿ. ನಾನು ಪ್ಯಾಕ್ ಮಾಡ್ಕೋತೀನಿ. ನಾನೂ ಇವತ್ತೇ ಹೊರಡ್ತೀನಿ" ಎನ್ನುತ್ತಾ ಅಲ್ಲಿ ಕುಳಿತಳು.

"ಸಂದೀಪ ಮನೆಗೆ ಬರ್ತಿದಾನೆ. ಇವತ್ತೇ ಹೋಗೋಕೆ ಏನು ಅರ್ಜೆಂಟು? ನಾಳೆ ನಾನೂ ಹೊರಡ್ತೀನಿ. ಒಟ್ಟಿಗೇ ಹೋಗೋಣ"

"ಸುನೀಲಂಗೆ ಹೇಳಿಬಿಟ್ಟಿದೀನಿ....." ಕಾಫಿಯ ಕಪ್‌ನ್ನೆತ್ತಿಕೊಂಡಳು.

"ಇನ್ನು ನಿಮ್ಮಿಬ್ಬರ ಮದುವೆಯ ಮಾತುಗಳೇ ಶುರುವಾಗಿಲ್ಲ ಅವನೇ ಎಲ್ಲಾ ನಿರ್ಧರಿಸ್ಬೇಕಾ?" ಪುಷ್ಪಾ ಆಕ್ಷೇಪವನ್ನೆತ್ತಿದಳು. ಜ್ಯೋತಿ ದನಿಗೂಡಿಸಿದಳು.

"ಹಾಗಲ್ಲ...."

"ಹಾಗಲ್ಲ, ಹೀಗೂ ಅಲ್ಲ, ಅಪ್ಪ ಸಂದೀಪನ್ನ ಡಿಸ್ಚಾರ್ಜ ಮಾಡಿಸ್ಕೊಂಡು ಮನೆಗೆ ಕರ್ಕೊಂಡು ಬರ್ಲಿ. ಆಮೇಲೆ ಉಳಿದ ಮಾತು"

"ಏನು! ಅಪ್ಪಾ, ಅಣ್ಣನ್ನ, ಹೋಗಿ ಕರ್ಕೊಂಡು ಬರ್ತಾರಾ....? ತಮಾಷೆ ಮಾಡ್ಬೇಡ"

"ತಮಾಷೆ ಅಲ್ಲ ಶಿಲ್ಪಾ ನಾನು ಅಪ್ಪನ ಹತ್ರ ಮಾತಾಡ್ತೀನಿ, ಅವರ ಹತ್ರ ಅಲ್ಲದೇ ಇನ್ಯಾರ ಹತ್ರ ದುಡ್ಡಿದೆ ಹೇಳು? ಬಿಲ್ ಕಟ್ಟಬೇಕಲ್ವಾ?"

"ಅಣ್ಣ, ಆಸ್ಪತ್ರೆಯಿಂದ ಬೇಕಾದ್ರೆ ಓಡಿ ಹೋಗ್ತಾನೆ.... ಅಪ್ಪನ ಹಣದ ಮುಲಾಜಿಗೆ ಬೀಳುಲ್ಲ.... ಅವನಿಗೂ ಸ್ವಾಭಿಮಾನ ಇದೆ.

"ಸ್ವಾಭಿಮಾನ ಬೇರೆ, ಸಂಬಂಧವೇ ಬೇರೆ. ನಿನಗೆ ಅದೆಲ್ಲ ಅರ್ಥ ವಾಗಲ್ಲ.... ಅವನಿಗೆ ಇಲ್ಲದ್ದನ್ನ ಹೇಳಿ ತಲೆ ಕೆಡಿಸ್ಬೇಡ, ನೀನು ಚಿಕ್ಕವಳು ಚಿಕ್ಕವಳ ಥರ ಇರು ಎಲ್ಲರೂ ಒಂದಾಗಿರೋಣ ಅವನೇನು ಹೊರಗ್ನೋನಾ?" ಪುಷ್ಪಾ ರೇಗಿದಳು.

ನಾವಿಬ್ಬರೂ ಈ ಮನೆಯವರು ಅಲ್ಲ ಅಂತ ನಿನ್ನೇ ರಾತ್ರಿ ಗೊತ್ತಾಯ್ತಲ್ಲ"

"ಹಾಕ್ತೀನಿ ನೋಡು... ಏನೇ ಹಾಗಂದ್ರೆ ಅರ್ಥ! ಅಪ್ಪ ನಮ್ಮಿಬ್ಬರಲ್ಲಿ ಎಂದಾದ್ರೂ ಭೇದ ಮಾಡಿದ್ರಾ? ಹಾಸ್ಟೆಲ್ಲಿನಲ್ಲಿದ್ದ ಮಾತ್ರಕ್ಕೆ ನಿನಗೆ ಮನಸ್ಸಿಗೆ ಬಂದಹಾಗೆ ಮಾತಾಡ್ಬೇಡ."

"ಸಾರೀ, ನಿನ್ನ ಮನಸ್ಸಲ್ಲೇನಿದೆ ಅಂತ ತಿಳ್ಕೊಳ್ಳೋಕೆ ಹೇಳ್ದೆ. ಆದರೆ ನಾನು ಗೊಂದಲದಲ್ಲಿ ಇರೋದಂತೂ ನಿಜ. ಸುನೀಲನ ತಂದೆ, ಅಣ್ಣಂದಿರಿಗೆ ಈ ವಿಚಾರ ತಿಳಿದ್ರೆ ಏನೋ ಅಂತ ಆತಂಕ ಆಗುತ್ತೆ."

"ಹಾಗೆಲ್ಲಾ ಏನೂ ಆಗಲ್ಲ, ಯಾರಿಗೂ ಹೇಳೋದು ಬೇಡ, ಮೊದಲು ಹೇಗಿದ್ದೆವೋ ಹಾಗೇ ಇದ್ದರಾಯ್ತು..." ಜ್ಯೋತಿ, ಶಿಲ್ಪಾಳಿಗೆ ಸಮಾಧಾನ ಹೇಳಿದಳು

"ಹಾಗ್ಹೇಗೇ ಆಗುತ್ತೆ ಅತ್ತಿಗೆ? ಅಣ್ಣ ಒಳ್ಳೆತವನ ಥರ ಮುಖವಾಡ ಹಾಕ್ಕೊಂಡು ಮಾತಾಡಿದ್ರೆ ಎಲ್ರಿಗೂ ಅನುಮಾನ ಬರಲ್ವಾ?" ಅವಳು ಮತ್ತೆ ಕೇಳಿದಾಗ, ಜ್ಯೋತಿ ಪುಷ್ಪ ಮುಖ ಮುಖ ನೋಡಿಕೊಂಡರು.

"ಅವನು ಹಾಗೇ ಇರ್ಲಿ, ಬದಲಾಗೋದೇ ಬೇಡ ಅಂತೀಯಾ?"

"ನನ್ನ ಮದುವೆ ಆಗೋವರೆಗೂ ಹಾಗೇ ಇರ್ಲಿ, ಆಮೇಲೆ ಏನು ಬೇಕಾದ್ರೂ ಮಾಡ್ಕೊಳ್ಳಲಿ" ಇಬ್ಬರೂ ನಕ್ಕರು.

"ಸರಿ, ಹಾಗೇ ಇರು ಅಂತ ಹೇಳಿದ್ರಾಯ್ತು. ಬದಲಾಗೋದು ಅವನಿಗೂ ಕಷ್ಟವೇ, ನಮಗೂ ಸುಲಭ ಆಗುತ್ತೆ" ಮತ್ತೊಮ್ಮೆ ಎಲ್ಲರೂ ನಕ್ಕರು.

ಮನೆ ಮುಂದೆ ಟ್ಯಾಕ್ಸಿ ನಿಂತಾಗ, ಒಳಗಿದ್ದವರೆಲ್ಲಾ ತವಕ, ಆತಂಕಗಳಿಂದ ಮುಂಬಾಗಿಲಿಗೆ ಬಂದು ನಿಂತರು. ಕಡೆಯಲ್ಲಿ ಇಳಿದ ಸಂದೀಪನ ಕಡೆಗೆ ಎಲ್ಲರ ದೃಷ್ಟಿ ಹರಿಯಿತು. ಅವನು ಸೀದಾ ಎಲ್ಲರನ್ನು ಸರಿಸಿ ಮನೆಯೊಳಗೆ ಬಂದ. ಜ್ಯೋತಿ ಅವನ ಕಡೆ ನೋಡಲು ಹೆದರಿದಳು. ಅವನ ಹಿಂದೆ ಸುನೀಲ ಒಳಗೆ ಬಂದ. ಆದರೆ ನಂಜುಂಡಯ್ಯ ಟ್ಯಾಕ್ಸಿ ಡ್ರೈವರನಿಗೆ ಹಣವನ್ನು ಕೊಟ್ಟು ಒಳಗೆ ಬರದೇ, ಸೀದಾ ಮಹಡಿಯನ್ನು ಹತ್ತಿದರು ಪುಷ್ಪಾ ಜ್ಯೋತಿಯ ಕಡೆ ನೋಡಿದಳು. ಶಿಲ್ಪಾ ಸುನೀಲನ ಕಡೆ ನೋಡಿದಳು.

"ಏನು ಎಲ್ರೂ ಹೀಗೆ ಮೌನವಾಗಿ ನಿಂತು ಬಿಟ್ರಿ! ನಾನು ಮನೆಗೆ ಬಂದದ್ದು ಸರಿ ಹೋಗ್ತಿಲ್ವಾ! ಸಂದೀಪ ಎಲ್ಲರ ಕಡೆ ನೋಡಿ ಕೇಳಿದ. ಆದರೆ ಧ್ವನಿಯಲ್ಲಿ ಕರ್ಕಶತೆ ಇಲ್ಲದಿರುವುದನು ಎಲ್ಲರೂ ಗಮನಿಸಿದರು.

"ಹಾಗ್ಯಾಕೆ ಅಂತೀಯೋ.... ಪಾಪ, ಜ್ಯೋತಿನ ನೋಡು, ನಿನಗೋಸ್ಕರ ಯೋಚನೆ ಮಾಡೀ ಮಾಡೀ.... ಕಂಗೆಟ್ಟಿದ್ದಾಳೆ" ಪುಷ್ಪಾ ಎಂದಳು.

"ನಂಗೆ ಹಾಗೇನೂ ಅನ್ಸಲ್ಲ, ಎರಡ್ದಿನದಿಂದ ಮನೇಲಿ ಹಾಯಾಗಿ ನಿದ್ದೆ ಮಾಡಿರ್ತಾಳೆ. ಅಲ್ವೇನೇ ಜ್ಯೋತಿ" ಎಲ್ಲರೆದುರಿಗೆ ಹೆಂಡತಿಯ ಕೆನ್ನೆ ಚಿವುಟಿದ. ಅವಳು ಕೆಂಪಾಗಿದ್ದಳು. ಎರಡು ಹೆಜ್ಜೆ ಹಿಂದೆ ಸರಿದಳು.

"ನೀನು ನಿನ್ನ ಹೆಂಡ್ತೀನ ಎಷ್ಟು ಮಿಸ್ ಮಾಡ್ಕೋತ್ತಿದ್ದೆ ಅಂತ ನಿನ್ನ ವರ್ತನೆಯಿಂದೇ ತಿಳೀತಿದೆ.... ಅವಳು ನಿನಗೋಸ್ಕರ ನಿನ್ನ ಇಷ್ಟವಾದ ಅಡುಗೆಯನ್ನೇ ಮಾಡಿದಾಳೆ. ಎಲ್ಲರೂ ಒಟ್ಟಿಗೇ ಕೂತು ಊಟ ಮಾಡೋಣ... ಆಮೇಲೆ ರೆಸ್ಟ್ ತಗೋಳ್ತಾ ಮಾತಾಡೋಣ"

"ಏನಿದೆ ಮಾತಿಗೆ? ಎಲ್ಲಾ ನೆನ್ನೆಗೇ ಮುಗೀತು. ಇನ್ನೇನಿದ್ರೂ ಎಲ್ಲಾ ಖಾಲಿ ಖಾಲಿ ಏನೂ ಇಲ್ಲ" ಕೈಗಳನ್ನು ತಿಗ್ಗುಗಿಸುತ್ತಾ ಎಂದ.

"ನೆನ್ನೆಗೆ ಮುಗಿದದ್ದು ಹಳೆಯ ಚರಿತ್ರೆ. ಇಂದಿನಿಂದ ಪ್ರಾರಂಭವಾಗು ವುದು ಹೊಸಾ ಅಧ್ಯಾಯ"

"ಏನು ಚರಿತ್ರೆಯೋ, ಏನು ಹೊಸತೋ, ನಾನಂತೂ ಮೂರ್ಖನಾದೆ. ನಾನು, ದೀಪು ಬಂದ್ಮೇಲೆ ಊಟ ಮಾಡ್ತೀನಿ ಸ್ವಲ್ಪ ಹೊತ್ತು ಮಲಗಿರ್ತೀನಿ."

"ಅವನು ಬರೋದು ಸಾಯಂಕ್ಯಾಲಕ್ಕೆ. ಅಲ್ಲಿವರೆಗೂ ಹೊಟ್ಟೆ ಹಸಿದ್ಕೊಂಡು ಯಾಕಿರ್ಬೇಕು... ನಿನಗೋಸ್ಕರ ಎಲ್ರೂ ಕಾಯ್ತಿದ್ದೆವು. ಏಳು...." ಶಿಲ್ಪಾ ಅವನ ಕೈ ಹಿಡಿದೆಳೆದಳು. ಅವನು ಕೈ ಬಿಡಿಸಿಕೊಂಡು ಅವಳನ್ನೇ

ದುರು ದುರು ನೋಡಿದ. ಅವಳು ಹೆದರಿದಳು. "ಸಾರೀ ಅಣ್ಣ, ನನ್ನಿಂದ್ಲೇ ಇಷ್ಟೆಲ್ಲಾ.... ನಾನು ಊರಿಗೆ ವಾಪಸ್ಸು ಹೊರಟುಹೋಗ್ತೀನಿ, ಮತ್ತೆಂದೂ ವಾಪಸ್ಸು ಬರುಲ್ಲ, ನನಗೂ ನಿಮ್ಮ ಈ ಜಗಳ ಕದನ ಸಾಕಾಗಿತ್ತು. ಇನ್ಮುಂದೆ ನೋಡೋದು ತಪ್ಪುತ್ತೆ. ಸುನೀಲ್ ನಾನು ಇಲ್ಲಿ ಇಲ್ಲದ ಮೇಲೆ ಇಲ್ಲಿದ್ದು ಏನು ಮಾಡ್ತೀರಿ.... ನಡೀರಿ..." ಅವನ ಕಡೆ ನೋಡಿ ಜೋರು ಮಾಡಿದಳು. ಅವನು ತಬ್ಬಿಬ್ಬಾಗಿ ಎಲ್ಲರ ಕಡೆ ನೋಡಿದ.

"ಸುನೀಲ್ ಹೇಗೆ ಅಂದ್ರೆ ಹಾಗೆ ನಿನ್ನನ್ನ ಕರ್ಕೊಂಡು ಹೋಗುಕ್ಕೆ ಆಗುತ್ತಾ? ಅದಕ್ಕೆ ತಕ್ಕ ಸಮಯ ಬರಲಿ, ನಿನ್ನ ಅತ್ತಿಗೆ ,ಮಾಡಿದ ಅಡುಗೆ ವೇಸ್ಟ್ ಆಗುತ್ತೆ. ಅವಳಿಗೆ ಎಲ್ಲಾ ಕಷ್ಟವೂ ಗೊತ್ತು, ಎಲ್ರಿಗ್ಗೂ ತಟ್ಟೆ ಹಾಕು, ಊಟ ಮಾಡ್ಬಿಟ್ಟೇ ರೆಸ್ಟ್ ತಗೋತೀನಿ" ಎನ್ನುತ್ತಾ ಎದ್ದು ಬಟ್ಟೆ ಬದಲಾಯಿಸಲು ನಡೆದ. ಅವನು ಊಟದ ಮನೆಗೆ ಮತ್ತೆ ಬರುಷ್ಟರಲ್ಲಿ ಅಕ್ಕ ತಂಗಿರಿಯುರು ತಟ್ಟೆಗಳನ್ನು ಹಾಕಿ, ನೀರಿನ ಲೋಟಗಳನ್ನು ಇಟ್ಟಿದ್ದರು. ಅವನು ಮತ್ತೆ ಹುಬ್ಬು ಗಂಟಿಕ್ಕಿದ. ಎರಡು ತಟ್ಟೆ ಕಡಿಮೆ ಯಾಕೆ!, ಇನ್ನು ಇಬ್ಬರು ಊಟಕ್ಕೆ ಬರೋರಿದಾರೆ.... ಮನೇಲಿ ತಟ್ಟೆಗಳು ಇಲ್ವಾ?" ಕೇಳಿದ.

"ಇನ್ಯಾರಿಗೆ! ಇಲ್ಲಿ ಎಷ್ಟು ಜನರಿದೇವೋ, ಅಷ್ಟು ತಟ್ಟೆ ಹಾಕಿದ್ದೀನಿ"

"ಪುಷ್ಪಾ, ಅರ್ಥ ಆಗದವಳ ಥರ ಮಾತಾಡ್ಬೇಡ, ಜ್ಯೋತಿ, ಇನ್ನು ಎರಡು ತಟ್ಟೆಗಳನ್ನು ಹಾಕು, ಜ್ಯೋತಿ ಹೋಗಿ ಮೇಲಿನ ಮನೆಯವರನ್ನು ಕರ್ಕೊಂಡು ಬಾ ಹೋಗು" ಜ್ಯೋತಿ ಅನುಮಾನಿಸಿದಳು.

"ಅವರು ಬರುಲ್ಲ ಅಂತಂದ್ರೇ..."

"ಯಾಕೆ ಬರುಲ್ಲ! ನಿನ್ನ ಮಾವಂಗೆ ನಿನ್ಮೇಲೆ ಪ್ರೀತಿ ಜಾಸ್ತಿ ಹೋಗಿ ಕರಿ ಖಂಡಿತಾ ಬರ್ತಾರೆ"

"ನಾನೇ ಹೋಗಿ ಕರೀತೀನಿ ಬರದಿದ್ರೆ ಬೇಸರ ಮಾಡ್ಕೋಬೇಡ. ಅಥವಾ ಶಿಲ್ಪನ್ನ ಕಳಿಸ್ತೀನಿ" ಪುಷ್ಪಾ ಅಳುಕುತ್ತಾ ನುಡಿದಳು.

"ಏನೂ ಬೇಡ, ನಾನು ಹೇಳಿದಷ್ಟನ್ನು ಕೇಳು.... ಜ್ಯೋತಿ ಅವರಿಬ್ಬರಿಗೆ ಸೊಸೆ ಅವರಿಗೆ ಇಷ್ಟವಾದ ಅಡಿಗೆ ಮಾಡಿದಾಳೆ. ಅವಳೇ ಕೈಯಾರೆ ಬಡಿಸಲಿ, ಇದು ನನ್ನ ಆರ್ಡರ್.... ನನ್ನ ಮಾತನ್ನು ಮೀರಿದರೆ, ನಾನು ಮನೆಬಿಟ್ಟು ಹೋಗ್ತೀನಿ ಅಷ್ಟೇ."

"ಇಷ್ಟಕ್ಕೆಲ್ಲಾ ಮನೆ ಬಿಟ್ಟು ಯಾರೂ ಹೋಗಲ್ಲ, ನೀನೇ ಹೀಗೆ ಆರ್ಡ್‌ರ್ ಕೊಟ್ಮೇಲೆ ಇನ್ಯಾಕೆ ಚಿಂತೆ! ಹೋಗು ಜ್ಯೋತಿ, ಅಪ್ಪನ್ನ ಚಿಕ್ಕಮ್ಮನ ಕರ್ಕೊಂಡು ಬಾ... ಅವರೇನಾದ್ರು ಬರಲ್ಲ ಅಂತಂದ್ರೆ, ಸಂದೀಪನೇ ಹೋಗಿ

ಕರ್ಕೊಂಡು ಬರ್ತಾನೆ ಅಲ್ವಾ?"

"ನಾನು ಈಗಾಗ್ಲೆ ಅರ್ಧ ಸೋತಿದೀನಿ, ಅದು ಅವರಿಗೂ ಗೊತ್ತಾಗಿದೆ ಸ್ವಲ್ಪ ಅವರೂ ಸೋತರೆ, ಅವರು ಏನನ್ನು ಕಳ್ಕೊಳುಲ್ಲ. ಹಾಗಂತ ಹೇಳಿ ಕರ್ಕೊಂಡು ಬಾ..." ಸಂದೀಪ, ಜ್ಯೋತಿಯನ್ನು ಅಟ್ಟಿದ.

"ಅಲ್ಲಿ ಏನು ಮಾತುಕತೆಗಳು ನಡೆದವೋ, ಅವರುಗಳು ಕೆಳಗಿಳಿದು ಬರಲು ಸಾಕಷ್ಟು ಸಮಯ ಹಿಡಿಯಿತು. ಅವರಿಬ್ಬರೂ, ಬಿಗುಮಾನದಿಂದ ಮನೆಯೊಳಕ್ಕೆ ಅಡಿ ಇಟ್ಟರು. ಇವರುಗಳಿಗೆ ಮಾತನಾಡಬೇಕೆನ್ನಿಸಿದ್ದರೂ, ಗಂಟಲಿನಿಂದ ಸ್ವರ ಹೊರಡದಷ್ಟು ಗಂಟಲುಬ್ಬಿ ಬಂದಿತ್ತು. ಎಲ್ಲರೂ ಊಟಕ್ಕೆ ಕುಳಿತರು. ಜ್ಯೋತಿ ನಿಧಾನವಾಗಿ ಬಡಿಸಿದಳು. ಯಾರಿಗೂ ಊಟ ಬೇಡವಾಗಿತ್ತು. ಆದರೆ, ಕೈಗೆ ಬಾಯಿಗೆ ಕೆಲಸಬೇಕಾಗಿತ್ತು. ಮೌನ ಸಹಕಾರ ನೀಡಿತ್ತು. ಮೌನ ಎಲ್ಲವನ್ನು ಕಲೆಸಿತ್ತು. ಬೆರೆಸಿತ್ತು, ಎಲ್ಲಕ್ಕಿಂತ ಹೆಚ್ಚಾಗಿ, ಹಳೆಯ ದಿನಗಳನ್ನು ಮರೆಸಿತ್ತು ಹೊಸ ದಿನಗಳೆಡೆಗೆ ತಿರುಗಲು ಬಯಸಿತ್ತು.....

–ಮುಗಿಯಿತು–

*   *   *

ಲ. ಚಂದ್ರಿ

"ಚಂದ್ರವ್ವಾ, ಬಿರ್‌ಬಿರ್‌ನೆ ಕೈ ಓಡ್ಸವ್ವಾ, ರೊಟ್ಟಿಯೆಲ್ಲಾ ತಣ್ಣಗಾಯ್ತು. ಗೌಡ್ರು ಯಾವಾಗ ರೊಟ್ಟಿ ಉಂಡೇನೋ ಅಂತ ಕಾದವ್ರೆ...." ಗುಂಡು ಕಲ್ಲನ್ನು ನಿಧಾನವಾಗಿ ತಿರುಗಿಸುತ್ತಿದ್ದ ಚಂದ್ರಮ್ಮನ ಕೈ ವೇಗವನ್ನು ಹೆಚ್ಚಿಸಿತು. ಎರಡು ಸುತ್ತು ಗಡಗಡನೆ ಸುತ್ತಿ ಗುಂಡು ಕಲ್ಲನ್ನು ಎತ್ತಿ ಚಟ್ನಿ ನುರಿದಿದೆಯೋ ಇಲ್ಲವೋ ಅಂತ ಬೆರಳುಗಳಿಂದ ಅಮುಕಿ ನೋಡಿ, ಚಟ್ನಿಯನ್ನು ಬೋಗುಣಿಗೆ ಎತ್ತಿ ತುಂಬಿದಳು. ಬೆಣ್ಣೆ, ಚಟ್ನಿ ಇಟ್ಟು ಎಲ್ರಿಗೂ ರೊಟ್ಟಿ ಕೊಟ್ಬಿಡು ಎಂದು ಹೇಳಿದ ಅತ್ತೆಯ ಮಾತನ್ನು ಪಾಲಿಸಿದಳು.

ಹೊಗೆ ತುಂಬಿದ ಅಡಿಗೆ ಮನೆಯಲ್ಲಿ ಕಣ್ಣು ಮೂಗು ಒರೆಸುತ್ತಾ ನಿಂತಿದ್ದ ಸೊಸೆಗೂ, ಎಲೆಯ ಮೇಲೆ ರೊಟ್ಟಿಯನ್ನಿಟ್ಟು ನುಡಿದಳು. "ನೀನೂ ರೊಟ್ಟಿ ಉಂಡು, ಬಟ್ಟೆ ಸೆಳೆಯೋಕೆ ಹೋಗು."

"ನಂಗ್ಬೇಡ ಕಣತ್ತೆ, ಉಣ್ಣೋ ಮನಸ್ಸಿಲ್ಲ" ದಪ್ಪನೆಯ ಗಂಟಲಲ್ಲಿ ನುಡಿದಳು

"ಉಪಾಸ ಮಾಡಿ ನಮ್ಗೆ ಕೆಟ್ಟ ಹೆಸ್ರು ತರ್ಬೇಕು ಅಂತಿದೀಯೆನೂ? ರಾತ್ರಿಗೂ ನೀನು ಸರ್ಯಾಗಿ ಉಂಡಿಲ್ಲ" ಅತ್ತೆಯ ಮಾತಿನಲ್ಲಿ ಪ್ರೀತಿ ಇಲ್ಲದಿದ್ರೂ ಕಾಳಜಿ ಇತ್ತು.

"ಆಮೇಲೆ ಬಂದು ಉಣ್ತೇನಿ" ಎಂದು ಹೇಳಿ ಅಲ್ಲಿ ನಿಲ್ಲದೇ, ಬಚ್ಚಲ ಮನೆಯ ಕಡೆಗೆ ಬಂದಳು. ಒಂದು ರಾಶಿ ಬಟ್ಟೆಗಳು ಬಿದ್ದಿದ್ದವು. ಎಲ್ಲವನ್ನು ಬೆತ್ತದ ದೊಡ್ಡ ಬುಟ್ಟಿಗೆ ಅಡಕಿ, ಬಾರು ಸೋಪನ್ನು ಕೈಗೆತ್ತಿಕೊಂಡು ಬಟ್ಟೆಯ ಮೇಲಿಟ್ಟುಕೊಂಡು ಬಾವಿಯ ಬಳಿಗೆ ಬಂದಳು. ದೊಡ್ಡ ಬಾವಿಯಿಂದ ನೀರು ಸೇದಿ ಬಕೆಟ್ಟುಗಳಿಗೆ ನೀರನ್ನು ಸೇದಿಕೊಂಡು ತುಂಬಿ, ಬಟ್ಟೆಗಳನ್ನು

ನೆನೆಸಿಕೊಂಡು, ಒಂದೊಂದಕ್ಕೇ ಸೋಪನ್ನು ತಿಕ್ಕತೊಡಗಿದಳು. ಮಧ್ಯೆ ಮಧ್ಯೆ ಅವಳ ಕೈ ಕೆಲಸವನ್ನು ನಿಲ್ಲಿಸುತ್ತಿತ್ತು. ಮನಸ್ಸು ಮಾತ್ರ ವಿಶ್ರಾಂತಿಯಿಲ್ಲದೇ ನಾನಾ ದಿಕ್ಕುಗಳಲ್ಲಿ ಓಡುತ್ತಿತ್ತು.

ಗಂಡ ಮತ್ತೊಂದು ಮದುವೆಯಾಗಿ ತನಗೆ ಸವತಿಯನ್ನು ತರುವ ಮಾತನ್ನು ತನ್ನೆದುರಿಗೇ, ತನ್ನ ತಾಯಿಗೆ ಹೇಳಿದ್ದ. ಅತ್ತೆ ಮೌನವನ್ನು ನಟಿಸಿದ್ದಳು. ಚಂದ್ರಮ್ಮನಿಗೆ ಈ ಮಾತನ್ನು ಅವನು ಅನೇಕ ಬಾರಿ ಹೇಳಿದ್ದ. ಆದರೆ ಆಕೆ ಕಿವಿಗೊಟ್ಟಿರಲಿಲ್ಲ, ಆದರೆ ಈಗ? ಅವನತ್ತ ಹೋದ ಮೇಲೆ ಅತ್ತೆ ಈಕೆಯನ್ನು ಪ್ರಶ್ನಿಸಿದ್ದಳು. "ಕೇಳಿದ್ಯಾ ಚಂದ್ರಾ ನಿನ್ನ ಗಂಡ ಏನಂದ ಅಂತ.... ಅವನಿಗೂ ಮಕ್ಕಳಾಗಿಲ್ಲ ಅಂತ ಬೇಸ್ರ ಬಂದೋಗಿದೆ... ಲಗ್ನ ಆಗಿ ಮೂರು ವರ್ಷ ಕಳೀತು.... ಪ್ರತಿ ತಿಂಗಳೂ ನೀರು ಹಾಕ್ಕೋತೀಯ... ನಿಂಗೆ ಮಕ್ಕಳಾಗಲಿ ಅನ್ನೋ ಆಸೆ ಇಲ್ಲ ಅಂತ ನಾನು ಹೇಳುಲ್ಲ. ಶಿವ ಯಾಕೋ ಕಣ್ಣೇ ಬಿಡ್ತಿಲ್ಲ ಇನ್ನು..."

"ಇದ್ರಲ್ಲಿ ನನ್ನ ತಪ್ಪೇನಿದೆ ಅತ್ತೆ?" ಕೇಳುತ್ತಾ ಕೇಳುತ್ತಾ ಅತ್ತಿದ್ದಳು.

"ಅವ್ನ ತಮಾಷೆ ಮಾಡಿದಾನೆ. ನೀನು ನೊಂದ್ಕೋಬೇಡ. ಅಯ್ನೋರ ಮನೆಗ್ಹೋಗಿ ಪ್ರಶ್ನೆ ಕೇಳ್ಸೋಣ. ಮನೆದೇವ್ರ ಪೂಜೆ ಮಾಡ್ಸೋಣ. ನೀ ಮಾತ್ರ ನಿನ್ನ ಗಂಡ ಹೇಳ್ದಂಗೆ ಕೇಳ್ಬಿಡವ್ವಾ, ಮುರುತ್ಕೋಬೇಡ...." ಅತ್ತೆ ತಿಳುವಳಿಕೆ ಹೇಳಿದ್ದಳು.

ಇದುವರೆಗೂ ಗಂಡ ಹೇಳಿದ ಹಾಗೇ ಕೇಳಿದ್ದಳು. ಎಂದೂ ವಿರೋಧಿಸಿರಲಿಲ್ಲ. ಆದರೂ ಗಂಡನಿಗೆ ತನ್ನ ಮೇಲಿನ ಆಕರ್ಷಣೆ ಕಡಿಮೆಯಾಗಿರುವುದನ್ನು ಅರಿತಿದ್ದಳು. ಅದನ್ನು ಪ್ರಶ್ನಿಸಿರಲಿಲ್ಲ. ಮದುವೆಯಾದ ಹೊಸದರಲ್ಲಿ ಚಂದ್ರಾ ಚಂದ್ರಾ ಅಂತ ಅವಳಿಗೆ ಅಂಟಿಕೊಂಡೇ ಇರುತ್ತಿದ್ದ ಗಂಗಾಧರ ಈಗ ಅವಳ ಬಳಿಗೆ ಬಂದರೆ ಬಂದ, ಇಲ್ಲದಿದ್ದರೆ ಇಲ್ಲ. ಅವನಾಗಿಯೇ ಬಳಿಗೆ ಬಂದಾಗ ಒಲ್ಲೆ ಎನ್ನುತ್ತಿರಲಿಲ್ಲ; ಬರದಿದ್ದರೆ, ಏಕೆ ಎಂದು ಕೇಳುತ್ತಿರಲಿಲ್ಲ.

"ನಿಂಗೆ ನನ್ನ ಕಂಡ್ರೆ ಅಸಡ್ಡೆ. ಗಂಡ ಅನ್ನೋ ಪ್ರೀತೀನೇ ಇಲ್ಲ ನಿಂಗೆ" ಬೈಯುತ್ತಿದ್ದ.

"ಅದ್ಯಾಕೆ ಹಂಗೆ ಹೇಳ್ತೀರಿ, ನಾನೇನಂದೆ ಈಗ?"

"ಅದೇ.... ಅದ್ಯಾಕೆ ಏನೂ ಮಾತಾಡುಲ್ಲ? ಬೇರೆ ಯಾರನ್ನಾದ್ರೂ ನೋಡ್ಕೋಂಡಿದೀಯ ಹೆಂಗೆ?" ಅವಳನ್ನು ಅಲುಗಾಡಿಸಿ ಕೇಳಿದ್ದ.

"ಏನ್ಮಾತಾಡ್ತೀರಿ.... ನಾನು ಅಂಥೋಳು ಅಂತ ನಿಮಗ್ಯಾಕೆ ಅನ್ನಿಸ್ತು?"

"ಮತ್ತೆ? ಕಟ್ಟಿಗೆ ಬಿದ್ಕೊಂಡ ಹಾಗೆ ಬಿದ್ದಿರ್ತೀಯಲ್ಲ. ಏನಿದೆ ಈಗ

ನಿನ್ನ ಮೈಯಲ್ಲಿ? ಒಣಗಿದ, ಕಟ್ಟಿಗೇ ಪಂಗಿರ್ತೀಯ. ರಸವೇ ಇಲ್ಲದವಳು ನೀನು, ಮುಟ್ಟೋಕೆ ಅಸಹ್ಯ ಆಗುತ್ತೆ."

"ಹಂಗಾರೆ ಮುಟ್ಲೇಬೇಡಿ, ನಾನು ಮೊದ್ಲಿಂದ್ಲೂ ಹಿಂಗೇ ಅಲ್ಲವಾ ಇದ್ದದ್ದು. ಆಗ ನನ್ನನ್ನ ಮೆಚ್ಚಿ ಲಗ್ನ ಆಗಿದ್ರಿ.... ಈಗೇನಾಯ್ತು!"

"ನಾಲ್ಗೆ ಓಡಿಸ್ಬೇಡ ನೀನು.... ಮೆಟ್ನಲ್ಲಿ ಹೊಡೆದು ಬಿಡ್ತೀನಿ ಚಕ್ಕಳ ಇದ್ದಂಗೆ ಇದೀಯ. ನಿನ್ನನ್ನು ಯಾರು ಮುಟ್ತಾರೆ. ನಡೀ ಅತ್ಲಾಗೆ..." ಅವಳನ್ನು ಅತ್ತ ತಳ್ಳಿದ್ದ.

ಗಂಡ ಕುಡಿದು ಬಂದಿದ್ದಾನೆಂದು ಅವಳಿಗೆ ತಿಳಿದಿತ್ತು. ಬರೀ ಕುಡಿತವಷ್ಟೇ ಅಲ್ಲ, ಬೇರೆ ಹೆಂಗಸರ ಸಹವಾಸವೂ ಇದೆ ಎನ್ನುವುದು ಅವನ ವರ್ತನೆಯಿಂದ ಅರಿವಾಗಿತ್ತು. ಏನೇನು ದುಶ್ಚಟಗಳಿವೆಯೋ ಇದನ್ನು ಯಾರಿಗೆ ಹೇಳ್ಬೇಕು? ದುಗುಡವನ್ನು ತನ್ನಲ್ಲೇ ಅದುಮಿಟ್ಟುಕೊಂಡಿದ್ದಳು.

ಮಗನ ದುಶ್ಚಟಗಳು ಅತ್ತೆ ಮಾವನಿಗೆ ತಿಳಿದಿಲ್ಲವೆ? ತಿಳಿದಿದ್ದರೂ, ಮಗನೆಂಬ ವ್ಯಾಮೋಹದಿಂದ ಸುಮ್ಮನಿದ್ದಾರೆ! ಈ ವಿಷಯದಲ್ಲಿ ತನಗೆ ಸಲಹೆ ನೀಡುವವರು ಯಾರೂ ಇಲ್ಲ. ತವರು ಮನೆಯಲ್ಲಿ ಹೇಳಿಕೊಳ್ಳುವ ವಿಷಯವೇ ಇದು! ಮೊದಲೇ ತನಗೆ ಮಕ್ಕಳಾಗಿಲ್ಲ ಅಂತ ಅವರೆಲ್ಲರಿಗೂ ನನ್ನ ಬಗ್ಗೆ ಕನಿಕರ. ಎಷ್ಟೋ ತಿಂಗಳುಗಳಿಂದ ತನಗೂ ತನ್ನ ಗಂಡನಿಗೂ ಹೊಂದಾಣಿಕೆ ಇಲ್ಲ ಅಂತ ತಿಳಿದರೆ, ತನಗೇ ತಿಳುವಳಿಕೆ ಹೇಳ್ತಾರೆ. ಈ ಗಂಡನಿಗೆ ನನ್ನ ಮೆಲೆ ಪ್ರೀತಿ ಇಲ್ಲ ಅಂತ ಹೇಗೆ ನಾನೇ ಹೇಳಿಕೊಳ್ಳೋದು! ಗಂಡನನ್ನು ಬಿಟ್ಟು ಬಂದು ಇಲ್ಲಿರು ಅಂತ ಖಂಡಿತಾ ಅವರು ಯಾರೂ ಹೇಳುವುದಿಲ್ಲವೆಂದು ಅವಳಿಗೆ ತಿಳಿದಿತ್ತು. 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ' ಎನ್ನುವುದನ್ನು ಪಾಲಿಸುವವರು ಅವರು. ಈಗ ತನ್ನ ಕಡೆಗೆ ಯಾರೂ ಇಲ್ಲ. ಅವಳಿಗೆ ದುಃಖ ಉಮ್ಮಳಿಸಿತ್ತು.

ಬಾವಿಯ ಬಳಿಗೆ ಅವಳ ವಾರಗಿತ್ತಿ ಸಿದ್ಧಮ್ಮ ತನ್ನ ಮಕ್ಕಳ ಬಟ್ಟೆಗಳನ್ನು ತಂದು ಹಾಕಿದಳು. "ಚಂದ್ರಾ, ಬೇಸ್ರ ಪಟ್ಕೋಬೇಡ, ನಿನ್ನ ಬಾಣಂತನಾನ ನಾನೇ ಮಾಡ್ತೀನಿ, ನಂಗೆ ಮಾಡ್ತಾ ಇರೋ ಸಹಾಯನ ನಾನು ಮರೆಯೋಲ್ಲ" ನಗುತ್ತಾ ನುಡಿದಳು.

"ಇದ್ರಲ್ಲಿ ಸಹಾಯ ಏನ್ಬಂತು ಅಕ್ಕಾ. ನಾನು ಈ ಮನೆಯೋಳೇ ಅಲ್ವಾ. ನೀವು ತಣ್ಣೀರಲ್ಲಿ ನಿಂತ್ಕೋಬೇಡಿ ಶೀತ ಆಗುತ್ತೆ, ಒಳಕ್ಕೋಗಿ.

"ನಿನ್ನನ್ನ ಒಂದ್ಮಾತು ಕೇಳ್ಬೇಕಾಗಿತ್ತು ಚಂದ್ರಾ.... ಗಂಗಾಧರಂಗೆ ಇನ್ನೊಂದು ಮದ್ವೆ ಮಾಡ್ಬೇಕು ಅಂತ ಮಾತುಕತೆ ನಡೀತಿದೆಯಂತೆ ಹೌದಾ?"

ಕಣ್ಣರಳಿಸಿ ಕೇಳಿದಳು. ಚಂದ್ರಾ ಉತ್ತರಿಸಲಿಲ್ಲ, ತಲೆತಗ್ಗಿಸಿದಳು. ಕಣ್ಣಿನಿಂದ ನೀರು ಇಳಿದಿತ್ತು. "ಅಳ್ಬೇಡ್ವೆ ಚಂದ್ರಾ, ನಿನ್ನ ಭಾವ ಅವನಿಗೆ ಬುದ್ಧಿ ಹೇಳ್ತಾರೆ ನೀವಿಬ್ರೂ ಮುದುಕರಾಗ್ಬಿಟ್ರಾ? ನಿಮ್ಗೂ ನಾಲ್ಕು ಮಕ್ಕಳಾಗುತ್ತೆ. ನಿನ್ನ ಗಂಡ ಖಂಡಿತಾ ಬದಲಾಗ್ತಾನೆ.

ಅದು ಸಾಧ್ಯವೋ ಹೌದೋ ಅಲ್ಲವೋ ಎಂದು ಚರ್ಚೆ ಮಾಡಲು ಅವಳಿಗೆ ಮನಸ್ಸು ಇರಲಿಲ್ಲ. ಮಾತನಾಡದೇ ಬಟ್ಟೆಗಳಿಗೆ ಸೋಪನ್ನು ತಿಕ್ಕತೊಡಗಿದಳು. "ಚಂದ್ರಾ ಸುಮ್ಮನೆ ಅತ್ತರೆ ಏನು ಪ್ರಯೋಜನ? ನಿನ್ನ ಗಂಡನ್ನ ಒಲಿಸಿಕೊಳ್ಳಲು, ನಿನ್ನ ಹಿಡಿತದಲ್ಲಿಟ್ಟುಕೊಳ್ಳುವ ಯೋಚನೆ ಮಾಡು. ಬರ್‍ತಾ ಬರ್‍ತಾ ನೀನು ಕೃಶವಾಗ್ತಿದೀಯ. ಇಲ್ಲಿ ನಿಂಗೆ ಮನೆ ಕೆಲಸ ಜಾಸ್ತಿ. ನಾಲ್ಕು ದಿನ ತವರು ಮನೆಗೆ ಹೋಗಿ ಆರಾಮವಾಗಿರು. ನಿಮ್ಮಮ್ಮನ ಕೈಯ ಆರೈಕೆಯಿಂದ ನೀನು ಮೊದಲಿನಂತೆ ಆಗ್ತೀಯ, ನೋಡ್ತಿರು. ಗಂಗಾಧರ ನಿನ್ನನ್ನ ಕರ್ಕೊಂಡು ಬರುಕ್ಕೆ ನಿಮ್ಮ ಮನೆಗೆ ಓಡಿ ಬರ್‍ತಾನೆ" ಸಣ್ಣಗೆ ನಕ್ಕಳು, ಚಂದ್ರ ನಗಲಿಲ್ಲ.

"ಅವರ್‍ಯಾರೂ ಬಂದು ಕರೀದೇ ನಾನು ಹೇಗೆ ಹೋಗ್ಲಿ ಅಕ್ಕಾ? ಸೇರಿದ ಮನೇಲಿ ಮಗಳು ಹೇಗಿದಾಳೆ ಅಂತ ನೋಡುಕ್ಕೆ ಯಾರಾದ್ರೂ ಬಂದಿದಾರಾ, ನಿಮ್ಗೇ ಗೊತ್ತಲ್ಲ."

"ನೀನು ಸುಖವಾಗಿದೀಯ ಅಂತ ಭಾವಿಸ್ಕೊಂಡು ಯಾರೂ ಬಂದಿಲ್ಲ. ಭಸಿರಿ, ಬಾಣರತನ ಅಂತ ಇದ್ದಿದ್ರೆ ಖಂಡಿತಾ ಬಂದಿರ್ತಿದ್ರು, ಏನ್ಮಾಡೋದು.... ಹುಟ್ಟಿದ ಮನೇನ, ಬೆಳೆದ ಮನೇನ, ನಾವು ಮರೆಯೋಕೆ ಆಗುತ್ತಾ ಚಂದ್ರಾ?"

"ಇಲ್ಲ ಅಕ್ಕಾ, ಕರೀದೇ ನಾನು ಹೋಗಲ್ಲ. ನನ್ನ ಕಷ್ಟ ಕಂಡು ಅವರಿಗೆ ಏನನ್ಸುತ್ತೋ, ಗಂಡನ್ನ ಬಿಟ್ಟು ಬಂದ್ಲು ಅಂತ ಅಂದ್ಕೊಂಡ್ರೆ? ನೀವು ಒಳಕ್ಕೆ ಹೋಗಿ, ನಾನು ಬಟ್ಟೆ ಒಗೆದು, ಹರವಿ ಬರ್‍ತೀನಿ ನೀವು ತಿಂಡಿ ತಿಂದ್ರಾ ಅಕ್ಕಾ?"

"ಹೂಂ, ರೊಟ್ಟಿ ಚಟ್ನಿ ಚೆನ್ನಾಗಿತ್ತು. ನೀನಿನ್ನು ತಿಂದೇ ಇಲ್ವಂತೆ. ತಿನ್ನದೇ, ಕುಡೀದೇ, ಉಪವಾಸ ಮಾಡಿ ಖಾಯಿಲೆ ಬರಸ್ಕೊಂಡ್ರೆ, ಯಾರು ನೋಡ್ತಾರೆ? ಯಾರು ಮಾಡ್ತಾರೆ!? ಬಟ್ಟೆ ಕೆಲಸ ಆಮೇಲೆ, ಈಗ ನಡೀ..." ಸಿದ್ಧಮ್ಮ ಕೈ ಹಿಡಿದು ಎಳೆದಾಗ, ಚಂದ್ರಾ ಒದ್ದೆ ಸೀರೆಯನ್ನು ಸರಿಪಡಿಸಿಕೊಂಡು ವಾರಗಿತ್ತಿಯೊಡನೆ ಒಳಕ್ಕೆ ಬಂದಳು.

ಬಾವಿ ಹತ್ರ ನೀನ್ಯಾಕೆ ಹೋದ್ಯವ್ವಾ, ಹಸಿ ಮೈ ಬಾಣಂತಿ, ನಿಂಗೇ ನಾದ್ರೂ ಆಯ್ತೋ, ಮಗುಗೂ ಆಯ್ತದೆ. ಏನ್ ಹೆಂಗ್ಸೋ ತಿಳ್ವಳ್ಕೆ ಬೇಡ್ವೇನವ್ವಾ...

"ಅತ್ತೆ ಸಿದ್ಧಮ್ಮನ ಮೇಲೆ ಹಗುರವಾಗಿ ರೇಗಿದಳು.

"ಚಂದ್ರಮ್ಮನ್ನ ಕರ್ಯಾಕೆ ಹೋಗಿದ್ದೆ. ಅತ್ತೆ, ಬಿಸಿ ರೊಟ್ಟಿಗೆ ಚಟ್ನಿ, ಬೆಣ್ಣೆ ಹಾಕ್ಕೊಡಿ, ಮೊದಲು ರೊಟ್ಟಿ ತಿನ್ಲಿ, ಮನೆ ಕೆಲ್ಸ ಇದ್ದದ್ದೇ."

"ನಾನೇನು ಬೇಡಾ ಅಂದ್ನಾ? ನೀವಿಬ್ರೂ ನನ್ನನ್ನೇ ಕೆಟ್ಟೋಳನ್ನಾಗಿ ಕಾಣ್ತೀರಿ. ಚಂದ್ರವ್ವಾ ನಿಂಗೆ ತಿಂಡಿ ತಿನ್ನು ಅಂತ ಹೇಳಿದ್ನೋ ಇಲ್ವೋ?" ಅತ್ತೆ ಅವಳ ಮೇಲೆ ನಿಜವಾಗಿಯೂ ರೇಗಿದಳು.

"ತಪ್ಪಾತು ಅತ್ತೇ, ತಿನ್ನ ಮನ್ಸಿರ್ಲಿಲ್ಲ.. ಅಕ್ಕ ಬಲವಂತ ಮಾಡಿದ್ರು" ರೊಟ್ಟಿ ತಿನ್ನುವಂತೆ ಬಾ ಎನ್ನುತ್ತಾ ಅಡುಗೆ ಮನೆಗೆ ನಡೆದಳು. ಒದ್ದೆಯಾದ ಕೈಯನ್ನು ಒರೆಸುತ್ತಾ ಚಂದ್ರಮ್ಮ ಅತ್ತೆಯನ್ನು ಹಿಂಬಾಲಿಸಿದಳು. ಸಿದ್ಧಮ್ಮ ಬಾಣಂತಿಯ ರೂಮನ್ನು ಸೇರಿದಳು

* * *

"ಸಣ್ಣಮ್ಮ, ನಿನ್ನ ತಮ್ಮ ಬಂದಿದಾನೆ" ಗೌಡ್ರು ಕರೆದು ಹೇಳಿದಾಗ, ಒಳಗಿದ್ದವರೆಲ್ಲ ಹೊರಕ್ಕೆ ಬಂದಿದ್ದರು. ಸಿದ್ಧಮ್ಮ ಕೋಣೆಯ ಬಾಗಿಲಲ್ಲಿ ಮಗುವನ್ನೆತ್ತಿಕೊಂಡು ನಿಂತಳು. ಪಾತ್ರೆಗಳನ್ನು ತೊಳೆಯಲೆಂದು ಹೊರಟಿದ್ದ ಚಂದ್ರಮ್ಮ ಅಲ್ಲಿಯೇ ನಿಂತು, ಕತ್ತು ವಾಲಿಸಿ ನೋಡಿದಳು. ಬಂದಿದ್ದವನು ಅವಳ ತಂದೆಯೇ ಆಗಿದ್ದ. ಹಾಗೇ ಗೋಡೆಗೊರಗಿ ಯಾರಿಗೂ ಕಾಣದಂತೆ ನಿಂತಳು.

ಸಣ್ಣಮ್ಮ, ಚಂದ್ರಮ್ಮನ ತಂದೆಯನ್ನು ಬಂದು ಮಾತನಾಡಿಸಿದಳು "ಏನಾರ ಉಣ್ತಿಯೇನೋ ಶಿವಣ್ಣಾ...? ಎಲ್ಲಿಂದ ಬರ್ತೀದೀಯಾ? ಯಾವಾಗ ಹೊಂಟೆ?" ವಿಚಾರಿಸಿದಳು.

"ಹೊತ್ತಾರೇನೇ ಹೊಂಟೆ ಕಣಕ್ಕಯ್ಯ. ಇಲ್ಲೇ ಪಕ್ಕದ್ನ ಹಳ್ಳಿಗೆ ಬಂದಿದ್ದೆ. ಹಂಗೇ ನಿಮ್ಮನ್ನೆಲ್ಲಾ ನೋಡಿ ಹೋಗನಾ ಅಂತ ಬಂದೆ."

"ಒಳ್ಳೇದಾತು.... ನಾನೇ ನಿಂಗೆ ಹೇಳಿ ಕಳ್ಸೋವ' ಅಂತಿದ್ದೆ. ನಿನ್ನ ಮಗಳನ್ನ ನಿನ್ನ ಮನೆಗೆ ಕರ್ಕೊಂಡು ಹೋಗಿ ನಾಕೊಪ್ಪತ್ತು ಇಟ್ಕೊಂಡು ಕಳ್ಸು. ಆ ಹುಡ್ಗಿ ಜರ್ಕಂಡಿದೆ."

"ಏನಾಯ್ತು ಚಂದ್ರಿಗೆ! ಎಲ್ಲಿ ಅವಳೂ...? ಬಿಮ್ಮನ್ಸಿ ಆಗಿದಾಳೇನು!" ಅವನು ಉತ್ಸಾಹದಿಂದ ಕೇಳಿದಾಗ, ಅವಳು ಅವನಿಗೆ ತಣ್ಣೀರೆರೆಚಿದಳು.

"ಆ ಭಾಗ್ಯ ನಿನ್ನ ಮಗಳ್ಗೆಲ್ಲೈತೆ! ಶಿವ ಕಣ್ಣು ಬಿಟ್ಟಿದ್ರೆ, ಈಟೊತ್ತಿಗೆ ಎರಡ್ನೇ ಬಾಣಂತನಕ್ಕೆ ನಿನ್ನ ಮನೆಗೆ ಬಂದಿರೋಳು.. ಮೈಯಾಗೆ ನೆಣವೇ ಇಲ್ಲ, ಅದೇನು ತಿನ್ಸಿ ಬೆಳೆಸಿದೀರೋ ನಾ ಕಾಣೆ..."

"ಯಾಕಕ್ಕಯ್ಯಾ ಹಿಂಗಂತೀ? ಹೋದ್ಸಾರಿ ಬಂದಾಗ ವೈನಾಗೇ

ಇದ್ದಲ್ಲ.... ಇಲ್ಲೇನು ಕಷ್ಟ ಅವಳ್ಗೆ?"

"ಅದೇ ನಂಗೂ ತಿಳೀದು, ನಮ್ಮನ್ನ ದೂರೋ ಬುದ್ಧಿ ಅದಕ್ಕೆ. ಅಲ್ದೆ ಮಕ್ಕಳಾಗೂ ಹಂಗೆ ಕಾಣ್ತಿಲ್ಲ, ಅದೇ ಕೊರ್ಗು ಅದಕ್ಕೆ. ಏನಾದ್ರೂ ಅರ್ಕೆ ಗಿರ್ಕೆ ಉಳ್ಸಿಕೊಂಡಿದೀರೋ ಹೆಂಗೆ? ಊರಮ್ಮನ ಜಾತ್ರೆಗೆ ಕರ್ಕೊಂಡೋಗಿ ಕಾಣ್ಕೆ ಹಾಕ್ಸಿ ಬಾ..." "ಹೋಗೋ ರವಿ ನಿಮ್ಮ ಚಿಗವ್ವನ್ನ ಕರೀಲೇ...." ಮೊಮ್ಮಗನನ್ನು ಅಟ್ಟಿದಳು.

ರವಿ ಹೋಗಿ ಕರೆಯುವ ಮೊದಲೇ, ಚಂದ್ರಿ ಇತ್ತ ಬಂದಳು. ಶಿವಪ್ಪ ಮಗಳ ಕಡೆ ನೋಡಿದ. ಮಗಳನ್ನು ತಾನೆಂದೂ ಸರಿಯಾಗಿ ನೋಡೇ ಇಲ್ವಲ್ಲ ಅಂತನ್ನಿಸ್ತು. "ಚಂದ್ರೀ ಏನಾಗ್ಯೆತೆ ನಿಂಗೆ! ಯಾಕ್ ಜರ್ಕಂಡಿದೀಯಾ... ನಮ್ಮನ್ನೆಲ್ಲಾ ಕಾಣ್ಬೇಕು ಅಂತನ್ಸಿದ್ರೆ ನಿಮ್ಮ ಅತ್ತೆಗೆ ಹೇಳಿದ್ರೆ ಕಳ್ಸೋದಿಲ್ಲ ಅಂತಿದ್ಲೇನು?"

"ಇಲ್ಲ ಕಣಪ್ಪಯ್ಯ ನಾನೆಲ್ಲೂ ಬರೋದಿಲ್ಲ, ನಾನು ವೈನಾಗೇ ಇದೀನಿ."

"ವೈನಾಗಿರೋ ಮುಸುಡೀನಾ ಇದು! ನಿನ್ನ ಗಂಡಂಗೆ ಬೇಸ್ರ ಬರ್ದೆ ಇರ್ತದಾ! ಹೋಗು ನಾಕ್ಕೊಪ್ಪತ್ತು ಇದ್ದು ಬಾ. ನಾನು ಗಂಗಾಧರನ್ನು ಕಳಿಸ್ತೀನಿ, ಕರ್ಕೊಂಡು ಬರ್ತಾನೆ" ಅತ್ತೆ ಮತ್ತೆ ನುಡಿದಳು.

"ನಾನು ಎಲ್ಲೂ ಹೋಗೋದಿಲ್ಲ, ಯಾರೂ ಬಲವಂತ ಮಾಡ್ಬೇಡಿ" ಎಂದು ಹೇಳಿ ಅಲ್ಲಿಂದ ಮರೆಯಾಗಿದ್ದಳು.

"ಬರೋದಿಲ್ಲ ಅಂತಂದ್ರೆ ನಾನೇನು ಎತ್ಕೊಂಡು ಹೋಗೋಕ್ಕಾಯ್ತದಾ! ನಿನ್ನ ಮಗನ ಕೂಟೇನೇ ಕಳ್ಸು.... ಅವನೂ ಎರಡ್ದಿನ ನಮ್ಮ ಮನೀಲಿರ್ಲಿ." ಶಿವಪ್ಪನ ಮಾತು, ಸಣ್ಣಮ್ಮನಿಗೆ ಸರಿಯೆನಿಸಿತು.

"ಹಂಗೇ ಮಾಡ್ತೀನಿ, ಹೆಂಗೂ ಬಂದಿದೀಯ, ಚಿತ್ರಾನ್ನ ಕಲ್ಸೀದೀನಿ, ಉಣ್ಣುವಂತೆ, ಕೈ ಕಾಲು ತೊಳೆದು ಬಾ. ಚಂದ್ರೀ ನಿಮ್ಮಪ್ಪಯಂಗೆ ಕೈ ಕಾಲಿಗೆ ನೀರು ಕೊಡವ್ವಾ.." ಚಂದ್ರಿ ಅತ್ತ ನಡೆದಳು ಅವಳ ತಂದೆ ಅವಳ ಹಿಂದೆ ನಡೆದ.

ಊಟದ ಸಮಯವಾದರೂ ಗಂಗಾಧರ ಮನೆಗೆ ಬಂದಿರಲಿಲ್ಲ. ಅವನಿಗಾಗಿ ಕಾಯದೇ ಮನೆಯವರು ಊಟಕ್ಕೆ ಕುಳಿತರು ಬಡಿಸುತ್ತಿದ್ದ ಮಗಳ ಕಡೆ ಆಗಾಗ್ಗೆ ಶಿವಪ್ಪ ನೋಡುತ್ತಿದ್ದ. ಮಗಳೊಡನೆ ಏಕಾಂತದಲ್ಲಿ ಮಾತನಾಡುವ ಸಮಯವೂ ಒದಗಲಿಲ್ಲ. ಅವನು ಅದನ್ನು ಅಪೇಕ್ಷಿಸಿರಲಿಲ್ಲ. ಅವನು ತನ್ನ ಊರಿಗೆ ಹಿಂತಿರುಗಿದ್ದ.

* * *

"ನಿಮ್ಮಾವ ಬಂದಿದ್ದ, ನಿಮ್ಮಿಬ್ರನ್ನೂ ಊರ ಜಾತ್ರೆಗೆ ಕರೆದೊಯ್ಯುಕ್ಕೆ

ಅಂತ ನಿನ್ನೆ ರಾತ್ರಿ ಕೂಡಾ ಮನಿಗೆ ಬರ್ಲಿಲ್ಲ ನೀನು. ಎಲ್ಲಿದ್ದೆ" ಸಣ್ಣಮ್ಮ ಅಳುಕುತ್ತಾ ಮಗನನ್ನು ದಬಾಯಿಸಿದಳು.

"ಎಲ್ಲೋ ಹೋಗ್ತೀನಿ, ನಿಂಗ್ಯಾಕೆ ಅದೆಲ್ಲಾ! ಮನಿಗೆ ಬಂದ್ರೆ ನಿಮ್ಮಗಳ ಕಾಟ... ನಂಗೆ ಬರೋ ಮನಸ್ಸೇ ಇಲ್ಲ. ನಾನ್ಯಾಕೆ ಬರ್ಬೇಕು ಇಲ್ಲಿಗೆ?"

"ಹಂಗಂದ್ರೆ ಹೇಂಗೋ ಗಂಗಣ್ಣ.... ಇದು ನಿನ್ನ ಮನೆಯಲ್ಲವೇನೋ! ನಿನಗಾಗಿ ನಿನ್ನ ಎಣ್ತಿ ದಾರಿ ನೋಡ್ತಾ ಇರುತ್ತೆ.... ಅದರ ಮನಸ್ಸನ್ನ ನೋಯಿಸ್ಬೇಡ, ಅದ್ಕೂ ಒಂದೋ ಎಲ್ಡೋ ಹೈಕಳು ಇದ್ದಿದ್ರೆ, ಎಷ್ಟೋ ಪಸಂಧಾಗಿರ್ತಿತ್ತು."

"ಅದ್ಕೆ ನಾನು ಹೊಣೆನಾ! ನಿನ್ನ ಸೊಸೆ ಬಂಜೆ... ನೋಡು ಹೆಂಗಿದಾಳೆ! ಮೈಯಲ್ಲಿ ನೆಣ ಐತಾ! ಮೂಸಕ್ಕೆ ಮನಸ್ಸು ಬತ್ತದಾ! ಫ್ಯಾಟೆ ಹುಡ್ಗೀರು ಹೆಂಗಿರ್ತಾರೆ ನಿಂಗೇನು ಗೊತ್ತದೆ? ಮನೆ ಕೆಲ್ಸ ಮಾಡ್ಕೊಂಡು ಬಿದ್ದಿರ್ತೀರಿ. ನಿಮ್ಗೇನು ತಿಳೀತದೇ?"

"ನಮ್ಮ ಬದ್ಕೆ ಅದಲ್ವೇನೋ, ಸರಿ ಹೊಂದಿಸ್ಕೋಬೇಕು. ಮುನಿಸ್ಕೊಂಡ್ರೆ ಆಯ್ತದಾ! ಊರ ಜಾತ್ರೆಗೆ ನಿನ್ನ ಎಣ್ತೀನೂ ಕರ್ಕೊಂಡು ಹೋಗು. ನಾಕು ದಿನ ಅಲ್ಲಿ ಹಾಯಾಗಿರ್ಲಿ. ಇಲ್ಲಿ ದುಡ್ಕೊಂಡು ಬಿದ್ದಿರ್ತದೆ. ಅವ್ರೆಲ್ಲಾ ಏನಂದ್ಕೊಂಡಾರು?"

"ನಾನೊಲ್ಲೆ ನೀನೇ ಕರ್ಕೊಂಡೋಗು...."

"ಇಲ್ಲಿ ನಿಮ್ಮತ್ಗೆ ಬಾಣಂತಿ, ಗೌಡ್ರು ಒಬ್ರೆ ಎಂಗೆ ನೋಡ್ಕೋತಾರೆ! ನಿಮ್ಮಣ್ಣನೂ ಒಂಟಿ... ಅವನೇ ಇಲ್ಲಾ ಮಾಡ್ತಿಲ್ವಾ! ನಿಂಗೆನು ಕೆಲ್ಸ ಐತೆ!"

"ನಂಗೂ ನನ್ನ ಪಾಲಿನ ಜಮೀನು ಕೊಡ್ಸು, ನಾನು ಗೈಯ್ತೀನಿ..."

"ಏನು ಗೈಯ್ತೀಯ ಮಣ್ಣು! ನಿಂಗೇನು ಗೊತ್ತದೆ! ಮಾರ್ಕೊಂಡು ತಿಂತೀಯ ನಂಗೊತ್ತು, ನಿನ್ನ ಗೆಣೇರು ಸರಿ ಇಲ್ಲ. ಪೋಲಿ ಬಿದ್ಹೋಗಿದೀಯ ನೀನು.... ಮನೆ ಮಠ ಎಣ್ತಿ ಮಕ್ಕಳು ಅನ್ನೋ ಗ್ಯಾನವೇ ಇಲ್ಲ ನಿಂಗೆ..."

"ಮಕ್ಳು ಎಲ್ಲವೆ ಮಕ್ಳು? ಅಪ್ಪಯ್ಯ ಅಂತ ಕರ್ಯೋ ಮಕ್ಳು ಇವೆಯಾ ನಂಗೆ! ನಿಂಗೆ ನಾಕು ಮಕ್ಳು, ಅಣ್ಣಂಗೆ ಎರಡು ಮಕ್ಳು... ನಂಗೇನೈತೇ ಮನೇಲಿ ಸುಖ! ಅದಕ್ಕೇ ಬಡ್ಕೊಂಡೆ ನಂಗೆ ಮತ್ತೊಂದು ಲಗ್ನ ಕಟ್ಟಿಸು ಅಂತ. ನಿನ್ನ ಸೊಸೇನ ತವರಿಗೆ ಅಟ್ಟಿ ಕಳ್ಸು. ನಂಗೆ ಮತ್ತೆ ಲಗ್ನ ಕಟ್ಸು. ಎಂಟು ಮಕ್ಕಳನ್ನು ಹೆತ್ತು ಕೊಡುವಂಥ ಸೊಸೀನ ಕರ್ಕೊಂಡ್ಬಾ...."

"ಮದ್ವೆ! ಮದ್ವೇ! ಮುಂದೆ ಚಂದ್ರಮ್ಮನ ಗತಿ! ಅದಕ್ಕೆ ನೋವಾಗುಲ್ವಾ?"

"ತಿಂದ್ಕೊಂಡು, ಬಿದ್ದಿರ್ಲಿ.... ಯಾರು ಬೇಡಂದ್ರೂ! ಈ ಮನೇಲಿ ನಾಲ್ಕು ಹೊತ್ತಿನ ಕೂಳಿಗೆ ಗತಿ ಇಲ್ವಾ? ತಿಂದ್ಕೊಂಡು ಉಂಡ್ಕೊಂಡು ನನ್ನ

ಮಕ್ಳನ್ನ ಆಡಿಸ್ಕೊಂಡು ಬದುಕ್ಲಿ."

"ಹೀಂಗೆಲ್ಲಾ ಮಾತಾಡ್ಬೇಡ, ಸವತೀರು ಕಿತ್ತಾಡ್ಕೋಲ್ವಾ? ಏನ್ ಚಂಪ ಅದು!"

"ಚಂದ್ರಿ ಮೂಗಸು ಇದ್ದಂಗೆ ನಿನ್ಮಾತು ಕೇಳ್ತದೆ. ಮಾತಾಡಿ ಒಪ್ಸು ನಂಗೆ ಹುಟ್ಟೋ ಮೊದಲ್ನೇ ಮಗೂನ ಅವಳ ಮಡಿಲಲ್ಲೇ ಹಾಕ್ತೀನಿ, ಸಾಕ್ಕೊಂಡು ಬಿದ್ದಿರ್ಲಿ. ಇನ್ನೇನ್ಬೇಕು ಅದಕ್ಕೆ? ಅವ್ವಾ.... ನೀನು ಆಕೀನ ಒಪ್ಸಿದ್ರೆ, ನಾನು ಮನೆಗೆ ಬರ್ತಾಹೋಯ್ತಾ ಇರ್ತೀನಿ. ಇಲ್ದಿದ್ರೆ ಪ್ಯಾಟೆಯಾಗೇ ಇದ್ದು ಬಿಡ್ತೀನಿ.... ಆಮ್ಯಾಕೆ ಮಗನೂ ಇಲ್ಲ, ಮೊಮ್ಮಕ್ಕಳೂ ಇಲ್ಲ... ಅವ್ವಾ ಚಂದ್ರೀನ ಒಪ್ಸೆ.... ಅವಳೇ ಊಂ ಅಂದ್ರೆ, ಯಾರೂ ಗಲಾಟೆ ಮಾಡೋರಿಲ್ಲ.." ತಾಯಿಯ ಕೈ ಹಿಡಿದು ಘುತ್ತೆ ಮತ್ತೆ ಒತ್ತಿ ಹೇಳಿದ.

"ಹೂಂ, ನೋಡಾವ, ಮೊದ್ಲು.... ಚಂದ್ರಮ್ಮನ್ನ ತವರು ಮನೆಗೆ ಕರ್ಕೊಂಡು ಹೋಗಿ ಬಾ. ಆಕಿಗೂ ಖುಸಿಯಾಗ್ತದೆ. ಜಾತ್ರೆಗೆ ಕರ್ಕೊಂಡೋಗು, ಪೇಟೆ ಸುತ್ಸು.... ಪ್ರೀತಿ ಮಾಡು... ಒಪ್ಕೋಬೌದು." ತಾಯಿಯ ಮಾತಿನಲ್ಲಿ ಅರ್ಥವಿದೆ ಎನಿಸಿತ್ತು.

ಚಂದ್ರಿಗಾಗಿ ಕಾಯುತ್ತಾ ಕುಳಿತವನ ಕಡೆ ನೋಡದೇ ಅವಳು ಮಂದಲಿಗೆಯನ್ನು ಎಳೆದುಕೊಂಡು ಹಾಸಿ ಮಲಗಲು ಸಿದ್ಧಳಾದಳು. ಬಾಗಿಲನ್ನು ಭದ್ರಪಡಿಸಿ, ಅವನು ಚಂದ್ರಿಯನ್ನು ಮಂಚದ ಕಡೆಗೆ ಎಳೆದ. "ಏಟು ದಿನ ನೆಲದ್ಮೇಲೆ ಮಲಗ್ತೀಯಾ ಚಂದ್ರಿ.... ಇಲ್ಲೇ ನನ್ನ ಮಗ್ಗುಲಿಗೆ ಮನಕ್ಕೋ ಬಾ..."

"ನಿಂತಾವ ಸಾರಾಯಿ ವಾಸ್ನೆ, ನಂಗೆ ವಾಕರಿಕೆ ಬತ್ತದೆ."

"ನೀನೂ ಕುಡಿದ್ನೋಡು ಹೆಂಗಿರ್ತದೆ ಅಂತ.... ಆಮೇಲೆ ಬಿಡಾದೇ ಇಲ್ಲ ನೀನು."

"ಥೂ ಹಿಂಗೆಲ್ಲಾ ಮಾತಾಡ್ಬೇಡಿ ನೀವು. ನಾನೇನು ಅನ್ಯಾಯ ಮಾಡಿದೀನಿ ನಿಮ್ಗೆ?"

"ಅನ್ಯಾಯ ಮಾಡಿಲ್ವಾ... ಎಷ್ಟು ಮಕ್ಕಳನ್ನು ಹೆತ್ತಿದೀಯ?" ಜಬ್ಬರಿಸಿ ಕೇಳಿದ.

"ಮಕ್ಳು! ಮಕ್ಳು! ನಂಗೆ ಆಸೆ ಇಲ್ವಾ! ನನ್ನನೆಂದಾದ್ರೂ ಕೇಳಿದೀರಾ!"

"ಹಂಗಾರೆ, ನಂಗೆ ಇನ್ನೊಂದು ಮದ್ವೆ ಮಾಡ್ಕೊಳ್ಳಕೆ ಒಪ್ಗೆ ಕೊಡು. ಸವತಿ ಜೊತೆ ಹೊಂದ್ಕಂಡಿರು. ನನ್ನ ಮಕ್ಳನ್ನ ನಿನ್ನ ಮಕ್ಳೂ ಅಂತ್ಲೇ ತಿಳ್ಕೋ.... ನಿನ್ನಾಸೆ ತೀರ್ತದೆ."

"ನಿಮ್ಮ ಹೆಂಡ್ತಿ ಮಕ್ಳ ಸೇವೆ ಮಾಡ್ಕೊಂಡು ನಾನು ಇಲ್ಲಿ ಬಿದ್ದಿರ್ಬೇಕಾ?"

"ಸರಿ ಹಂಗಾದ್ರೆ ನಿನ್ನ ತವರು ಮನೆಗೆ ಹೊಂಟೋಗು. ಗಂಡ ಬಿಟ್ಟೋಳು ಅಂತ ಮಂದಿ ಹತ್ರ ಮಾತು ಕೇಳು.... ಅದೇ ವೈನ ನಿಂಗೆ."

"ಇನ್ನೆಲ್ಡು ವರ್ಷ ಕಾಯೋಣ, ನಂಗೇ ಮಕ್ಕಳಾದ್ರೂ ಆಗ್ಬೌದು, ಅಪ್ಪಯ್ಯ ಹರಕೆ ತೀರಿಸ್ತಾರೆ, ನಮ್ಗೇ ಮಕ್ಕಳಾಯ್ತದೆ."

"ಆಗೋದಾದ್ರೆ ಇಷ್ಟೊತ್ತಿಗೆ ಆಗ್ಬೇಕಿತ್ತು. ನಿನ್ನಾಸೆ ಹಂಗಿದ್ರೆ ಹಂಗೇ ಆಗ್ಲಿ. ನಾಳೇನೇ ನಾನೂ ನೀನು ನಿಮ್ಮಪ್ಪನ ಮನಿಗೆ ಹೋಗೋಣ... ಅಲ್ಲಿ ನಾಲ್ಕು ದಿನ ಇದ್ದು ನಿಮ್ಮವ್ವನ ಕೈನಲ್ಲಿ ಆರೈಕೆ ಮಾಡಿಸ್ಕೊಂಡು ಗುಂಡಗಾಗಿ ಬಾ... ನೀ ಹಿಂಗೆ ಕಡ್ಡಿ ಹಂಗಿದ್ರೆ ನಾನು ಹೇಂಗೆ ಪ್ರೀತಿ ಮಾಡ್ಲಿ!" ಅವನು ನಗುತ್ತಾ ನುಡಿದಾಗ ಅವಳಿಗೆ ಅಸಹ್ಯವೆನಿಸಿತ್ತು. ಆದರೂ ಗಂಡನ ಉಪಟಳ ವನ್ನು ತಡೆದುಕೊಂಡಳು. ಅವಳಿಗೂ ಏನೋ ದೂರದ ಆಸೆ!

* * *

ಅಪರೂಪಕ್ಕೆ ಬಂದ ಅಳಿಯ ಮಗಳನ್ನು ಮನೆಯವರು ಸಂತೋಷ ದಿಂದ ಬರಮಾಡಿಕೊಂಡರು. ವಿಚಾರಿಸಿದರು, ಉಪಚರಿಸಿದರು. ಹಿಂಬಾಗಿಲಿ ನಿಂದ ಒಳ ಬಂದ ಸರೋಜಳ ಮೇಲೆ ಅವನ ದೃಷ್ಟಿ ಹರಿಯಿತು. ಬೆಳೆದು ನಿಂತಿದ್ದವಳನ್ನು ಗುರುತಿಸಲಾಗಿರಲಿಲ್ಲ. ಬಿಸಿಲಿನ ಝಳಕ್ಕೆ ಅವಳ ಮುಖ ಕೆಂಪಗಾಗಿತ್ತು. ಯಾರೋ ನೆಂಟರು ಬಂದಿರುವರೆಂದು ತಿಳಿದ ಅವಳು ಒದ್ದೆಯ ಕೈಯಲ್ಲಿ ಮುಖವನ್ನು ಒರೆಸುತ್ತಾ ಒಳಗೆ ನಡೆದಳು. ಅವನ ದೃಷ್ಟಿ ಅವಳನ್ನು ಹಿಂಬಾಲಿಸಿತು. ತುಟಿಗಳನ್ನು ನಾಲಗೆಯಿಂದ ಸವರಿಕೊಂಡು, ಒದ್ದೆ ಮಾಡಿಕೊಂಡು, ಮೀಸೆಯಡಿಯಲ್ಲಿ ನಕ್ಕ. ಅವನ ಕೈ ಬೆರಳುಗಳು ಮೀಸೆಯ ತುದಿಯನ್ನು ಚೂಪು ಮಾಡಿಕೊಂಡವು. ಚಂದ್ರಮ್ಮ ಒಳಗೆ ನಡೆದಿದ್ದಳು. ಅವಳ ಚಿಕ್ಕಪ್ಪ, ಅವನ ಮಕ್ಕಳು ಗಂಗಾಧರನನ್ನು ಸುತ್ತುವರಿದವು. ಗಂಗಾಧರ ಚಡಪಡಿಸುತ್ತಿದ್ದ. ಅವನ ದೃಷ್ಟಿ ಸರೋಜ ಹೊರಗೆ ಬರುವಳೇನೋ ಎಂದು ಕಾತರಿಸುತ್ತಿತ್ತು.

ಗಂಡ ಅವಳೊಡನೆ ಕುಚೇಷ್ಟೇಯ ಮಾತುಗಳನ್ನಾಡು ವುದು, ಅವಳ ಮೈಕೈ ತಗುಲಿಸಿಕೊಂಡು ಓಡಾಡುವುದು ಇವಳ ಗಮನಕ್ಕೆ ಬಂತು. ಇಲ್ಲಿ ಹೆಚ್ಚು ದಿನಗಳು ಉಳಿದರೆ, ತನ್ನ ಗಂಡನಿಂದ ಏನು ಅಪಚಾರ ನಡೆದು ಬಿಡುವುದೋ ಎಂಬ ಆತಂಕ ಅವಳನ್ನು ಕಾಡತೊಡಗಿತು. ಎರಡು ದಿನಗಳು ಕಳೆಯುವಷ್ಟರಲ್ಲಿ ಅವಳ ಸಂದೇಹ ಹೆಚ್ಚಾಗತೊಡಗಿತು. ಅವನು [illegible] ಹೇಸುವವನಲ್ಲ ಎಂದು ಮತ್ತೆ ಮತ್ತೆ ಅನ್ನಿಸತೊಡಗಿತು.

ಗಂಡ ತನ್ನನ್ನು ಅಲ್ಲಿ ಬಿಟ್ಟು ಊರಿಗೆ ವಾಪಸ್ಸು ಹೋಗುವನೇನೋ ಎಂದುಕೊಂಡ ಚಂದ್ರಮ್ಮನಿಗೆ, ಅವನು ಅಲ್ಲಿಯೇ ಉಳಿದುಕೊಂಡಿದ್ದು ಅಚ್ಚರಿಯಾಗಿತ್ತು. ಎಲ್ಲರೊಡನೆ ಮಾತನಾಡುತ್ತಾ ಕುಳಿತಿದ್ದವನನ್ನು ಕಂಡು ತಿರಸ್ಕಾರವೂ ಮೂಡಿತು. ಇವನ ಮನಸ್ನಲ್ಲಿ ಏನು ಓಡುತ್ತಿದೆ ಎಂದು ಊಹಿಸಲು ಅಂಜಿದಳು. ಆ ರಾತ್ರಿ ಕಳೆಯುತ್ತಿದ್ದಂತೇ ಗಂಡನೊಡನೆ ಹೇಳಿದಳು

"ನಂಗೆ ಇಲ್ಲಿ ಸರಿ ಹೋಗ್ತಿಲ್ಲ. ಅಲ್ಲಿ ಅತ್ತೆಗೆ, ಅಕ್ಕಂಗೆ ತೊಂದರೆ ಆಗುತ್ತೆ, ಇವತ್ತೇ ವಾಪಸ್ಸು ಹೊಗೋಣ." "ಯಾಕ್ ಚಂದ್ರೀ, ಇದು ನೀನು ಹುಟ್ಟಿ ಬೆಳೆದ ಮನೆ. ಇಲ್ಲಿ ಸರಿ ಹೋಗದಿದ್ರೆ ಇನ್ನೆಲ್ಲಿ ಸರಿ ಹೋಯ್ತದೆ? ನಾಲ್ಕು ದಿನವಾದ್ರೂ ಇದ್ದು ಹೋಗೋಣ."

"ನಿಮ್ ಕೂಡೇ ಲಗ್ನ ಮಾಡಿ ಕೊಟ್ಟಾಗ್ಲೇ ಈ ಮನೆಯಿಂದ ನಾನು ದೂರವಾದೆ. ಆ ಮನೆ ನನ್ನದಾಯ್ತು. ದುಡಿಯೋ ಗಂಡ್ಸು ನೀವು. ಮಾವನ ಮನೇಲಿ ಉಳಕಂಡ್ರೆ ಜನ ಏನಂದ್ಕೊಳ್ತಾರೆ. ನಮಗೆ ನಮ್ಮ ಮನೆಯೇ ಸರಿ, ವಾಪಸ್ಸು ಹೋಗೋಣ."

"ಯಾಕ್ ಚಂದ್ರೀ ಏನಾಯ್ತು? ಯಾರಾದ್ರೂ ಏನಾದ್ರು ಅಂದ್ರಾ?"

"ನಂಗೆ ಮಕ್ಕಳಾಗಿಲ್ಲ ಅಂತ ಇಲ್ಲಿ ಪದೇ ಪದೇ ಎಲ್ರೂ ಕೇಳ್ತಾರೆ. ನಿಮ್ಮ ಬಗ್ಗೆ ಅಯ್ಯೋ ಅಂತಾರೆ. ನಂಗೆ ಸಂಕಟ ಆಗುತ್ತೆ...." ಗಂಡನನ್ನು ಚುಚ್ಚಿದಳು.

"ಅರೇ, ಚಂದ್ರಿ ನನ್ ಚಿಂತೆ ಬಿಡು, ನಿಂಗೆ ಇಲ್ಲಿ ಎಷ್ಟು ದಿನ ಇರ್ಬೇಕು ಅಂತ ಅನ್ನುತ್ತೋ ಅಷ್ಟು ದಿನ ಇದ್ದು ಬಾ.... ನಾನು ಆಗ ಈಗ ಬಂದು ನಿನ್ನನ್ನ ನೋಡ್ಕೊಂಡು ಹೋಗ್ತೀನಿ. ಇವರು ನಿನ್ನ ಮನೆಯೋರೇ ಅಲ್ವಾ? ನಿಂಗ್ಯಾಕೆ ಬೇಜಾರು!" ಅವನ ಮುಗುಳ್ನಗುವಿನ ಹಿಂದೆ ಕಪಟವಿದೆ ಎಂದು ತಿಳಿದಳು. "ನಂಗೆ ಅಲ್ಲಿಯ ಜೀವನ ಒಗ್ಗಿ ಹೋಗಿದೆ. ನಾನು ಇಲ್ಲಿ ಇರ್ಲಾರೆ. ಹೋಗೋಣ."

"ಸರಿ ಏನಾದ್ರೂ ಮಾಡ್ಕೋ, ಅವ್ವನ ಮಾತು ಕೇಳ್ಕೊಂಡು ನಿಂಜೊತೆ ಬಂದದ್ದೇ ತಪ್ಪಾಯ್ತು" ಅವನು ಸಿಡಿಮಿಡಿಗುಟ್ಟುತ್ತಾ ಎದ್ದು ಸಿದ್ಧನಾದ. ಅವಳೂ ಹೊರಡಲು ಸಿದ್ಧಳಾದಳು. ಅವಳ ಮನೆಯವರು ಅದು ಅವನದ್ದೇ ತೀರ್ಮಾನ ಎಂದು ಭಾವಿಸಿ ಸುಮ್ಮನಾದರು.

"ಚಂದ್ರೀ ನಿನ್ನ ಆರೋಗ್ಯಾನ ಚೆನ್ನಾಗಿ ನೋಡ್ಕೊಳವ್ವಾ... ಬಾಣಂತನಕ್ಕೆ ಎಂದು ಬಂದೀಯೋ ಅಂತ ಕಾಯ್ತಾ ಇದೀನಿ... ಸಿಹಿ ಸುದ್ದೀನ ಯಾವಾಗ ತಿಳಿಸೀಯಾ?" ಚಿಕ್ಕಮ್ಮ ತಮಾಷೆ ಮಾಡಿದಾಗ ಅವಳಿಗೆ ಉಸಿರು ಕಟ್ಟಿ

ದಂತಾಗಿತ್ತು. ಚಂದ್ರಮ್ಮ ಸಮಾಧಾನದ ಉಸಿರನ್ನು ಬಿಡುತ್ತಾ, ಗಂಗಾಧರ ಸಿಡಿಮಿಡಿಗುಟ್ಟುತ್ತಾ ಗಾಡಿಯನ್ನು ಹತ್ತಿದರು. ಬಾಗಿಲಲ್ಲಿ ನಿಂತಿದ್ದ ಸರೋಜಿಯ ಕಡೆ ಕಣ್ಣರಳಿಸಿ ನೋಡಿದ.

ಎರಡು ದಿನದ ಹಿಂದೆ ಹೋದವರು, ಇಷ್ಟು ಬೇಗ ಹಿಂತಿರುಗಿದ್ದನ್ನು ಕಣ್ಣರಳಿಸಿ ನೋಡಿದ ಕಂಡು ಸಣ್ಣಮ್ಮ ಆತಂಕಗೊಂಡಿದ್ದಳು. ಅಲ್ಲಿ ಏನೋ ನಡೆದಿದೆ. ಮಗ ಸಿಟ್ಟುಗೊಂಡತ್ತಿದ್ದಾನೆ. ಸೊಸೆ ಮೌನವಾಗಿದಾಳೆ, ಸಮಯ ಕಾದು ಮಗನೊಡನೆ ಮಾತಾಡಿದಳು. "ಏನಾಯ್ತೋ ಗಂಗಣ್ಣ ಹೀಗೆ ಹೋಗಿ ಹಾಗೆ ಬಂದ್ಬಿಟ್ರಿ. ಅಲ್ಲಿ ಸರಿ ಹೋಗ್ಲಿಲ್ವಾ? ಮಾವನ ಹತ್ರ ಜಗಳ ಆಡಿದ್ಯಾ?"

"ಹೂಂ ನಾನು ಜಗಳಗಂಟ. ನಿನ್ನ ಸೊಸೆ ದೇವತೆ. ಅವಳು ಅಲ್ಲಿ ತಾನೂ ಇರದೇ, ನನ್ನನ್ನು ಇರಗೊಡ್ಲಿಲ್ಲ. ಮಕ್ಕಳಾಗಿಲ್ಲ ಅಂತ ಅವರೆಲ್ಲಾ ಕೇಳ್ಬಿದ್ರಂತೆ. ಮುನಿಸಕೊಂಡು ಹೊರಟೇ ಬಿಟ್ಲು. ನೀನೇ ಹೇಳವ್ವಾ ಅವರೇನಾದ್ರೂ ತಪ್ಪು ಆಡಿದ್ರಾ?"

"ಚಂದ್ರವ್ವ ಮನಸ್ಗೆ ಭಾಳ ಹಚ್ಚಿಕೊಂಡವ್ಳೆ. ಅದಕ್ಕೆ ಬೇಸರ ಆಗಿದೆ."

"ನಂಗೆ ಅವಳ ಹತ್ರಷ್ಟು ಬೇಸ್ರ ಆಗಿದೆ. ಇನ್ನು ನಾನು ಸುಮ್ನಿರಲ್ಲ, ಇನ್ನೊಂದು ಮದ್ವೆ ಆಗೇ ಆಗ್ತೀನಿ. ನಾನು ನಂಗೊಸ್ಕರ ಒಂದು ಹೆಣ್ಣನ್ನು ನೋಡ್ಕೊಂಡಿದೀನಿ." "ಯಾರದು? ಯಾರ್ಯಾರೋ ದಿಕ್ಕು ದೆಸೆ ಇಲ್ಲದೋರನ್ನ ಮನೆಗೆ ಕರ್ಕೊಂಡು ಬರ್ಬೇಡ. ನಂಗೆ ನಿನ್ನ ವಿಸ್ಯ ಎಲ್ಲಾ ತಿಳಿದ್ಯೆತೆ, ಹೊರಗೇ ಮಡಿಕ್ಕಂಡಿರು."

"ಹಂಗೆ ಮಾಡ್ತೀನೇನವ್ವಾ ನಾನು! ಚೆಂದೊಳ್ಳೀ ಹೆಣ್ಣನ್ನೇ ನೋಡಿ ದೀನಿ, ನೀನು ಒಪ್ಕೋ ಬೇಕು. ಚಂದ್ರೀನೂ ಒಪ್ಪಿಸ್ಬೇಕು. ನಾನು ಅವಳಿಲ್ದೆ ಇರುಕ್ಕಾಗಲ್ಲ ಕಣವ್ವಾ ಬೇಗ ಅವರ ಮನೆಯವರನ್ನ ಒಪ್ಸು. ಲಗ್ನ ಕಟ್ಸು." ಅವನು ಉದ್ವೇಗದಿಂದ ನುಡಿದಾಗ ತಾಯಿ ಆತಂಕಗೊಂಡಿದ್ದಳು.

"ಹೋಗ್ಲಿ ಅದ್ಯಾರು ಅಂತ ಹೇಳು... ಮಾತುಕತೆ ಆಡೋಣ..."

"ನಿನ್ಮಗನ್ಮೇಲೆ ಪ್ರೀತಿ ಇದ್ದರೆ, ನನ್ನ ತಲೆ ಮೇಲೆ ಕೈ ಇಟ್ಟು ಆಣೆ ಮಾಡವ್ವಾ... ಆ ಹುಡ್ಗೀನೇ ಸೊಸೆಯಾಗಿ ಮನೆ ತುಂಬಿಸ್ಕೋಳ್ತಿನಿ ಅಂತ. ವರ್ಷದೊಳಗೆ ನಿನ್ನ ಮಡಿಲಿಗೆ ನನ್ನ ಮಗೂನ್ನ ಹಾಕ್ತೀನಿ. ಹಾಗಂತ ನಾನು ನಿನ್ಮೇಲೆ ಆಣೆ ಮಾಡಿ ಹೇಳ್ತೀನಿ." ಅವನು ತಾಯಿಯ ತಲೆಯ ಮೇಲೆ ಕೈಯನ್ನಿಟ್ಟ. ಸಣ್ಣಮ್ಮ ಮಗನ ಆಸೆಗೆ ಮೆತ್ತಗಾದಳು. ಅವನ ತಲೆಯ ಮೇಲೆ ಕೈಯನ್ನಿಟ್ಟಳು.

"ನಿನ್ನಾಣೆ ಗಂಗಣ್ಣ. ನೀ ಆಸೆ ಪಟ್ಟಿರೋ ಹುಡ್ಗಿ ಜತೇಲಿ ನಿನ್ನ ಲಗ್ನ

ಕಟ್ಟಿಸ್ತೀನಿ. ಈಗ್ಲಾದ್ರೂ ಹೇಳು ಆ ಹುಡ್ಗಿ ಯಾರು ಅಂತ"ಪುಸಲಾಯಿಸಿದಳು.

"ಬೇರೆ ಯಾರೂ ಅಲ್ಲ, ಚಂದ್ರಿಯ ಚಿಕ್ಕಪ್ಪನ ಮಗಳು ಸರೋಜಿ. ಹೆಂಗಿದಾಳೆ ಅಂತೀಯ, ರಸಪೂರಿ ಮಾವಿನಹಣ್ಣು ಇದ್ದಂಗವ್ಳೆ. ನಂಗವ್ಳು ಬೇಕೇ ಬೇಕು. ಅವ್ವಾ ನೀನು ಆಣೆ ಹಾಕಿದೀಯ. ಮಾತಿಗೆ ತಪ್ಪಬಾರ್ದು."

ಸಣ್ಣಮ್ಮ ಮಗನ ಮಾತಿಗೆ ಬೆಚ್ಚಿದಳು. ಅವನು ಹೇಳುತ್ತಿರುವುದನ್ನ ನಂಬಬೇಕೋ ಬೇಡವೋ ಬಾಯಿ ಬಿಟ್ಟುಕೊಂಡು ಕುಳಿತಿದ್ದಳು. "ಏನವ್ವಾ ಗರ ಬಡೀತಾ ಹೆಂಗೆ! ನನ್ನಾಸೆ ತಿಳ್ಸಿದೀನಿ ಇನ್ನು ನಿಂಗೆ ಬಿಟ್ಟಿದ್ದು. ಮಾತಿಗೆ ತಪ್ಪಿದೆಯೋ ನನ್ನನ್ನ ಕಳ್ಕೋತಿಯ ಅಷ್ಟೇ."

"ಗಂಗಣ್ಣ ಎಂಥಾ ಬಾಸೆ ತಗೊಂಡ್ಯೋ. ಆ ಹುಡ್ಗಿ ಇನ್ನು ಎಳಸು. ನಿಂಗೆ ತಕ್ಕನಾದ್ದಲ್ಲ, ಅವರುಗಳು ಖಂಡಿತಾ ಒಪ್ಪಲ್ಲ."

"ಹಂಗೆಲ್ಲ ಏನಿಲ್ಲ, ಚಂದ್ರೀ ಹತ್ರ ಮಾತಾಡು. ಅವಳೇ ಮಾತಾಡ್ಲಿ. ಇಲ್ದಿದ್ರೆ ಅವಳು ತವರು ಮನೆಗೆ ಹೋಗ್ಲಿ. ನಾನು ಸರೋಜೀನ ಎತ್ಹಾಕ್ಕೊಂಡು ಹೋಗಿ ಕೆಡ್ಸಿ ಬಿಡ್ತೀನಿ. ಅಷ್ಟೇ. ಆಮೇಲೆ ಅವಳನ್ನ ಯಾರು ಲಗ್ನ ಆಗ್ತಾರೆ? ನಾನೇ ಗತಿ." ಕೆಟ್ಟವನಾಗಿ ನಕ್ಕ.

"ಥೂ ಹೀಗೆಲ್ಲಾ ಮಾತಾಡ್ಬೇಡ ಗಂಗಣ್ಣ, ಯಾರಾದ್ರೂ ಕೇಳಿಸ್ಕೊಂಡ್ರೆ ಏನಂದ್ಕೊಂಡಾರು? ಆಮೇಲೆ ಯಾರಾದ್ರೂ ಹೆಣ್ಣು ಕೊಡ್ತಾರಾ?"

"ಯಾಕೆ ಕೊಡಲ್ಲ? ನಾನೇನು ಗಂಡ್ಸಲ್ವಾ? ಈಗ ಹೇಳಿದ್ನಲ್ಲ ಹಂಗೆ ನಾನು ಮಾಡೋನೇ. ನಾನು ಯಾರ್ಗೂ ಹೆದರೋನಲ್ಲ."

"ಇದೆಲ್ಲಾ ತಪ್ಪಾಯ್ತದೆ ಕಣೋ. ಪಸಂದಾಗಿರೋ ಹುಡ್ಗೀನ ನೋಡಿ ಲಗ್ನ ಕಟ್ಟಿಸ್ತೀನಿ. ಈ ಹುಡ್ಗಿ ಹಂಬಲ ಬಿಡು."

"ಒಂದ್ಸಾರಿ ಮನಸಿಗ್ಬಂದ್ಮೇಲೆ ಹಿಂದಕ್ಕೆ ಹೆಜ್ಜೆ ಇಡೋನಲ್ಲ ನಾನು. ನಿಂಗೊತ್ತಿಲ್ಲ ಕಣವ್ವಾ, ಎಷ್ಟೋ ಜನ ಹೆಣ್ಣನ್ನ ನನ್ನ ಬುಟ್ಟಿಗೆ ಹಾಕ್ಕೊಂಡಿವ್ನಿ. ಆದರೆ ಅವರ್‍ಯಾರನ್ನೂ ಲಗ್ನ ಆಗೂ ಹಂಗಿಲ್ಲ, ನೀನು ನನ್ಮೇಲೆ ಆಣೇನ ಇಕ್ಕಿದೀಯ ಮಾತಿಗೆ ತಪ್ಪಿದ್ರೆ ನಾನು ಗೊಟಕ್."

"ಇಕ್ಕಟ್ಟಿಗೆ ಸಿಕ್ಕಿಸ್ತಿಯಲ್ಲೋ ಗಂಗಣ್ಣ. ಮೊದ್ಲು ಚಂದ್ರಿ ಹತ್ರ ಮಾತಾಡ್ತೀನಿ. ಈಗಾಗ್ಲೇ ಲಗ್ನ ಕಟ್ಸೀದಾರೋ ಏನೋ..."

"ಕಟ್ಟಿಸಿದ್ರೆ? ಅದನ್ನು ತಪ್ಪಿಸಿದ್ರಾಯ್ತು, ನನ್ಹತ್ರ ಪಿಸ್ತೂಲು ಇದೆ. ಅವನ ಚೆಂಡು ಹಾರಿಸಿ ಬಿಡ್ತೀನಿ" ಆಕೆ ಹೆದರಿದಳು.

"ನೀನ್ಯಾಕೋ ಅದನ್ನೆಲ್ಲ ಇಟ್ಕೊಂಡಿದೀಯ?"

"ನನ್ಹತ್ರ ಅದು ಇರೋದಿಂದ್ರಲೇ ನಂಗೆ ಹೆದರ್‍ತಾರೆ ಕಣವ್ವಾ, ಚಂದ್ರಿ

ಏನಾದ್ರೂ ಅಡ್ಡ ಬಂದ್ರೇ ಅವಳನ್ನು ಸುಟ್ಟು ಹಾಕಿಬಿಡ್ತೀನಿ. ನಾಳೆಯೊಳಗೆ ಫೈಸ್ಲು ಆಗಿ ಬಿಡ್ಬೇಕು. ಹುಣ್ಣಿಮೆಗೆ ಮದ್ವೆ ಅವತ್ತೇ ಪ್ರಸ್ಥ. ಏನಂತೀಯೆ?" ಗೊಳ್ಳನೆ ನಕ್ಕ. "ಥೂ ನಿನ್ನ ಮುಖಕ್ಕಿಷ್ಟು ಉಗಿಯ. ತಾಯಿ ಹತ್ರ ಆಡೋ ಮಾತಾ ಇದು? ಎರಡ್ನೇ ಲಗ್ನ ಆದ್ರೂ ಚಂದ್ರೀನ ಚೆನ್ನಾಗಿ ನೋಡ್ಕೋತೀನಿ ಅಂತ ಬಾಸೆ ಕೊಡು. ಅದು ನಿನ್ನನ್ನು ಬಿಟ್ಟು ಎಲ್ಲಿಗೆ ಹೋದೀತು?"

"ಅವಳ್ಗೇ ಇಷ್ಟವಿದ್ದರೆ ಇರ್ಲಿ... ಇಲ್ಲದಿದ್ರೆ ತವರಿಗೆ ಹೋಗ್ಲಿ... ನಂಗೆ ಅವಳ ಸಾವಾಸ ಸಾಕಾಗಿದೆ. ಅವಳ ಮುಖ ನೋಡೋಕೂ ಅಸಹ್ಯ ಆಗ್ತಿದೆ ನಂಗೆ." "ಗಂಗಣ್ಣ ಹಿಂಗೆಲ್ಲಾ ಮಾತಾಡ್ಬೇಡ್ವೋ ನಿಂಗೆ ಒಳ್ಳೇದಲ್ಲ."

"ಸರಿ ಬಿಡವ್ವಾ ಒಳ್ಳೇದಾವ್ದು ಕೆಟ್ಟದಾವ್ದು ಅಂತ ನಿಂಗಿಂತ ಚೆನ್ನಾಗಿ ನಾನು ಬಲ್ಲೆ. ಈಗ ನಾನು ಮನಗ್ತೀನಿ."

ತಾಯಿ ಬೇಸರ, ದುಗುಡಗಳಿಂದ ಎದ್ದಳು. ಮರೆಯಲ್ಲಿ ನಿಂತು ತಾಯಿ ಮಗನ ಸಂಭಾಷಣೆಗಳನ್ನು ಆಲಿಸಿದ್ದ ಚಂದ್ರಿ ಬಾಯಿಗೆ ಸೆರಗನ್ನು ಒತ್ತಿ ಮರೆಯಲ್ಲಿ ನಿಂತಳು. ಗಂಡನ ಮಾತುಗಳು ಅಸಹ್ಯವೆನಿಸಿದರೆ, ಅತ್ತೆ ಅವನ ಮಾತನ್ನು ಹೆಚ್ಚು ವಿರೋಧಿಸಲಿಲ್ಲವೆನ್ನುವುದು ಮತ್ತೂ ಬೇಸರವನ್ನುಂಟು ಮಾಡಿತ್ತು. ಅತ್ತೆ ಮರೆಯಾದ ನಂತರ ಕಣ್ಣು ಮೂಗುಗಳನ್ನು ಒರೆಸಿಕೊಂಡು ಕೋಣೆಯೊಳಕ್ಕೆ ಬಂದು ಮಲಗುವ ಸಿದ್ಧತೆಗಳನ್ನು ನಡೆಸಿದಳು.

"ಚಂದ್ರೀ," ನಾಲಗೆಯ ಕಹಿಗೆ ಜೇನನ್ನು ಸವರಿ, ಕರೆದ, ಅವಳು ಉತ್ತರಿಸಲಿಲ್ಲ. "ಯಾಕೇ ನನ್ಮೇಲೆ ಕೋಪ್ವಾ? ಇತ್ತ ಬಾಯಿಲ್ಲಿ" ಕರೆದ.

"ನಂಗೆ ನಿದ್ದೆ ಬರ್ತಿದೆ ನಂಗೆ ನಿಂಜೊತೆ ಮಲಗೋ ಮನಸ್ಸಿಲ್ಲ."

"ತುಥ್ ಅದಕ್ಕೆ ಕರೀನಿಲ್ಲ ನಾನು. ಸರೋಜಿನ ನಾನು ಲಗ್ನ ಆಗೋನಾ ಅಂತ ಅಂದ್ಕೊಂಡಿದೀನಿ. ನೀನು ಆಕೀನ ಚೆನ್ನಾಗಿ ನೋಡ್ಕೋಬೇಕು. ಸವತಿ ಮತ್ಸರ ತೋರ್ಬಾರ್ದು." "ನಾನ್ಯಾಕೆ ಸವತಿಯಾಗಲೀ. ಆಕಿ ನನ್ನ ತಂಗಿ. ಅದಿರ್ಲಿ, ಸರೋಜಿ ಹತ್ರ ಮಾತಾಡಿದೀರಾ? ಆಕಿ ಒಪ್ಪದಿದ್ರೆ?.... ಆಕಿ ಬೇಡ, ಬೇರೆ ಯಾರನ್ನಾದ್ರೂ ಲಗ್ನ ಆಗಿ."

"ನಂಗೆ ಉಪ್ದೇಶ ಮಾಡ್ಬೇಡ, ಆಕೀನೇ ಬೇಕು.... ಇಲ್ದಿದ್ರೆ ಒಬ್ಬೊಬ್ಬ ರನ್ನಾಗಿ ಎಲ್ರನ್ನೂ ಸುಟ್ಟು ಬಿಡ್ತೀನಿ, ನನ್ಹತ್ರ ಪಿಸ್ತೂಲು ಇದೆ." ಅವಳು ಹೆದರಿಕೆ ಯನ್ನು ನಟಿಸುತ್ತಾ ಮುಸುಕೆಳೆದು ಮಲಗಿದಳು. ರೋಷ ಹೆಪ್ಪುಗಟ್ಟಿತು. ಭುಸುಗುಟ್ಟಿದಳು.

ಅಪ್ಪಯ್ಯ, ಅವ್ವ ಇಬ್ರೂ ನಿಮ್ಮ ಮನಿಗೆ ಹೋಗಿ ಅವರನ್ನು ಒಪ್ಪಿಸಿ ಲಗ್ನಕ್ಕೆ ಮುಹೂರ್ತ ಕಟ್ಟಿಸ್ಕೊಂಡು ಬರ್ತಾರೆ. ಅತ್ತೂ ಕರೆದು ಅಪಶಕುನ

ಆಡ್ಬೇಡ, ನಂಗೆ ಒಳ್ಳೇದಾದ್ರೆ ನಿಂಗೂ ಆಯ್ತದೆ, ತಿಳ್ಕೋ. ಎಚ್ಚರಿಕೆಯನ್ನು ಕೊಟ್ಟು ಮಲಗಿದ. ಚಂದ್ರಿಯಿಂದ ನಿದ್ದೆ ದೂರವಾಗಿತ್ತು.

* * *

"ಯಾಕ್ ಚಂದ್ರಾ ಒಂಥರಾ ಇದೀಯ ಗಂಗಾಧರ ಏನಾದ್ರೂ ಅಂದ್ನಾ?"

"ಅದು ಇದ್ದದ್ದೇ ಬಿಡಕ್ಕಾ, ಮಕ್ಕಳಾಗಿಲ್ಲ, ಮತ್ತೊಂದು ಮದುವೆ ಆಗ್ತೀನಿ ಅಂತ ಹಠ ಹಿಡಿದು ಕುಂತಿದಾರೆ" ಬಾಣಂತಿಗೆ ಬಡಿಸುತ್ತಾ ನುಡಿದಳು.

"ನೀನು ತವರು ಮನೆಯಿಂದ ಬರ್ಬದ್ರಾಗಿತ್ತು, ಜಾತ್ರೆ ತನಕವಾದರೂ ಇರ್ಬೇಕಾಗಿತ್ತು. ಅವಳು ಉತ್ತರಿಸಲಿಲ್ಲ. ಅತ್ತೆ ಮಾವನ ಜತೇಲಿ ನೀನೂ ಜಾತ್ರೆಗೆ ಹೋಗಿ ಬರಬಹುದಾಗಿತ್ತು."

"ನೀವು ಒಬ್ಬರೇ ಆಗ್ತೀರಲ್ಲ ಅಕ್ಕಾ, ಭಾವನೂ ಅವರ ಜತೇಲಿ ಹೋಗಿದಾರೆ, ಅವ್ರೆಲ್ಲಾ ಇನ್ನು ಬರೋದು ನಾಳೆನೇಯ."

"ಹೌದು, ನಿನ್ನ ಗಂಡಂಗೆ ಬೇಗ ಬರೋಕೆ ಹತ್ಹತ್ತು ಸಾರಿ ಹೇಳಿದಾರೆ, ಊಟಕ್ಕೆ ಬಂದಾಗ, ಮತ್ತೆ ಹೊರಕ್ಕೆ ಹೋಗುಕ್ಕೆ ಬಿಡ್ಲೇ ಬೇಡ."

"ಸರಿ ಕಣಕ್ಕಾ, ಅಡಿಗೆ ಮನೇಲಿ ಒಂದಿಷ್ಟು ಕೆಲ್ಸ ಇದೆ, ನೀವು ಹೋಗಿ ಮಲಕ್ಕಳ್ಳಿ." ಸಿದ್ಧಮ್ಮನನ್ನು ಅತ್ತ ಕಳಿಸಿ, ರೂಮಿಗೆ ಬಂದಳು. ಗಂಡ ಊಟಕ್ಕೆ ಬರದಿದ್ದಾಗ ಅವಳಿಗೆ ಏನೂ ಅನ್ನಿಸಲಿಲ್ಲ. ತನ್ನ ಪಾಡಿಗೆ ತಾನು ತನ್ನ ಕೆಲಸಕಾರ್ಯಗಳನ್ನು ನಿರತಳಾಗಿದ್ದಳು.

ಚೆನ್ನಾಗಿ ಕತ್ತಲಾಗಿತ್ತು. ಗಂಡನ ಬರುವಿಕೆಯನ್ನು ನೋಡುತ್ತಿದ್ದವಳಿಗೆ ಅವನ ಸೀಟಿ ಕೇಳಿಸಿತು. ಬಹಳ ಖುಷಿಯಲ್ಲಿದ್ದಾನೆಂದು ಮತ್ತಷ್ಟು ಖತಿಗೊಂಡಳು. ಮನೆಯೊಳಗಿನ ದೀಪಗಳನ್ನು ಒಂದೊಂದಾಗಿ ಹಚ್ಚಿದ್ದಳು. ಒಳ ಬಂದ ಗಂಗಾಧರ ಸಿಳ್ಳನ್ನು ನಿಲ್ಲಿಸಿದ. "ಅವ್ವಾ-ಅಪ್ಪ ಇನ್ನು ಬಂದಿಲ್ಲೇನು?" ಅತ್ತಿತ್ತ ನೋಡುತ್ತ ಕೇಳಿದ.

"ಇಲ್ಲ" ಅವಳ ಧ್ವನಿ ಅವಳಿಗೇ ಕೇಳಿಸದಂತಿತ್ತು.

"ಚಂದ್ರಿ ನಿನ್ನ ಬಗ್ಗೆ ಅಯ್ಯೋ ಅನ್ನಿಸ್ತದೆ ಕಣೇ. ನೀನೇ ಒಂದು ಕೂಸನ್ನು ಹೆತ್ತಿದ್ರೆ? ಬಂಜೆ ಅಂತ ಮಂದಿ ಅನ್ನೋತಾರಲ್ಲೆ."

"ಉಣ್ಣಕಿಕ್ಲಾ?"

"ಹೂಂ, ಇಕ್ಕು. ಉಂಡು ನಾನು ಜಾತ್ರೆಗೆ ಹೋಗ್ತೀನಿ."

"ನೀವು ಹೋಗ್ಬೇಡಿ ಭಾವನೂ ಮನೇಲಿಲ್ಲ."

"ತುಥ್ ಅವನ.... ಮನೇಲಿರುಕ್ಕೆ ಏನು ರೋಗ ಅವಂಗೆ? ಹೂಂ ಬಡ್ಸು," ಎನ್ನುತ್ತಾ ತಟ್ಟೆಯ ಮುಂದೆ ಕುಳಿತ. ಮಾಡಿದ್ದ ಅಡುಗೆಯನ್ನು

ಗಂಗಾಳಕ್ಕೆ ನೀಡಿ, ಅಲ್ಲಿ ನಿಲ್ಲದೇ ಮುಂಭಾಗಿಲಿಗೆ ಗಾಳಿಗೆ ಮುಖ ಒಡ್ಡಿದಳು. ಹಿತವೆನಿಸಲಿಲ್ಲ, ಒಳಬಂದು ಬಾಗಿಲನ್ನು ಭದ್ರ ಪಡಿಸಿದಳು. ಸಿದ್ಧಮ್ಮನ ರೂಮಿನಿಂದ ಯಾವುದೋ ಮಗು ಅಳುತ್ತಿದ್ದುದು ಕೇಳಿಸುತ್ತಿತ್ತು. ಸಿದ್ಧಮ್ಮ ಜೋಗುಳವನ್ನು ಹಾಡುತ್ತಾ ತೊಟ್ಟಿಲನ್ನು ತೂಗುತ್ತಿರಬಹುದು ಎಂದುಕೊಂಡಳು. ಅವಳ ಮನಸ್ಸು ತೂಗುಯ್ಯಾಲೆಯಾಡುತ್ತಿತ್ತು.

"ಚಂದ್ರಿ ಕೈ ತೊಳೆಯಾಕೆ ತಣಿಗೇಲಿ ನೀರ್ಕೊಡು" ಗಂಡ ಕರೆದದ್ದು ಕೇಳಿಸಿತು. ನೀರು ತುಂಬಿದ ಚೊಂಬನ್ನು ಎತ್ತಿಕೊಳ್ಳಲೆಂದು ಬಾಗಿದ್ದವಳಿಗೆ ಮೂಲೆಯಲ್ಲಿದ್ದ ಹರಿತವಾದ ಮಚ್ಚು ಕಾಣಿಸಿತು. ನೇರವಾಗಿ ಬೀಳುತ್ತಿದ್ದ ದೀಪದ ಬೆಳಕಿಗೆ ಅಲಗು ಹೊಳೆಯಿತು.

ಅಯ್ಯೋ ಸತ್ನಪ್ಪ.... ಎಂದು ಅಬ್ಬರಿಸಿದ ಗಂಗಾಧರನ ಗಂಟಲಿನಿಂದ ಮತ್ತೆ ದನಿ ಹೊರಡಲಿಲ್ಲ. ಮಚ್ಚಿನಿಂದ ಬಲವಾದ ಏಟು ಕತ್ತಿನ ನರಗಳನ್ನು ಕತ್ತರಿಸಿ, ಕತ್ತು ಪಕ್ಕಕ್ಕೆ ವಾಲಿತ್ತು, ದೇಹ ನೆಲಕ್ಕೆ ಉರುಳಿತು. ರಕ್ತ ಚಿಮ್ಮಿ ಚಿಮ್ಮಿ ಹರಿಯಿತು. ಆವೇಶ ಇಳಿದ ನಂತರ ಚಂದ್ರಿ ಗಂಡನ ದೇಹದ ಪಕ್ಕದಲ್ಲಿ ಕುಸಿದು ಕುಳಿತಳು.

ಮನೆಯ ಮುಂದೆ ನೆರೆದಿದ್ದ ಜನ ಸಮೂಹವನ್ನು ಕಂಡು ಗೌಡರು ಪತ್ನಿ ಹಾಗೂ ಮಗನೊಂದಿಗೆ ಮನೆಯೊಳಕ್ಕೆ ಧಾವಿಸಿದರು. ನೆಲಕ್ಕೆ ಉರುಳಿದ್ದ ಮಗನ ರಕ್ತಸಿಕ್ತವಾದ ದೇಹ, ಅವನ ಪಿಸ್ತೂಲು, ಅವನ ಸಮೀಪದಲ್ಲಿ ರಕ್ತದಿಂದ ಕೆಂಪಾಗಿದ್ದ ಮಚ್ಚು, ಏನು ನಡೆದಿರಬಹುದು ಎಂದು ಊಹಿಸಲಾಗದ ಘಟನೆ. ಮಂಡಿಯೊಳಗೆ ಮುಖ ಮುಚ್ಚಿ ಕುಳಿತಿದ್ದ ಚಂದ್ರಿಯ ಮುಖವನ್ನು ಎತ್ತಿದಳು ಅತ್ತೆ, ಅದು ಚಂದ್ರಿಯ ಸೌಮ್ಯ ಸುಂದರವದನವಾಗಿರಲಿಲ್ಲ; ಚಂಡಿಯ ಅವತಾರವೆತ್ತಿದವಳಂತೆ ಕಂಡಳು. ಮಗನ ಲಗ್ನವನ್ನು ಬಲವಂತವಾಗಿ ಕಟ್ಟಿಸಿಕೊಂಡು ಬಂದಿದ್ದ ಸಣ್ಣಮ್ಮ ಬಿಸಿ ಉಸಿರು ಬಿಡುತ್ತಾ ಸೊಸೆಯ ಮಗ್ಗುಲಲ್ಲಿ ಕುಳಿತಳು. ಸೊಸೆ ಮಾಡಿದ್ದು ಘೋರ ಅಪರಾಧ ಎಂದು ಅವಳ ಹೃದಯ ಚೀರುತ್ತಿತ್ತು, ಮಗ ಸಂಭಾವಿತನಾಗಿರಲಿಲ್ಲ ಎಂದು ಊಹಿಸಿಕೊಳ್ಳಲೂ ಅವಳ ಮನಸ್ಸು ಒಡಂಬಡುತ್ತಿರಲಿಲ್ಲ. ಸೊಸೆಯನ್ನು ಮನಸಾರೆ ಬೈಯಲು ಹಿಂಜರಿದಳು.

ಪೋಲಿಸರಿಗೆ ವಿಷಯ ಹೋಯಿತು. ವ್ಯಾನು, ಜೀಪುಗಳಲ್ಲಿ ಪೋಲಿಸರು ಬಂದಿಳಿದರು. ರಕ್ತ ಸಿಕ್ತವಾಗಿ ಬಿದ್ದಿದ್ದ ಗಂಗಾಧರನ ದೇಹವನ್ನು ವ್ಯಾನಿನೊಳಗೆ ಮಲಗಿಸಿದರು. ಆಯುಧಗಳನ್ನು ತಮ್ಮ ಸುಪರ್ತಿಗೆ ತೆಗೆದುಕೊಂಡರು. ಕತ್ತು ಬಾಗಿಸಿ ನಿಂತಿದ್ದ ಚಂದ್ರಿಯ ಕೈಗೆ ಕೋಳವನ್ನು ತೊಡಿಸಿ, ಜೀಪಿನಲ್ಲಿ ಕೂರಿಸಿದರು.

ನೆರೆದಿದ್ದ ಹಳ್ಳಿಯ ಜನರು, ತಮ ತಮಗೆ ತೋಚಿದಂತೆ ಮಾತಾಡಿ ಕೊಳ್ಳುತ್ತದ್ದದು ಕೇಳಿಸಿದರೂ ಚಂದ್ರಿ ಇತ್ತ ತಿರುಗಲಿಲ್ಲ. ಇನ್ನು, ಈ ಮನೆಗೆ, ಈ ಹಳ್ಳಿಗೆ ನಾನು ಸೇರಿದವಳಲ್ಲ. ನಾನು ಎಲ್ಲಿದ್ದರೇನು? ಸೆರೆಮನೆಯ ವಾಸವಂತೂ ಖಂಡಿತ, ಇನ್ನೇನೂ ಉಳಿದಿಲ್ಲ. ಆದರೆ, ಸರೋಜಿಯ ಬಾಳು ಹಾಳಾಗುವುದನ್ನು ತಪ್ಪಿಸಿದೆ. ಅದೊಂದೇ ಸಮಾಧಾನ ಎಂದು ತನಗೆ ತಾನೇ ಹೇಳಿಕೊಂಡು, ಕಣ್ಣುಗಳನ್ನು ಮುಚ್ಚಿ ಕುಳಿತಳು. ತಾನು ಅಪರಾಧಿ ಎನ್ನುವುದಕ್ಕಿಂತ, ತಾನು ಏನನ್ನೋ ಸಾಧಿಸಿದೆ ಎನ್ನುವ ಮುಖಭಾವ ಅವಳಲ್ಲಿ ಎದ್ದು ಕಾಣುತ್ತಿತ್ತು. *

* * * * *

* * *

o



ಇದು ಒಂದು ನೀಳ್ಗತೆಗಳ ಸಂಕಲನ. ಇದರಲ್ಲಿ ಒಟ್ಟು ಎಂಟು ಕಥೆಗಳಿವೆ. ಕೇಲವು ಕಥೆಗಳು, ಜನಪ್ರಿಯ ವಾರ ಪತ್ರಿಕೆಗಳಲ್ಲಿ ಪ್ರಕಟಗೊಂಡು, ಓದುಗರ ಮೆಚ್ಚುಗೆಯನ್ನು ಗಳಿಸಿವೆ.

ಕಂಡು, ಕೇಳಿದ, ವಿಷಯಗಳಲ್ಲಿನ ಸೂಕ್ಷ್ಮವಾದ ಎಳೆಗಳನ್ನು ಕತೆಯನ್ನೂ ರಚಿಸಲು ಎಳೆದುಕೊಂಡು, ಬೇಕಾದ ಅಳತೆಗೆ ಕತೆಯನ್ನಾಗಿ ಹೊಸೆದಿರುವ ಪರಿಶ್ರಮ ನನ್ನದು. ದೈನಂದಿಕ ಜನಜೀವನದಲ್ಲಿ ಇಂಥ ಎಷ್ಟೋ ಸೂಕ್ಷ್ಮವಾದ ವಿಷಯಗಳು ಒಳಗೊಂಡಿರುತ್ತವೆ. ಕೆಲವು ಸ್ವಾರಸ್ಯಕರವಾಗಿರುತ್ತವೆ. ಕೆವು ಬೆಚ್ಚಿಬೀಳಿಸುವಂತಿರುತ್ತವೆ. ಮತ್ತೂ ಕೆಲವು ಪಾಠಕಲಿಸುವಂತಿರುತ್ತವೆ. ಇವುಗಳನ್ನು ಓದುಗರಿಗೆ ತಿಳಿಸುವ ಇಚ್ಚೆಯಿಂದ ಕತೆಯರೂಪದಲ್ಲಿ ಬರೆಯಲ್ಪಟ್ಟಿವೆ.

– ಪದ್ಮಾ ಶ್ರೀಧರ್

ಪದ್ಮಾ ಶ್ರೀಧರ್